ಜ್ಞಾನಸೂತ್ರ

ಜ್ಞಾನಸೂತ್ರ

— ಬಿ. ಎಚ್. ಶ್ರೀಧರ

ವಿದ್ಯಾರಣ್ಯ ಗ್ರಂಥ ಪ್ರಕಾಶನ, ಶಿರಸಿ

ಮುದ್ರಕರು:
ಸುನೀಲ ಪ್ರಿಂಟರ್ಸ, ಶಿರಸಿ

ಡಿಸೆಂಬರ: ೧೯೬೯

ಪ್ರತಿಗಳು: ೧೦೦೦

ಬೆಲೆ: ರೂ. ೧೫ (ಕ್ಯಾಲಿಕೊ)
" ೧೦ (ಸಾದಾ)

ಪ್ರಕಾಶಕರು:

—ಜಯಲಕ್ಷ್ಮೀ ಶಾಸ್ತ್ರಿ, ಬಿ. ಎ.

ವಿದ್ಯಾರಣ್ಯ ಗ್ರಂಥ ಪ್ರಕಾಶನ, ಶಿರಸಿ

ಸಂಪಾದಕರು:

—ಪಿ. ವಿ. ಶಾಸ್ತ್ರಿ, ಕಿಬ್ಬಳ್ಳಿ

—ವ್ಹಿ. ಡಿ. ವರ್ಝೆ, ಎಂ.ಎ. ಎಂ.ಎಡ್

ಅರಿಕೆ

ಸ್ವಾತಂತ್ರ್ಯವೆಂದರೆ ಹಕ್ಕು, ಹಕ್ಕೆಂದರೆ ಅಧಿಕಾರ, ಅಧಿಕಾರವೆಂದರೆ ಶಕ್ತಿ. ಬಹಳ ಸಲ ಅಸುರರಿಂದ ಸೋಲನ್ನನುಭವಿಸಿದ ಸುರರು ತಮ್ಮ ಶಕ್ತಿಗಳನ್ನು ಒಟ್ಟಾಗಿಸಿ ಅದನ್ನು ತಮ್ಮಲ್ಲಿಯ ಒಬ್ಬನಾದ ಇಂದ್ರನಿಗೆ ಕೊಟ್ಟು ಅವನ ನಾಯಕತ್ವದಲ್ಲಿ ಯುದ್ಧಮಾಡಿ, ಅಸುರರನ್ನು ಗೆದ್ದರು ಎಂಬ ಪೌರಾಣಿಕ ಕಥೆಯು ನಮ್ಮ ರಾಜಕೀಯವೆಂಬ ಸರ್ವ ವ್ಯವಹಾರ ವ್ಯಾಪಕವಾದ ಸಂಸ್ಥೆಯ ಯೋಜನೆಗೆ ಒಂದು ಮಹಾಪಾಠ. ಹಲವು ವ್ಯಕ್ತಿಗಳು ಅಂಶತಃ ತಮ್ಮ ಹಕ್ಕುಗಳನ್ನು ಬಿಟ್ಟುಕೊಟ್ಟಾಗ ಅವುಗಳಿಂದ ಸಂಚಿತವಾದ ಒಂದು ವ್ಯಕ್ತಿಯು ಪ್ರಜಾಸಮಷ್ಟಿಗೆ ಸಮಾನವಾದ ಭೌತಿಕ ಆರ್ಥಿಕ ಕ್ಷೇತ್ರಗಳಲ್ಲಿ ನ್ಯಾಯವಾದ ಲಾಭವೊದಗುವಂತೆ ಮಾಡಬಲ್ಲದೆಂಬುದೇ ಪ್ರಶಾಸನ, ಸರಕಾರ, ರಾಜಶಕ್ತಿ ಎಂಬುದನ್ನಿಟ್ಟುಕೊಳ್ಳುವುದರ ಅರ್ಥ. ಅಂಥ ಪರಮಾಧಿಕಾರವುಳ್ಳ ಕಾರ್ಯಪಾಲಕ ವ್ಯಕ್ತಿಯು ಎಲ್ಲರಿಗಿಂತ ಹೆಚ್ಚು ಶ್ರೇಷ್ಠನಾಗಿರಬೇಕೆಂಬ ತತ್ತ್ವವನ್ನು ಇದೇ ಕಥೆ ಹೇಳಿದೆ. ಶ್ರೇಷ್ಠನ ಆಯ್ಕೆಯೊಂದೇ ಪ್ರಜಾಪ್ರಭುತ್ವದ ಮಹತ್ವದ ಸಾಧನೆ.

ವ್ಯಕ್ತಿತ್ವ, ಚಾರಿತ್ರ್ಯ, ಬುದ್ಧಿಶಕ್ತಿಗಳಲ್ಲಿ ಶ್ರೇಷ್ಠನಾಗಿರುವವನೇ ನಿಜವಾದ ಶ್ರೇಷ್ಠ. ಅವುಗಳನ್ನು ಮಾನಸಶಾಸ್ತ್ರೀಯ ಪ್ರಯೋಗ ವಿಜ್ಞಾನ ಪದ್ಧತಿಯ ಚಾರಿತ್ರಿಕ ವಿಶ್ಲೇಷಣದ ಮೂಲಕ ತಿಳಿದರೆ ಮಾತ್ರ ಜನರಿಗೆ ವ್ಯಕ್ತಿಗಳ ಶ್ರೇಷ್ಠತೆ-ಕನಿಷ್ಠತೆಗಳು ನಿಜವಾಗಿ ಗೊತ್ತಾಗುವವು. ಮಾನವ ವರ್ತನೆಯ ಶಾಸ್ತ್ರೀಯ ನೋಟದಿಂದ ಅವುಗಳನ್ನು ಅಂದಾಜುಮಾಡಿ ಬೆಲೆ ಕಟ್ಟುವ ಅಭ್ಯಾಸ ಅಥವಾ ನಿರ್ಣಯಿಸುವ ವೈಜ್ಞಾನಿಕತೆಯು ನಮ್ಮ ಪ್ರಜಾಪ್ರಭುತ್ವದ ಇಂದಿನ ಸೋಲಿನ ಪ್ರಧಾನ ಕಾರಣ. ತೋರಿಕೆಗೆ ಮುಂದು ಕಾಣುವ ಪ್ರಚಾರಕೋರರು ಎಂದೂ ಪ್ರಮುಖ ಮತದಾರರಲ್ಲ; ಅವರ

ಪ್ರಜಾಪ್ರಭುತ್ವ ಕೇವಲ ತೋರಿಕೆಯದು. ಆದರಿಂದಲೇ ನಮ್ಮ ಅಧೀನತೆ ಜೀವನವಿಂದು ನಿರಪೇಕ್ಷೆಯ ಗುಟ್ಟಿಯಂತಾಗಿದೆ. ಸದ್ಯದ ರಾಜಕೀಯ ಕಲಹಗಳು ಅಂಥ ತೋರಿಕೆಯನ್ನು ಎತ್ತಿ ತೋರಿಸುವ ಪ್ರತ್ಯಕ್ಷ ಸಾಕ್ಷಿಗಳು. ರಾಜಕೀಯ ಪ್ರತಿನಿಧಿತ್ವವಿಂದು ಹಣ ಮಾಡುವ ದಕ್ಷತೆಯನ್ನೇ ಪ್ರಧಾನವಾಗಿ ಅವಲಂಬಿಸಿರುವುದು ಅಪಾತ್ರರ ಆಯ್ಕೆಗೆ ಕಾರಣ. ಅಪಾತ್ರರಿಗೆ ಅಧಿಕಾರ ದಾನ ಮಾಡಿದ ಮತದಾರರು ಅಪಾತ್ರರು. ಆದುದರಿಂದ ನಮ್ಮಲ್ಲಿಯ ಮತದಾರರಲ್ಲಿ ಅನೇಕರು ಮತದಾನಾಧಿಕಾರಕ್ಕೆ ಅರ್ಥಾತ್ ಪ್ರಜಾಪ್ರಭುತ್ವಕ್ಕೆ ಅನರ್ಹರು.

ಮೇಲೆ ಹೇಳಿದ ಅಪ್ರಿಯ ಸತ್ಯವು ಗಣ್ಯರಿಂದ ಅಲಕ್ಷಿತವಾದರೆ ಕೆಲವೇ ವರ್ಷಗಳಲ್ಲಿ ಪರೋಕ್ಷವಾಗಿಯಾದರೂ ಭಾರತದ ವ್ಯವಹಾರದ ಮೂಲಗಳು ಪರರಾಷ್ಟ್ರದ (ಗಳ) ಅಧೀನವಾಗುವುವು. ಇದು ಇಷ್ಟಾಪತ್ತಿಯಲ್ಲವಾದರೆ ಈಗಿನಿಂದಲೇ ನಮ್ಮ ಪ್ರತಿನಿಧಿಗಳ ಆಯ್ಕೆಯ ರೀತಿಗಳನ್ನು ಪೂರ್ಣ ಬದಲಾಯಿಸಬೇಕು. ಪ್ರತಿನಿಧಿಗಳ ಪದವನ್ನು ಬಯಸುವ ಅಭ್ಯರ್ಥಿಗಳಿಗೆ ತಕ್ಕ ಪ್ರತಿಷ್ಠಿತ ಮಾರ್ಗಗಳನ್ನು ತೆರೆಯಬೇಕು. ನಿವೃತ್ತ ಹೈಕೋರ್ಟ ನ್ಯಾಯಾಧೀಶರು ಪ್ರತಿರಾಜ್ಯದಲ್ಲೂ ಅವರ ಗುರುತ್ವವನ್ನು ಒಂದು ವರ್ಷದ ವರೆಗಾದರೂ ವಹಿಸುವ ವ್ಯವಸ್ಥೆಯಾಗಬೇಕು.

ಪ್ರತಿನಿಧಿಗಳ ಅಪ್ರಬುದ್ಧತೆಯ ದೆಸೆಯಿಂದಲೇ ಅವರಿಗೆ ತಕ್ಕ ಮಂತ್ರಿಗಳನ್ನು ಮುಖ್ಯಸ್ಥಾನಕ್ಕೆ ಆರಿಸುವ, ಅಮೂಲಕ ಅವಕಾಶಗಳ ದಾವೆಗಳನ್ನು ರಚಿಸುವ, ಅವಕಾಶಗಳನ್ನು ನಿರ್ಮೂಲಿಸಿಕೊಳ್ಳುವ ಮತ್ತು ಅದರಿಂದ ಪ್ರಜಾಪ್ರಭುತ್ವದ ಮಾನದಂತೆ ಏರಿಕೆಯ ಕ್ರಮಗಳನ್ನು ತಿಳಿಸಿಕೊಡುವ ಯೋಗ್ಯತೆ ಅನೇಕ ಕಡೆ ಇರದ ಕೊರತೆಯಾಗಿ ಬಂದಾಗಿದೆ. ಈ ಕೊರತೆಗಿಂತ ದೊಡ್ಡ ದಾರಿ ಬೇರೆ ಇಲ್ಲ. ಇದು ಸಹಜವಾದಿಗಳ ಮಂಜೂರಾದ; ಸಹಜರಲ್ಲ, ನ್ಯಾಯ. ಹೇಗೆ ಬಳ ಹೋರಾಟದ ಕ್ರಮ ಕೈಗೊಳ್ಳುವ ಕಾರ್ಯಕ್ರಮ. ನ್ಯಾಯ ಇನ್ನೂ ಅಧಿಕಾರಿಗಳಂತೆ ಮಾಡಿದ್ದು ಮತ-ಪತ್ರವನ್ನು ಅಲ್ಲ ರಾತ್ರಿ ಕಾಲ

ಬಾಪಿಗೆ ಪಾಲಿನಲ್ಲಿ ಬಾರದೆಂದಿದ್ದರೆ ಮತದಾರರು ಅಂಥ ತರಬೇತು ಕೇಂದ್ರಗಳಾಗಿ ಹಟ ಹಿಡಿಯಬೇಕು, ಪಕ್ಷಗಳ ಅಧಿಕಾರಿಗಳಿಗೆ ಕಟ್ಟು ನಿಟ್ಟಾಗಿ ತಿಳಿಸಿಬಿಡಬೇಕು. ಪ್ರಜೆಗಳ ಸಾರ್ವಜನಿಕ ಹಾನಿಗಳೆಲ್ಲವುಗಳಿಗೂ ಆಳುವ ಪಕ್ಷದ ಪ್ರತಿನಿಧಿಗಳೇ ಹೊಣೆಗಾರರು—ಎಂಬುದನ್ನು ಒಪ್ಪದ ಹುಂಬರಾಳಿಗೆ ಮತ ಹಾಕಬಾರದು. ವಚನಭಂಗ ಮಾಡಿದವರಿಗೂ ಮತ್ತೆ ಮತ್ತೆ ಮತ ಕೊಡುತ್ತ ಹೋಗುವ ಆತ್ಮಘಾತಕ ಪ್ರವೃತ್ತಿಯು ತ್ಯಾಜ್ಯ. ನ್ಯಾಯ ಮಾಡುವದನ್ನು ಸಮರ್ಥಿಸಲಾರದೆ ಕುಂಟು ನೆವ ಹೇಳುವ ಪ್ರತಿನಿಧಿಗಳನ್ನು ಮತ್ತೆ ಆಯುವುದು ಶತಭೋಳೇತನ. ಅಂಥ ಹುಂಬರ ಪ್ರಜಾಪ್ರಭುತ್ವವು ನಂದುರಾಯನ ಭಂಡಾರ.

ಒಂದು ಗ್ರಾಮದ, ನಗರದ, ಜಿಲ್ಲೆಯ, ರಾಜ್ಯದ ಅಥವಾ ದೇಶದ ಸಾಮಾನ್ಯ ಯೋಗ್ಯತೆಯನ್ನು ತಿಳಿದವರು ನಿರ್ಣಯಿಸುವುದು ಆಯಾ ಘಟಕದ ಜನರ ಮುಂದಾಳುಗಳ, ನಾಯಕರ, ಪರಮಾಧಿಕಾರಿಗಳ ಯೋಗ್ಯತೆಯ ಮೇಲಿಂದ. ಇದು ಯಾವ "ಇಜಂ"ದ ಸರಕಾರದ ಅಂಕೆಯಲ್ಲಿ ಜನ ಬದುಕುತ್ತಿರುವಾಗಲೂ ಸತ್ಯ. ಚಾರಿತ್ರ್ಯ, ವ್ಯಕ್ತಿತ್ವ, ಬುದ್ಧಿ, ಚಾತುರ್ಯಗಳಲ್ಲಿ ಸಾಮಾನ್ಯರಿಗಿಂತ ಮೇಲಾದ ಮನುಷ್ಯರಾದವರು ಪ್ರತಿನಿಧಿಕ ಉನ್ನತ ಸ್ಥಾನದಲ್ಲಿದ್ದರೆ ಅವರು ತಮ್ಮ ಘಟಕಕ್ಕಾಗಿ ಇತರ ಘಟಕಗಳ ಮುಂದಾಳುಗಳೊಡನೆ ವ್ಯವಹರಿಸುವಾಗ ನ್ಯಾಯವನ್ನು ಪಡೆಯುವಲ್ಲಿ ಸಮರ್ಥರಾಗುವರು. ಇದು ವ್ಯಾವಹಾರಿಕ ಮನಃಶಾಸ್ತ್ರ. ರಾಜಕೀಯ ಕ್ಷೇತ್ರದಲ್ಲಿ ನಾವಿಂದು ಇದನ್ನು ಹೆಚ್ಚಾಗಿ ಮರೆತಿದ್ದೇವೆ. ಯಜಮಾನನ ಯೋಗ್ಯತೆ ಆಳುಗಳನ್ನೂ ಸುಧಾರಿಸುತ್ತದೆ ಎಂಬುದನ್ನು ಆಂತರಿಕ ಆಡಳಿತದಲ್ಲೂ ಕಾಣಬರುವುದು. ನಾಯಕನ ಯೋಗ್ಯತೆಗೆ ಅವನ ಆಡಳಿತವೇ ನಿಕಷ.

ನಮ್ಮ ದೇಶದ ಪ್ರಜಾಪ್ರಭುತ್ವವಿಂದು ಅವ್ಯವಸ್ಥಿತ ಆಡಳಿತಕ್ಕೆ ಹೆಸರಾಗಲು ನಾವು ಮಾಡುತ್ತ ಬಂದ ನಾಯಕರ ಆಯ್ಕೆಯಲ್ಲಿಯ ಮಹಾದೋಷವೇ ಕಾರಣ. ದೈನಂದಿನ ಆಡಳಿತದ ಅಸಡ್ಡಾಳತನವು

ಯಾರಿಗಾದರೂ ಜಿಗುಪ್ಸೆಯುಂಟು ಮಾಡದಿರದು. ಆದಕಾರಣದಲ್ಲಿ ನಿತ್ಯವೂ ಅರಿಸ್ಟಾಟಲನ್ನು ಟೀಕಿಸುತ್ತಿರುವ ಬೇಕನ್ ಬಗ್ಗೆ ಉಪದೇಶಮಾಡುವ ನಾಯಕರನ್ನು ಓದಿ ಕೊಂಡಿರುವುದು ಪ್ರಯೋಜನ, ಮಾಡುವಾಗ. ಮಾಡುವಾತ ತ್ರಿಪುರದ ಪ್ರಶ್ನೆ ಫಲವನ್ನು ಬಯಸಿ ಏನು ಕೃತಾರ್ಥರಾಗುವರು? ಜನಾಂಗದವರನ್ನು ದುಷ್ಟ ವ್ಯಸನ ವ್ಯವಹಾರಗಳಿಂದ ಬಿಟ್ಟು ಮತಧರ್ಮಕ್ಕೆ ಯೋಗ್ಯತೆಗಳನ್ನು ಜಾತೀಯ ಸಂಪ್ರದಾಯದ ಮಂತ್ರ ಯೋಗಸಾಧನೆಯಷ್ಟೇ. ಅದು ಪ್ರವೇಶದ ಕ್ಷೇತ್ರವೊಂದೂ ಉಳಿದಿಲ್ಲ.

ವಿದ್ಯಾವಂತ ತರುಣರಿಂದು ರಾಷ್ಟ್ರ ಶಾಸ್ತ್ರೀಯ, ಪ್ರದಾನ ಶಾಸ್ತ್ರೀಯ ಮತ್ತು ಶಿಕ್ಷಣಶಾಸ್ತ್ರೀಯ ಸಮಸ್ಯೆಗಳನ್ನು ತಾತ್ತ್ವಿಕವಾಗಿಯೂ ವ್ಯಾವಹಾರಿಕವಾಗಿಯೂ ಗಂಭೀರವಾಗಿ ಪರ್ಯಾಲೋಚಿಸಬೇಕಾಗಿದೆ; ನಮ್ಮ ಸಾಂಸ್ಕೃತಿಕ ಪರಂಪರೆಗೆ ಯೋಗ್ಯವಾದ ಅಧುನಿಕತೆಯ ಮಾರ್ಗಗಳನ್ನು ರೂಪಿಸಲು ಮೂಲಭೂತ ವಿಚಾರ ಮಾಡಬೇಕು. ಕಾಲೇಜಿನಲ್ಲಿ ತರ್ಕಶಾಸ್ತ್ರ ಓದುವವನಿಗೆ ನಮ್ಮ ತರ್ಕಶಾಸ್ತ್ರದ ಜ್ಞಾನ ಈಗ ಸಿಗುತ್ತಿಲ್ಲ, ತತ್ತ್ವಶಾಸ್ತ್ರ ಓದುವವನಿಗೆ ಭಾರತೀಯ ದರ್ಶನ ಜ್ಞಾನದ ಹಿನ್ನೆಲೆ ಇರುವುದಿಲ್ಲ, ಭೌತ ವಿಜ್ಞಾನಾಭ್ಯಾಸಿಗೆ ನಮ್ಮ ಪರಮಾಣು ಸಿದ್ಧಾಂತದ ಅರಿವನ್ನು ಮಾಡಿ ಕೊಡಲಾಗುತ್ತಿಲ್ಲ, ಗಣಿತಾಭ್ಯಾಸಿಗೆ ಭಾಸ್ಕರಾಚಾರ್ಯರ ಗ್ರಂಥದ ಪರಿಚಯ ದೊರಕದು, ಖಗೋಳ ಶಾಸ್ತ್ರಾಭ್ಯಾಸಿಗೆ ನಮ್ಮ ಜ್ಯೋತಿಶ್ಶಾಸ್ತ್ರ ವಿವೇಕ ಗೊತ್ತಾಗಲು ಸಾಧ್ಯವಿಲ್ಲ. "ಯೋಗಾಭ್ಯಾಸ" ಎಂಬ ಪ್ರತ್ಯೇಕ ಜ್ಞಾನ ವಿಧಾನವನ್ನು ಕೆಲವು ವಿಶ್ವ ವಿದ್ಯಾಲಯಗಳು ಕೇವಲ ಸಂಸ್ಕೃತವನ್ನು "ಮಿಸ್ಟಿಕ್" ಅಥವಾ ಜೀಜೀ ಮಾಡಿ ಕಲಿಸುವುದೂ ತೀರ ಅಸ್ವಾಭಾವಿಕ. ಭಾರತೀಯ ರಾಜನೀತಿ ಶಾಸ್ತ್ರದ ಅಲ್ಪಜ್ಞಾನ, ಅಜ್ಞಾನ ಮತ್ತು ಅಪಜ್ಞಾನ ರಾಷ್ಟ್ರ ಶಾಸ್ತ್ರಾಭ್ಯಾಸಿಗಳಿರುವ ಸಂವಿಧಾನದ ಅದರ ಅಭ್ಯಾಸ ಯೋಗ್ಯತೆಯನ್ನು ಮರೆಮಾಡಿದೆ. ಸಮಾಜಶಾಸ್ತ್ರಾಭ್ಯಾಸಿಗೆ ಧರ್ಮಶಾಸ್ತ್ರಗಳ ಅಭ್ಯಾಸದ ಹಿನ್ನೆಲೆ ದೊರಕದು, ನ್ಯಾಯಶಾಸ್ತ್ರದಲ್ಲಿ ಭಾರತೀಯ ನ್ಯಾಯಶಾಸ್ತ್ರದ ಅರಿವು ಅಲ್ಪ ಮತ್ತು ಅಸಮರ್ಪಕ. ಈ ಕಾರಣದಿಂದಲೇ ಮೂಲಭೂತ

ಸ್ವತಂತ್ರವಿಚಾರ ನಮ್ಮ ಆಧುನಿಕ ಪಂಡಿತರಲ್ಲಿ ೨೦ ವರ್ಷಗಳಲ್ಲಿ ಸ್ವಲ್ಪ ಬೆಳೆಯುವಂತಾಗಿದೆ. ಪರಮಾತ್ಮನ ಸಾಕ್ಷಾತ್ಕಾರವು ಪರಮೋದ್ದೇಶವಲ್ಲ. "ಯೂರೋಪಿಯನ್ನ"ರ ಮುದ್ರಾಧಾರಣೆ ಅಥವಾ ಲಿಂಗಧಾರಣೆ ಉಪೇಕ್ಷಿಸಿದರೆ ನಮ್ಮ ಹಳೆ ಕಾಲಗಳಲ್ಲಿ ನಡೆಯುತ್ತಿರುವ ಮತದ ಅನನ್ಯ ಪ್ರತಿಭಾಸ್ಫುರಣ, ಸ್ವತಂತ್ರ ವಿಚಾರ, ಸಮನ್ವಿತ ಅಧುನಿಕತೆ ಯುವಕರಲ್ಲಿ ರೂಪಿತವಾಗದು. ಶಿಕ್ಷಣ, ಇತಿಹಾಸಗಳ ಕ್ರಮಗಳಿಗನುಗುಣವಾಗಿ ಪೂರ್ವಾಪರಗಳನ್ನು ಯೋಜಿಸಿಕೊಂಡು ಭಾರತೀಯ ಜ್ಞಾನ ನದೀ ಪ್ರವಾಹ ಹರಿಯುವಂತೆ ನೋಡಿಕೊಂಡ ವಿದ್ವಾಂಸರ ಯೋಗ್ಯತೆಯು ನಮ್ಮ ಇತಿಹಾಸದಲ್ಲಿ **ದಾಸರಿನಿಂದ** ಬರೆಯಲ್ಪಡದೆ ಉಳಿದಿದೆ. ಸರ್. ಎಸ್. ರಾಧಾಕೃಷ್ಣರು ಸಮನ್ವಯದ ಬಗ್ಗೆ ಗ್ರಂಥಗಳನ್ನು ಬರೆದು ಬರೆದು ಮುದುಕರಾದರು. "ಸಮನ್ವಯ" ಎಂಬ ಶಬ್ದವನ್ನು ಅನೇಕರು ಪಠಿಸಿದರೂ ಅದರ ಯೋಗ್ಯವಾದ ವ್ಯಾವಹಾರಿಕ ಪ್ರಯೋಗ ಯಾವ ಕ್ಷೇತ್ರದಲ್ಲಿಯೂ ಹೆಚ್ಚಾಗಿ ಆರಂಭವಾಗಿಲ್ಲ. ಭಾರತೀಯ ಮತವಾದದ ಹಾಗೆ ಸಂಸ್ಕಾರದ ಸಮನ್ವಿತತೆ ದೊರಕಿಲ್ಲ; ಅದನ್ನಂತು ನಾನಾ ಅಭಾರತೀಯ ವಿಧಾನಗಳ ಮೂಲಕ ದೇಶೀಯ ಸಾಂಸ್ಕೃತಿಕ ಬೇರುಗಳಿಂದ ಬೇರ್ಪಡಿಸಿ ತಪ್ಪಿಸುವಂತಾಗಿ ಮಾಡಲಾಗುತ್ತಿದೆ. ಸಾಂಸ್ಕೃತಿಕ ಜನತೆಯ ರಾಷ್ಟ್ರೀಯತೆ ಬೇರಿಗೆ ಅತ್ಯಂತ ಕೊಡಲಿ. ಅರಾಷ್ಟ್ರೀಯತೆಯು ಅರಾಜಕತೆ, ಅಸ್ಥೈರ್ಯ, ಶೋಷಣ, ಅಶಾಂತಿಗಳ ಬೀಜ.

ಪೂರ್ವ- ಅಪರ (ಪೌರಸ್ತ್ಯ ಪಾಶ್ಚಾತ್ಯ) ವಿಚಾರಗಳ ಪ್ರಾರಂಭಿಕ ಪರಿಚಯ ಸಾಮಾನ್ಯ ಕನ್ನಡ ಮಾತಾಡ ವಿದ್ಯಾರ್ಥಿಗೆ ಉಪಯೋಗ ಅಣುಮಾತ್ರ ಸಹಾಯವಾದರೂ ಆಗಲೆಂದು ಈ ಜ್ಞಾನಸೂತ್ರವನ್ನು ಬರೆಯಲಾಗಿದೆ. ಅವುಗಳಲ್ಲಿರುವ ಸಾಮ್ಯ-ವೈಷಮ್ಯಗಳ ಸ್ವರೂಪ ಓದುಗರಿಗೆ ಗೊತ್ತಾದರೆ ಸಾಕು ಎಂಬುದಿಲ್ಲಿ ಬರೆಹದ ಸಂಕಲ್ಪ. ವಿಚಾರ ವೈವಿಧ್ಯ ಒಂದುಕಡೆ ಸಾಗುತ್ತಿರುವಾಗಲೇ ವಿಚಾರ ಸಾಮರಸ್ಯ ಸಾಗುತ್ತಿರುವುದೂ ನಾಗರಿಕತೆಯ ಆರೋಗ್ಯಸಾಧನೆಗೆ ಅಗತ್ಯ. ಜೈನರ **ಸಪ್ತಭಂಗಿ ನ್ಯಾಯದ** ಸಮನ್ವಯ ವೃತ್ತಿಗಿಂತ ಹೆಚ್ಚಾಗಿ ಇನ್ನಾವ ಸಿದ್ಧಾಂತವೂ ಈ

ಸಮನ್ವಯದ ಲೌಕಿಕ ಮನಃಪ್ರಣಾಲಿಯನ್ನು ಬಿಂಬಿಸದು. ಜ್ಞಾನಗಳ ಕೇಂದ್ರೀಕರಣ ತತ್ವಜ್ಞಾನದ ಒಂದು ದೊಡ್ಡ ಗುರಿ. ಅದ್ವೈತದ ಜ್ಞಾನ ಯೋಜನೆಯು ಅಸ್ಥಿಪಂಜರ ಈ ತತ್ವಕ್ಕೆ ಬುನಾದಿಯಾಗಿದೆ. ಅದೇ ವ್ಯಾಸ ಸಮಾಸ. ಅಲೆಕ್ಸಿಸ್ ಕೆರೆಲ್ ಮಹಾಶಯನು ವಿಜ್ಞಾನ ಸಿದ್ಧಾಂತಗಳ ಕೇಂದ್ರೀಕರಣದ ಬಗ್ಗೆ ಇದೇ ದೃಷ್ಟಿಯನ್ನು ರೂಪಿಸಲು ಸೂಚನೆ ಇತ್ತಿದ್ದಾನೆ. ವ್ಯಾಪಕವಾದ ವಾಸ್ತವಿಕ ಕಲ್ಪನಾ ಸೌಷ್ಠವದ ಚೌಕಟ್ಟಿನಲ್ಲಿ ಮಾನವರಿಗೆ ಶಾಸ್ತ್ರೀಯವಾಗಿ ತಿಳಿದುಬಂದ ಅಂಶಗಳನ್ನು ಜೋಡಿಸಿ ಜಗತ್ತಿನ ರೂಪ ರೇಖೆಗಳನ್ನು ಹೊಂದಿಸಿಕೊಳ್ಳದೆ ಯಾರೂ ಬೆಲೆಗಳ ನಿರ್ಣಯವನ್ನು ತೆಗೆದು ಕೊಳ್ಳುವುದರಲ್ಲಿ ಸಮರ್ಪಕತೆಯನ್ನು ಸಾಧಿಸಿ ಕೊಳ್ಳಲಾರರು. ಈ ದಿಕ್ಕಿನಲ್ಲಿ ಮಾಡ ಹೋದ ಪ್ರಥಮ ಪ್ರಯತ್ನವಿದು ಎಂದು ಭಾವಿಸಿ ಸಹೃದಯತೆಯಿಂದ ಓದುಗರು ಸ್ವೀಕರಿಸಬೇಕೆಂದು ಲೇಖಕನ ನಮ್ರ ಪ್ರಾರ್ಥನೆ. ಗ್ರಂಥವನ್ನು ಮುದ್ರಿಸಿ ಪ್ರಕಾಶಿಸಿದವರ ಸದುದ್ದೇಶ ಸತ್ ಪ್ರಯತ್ನಗಳ ಬಗ್ಗೆ ಲೇಖಕನ ಋಣಿತ್ವ ಚಿರಸ್ಥಾಯಿ. ಸದಭಿಪ್ರಾಯಗಳಿಂದ ಹರಸಿದ ಹಿರಿಯರಿಗೆ ನಮಸ್ಕಾರ. ಭಾರತದ ಸಂಸ್ಕೃತಿಯು ತಾಯಿಬೇರಾದ ಜ್ಞಾನಕೋಶಕ್ಕೆ ಸಮನ್ವಿತ ವ್ಯಾಸರೀತಿಯನ್ನಿಕ್ಕಿದ ವ್ಯಾಸನಿಗೆ ನಿತ್ಯನಮನ.

ಓಂ, ತತ್, ಸತ್!

ಸಿದ್ದಾಪುರ (ಉ. ಕ.)
೧೦-೧೨-೧೯೬೯

—ಬಿ. ಎಚ್. ಶ್ರೀಧರ
(ಪ್ರಾಚಾರ್ಯ ಮತ್ತು ಸಂಸ್ಕೃತ ಪ್ರಧಾನ ಪ್ರಾಧ್ಯಾಪಕ
ಮಹಾತ್ಮಾ ಗಾಂಧಿ ಶತಾಬ್ದಿ ಆರ್ಟ್ಸ್ ಕಾಲೇಜು)

ಪ್ರಕಾಶಕರು ಹೇಳುವುದು ಇಷ್ಟು:

"ಕಾವ್ಯಸೂತ್ರ"ಕ್ಕೆ ಸಲ್ಲಬೇಕಾದಷ್ಟು ಗೌರವ ಸಂದದ್ದು ಪ್ರಕಾಶನಕ್ಕೆ ತುಂಬಾ ಅಭಿಮಾನದ ವಿಷಯ. ಮೈಸೂರು ವಿಶ್ವವಿದ್ಯಾಲಯದ ತಿ. ನಂ. ಶ್ರೀ ಸ್ಮಾರಕ ಪುರಸ್ಕಾರವು ಈ ಗ್ರಂಥಕ್ಕೆ ದೊರಕಿತು. ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ರತ್ನ ಪರೀಕ್ಷೆಗೆ ಪಠ್ಯವಾಗಿ ಇಟ್ಟಿತು. ಸರಕಾರದ ಪಠ್ಯ ಪುಸ್ತಕ ಸಮಿತಿ ಬೆಂಗಳೂರು, ೫೦ ಪುಸ್ತಕಗಳನ್ನು ಖರೀದಿ ಮಾಡಿತು. ಹಿಗನ್ ಬೊಥಮ್ಸ್, ಮದ್ರಾಸ ಮಾರಾಟಕ್ಕಾಗಿ ಈ ಪುಸ್ತಕವನ್ನು ಆಯ್ಕೆ ಮಾಡಿತು. ಕರ್ನಾಟಕದ ಪುಸ್ತಕ ವ್ಯಾಪಾರಿಗಳು, ವಾಙ್ಮಯಿಕ ಸಂಘಗಳೂ, ಕಾಲೇಜುಗಳೂ ಅಭೂತಪೂರ್ವ ಬೇಡಿಕೆಗಳನ್ನು ನೀಡಿದವು.

ಪುಸ್ತಕ ಪ್ರಕಾಶನವು ಲಾಭಪ್ರದವಾದ ಧಂದೆಯಲ್ಲ; ಕಾರಣ ದುಡ್ಡಿದ್ದವರು ಇಲ್ಲಿ ಹಣ ತೊಡಗಿಸಲು ಸಿದ್ಧರಿಲ್ಲ. ದುಡ್ಡಿಲ್ಲದವರು ಕೈಹಾಕಿದರೆ ಈ ಕ್ಷೇತ್ರದಲ್ಲಿ ಉಳಿದ ಕ್ಷೇತ್ರದಂತೆ ಇದೊಂದು ವ್ಯಾವಹಾರಿಕ ಉದ್ಯಮವೆಂದು ತೋರಿಸಿಕೊಡುವುದು ಕಷ್ಟಸಾಧ್ಯ. ೧೯೩೬ರಲ್ಲಿ ಪ್ರಾರಂಭವಾದ ಈ ಪ್ರಕಾಶನ ಉತ್ತರ ಕನ್ನಡ ಜಿಲ್ಲೆಯ ಏಕಮೇವ ಪ್ರಕಾಶನ ಸಂಸ್ಥೆಯಾಗಿ

ಕೆಲಸ ಸಾಗಿಸಬೇಕಾಗಿ ಬಂದ ಪ್ರಸಂಗ ಅಷ್ಟೇನೂ ಜಿಲ್ಲೆಗೆ ಗೌರವ ತರುವಂತಹದಲ್ಲ. ಏಳು ಲಕ್ಷದಷ್ಟು ಸುಸಂಸ್ಕೃತ ಜನಸಂಖ್ಯೆ; ನೂರಾ-ಹತ್ತರಷ್ಟು ಮಾಧ್ಯಮಿಕ ಶಾಲೆಗಳು, ಏಳು ಕಾಲೇಜುಗಳು ಸಾವಿರಕ್ಕಿಂತಲೂ ಹೆಚ್ಚು ಗ್ರಂಥಾಲಯಗಳು—ಇರುವ ಈ ಜಿಲ್ಲೆಯಲ್ಲಿ ಓದುವ ಚಟವೆಷ್ಟು ಬೆಳೆದಿದೆ; ಅಥವಾ ಎಂಥ ಪುಸ್ತಕಗಳನ್ನು ಮಾತ್ರ ಈ ಜನ ಬೇಡುತ್ತಾರೆ; ಅಥವಾ ತಮ್ಮ ಶಿಕ್ಷಣ ಸಂಸ್ಥೆಗಳ ಗ್ರಂಥಾಲಯಗಳನ್ನು ಯಾವ ಮಟ್ಟದ ಪುಸ್ತಕಗಳಿಂದ ಶ್ರೀಮಂತ ಮಾಡುತ್ತಿದ್ದಾರೆಂದು ಯೋಚಿಸುವುದು ತಪ್ಪಾಗಲಾರದು. ನಾವು ಮಾಡುತ್ತಿರುವುದು ಉದ್ಯೋಗವೆಂಬುದು ನಮಗೆ ಗೊತ್ತು; ಆದುದರಿಂದಲೇ ಈ ವಿಷಯವಾಗಿ ಉದಾಸೀನ ಸ್ವಾರ್ಥಪರವಾದೀತೆಂಬ ಭಯ; ಸಂಕೋಚ.

‘ನಿಂತನೆಲದ ಗುಣವೊ…’ ಎಂಬ ಉದ್ಗಾರ ಸಾಹಿತಿಗಳಿಗೂ ಅನ್ವಯಿಸುತ್ತದೆ. ಪ್ರಕಾಶನ ಸಂಸ್ಥೆಗಳು ಸಮೃದ್ಧವಾಗಿರದ ಜಿಲ್ಲೆಯ ಸಾಹಿತಿಗಳು ಒಂದು ದೃಷ್ಟಿಯಲ್ಲಿ ಅನಾಥರೆ, ಅಸಹಾಯಕರೆ ಆಗಿರುತ್ತಾರೆ. ಎಂಥೆಂಥ ಪುಸ್ತಕಗಳೂ ಪ್ರಕಾಶನದ ಅವಕಾಶ ಪಡೆಯುತ್ತಿರುವುದು ಉಳಿದ ಜಿಲ್ಲೆಯ ಸ್ಥಿತಿಯಾದರೆ, ಸಮರ್ಥರಾದ ಸಾಹಿತಿಗಳಿಗೂ ಇಲ್ಲಿ ಗತಿಯಿಲ್ಲದಿರುವುದನ್ನು ಜಿಲ್ಲಾ ಉದ್ಧಾರದ ಆಸೆ ಹೊತ್ತಿರುವ ಸಮಾಜಸಂಘಟಕರೂ ರಾಜಕಾರಣಿಗಳೂ ಎಷ್ಟು ಬೇಗನೆ ಗಮನಿಸುತ್ತಾರೋ ಅಷ್ಟು ಒಳ್ಳೆಯದು.

“ಜ್ಞಾನಸೂತ್ರ”ವನ್ನು ತಮ್ಮ ಕೆಲಸಗಳ ಮಧ್ಯ ಬಿಡುವುಮಾಡಿಕೊಂಡು, ಈ ಪ್ರಕಾಶನದ ಮೇಲಿನ ವಿಶೇಷ ಅಭಿಮಾನದಿಂದಾಗಿ ಮಾತ್ರ ಬರೆದು ಕೊಟ್ಟ ಪ್ರೊ|| ಶ್ರೀ ಶ್ರೀಧರರಿಗೆ ನಾವು ಋಣಿಗಳಾಗಿದ್ದೇವೆ.

ಪ್ರತಿ ಸಾರೆಯಂತೆ ಈ ಸಾರೆಯೂ ನಮಗೆ ನೆರವು ಮಾಡಿದವರು ಅನೇಕರು; ಅವರೆಲ್ಲ ಆತ್ಮೀಯರು. ಕೆಲವೇ ಹೆಸರುಗಳು:

ಶ್ರೀ ಎಸ್. ಜಿ. ಹೆಗಡೆ, ಪ್ರೊ. ಎಸ್. ಜಿ. ಹೆಗಡೆ, ಎಂ.ಎ. ತ್ಯಾರಗಲ್ ಶ್ರೀ ವಿ. ಎಸ್. ಹೆಗಡೆ ಎಂ.ಎ. ಪ್ರೊ. ಎಸ್. ಜಿ. ಭಟ್ಟ ಕೆರೆಕೈ, ಪ್ರೊ. ದಿವಸ್ಪತಿ ಹೆಗಡೆ, ಶ್ರೀ ಎನ್. ಎಸ್. ಹೆಗಡೆ ಭರತನಹಳ್ಳಿ, ಶ್ರೀ ಎಲ್. ಎಸ್. ಹೆಗಡೆ ಗುಲಬರ್ಗಾ ಇವರುಗಳಲ್ಲದೆ ಮುಂಗಡವಾಗಿ ಹಣ ಕೊಟ್ಟವರಿಗೆ ಮತ್ತು ಮುಖಪುಟದ ಗ್ರಾಂಡ ಸಿದ್ಧಪಡಿಸಿದ ಶ್ರೀ ಎಸ್. ಪಿ. ಹೆಗಡೆಯವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇವೆ.

'ಜ್ಞಾನಸೂತ್ರ'ಕ್ಕೆ ಹರಕೆಯಿತ್ತು ಅದರ ಘನತೆಗೆ ಮತ್ತಷ್ಟು ಕಾರಣರಾದ ಪೂಜ್ಯರಿಗೆ ನಾವು ಋಣಿಯಾಗಿದ್ದೇವೆ.

ಸಿರಸಿಯಲ್ಲಿ ಬಹುತೇಕ ಎಲ್ಲ ಉದ್ಯಮಗಳೂ ನಡೆಯುತ್ತವೆ. ಆದರೆ ಆ ಜನ ಲಾಭಕ್ಕೆ ಬೆಲೆ ಕೊಡುವಷ್ಟು ಕುಶಲತೆಗೆ ಲಕ್ಷ್ಯ ಕೊಡುತ್ತಿಲ್ಲ. ಇದಕ್ಕೊಂದು ಅಪವಾದಾತ್ಮಕವಾಗಿ ಯಶಸ್ಸನ್ನು ಸಾಧಿಸಲು ಶ್ರಮಿಸುತ್ತಿರುವವರಲ್ಲೊಬ್ಬರು ಸುನೀಲ ಪ್ರಿಂಟರ್ಸ ಮಾಲಿಕರು. ಅವರು ತಮ್ಮದೇ ಪ್ರಕಾಶನವೆಂಬಷ್ಟು ಪ್ರೀತಿ, ಆಸ್ಥೆಯಿಂದ ಕೆಲಸ ಮಾಡಿದ್ದಾರೆ. ಅವರಿಗೂ, ಶ್ರದ್ಧೆ ಪ್ರೀತಿಯಿಂದ ಕೆಲಸ ಮಾಡಿದ ಆ ಪ್ರೆಸ್ಸಿನ ಕೆಲಸಗಾರರಿಗೂ ಪ್ರಕಾಶನ ಕೃತಜ್ಞತೆಯನ್ನು ಸಲ್ಲಿಸುತ್ತದೆ.

ಹಿಂದಿನಂತೆ, ಇಂದೂ ನಾಳೆಯೂ ಕರ್ನಾಟಕದ ಜನತೆ ನಮಗೆ ಸಹಾಯವೀಯಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇವೆ.

ವಿದ್ಯಾರಣ್ಯ ಗ್ರಂಥ ಪ್ರಕಾಶನ, ಶಿರಸಿ **ಪ್ರಕಾಶಕರು**

ಪರಿವಿಡಿ:

ಪೀಠಿಕೆ

Longing for the Infinite is one of the infinite longings of man; the Infinite is the most universal of all the concepts of man-- ಮನುಷ್ಯನ ಅನಂತ ಆಸೆಗಳಲ್ಲಿ ಅನಂತಕ್ಕಾಗಿ ಮಾಡುವ ಆಸೆಯೂ ಒಂದು; ಮಾನವನ ಕಲ್ಪನೆಗಳಲ್ಲೆಲ್ಲಾ ಅನಂತದ ಕಲ್ಪನೆಯೇ ಅತ್ಯಂತ ವಿಶಾಲವಾದದ್ದು. ಈ ಅನಂತವನ್ನು 'ಸತ್ಯ,' 'ಜ್ಞಾನ' ಎನ್ನುತ್ತವೆ ಉಪನಿಷತ್ತುಗಳು. ಮಾನವನು ವ್ಯಾಪ್ಯನಾದುದರಿಂದ ಸರ್ವವ್ಯಾಪಕವಾದ ಅನಂತವನ್ನವನು ಹೊಂದುವುದೆಂದರೆ ಅದರಲ್ಲಿ ಲೀನವಾಗುವುದೇ.

ಮನುಷ್ಯನ ಅನಂತ ಆಸೆಗಳೇ ಅವನಿಗೆ ತಾನು ಸಾಂತನೆಂಬುದನ್ನು ತಿಳಿಸುತ್ತವೆ. ಸಾಂತನಾದ ಮನುಷ್ಯನಲ್ಲಿ ಅನಂತ ಆಸೆಗಳುಂಟಾಗುವುದೂ ಒಂದೇ, ಒಡೆಯದ ಒಂದು ಪೂರ್ಣಾಂಕದ ಬಿಡಿಗಳು ವಿಭಜಿಸುತ್ತ ಹೋದ ಹಾಗೆ ಕೊನೆಯಿಲ್ಲದಂತಾಗುವುದೂ ಒಂದೇ.

ಮಾನವನ ಪ್ರಯೋಗ-ಪರೀಕ್ಷೆಗಳೆಲ್ಲವೂ ಬೌದ್ಧಿಕ; ಅವರಲ್ಲಿ ಪರೀಕ್ಷಕ ಬುದ್ಧಿಯು ಸ್ವರೂಪದ ಅಚಲತೆಯೆಂಬುದು ಕೇವಲ ಗೃಹೀತ: 'ಸರ್ವಂ ಕ್ಷಣಿಕಂ' ಎಂದು ವಿಜ್ಞಾನವು ಹೇಳುವದರಿಂದ. ಜೊತೆಗೆ ಪರೀಕ್ಷ್ಯ-ಪರೀಕ್ಷಕಗಳು ಸರ್ವವೆಂಬ ಜಗತ್ತಿನಲ್ಲಿ ಅಡಕವಾಗಿರುವುದಲ್ಲದೆ, ಪರಸ್ಪರ ವಸ್ತುನಿಷ್ಠ ಪದಾರ್ಥಗಳೆನ್ನಿಸಿಯೂ ತಮ್ಮ ತಮ್ಮಲ್ಲಿ ತಾವು ವ್ಯಕ್ತಿನಿಷ್ಠ ಪದಾರ್ಥಗಳೆನ್ನಿಸಿಯೂ ಇರುತ್ತವೆ. ಕಾರಣ-ಕಾರ್ಯಗಳಂತೆ ವಸ್ತು-ವ್ಯಕ್ತಿಗಳು ಕೇವಲ ಪ್ರಾಪಂಚಿಕ ಸ್ಥಾನವಾಚಕವಾದ ಅನ್ವರ್ಥ ನಾಮಗಳು- ಯಾವ ವಿಶಿಷ್ಟ ಪದಾರ್ಥದಲ್ಲಿಯೂ ಅವು ಏಕತ್ರ, ಏಕ ಕಾಲ

ದಲ್ಲಿ ಇರಲಾರದವುಗಳೆಂಬುದು ಕೇವಲ ಗೃಹೀತ. ಕ್ರಮಿಕ ಸ್ಥಾನ ಸಂಬಂಧಗಳ ಬಹುತ್ವದ ಕಲ್ಪನೆಗೆ ಆಧಾರವಾದ ನಾನಾತ್ವವು ಪರತಃ ಪ್ರಮಾಣವನ್ನುಳ್ಳದ್ದಲ್ಲ. ಆ ಕಲ್ಪನೆಗೆ ಇಂದ್ರಿಯ ಸಂವೇದನೆ ಒದಗಿಸಿದ ಪ್ರತ್ಯಕ್ಷ ಅನುಭವವೊಂದೇ ಆಕರ. ಪ್ರತ್ಯಕ್ಷವು ಇಂದ್ರಿಯಗಳ ವ್ಯಕ್ತಿಗತ ಬಲಾಬಲಗಳಿಂದ ಪರಿಸೀಮಿತವಾದ ಅನುಭವ.

ಭಾವನಾಂಶವಿಲ್ಲದ ಅನುಭವವು ಅಮೂರ್ತ, ಶುಷ್ಕ, ಪಾಕ್ಷಿಕ; ಭಾವನೆಯು ಪ್ರಾಪಂಚಿಕ ಅಥವಾ ಅಪ್ರಾಪಂಚಿಕ. ಅದಕ್ಕೆ ಬುದ್ಧೀಚ್ಛೆಗಳನ್ನು ಮತ್ತು ಬುದ್ಧಿಗೆ ಭಾವನೇಚ್ಛೆಗಳನ್ನು ಮರೆಯಿಸುವಶಕ್ತಿಯಿದೆ. ಆದರೆ ಇಚ್ಛೆಗೆ ಬುದ್ಧಿಯೊಂದನ್ನು ಮಾತ್ರ ಮರೆಯಿಸುವ ಶಕ್ತಿಯಿದೆ. ಇಚ್ಛೆ-ಭಾವನೆಗಳು ಗಂಡಭೇರುಂಡದಂತಿವೆ. ಪ್ರಾಪಂಚಿಕವು ಸಾಪೇಕ್ಷ, ಅಪ್ರಾಪಂಚಿಕವು ನಿರಪೇಕ್ಷ. ಗ್ರಹ, ನಕ್ಷತ್ರ, ನೆಬುಲ, ಕಾಲ, ದೇಶಗಳೆಲ್ಲವೂ ಪ್ರಾಪಂಚಿಕ, ನೈಸರ್ಗಿಕ. ಕಾಲ-ದೇಶಗಳ ಪ್ರಜ್ಞೆ ಇಲ್ಲದಿರುವುದೇ ಅಪ್ರಾಪಂಚಿಕತೆ, ಶುದ್ಧ ಆತ್ಮಾವಸ್ಥೆ ಅಥವಾ ಬ್ರಹ್ಮಾವಸ್ಥೆ ಇಲ್ಲವೆ ಸಮಾಧಿ, ಮುಕ್ತಿ. ವಸ್ತುಬಹುತ್ವದ ಆಧಾರ ಕಲ್ಪನೆಗಳು ಕಾಲ-ದೇಶಗಳ ಪ್ರತ್ಯೇಕತೆ ಮತ್ತು ಪ್ರತ್ಯೇಕೀಕರಣ ಶಕ್ತಿಗಳ ರೂಪವವು.

ಭೌತಿಕದ ಸ್ವರೂಪವನ್ನು ಭೌತಿಕದ ಮೂಲಕವಾಗಿ ಭೌತಿಕ ಪರೀಕ್ಷಕನು ಪರೀಕ್ಷಿಸುವ ಕಾರ್ಯದಲ್ಲಿ Objective evidence ವಸ್ತು-ನಿಷ್ಠ ಸಾಕ್ಷಿ ಎಂದು ಜ್ಞಾನದ ಯಾವ ಪ್ರಮಾಣವನ್ನು ತೆಗೆದುಕೊಳ್ಳಲು ಸಾಧ್ಯ? Mind, Senses, matter and material instruments ಮನ, ಇಂದ್ರಿಯ, ಭೂತದ್ರವ್ಯ ಮತ್ತು ಭೌತಿಕ (ಯಂತ್ರೋಪ-ಕರಣಾದಿ) ಸಾಧನಗಳು ವಿಜ್ಞಾನದ ಪ್ರಕಾರ ಭೌತಿಕೇತರವಲ್ಲ. ಅವುಗಳ ಅಸ್ತಿತ್ವದ ಸತ್ಯತೆಯ ಸ್ವರೂಪದಲ್ಲಿ ವ್ಯತ್ಯಾಸ ಮಾಡಲು ಯಾವ ಕಾರಣವೂ ಇಲ್ಲ. ಹಾಗೇ ಮೂರ್ತಾಮೂರ್ತ ಪದಾರ್ಥಗಳ ಸತ್ಯತೆಯಲ್ಲಿಯೂ ನಮ್ಮ ಸ್ವಯಂಭವ ಬೇಕು ಬೇಡಗಳನ್ನು ಬಿಟ್ಟರೆ ಗ್ರಾಹ್ಯ, ತ್ಯಾಜ್ಯ ಎನ್ನಲು ಇನ್ನಾವ ಮಾನದಂಡವಿದೆ? ಪ್ರಾಪಂಚಿಕ ಪದಾರ್ಥಗಳ ಕ್ಷಣ

ಭಂಗುರತೆಯು ಪರಿಮಾಣತಃ ಸಾಪೇಕ್ಷವಷ್ಟೇ- ಅದರಲ್ಲಿ ಪ್ರಕಾರಾಂತರವಿಲ್ಲ. ಪ್ರಕಾರವೊಂದೇ ಜಾತಿ (ವರ್ಗ) ಭೇದ ನಿರ್ಣಾಯಕ.

ಕೆಲ ವೈಜ್ಞಾನಿಕರ "Eternal Questions should not be asked ನಿತ್ಯ (ಪದಾರ್ಥಗಳ ಬಗೆಗಿನ) ಪ್ರಶ್ನೆಗಳನ್ನು ಕೇಳಬಾರದು" ಎಂಬ ನಿಷೇಧೋಪದೇಶವು "ನಮಗೆ ಗೊತ್ತಿಲ್ಲದ ಪದಾರ್ಥಗಳ ಬಗ್ಗೆ ಕೇಳಬೇಡ" ಎಂಬ ಅರ್ಥವುಳ್ಳದ್ದು; ಜೊತೆಗೆ, "ನಮಗೆ ಗೊತ್ತಿಲ್ಲದ್ದು ಇನ್ನಾರಿಗೂ ಗೊತ್ತಿಲ್ಲ, ನಾವು ತಿಳಿಯಲು ಹಿಡಿಯುವ ರೀತಿಯೊಂದೇ ಶುದ್ಧ, ಉಳಿದ ರೀತಿಗಳು ಅಶುದ್ಧ, ಎಂದು ನಾವು ಹೇಳುವದರಿಂದ ನೀವು ಕೇಳಬೇಕು" ಎಂಬ ಗೃಹೀತಗಳನ್ನೂ ಒಳಗೊಂಡಿದೆ. "Be content with what I give as truth- ಸತ್ಯವೆಂದು ನಾನು ಹೇಳುವುದನ್ನು ಗ್ರಹಿಸಿ ಸಂತುಷ್ಟನಾಗಿರು" ಎಂಬ ಇಂಗಿತವುಳ್ಳ ವೈಜ್ಞಾನಿಕತೆಯು ವ್ಯಕ್ತಿಸ್ವಾತಂತ್ರ್ಯವನ್ನು ಉಳಿಸದ ಬಲಾತ್ಕಾರ, ಆಗ್ರಹ.

ಆದರೆ ವ್ಯಕ್ತಿಯು ವ್ಯಕ್ತಿತ್ವವೇ ಪ್ರಾಪಂಚಿಕ, ಸಾಪೇಕ್ಷ; ಆದುದರಿಂದ ಅವನಿಗೆ ಸ್ವಾತಂತ್ರ್ಯವಿದ್ದರೂ ಅದು ಅಪೂರ್ಣ, ಪರಾವಲಂಬಿ, ಔಪಾಧಿಕ; ಸಾಮಾಜಿಕತೆಯೇ ಅದಕ್ಕೆ ಅವಲಂಬನ, ಆಧಾರ. ಸಮಾಜವು ವ್ಯಕ್ತಿ ಸಾಪೇಕ್ಷವಾದರೂ ಅದು ವ್ಯಾಪಕ, ವ್ಯಕ್ತಿಯು ವ್ಯಾಪ್ಯ- ದೈಹಿಕವಾಗಿ ಮತ್ತು ಮಾನಸಿಕವಾಗಿ.

ಆತ್ಮವು ಸರ್ವಸಾಧಾರಣವಾಗಿರುವುದರಿಂದ ಆತ್ಮೋನ್ಮುಖವಾದ ಮಾನವ ಸಾಧನೆಯು ಅಸಾಮಾಜಿಕವೆಂದು ಭಾರತದಲ್ಲಿ ಗಣಿಸಲ್ಪಟ್ಟಿಲ್ಲ. ಸಂನ್ಯಾಸಿಯು ಸಾಧಕತ್ವದಲ್ಲಿ ಸಮಾಜವ್ಯವಹಾರಗಳ ಲೌಕಿಕ ಗೊತ್ತುಗುರಿಗಳ ಕಕ್ಷೆಯಿಂದ ಹೊರಗಾದರೂ ಸಿದ್ಧತ್ವದಲ್ಲಿ ಸಾರ್ವಜನಿಕವಾಗಿ ಒಳಗೆ. ಅರ್ಥಾತ್ ಕರ್ಮಫಲದಿಂದ ವೈಯಕ್ತಿಕವಾಗಿ ಮುಕ್ತನಾದ ಪರೋಪಕಾರ ಕರ್ಮಿ. ಈ ಅರ್ಥವನ್ನರಿಯದ ಸಾಧಕ ಸಾಧಕನಲ್ಲ, ಸಿದ್ಧ ಸಿದ್ಧನಲ್ಲ, ಸಂನ್ಯಾಸಾರ್ಥಜ್ಞನು ಸಂನ್ಯಾಸಾರ್ಥಜ್ಞನಲ್ಲ. ಜೀವನ್ಮುಕ್ತಿಗಿಂತ ಕಡಿಮೆಯು ಸಿದ್ಧಿ (ಈ ಸಂದರ್ಭದಲ್ಲಿ) ಸಿದ್ಧಿಯಲ್ಲ.

ಜ್ಞಾನಿನಾಚರಿತುಂ ಶಕ್ಯಂ ಸಮ್ಯಗ್ರಾಜ್ಯಾದಿ ಲೌಕಿಕಂ- ಎಂಬ ವಿದ್ಯಾರಣ್ಯ ಸೂತ್ರವು ಸಿದ್ಧನಿಗೆ ಆಚರಣಯೋಗ್ಯವಲ್ಲವೆ, ಸಾಧಕನಿಗಲ್ಲ. ಜ್ಞಾನಿ ಇಲ್ಲಿ ಧೀರ- ವಿಕಾರ ಹೇತೌ ಸತಿ ವಿಕ್ರಿಯಂತೇ ಯೇಷಾಂ ನ ಚೇತಾಂಸಿ ತ ಏವ ಧೀರಾಃ! ಜೊತೆಗೆ, ಜ್ಞಾನಿಯೇ ರಾಜ್ಯಾದಿ ಲೌಕಿಕ ಕರ್ತವ್ಯಗಳನ್ನು ನೆರವೇರಿಸಲು ಅತ್ಯಂತ ಸಮರ್ಥ; ಅವನಲ್ಲಿರುವಷ್ಟು ಸಾರ್ವಜನಿಕತೆ ಇತರರಲ್ಲಿರಲಾರದು- ಎಂಬುದು ಸ್ಪಷ್ಟ. ಅಧ್ಯಾತ್ಮ, ರಾಜಧರ್ಮ, ಪ್ರಜಾಧರ್ಮಗಳಿಗಿಂತು ಅತ್ಯುತ್ತಮ ಸಂಬಂಧವಿದೆ: ಪ್ರಜೆಯಲ್ಲಿ ವೈಯಕ್ತಿಕ ಪ್ರಜಾತ್ವವಿದ್ದರೆ, ರಾಜಶಕ್ತಿಸಂಪನ್ನನಲ್ಲಿ ಸಾಮೂಹಿಕ ಪ್ರಜಾತ್ವದ ಭಾವವಿರಬೇಕು; ಇದು ರಾಜ ಶಾಸನದ ರಾಷ್ಟ್ರಹಿತ ಸಾಧಕತ್ವದ ಸಾಮೂಹಿಕತೆ ಅಥವಾ ಸಾರ್ವಜನಿಕತೆಯಾದರೆ ಜ್ಞಾನಿಯದು ಜಗದ್ಧಿತ ಸಾಧಕತ್ವದ ಸಾರ್ವಜನಿಕತೆ. ಅಯೋಗ್ಯರು ಜ್ಞಾನಿ, ರಾಜ (ಸರಕಾರ), ಪ್ರಜೆಗಳ ಸ್ಥಾನಗಳನ್ನು ಆಕ್ರಮಿಸಿದಾಗ "Incongruity is the soul of humour" ಅಸಾಂಗತ್ಯವೇ (ಅಸಮನ್ವಯವೇ) ಹಾಸ್ಯದ ಆತ್ಮ" ಎಂಬ ಗಾದೆಯಂತೆ ಲೋಕಜೀವನದ ವ್ಯವಹಾರಗಳು ಜ್ಞಾನಿಯ ದೃಷ್ಟಿಯಿಂದ ಹಾಸ್ಯಾಸ್ಪದವೆಂದೆನ್ನಿಸುವುವು, ಅರೆಜ್ಞಾನಿಯ ದೃಷ್ಟಿಯಿಂದ ಶೋಕಕರ ಎನ್ನಿಸುವುವು, ಕಾಲುಜ್ಞಾನಿಯ ದೃಷ್ಟಿಯಿಂದ ಅತಿ ಕಷ್ಟಕರ ಅಥವಾ ಅತಿ ಸುಖಕರ ಎನ್ನಿಸುವುವು.

ಅನುಭವದ ಸುಖಕಾರಿತ್ವ- ದುಃಖಕಾರಿತ್ವಗಳು ಜ್ಞಾನಾಧೀನ. ಒಂದು ಅನುಭವವು ಒಬ್ಬನಿಗೆ ಸುಖಕರವೆನ್ನಿಸಿದರೆ ಕೆಲವೊಮ್ಮೆ ಇತರ ಕೆಲವರಿಗೆ ಅಸುಖಕರವೆನ್ನಿಸಬಹುದು. ಅದ್ವೈತವು ಅಸುಖಕರ ಎನ್ನಿಸುವುದು ದ್ವೈತಾದಿ ನಾನಾತ್ವವಾದಗಳ ಅನೈಕಾಂತಿಕತೆ ಸುಖವೆಂದು ತಿಳಿದವರಿಗೆ. ದೈಹಿಕಸಂವೇದನೆಗಳಲ್ಲಿರುವಷ್ಟು ಸರ್ವಸಾಧಾರಣತೆಯು, ಮಾನಸಿಕ ಅನುಭವದಲ್ಲಿಲ್ಲ; ಮಾನಸಿಕದಲ್ಲಿರುವಷ್ಟು ಆಧ್ಯಾತ್ಮಿಕದಲ್ಲಿಲ್ಲ. ಈ ದೃಷ್ಟಿಯಿಂದ ಅರವಿಂದರು ದರ್ಶನದ ವೈವಿಧ್ಯದ ಸತ್ಯತೆಯನ್ನು ಸಾರಿದರು; ಆದರೆ ಸಮಗ್ರ (ಸಾಕಲ್ಯ) ಯೋಗದ ದೃಷ್ಟಿಯಿಂದ ಪೂರ್ಣತಮವಾದ ಒಂದೇ ಒಂದು ಎನ್ನಿಸುವ ಸಚ್ಚಿದಾನಂದಾತ್ಮತತ್ತ್ವವು ಸರ್ವದರ್ಶ

ನಾಧಾರವೆಂದು ಘೋಷಿಸಿದರು. ಶಂಕರರು ದರ್ಶನ ವೈವಿಧ್ಯವನ್ನು ಅದರಿಂದಲೇ ಮಾಯಾಕಲ್ಪಿತನಾನಾಕಾರವೆಂದರು.

Philosopher-King ಋಷಿರಾಜನು King-philosopher ರಾಜರ್ಷಿಗಿಂತ ಶ್ರೇಷ್ಠನು; ಏಕೆಂದರೆ ಅವನಷ್ಟು ಪೂರ್ಣತೆ ಇವನಿಗಿಲ್ಲ; ಅವನ ಆತ್ಮವ್ಯಾಪ್ತಿ ಇವನಿಗಿಲ್ಲ. ಅಸೀಮದ ವ್ಯಾಪ್ತಿಯು ಸೀಮಿತಕ್ಕೆಲ್ಲಿಂದ ಬಂದೀತು? ಬೆಂಕಿ ಹೊಗೆಗಳಲ್ಲೇ ಬೆಂಕಿಯ ವ್ಯಾಪಕತೆ ಹೊಗೆಗಿಲ್ಲ. ಹೆಚ್ಚು ಹೆಚ್ಚು ಸೀಮಿತವಾದುದು ಹೆಚ್ಚು ಹೆಚ್ಚು ಸಂಕುಚಿತ. ಕಾಲ ದೇಶಾದಿಗಳಿಂದ ಹೆಚ್ಚು ಹೆಚ್ಚು ಸಂಕುಚಿತವಾದುದು ಹೆಚ್ಚು ಹೆಚ್ಚು ಸ್ವಾರ್ಥಿ, ಹೆಚ್ಚು ಹೆಚ್ಚು ಬೇಗ ಪರಿವರ್ತನೀಯ, ಹೆಚ್ಚು ಹೆಚ್ಚು ದುರ್ಬಲ. ಸ್ಥಿತಿಸ್ಥಾಪಕತ್ವವು ಬಲ, ವಿಭೂತಿ, ಐಶ್ವರ್ಯ, ಶ್ರೀ ಅಥವಾ ಊರ್ಜಿತತೆ ಇಲ್ಲವೆ ತೇಜಸ್ಸು. ದೇಹಬಲ, ಮನೋಬಲ, ಆತ್ಮಬಲಗಳಲ್ಲಿ (ಜಡಬಲ, ಜೀವಬಲ, ಪರಮಾತ್ಮಬಲಗಳಲ್ಲಿ) ಮುಂದು ಮುಂದಿನದು ಹೆಚ್ಚೆನ್ನಿಸಲು ಜಡ, ಜೀವ, ಆತ್ಮಗಳ ಉತ್ತರೋತ್ತರ ವ್ಯಾಪಕತ್ವಾಧಿಕ್ಯವೇ ಕಾರಣ.

ಜಡರೂಪದ ಸೂರ್ಯಪ್ರಪಂಚದಲ್ಲಿ ಸೂರ್ಯನೇ ಬಲವತ್ತಮ, ದೇಹಪ್ರಧಾನವಾದ ಜೀವ ಪ್ರಪಂಚದಲ್ಲಿ ಆನೆಯಂಥ ಪ್ರಾಣಿಗಳು ಬಲವತ್ತಮ, ಮನಃಪ್ರಧಾನವಾದ ಜೀವಪ್ರಪಂಚದಲ್ಲಿ ಮನುಷ್ಯನೇ ಬಲವತ್ತಮ, ಶುದ್ಧಜೀವಗಳಲ್ಲಿ ಆತ್ಮನೇ ಬಲವತ್ತಮ. ಆತ್ಮನು ಸರ್ವಾಂತರ್ಯಾಮಿ ಸರ್ವಬಹಿರ್ವ್ಯಾಪಿ. ಅವನ ಒಳಹೊರಗುಗಳ ನಡುವಿರುವ ಜಡ-ಜೀವ-ಮನಃಪದಾರ್ಥಗಳೆಲ್ಲವೂ ಮಾಯಾಕಲ್ಪಿತವಾದ ನಾನಾಕಾರಗಳು, ದೇಶ-ಕಾಲಾದಿ ಉಪಾಧಿಗಳಿಂದ ಬದ್ಧವಾದವುಗಳು– ಎಂಬುದು ಮಾಯಾವಾದದ ಭಾಷಾವ್ಯವಹಾರದಲ್ಲಿ ಹೇಳುವ ರೀತಿ. ಜಡೇಂದ್ರಿಯಗಳಿಗೆ ಜಡಕಾರ್ಯದ ಮೂಲಕವೇ ಜೀವ-ಆತ್ಮಗಳ ಶಕ್ತಿಯು ಗೋಚರವಾಗುತ್ತದೆ. ಜಡದ ಗೋಚರ ಜಡ ಪ್ರಧಾನವಾದ ಜೀವಕ್ಕಾಗಲು ಆತ್ಮದ ಜ್ಞಾನಶಕ್ತಿಯು ಹಿನ್ನೆಲೆಯಲ್ಲಿರುವುದೇ ಕಾರಣ. ಈಶ್ವರನು ಸರ್ವಕಾರಣನೆಂಬುದು ಈ

ಅರ್ಥದಲ್ಲಿ. ವಿಶ್ವದ ಆತ್ಮದ ಜ್ಞಾನಶಕ್ತಿಯು ಜಡಗೋಚರಕ್ಕೆ ಆಧಾರ ವಾದರೆ, ಅದರ ಜೀವಶಕ್ತಿಯು ಜಡಗಳ ಗುಣ ಕ್ರಿಯೆಗಳು ನಮಗೆ ಗೋಚರವಾಗಲು ಆಧಾರ. ಆತ್ಮದ ಜ್ಞಾನ- ಜೀವ- ಕ್ರಿಯಾಶಕ್ತಿ (ಗುಣವು ಪ್ರಚ್ಛನ್ನ ಕ್ರಿಯೆ, ಕ್ರಿಯೆಯು ಪ್ರಕಟಗುಣ) ಗಳಲ್ಲಿ ಉತ್ತರೋತ್ತರ ವಾದುದು ಕಡಿಮೆ ಕಡಿಮೆ ವ್ಯಾಪಕತೆಯುಳ್ಳದ್ದು. ಜ್ಞಾನ, ಆತ್ಮ, ಈಶ್ವರ, ಬ್ರಹ್ಮ ಎಂಬುದರಲ್ಲಿ ಸರ್ವಶಕ್ತಿಗಳೂ ಬೀಜರೂಪದಲ್ಲಿರುವುದ ರಿಂದ ಅದು ಸರ್ವಮೂಲ- ಜನ್ಮಾದ್ಯಸ್ಯಯತಃ! ಮೂಲತಃ ಬೀಜ ರೂಪದ ಮಾಯೆ ಬ್ರಹ್ಮಲೀನ! ಬ್ರಹ್ಮವು ಸರ್ವಜಡ, ಜೀವ, ಕಲ್ಪನೆ ಗಳ ಉತ್ಪಾದಕ ಅಥವಾ ಪ್ರವರ್ತಕ. ಅದಕ್ಕೆ ಉತ್ಪತ್ತಿ-ವಿಲಯನಗಳಿಲ್ಲ, ಪ್ರವರ್ತನವಿಲ್ಲ. ಮಾಯೆಯು ಪರಿಸೀಮನಾಭಾಸದ ಶಕ್ತಿ; ಪರಿಸೀಮಿತದ ಆಭಾಸಿಕತೆಯು ಬ್ರಹ್ಮದ ದೃಷ್ಟಿಯಿಂದ ಸತ್ಯ. ಅಬ್ರಹ್ಮಜಾಗರವುಳ್ಳ ಮಾನವರ ದೃಷ್ಟಿಯಿಂದ ಬ್ರಹ್ಮವಿಲ್ಲ, ಜಗತ್ತಿದೆ. ಅರ್ಧಬ್ರಹ್ಮ-ಅರ್ಧ ಮಾನವ (ಜಡ ಪ್ರಧಾನ ಮಾನವ) ಎನ್ನಿಸುವ ದೃಷ್ಟಿಯಿಂದ ಬ್ರಹ್ಮವು ಪಾರಮಾರ್ಥಿಕ ಸತ್ಯ, ಜಗತ್ತು ವ್ಯಾವಹಾರಿಕ ಸತ್ಯ ಪ್ರಾತಿಭಾಸಿಕವು ವ್ಯವಹಾರಾಂತರ್ಗತ.

ಒಂದು ರಾಷ್ಟ್ರದಲ್ಲಿ ಬ್ರಹ್ಮತೇಜಸ್ಸು ಕ್ಷಾತ್ರತೇಜಸ್ಸಿಗೆ ಆಧಾರವಾದಾಗ ಸುರಾಜ್ಯಸ್ಥಿತಿಯು ಅನುಭವಕ್ಕೆ ಬರುತ್ತದೆ. ಬ್ರಹ್ಮವು ಜ್ಞಾನ, ಸಿದ್ಧಾಂತ, ಮೂಲದ ನಿಗೂಢ ಶಕ್ತಿ; ಅದು ಸರ್ವಪ್ರಜಾವ್ಯಾಪಕ; ಕ್ಷಾತ್ರವು ಕ್ರಿಯೆ (ಕರ್ಮ), ವ್ಯವಹಾರ, ಶಾಖೆಗಳ ಪ್ರಕಟ ಶಕ್ತಿ; ಅದು ಸರಕಾರ ಮಾತ್ರ ವ್ಯಾಪಕ. ಸರಕಾರದ ಪದವಾಧಿಕಾರಿಗಳು ಪ್ರಜೆಗಳ ಬ್ರಹ್ಮವನ್ನು (ಆತ್ಮವನ್ನು) ಪ್ರತಿನಿಧಿಸಬೇಕು; ಅದೇ ಪ್ರಭುತ್ವರಾಜ ಎನ್ನಿಸಿದ ಪ್ರಜಾಪ್ರಭುತ್ವ; ಪ್ರಜೆಗಳಲ್ಲಿರುವ ಇತರ ದ್ರವ್ಯ, ಗುಣ, ಕರ್ಮಗಳನ್ನು ಪ್ರತಿನಿಧಿಸುವುದು ನಿಜವಾದ ಪ್ರಜಾಪ್ರಭುತ್ವವಲ್ಲ: ರಾಷ್ಟ್ರದ ಸಂಸ್ಕೃತಿಯು ಉಚ್ಚತಮ ಸ್ವರೂಪವೇ ಪ್ರಜೆಗಳ ಆತ್ಮ; ಅದು ಅವರ ಪರಾಪ್ರಕೃತಿ; ಮಿಕ್ಕವುಗಳು ಅಪರಾಪ್ರಕೃತಿ. ಅಂದರೆ ಎಂ. ಎಲ್. ಎ. ಮತ್ತು ಎಂ. ಪಿ. ಗಳು ಜ್ಞಾನಿಗಳಾಗಿರುವುದವಶ್ಯವೆಂದರ್ಥ; ಅರ್ಥಾತ್

ಅವರು ಚತುರ್ವಿಧ ಪುರುಷಾರ್ಥಗಳನ್ನು ಸಾಧಿಸಲು ಬೇಕಾದ ಧರ್ಮ ಮಾರ್ಗಗಳನ್ನು ಬಲ್ಲವರಾಗಿರಬೇಕೆಂದು ಆಶಯ. ಅಂಥವರು ಮಾತ್ರ ಪ್ರಾಮಾಣಿಕ, ಹಾಗೂ ದಕ್ಷ ಸರಕಾರವನ್ನು ರಚಿಸಿ ನಿಯೋಜಿಸ ಬಲ್ಲರು. ಅವರಿಗೂ "Politics is the last resort of a scoundrel ರಾಜಕೀಯ ಕ್ಷೇತ್ರದ ವ್ಯವಹಾರವು ನೀಚನ ಕೊನೆಯ ಆಶ್ರಯ" ಎಂಬ ನೀತಿಸೂತ್ರವನ್ನು ಹಿಡಿದವರಿಗೂ ಧ್ರುವಾಂತರದ ವ್ಯತ್ಯಾಸವಿದೆ. ನೀತಿಗಳ ಸಾಪೇಕ್ಷ ವ್ಯಾಪ್ತಿಗಳನ್ನು ಅರಿತು ವಿಧಿರಚನೆ ಮಾಡಬಲ್ಲವರೇ ಧರ್ಮ ಮಾರ್ಗಗಳನ್ನು ಬಲ್ಲವರು. ಸರಕಾರದಲ್ಲೂ ಉಪವಿಧಿರಚನಕಾರರು ಹಾಗೇ ಪ್ರಾಜ್ಞರಾಗಿರಬೇಕು. ಅಂಥ ಅರಿವಿನ ಸಾರವೇ ಸರ್ವೋದಯ ಅಥವಾ ಸಮಾಜವಾದೀಯ ಸಮಾಜ ನ್ಯಾಯ. ಈ ಸುಖ ನ್ಯಾಯವನ್ನು ಪ್ರಜೆಗಳ ಅನುಭವಕ್ಕೆ ತಂದು ಕೊಡಲು ಬೇಕಾದ ವ್ಯವಹಾರಕ್ರಮಗಳನ್ನು ಯೋಜಿಸುವ ಸಿದ್ಧಾಂತಗಳು ಸಾಂದರ್ಭಿಕ ಔಚಿತ್ಯಗಳನ್ನು ಉಲ್ಲಂಘವುಗಳು.

ವ್ಯಷ್ಟಿತ್ವದ (ವ್ಯಕ್ತಿತ್ವದ) ವಿಕಾಸದ ಪರಾಕಾಷ್ಠೆ ಇರುವುದು ಸಮಷ್ಟಿತ್ವದ (ಸಾರ್ವಜನಿಕತೆಯ, ಸಾಮಾಜಿಕತೆಯ) ಭಾವದಲ್ಲಿ ಸ್ಥಿರ ಜಾಗ್ರತಿಯನ್ನು ಸಾಧಿಸಿಕೊಳ್ಳುವುದರಲ್ಲೇ ಎಂಬ ಧರ್ಮರಹಸ್ಯವನ್ನರಿಯದವನು ಅಪ್ರಾಜ್ಞ. ಸಾಮಾನ್ಯರಲ್ಲಿ ಸಾರ್ವಜನಿಕತೆಯು (ಸಮಷ್ಟಿತ್ವ) ಕ್ಷಣಿಕ, ವೈಯಕ್ತಿಕತೆಯು ದೈನಿಕ; ನೀಚರಲ್ಲಿ ಒಂದು ಯಾವಾಗಲೂ ಆಭಾಸಿಕ, ಇನ್ನೊಂದು ಯಾವಾಗಲೂ ವಾಸ್ತವಿಕ.

'ಸ್ವ + ಅರ್ಥ = ಸ್ವಾರ್ಥ' ಎಂಬಲ್ಲಿ ಸ್ವಕಾರವು ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ, ಪಂಚಜ್ಞಾನೇಂದ್ರಿಯ, ಪಂಚಕರ್ಮೇಂದ್ರಿಯ, ಪಂಚಪ್ರಾಣಗಳಿಂದೊಡಗೂಡಿದ ವೈಯಕ್ತಿಕ ಶರೀರವೊಂದರ ಪ್ರತಿನಿಧಿ ವ್ಯಷ್ಟಿಯು ವ್ಯಷ್ಟಿಮಾತ್ರ ಪ್ರಜ್ಞೆಯಿಂದ ಬಾಳುವುದು ಪಾಪ, ಕೇವಲ ಸ್ವಾರ್ಥಿ, ಪಾಪಿಷ್ಠ–ಎಂಬ Original Sin ಮೂಲಪಾಪದಂಥ ಕಲ್ಪನೆ ಪರಂಪರಾಗತವಾಗಿ ಬರಲು, ಕೇವಲಾದಿತ್ವವು ಕೇವಲಾಘತ್ವವಾಗಲು,

ವ್ಯಕ್ತಿ ಕೈವಲ್ಯವೆಂಬುದು ಆತ್ಮದ ಮೂಲರೂಪವಲ್ಲವಾಗಿರುವುದೇ ಕಾರಣ; ಅದು ಅಪರಾಪ್ರಕೃತಿಯ [ಕೀಳು (ಆತ್ಮಬಾಹ್ಯ) ಸ್ವಭಾವದ] ದುಷ್ಟತನದಾದ ಆಸೆ ಎಂದೆನ್ನಿಸಲು Man is fundamentally gregarious ಮನುಷ್ಯನು ಮೂಲತ: ಸಂಘಜೀವಿ ಎಂಬುದು ದತ್ತ ವಿಷಯವಾಗಿರುವುದರಿಂದ ಸಾಮೂಹಿಕತೆಯ ಕಲ್ಪನೆಯ ಸಾಂದ್ರತಮಸ್ವರೂಪವೇ ಐಕ್ಯ, ಏಕತ್ವ. ಈ ಏಕತ್ವವು ಭಾವದ್ದು (ಇಚ್ಛೆ, ಬುದ್ಧಿ, ಭಾವನೆ, ಆತ್ಮಗಳದ್ದು)-ಶರೀರದ್ದಲ್ಲ. ಶರೀರವು ಜಡ; ಜಡಕ್ಕೆ ಜೀವ-ಜ್ಞಾನಗಳ ಮೌಲ್ಯವನ್ನು ವಿಚಿತ್ರರೂಪದಿಂದ ಮೂಡಿಸುವ ಹಕ್ಕಿಲ್ಲದೆ, ಸ್ವತಃ ಯಾವ ಮೌಲ್ಯವೂ (ಅರ್ಥ ಪೂರ್ಣತೆಯೂ) ಇಲ್ಲ. ಜಡವು ದ್ರವ್ಯವಾದರೇನು, ಗುಣವಾದರೇನು, ಕ್ರಿಯೆಯಾದರೇನು, ಘನವಾದರೇನು, ದ್ರವವಾದರೇನು, ಅನಿಲವಾದರೇನು? ಅದು ಕೇವಲ ಶಕ್ತಿಯಾದರೂ ಜೀವನಕ್ಕದು ಕೇವಲ ಗೊಬ್ಬರದಂಥ ಅರ್ಥ (Wealth ದ್ರವ್ಯಸಾಮಗ್ರಿ) ವಲ್ಲದೆ, ವೈಜ್ಞಾನಿಕ ಪದಾರ್ಥತ್ವದ ಅರ್ಥವಲ್ಲದೆ, ಸ್ವತಂತ್ರವಾದ ಯಾವ ಸಾಂಸ್ಕೃತಿಕ ಮೌಲ್ಯವನ್ನೂ ಉಳ್ಳದ್ದಲ್ಲ. ಸಂಸ್ಕೃತ ಜಡಪದಾರ್ಥವೂ ಅದಕ್ಕೆ ಸಂಸ್ಕಾರವಿತ್ತ ಜೀವಕ್ಕೆಪದಾರ್ಥದ ಸಂಸ್ಕಾರವನ್ನೇ ಧ್ವನಿಸುತ್ತದೆ. ಪ್ರಾಕೃತಿಕ ವಸ್ತುಗಳಲ್ಲಿ ಕೆಲವುಗಳ ಪರಿಷ್ಕೃತತೆಯು ಜೀವದ ಸಂಸ್ಕಾರವನ್ನು ಸೂಚಿಸುತ್ತದೆ. ಅಸಂಸ್ಕೃತರಲ್ಲಿ (ಪ್ರಾಕೃತರಲ್ಲಿ) ಆತ್ಮಪ್ರಾಧಾನ್ಯದ ತ್ರಿಕರಣಪೂರ್ವಕ ವಿಶ್ವಾಸವಿಲ್ಲ; ಸಂಸ್ಕೃತರಿಗೆ ಆತ್ಮವೇ ಪ್ರಧಾನ; ಕೇವಲ ನಾಗರಿಕರು ಸಂಸ್ಕೃತರೆಂದೆನ್ನಿಸರು; ಸಂಸ್ಕೃತರು ಧರ್ಮಿಷ್ಠರು, ವ್ಯಾಪಕ ನ್ಯಾಯನಿಷ್ಠರು. ಆತ್ಮವಷ್ಟು ವ್ಯಾಪಕಪದಾರ್ಥ ಇನ್ನೊಂದಿಲ್ಲವಾದುದರಿಂದ ಆತ್ಮವಂತರ ಸಾಂಸ್ಕೃತಿಕ ಮಟ್ಟವು ಅತುಲ, ಅನುಪಮ; ಆತ್ಮಜ್ಞರು ಹಿರಿಯರೆಲ್ಲರಿಗೂ ಹಿರಿಯರು.

ಧರ್ಮಕ್ಕೆ ಅವಿರುದ್ಧವಾಗಿ ಅರ್ಥ-ಕಾಮಗಳನ್ನು ಅನುಭವಿಸುವುದು ಮೋಕ್ಷಕ್ಕನುಕೂಲವಾದ ಮಾರ್ಗ. ಅಂಥ ರೀತಿಯನ್ನು ನೆಲೆ ನಿಲ್ಲಿಸಲು ಬೇಕಾದ ಸಮರ್ಥ ಸರಕಾರದ ಪರಮಾಧಿಕಾರಿ ಋಷಿರಾಜನೇ ಆಗಿರಬೇಕು. ಅಥವಾ ಅವನ ಸುಪರ್ದಿಯಂತೆ ನಡೆವ ರಾಜಕೀಯವಾಗಿರಬೇಕು.

ವಿಶ್ವಾಮಿತ್ರ ವಸಿಷ್ಠಾದಿಗಳ ಸಲಹೆಯಂತೆ ರಾಮರಾಜ್ಯ ನಡೆಯಿತು. ರಾಮಾದಿಗಳು ನೆಟ್ಟಗಿರಬೇಕಾದರೆ ವಿಶ್ವಾಮಿತ್ರಾದಿಗಳು ಲೋಕಕ್ಕೆ ಅಗತ್ಯ. ನಮಗೆ ಸದ್ಯಃ ಮೋಕ್ಷದ ಅಪೇಕ್ಷೆ ಇಲ್ಲದಿದ್ದರೂ ಮುಕ್ತರ ಅಪೇಕ್ಷೆ ಇರುವುದು ಅನಿವಾರ್ಯ. ಲೋಕವನ್ನು ಬಯ್ಯುತ್ತಲೇ ಕಾಳಜಿತೋರುವವನು ಮುಕ್ತನಲ್ಲ. ಆದರ್ಶ ಮುಕ್ತನು ಶ್ರೀಕೃಷ್ಣನಂತಿರುತ್ತಾನೆ; ಅವನು ಲೋಕಕ್ಕೂ ಸಹಿತನು— ಕಸ್ತೂರಿ ಬಾ ಸಹಿತರಾದ ಮಹಾತ್ಮಾಗಾಂಧಿಯವರಂತೆ.

ತತ್ತ್ವವೆಂದರೆ ಅದುತನ. ಅದೆಂದರೆ ಒಂದು ಕಾರ್ಯಕ್ಕೆ ಅನುಭವಕ್ಕೆ ನಿಯಾಮಕವಾಗಿರುವ ಸಿದ್ಧಾಂತ ಅಥವಾ ಭಾವಯೋಜನೆ. ದೃಶ್ಯಮಾನ ಕಾರ್ಯ ಅಥವಾ ಅನುಭವವು ನಿರ್ದಿಷ್ಟವಾಗಿ ಸಂಭವಿಸಲು ತತ್ಸಂಬಂಧಿಯಾದ ತತ್ತ್ವವನ್ನು ಮೊದಲು ಮಥಿಸಿ ನಿರ್ಣಯಿಸಿಕೊಂಡಿರುವುದು ವಿವೇಕಿಗಳ ರೀತಿ. ಅಂಥ ನಿರ್ಣಯ ಅಥವಾ ಸಿದ್ಧಾಂತವು 'ಜ್ಞಾನ' ವೆಂದು ವಿಶಿಷ್ಟಾರ್ಥದಲ್ಲಿ ಬಳಕೆಗೆ ಬಂದಿದೆ. "ತತ್ತ್ವಜ್ಞಾನ" ಎಂಬ ಸಮಾಸದಲ್ಲಿ "ಜ್ಞಾನ"ದ ಅರ್ಥವು ಸಾಮಾನ್ಯವಾದುದು; "ತತ್ತ್ವ"ವೇ ವಿಶಿಷ್ಟಾರ್ಥದ "ಜ್ಞಾನ"ವನ್ನು ಪ್ರತಿನಿಧಿಸುತ್ತದೆ. ತತ್ತ್ವಕ್ಕೆ ಸತ್ಯವನ್ನು ಪರ್ಯಾಯವಾಗಿ ಬಳಸಲಾಗುತ್ತದೆ. ಸತ್ಯವೆಂದರೆ ಇರುವಂಥದು. ಎಲ್ಲಿ? ಯಾವಾಗ? ಯಾರು ಹಾಗೂ ಯಾವುದರ ಮಟ್ಟಿಗೆ? ಏಕೆ? ಎಂಬ ಪ್ರಶ್ನೆಗಳನ್ನು ಹಾಕಿದಾಗ ಸತ್ಯದ ಅರ್ಥವು ಪರಿಮಿತ, ಸಂಕುಚಿತ ಸ್ವರೂಪಕ್ಕೆ ತಿರುಗುವುದು.

ವಿಜ್ಞಾತೃವಿನ ಪಂಚೇಂದ್ರಿಯಗಳಿಗೆ ಸಂಬಂಧಿಸಿದುದು ವಿಜ್ಞಾನ ಸತ್ಯ ಅಥವಾ ಭೌತಿಕ ಸತ್ಯ. ಅದೊಂದು ಕಾರಣ, ಕಾರ್ಯ ಅಥವಾ ಸ್ವಭಾವ ಎಂಬ ಸ್ವರೂಪದ್ದು. ಅದು ವಿಜ್ಞಾತೃನಿರಪೇಕ್ಷವಾದುದು. ಪಂಚಭೂತಗಳ ಹೆಚ್ಚು ಹೆಚ್ಚು ಆಳದ ಒಳಗಿನ ಒಳಗಿನ ಸ್ವಭಾವವನ್ನು ತಿಳಿಯಲು ಪ್ರಯತ್ನಿಸುವುದು ವೈಜ್ಞಾನಿಕ ಸತ್ಯಶೋಧನ. ಪಂಚಭೂತಗಳೆಲ್ಲವೂ ಜಡಗಳೆಂದು ಗೃಹೀತ. ಅದರ ತರ್ಕವು ಸಾಂಖ್ಯರ ಪ್ರಧಾನ ಪರಿಣಾಮವಾದ ಸಮರ್ಥನೆಗಿಂತ ಹೆಚ್ಚು ದೃಢವಾದುದಲ್ಲ. ಸುಬುದ್ಧಿಯಾಗ

ಹೊಸ ಭೌತಿಕ ಸಾಧನಗಳ ನಿರ್ಮಿತಿಗೆ ವಿಜ್ಞಾನದ ಸತ್ಯಗಳು ಈವರೆಗೆ ಕಾರಣಗಳಾಗುತ್ತ ಬಂದಿವೆ.

ಯಾರ ತಿಳಿವಳಿಕೆಗೂ ಬಾರದ ಇರವು ಇವೆಯೋ ಇಲ್ಲವೋ ಎಂದು ಯಾರೂ ಎಂದೂ ಹೇಳಲಾರರು. ವಿಜ್ಞಾನದಲ್ಲಿ ಪರೋಕ್ಷಜ್ಞಾನಕ್ಕೆ ವಸ್ತುನಿಷ್ಠತೆಯ ಸನದನ್ನು ಕೊಡಲಾಗಿದೆ; ಪ್ರತ್ಯಕ್ಷವು ಗೌಣ. ಶುದ್ಧ ತರ್ಕಕ್ಕೆ ಪ್ರತ್ಯಕ್ಷವು ಪ್ರಥಮಾಧಾರ; ಶುದ್ಧ ವಿಜ್ಞಾನಕ್ಕೆ ವ್ಯಕ್ತಿಪರ ಭೌತಿಕ ಸಾಧನಗಳು ಆಧಾರ. ಗಣಿತವು ಅಂಕತರ್ಕ; ತರ್ಕವು ವಾಕ್ಯಗಣಿತ. ವಿಜ್ಞಾನಕ್ಕೂ ಪ್ರತ್ಯಕ್ಷವು ಪ್ರಥಮಾಧಾರವಾದರೂ ಕೊನೆಗೆ ಅದಕ್ಕೆ ಗೌಣಸ್ಥಾನವನ್ನು ಕೊಡಲಾಗುವುದು, ತತ್ವಜ್ಞಾನವೂ ಹಾಗೇ ಮಾಡುವುದು. ಎರಡಕ್ಕೂ Seeing alone is not believing ಕಂಡದ್ದೆಲ್ಲಾ ಸತ್ಯವಲ್ಲ. ಆದರೆ ಒಂದರ ಶೋಧವು ವಸ್ತುಮಾತ್ರ ಪರಿಸೀಮಿತ; ಇನ್ನೊಂದರದು ವಸ್ತೂತ್ತರವಾದ ಮೌಲ್ಯಶೋಧಕ್ಕೆ ಪರಿಸೀಮಿತ; ವಸ್ತುಸತ್ಯದ ಭೌತಿಕತೆ ತತ್ವಸತ್ಯದ ಮೌಲ್ಯಭಾವವನ್ನು ಅಲ್ಲಗಳೆಯಲು ಹಕ್ಕುಳ್ಳದ್ದಲ್ಲ.

ವಸ್ತುವಿನಿಂದ ತತ್ವನಿರ್ಣಯವೋ ತತ್ವದಿಂದ ವಸ್ತುನಿರ್ಣಯವೋ? ಎಂಬುದೇ ಇಂದಿನ ಜಗತ್ತಿನ ಸಮಸ್ಯೆ. ಭೌತಿಕ ಸಾಧನಗಳಿಗಿಂತ ಮಿಕ್ಕ ನಂಬಲರ್ಹವಾದ ಆತ್ಮಿಕ ಸಾಧನಗಳು ಇಲ್ಲವೆಂಬುದು ರಸೆಲ್ಲಾದಿಗಳವಾದ. ಈ ವಾದವು ಅವೈಜ್ಞಾನಿಕ. ಆತ್ಮಪ್ರತ್ಯಕ್ಷವು (ಅಪರೋಕ್ಷಾನುಭೂತಿಯು, ಪ್ರಾತಿಭ ಆವಿರ್ಭಾವವು) ಎಷ್ಟು ಅಲ್ಪಸಂಖ್ಯಾತರಿಗೆ ಉಂಟಾದರೂ ಅದು ಉಂಟಾಗಿರುವ Fact ವಸ್ತುಸ್ಥಿತಿಯನ್ನು ಅಲ್ಲಗಳೆಯಲು ಮತಕ್ಕಿಂತ ಭಿನ್ನವಾದ ಸಾಧನವಿಲ್ಲ. ಒಬ್ಬನಿಗೆ ಇನ್ನೊಬ್ಬನು ವಸ್ತುಸ್ಥಿತಿ; ಅವನವನಿಗೆ ಅವನವನು ವ್ಯಕ್ತಿಸ್ಥಿತಿ. ದೇಹಕ್ಕೆ ಆತ್ಮವು ವಸ್ತು, ಆತ್ಮಕ್ಕೆ ದೇಹವು ವಸ್ತು ಒಬ್ಬನಲ್ಲೇ! ಅಪ್ರಾಪಂಚಿಕವಾದ ಶುದ್ಧಬುದ್ಧಿಯೇ ಆತ್ಮ, ಚೈತನ್ಯ, ಪ್ರಜ್ಞೆ. ಬುದ್ಧಿರೂಪಲಬ್ಧಜ್ಞಾನವೇ ಮಿತ್ಯನಘಾಂತರಂ, ಇರುವಿನ ಅರಿವೇ ಅರಿವು, ಇಲ್ಲದುದರ ಅರಿವು ಇಲ್ಲ.

ಭೌತಿಕ ಇರವೊಂದೇ ಇರವಲ್ಲ, ಮಾನಸಿಕ ಇರವೂ ಇರವೇ. ಪ್ರಾಪಂಚಿಕ ಇರವು ಪರಿವರ್ತನದ ಅನುಭವವನ್ನು ಉಂಟುಮಾಡುತ್ತದೆ. ಅಪ್ರಾಪಂಚಿಕ ಇರವು ಅಪರಿವರ್ತನದ ಅನುಭವವನ್ನು ಉಂಟುಮಾಡುತ್ತದೆ. ಪ್ರಪಂಚದಲ್ಲಿ ಸ್ಥಿರತ್ವ-ಚರತ್ವಗಳ ಅನುಭವ ಸಾಪೇಕ್ಷ; ಅಪ್ರಪಂಚದಲ್ಲಿ (ಮನೋಬುದ್ಧ್ಯಹಂಕಾರ ಚಿತ್ತಾತೀತ ನಿಲುಮೆಯಲ್ಲಿ) ಸ್ಥಿರತ್ವದ ಅನುಭವವು ನಿರಪೇಕ್ಷ. ಪ್ರತಿಯೊಂದು ಶಕ್ತಿಕಣವೂ ಜಗತ್ತಿನಲ್ಲಿ ಕ್ಷಣಭಂಗುರವಾದರೂ ಅವುಗಳ ಮೊತ್ತವು ದಿನಭಂಗ, ವರ್ಷಭಂಗ, ಯುಗಭಂಗಗಳೆಂಬ ಭೇದಗಳನ್ನು ಅನುಭವಕ್ಕೆ ತಂದುಕೊಡುತ್ತದೆ. ಸ್ಥಿರತ್ವದ ಈ ಸಾಪೇಕ್ಷ ಅನುಭವವು ಚರತ್ವವನ್ನು ಮೀರಬಲ್ಲುದಾದುದರಿಂದ ಇದನ್ನು ಮೀರುವ ನಿರಪೇಕ್ಷ ಸ್ಥಿರತ್ವವು ಸೂಚಿತವಾಗುತ್ತದೆ. ನಿರಪೇಕ್ಷ ಸ್ಥಿರಪ್ರಜ್ಞೆಯೇ ಸ್ಥಿತಪ್ರಜ್ಞೆ, ಬ್ರಾಹ್ಮೀಸ್ಥಿತಿ, ಮುಕ್ತಿ.

೧) ವ್ಯಕ್ತಿಯ ದೈಹಿಕ ಇರವು, ಭೌತಿಕ ಇರವು
→ ಅನ್ನಮಯ ಪ್ರಜ್ಞೆ

೨) ದೇಹೇಂದ್ರಿಯಾಧೃತವಾದ ದೈಹಿಕ (ಭಾವಿಕ) ಇರವು
→ ಪ್ರಾಣಮಯ ಪ್ರಜ್ಞೆ


೩) — ” — ಮಾನಸಿಕ (ಬೌದ್ಧಿಕ) ಇರವು
→ ಮನೋಮಯ ಪ್ರಜ್ಞೆ

೪) ಜೀವ-ಜಡಗಳ ಪ್ರತ್ಯೇಕತೆಯನ್ನಾಧರಿಸಿದ ವಿಶ್ಲೇಷಣಶೀಲವುಳ್ಳ (ದ್ವೈ) ಬೌದ್ಧಿಕ ಇರವು
→ ವಿಜ್ಞಾನಮಯ ಪ್ರಜ್ಞೆ

೫) ಜಡಾತ್ಮಮಯವಾದ ಶುದ್ಧ ಚೈತನ್ಯ ಸ್ವರೂಪದ ನಿರ್ವಿಶೇಷ, ಆಧ್ಯಾತ್ಮಿಕ, ಬೌದ್ಧಿಕ ಇರವು
→ ಆನಂದಮಯ ಪ್ರಜ್ಞೆ

೬) ಉಕ್ತ ಇರವಿನ ವ್ಯಕ್ತಿನಿಷ್ಠತೆಯು ವಸ್ತುನಿಷ್ಠತೆಯಾಗಿ ಮಾರ್ಪಟ್ಟ ಇರವು → ಬ್ರಾಹ್ಮೀ ಪ್ರಜ್ಞೆ ಅಥವಾ
"ಭೂತವಸ್ತು"ಮಯ ಪ್ರಜ್ಞೆ

ಜಡ ವಿಶ್ಲೇಷಣದ ನಾನಾತ್ವವು ಆಧುನಿಕ ವಿಜ್ಞಾನ ಪ್ರಜ್ಞೆ; ಜೀವ (ಚೈತನ್ಯ) ವಿಶ್ಲೇಷಣದ ದ್ವೈತಾದಿ ನಾನಾತ್ವಭಾವಗಳು ಆಧುನಿಕ ಅತಿ ಭೌತವಾದದ ಪ್ರಜ್ಞೆ. ವಿಶ್ಲೇಷಣ ಪ್ರಜ್ಞೆಯು ವಸ್ತುನಿಷ್ಠತೆ ಅಸಂಪೂರ್ಣ; "ಭೂತವಸ್ತು" ಪ್ರಜ್ಞೆಯು ವಸ್ತುನಿಷ್ಠತೆ ಪರಿಪೂರ್ಣ ಮತ್ತು ಅಸಂಪ್ರಜ್ಞಾತ ಸಮಾಧಿಗಮ್ಯ; ಸಂಪ್ರಜ್ಞೆಯು ವಿಜ್ಞಾನ, ಪದಾರ್ಥವೈವಿಧ್ಯಜ್ಞಾನ. ಜಾಗರದ ಈ ಷಟ್‌ಸ್ಥಲಗಳಲ್ಲಿ ಮೊದಲನೆಯ ಮೂರು ಜ್ಞಾತಪ್ರಜ್ಞಾ ವಿಭಾಗದಲ್ಲಿ ಅಡಕವಾಗುತ್ತವೆ; ೪ನೆಯದು ಅರ್ಧ ಹಾಗೆ, ಅರ್ಧ ಹೀಗೆ ಎನ್ನುವ ಹೊಸ್ತಿಲಿನ ಸ್ಥಾನದಲ್ಲಿದೆ; ೫ನೆಯ ಹಾಗೂ ೬ನೆಯ ಸ್ಥಲಗಳು ಅಜ್ಞಾತಪ್ರಜ್ಞಾ ವಿಭಾಗದಲ್ಲಿ ಅಡಕವಾಗುತ್ತವೆ; ಅವು ಕಾರ್ಲ್ ಜಿ. ಯುಂಗನ ಪ್ರಕಾರ ಆತ್ಮಕೇಂದ್ರ — ಬ್ರಹ್ಮಕೇಂದ್ರಗಳು; ಅಭಿನವ-ಗುಪ್ತನ ಪ್ರಕಾರ ತುರೀಯ-ತುರೀಯಾತೀತ ಮಟ್ಟಗಳು; ಅರವಿಂದರ ಪ್ರಕಾರ ಅಕ್ಷರ-ಪುರುಷೋತ್ತಮ ಪ್ರಜ್ಞಾಸ್ತರಗಳು; ಶಂಕರರ ಪ್ರಕಾರ ತುರೀಯ ಸ್ಥಲ; ಪತಂಜಲಿಯಂತೆ ಸಂಪ್ರಜ್ಞಾತ-ಅಸಂಪ್ರಜ್ಞಾತ ಸಮಾಧಿ ಸ್ಥಲಗಳು.



೧. (ಅ) ಬ್ರಹ್ಮ, (ಬ) ಈಶ್ವರ (ವಿಶ್ವಾಧಿಕ, ವಿಶ್ವಮಯ)— Macrocosmic self

೨. (ಅ) ಆತ್ಮ, (ಬ) ಜೀವ (ವಿಶ್ವಮಯ, ಪ್ರತಿಶರೀರಭಿನ್ನ)— Microcosmic self

೩. (ಅ) ಮನ, (ಬ) ಅಹಂ (ಅಧ್ಯಾತ್ಮ ೧)— smaller self

೪. (ಅ) ಇಂದ್ರಿಯ, (ಬ) ದೇಹ (ಅಧ್ಯಾತ್ಮ ೨) —cruder self

Self, centre, person, ಪುರುಷಗಳು ಔಪಚಾರಿಕ ಇಲ್ಲವೆ ರೂಪ-ಕಾರ್ಯದ ಕಾಯಗಳನ್ನುಳ್ಳ ಚೈತನ್ಯಸಾಂದ್ರ ಸ್ಥಲಗಳು; ಮಟ್ಟಗಳು, ಸ್ತರಗಳು, ವಿಭಾಗಗಳು ವಿಜ್ಞಾನಬುದ್ಧಿಯು ಅನುಕೂಲ ಸಿಂಧು ನ್ಯಾಯದ, ಕೃತ್ಯಭೇದವನ್ನಾಧರಿಸಿದ ವಿಂಗಡಣೆಗಳು. ವಿಜ್ಞಾನವು ದೇಶ-ಕಾಲಾವಚ್ಛಿನ್ನ. ಜಗತ್ತಿಗೆ ದೇಶಕಾಲಗಳಿಗಿಂತ ದೊಡ್ಡ ಅವಚ್ಛೇದಕಗಳಿಲ್ಲ; ಅವು ವಸ್ತುನಿಷ್ಠ ಪ್ರತ್ಯಕ್ಷ ಪದಾರ್ಥಗಳಲ್ಲ; ಅವು ವ್ಯವಹಾರ ಪೀಠಗಳಲ್ಲದೆ, ವ್ಯಾವಹಾರಿಕ ಗುಣಗಳನ್ನುಳ್ಳವುಗಳಲ್ಲ—ದ್ರವ್ಯ, ಗುಣ, ಕರ್ಮಗಳಲ್ಲಿ ಯಾವ ಜಾತಿಗೂ ಅವು ಸೇರವು. ಅವುಗಳ ಆಶ್ರಯವು ಯಾವಾಗಲೂ ಕೃತಕವಾಗಿ ಸ್ಥಿರವೆಂದು ಗ್ರಹಿಸಲಾದ ಯಾವುದಾದರೊಂದು ಘಟನೆ (Event = ದ್ರವ್ಯ, ಗುಣ, ಕರ್ಮ) ಯನ್ನು ಆಧರಿಸುತ್ತದೆ. ಅವೂ ಘಟನೆಯೂ ಪರಸ್ಪರಾವಲಂಬಿಗಳಾದ ಕಲ್ಪನೆಗಳು ಅವಳಿ ಜವಳಿಗಳಂತೆ. ಘಟನೆಯಲ್ಲಿ ಇಂದ್ರಿಯಗ್ರಾಹ್ಯ - ಅನಿಂದ್ರಿಯಗ್ರಾಹ್ಯ-ಗಳೆಂದು ಎರಡು ಭಾಗಗಳಿದ್ದರೆ, ದೇಶ ಕಾಲಗಳು ಸದಾ ಅನಿಂದ್ರಿಯಗ್ರಾಹ್ಯ. ಅವುಗಳೇ ಘಟನೆಗಳು, ಗುಣಪುಂಜಗಳು ಎಂದು ಹೇಳುವುದು ತಪ್ಪು. ಉದ್ದ, ಅಗಲ, ಎತ್ತರಗಳು ದ್ರವ್ಯದ ಪರಿಮಾಣಗಳು; ದೇಶಕಾಲಗಳು ಸರ್ವ ಪದಾರ್ಥ ಸಾಧಾರಣ. ಆದುದರಿಂದ ಅವುಗಳ ಪರಿಮಾಣತ್ವವು ಮೊದಲಿನ ಮೂರರ ಪರಿಮಾಣತ್ವದಿಂದ ವ್ಯಾವಹಾರಿಕವಾಗಿ ಭಿನ್ನ. ಮೊದಲಿನವುಗಳಿಗೆ ಎರಡನೆಯವು ಅಧಿಕರಣ, ಆಶ್ರಯ, ಆಧಾರ; ಅವು ದ್ರವ್ಯ ಮಾತ್ರದ ಉಪಾಧಿಕರಣಗಳು. ದೇಶ ಕಾಲಗಳೇ ವ್ಯಾಪ್ತಿ ಕಲ್ಪನೆಗೆ ಆಧಾರ. ಉದ್ದ, ಅಗಲ, ಎತ್ತರಗಳು ವ್ಯಾಪ್ತಿಯ ಅಂಗಕಲ್ಪನೆಗಳು. ದ್ರವ್ಯಾದಿಗಳಿಗೆ ಅಧಿಕರಣಾದಿಗಳು ವ್ಯಾಪಕಗಳು. ಸಾಮಾನ್ಯ, ಸಮವಾಯ, ವಿಶೇಷ, ಅಭಾವಗಳೆಂಬ ಸಂಬಂಧಗಳಿಗೆ ದ್ರವ್ಯಾದಿಗಳು ಉಪಾಧಿಕರಣಗಳು. ಅವ್ಯಕ್ತವು ಶಕ್ತಿ (Energy) ; ವ್ಯಕ್ತವು ಘಟನೆ. ದ್ರವ್ಯವು ಗುಣಾಶ್ರಯ, ಗುಣವು ಕ್ರಿಯಾಜನಕ. ಗುಣ - ಶಕ್ತಿಗಳ ಭೇದವು ಇಂದ್ರಿಯಗ್ರಾಹ್ಯತ್ವ - ವಿಜ್ಞಾನಗ್ರಾಹ್ಯತ್ವಗಳನ್ನವಲಂಬಿಸಿದೆ. ಮೂಲದ್ರವ್ಯವು ವಿಶ್ವಪದಾರ್ಥ; ಅದು ಅದ್ವಿತೀಯ; ದೇಶಕಾಲಗಳು

ಅದಕ್ಕೆ ಅವಚ್ಛೇದಕಗಳಿಲ್ಲ — ಬೇರೆ ಅವಚ್ಛೇದಕಗಳಿದಕ್ಕಿಲ್ಲ. ಕಾಲ ದೇಶಗಳು ಸರ್ವಾವಚ್ಛೇದಕಗಳಾಗಿರುವುದರಿಂದ ಅವೆಂದೂ ವಿಭು (ಅನವಚ್ಛಿನ್ನ, ಅಸೀಮ, ಅನಾದ್ಯನಂತ) ಪದಾರ್ಥಗಳೆನ್ನಿಸಲಾರವು. Space, Sky, Direction- ದೇಶ, ಆಕಾಶ, ದಿಕ್ ಎಂಬ ಪದಾರ್ಥಗಳು ಸಾರತಃ ಅಭಿನ್ನ. ದಿಕ್ಕಾಲಗಳು ಆತ್ಮಜ, ಬ್ರಹ್ಮಜಾತ — ಅರ್ಥಾತ್— ಅಸೀಮದಿಂದ ಹುಟ್ಟಿದ ಸೀಮನ ಮಾಡುವ ಸೀಮಿತ ಪದಾರ್ಥಗಳು ಅಥವಾ ಮಾಯೆ, ಪ್ರಕೃತಿ, ಪ್ರಧಾನ. ಅವುಗಳಿಂದ ಮೊದಲು ಹುಟ್ಟಿದ್ದು ಜಡ, ಅನಂತರ ಇಂದ್ರಿಯ, ಆಮೇಲೆ ಮನ. ಆತ್ಮದ ಆಧಾರ ತಪ್ಪಿದರೆ ಅವು ಶೂನ್ಯವಾಗುವುವು; ಅದು ದೊರೆತರೆ ಆತ್ಮವನ್ನೇ ಶೂನ್ಯವೆನ್ನಿಸುವಷ್ಟು ಸತ್ಯತಾಭಾಸವನ್ನವು ಪ್ರದರ್ಶಿಸುವುವು! ಅವು ಸರ್ವ ಮೂರ್ತತಾಧಾರ, ಭೂತತಾಧಾರ; ಆತ್ಮವೊಂದೇ ವಿಭುತ್ವಾಧಾರ! ವಿಭುವೊಂದೇ ಸರ್ವಾಧಾರ !

ಆಧುನಿಕ ವಿಜ್ಞಾನವು ಸರ್ವ ಜಗತ್ತೂ ಕ್ರಿಯಾಮಯ ಎಂದಿರುವುದರಿಂದ ಸರ್ವವೂ ಮೂರ್ತತ್ವ ಉಳ್ಳದ್ದೆಂದಹಾಗಾಯ್ತು. ಆದರೆ ದೇಶ-ಕಾಲಗಳು ಕ್ರಿಯಾಸ್ವರೂಪವಾದವುಗಳಲ್ಲ; ಅವು ಪರಿಮಾಣಗಳು. ಪರಿಮಾಣವೆಂಬುದು ಸಂಬಂಧಸ್ವರೂಪ ಉಳ್ಳದ್ದು ಮತ್ತು ಒಂದಕ್ಕಿಂತ ಹೆಚ್ಚು ಸಂಖ್ಯೆಯದು. ಅದು ಕ್ರಿಯಾವಿಶೇಷಣವಲ್ಲದೆ, ಸಾಕ್ಷಾತ್ ಕ್ರಿಯೆ (ಕರ್ಮ, ಕಾರ್ಯ) ಅಲ್ಲ. ವಿಶೇಷಣವೊಂದು ಧರ್ಮ, ಭಾವ, ಉಪಾಧಿ (Abstract condition). ಆದುದರಿಂದ ಅದು ಜಗತ್ತೇ ಅಲ್ಲದ, ಜಗತ್ತನ್ನು ಅರ್ಥಯಿಸಲು ಬೇಕಾದ, ಜಗತ್ತಿಗನ್ವಯಿಸುವ ಪರಿಸೀಮನದ (ಮೂರ್ತೀಕರಣದ) ಕಲ್ಪನೆ. ಆತ್ಮವೊಂದೇ ಸರ್ವಮೂರ್ತಪ್ರತ್ಯಯಸಂಯೋಗಿಯಾಗಿರುವುದರಿಂದ ಅದೊಂದೇ ವಿಭು. ದಿಕ್ಕೆಂಬುದು ಒಂದಕ್ಕಿಂತ ಹೆಚ್ಚಾಗಿರುವುದರಿಂದ ಕಾಲ್ಪನಿಕವಾಗಿಯೂ ಅದಕ್ಕೆ ವಿಭುತ್ವ (ವಿಶ್ವವ್ಯಾಪಕತ್ವ) ವಿಲ್ಲ. ಆಕಾಶವು ಒಂದೇ ಆದರೂ ಅದು ಶಬ್ದಗುಣ ಉಳ್ಳದ್ದಾದ್ದರಿಂದ ಬದ್ಧಾವಚ್ಛಿನ್ನ. ಅವಚ್ಛೇದಕವು

Delimiting factor ಪರಿಸೀಮನದ ಕಾರಕ, ಒಂದು ವಸ್ತುವಿನ ಹೆಸರಿನ ಅರ್ಥಕ್ಕೆ ಎಳೆದ ಗಡಿಗೆರೆ.

ನಮ್ಮ ಅರಿವಿಗೆ ಬರುವ ಇರವು ಅಥವಾ ಅಸ್ತಿತ್ವವು ಮೂರ್ತ ಪದಾರ್ಥಕ್ಕೆ ಮಾತ್ರ ಸೀಮಿತವಾದುದಲ್ಲ; ಅಮೂರ್ತದ (Abstract) ಇರವೂ ಇರವೇ. ಲೋಕದಲ್ಲಿ ಮೂರ್ತಾಮೂರ್ತಗಳು ಪರಸ್ಪರ ಪ್ರಚೋದಕಗಳಾಗಬಲ್ಲವು ಎಂಬುದು ಸ್ಪಷ್ಟ. ಪ್ರಚೋದನೆಯೊಂದು ಕ್ರಿಯೆ, ಆದರದು ಮೂರ್ತಮಾತ್ರದಲ್ಲಿರುವ ಸಾಮಾನ್ಯ ಕ್ರಿಯೆಯಲ್ಲ; ಅದೊಮ್ಮೆ ಕ್ರಿಯಾಭಿನ್ನವಾದ "ಜ್ಞಾನಸಹಜಕ್ರಿಯೆ" ಯಾಗಲೂಬಹುದು. ಅಂದರೆ ಅದು ಆಗ ಕ್ರಿಯಾಶಕ್ತಿಯಿಂದ ಭಿನ್ನವಾದ ಜ್ಞಾನಶಕ್ತಿ ಎಂದರ್ಥ. ಪ್ರಚೋದಕತ್ವ (ಪ್ರೇರಕತ್ವ) ದಂತೆಯೇ ಪ್ರಚೋದ್ಯತ್ವವೂ ಪ್ರೇರ್ಯತ್ವವೂ ತಾತ್ವಿಕವಾಗಿ ಒಂದು ಶಕ್ತಿಯೇ; ಅದನ್ನು ತ್ಯಾಜ್ಯವಾಗಿದ್ದಾಗ ದೌರ್ಬಲ್ಯವೆಂದೂ ಗ್ರಾಹ್ಯವಾಗಿದ್ದಾಗ ಬಲವೆಂದೂ ಹೇಳುವುದು ಲೋಕರೂಢಿ.

ಪ್ರಜ್ಞಾವಿಷಯವಾದುದೆಲ್ಲವೂ ಅಮೂರ್ತವೆಂಬುದು ರೂಢಿ; ಆದರೆ ಮಿದುಳಿನ ಕ್ರಿಯೆಯನ್ನು ಕೆಲವೊಮ್ಮೆ ಆಧರಿಸದೆ ವಿಷಯಗ್ರಹಣ ಮಾಡಬಲ್ಲ ಆತ್ಮವೊಂದೇ ನಿಜವಾಗಿ ಅಮೂರ್ತವಾದುದು; ಅದರಿಂದಲೇ ಅದನ್ನು ನಿಷ್ಕ್ರಿಯ (ಆದರೆ ನಿಷ್ಪ್ರಚೋದಕವಲ್ಲ) ಎಂದು ಉಪನಿಷತ್ತು ಹೇಳುತ್ತದೆ. ಮಿಕ್ಕವುಗಳೆಲ್ಲವೂ ಕ್ರಿಯಾಮಯ, ಕ್ರಿಯಾಗತ ಅಥವಾ ಕ್ರಿಯಾತ್ಮಕ. ಶುಷ್ಕಜ್ಞಾನವು ಅಪ್ರಚೋದಕ, ಅಚೇತನ, ಸಾಪೇಕ್ಷ ಚೇತನ. ಪ್ರತ್ಯಕ್ಷ – ಅಪರೋಕ್ಷ ಜ್ಞಾನಗಳು ಪ್ರಚೋದಕಗಳಾಗಬಲ್ಲವು. ಪ್ರತ್ಯಕ್ಷದಲ್ಲಿಯ (ಇಚ್ಛೆ, ಬುದ್ಧಿಗಳ ಜೊತೆಗಿರುವ) ಭಾವನೆ ಅದರ ಪ್ರಚೋದಕಶಕ್ತಿಯಾದರೆ, ಅಪರೋಕ್ಷದ (ಪ್ರಾತಿಭ ಪ್ರತ್ಯಕ್ಷದ) ಆನಂದವು (ವಿಭಾವನೆ) ಅದರ ಪ್ರಚೋದಕ ಶಕ್ತಿ. ಬುದ್ಧಿಯನ್ನು ಮನೋಗತವಾದ ಶುಷ್ಕ, ಯಾಂತ್ರಿಕ, ಸರ್ವಮೂರ್ತಗ್ರಹ ಜ್ಞಾನವೆಂಬ ರೂಢಿಯಂತೆ ಚಿತ್ತನ್ನು ಆತ್ಮಗತವಾದ ಅಂಥ ನಿಷ್ಕ್ರಿಯ, ಸರ್ವ ಮೂರ್ತಾಮೂರ್ತಗ್ರಹ ಜ್ಞಾನ ಎನ್ನಬಹುದು. ಅಪರೋಕ್ಷದ (ಆತ್ಮದ)

ಸತ್ತಿನ ಸತ್ತೆಯು ಪ್ರತ್ಯಕ್ಷದ ಸತ್ತಿನ (ಇರುವ ವಸ್ತುವಿನ) ಸತ್ತೆಗೆ ಸದೃಶ. ಭಾವನೆಯು ಪ್ರಾಣಸಾರ ಉಳ್ಳದ್ದಾಗಿರುವಂತೆ ಆನಂದವು ಚೈತನ್ಯ ಸಾರವುಳ್ಳದ್ದಾಗಿದೆ. ಬ್ರಹ್ಮವು ಅಥವಾ ಆತ್ಮವು ಸತ್ + ಚಿತ್ + ಆನಂದ; ಅಹಂಸೀಮಿತ ಮನ ಅಥವಾ ಜೀವಾತ್ಮನು ಇಚ್ಛೆ + ಬುದ್ಧಿ + ಭಾವನೆ. ಅಧಿಪ್ರಜ್ಞೆ ಬ್ರಹ್ಮಕ್ಕೆ, ಅವ-ಜ್ಞಾತ ಪ್ರಜ್ಞೆಗಳು ಜೀವಾತ್ಮನಿಗೆ ಪರ್ಯಾಯಗಳು.

ಲೋಕದಲ್ಲಿ ಮರುಮರೀಚಿಕೆಯು ಅತ್ಯಂತ ಕನಿಷ್ಠ, ಸಾಪೇಕ್ಷ ಅರ್ಥರಹಿತತೆಯನ್ನುಳ್ಳದ್ದು; ಬ್ರಹ್ಮದಲ್ಲಿ ನಾನಾತ್ವ ಕಲ್ಪನೆ ತತ್ಸಮ. ಅವ-ಪ್ರಜ್ಞೆ-(ಜ್ಞಾತ) ಅಭಿಪ್ರಜ್ಞೆಗಳ ಅವಸ್ಥೆಗಳು ದ್ವಿತ್ವಾದಿ ನಾನಾತ್ವದರ್ಶಕಗಳು; ಅಧಿಪ್ರಜ್ಞೆಗೆ (Genus and Species) ಜಾತಿ-ವ್ಯಕ್ತಿಗಳ ಸೋಂಕಿಲ್ಲ; ಅದು ಪ್ರಜ್ಞೆಯು ಅಖಂಡ, ಅಜಾತಿ ಅಧಿಷ್ಠಾನ (ಆಧಾರ, ನೆಲೆ).

"The task of future philosophy is to clarify men's ideas as the social and moral strifes of their own day" ತಮ್ಮ ಕಾಲದ ಸಾಮಾಜಿಕ ಹಾಗೂ ನೈತಿಕ ಸಂಘರ್ಷಗಳ ಬಗೆಗಿನ ಕಲ್ಪನೆಗಳನ್ನು ಮಾನವರಿಗೆ ಸ್ಪಷ್ಟಪಡಿಸಿಕೊಡುವುದೇ ಬರಲಿರುವ ತತ್ತ್ವಶಾಸ್ತ್ರದ ಕರ್ತವ್ಯ." ಎಂದ ಜಾನ್‌ಡ್ಯೂಯಿ. ಇದು ಸಾರ್ವಕಾಲಿಕ ಲೋಕನ್ಯಾಯ. ನಮ್ಮದ ತತ್ತ್ವಶಾಸ್ತ್ರ ಕೂಡ ಅದನ್ನೇ ಇಲ್ಲಿ ನೆನಪು ಮಾಡಬೇಕಾಗಿದೆ. ಸಾಮಾಜಿಕ ಸದಸ್ಯರ ಪರಸ್ಪರ ಸಂಬಂಧಗಳ ಸಾರ್ವಜನಿಕ ಧರ್ಮವೇ ನೀತಿ; ಗೃಹಸ್ಥಾಶ್ರಮವೇ ಹೆಚ್ಚು ಜನಪ್ರಿಯವಾಗಿರುವುದರಿಂದ ಅದು ಗಾರ್ಹಸ್ಥ್ಯನೀತಿ, ಅಂತಃಕೌಟುಂಬಿಕ ನೀತಿ. ಸಾಮಾಜಿಕವು ವಿಶಾ-ಲಾರ್ಥದಲ್ಲಿ ಅಧಿಕ ಸದಸ್ಯರ ಎಲ್ಲ ಸಾಂಘಿಕ (ಸಮಾಜದ ಮೇಲೆ ಪರಿಣಾಮ ಮಾಡುವ) ಚಟುವಟಿಕೆಗಳನ್ನೂ ಒಳಗೊಳ್ಳುತ್ತದೆ. ಗೃಹಸ್ಥನ ಪುರುಷಾರ್ಥಗಳು ಮೂರು: ಧರ್ಮ, ಅರ್ಥ, ಕಾಮ. ಧರ್ಮವು ಸಮಾಜಕಾರ್ಯ; ಆದ್ದರಿಂದ ಅರ್ಥದಂತೆ ವೈಯಕ್ತಿಕ ಕಾಮದ ನೇರವಾದ ಸಾಧನವಲ್ಲ. ಅದುದರಿಂದ ಅದನ್ನು ನಿರ್ಧರಿಸುವ ತತ್ತ್ವಜ್ಞಾನ ಅಗತ್ಯ. ಲೋಕತತ್ತ್ವಗಳ ಸಂಪತ್ತು, ವರ್ಗ, ಪ್ರಾಥಮ್ಯಾದಿಗಳ ನ್ಯಾಯ ನಿರ್ಣಯ ಧರ್ಮಾರ್ಥಿಕ

ವಾಗಿರುವುದು ಲೋಕಸಂಗ್ರಹ ನಿಯಮ. ಮೋಕ್ಷವು ಧರ್ಮದ ಆತ್ಮ; ಧರ್ಮವು ಭೇದಾಭೇದ ಸೂತ್ರವಾದರೆ ಮೋಕ್ಷವು (ಆತ್ಮವು) ಶುದ್ಧ ಐಕ್ಯಸೂತ್ರ. ಕಾಮ (Sensuous Consciousness), ಅರ್ಥ (Material Consciousness), ಧರ್ಮ (Moral Consciousness) ಮತ್ತು ಮೋಕ್ಷ (Spiritual Consciousness) ಗಳು ಉತ್ತರೋತ್ತರ ಬಲೀಯಸ್ತ್ವ ಉಳ್ಳ ಜೀವನಮೌಲ್ಯಗಳು. ಮೋಕ್ಷವು ಧರ್ಮದ ತರ್ಕಶುದ್ಧ ಅಂತ್ಯದಶೆ. ವ್ಯಷ್ಟಿ-ಸಮಷ್ಟಿಗಳ ಉಭಯ ಪುಷ್ಟಿಗೆ ಸಮಾನ ಪ್ರಾಧಾನ್ಯ ಕೊಟ್ಟು ಬಾಳುವವರಿಗೆ ಧರ್ಮವೇ ಮೋಕ್ಷ; ಸಮಷ್ಟಿ ಮಾತ್ರಪ್ರಧಾನರಿಗೆ ಮೋಕ್ಷವೇ ಧರ್ಮ. ಧರ್ಮ ರಾಜಸ, ಮೋಕ್ಷ ಸಾತ್ವಿಕ; ಕಾಮಾರ್ಥಗಳು ತಾಮಸಮಟ್ಟದ ಉತ್ತರೋತ್ತರ ದುರ್ಬಲತ್ವ ಉಳ್ಳ ಕೊನೆಬೆಲೆಗಳು. ಕಾಮಾರ್ಥಗಳು ಭೋಗಪ್ರಧಾನ ಲೋಕಮೌಲ್ಯಗಳು—ವ್ಯಕ್ತಿ ಸ್ವಾರ್ಥಕ್ಕೆ ಅವುಗಳಲ್ಲಿ ಪ್ರಾಧಾನ್ಯವಿದೆ. ಆದುದರಿಂದ ಅವು ಧರ್ಮಾಧೀನವಾಗಬೇಕೆಂಬುದು ವ್ಯಾಸಾದಿ ನಾಗರಿಕತಾವಕ್ತಾರರ ಆಶಯ. ಮುಕ್ತಿ ಶ್ರದ್ಧೆಯು ಧರ್ಮಶ್ರದ್ಧೆಗೆ ಅದ್ವಿತೀಯ ಎನ್ನಿಸಿದ ಬಲಿಷ್ಠ ಆಧಾರವಾದುದರಿಂದ ಪ್ರಾಚೀನ ಹಿಂದು ಶಾಸ್ತ್ರಗಳು ಮುಕ್ತಿ ವಿವೇಚನೆಗೆ ಬಹಳ ಗ್ರಂಥಗಳನ್ನೂ ಗ್ರಂಥಭಾಗಗಳನ್ನೂ ಮೀಸಲಿರಿಸಿದವು. ವಾನಪ್ರಸ್ಥವು ಸನ್ಯಾಸೋನ್ಮುಖ, ಗಾರ್ಹಸ್ಥ್ಯವು ವಾನಪ್ರಸ್ಥೋನ್ಮುಖ, ಬ್ರಹ್ಮಚರ್ಯವು ಗಾರ್ಹಸ್ಥ್ಯೋನ್ಮುಖ ಎನ್ನಿಸಿ ನಡೆಯುವುದೇ ಆಶ್ರಮ ನಿಯಮ. ಅರ್ಥಾರ್ಜನಪರನಾದ ಗೃಹಸ್ಥನು ಅರ್ಥತ್ಯಾಗಪರನಾಗುವ ಕ್ರಮಿಕ ವಿಕಾಸವೇ ಲೋಕದ ಪ್ರಗತಿಗೆ ಕಾರಣ, ಸಂಘರ್ಷನಿವಾರಣೆಯ ಉಪಾಯ. ಸಂಘರ್ಷಗಳ ಕಲ್ಪನೆ ಸ್ಪಷ್ಟವಾದರೆ ಸಾಲದು; ಅವುಗಳ ಪರಿಹಾರಕ್ಕೆ ಮಾನವನು ಯೋಚಿಸಬೇಕು. ಅರ್ಥತ್ಯಾಗಮಯಜೀವನ ರೂಪದ ಯೋಜನೆಯೂ ಸಿದ್ಧನಾದ ಸಮಾಜವಾದಿಗಳ ಮಧ್ಯದಲ್ಲಿ ಸಂಘರ್ಷ ಪರಿಹಾರದ ಸಮರ್ಥತಮ ಮತ್ತು ಸಂಸ್ಕೃತತಮ ಯೋಜನೆಯೆನ್ನಿಸದು. ತೇನ ತ್ಯಕ್ತೇನ ಭುಂಜೀಥಾಃ!

ಸಮಾಜಹಿತ ಮತ್ತು ವ್ಯಕ್ತಿಹಿತ ಎಂಬ ಹಿತಭೇದಗಳನ್ನು ಎಣ್ಣೆ-ಸೀಗೆ ಸಂಬಂಧ ಉಳ್ಳವುಗಳೆಂದು ಗ್ರಹಿಸಿ ಸಮಾಜವಾದ (Socialism) ಮತ್ತು ವ್ಯಕ್ತಿವಾದ (Individualism) ಎಂಬ ವಾದಗಳ ಸಂಘರ್ಷವನ್ನು ಕಲ್ಪಿಸಿಕೊಂಡು, ವಾದ ಪ್ರತಿವಾದಗಳನ್ನು ಹೂಡುವ ಪಾಶ್ಚಾತ್ಯ ಬುದ್ಧಿಯು ವಸ್ತುಜ್ಞಾನ ವಿಮುಖವಾದದ್ದು. ಮಾನವನು ಸಮಾಜಜೀವಿ ಎಂಬ ಮನಃಶಾಸ್ತ್ರವನ್ನು ಒಪ್ಪಿದ ಮೇಲೆ, ಮಾನವವ್ಯಕ್ತಿಗಳ ಸಂಘವೇ ಸಮಾಜವೆಂಬುದನ್ನು ಕಂಡ ಮೇಲೆ, ಸ್ವಾತಂತ್ರ್ಯವೆಂಬುದು ದಾಸ್ಯಸ್ವಚ್ಛಂದ್ಯಗಳಿಗಿಂತ ಭಿನ್ನವೆಂದು ನಂಬಿದ ಮೇಲೆ, ಒಬ್ಬನಿಗಿಂತ ಹೆಚ್ಚು ವ್ಯಕ್ತಿಗಳಿಲ್ಲವಾಗ ಧರ್ಮಾಧರ್ಮ ನಿರ್ಣಯದ ಪ್ರಶ್ನೆಯು ಬಹಳ ಮಟ್ಟಿಗೆ ಅರ್ಥಪೂರ್ಣತೆಯನ್ನು ಕಳೆದು ಕೊಳ್ಳುವುದೆಂಬುದು ಗೊತ್ತಾದ ಮೇಲೆ ಕೇವಲ ವ್ಯಕ್ತಿವಾದವು ಅವ್ಯವಹಾರ್ಯವೆಂಬುದನ್ನು ಯಾರಾದರೂ ಒಪ್ಪಲೇಬೇಕು. Crowd behaviour, mass mind ಗುಂಪಿನ ನಡೆ, ಸ್ತೋಮ ಬುದ್ಧಿ ಎಂಬಿವು ಸರಿಯಾದ ನಾಗರಿಕ ನಡತೆಗಳನ್ನಲ್ಲ, ವ್ಯಕ್ತಿಗಳ ಸಾಂದರ್ಭಿಕ ಅನಾಗರಿಕತೆಯನ್ನು ಪ್ರತಿಪಾದಿಸುತ್ತವೆ. ಆದರಿವು ಸಂದರ್ಭಗಳ ಸಾಮಾನ್ಯದ ವ್ಯಾಪ್ತಿಯನ್ನು ಉಳ್ಳವುಗಳಲ್ಲ. ಗುಂಪು ಅಥವಾ ಸ್ತೋಮ ಎಂಬುದರ ಸ್ವರೂಪವು ಸರ್ವಸಂದರ್ಭಸಾಧಾರಣವಲ್ಲ; ನಾಗರಿಕ ನಡತೆಯನ್ನೂ ಇದು ಭಿನ್ನಸಂದರ್ಭಗಳಲ್ಲಿ (ಸಂನಿವೇಶಗಳಲ್ಲಿ) ಪ್ರದರ್ಶಿಸುತ್ತದೆ. ಸಮಾಜದ ಕ್ರೌರ್ಯ, ದಬ್ಬಾಳಿಕೆ ಎಂದರೆ ಅದರಲ್ಲಿಯ ಹಲಕೆಲ ಬಲಿಷ್ಠರು ಅನಾಗರಿಕವಾಗಿ ಸಹಜೀವಿಗಳನ್ನು ನಡೆಸಿಕೊಳ್ಳುವುದೆಂಬುದಷ್ಟೇ ಅರ್ಥ. ಒಂದು ಇಡಿ ಸಮಾಜದ ಸದಸ್ಯರೆಲ್ಲರೂ ನಾಗರಿಕರಾಗಿದ್ದಾಗ ಆ ಸಮಾಜವು ವ್ಯಕ್ತಿಗಳ (ಸದಸ್ಯರ) ಹಿಂಸೆ-ಶೋಷಣೆಗಳಲ್ಲಿ ತೊಡಗುವುದೆಂಬುದು ಅಸಂಬದ್ಧ. ನಾಗರಿಕರೂ ಗುಂಪಿನಲ್ಲಿ ತಮ್ಮ ಗುರುತು ಸಿಗಲಾರದೆಂದು ಅರಿತು ದುರಾಚಾರಗಳಲ್ಲಿ ಪ್ರವೃತ್ತರಾದರೆಂಬ ವೃತ್ತಾಂತದಲ್ಲಿ ಅಂಥ ನಾಗರಿಕರು ತೋರಿಕೆಯ ನಾಗರಿಕರಷ್ಟೇ; ಅಲ್ಲದೆ ಪರಿಪಕ್ವ ಬುದ್ಧಿಯ ನಾಗರಿಕರೆಂದು ಯಾರೂ ಹೇಳಲಾರರು. ತ್ರಿಕರಣ ಶುದ್ಧಿ ಇಲ್ಲದವನೂ ಸಾಮಾಜಿಕ ಕರ್ತವ್ಯಗಳನ್ನರಿಯದವನೂ ಹಾಗೇ ಅರಿತೂ ಮಾಡದವನೂ ನಾಗರಿಕನಲ್ಲ, ಸುಸಂಸ್ಕೃತನಲ್ಲ.

ಪೋಲೀಸರೆದುರು ಮಾತ್ರ ಕಳದವನು ಹೇಗೆ ಸಂಭಾವಿತನೆನ್ನಿಸಿಯಾನು? ಹಾಗೇ ಕುಡಿದವನೂ ಕೆಲವೊಮ್ಮೆ ನಾಗರಿಕನಾಗಿ ವರ್ತಿಸಿದ ಮಾತ್ರದಿಂದ ಸರ್ವತ್ರ ನಾಗರಿಕನಾಗಿ ನಡೆದುಕೊಳ್ಳುತ್ತಾನೆ ಎಂದು ನಂಬುವುದು ಮೂಢತನ. ಸಾರ್ವತ್ರಿಕತೆ ಇಲ್ಲದ ನಾಗರಿಕತೆ ನಾಗರಿಕತೆಯಲ್ಲ, ಸಂಸ್ಕೃತಿ ಸಂಸ್ಕೃತಿಯಲ್ಲ. ಇಡಿ ಸಮಾಜವು ಎಲ್ಲ ವ್ಯಕ್ತಿಗಳನ್ನು ಶೋಷಿಸುವುದೂ ಎಲ್ಲ ವ್ಯಕ್ತಿಗಳೂ ಇಡಿ ಸಮಾಜವನ್ನು ಕಡೆಗಣಿಸುವುದೂ ವಿಚಾರಹೀನ ವ್ಯವಹಾರದೂರ. ಒಂದು ಸಮಾಜದಲ್ಲಿ ಬಹುಸಂಖ್ಯರು ಶ್ರೀಮಂತ-ರಾದರೆ ಬಡವರನ್ನೂ ಬಡವರಾದರೆ ಶ್ರೀಮಂತರನ್ನೂ ಶೋಷಿಸುತ್ತಾರೆ ಎಂಬುದೂ ಅಲ್ಪಾಪವಾದವುಳ್ಳ ಉತ್ಸರ್ಗವಲ್ಲ. ದೇಹಬಲ, ಬುದ್ಧಿಬಲ, ದ್ರವ್ಯಬಲ, ಸ್ಥಾನಬಲ, ಸಂಖ್ಯಾಬಲಗಳೆಂದು ಬಲಗಳು ಪಂಚವಿಧ. ಈ ಯಾವಬಲವುಳ್ಳವರೂ ಅಧರ್ಮರಾಜ್ಯದಲ್ಲಿ ಬಲಕಡಿಮೆಯಾದ ಪರರ ಶೋಷಕರಾಗುವ ಸಂಭವವಿದೆ. ಆದುದರಿಂದ ಸ್ವಬುದ್ಧಿ, ಪರಬುದ್ಧಿ, ಪರದಂಡಭಯ ಎಂಬ ಒಂದಲ್ಲ ಒಂದರಿಂದ ಈ ಬಲಗಳು ಧರ್ಮಾಧೀನ-ರಾಗಿ ವರ್ತಿಸುವಂತೆ ಮಾಡುವುದೇ ಧರ್ಮರಾಜ್ಯಭಾರ. ಸಮಾನಗುಣದ ಸಹಜೀವಿಗಳಿಗಿಲ್ಲದ ದ್ರವ್ಯಗಳನ್ನು ಇಲ್ಲದ ಪರಿಮಾಣ-ಪ್ರಕಾರಗಳಲ್ಲಿ ಇಟ್ಟುಕೊಂಡಿರುವವರು ಶೋಷಕರು. ಶೋಷಣೆ Social Injustice ಸಾಮಾಜಿಕ ಅನ್ಯಾಯ. ಗುಣದಲ್ಲಿ ದ್ರವ್ಯೇತರ ಬಲ; ದ್ರವ್ಯದಲ್ಲಿ ಭೌತಿಕವಾದ ಬಳಕೆಯ ಸಾಮಗ್ರಿ. ಮಹಾಭಾಗ (Majority) ಅಲ್ಪಭಾಗ (Minority)ರ ಘರ್ಷಣ ಪ್ರಸಂಗದಲ್ಲಿಯೂ ಬಳಕೆಯ ಸಾಮಗ್ರಿ ಹಾಗೂ ಸೌಕರ್ಯಗಳ ಅಸಾಂದರ್ಭಿಕ, ಅಪರ್ಯಾಪ್ತ ವಿತರಣವೇ ಅನ್ಯಾಯ. ಅನ್ಯಾಯಗಾರರು ಅವಮಾನವರಲ್ಲದೆ, ಮಾನವರೆಂಬ ಗೌರವಕ್ಕೆ ಪಾತ್ರ-ರಾಗುವವರಲ್ಲ. ಆದುದರಿಂದ ಭಾರತವು ಸಮಾಜ-ವ್ಯಕ್ತಿಗಳ ದ್ವೈತ, ದ್ವಂದ್ವಗಳನ್ನು ಚರ್ಚಾವಸ್ತುವನ್ನಾಗಿ ತೆಗೆದುಕೊಳ್ಳದೆ ಧರ್ಮ-ಅಧರ್ಮಗಳನ್ನೇ ಯಾವಾಗಲೂ ಚರ್ಚಾವಿಷಯಗಳನ್ನಾಗಿ ತೆಗೆದುಕೊಳ್ಳುತ್ತ ಬಂದಿದೆ. ಅದರಲ್ಲಿ ಬಹುಸಂಖ್ಯ ಸಜ್ಜನರ ಹಿತವೇ ಪರಮಧರ್ಮ; ಸಜ್ಜನರು ಪರಹಿತ ಪ್ರಧಾನರು! ಹಿತವು ಪ್ರಿಯಕ್ಕಿಂತ ಹೆಚ್ಚಿನ ಮೌಲ್ಯ. ಆತ್ಮಹಿತ, ಮನೋಹಿತ, ಇಂದ್ರಿಯಹಿತ, ದೇಹಹಿತಗಳಲ್ಲಿ ಸ್ಪರ್ಧೆ,

[illegible] !

"A monistic world is for us a dead world; in such a universe we carry out, milly milly, the parts assigned to us by an omnipotent deity or primeval nebula; and not all our tears can wipe out one word of the eternal script— [illegible] The value of a multiverse as compared with a universe lies in this, that where there are cross-currents and warring forces, our own strength and will, may count and help decide the issue, it is a world where nothing is irrevocably settled and all action matters— [illegible] ("Outlines of philosophy, P. 440) " [illegible]

ಮಾನವ ಪ್ರಪಂಚದಲ್ಲಿ ವಿರುದ್ಧ ಹಾಗೂ ಭಿನ್ನವಾಗಿರುವುದರಿಂದ ಮಾನವ-ಮಾನವ ಮತ್ತು ಮಾನವ-ಮಾನವೇತರ ಹಾಗೂ ಮಾನವೇತರ + ಮಾನವೇತರ ಸೃಷ್ಟಿಗಳ ಅಸಮನ್ವಯವನ್ನು ಎಷ್ಟೋಕಡೆ ಸರ್ವ ಮಾನವರಿಗೆ (ಅಥವಾ ಸರ್ವ ಸಜ್ಜನರಿಗೆ ಸಹ) ಸಮಾಧಾನಕಾರವಾಗುವಂತೆ ಸರಿಪಡಿಸಲು ಈ ವರೆಗೆ ಮಾನವನಿಗೆ ಸಾಧ್ಯವಾಗಲಿಲ್ಲ. ಮತ್ತೆ ಪಾಶ್ಚಾತ್ಯರು ತಮ್ಮ ಪೂರ್ವಗ್ರಹವನ್ನು ನಾನಾತ್ವ ಪ್ರಾಧಾನ್ಯದತ್ತ ಹರಿಯಿಸಿದ್ದಕ್ಕೆ ಮೇಲಿನದೊಂದು ಉದಾಹರಣೆ. ಅಲ್ಲದೆ, ಭೇದ-ಅಭೇದಗಳೆರಡೂ ಜಗತ್ತಿನಲ್ಲಿದ್ದರೂ ಜಗತ್ತು ಜಗತ್ತಾಗಿ ಉಳಿದಿರಲು ಅಭೇದದ (ಅಭೇದ ಸಂಬಂಧಗಳ) ಸಂಖ್ಯೆಗಿಂತ ವ್ಯಾಪ್ತಿ ಹೆಚ್ಚಾಗಿರುವುದೇ ಕಾರಣ. ಅಥವಾ ಅದರ ಶಕ್ತಿ ಅಧಿಕವಾಗುವುದೇ ಕಾರಣ. ಭೇದದ ಪ್ರಭಾವಿತ್ವವು ಅಭೇದದ ಪ್ರಭಾವಿತ್ವಕ್ಕಿಂತ ಒಟ್ಟಿನಲ್ಲಿ ಕಡಿಮೆಯೆಂಬುದು ಅನುಭವ ಗೋಚರ. ಕ್ಷೇತ್ರಭೇದವೊಂದರಿಂದ ಭೇದವು ಒಟ್ಟಿನಲ್ಲಿ ದುರ್ಬಲ, ಅಲ್ಲಲ್ಲಿ ಪ್ರಬಲ ಎನ್ನಿಸಿಯಾದರೂ ಉಳಿದುಕೊಂಡಿದೆ; ಜಗತ್ತಿನ ಸಾಪೇಕ್ಷತೆ ಬ್ರಹ್ಮಾವಲಂಬನ, ಅದಕ್ಕೆ ನಿಲ್ಲಲು ಆಧಾರ. ಶುದ್ಧ ಅಭೇದದಲ್ಲಿ ತೀರ್ಮಾನಿಸಬೇಕಾದ ಪ್ರಕರಣಗಳಿಲ್ಲ. ಲೋಕಜೀವನವು ಸಮಾಧಾನಾಂಶ ಹೆಚ್ಚಾಗಿ ಲಭಿಸಿರುವ ರಾಜಸರ ಹಾಗೂ ತಾಮಸರ ದೃಷ್ಟಿಗಳಲ್ಲಿ ಮಾತ್ರ ದಿವ್ಯ ಜೀವನಕ್ಕಿಂತ ಹೆಚ್ಚು ಆಕರ್ಷಣೀಯ The secular philosophy of the haves can never be the same as that of the have-nots—ಉಳ್ಳವರ ಲೌಕಿಕ ತತ್ತ್ವಜ್ಞಾನವೆಂದೂ ಇಲ್ಲದವರ ಲೌಕಿಕ ತತ್ತ್ವಜ್ಞಾನಕ್ಕೆ ಸಮನಾಗದು—ಎಂಬುದನ್ನು ವಿಲ್‌ಡ್ಯುರಾಂಟನು ಅರಿಯನು. ಭೇದದ ಬಗ್ಗೆ ಅನುಕೂಲಕರ ಪ್ರವೃತ್ತಿ ಇರುವುದು ಅಸಾಂದ್ರ ಪ್ರೇಮದ ಲಕ್ಷಣ. ಸ್ವದೇಹೇಂದ್ರಿಯ ಮನಸ್ಸುಗಳ ಬಗ್ಗೆ ಉಳಿದೆಲ್ಲವುಗಳ ಮೇಲಿರುವುದಕ್ಕಿಂತ ಅಧಿಕ ಪ್ರೇಮವಿರುವುದು ಅಲ್ಪ ಮಟ್ಟದ ಸ್ವಾರ್ಥ. ಅಲ್ಪಸ್ವಾರ್ಥವಿಷ್ಟನ ಪ್ರಯತ್ನಗಳಿಂದ ಅಲ್ಪಕಾಲಿಕ ಸಾಮರಸ್ಯ ದೊರಕೀತು ಮತ್ತು ಅದರ ಅನಂತರ ದೀರ್ಘಕಾಲಿಕ ದುಃಖ ಬಂದೀತು. ಕೇವಲಾಘೋ ಭವತಿ ಕೇವಲಾದೀ; ಭುಂಜತೇ ತೇ ತ್ವಘಂ ಪಾಪಾಃ!

ಉಕ್ತ ಸ್ವಾರ್ಥವು ಸರ್ವರಿಂದಲೂ ನಿಂದ್ಯವಾಗಿದೆ; ಅದಕ್ಕಿಂತ ಒಂದು ಡಿಗ್ರಿ ಕಡಿಮೆ ಸ್ವಾರ್ಥವು ಪಾಪವಲ್ಲ ಎಂದು ಮುಂತಾಗಿ ವಾದಗಳಿದ್ದಿರಬಹುದಾದರೂ ಅವರ ಪಾಪಮಯತ್ವದ ಬಗ್ಗೆ ಯಾರಿಂದಲೂ ತಕರಾರಿಲ್ಲ. ಪರರೂ ಪರವಸ್ತುಗಳೂ ಸ್ವಾಧೀನವಾಗಿರಬೇಕೆಂಬುದು ಹೀನ ಮಟ್ಟದ ಪ್ರೇಮವೆಂದು ನೀಟ್ಷೆ ಕೂಡ ಹೇಳಿದ. ಆದರಿಂದ ಭಾರತವು ಜಿತೇಂದ್ರಿಯತೆಯು ಔತ್ತಮ್ಯದ ನಿಕಷವೆಂದಿತು, ಪರಪ್ರಭುತ್ವಕ್ಕಿಂತ ಸ್ವಪ್ರಭುತ್ವ ಶ್ರೇಷ್ಠವೆಂದಿತು; ತನ್ನ ತಾ ಗೆಲ್ಲುವುದು ಭಾರತದ ಮಹೋನ್ನತ ಆದರ್ಶವಾಯಿತು. ಆದರಿಂದು ರಾಷ್ಟ್ರೀಯತೆಯನ್ನೂ ಕಡೆಗಣಿಸುವ ವ್ಯಕ್ತಿಸ್ವಾರ್ಥವು ತಾಂಡವಿಸುತ್ತಿದೆ. ಅದರಿಂದ ಭಾರತವು Backward country ಹಿಂದುಳಿದ ದೇಶವೆಂದೆನ್ನಿಸಿದೆ. ಮುಂದುವರಿದ ಆ ಈ ರಾಷ್ಟ್ರಗಳು ಬಾಯಲ್ಲಿ ಭಾರತದ ಆದರ್ಶಗಳಿಗೆ ಭಿನ್ನ ಅಥವಾ ವಿರುದ್ಧವಾದ ಸಿದ್ಧಾಂತಗಳನ್ನು ಹೇಳಿದಂತೆ ತೋರಿದರೂ ವ್ಯವಹಾರದಲ್ಲಿ ನಿಃಸ್ವಾರ್ಥದ ಮೊದಲ ಹೆಜ್ಜೆಯಾದ ರಾಷ್ಟ್ರೀಯತೆಯನ್ನು ಸಮರ್ಥವಾಗಿ ಪರಿಪಾಲಿಸುತ್ತಿರುವುದೇ ಅವುಗಳ ಮುನ್ನಡೆಗೆ ಕಾರಣ ಎಂಬುದನ್ನು ಬಾಯಿಬಲದ ಭಾರತೀಯ ತಕರಾರಿಗಳಿಂದು ಅರಿತುಕೊಳ್ಳುವುದಗತ್ಯ. ನಿಃಸ್ವಾರ್ಥತೆಯ ಪರಕಾಷ್ಠೆಯೇ ಬ್ರಹ್ಮತ್ವ, ಜೀವನ್ಮುಕ್ತಿ, ವಿಶ್ವಮಾನವತೆ. ಅಂಥವನೇ ದೇವಮಾನವ, ಮಹಾಪುರುಷ, ಅವತಾರಪುರುಷ; ಅವನಲ್ಲಿ ಆಭಾಸಿಕ ಸ್ವಾರ್ಥಪರತೆ ಕೆಲವೊಮ್ಮೆ ಇರಬಹುದು–ಅಷ್ಟೆ. ಆಭಾಸಿಕವಾಗಿ ಮುಂದುವರಿದ ರಾಷ್ಟ್ರಗಳ ರಾಷ್ಟ್ರೀಯತೆಯು ಆ ದೇಶದ ಜನರ ವಂಚನೆ–ಅಲ್ಪಭಾಗರು ಮಹಾಭಾಗರನ್ನು ಸ್ವಸುಖಕ್ಕಾಗಿ ಆಳಲು ಮಾಡಿದ ಮೋಸ.

ಮಾರ್ಕ್ಸ್ ಮಹಾಶಯನು ಮತಧರ್ಮವೊಂದು ಅಫೀಮು, ಮಾದಕ ಪದಾರ್ಥ, ರಾಜಕೀಯ ಧೂರ್ತರು ಜನರ ವಂಚನೆಗಾಗಿ ಬಳಸುವ ತಲೆಕೆಡಿಸುವ ಅಥವಾ ಮರುಳು ಮಾಡುವ ಮದ್ದು–ಎಂದು ಅಭಿಪ್ರಾಯಪಟ್ಟುದಕ್ಕೆ ನಿದರ್ಶನಗಳಿವೆ. ಆದರೆ ಮತಧರ್ಮವೊಂದನ್ನಲ್ಲ— ವ್ಯಾಪಾರ, ಉದ್ಯಮ, ರಾಜಕೀಯ, ಅರ್ಥಯೋಜನೆ, ತತ್ತ್ವಪ್ರಚಾರ ಮುಂತಾದ ಪ್ರತಿಯೊಂದನ್ನೂ ಧೂರ್ತರು ಭಾವಿಕರನ್ನು ಮೋಸಗೊಳಿಸಿ ಸ್ವಾರ್ಥವನ್ನು

ಸಾಧಿಸಿಕೊಳ್ಳಲು ಬಳಸಿದ್ದುಂಟು. ತಾನು ಅಥವಾ ತನ್ನ ಗುಂಪು ಹೇಳಿದಂತೆ
ಇತರರು ಅಥವಾ ಇತರ ಗುಂಪುಗಳು ನಡೆದುಕೊಳ್ಳಬೇಕು— ಎಂಬ
ಲಾಲಸೆ ಪ್ರಬಲವಾದಾಗ ಒಬ್ಬ ಅಥವಾ ಒಂದು ಗುಂಪು ಸಾಂದರ್ಭಿಕ
ಜ್ಞಾನಸೂತ್ರವನ್ನು ತನ್ನ ಸ್ವಾರ್ಥಸಾಧನೆಗೆ ಅನುಕೂಲವಾಗುವಂತೆ
ವ್ಯಾಖ್ಯಾನಿಸಿ ಪ್ರಚುರಪಡಿಸಿದ್ದಕ್ಕೆ ಇತಿಹಾಸವು ಹಲವಾರು ನಿದರ್ಶನಗಳನ್ನು
ಕೊಡಬಲ್ಲದು. "ಅಮೇರಿಕಾದ ಜೀವನ ವಿಧಾನ" ಎಂಬುದರ ಪ್ರಚಾರ
ಅಂಥ ಪ್ರಯತ್ನಕ್ಕೊಂದು ಆಧುನಿಕ ಉದಾಹರಣೆ. ಆರ್ಥಿಕ ಸಮತ್ರಾ-
ವಾದವಷ್ಟ ನಿಃಸ್ವಾರ್ಥ ರಾಜಕೀಯ ವ್ಯವಸ್ಥೆ ಲೋಕಜೀವನಕ್ಕೆ ಇನ್ನೊಂದಿಲ್ಲ;
ಅದರಲ್ಲಿರುವ ಸರ್ವಭೂತದಯೆ ಇನ್ನೊಂದು ಲೌಕಿಕ ವ್ಯವಸ್ಥೆಯಲ್ಲಿಲ್ಲ.
ಇಲ್ಲಿಯ ಸಮತೆ ಅಕ್ಷರಾರ್ಥಪ್ರಧಾನವಾದುದಲ್ಲವೆಂಬುದು ಗೃಹೀತ. ಈ
ಲೌಕಿಕ ಸಮತ್ವವು ಆಧ್ಯಾತ್ಮಿಕ ಸಮತ್ವದ ಸಾಮೂಹಿಕ ಸಂಕೇತ.
"ಶುನಿಚೈವ ಶ್ವಪಾಕೇಚ ಪಂಡಿತಾಃ ಸಮದರ್ಶಿನಃ" ಎಂಬುದು ಜೀವ
ಮೌಲ್ಯದ ಮಟ್ಟದಲ್ಲಿ ಸರ್ವತ್ರ ಸತ್ಯ. ಹುಟ್ಟಿದ ಜೀವದ ಪ್ರಾಥಮಿಕ
ಅಪೇಕ್ಷೆ ಜೀವನ, ಆತ್ಯಂತಿಕ ಅಪೇಕ್ಷೆ ಮೋಕ್ಷ. ಅರ್ಥತಾರತಮ್ಯದ ಅಲ್ಪತೆ-
ಗಿಂತ ಹೆಚ್ಚಿನ ಸಾಮಾಜಿಕ ನ್ಯಾಯ ಇನ್ನೊಂದಿಲ್ಲ; ಏಕೆಂದರೆ, ಸಾಮಾನ್ಯ
ಮಹಾಭಾಗರ ಲೌಕಿಕ ಜೀವನದ ಸಾಂಸ್ಕೃತಿಕ ಶಕ್ತಿಯನ್ನು ಅರ್ಥವು
ಬಹುವಾಗಿ ನಿಯಂತ್ರಿಸುತ್ತದೆ. ಅರ್ಥವು ಸಂಸ್ಕೃತ ಮಾನವನ ಅನಿವಾರ್ಯ
ಸೇವಕ, ಅಸಂಸ್ಕೃತನ ಮೇಲೆ ದಬ್ಬಾಳಿಕೆ ನಡೆಸುವ ಸರ್ವಾಧಿಕಾರಿ.
ಆದುದರಿಂದ- ಧರ್ಮಾರ್ಥವೇ ಲೌಕಿಕ ಜೀವನ ಸೂತ್ರಗಳ ಸಾರ್ವಭೌಮ;
ಧರ್ಮ ಕಾಮ ಅದರ ಫಲ. ಧರ್ಮವು ಸಮಷ್ಟಿಹಿತ ಪ್ರಧಾನವಾದುದು.
ಆತ್ಮವು ವ್ಯಷ್ಟಿ-ಸಮಷ್ಟಿಗಳ ಸಂಪರ್ಕದ ಏಕಮೇವಾದ್ವಿತೀಯ ಸೇತು.
ಆತ್ಮಭಾವ (ಬ್ರಹ್ಮಭಾವ) ವೆಂಬುದು ಸರ್ವೋದಯ ಪ್ರಜ್ಞೆ, 'ಸರ್ವೇ ಜೀವಾಃ
ಸುಖಿನೋ ಭವಂತು' ಎಂಬ ಪ್ರಾಮಾಣಿಕವಾದ ಪ್ರಯತ್ನಶೀಲ ಹರಕೆ.
ಬ್ರಹ್ಮಾಹಮೆಂದರೆ ಸರ್ವೋಽಹಂ. ಸರ್ವಾತ್ಮಕತೆಯನ್ನುಳ್ಳ ಆದರ್ಶ
ಮಾನವನ ಜೀವನದಲ್ಲಿ ಮಾತ್ರ--

"ಬ್ರಹ್ಮಾರ್ಪಣಂ ಬ್ರಹ್ಮಹವಿರ್ ಬ್ರಹ್ಮಾಗ್ನೌ ಬ್ರಹ್ಮಣಾಹುತಂ
ಬ್ರಹ್ಮೈವ ತೇನ ಗಂತವ್ಯಂ ಬ್ರಹ್ಮ ಕರ್ಮಸಮಾಧಿನಾ"

ಎಂಬ ಜ್ಞಾನಸೂತ್ರವು ಸಂಪೂರ್ಣ ಸಾರ್ಥಕವಾಗಿರುತ್ತದೆ, 'ಸರ್ವೋಪಕಾರಾರ್ಥಮಿದಂ ಶರೀರಂ' ಎಂಬುದು ಧ್ವನಿಸುತ್ತದೆ. ಇಂದು ದೇಶದ ಮಹಾಭಾಗರು (ನೂರಕ್ಕೆ ೫೦ಕ್ಕಿಂತ ಹೆಚ್ಚು ಜನರು) ಈ ಬ್ರಹ್ಮಧರ್ಮವನ್ನು ಅನುಸರಿಸುವುದರಲ್ಲೇ ರಾಮರಾಜ್ಯಸ್ಥಾಪನೆ ಇದೆ.

ಸಜ್ಜನರು ಆದರ್ಶ ಮಾನವರು; ಅವರ ಗುಣವು ವ್ಯಾಖ್ಯಾನಾಪೇಕ್ಷ್ಯವಾದುದು. ದುರ್ಜನರು ನೈಸರ್ಗಿಕ ಸ್ವಾರ್ಥಿಗಳು; ಅವರ ಗುಣವು ಅವರಿಗೆ ದೊರಕುವ ಶಿಕ್ಷಣದ ಮೂಲಕವೇ ಆಗಬಲ್ಲುದು. ಸಾಮ, ದಾನ, ಭೇದಗಳೆಂಬ ಶಿಕ್ಷಣೋಪಾಯಗಳು ಫಲಿಸದಾದಾಗ ಶಿಕ್ಷೆ (ದಂಡ) ಎಂಬ ಚರಮೋಪಾಯವು ಅವರ ಶಿಕ್ಷಣಕ್ಕೆ ಸಾಧನ. ಅಂಥ ಸಾಧನವು ಹೊರಗೆ ಹಿಂಸೆಯಾಗಿ ಕಂಡರೂ ಒಳಗೆ ಅಹಿಂಸೆಯೇ.

ವೃತ್ತೇ ಧರ್ಮರೂಪೇಣ ಹ್ಯಧರ್ಮಂ ಪ್ರಾಕೃತದ್ವಿಷಾಮ್ |
ಧರ್ಮಂ ಚ ಧರ್ಮರೂಪೇಣ ಕಷ್ಟಪ್ರಾಕೃತದ್ವಿಷಾಮ್ ||

ವ್ಯಾಸ ಇದನ್ನು ಬಲ್ಲ; ಅದರಿಂದಲೇ ಜಗತ್ತಿಗೆ ಸಾರಿದ; ಧರ್ಮಾ-ದರ್ಥಶ್ಚ ಕಾಮಶ್ಚ ಸಕಿಮರ್ಥಂ ನಸೇವ್ಯತೇ? ಎಂದು [illegible]. ಆತನ ದೃಷ್ಟಿಯನ್ನರಿಯದೆ ಧರ್ಮದೃಷ್ಟಿಗಳಾದ ತತ್ವಜ್ಞಾನಿಗಳು ಪೂರ್ಣ ಸಂಸ್ಕೃತರೆಂದೆನ್ನಿಸರು. ಪೂರ್ಣ ಸಂಸ್ಕೃತಿಸಂಪನ್ನತೆಯೇ ಮನುಷ್ಯನ ಪರಮಧ್ಯೇಯವು. ಪೂರ್ಣದೃಷ್ಟಿಗೆ ಅಥವಾ ಜೀವನ್ಮುಕ್ತ ದೃಷ್ಟಿಗೆ—

ಪೂರ್ಣಮಿದಂ ಪೂರ್ಣಮದಃ ಪೂರ್ಣಾತ್ಪೂರ್ಣಮುದಚ್ಯತೇ |
ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ ||
ಎಂದು ತೋರುತ್ತದೆ!

ಸಿದ್ಧಾಂತಗಳ ಮೂಲ ಶೋಧ

ಸಿ. ಇ. ಎಂ. ಜೋಡರಂಥ ಜ್ಞಾನಶಾಸ್ತ್ರಜ್ಞರೆಂದುಕೊಳ್ಳುವ ಜನರು ಭಾರತದಲ್ಲಿಯೂ ಇರುವುದರಿಂದ ಅವರ ನಾನಾತ್ವವಾದದ ವೈಶೇಷಿಕತೆಯ ಮಾನಸಶಾಸ್ತ್ರೀಯ ಮೂಲವನ್ನು ಬೆಳಕಿಗೆ ತರಬೇಕಾದುದು ಕರ್ತವ್ಯ ವಾಗಿದೆ.

ಮನುಷ್ಯನು ವಿಜ್ಞಾನಸಹಜವಾದ ವಸ್ತುನಿಷ್ಠ ಜ್ಞಾನಸಾಧನವುಳ್ಳವ ನೆಂದೂ (೨) ಆ ಸಾಧನದ ಮೂಲಕ ಜಗತ್ಸ್ವರೂಪವನ್ನು ಇಂದು ಮಾತ್ರ ಹೆಚ್ಚು ಸಮರ್ಥನಾಗಿ ಹುಡುಕಬಲ್ಲವನಾದನೆಂದೂ (೩) ಆ ಅನ್ವೇಷಣದ ಫಲವಾಗಿ ಕಣ್ಣಿಗೆ ಕಾಣುವ ಪ್ರಪಂಚವು ಅತ್ಯಲ್ಪಜ್ಞಾತವೆಂಬುದನ್ನೂ ಅದು ತನಗಿಂತ ಸದಾ ಭಿನ್ನವೆಂಬುದನ್ನೂ ಅರಿತವನೆಂದೂ (೪) ಈ ಅರಿವೇ ಅನುಭವ, (೫) ಈ ಅನುಭವವು ಅಪರಿಚಿತ, ಆದರೂ ಉತ್ಸಾಹ ವರ್ಧಕ ಹಾಗೂ ಮಾನವನ ಕೆಟ್ಟನ್ನು ಕೆರಳಿಸಬಲ್ಲಂಥದು ಮತ್ತು ಅವನನ್ನು ಹೊಸ ಸಾಹಸಗಳಿಗೆ ಪ್ರೇರಿಸಬಲ್ಲದು ಎಂದೂ ಜೋಡರು ಸಾರಿದ್ದಾರೆ. ಇದು ಅವರು ಕಂಡ ಮತಧರ್ಮ, ತತ್ವಜ್ಞಾನ, ವಿಜ್ಞಾನ ಅಥವಾ ಜಗತ್ ಸತ್ಯವಾದ.

೨೭೦ ಪುಟಗಳ ಜೋಡರ "Philosophical aspects of Modern Science" ಎಂಬ ಗ್ರಂಥದಲ್ಲಿ ಎಲ್ಲಿಯೂ ಮನುಷ್ಯಜಂತುವಿನ ಲಕ್ಷಣವನ್ನು ಹೇಳಿಲ್ಲ; ಅವರು ಆಧುನಿಕ ವಿಜ್ಞಾನವನ್ನು ಆಧರಿಸಿದವನು ಮಾತ್ರ ಗೌರವಾರ್ಹ ಮನುಷ್ಯ ಎಂದು ಧ್ವನಿಸಿದ್ದಾರೆ. ಮನುಷ್ಯನ ಗೌರವಾರ್ಹತೆ-ಅಗೌರವಾರ್ಹತೆಗಳ ವಿವೇಕವು ವಿಜ್ಞಾನದ ಅಥವಾ ಅದನ್ನಾಧರಿಸಿದ (ಅತಿಭೌತ) ತತ್ವಶಾಸ್ತ್ರದ ಕಕ್ಷೆಯಿಂದ ಹೊರಗೆ. ಮಾನವತ್ವ-ದೇವತ್ವಗಳು ತೀರ ವಿರುದ್ಧ ಧರ್ಮಗಳೆಂಬ ಅವರ ಪ್ರತಿ ಪಾದನೆಗೆ ಅವರ ಧ್ಯೇಯವಾದ ಶತ್ರುತ್ವದ ಭಾವೋದ್ರೇಕ ಮಾತ್ರ ಆಧಾರ. ತರ್ಕಾತೀತ ಯೋಗಪ್ರತ್ಯಕ್ಷವನ್ನು ತಾರ್ಕಿಕ ಸಾಮಂಜಸ್ಯಕ್ಕೆ ಒಳಪಡಿ ಸುವ ಅವರ ಭಾವನಾಪರವಶತೆ ಹಾಸ್ಯಾಸ್ಪದ.

ಉತ್ತಾನ ಉತ್ಸರ್ಗ

ವಿಜ್ಞಾನ ಸತ್ಯದ ವಸ್ತುನಿಷ್ಠತೆ ಅವಿಜ್ಞಾನ ಸತ್ಯಗಳಿಗೂ ಇದೆಯೆಂಬ ವಾದವು ಕೇವಲ ಹಠ. ಭೌತಶಾಸ್ತ್ರದ ಅತ್ಯಾಧುನಿಕ ವಿಚಾರವು ಅನಿಶ್ಚಿತತಾವಾದ (Theory of Indeterminacy) ವನ್ನು ಮಂಡಿಸಿರುವಾಗ ಪರ್ಯಾಪ್ತವಾದ ಜಗತ್ಸತ್ಯವು ವಿಜ್ಞಾನಕ್ಕೆ ನಿಶ್ಚಯಾತ್ಮಕದಾಗಿ ಗೊತ್ತಾಗಿದೆ ಎಂಬ ಗೃಹೀತವನ್ನಿಟ್ಟುಕೊಳ್ಳುವುದು ಶತಅಜ್ಞಾನ. ವೈಜ್ಞಾನಿಕ ಜಗತ್ತೆಂಬುದು ಅನಿಶ್ಚಿತ ಸತ್ಯವನ್ನಾಧರಿಸಿದ್ದು- ಎಂಬುದನ್ನು ರಸೆಲ್ಲಾದಿಗಳು ಸಾರಿದ್ದುಂಟು. ಜ್ಞಾತೃ, ಜ್ಞಾನಸಾಧನ, ಜ್ಞಾನಕ್ರಿಯೆ ಮತ್ತು ಜ್ಞೇಯವಸ್ತುಗಳೆಲ್ಲವೂ ಪ್ರತಿಕ್ಷಣ ಬದಲಾಯಿಸುತ್ತಿರುವುವೆಂಬ ಭೌತ ವಿಜ್ಞಾನವು ಎದುರಿರುವಾಗ, ಜೋಡರ ವೈಶೇಷಿಕತೆಯು ಯಾವುದನ್ನು ಹೇಗೆ ಸತ್ಯವೆಂದು ನಿರ್ದೇಶಿಸಲು ಸಾಧ್ಯ? ಹೀಗೆ ಸಾಧ್ಯವಿಲ್ಲದ ಸಂದರ್ಭದಲ್ಲಿ Agnosticism ಅಜ್ಞೇಯತಾವಾದವನ್ನು ಹೇಗೆ ಟೀಕಿಸಲು ಸಾಧ್ಯ? ಇಂದ್ರಿಯ ಸತ್ಯ, ವಿಚಾರ ಸತ್ಯ, ವಿಜ್ಞಾನ ಸತ್ಯಗಳೆಂದು ಮೂರು ಸತ್ಯಗಳನ್ನು ಹೇಳುವ ಬಾಯಿ Degrees of Reality ಸತ್ಯತೆಯ ಅಂಶಪ್ರಮಾಣದ ಸಿದ್ಧಾಂತವನ್ನು ಎಂತು ಖಂಡಿಸಬಲ್ಲದು? ವೈಷಮ್ಯ-ಸಾಮ್ಯಗಳೆಂಬ ಸಂಬಂಧಗಳು ನಿತ್ಯಸಾಪೇಕ್ಷಗಳಾಗಿರುವಾಗ ಜ್ಞಾತೃ-ಜ್ಞೇಯಗಳು ಸಂಪೂರ್ಣವಾಗಿ ಪರಸ್ಪರ ವಿಲಕ್ಷಣ ಎಂದು ಹೇಳುವುದು ಎಂಥ ವಿಜ್ಞಾನಸಮ್ಮತ ತರ್ಕ? ಕುರುಡನು ಬೆಳಕನ್ನು ವರ್ಣಿಸಿದ ಹಾಗೆ "ಜೋಡ ಮಾನವನು" ಮಾನವೇತರ ಪದಾರ್ಥಗಳನ್ನು ವರ್ಣಿಸಿದರೆ ಅವುಗಳ ಸತ್ಯಜ್ಞಾನ ಅವನಿಗಿದೆ ಎಂದು ಹೇಳಲು ಶಕ್ಯವೆ? ತಿಳಿದುಕೊಳ್ಳುವ ಕ್ರಿಯೆಯು ತಿಳಿವಳಿಕೆಯಿಂದ ಸಂಪೂರ್ಣ ವಿಲಕ್ಷಣವಾಗಿರುತ್ತದೆ ಎಂಬ ಪೂರ್ವಗ್ರಹಕ್ಕೆ ಅನುಭವದ ಆಧಾರವಿಲ್ಲ; ಇದೆ ಎಂದು ಬಿಟ್ಟರೆ, ಎಂದು ಬರೆದುಬಿಟ್ಟರೆ, ಎಲ್ಲ ಮಹಾಧರ್ಮವಾದಿಗಳ ಸಮರ್ಥನೆ ಇದೆ ಎಂದು ಸಾರಿದರೆ ಸಮರ್ಥನೆ ಇರುವುದು ಸತ್ಯವಾದೀತೇ? ಮನಸ್ಸಿಗೆ ಕಲ್ಪಿಸುವ, ನಿರ್ಮಿಸುವ, ಆರೋಪಿಸುವ ಶಕ್ತಿಯೇ ಇಲ್ಲ ಎಂಬುದು ಯಾವ ಅನುಭವ? ಯಾವ ಮನಃಶಾಸ್ತ್ರ?

ಡಾರ್ವಿನೀಯ ವಿಕಾಸವಾದವು ಸರ್ವಜೀವನ ಕ್ಷೇತ್ರವ್ಯಾಪಕವಾದ ತ್ರಿಕಾಲಾಬಾಧಿತ ಸತ್ಯವೆಂದು ನಂಬುವವರಿಗೆ ವಿಜ್ಞಾನದ ಪ್ರಯೋಗ ಪರೀಕ್ಷೆಯ ಅಚ್ಚುಕಟ್ಟುತನದ ನಿಯಮ ಗೊತ್ತಿದೆಯೇ? ತರ್ಕದ Proof by analogy ದೃಷ್ಟಾಂತನಿಷ್ಠ-ಪ್ರಮಾಣದ ಪ್ರಾಮಾಣ್ಯ ಎಷ್ಟು ದುರ್ಬಲ ಎಂಬುದು ತಿಳಿದಿದೆಯೆ? ಜಗತ್ತು ಸೊನ್ನೆಯಿಂದ ಇಂದಿನ ಮಟ್ಟದವರೆಗೆ ಉತ್ತಮ-ಉತ್ತಮತರವಾಗುತ್ತ ಬಂದಿದೆ ಎಂಬ ನಂಬಿಗೆಯು ಪೌರಾಣಿಕತೆಗೆ ವಿಜ್ಞಾನದ ಪಟ್ಟವನ್ನು ಕಟ್ಟುವ ಮೇಧಾವಿತ್ವಕ್ಕೆ ಯಾವ ದರ?

ಅಪನಿವೇಚನೆ

ಯೋಗ ಪ್ರತ್ಯಕ್ಷದ ಅನುಭವವು ಸತ್ಯ, ಅದರ ವರ್ಣನೆ ಸುಳ್ಳು, ಅದು ಅನಿರ್ವಚನೀಯ-ಎಂದು ಹೇಳಿ, ಅದನ್ನು ದೈವಭಕ್ತಿಗೆ ಸಹಜವಾದ ಭಯ, ಗೌರವ, ಆದರಗಳಿಗೆ ಸಮಾನವೆಂದು ಹೇಳುವ ಜೋಡತನಕ್ಕೆ ಯಾವುದು ಜೋಡಿ? ಅಸಂಪ್ರಜ್ಞಾತ ಸಮಾಧಿ ಮಾನವನಿಗೆ ಅಗಮ್ಯವೆಂಬ ಅಯೋಗಿಗೆ ಎದೆಗಳು ಎಂಟೇ? ನೀತಿಯನ್ನು ಹೊರಗಿಟ್ಟು ಭಾವನೆಯನ್ನು ಬೆಲೆ (Value) ಎಂಬ ಬುದ್ಧಿವಂತಿಕೆಯು ಬೆಲೆಯನ್ನು ಕಟ್ಟಲು ಯಾವ ಮನಃಶಾಸ್ತ್ರಕ್ಕೆ ಸಾಧ್ಯ? ನೈತಿಕ ನಿಯಾಮಕತೆಗೆ ಯಾವಾಗಲೂ ಒಳವಲ್ಲದ ಲೌಕಿಕ ಬೆಲೆ ಇದೆ ಎಂಬ ಹಠಕ್ಕೆ ವಿಚಾರವೆಂದು ಹೆಸರಿಸಲು ಪ್ರಾಮಾಣಿಕ ಸೂಕ್ಷ್ಮಜ್ಞನಿಗೆ ಸಾಧ್ಯವೇ? ಅಜ್ಞಾತ ಪ್ರಜ್ಞೆಯ ಅಸ್ತಿತ್ವವನ್ನು ಒಪ್ಪಿದ ಯಾವನು ಅದಕ್ಕೆ ಜ್ಞಾತಪ್ರಜ್ಞೆಯ ಪರಿಮಿತ ಸಂಖ್ಯೆಯ ಲಕ್ಷಣಗಳನ್ನು ಅನ್ವಯಿಸಿ ಮಹಾತಾರ್ಕಿಕನೆನ್ನಿಸಿಯಾನು? ನೀತಿಯು ಭಾವನೆಯೋ ಬುದ್ಧಿಯೋ ಇಚ್ಛೆಯೋ? ಯಾವುದರ ಕಕ್ಷೆಗೆ ಸೇರುವಂಥದು? ಸತ್ಯ-ಸೌಂದರ್ಯಗಳು ಯಾವುದರ ಕ್ಷೇತ್ರದಲ್ಲಿ ಬರುತ್ತವೆ? ಬೆಲೆಯು ನಿಷ್ಠೆಯು ನಿತ್ಯಪದಾರ್ಥವೆಂಬ ನಿಷ್ಪ್ರಯೋಜನವಾದಿಗೆ ಬೆಲೆಯಿಂದ ತೃಪ್ತಿ ಎಂಬ ಸಕ್ರಿಯ ಮಾನಸಿಕ ಫಲ ದೊರಕಲು ಸಾಧ್ಯವೇ? ನಯತಿ ಇತಿ ನೀತಿಃ, ನೀತಾ ಇತಿ ನೀತಿಃ,

ನೀಯಂತೆ ಇತಿ ನೀತಿಃ- ಮನಸ್ಸಿಗೆ ಕಂಡದ್ದೇ ನೀತಿ ಎಂಬವರಿಗೆ ೨-೩ನೆಯ ನೀತಿ ಲಕ್ಷಣಗಳು ಗ್ರಾಹ್ಯ! ಜಗತ್ತಿನಲ್ಲಿ ಜೀವತ್ ಪದಾರ್ಥವೆನ್ನಿಸಿ ಒಬ್ಬನೇ ಒಬ್ಬ ಮಾನವವ್ಯಕ್ತಿ ಇರುವುದಾದರೆ, ಅವನ ನ್ಯಾಯಕ್ಕೆ, ನೀತಿಗೆ, ಧರ್ಮಕ್ಕೆ ಯಾವ ನಿಶ್ಚಿತ ಸ್ವರೂಪದ ಗ್ರಾಹ್ಯ ಅರ್ಥವಿರಬಲ್ಲದು? ಅವನ ಪ್ರಯೋಗ ವಿಜ್ಞಾನಕ್ಕೆ ಎಷ್ಟು ಬೆಲೆ? ಯಾರು ವಸ್ತುನಿಷ್ಠವಾಗಿ ಅದನ್ನು ಕಟ್ಟಬಲ್ಲರು? ವ್ಯಕ್ತಿವಾದದ ತಾರ್ಕಿಕ ಪರಮಾವಧಿಯು ಅರೋಗ ಮನಸ್ಕತೆಗೆ ಸಹಜವೆನ್ನಿಸೀತೇ? ತನ್ನ ಹೊಸತನದಿಂದ ಪ್ರಭಾವ ಬೀರಬಲ್ಲ ವೈಜ್ಞಾನಿಕವಾದ ಮಾಪಕ ಯಂತ್ರಸಾಮಗ್ರಿಗಳಿಗೆ ಮಾರುಹೋದ ಮನವು ವೈಜ್ಞಾನಿಕವಾಗಿ ಉಳಿದೀತೇ? ಕ್ರಮೇಣ ಅದು ಯಂತ್ರದಲ್ಲಿ ಯಂತ್ರವಾಗಿ ಹೋಗದೆ? ಯಂತ್ರದ ನಿರ್ದಯತೆ ನಿಷ್ಪಕ್ಷಪಾತವೇ? ಅಂಥ ಗೊತ್ತುಗುರಿ ಇಲ್ಲದ ಸತ್ಯಾನ್ವೇಷಣಚ್ಛಲಕ್ಕೆ ಜಗತ್ ಸತ್ಯವು ವಿಶ್ಲೇಷಣದಿಂದ ಮತ್ತು ತಜ್ಜನ್ಯ ಅನುಮಾನದಿಂದ ಅಥವಾ ಗಣಿತದಿಂದ ಇಡಿಯಾಗಿ ದೊರಕೀತೇ? ಹಾಗೆ ದೊರಕಿದ್ದಕ್ಕೆ ಸತ್ಯತೆ ಯಾವ ಅರ್ಥದಲ್ಲಿ ಇಡಿ ಎನ್ನಿಸಿ ಇದ್ದೀತು?

ಜ್ಞಾನಕ್ಕೂ ಅದರ ವಿಷಯಕ್ಕೂ ಇರುವ ಸಂಬಂಧವು ಒಂದು ಸೇತುವಿನಂತೆ ನಿತ್ಯವೂ ಸರ್ವಕ್ಷೇತ್ರದಲ್ಲೂ ಮಾಧ್ಯಮಿಕವಾಗಿರುವುದು ಜ್ಞಾನದ "ಪ್ರತ್ಯಕ್ಷ, ಸಾಕ್ಷಾತ್ಕಾರ" ಎನ್ನಿಸುವುದು ಹೇಗೆ? ರಸಾಸ್ವಾದದ "ತಲ್ಲೀನತೆ"ಯನ್ನು ಅಲ್ಲಗಳೆಯುವ ಅನುಭವವು ಅನುಭವವೇ? ಅದು ಕೇವಲ ಅಪೋಹಾಭವವಲ್ಲವೆ? ಶಬ್ದಭವತ್ವವಲ್ಲದೆ ಅರ್ಥಭವತ್ವ ಅದಕ್ಕಿದೆಯೋ? ಸ್ವಲಕ್ಷಣವನ್ನು ಅಪಾರ್ಥಮಾಡುವ ಮನಸ್ಸು ಮನಸ್ಸೇ? ಮನಸ್ಸು-ಆತ್ಮಗಳು ಒಂದೇ ಎಂದು ಗ್ರಹಿಸುವ ಮತ್ತು ಆತ್ಮದ ಎಲ್ಲ ಗುಣಗಳನ್ನರಿಯದ ಜನರ ತರ್ಕವು ಎಂಥ ತತ್ತ್ವಸಿದ್ಧಾಂತವನ್ನು ನಿಗಮನಿಸೀತು? ಅನುಭಾವ (ಯೋಗಸಮಾಧಿ) ಅತರ್ಕ್ಯ, ಅನಿರ್ವಚನೀಯವೆಂದ ತಲೆ, ಧ್ಯೇಯವಾದದ ಅದ್ವೈತವು ತಲೆಗಿಲ್ಲದಾದ್ದರಿಂದ, ಹೃದಯ ಮಾತ್ರಗಮ್ಯವಾದುದರಿಂದ ತ್ಯಾಜ್ಯವೆಂಬುದು ಎಂಥ ತರ್ಕ? ಹೃದ್ಗಮ್ಯ-ಬುದ್ಧಿಗಮ್ಯವೆನ್ನಿಸಿದ ಅನುಭವವಿಲ್ಲದವನು ಅನ್ಯರಿಗೆ ಅಂಥ ಅನುಭವ-

ಹಾಗಿವೆಯೆಂದೂ ಆದರೆ ಅದು ಅವರು ಹೇಳುವಂತೆ ಇಲ್ಲವೆಂದೂ ಹೇಳುವಾಗ ಅವರಿಗೆ ಅದರ ಪೂರ್ಣಸ್ವರೂಪ ಮರೆತು ಹೋಗಿರುತ್ತದೆ ಎಂದೂ ವಾದಿಸುವ ಜೋಡಮಾವವೂ ಒಂದು ವಾದವೇ? ಇಂದ್ರಿಯಾನುಭವ ಆತ್ಮಾನುಭವಗಳು ಮಾನಸವೆಂದೂ ಅವುಗಳ ಕ್ರಮ ಒಂದೇ ಬಗೆಯದೆಂದೂ ಆ ಕ್ರಮವು ಜ್ಞಾತೃ-ಜ್ಞೇಯಗಳ ಪ್ರತ್ಯೇಕತೆಯನ್ನು ಯಾವಾಗಲೂ ಉಳ್ಳದ್ದೆಂದೂ ಹೇಳುವ ಹಠವು ಉಪೇಕ್ಷೆಗಲ್ಲದೆ ಇನ್ನಾವುದಕ್ಕೆ ಪಾತ್ರ? ವಿಜ್ಞಾನಿಯು ಅದ್ವೈತವು ಅವನ ಮನಸ್ಸಿನ ಮುಂಡಿಗೆ ಎಂಬವನು ಹಾಗೆಂಬುದು ತನ್ನ ಮನಸ್ಸಿನ ಮುಂಡಿಗೆ ಎಂಬುದನ್ನು ಅರಿಯದವನಾದಾಗ ಅವನನ್ನು ಏನೆಂದು ಕರೆಯಬೇಕು? ಯೋಗಿಗಳೆಲ್ಲರೂ ಕ್ಷಣ ಸಮಾಧಿವಂತರೆಂದು ಸಾರುವ ಯೋಗಜ್ಞತೆಯ ಕಿಮ್ಮತ್ತನ್ನು ಕಟ್ಟಲು ಅದನ್ನು ಭ್ರಮೆಯೆಂದು ಆರೋಪಿಸುವ ರಸೆಲ್ಲೀಯರೇ ಬೇಕು. ಅಜ್ಞಜನ ಹೇಳುವವರೆಲ್ಲರೂ ಯೋಗಿಗಳೆಂದು ನಂಬುವ ತತ್ವಜ್ಞಾನದ ದರ ಎಷ್ಟು? ದೇವ-ಮಾನವರಲ್ಲಿ ವಿರುದ್ಧ ಸ್ವಭಾವವಿರುವುದು ಮಾತ್ರ ಭಕ್ತಿಕಾರಕ ಎಂಬುದು ಅನುಭವದ ಒರೆಗಲ್ಲಿಗೆ ಹತ್ತುವುದೇ?

ಮಾನವ ಧರ್ಮದ ಅಭ್ಯಾಸ

Anthropomorphic ಎಂಬುದಕ್ಕೆ ಮಾನವನ(self) ಸ್ವತ್ವದ ಎಲ್ಲ ಅಂಶಗಳ ಅರ್ಥವನ್ನೂ ಒಳಪಡಿಸಿಕೊಂಡು ನೋಡಿದರೆ ತಮ್ಮ ಸ್ವತ್ವದಲ್ಲಿಲ್ಲದ ವಸ್ತುನಿಷ್ಠ ಸತ್ಯವನ್ನು ತಮ್ಮಿಂದ ಹೊರಗೆ ಎಲ್ಲಿ ಮತ್ತು ಹೇಗೆ ಕಾಣಲು ಅಥವಾ ಊಹಿಸಲು ಶಕ್ತರಾದರು? ಹಾಗೆ ಕಾಣುವ ಪ್ರಮೇಯವೂ ಅವರ ಯಾವ temper ಛಾನಸಾವೃತ್ತಿ? ಅಂಥ ವೃತ್ತಿ ಯಾವ ತಾರ್ಕಿಕತೆಗೆ ಹೊಂದುವಂಥದು? ತನ್ನಲ್ಲಿ ಇಲ್ಲದ್ದನ್ನು ಅರಿಯುವುದೇ ಮನಸ್ಸು ಹಾಗೂ ಇಂದ್ರಿಯಗಳ ಶಕ್ತಿ ಎಂಬ ಅವರ ವಾದವು ಅನುಭವಕ್ಕೆ ತೀರ ವಿರುದ್ಧವಾದುದು, ವಿಜ್ಞಾನದಿಂದ ಪರಾಸ್ತವಾದುದು. ಬೆಳಕಿನ ಅಂಶ ಗ್ರಾಹ್ಯವಾಗಿ ಇಲ್ಲದ ಕಣ್ಣು ಬೆಳಕನ್ನು ಕಾಣಬಲ್ಲುದೇ? ಸದ್ದಿನ ಅಂಶ ಶ್ರವಣೇಂದ್ರಿಯದಲ್ಲಿಲ್ಲದೆ ಅದು ಸದ್ದನ್ನು

ಹೇಗೆ ಗುರುತಿಸಬಲ್ಲೆವು? ಭೌತಿಕ ಪದಾರ್ಥಗಳಿಗೆಲ್ಲ Indentity Mark ಗುರುತಿನ ಚುಕ್ಕೆ ಇರುವುದೇನು? ಆ ಚುಕ್ಕೆಗಳ Reckoner ಕೋಷ್ಟಕ ಮನಸ್ಸಿನಲ್ಲಿ ಅಥವಾ ಇಂದ್ರಿಯಗಳಲ್ಲಿ ಯಾರು ಬಚ್ಚಿಟ್ಟಿದ್ದಾರೆ? ಆಯಾ ಗುಣವನ್ನು ಆಯಾ ಇಂದ್ರಿಯವೇ ಗ್ರಹಿಸಲು ಅದದರ ವಿಪರೀತ ಧರ್ಮಜ್ಞತೆಯೇ ಕಾರಣವಾಗಿದ್ದರೆ (ವಿಪರೀತತೆಯು ಭಿನ್ನತೆಯ ಒಂದು ಅಂಗವಾಗಿರುವುದರಿಂದ) ಎಲ್ಲ ಇಂದ್ರಿಯಪ್ರತ್ಯಕ್ಷಗಳೂ ಇಂದ್ರಿಯಗಳ ವೈರಿಗಳಾಗುವುದರಿಂದ (ವೈರ-ವಿರೋಧ ಮತ್ತು ಭೇದಗಳನ್ನು ನಿಶ್ಚಿತ-ಗೊಳಿಸಲು ಸಾಧ್ಯವಾಗದುದರಿಂದ) ಯಾವುದಾದರೂ ಇಂದ್ರಿಯವು ಯಾವುದಾದರೂ ಗುಣವನ್ನು ಗ್ರಹಿಸುವ ಸಂದರ್ಭ ಉಂಟಾಗುತ್ತದೆ. ತತ್ಸಾಮ್ಯ ಹೋಗಿ ತದ್ವಿರೋಧ (ತದ್ಭೇದ) ಬರುವುದು ಪ್ರತ್ಯಕ್ಷಾನುಭವದ ಪ್ರಕ್ರಿಯೆಗೆ ಅಸಂಬದ್ಧ. ಪ್ರತ್ಯಕ್ಷದಲ್ಲಿ ಇಂದ್ರಿಯ-ಮನಗಳ ಸಹಕೃತ ಕ್ರಿಯೆ ಇದೆ. ಶುದ್ಧ ಸಂವೇದನೆ ಎಂಬುದು ಅಜ್ಞೇಯ; ಹಾಗೇ ಶುದ್ಧ ಭಾವನೆ-ಶುದ್ಧ ಇಚ್ಛೆಗಳೂ ಅಜ್ಞೇಯ—ಎಲ್ಲ ಜ್ಞಾನವೂ cognitive ಬೌದ್ಧಿಕ ಕ್ರಿಯಾಜನ್ಯವಾಗಿರುವುದರಿಂದ. "ಬುದ್ಧಿನಾಶಾತ್ ಪ್ರಣಶ್ಯತಿ." ಜ್ಞಾತೃ-ಜ್ಞೇಯಗಳ ಆತ್ಯಂತಿಕ ಪ್ರತ್ಯೇಕತೆ ನಿತ್ಯವಾಗಿರುವುದು ಎಂದೂ ಜ್ಞಾನದ ಪೂರ್ಣತೆಯನ್ನು ಸಾಧಿಸಿಕೊಡದೆಂಬುದನ್ನು ತರ್ಕದ (ಊಹೆಯ) ಸ್ವಭಾವಗತ ತರ್ಕ ನಿಯಮವನ್ನು ಬಲ್ಲವರಿಗೆ ಬಿಡಿಸಿ ಹೇಳಬೇಕಾಗಿಲ್ಲ. ಅಪೂರ್ಣ ಜ್ಞಾನವು ಅಪೂರ್ಣ ಸತ್ಯ ಅಥವಾ ಸುಳ್ಳು ಇಲ್ಲವೆ ಸತ್ಯಾಂಶ. ಪೂರ್ಣ ಅಸತ್ಯವು ಮಾನವನ ಕಲ್ಪನೆಗೆ (ಊಹೆಗೆ, ತರ್ಕಕ್ಕೆ) ಮೀರಿದ್ದು. ಪೂರ್ಣ ಅಸತ್ಯದ ಅಸ್ತಿತ್ವದ ಪೂರ್ಣತೆ ಅಥವಾ ಪೂರ್ಣಸತ್ಯತ್ವ ಕೇವಲ ಮುಗಿಲ ಹೂವಿನಂಥ ಕಲ್ಪನಾಭಾಸ. ಆದುದರಿಂದ ಪ್ರತಿಯೊಂದು ಸುಳ್ಳೂ (ಅಭಾವವೂ) ಆಂಶಿಕ ಮತ್ತು ಸಾಪೇಕ್ಷ. ಪ್ರತಿಯೊಂದು ನಾನಾತ್ವ ಪರಿಮಿತ ಪದಾರ್ಥವೂ ತರ್ಕಶುದ್ಧವಾಗಿ ಅಪೂರ್ಣ. ಸಾಪೇಕ್ಷ ಪೂರ್ಣತೆಯು ನಿರಪೇಕ್ಷ ಪೂರ್ಣತೆಯಲ್ಲ. (ಕರ್ತೃ-ಕರ್ಮ) ಜ್ಞಾತೃಜ್ಞೇಯಗಳ ತಾದಾತ್ಮ್ಯ ಭಾವ ಕ್ಷಣಿಕವಾಗಿಯಾದರೂ ಆಗಲೇ ಬೇಕೆಂಬುದು ವ್ಯಾವಹಾರಿಕ ಅನುಭವದ ನಿಯಮ. ಪಾರಮಾರ್ಥಿಕ ಅನುಭವವು ಎಲ್ಲರಿಗೂ ಎಲ್ಲ ಅವಧಿ

ಗಳಲ್ಲೂ ಕ್ಷಣಿಕವೆಂದು ಹಟವಾಡುವುದು ಸಿದ್ಧಾಂತವೆನ್ನಿಸದು. ಬೋಧರಂಥ ಅಯೋಗಿಯು ಅದನ್ನು ಬುದ್ಧ್ಯತೀತ, ಶಬ್ದಾತೀತ, ದಿಕ್ಕಾಲಾತೀತ ಎಂದು ಒಪ್ಪಿದ ಮೇಲೆ, ಯೋಗಿಗಳು ಹೇಳಿದ ಅನುಭವ ಅವರಗಾಗಿಲ್ಲ ಮತ್ತು ಅವರು ಐಕ್ಯಾನುಭವವೆಂಬುದು ಭ್ರಮಾನುಭವ-ಎಂಬುದು ಸರ್ವಥಾ ನಿರಾಧಾರವಾದ ಪೂರ್ವಗ್ರಹ. ವಿಜ್ಞಾನಿಯು ಜಗಜ್ಜನಕವನ್ನು ಅರಿಯುವುದು ಅಪೂರ್ಣಜ್ಞಾನ; ಆ ಜ್ಞಾನಕ್ರಿಯೆಯಲ್ಲಿ ಅವನು (ಆ ಕ್ರಿಯೆಯ ಅವಧಿಯಲ್ಲಿ) ತಲ್ಲೀನವಾದದ್ದು ಅಪೂರ್ಣಾಂಶವು. ಮಾನವನ ಅರಿವಿನ ಪ್ರತಿಯೊಂದು ಸಾಧನದ ಶಕ್ತಿಯೂ ಅಪೂರ್ಣ; ಅಪೂರ್ಣವು ಪೂರ್ಣವನ್ನು ಪೂರ್ಣವಾಗಿ ಗ್ರಹಿಸಲಾರದೆಂಬುದನ್ನು ಒಪ್ಪಿಕೊಂಡವರು ಮಾನವನ Self-transcendence ಸ್ವಾತೀತತೆಯನ್ನು ಆಧರಿಸದೆ ಪೂರ್ಣ ಸತ್ಯದ ಸಾಕ್ಷಾತ್ಕಾರದ ಮಾತನ್ನು ಎತ್ತಲು ಅಧಿಕಾರ ಉಳ್ಳವರಾಗಲಾರರು. ವ್ಯಕ್ತಿಯು ಪೂರ್ಣತ್ವವು ಸಾಪೇಕ್ಷ; ಅದು ಪರಮ ಪೂರ್ಣತೆಯೆನ್ನಿಸದು. ಸಾಪೇಕ್ಷ ಅಪೂರ್ಣತೆ– ಸಾಪೇಕ್ಷ ಪೂರ್ಣತೆಗಳು ಸಾಪೇಕ್ಷ ಸತ್ಯ-ಸಾಪೇಕ್ಷ ಸುಳ್ಳುಗಳಂತೆಯೇ ಅಂಶಾಧಿಕ್ಯ-ಅಂಶನ್ಯೂನತೆಗಳಿಂದಷ್ಟೇ ವ್ಯಾವಹಾರಿಕವಾಗಿ ವಿಭಜನೀಯ. ಸಾಮಾನ್ಯಾನುಭವವು ಸಾಮಾನ್ಯವಾಗಿ ಸಾಧ್ಯವಾಗಲು ಸಾಮ್ಯ ಧರ್ಮವೊಂದೇ ಮಾನವ ವ್ಯವಹಾರದಲ್ಲಿ ಆಧಾರ. ವಿರೋಧಕ್ಕೆ ಈ ದೃಷ್ಟಿಯಿಂದ ಸಾಮ್ಯದಷ್ಟು ವ್ಯಾಪಕತ್ವವಿಲ್ಲ. ವಿರುದ್ಧಾನುಭವ ಪ್ರಕಾರಗಳೂ ಮತ್ತು ಜನರಿಗೆ ಏಕಪ್ರಕಾರವಾಗಿ ಆಗುವುದರ ಹಿಂದೆ ಸಾಮ್ಯ ಸೂತ್ರದ ಪಂಚಾಂಗವಿದೆ. ಜಡ-ಜೀವ, ಹಿಂಸೆ-ಅಹಿಂಸೆ, ಒಳಿತು-ಕೆಡಕು, ಉಪಯುಕ್ತ-ನಿರುಪಯುಕ್ತ, ವಿಧಿ-ನಿಷೇಧ (ಅನುಷೇಧ-ನಿಷೇಧ), ಸತ್ಯ-ಅಸತ್ಯ, ಸುಖ-ದುಃಖ, ಲಾಭ-ಅಲಾಭ, ವೃದ್ಧಿ-ಕ್ಷಯಗಳಲ್ಲಿ ಯಾವಾಗಲೂ ಒಪ್ಪಿನಲ್ಲಿ ಈ ದೃಷ್ಟಿಯು ಜೀವನ ಪರಂಪರಾಸಾತತ್ಯದ ದೃಷ್ಟಿಯಿಂದ ಜೀವನಾನುಕೂಲ ಧರ್ಮಗಳನ್ನು ಜೀವನ ಪ್ರತಿಕೂಲ ಧರ್ಮಗಳಿಗಿಂತ ಸ್ಪಷ್ಟವಾದರೂ ಹೆಚ್ಚಂಶ ಉಳ್ಳದ್ದಾಗಿದೆ-ಎಂಬುದು ವ್ಯಾವಹಾರಿಕ.

ಕೆಲ ಕಲ್ಪನೆಗಳ ಸ್ಪಷ್ಟೀಕರಣ

ವ್ಯಾವಹಾರಿಕವೆಲ್ಲವೂ ಸಾಪೇಕ್ಷವಾದುದರಿಂದ ಅದರ ನಿಯಮಗಳನ್ನಾಧರಿಸಿ ನಿರಪೇಕ್ಷ ಪರಮಸತ್ಯವನ್ನು ಅಳೆಯಹೋಗುವುದು ಅವೈಜ್ಞಾನಿಕ ತರ್ಕ, ಅಸಂಬದ್ಧ ಊಹೆ. Existential condition of experience- sensuous, mental or spiritual ಅನುಭವದ ಅಸ್ತಿತ್ವದ ಅವಧಿಯಲ್ಲಿ ಆ ಅನುಭವ ಐಂದ್ರಿಯ, ಮಾನಸ ಅಥವಾ ಆತ್ಮಿಕವಾಗಿರಬಹುದು- ಅದೆಂದೂ ಜ್ಞಾತೃತ್ವದ ಪ್ರಜ್ಞೆಯನ್ನು ಉಳ್ಳದ್ದಾಗಿರದು; ಆ ಪ್ರಜ್ಞೆಯಿರುವುದು ಆ ಅನುಭವದ ಸಾಪೇಕ್ಷ ಅಪೂರ್ಣತೆಗೆ ಸಾಕ್ಷಿ. ಉಕ್ತಪ್ರಜ್ಞೆಯ ಉದಯವು ಅನುಭವೋತ್ತರ ಕಾಲೀನ. ನಿತ್ಯಸಮಾಧಿಯಲ್ಲಿ ಪೂರ್ವೋತ್ತರ ಕಾಲಾವಧಿಗಳ ಪ್ರಶ್ನೆಯೇ ಇಲ್ಲ. ಜ್ಞಾತೃ, ಜ್ಞೇಯ, ಜ್ಞಾನಗಳ ಪ್ರತ್ಯೇಕತೆಯನ್ನು ಆತ್ಯಂತಿಕವೆಂದರೆ ಅವು ಮೂರೂ ಅಪರ್ಯಾಪ್ತ (ಅಪೂರ್ಣ) ಊಹಾವ್ಯಾಪ್ತಿಯನ್ನು ಉಳ್ಳವುಗಳಾಗಿ ಪರಮ ಸತ್ಯತ್ವದ ಅರ್ಥದಿಂದ ದೂರವಾಗಿ ಹೋಗುವುವು.

ಪ್ರಾಧಾನ್ಯವೆಂಬುದಕ್ಕೂ ಅರ್ಥಪೂರ್ಣವೆಂಬುದಕ್ಕೂ ವ್ಯತ್ಯಾಸವಿಲ್ಲ; ಅದು ವ್ಯಕ್ತಿನಿಷ್ಠ ಮೌಲ್ಯ, ಇದು ವಸ್ತುನಿಷ್ಠ- ಎಂದು ಹಿಂಗಡಿಸುವ ಜೋಡತನವು ವ್ಯಕ್ತಿನಿಷ್ಠ ಪೂರ್ವಗ್ರಹ. ಯಾವುದು ಯಾರಿಗೆ ಯಾವಾಗ ಅರ್ಥಪೂರ್ಣ? ಎಂಬ ಪ್ರಶ್ನೆಯನ್ನೆತ್ತಿದಾಗ ೨ನೆಯದರ ವಸ್ತುನಿಷ್ಠತೆಯ ಟೊಳ್ಳುತನ ಹೊರಗೆ ಬೀಳುತ್ತದೆ. ವ್ಯವಹಾರದಲ್ಲಿ ವ್ಯಕ್ತಿನಿಷ್ಠತೆ-ವಸ್ತುನಿಷ್ಠತೆಗಳೆರಡೂ ಇತರ ದ್ವಂದ್ವಗಳಂತೆಯೇ ಸಾಪೇಕ್ಷ, ಆಂಶಿಕ ಆಧಿಕ್ಯ-ನ್ಯೂನತೆಗಳಿಂದ ಅರ್ಥಯಿಸಲ್ಪಡುವ ಮೌಲ್ಯಗಳು. ವ್ಯವಹಾರವೇ ಅಪೂರ್ಣವಾಗಿರುವಾಗ ಅದರ ಮೌಲ್ಯಗಳು ಪೂರ್ಣ ಎನ್ನಿಸುವುದೆಂತು? ಜಗತ್ತಿನ ಸರ್ವಲಕ್ಷಣಗಳೂ ಅದರ ಮೌಲ್ಯಕಲ್ಪನೆಯಲ್ಲಿರುತ್ತದೆ. ಯಾವ ಮೌಲ್ಯವೂ ಇಲ್ಲಿ ನಿತ್ಯ, ನಿರಪೇಕ್ಷ, ನಿಷ್ಕ್ರಿಯ, ಅಪರಿವರ್ತನೀಯವೆನ್ನಿಸದು. ಇದಕ್ಕೆ ಆತ್ಯಂತಿಕತೆ ಎಂಬುದೇ ಇಲ್ಲ. ಪರಮಾರ್ಥವೊಂದೇ ಆತ್ಯಂತಿಕ- ಅದು ವ್ಯಾವಹಾರಿಕವಲ್ಲ. ಅವ್ಯಾವಹಾರಿಕವೆನ್ನಿಸಿದ ಪರಮಸತ್ಯದ ಮೌಲ್ಯ

ವನ್ನು ವ್ಯಾವಹಾರಿಕ ಬುದ್ಧಿಯು ಸ್ವಪರಂಪರಾನುಸಾರ ಊಹಿಸಹೋಗುವುದು ಹಾಸ್ಯಾಸ್ಪದ. Pure otherness ಶುದ್ಧ ಅನ್ಯತೆಯನ್ನು ಋಷಿ ಕೂಡ ಮೀರಲಾರ ಎಂಬ ಅನಾರ್ಷ ಜೋಡತ್ವವು ಶುದ್ಧ ಹುಚ್ಚುತನ; ಆದಕ್ಕೆ ಆರ್ಷ (ಅನುಭಾವಿಕ, ಯೌಗಿಕ) ಪ್ರಜ್ಞೆ ಅನೂಹ್ಯ-ದುರೂಹ್ಯವಲ್ಲ! ಹಠಾಕ್ಷೇಪಪರವಾದ ದ್ವಂದ್ವಬುದ್ಧಿಯು ದ್ವಂದ್ವಾತೀತವನ್ನು ಕಲ್ಪಿಸ ಹೋದಾಗ ಅದೆಂತು ಜಯ ಪಡೆದೀತು? ದ್ವಂದ್ವಬದ್ಧತೆಯನ್ನು ಬಿಟ್ಟಾಗಲೇ ದ್ವಂದ್ವಾತೀತದ ಕಲ್ಪನೆ ಹೊಳೆದೀತು. ಧ್ಯೇಯದ ಉಪಾಧಿ (ಉಪಾಧಾನ) ಎಂದಾದರೂ ನಿರುಪಾಧಿಕದ ಕಲ್ಪನೆಯನ್ನು ಅಳವಡಿಸಿಕೊಳ್ಳಬಲ್ಲದೇ? "ಅಹಂ ಬ್ರಹ್ಮಾಸ್ಮಿ" ಎಂಬುದು ಸಮಾಧಿ ಭಂಗ ಹೊಂದಿದಾಗ ಹೇಳುವ ಮಾತು. ಸಮಾಧಿಸ್ಥನಿಗೆ ಉಕ್ತಜ್ಞಾನವಿಲ್ಲ. ಬ್ರಹ್ಮವು (ಮುಕ್ತಸ್ಥಿತಿಯು) ಅಹಂ-ತ್ವಂ ಮುಂತಾದ ದ್ವಂದ್ವಗಳಿಂದ ಮುಕ್ತ. "ತತ್ವಮಸಿ" ಯಂತೆಯೇ ಅದು ವ್ಯಾವಹಾರಿಕ ವರ್ಣನೆ-ಬ್ರಹ್ಮ ಸಮಾಧಿಗೆ ಉತ್ತರ ಕಾಲೀನ. "ನ ಚತ್ವಂ ನ ಚಾಹಂ ನಚಾಯಂ ಪ್ರಪಂಚಃ"- ಎಂಬುದು ಸಾಕ್ಷಾತ್ಕಾರ. ಬ್ರಹ್ಮತ್ವವು ವ್ಯಕ್ತಿತ್ವ-ಅವ್ಯಕ್ತಿತ್ವಗಳ ಕಲ್ಪನೆಗೆ ಮೀರಿದ್ದು. ಅದರ ಈಶ್ವರತ್ವ, ಸರ್ವತ್ವಗಳು ವ್ಯಾವಹಾರಿಕ ಬುದ್ಧಿ ಮಾಡುವ ವರ್ಣನೆಗಳು. ಯೋಗವಾಣಿಯ ಅರ್ಥವನ್ನು ಗ್ರಹಿಸಹೋಗುವ ಅಮುಕ್ತನು ಮೈತುಂಬ ಕಣ್ಣುಗಳನ್ನು ಉಳ್ಳವನಾದರೂ ಸಾಲದು. ಹಾಗಾಗದೆ ಯೋಗಿವಾಕ್ಯ ತಪ್ಪು ಅಥವಾ ಅಯೋಗಿಯೇ ಯೋಗಿ ಎಂದು ಮುಂತಾಗಿ ವಾದಿಸುವುದು ಹಠಾತ್ಕಾರ. ಹಠವು ವಿಜ್ಞಾನವೂ ಅಲ್ಲ ತತ್ವಜ್ಞಾನವೂ ಅಲ್ಲ. ಯೋಗಿಯು ತನ್ನ ಅನುಭವವನ್ನು ಸರಿಯಾಗಿ ಹೇಳಲಾರದವನೆಂಬುದಾದರೆ, ತದ್ವಿರುದ್ಧವಾಗಿ ಯೋಗಿಯ ವಾಕ್ಯವನ್ನು ಸರಿಯಾಗಿ ಅಯೋಗಿ ಅರ್ಥಮಾಡಿಕೊಳ್ಳಲಾರ ಎಂದು ಹೇಳುವುದು ಜಾತ್ಯುತ್ತರ. ಭಾಷೆಯು ವ್ಯಾವಹಾರಿಕವಾದುದರಿಂದ ಅದರ ಧ್ವನಿಶಕ್ತಿ ಕೂಡ ಪರಿಮಿತವಾದುದು; ಅದರ ಅಪೂರ್ಣತೆ ಅದರ ಧ್ವನಿಶಕ್ತಿಯ ಅಪೂರ್ಣತೆಗೆ ಕಾರಣ. ಮೀರಿರುವಾಗ ಅದನ್ನು ಪೂರ್ಣಗೊಳಿಸುವ ಅಯೋಗಿಯ ಹಠಕ್ಕೆಲ್ಲಾದರೂ ಜಯಪ್ರಾಪ್ತಿಯು ಸಂಭವ

ವುಂಟೇ? ಇಂಥ ಸಾಕ್ಷಾತ್ಕಾರಕ್ಕಿಂತ ಅನುಭವಕ್ಕೆ ಬಾರದುದನ್ನು ನಾನು ನಂಬೆನೆಂಬ ನಾಸ್ತಿಕ್ಯವು ಉತ್ತರವು. ಪ್ರತ್ಯಕ್ಷಾನುಮಾನೋಪಮಾನ ಶಬ್ದಗಳು ಅನುಭವ ಸಾಧನಗಳು; ಅನ್ಯ ಸಾಧನ ಮಾನವನಿಗಿಲ್ಲ; ವಿಜ್ಞಾನವು ಆನುಮಾನಿಕ–ತತ್ವಜ್ಞಾನದಂತೆಯೇ (Speculative philosophy). ಆದುದರಿಂದ ಮಾನವನಿಗೆ ಮಾನವ ಸಾಧಾರಣವಾದ ವ್ಯಾವಹಾರಿಕ ಜ್ಞಾನವೇ ಲೋಕಯಾತ್ರಾಸಾಧನ; ಅತ್ಯುಚ್ಚ (ಅಸಂಪ್ರಜ್ಞಾತ) ಸಮಾಧಿಕ ಜ್ಞಾನವೇ ಪರಮಾರ್ಥ, ಪರಮತತ್ವದರ್ಶನ. ಸಾಧನತ್ವವಿರುವವರೆಗೆ ಸಾಧ್ಯತ್ವ; ಸಿದ್ಧಿಯಲ್ಲಿ ಸಾಧನ-ಸಾಧ್ಯಗಳ ಭೇದ ಉಳಿಯದು- ಎಂಬುದು ಪರಮಾರ್ಥದ ಸ್ಥಿತಿ. ವ್ಯವಹಾರಾರ್ಥದಲ್ಲಿ ಹೀಗಿಲ್ಲ; ಧರ್ಮತಾದಾತ್ಮ್ಯ ಅದರಿಂದ ಬಲು ದೂರ. Realisation is not speculation ಅನುಭವವು ಊಹೆಯಲ್ಲ; ಸರ್ವಜ್ಞಾನ ಸಾಧನಗಳ ಸಂತೃಪ್ತಿ, ತನ್ಮಯತೆ, ತಾದಾತ್ಮ್ಯನಿತ್ಯತೆ.

ಅಲ್ಪ ಜಲ್ಪ

ಪೂರ್ವೋಕ್ತ ಗ್ರಂಥದಲ್ಲಿ ಜೋಡರು ೨೫೬ನೆಯ ಪುಟದಲ್ಲಿ, "The contemptuous dismissal of the mystic's vision as subjective feeling, the babling of men beside themselves with solitude and fasting, exciting as intoxication is exciting, but conveying no information with regard to the object that excites, seems to me to be born of the prejudices of common sense— ಯೋಗಿಯ ದರ್ಶನವೊಂದು ಸ್ವಕಪೋಲಕಲ್ಪಿತವಾದ ವ್ಯಕ್ತಿನಿಷ್ಠ ಊಹೆ, ಏಕಾಂತದಲ್ಲಿ ಉಪವಾಸವಿದ್ದು ತಮ್ಮಿಂದ ಹೊರತಾಗು-ವಂತೆ ಆಡಿದ ಹುಡುಗಾಟಿಕೆಯ ಮಾತು, ಹೆಂಡದಂತೆ ಭಾವೋದ್ರೇಕಗೊಳಿಸುವಂಥದು, ಆದರೆ ಆ ಉದ್ರೇಕಕ ವಸ್ತುವಿನ ಬಗ್ಗೆ ಏನನ್ನೂ ತಿಳಿಸಲಾರದುದು—ಎಂದು ನಿಂದಿಸಿ ತ್ಯಜಿಸುವುದು ಮಾನವರ ಸಾಮಾನ್ಯ ವಿವೇಕಕ್ಕೆ ಹಿಡಿದ ಪೂರ್ವಗ್ರಹ ಎಂದು ಹೇಳಿ, ಆ ಹಿಂದೆ ೨೫೫ನೆಯ

ಪ್ರಬಂಧದಲ್ಲಿ "As with the frog's world so with the mystic's—ಯೋಗಿಯದು (ಅನುಭಾವಿಯದು) ಕೂಪಮಂಡೂಕ ಪ್ರಪಂಚ" ಎಂದು ಉದ್ಗರಿಸಿರುವುದು ಎಂಥ ತರ್ಕಸಮನ್ವಯ — ಎಂಬುದನ್ನು ಬಿಡಿಸಿ ಹೇಳಬೇಕಾದುದು ಅನವಶ್ಯಕ. ಪೂರ್ವವಾದಕ್ಕೂ ಕಾರಣಗಳಿವೆ, ಪಶ್ಚಿಮವಾದಕ್ಕೂ (ಉತ್ತರವಾದಕ್ಕೂ) ಕಾರಣಗಳಿವೆ. ಯಾವುದಕ್ಕೆ ವಕೀಲನಲ್ಲಿ ಕಾರಣಗಳಿಲ್ಲ? ಯೋಗಿಯ ಅನುಭವವು ಅತೀಂದ್ರಿಯ, ಅವರ್ಣನೀಯ ಎಂದು ಹೇಳಿ ಅನಂತರ ಯೋಗಿವಾಣಿಗಳು ವಿಪರೀತಾರ್ಥದ್ಯೋತಕಗಳು ಎಂದು ವಾದಿಸಲೂ ಬರುತ್ತದೆ-ಉಕ್ತ ವಕೀಲವೃತ್ತಿಗೆ! As long as there are lawers no law is perfect— ವಕೀಲರಿರುವ ವರೆಗೆ ಯಾವ ಕಾಯಿದೆಯೂ ಪರಿಪೂರ್ಣವಾದುದೆನ್ನಿಸದು! ಹಾಗೆ Man's brain can misuse or misinterpret everything— ಎಲ್ಲವನ್ನೂ ಮಾನವನ ಮಿದುಳು ದುರುಪಯೋಗ ಮಾಡಬಲ್ಲದು ಅಥವಾ ಅಪಾರ್ಥಮಾಡಬಲ್ಲದು. ಈ "ಹಾಗೆ ಹೀಗೆ ಎಂಬಲ್ಪ ಬಲ್ಪಕರ ಬಂಧ" ವನ್ನು ವಿಜ್ಞಾನದ ತಾತ್ವಿಕ ಮುಖಗಳು ಅವಲಂಬಿಸುವುದಾದರೆ, ಅಂಥ ಬಂಧತತ್ವಜ್ಞತೆಯನ್ನು ಕುರಿತು—

" ನಾ ಕೊಟ್ಟ ದೇಹಗಳ ಲೆಕ್ಕ
ಇಡುವರಾ ಸೊಕ್ಕ
ಯಮಾ ನೋಡಿ ನಕ್ಕ ! "

ಎಂದು ಹೇಳಬೇಕಾಗುತ್ತದೆ!

Mood of Science—ವಿಜ್ಞಾನಿಯ ಸಂಚಾರಿಭಾವವನ್ನು ಒಪ್ಪಿಕೊಳ್ಳುವುದು ವಿಜ್ಞಾನವಿರುದ್ಧವಾದರೆ ಅದನ್ನೊಪ್ಪಿದವನು ತದಿತರ ಜ್ಞಾನಿಯ ಸಂಚಾರಿಭಾವವನ್ನು ಅಥವಾ Temper ಭಾವನೋನ್ಮುಖತೆಯನ್ನು ಅನಾಧೇಯ ಎನ್ನುವುದು ವಿಜ್ಞಾನ ಬದ್ಧವಾಗದು. ಜಗತ್ತಿಗೆ ಉದ್ದೇಶವಿದೆ ಎಂಬುದು ಮಾನವೀಯ ದೃಷ್ಟಿಯಾದುದರಿಂದ ಅದು ಅವಸ್ತುನಿಷ್ಠವೆಂದರೆ ಉದ್ದೇಶವಿಲ್ಲ ಎಂಬುದು ಹೇಗೆ ಅಮಾನವೀಯವೂ ವಸ್ತುನಿಷ್ಠವೂ ಆದ

ಸಿದ್ಧಾಂತವೆನ್ನಲು ಸಾಧ್ಯ? ಉದ್ದೇಶವಿಲ್ಲವೆಂದು ಪ್ರಚುರಪಡಿಸುವುದಕ್ಕೆ ಅನುಷೇಧ ಪ್ರಮಾಣವಿಲ್ಲದಿರುವಾಗ ಹಾಗೆ ಸಾರುವುದರಲ್ಲಿ ವ್ಯಕ್ತಿನಿಷ್ಠವಾದ ಆಂತರಿಕ ಉದ್ದೇಶವೊಂದು ಇದ್ದೇ ಇರಬೇಕು! ಮಾನವತೆಯು ಸರ್ವತ್ರ ಸರ್ವದಾ ಉದ್ದೇಶ ಪರ್ಯಾಯವೇ? ಹಾಗಾದರೆ ಮಾನವ ದೃಷ್ಟಿ ಅಮಾನವ ದೃಷ್ಟಿಯನ್ನು ಅಳವಡಿಸಿಕೊಂಡು ಏನನ್ನು ಹೇಗೆ ಕಾಣಬಲ್ಲದು? ಪರಿಪೂರ್ಣನಿರುಪಯೋಗಿತ್ವದ ಮೇಲೆಯೇ ವಿಜ್ಞಾನಶೋಧಕನ ಬುದ್ಧಿ ಪ್ರಯತ್ನ ಅವಲಂಬಿಸಿದೆ ಎಂಬುದು ಪೂರ್ಣ ಸತ್ಯವೇ? ಪರಮಾರ್ಥವೇ? ಏಕಮೇವಾದ್ವಿತೀಯ ಸತ್ಯವೇ? ಅದು ಹೇಗಾದೀತು? ಯಾವ ತರ್ಕ-ದಂತೆ? ಅಜ್ಞಾತಪ್ರಜ್ಞಾಸ್ತರದ ಅಸ್ತಿತ್ವವನ್ನು ಒಪ್ಪಿಕೊಂಡ ಮಾದಿಗೆ ಹೇಗೆ ವಿಜ್ಞಾನಬುದ್ಧಿಯೊಂದೇ ನಿರುದ್ದೇಶ, ನಿಷ್ಪ್ರಯೋಜನ, ನಿಷ್ಕಾರಣ, ಆದುದರಿಂದ ನಿಷ್ಪಕ್ಷಪಾತ, ಅಪೂರ್ವಗ್ರಹಿ-ಎಂದು ಹೇಳಲು ಅಧಿಕಾರ ಬರುತ್ತದೆ? ಸತ್ಯವೂ ಒಂದು ಗುರಿ, ಉದ್ದೇಶ, ಪ್ರಯೋಜನ, ಸಮಾ-ಧಾಯಕನೀತಿ, ಲೌಕಿಕರ ಸಮಾಧಾನಗಳು ಯಾವಾಗಲೂ ಅಶುದ್ಧ, ಸಂಮಿಶ್ರ, ಅಪೂರ್ಣ, ನಶ್ವರ, ಪರಿವರ್ತನೀಯ. ನೈತಿಕ ಅಪೇಕ್ಷಣೀ-ಯತೆಯೂ ವಿಚಾರ ಸಾಮಂಜಸ್ಯವೂ ವಿಜ್ಞಾನಸತ್ಯಕ್ಕೆ ಸಮವಾದ ವಸ್ತುನಿಷ್ಠತೆಯನ್ನು ಉಳ್ಳವುಗಳಲ್ಲ ಎಂಬುದು ವಸ್ತುನಿಷ್ಠವಲ್ಲ, ಪೂರ್ವಗ್ರಹ ಹಿಡಿದ ವ್ಯಕ್ತಿಯಲ್ಲಿ ಮಾತ್ರನಿಷ್ಠ. ನೀತಿಯನ್ನೂ ವಿಚಾರವನ್ನೂ ಅವೈಜ್ಞಾ-ನಿಕವೆನ್ನುವವನ ನೀತಿಯೂ ವಿಚಾರವೂ ಎಷ್ಟರ ಮಟ್ಟಿಗೆ ಗ್ರಾಹ್ಯವಾಗಬಹುದು? ನೀತಿವಿಮುಖ ವಿಜ್ಞಾನಿಯ ಶೋಧವು ಎಷ್ಟು ಪ್ರಾಮಾಣಿಕವಾಗಿರಬಲ್ಲದು? ಎಂಥ ಸದುದ್ದೇಶದಿಂದ ಕೂಡಿರಬಲ್ಲದು? ಉದ್ದೇಶ-ರಹಿತವಾದ ಸತ್ಯವೆಂಬುದರ ಅಸ್ತಿತ್ವಕ್ಕೆ ಪ್ರಮಾಣವನ್ನು ಯಾವ ವಿಜ್ಞಾನಿ ಒದಗಿಸಿಕೊಡಬಲ್ಲ? ಮಾವಿನ ಹಣ್ಣು ಭೂಮಿಗೆ ಬೀಳುವುದು ಮನುಷ್ಯ ತಿನ್ನಲೆಂದೇ ಎಂಬುದು ನಿಸರ್ಗದ ಪರಮೋದ್ದೇಶವಾಗಿರಲಾರದು; ಆದರೆ ಸಂತಾನದಲ್ಲಿ ತಾನು ಅಮರನಾಗಬೇಕೆಂಬ ಮಾವಿನ ನಿಸರ್ಗರೂಪದ ಒಳದನಿ ಅದರ ಪರಮೋದ್ದೇಶವಾಗಿರಲೇಬೇಕು. ವ್ಯಕ್ತಿಪದಾರ್ಥಗಳು ಅನೇಕ, ಅವುಗಳ ಉದ್ದೇಶಗಳು ಅನೇಕ, ಅವುಗಳಲ್ಲಿ ಒಂದೂ [illegible]

ಅನೇಕ; ಅವುಗಳೆಲ್ಲವುಗಳಲ್ಲೂ ಪ್ರತ್ಯೇಕ ಉದ್ದೇಶವನ್ನಿಟ್ಟ ನಿಸರ್ಗದ ಉದ್ದೇಶವು ವ್ಯಾವಹಾರಿಕವಾಗಿ ನಾನಾತ್ವದ ಆಭಾಸವನ್ನು ತೋರಿಸುವುದೇ ಆಗಿದೆ. ಇಚ್ಛಾಶಕ್ತಿ ಹೇಗೋ ಹಾಗೇ ನಿಸರ್ಗ ಪ್ರಕೃತಿ, ಸ್ವಭಾವ ಎಂಬುದು ಉದ್ದೇಶ ಸ್ವಾತಂತ್ರ್ಯದಿಂದ ಕಾರ್ಯ-ಕಾರಣ ಯಂತ್ರನೀತಿಯನ್ನು ಮೀರಿನಿಲ್ಲುವಂಥದು. ಮೂಲ ಕಾರಣವಾದ ಮಾಯೆಯು ಪರಾಪ್ರಕೃತಿ; ಅದು ಕಾರಣಾತೀತ, ಪ್ರಜ್ಞಾತೀತ, ಲೀಲಾನ್ಯಾಯಕಲ್ಪಿತ— ಎಂಬುದು ತಾತ್ಪರ್ಯ ಸಿದ್ಧ.

ದ್ವೇಷಮೂಲ ವಾದ

Reverence, (awe) derogation (degradation) grandeur ಭಯ, ಗೌರವ, ಆದರ, ಪ್ರೇಮ, ಕೀಳಂತನ, ವೈಭವಸಂಪನ್ನತೆ ಮುಂತಾದ ಭಾವನೆಗಳು ದಿವ್ಯಾನುಭೂತಿಯ ಗ್ರಾಹ್ಯತೆ-ತ್ಯಾಜ್ಯತೆಗಳಿಗೆ ನಿಕಷಗಳೆಂದು ಹೇಳುವ ವಾಕ್ ಪರಾಕ್ರಮಿಯು ವಿಜ್ಞಾನಿಯೂ ಅಲ್ಲ, ತತ್ವಜ್ಞಾನಿಯೂ ಅಲ್ಲ, ತಾರ್ಕಿಕನೂ ಅಲ್ಲ. ಲೋಕಸಿದ್ಧ ವಿಜ್ಞಾನದ ಸತ್ಯವು ಸುಪ್ರಸಿದ್ಧವಾಗಿ ಭಾವನಾತೀತ; ತತ್ವಜ್ಞಾನವು ಲೌಕಿಕಭಾವನಾತೀತ; ತರ್ಕವೂ ವಿಜ್ಞಾನದಂತೆಯೇ ಯಾಂತ್ರಿಕ. ಸಂಚಾರಿಭಾವದಲ್ಲಿ ವೈಜ್ಞಾನಿಕ-ಅವೈಜ್ಞಾನಿಕ ಎಂದು ವಿಂಗಡಿಸುವ ವಿಜ್ಞಾನಕಲ್ಪನೆ ಜೋಡ ಕಪೋಲಕಲ್ಪಿತ (ಪುಟ ೨೫೨). ಅದ್ವೈತಿ ವರ್ಗವನ್ನು ಅಕಾರಣವಾಗಿ Malicious ಅಸೂಯಾಪರವೆಂದು ಆರೋಪಿಸುವ ಸಾಂತಾಯನತೆಯು ಮೂಲತಃ ಅಸೂಯಾಪರ; ಅದಕ್ಕೆ ಆ ವರ್ಗದ ಸಿದ್ಧಾಂತದ ಪ್ರಖ್ಯಾತಿಯ ಬಗ್ಗೆ ಸಹನೆಯಿಲ್ಲ. ಮಾಯೆ-ಬ್ರಹ್ಮಗಳು ನಿತ್ಯಪ್ರತ್ಯೇಕತೆಯನ್ನುಳ್ಳ ಎರಡು ಆತ್ಯಂತಿಕ ಪದಾರ್ಥಗಳೆಂದು ಶಂಕರಾದ್ವೈತ ಹೇಳಿದೆ ಎಂಬ ಮಿಥ್ಯಾವಾದಿಯು ಅದ್ವೈತಜ್ಞಾನಕ್ಕೆ ತೋಡದೇ ಆಧಾರ. ಸೃಷ್ಟಿಗತವಾದ ಜೀವಿಗಳು ಎಂದೋ ಒಂದು ದಿನ ಜೀವ ವಿಕಾಸಕ್ಕಾರಂಭಿಸಿ ಪರಾತ್ರ ಪರಾತ್ರ ಇಂದಿನ ಉನ್ನತತರ ವಿಜ್ಞಾನಸ್ಥಿತಿಯ ಮಟ್ಟಕ್ಕೆ ಬಂದು ಮುಟ್ಟಿವೆ ಎಂಬ ಅಪ್ರಮಾಣ ಸಿದ್ಧಾಂತವನ್ನು ನಂಬಿ ವಾದಿಸುವ

ನಾನಾತ್ವಪಂಥಿಯು ಆಶ್ರಯಾಸಿದ್ಧ ಹೇತ್ವಾಭಾಸ ಸ್ವರೂಪದವನು. ವಿಜ್ಞಾನಜ್ಞತೆಯ ಮಟ್ಟದ ಅಧಿಕೋನ್ನತಿಯು ಸ್ವರೂಪಾಸಿದ್ಧ ಹೇತ್ವಾಭಾಸ; ಜೀವನವು "ವಿಜ್ಞಾನೈಕ" ತಾರಕತೆಯನ್ನು ಸಾರವನ್ನಾಗಿ ಉಳ್ಳದ್ದಲ್ಲ; ಆಧುನಿಕ ವಿಜ್ಞಾನವಷ್ಟೇ ವಿಜ್ಞಾನವೂ ಅಲ್ಲ; ಭೌತಿಕ ಪ್ರಯೋಗ ಸಿದ್ಧತೆಯೊಂದೇ ವಿಜ್ಞಾನಸತ್ಯಕ್ಕೆ ಒರೆಗಲ್ಲೂ ಅಲ್ಲ; ಭೌತಿಕ ಪದಾರ್ಥಕ್ಕೆ ಭೌತಿಕ ಉಪಕರಣ ಧ್ವನಿಸುವ ಅರ್ಥವೊಂದೇ ಸಾರಭೂತ ವಸ್ತುನಿಷ್ಠ ಉನ್ನತತರ ಅರ್ಥವೂ ಅಲ್ಲ. ಭೌತಿಕದ ಅತಿವ್ಯಾಪ್ತಿಯು ಜೀವನ-ಪ್ರಪಂಚಗಳ ತರ್ಕಶುದ್ಧ ಅರ್ಥವನ್ನು ಹೇಳಲಾರದು. ಪ್ರಪಂಚದೊಳಗಿನ ಮಾನವನ ಬುದ್ಧಿಯು ಪ್ರಪಂಚ ತನ್ನಿಂದ ಹೊರಗಿನದು — ಹೊರ ಪ್ರಪಂಚವಷ್ಟೇ ವಸ್ತುನಿಷ್ಠ--ಎಂದು ವಾದಿಸುವುದು ವಾಚವಿದ್ಯಾವಿನೀತರಿಗಷ್ಟೇ ಭೂಷಣ.

ಅಪತರ್ಕ

ಉನ್ನತತರವೆನ್ನಿಸಿದ ತರ್ಕಾತೀತ ಜಾಗರಸ್ಥಿತಿಗೆ ತರ್ಕಪ್ರಕ್ರಿಯೆಯು ಒಯ್ದು ಮುಟ್ಟಿಸಬಲ್ಲದೆಂಬ ಛಲವು ತರ್ಕಕ್ಕೆ ಸ್ವರೂಪತಃ ಅಸಿದ್ಧ; ಅದು ಸೂರ್ಯನ ಬೆಳಕಿನ ಸಾಮಾನ್ಯ ಪಾರ್ಥಿವ ನೋಟದ ಮೂಲಕ ಕತ್ತಲಲ್ಲಿ ಮುಳುಗಬಹುದೆಂಬಷ್ಟೇ ತರ್ಕ ಸಮಂಜಸ; ಅಥವಾ ಕಪ್ಪು ಬಣ್ಣವನ್ನು ಗೋಡೆಗೆ ಬಳಿಯುತ್ತ ಹೋದರೆ ಗೋಡೆ ಬೆಳ್ಳಗಾಗುವುದೆಂಬಷ್ಟೇ ಸಮಾಧಾನಕರ. ತರ್ಕಸ್ಥಲ, ತರ್ಕಾತೀತಸ್ಥಲಗಳು ಭಿನ್ನ–ತಾರ್ಕಿಕತೆಯಿಂದೂ ಅತಾರ್ಕಿಕತೆಯನ್ನೇರಿಸಿ ಬುದ್ಧಿಗೆ ಪ್ರಶಸ್ತಿದಾನವನ್ನು ಮಾಡಬಾರದು. "ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ"-- ಆದ್ದರಿಂದ ಅಸಂಯಮವು ಸಂಯಮಸ್ಥಿತಿಗೊಯ್ದು ಯಾರನ್ನೂ ಮುಟ್ಟಿಸದು; ಅಜ್ಞಾನವೆಂದೂ ಜ್ಞಾನಕ್ಕೆ ಅಸಾಧಾರಣ ಕಾರಣವಾಗದು.

ಐಂದ್ರಿಯಿಕ ಆಕೃತಿಸಾಮಂಜಸ್ಯದ ಮೇಲೆ ನಿಂತ ಸೌಂದರ್ಯವು ನಿರಾಕಾರ ಸಾಕ್ಷಾತ್ಕಾರದಲ್ಲಿ ಇಲ್ಲ; ಸಾಕಾರಪ್ರಪಂಚದ "ಸತ್ಯತೆ" ನಿರಾಕಾರದ

ಅನುಭವವಲ್ಲಿಲ್ಲ ; ಆಕಾರಾವಲಂಬಿಯಾದ ಒಳಿತು - ಕೇಡುಗಳು ನಿರಾಕಾರಕ್ಕಿಲ್ಲ. ಆಕಾರದ ಉಪಯುಕ್ತತೆ ನಿರಾಕಾರಕ್ಕಿರದು. ಆಕೃತವು ಪ್ರಮೇಯ, ನಿರಾಕೃತವು ಅಪ್ರಮೇಯ- ಅದನ್ನು ಆಕರಿಸುವವನು ಇದನ್ನು ನಿರಾಕರಿಸಿಯೇ ತೀರುತ್ತಾನೆ. ಆಕಾರ-ಅನಾಕಾರಗಳಲ್ಲಿ ಸಮಸತ್ಯತೆ ಇರುವಂತೆ ಮಾತಾಡುವುದು ಪರಮಾಂಧತೆ. ಅವುಗಳಲ್ಲಿರುವುದು ಮೋಕ್ಷ-ನಿರ್ಮೋಕ್ಷಗಳಲ್ಲಿರುವಂಥದೇ ಸಂಬಂಧ !

ಮುಕ್ತಿಯ ಐಕ್ಯ —> ತಲ್ಲಯ —> ವಿನಾಶಗಳು ಕಾರಣ ಕಾರ್ಯ ಸಂಬಂಧ ಉಳ್ಳವುಗಳೆಂಬುದು ಬೋಧವಾದ. ಇಲ್ಲಿ ಐಕ್ಯವನ್ನು ಅನ್ವಯವೆಂದು ಅರ್ಥಮಾಡಿ, ಅನ್ವಯದ ಪ್ರಮಾಣ ಅಧಿಕವಾದರೆ (ಗಡಿಮೀರಿದರೆ) ತಲ್ಲೀನತೆ (ತದಂತರ್ಗತತೆ) ಬರುವುದೆಂದೂ ಅದು ಗಡಿ ಮೀರಿ ಹೆಚ್ಚಾದರೆ ಸಾಧಕನ ಸರ್ವಸ್ವವು ನಾಶವಾಗುವುದೆಂದೂ ಭೌತಿಕ ಘನಪದಾರ್ಥದ ಕಲ್ಪನೆಯನ್ನು ಆಧರಿಸಿ ತರ್ಕಿಸಲಾಗಿದೆ. ಘನಪದಾರ್ಥದ ನ್ಯಾಯವು ಘನತ್ವ-ದ್ರವತ್ವ ಅನಿಲತ್ವಗಳಿಗೆ ನಿರಪೇಕ್ಷವಾದ ಮುಕ್ತಿಗೆ ಅನ್ವಯಿಸುವುದೆಂತು ? ಸಾಧಕತ್ವವು ನಾಶವಾಗದೆ ಸಿದ್ಧತ್ವ ಬರುವುದೆಂತು? ಸಿದ್ಧತ್ವ ಬೇಕಾದವನು ಸಾಧಕತ್ವದ ನಾಶವನ್ನು "ಮುಕ್ತಿ" ಎಂಬನಲ್ಲದೆ ನಾಶವೆನ್ನನು. "ನಾಶ"ವಿಲ್ಲದೆ ಹುಟ್ಟಿಲ್ಲ, ಆವಿರ್ಭಾವವೂ ಇಲ್ಲ, ಬೋಧಿತತೆಯೂ ಇಲ್ಲ. ಅನುಭವಿಗೆ ಗ್ರಾಹ್ಯದ ನಾಶವು ನಾಶ, ತ್ಯಾಜ್ಯದ ನಾಶವು ನಾಶವಲ್ಲ. ಸಿದ್ಧತ್ವವು ಅಪೇಕ್ಷಣೀಯವಲ್ಲವೆಂಬವನು ಅಸಿದ್ಧ ಸಾಧಕನಿಗಿಂತಲೂ ಕನಿಷ್ಠ. ಬಂಧವನ್ನು ಮೋಕ್ಷವೆಂಬುದೂ ಬಂದೇ, ದ್ವಿತ್ವ-ನಾನಾತ್ವಗಳ ಆತ್ಯಂತಿಕತೆ ಆಧ್ಯಾತ್ಮಿಕ ಪರಮಾನುಭೂತಿ ಎಂಬುದೂ ಬಂದೇ. "ದುನಿಯಾ ಮುಲ್ಲುಂಕೋ ಕಹತೀ ಕಾಫರ್, ಮೈ ಉನಕೋ ಕಹತೀ ಕಾಫರ್!"

Scientific, physical and sensuous ವೈಜ್ಞಾನಿಕ, ಭೌತಿಕ ಮತ್ತು ಐಂದ್ರಿಯಕ ಹಾಗೂ Mystic ಯೌಗಿಕ ಸತ್ಯಪ್ರಪಂಚಗಳೆಂದು ನಾಲ್ಕು ವಿಭಾಗಗಳನ್ನು ಜೋಡಣೆಗೆ ಮಾಡಿದರು ? ಸ್ವಪ್ನಪ್ರಪಂಚ,

ಉನ್ಮತ್ತ ಪ್ರಪಂಚಗಳಿಗೂ ಸಮಾನವಾದ ವಸ್ತುನಿಷ್ಠ ಸತ್ಯತೆಯನ್ನು ಕೊಡಬಹುದು. ವೈಯಕ್ತ, ವೈಚಾರಿಕ, ಐಂದ್ರಿಯಕ, ಯೌಗಿಕ, ಸ್ವಾಪ್ನಿಕ ಮತ್ತು ಔನ್ಮತ್ತಿಕ ಪ್ರಪಂಚಗಳಲ್ಲಿ ಎಲ್ಲವನ್ನು ಸಮಾನಸತ್ಯತೆಯನ್ನುಳ್ಳವುಗಳೆನ್ನುವುದೂ ಕೇವಲಕ್ಕೆ ಮಾತ್ರ ಸತ್ಯತೆ (ವಸ್ತುನಿಷ್ಠ ನಿತ್ಯತ್ವ) ಉಂಟೆಂಬುದೂ ಪೂರ್ವಾಪರ ಜ್ಞಾನವಿಲ್ಲದವರ ವಾದ, ಸತ್ಯಾರ್ಥದ ಪರಿವರ್ತನೀಯತೆಯನ್ನು ಕಲ್ಪಿಸಿಕೊಂಡವರ ಪಂಥ. ಪರಿವರ್ತನವು ಪ್ರವಾಹ, ಪ್ರಮೆ; ವಿಕಾಸವು ವಿಕಾರ-ಆಕಾರವಲ್ಲ; ಅರಳಿದ್ದು ಮುರಳದಿರದು ಬಿರಿದ್ದು ಇಳಿಯದಿರದು. ದ್ವಂದ್ವಾತೀತಕ್ಕೆ ದ್ವಂದ್ವದ ಕಲ್ಪನೆಯೊಂದೂ ಅನ್ವಯಿಸದು.

ಜಗತ್ತು ಅಪೂರ್ಣವಾಗಿರುವಾಗ ಅದರ ಸತ್ಯವು ಅಪೂರ್ಣ. (ಗುಣ-ಗುಣವತೋರಭೇದಃ) ಗುಣ-ಗುಣಿಗಳು ಅಭಿನ್ನ. ಇದರಲ್ಲಿ ನಾನಾ ಗುಣಿಗಳು ನಾನಾಬಗೆಯ ಆನುಷೇಧಿಕ ಸತ್ಯಗಳು. ಅವುಗಳ ಸಾಪೇಕ್ಷ ಪೂರ್ಣಾಂಕದ ಭಿನ್ನರಾಶಿಗಳು ಆಂಶಿಕ ಸತ್ಯಗಳು ಎಂಬುದು ವ್ಯಾವಹಾರಿಕ. ಪರಮಾರ್ಥದ ಅದ್ವೈತಕ್ಕೆ ವ್ಯವಹಾರಜಾಗರವಿರದುದರಿಂದ ಅದಕ್ಕೆ ಮಾತ್ರ ಇದಿಲ್ಲವಷ್ಟೇ ಅಲ್ಲವೇ, ವ್ಯವಹಾರದಲ್ಲೂ ಇದಿಲ್ಲವೆಂಬ ಬೋಧತನವು ಮೂಢತನ. ಗ್ರಾಹ್ಯತ್ವ-ತ್ಯಾಜ್ಯತ್ವಗಳೆಂಬ ದ್ವಂದ್ವದಿಂದ ಪರಮಾರ್ಥವು ಅತೀತವಾಗಿದೆ; ಅದು ವಸ್ತುತಂತ್ರ, ಪುರುಷತಂತ್ರವಲ್ಲ-ಪುರುಷೇಚ್ಛಾಧೀನವಲ್ಲ. ಪ್ರಪಂಚದ ವಸ್ತುನಿಷ್ಠತೆ ಸಾಪೇಕ್ಷವೆಂದರೆ ಪುರುಷೇಚ್ಛಾಧೀನವೆಂದರ್ಥ; ವೈಜ್ಞಾನಿಕ ಸತ್ಯವೂ ಅಷ್ಟೇ, ವೈಚಾರಿಕ ಸತ್ಯವೂ ಅಷ್ಟೇ. ಪ್ರತ್ಯಕ್ಷವೂ ಇದಕ್ಕೆ ಹೊರತಲ್ಲ. ಪುರುಷೇಚ್ಛೆಯೊಮ್ಮೆ ಅಜ್ಞಾತವಾಗಿರಬಹುದು, ಒಮ್ಮೆ ಜ್ಞಾತವಾಗಿರಬಹುದು. ತನ್ನ ತನ್ನ ಅಪೂರ್ಣತೆಯ ಅನುಭವವೇ ಮಾನವನಿಗೆ ಜಗತ್ತು ಅಪೂರ್ಣವೆಂದು (ಸಾಪೇಕ್ಷ) ತಿಳಿದುಕೊಳ್ಳಲು ಆಧಾರ. ಮಾನವಾನುಭವದ ಸಾಮಾನ್ಯತೆಯೇ ವಸ್ತುನಿಷ್ಠತೆಗೆ ಸಾಕ್ಷಿ. ಅದು Inter-subjective commonness of a group ಒಂದು ಗುಂಪಿನ ಅಂತರ್ ವೈಯಕ್ತಿಕ ಸಾಧಾರಣತೆ. ಜಗತ್ತಿನ ರಾ ಮಾನಾಗಣಿತಲ್ಲಿಯೂ ಸಮರ್ಪಕವಾಗಿ ತಿಳಿಯದೆ ಹೋಗಿದ್ದರೆ, ಅಲ್ಬರ್ಟ

ಐನ್‌ಸ್ಟೀನನ ಸಾಪೇಕ್ಷತಾವಾದದ ಗಣಿತಾಧಾರವು ಅವಸ್ತುನಿಷ್ಠವೆಂದು ತ್ಯಾಜ್ಯವಾಗುತ್ತಿತ್ತು. ಜಗತ್ತಿನ ಹಾಗೂ ಅದರಲ್ಲಿರುವ ಪದಾರ್ಥಗಳ ವಸ್ತುನಿಷ್ಠತೆಯು ಸಾಪೇಕ್ಷ, ಅಪೂರ್ಣ. ಪೂರ್ಣ ಅವೈಯಕ್ತಿಕತೆಯಾದ ಬ್ರಹ್ಮವು (ಮುಕ್ತಾವಸ್ಥೆ) ಪೂರ್ಣ ನಿರಪೇಕ್ಷ; ಪೂರ್ಣವೈಯಕ್ತಿಕತೆಯಾದ ಸ್ವಾರ್ಥಮಗ್ನತೆಯು ನೂರಕ್ಕೆ ೯೯.೯° ಪುನರಾವೃತ್ತಿಯುಳ್ಳ ಅಪೂರ್ಣ ಮತ್ತು ಪರಾವಲಂಬನಾಪೇಕ್ಷ. ನರಪುರುಷತ್ವವು ಸಾಪೇಕ್ಷ, ದೇವ (ಬ್ರಹ್ಮ) ಪುರುಷತ್ವವು ನಿರಪೇಕ್ಷ. ಪುರುಷತ್ವವು ಶಕ್ತಿಕೇಂದ್ರ. ಶಕ್ತಿಯು ಕಾರ್ಯೋತ್ಪಾದಕ ಗುಣ. ಕಾರ್ಯವು ಜಗತ್. ಅಕಾರ್ಯವು ಬ್ರಹ್ಮ. ಶುದ್ಧ ಜ್ಞಾನದ ಅಕಾರ್ಯ, ಮಿಶ್ರಜ್ಞಾನದ ಕಾರ್ಯ (ಕ್ರಿಯೆ). ಗುಣ, ದ್ರವ್ಯಗಳು ಕಾರ್ಯಕೃತಿಗಳು; ಸಾಮಾನ್ಯ, ವಿಶೇಷ, ಸಮವಾಯ, ಅಭಾವಗಳು ಕಾರ್ಯಸಂಬಂಧಗಳು. ಸರ್ವಕಾರ್ಯಗಳೂ ದೇಶ-ಕಾಲಾವಚ್ಛಿನ್ನ; ಆದುದರಿಂದ ಅಪೂರ್ಣ, ಪರಿಮಿತ, ಪ್ರಮೇಯ, ವ್ಯವಹಾರ ಬುದ್ಧಿಸೃಷ್ಟ, ವ್ಯಾವಸಾಯಿಕ. ಅನುಷೇಧ ಕಾರ್ಯಾಭಾವವು ಕಾರ್ಯೋತ್ಪಾದಕ ಶಕ್ತಿಯುಳ್ಳ ಗುಣ; ನಿಷೇಧ ಕಾರ್ಯಭಾವವು ಅತ್ಯಪೂರ್ಣ (೯೯. ೯°) ಆನುಷೇಧಿಕ ಶುದ್ಧಶಕ್ತಿಯುಳ್ಳ ಕಾಲ್ಪನಿಕ ಗುಣ. ಗುಣವು ಪ್ರಚ್ಛನ್ನ ಕಾರ್ಯಶಕ್ತಿ, ಕಾರ್ಯವು ಪ್ರಕಟಗುಣ, ದ್ರವ್ಯವು ಗುಣಸಂಘಾತ. ಪ್ರಪಂಚವು ಗೌಣ; ಬ್ರಹ್ಮವು ಪ್ರಧಾನ ಮತ್ತು ಸರ್ವಪದಾರ್ಥಾಧಾರ; ಅದರ ಪಾರಮಾರ್ಥಿಕ ಏಕಮೇವಾದ್ವಿತೀಯತೆಯು ವ್ಯಾವಹಾರಿಕ ಅನೇಕ ಪದಾರ್ಥಗಳಿಗೆ ಆಧಾರವಾಗಿರುವುದು ಮಾಯೆ, ವಿವೃತಿ, ಅವಿದ್ಯೆ, ಅಜ್ಞಾನ, ಆಭಾಸ, ಜಾದು! ಬ್ರಹ್ಮದೃಷ್ಟಿಯಿಂದ ಇಂದ್ರಿಯ ಸತ್ಯವು ಐಂದ್ರಜಾಲಿಕ, ಮನೋವಶೀಕರಣ ವಿದ್ಯೆಗೊಳಗಾದವರ ಸಾಕ್ಷಾತ್ಕಾರ. ಮಾನವರೆಲ್ಲರೂ ತಾರತಮ್ಯಭಾವವುಳ್ಳ ವಶೀಕೃತಮನಸ್ಕತೆಯುಳ್ಳವರು. ನಿಸರ್ಗವು (ಮಾಯೆಯು) ವಶೀಕರಣ ವಿದ್ಯಾಪಂಡಿತ. ಅದು ದೇವ (ಈಶ, ಬ್ರಹ್ಮ) ಸ್ವಭಾವ, ಮೂಲಧರ್ಮ. ಅದು ಮಧ್ಯೇದ್ಯಪಕ್ಷವೆ, ಅಧೇದ್ಯಪಕ್ಷ-ಅಪೂರ್ಣವಾದುದರಿಂದ. ಪಾರಮಾರ್ಥಿಕವಾಗಿ ಅಪೂರ್ಣವು ಪೂರ್ಣಕ್ಕೆ ವಿರೋಧವಾಗಿರುವುದು ತಾರ್ಕಿಕ ಅಸಮಂಜಸತೆಯುಳ್ಳದ್ದಾಗಿರುವುದರಿಂದ ಅದನ್ನು ಮಾಯೆ, ಅನಿರ್ವಚನೀಯ ಖ್ಯಾತಿ ಎಂದು ಹೇಳಲಾಗಿದೆ. ಇದೊಂದನ್ನು

ಬಿಟ್ಟರೆ ಮಿಕ್ಕ ಎಲ್ಲವೂ ತರ್ಕಶುದ್ಧ. ಅಂದರೆ ದೊಡ್ಡ ಅಸೀಮ ಅತರ್ಕವು ತರ್ಕದ ಮೂಲ. Perfect chaos is the ground of relatively orderly and disorderly appearances; the perfect Irrational is the root of the imperfect Rational and Irrational—ಪೂರ್ಣ ಅಕ್ರಮವು ಸಾಪೇಕ್ಷವಾಗಿ ಪೂರ್ಣಾಪೂರ್ಣವೆನ್ನಿಸಿದ ಆಭಾಸಗಳಿಗೆ ಆಧಾರ; ಪೂರ್ಣ ಅತರ್ಕವು ಸಾಪೇಕ್ಷ ತರ್ಕಾತರ್ಕರೂಪಗಳ ಮೂಲ, ಜನಕ, ಆಕರ, ಅನ್ಯತೆ, ಭೇದ, ಗುಣ, ಧರ್ಮ, ಉಪಾಧಿ, ಪರಿಮಿತಿ, ಶರ್ತ, ವಿಶೇಷ, ವಿಶೇಷಣ, ಅಪೇಕ್ಷೆ, ತಾರತಮ್ಯ, ಅಪೂರ್ಣತೆ, ಸಂಬಂಧಗಳು ವಿಕಾರ್ಥಕಗಳು-ಪರಮಾರ್ಥದೃಷ್ಟಿಯಿಂದ; ಪರಮಾರ್ಥಕ್ಕೆ ಈ ಯಾವುವೂ ಇಲ್ಲ; ವ್ಯವಹಾರಾರ್ಥಕ್ಕೆ ಇವೆಲ್ಲ ಇವೆ. ಬ್ರಹ್ಮದ ಜಗತ್ತಿಗೂ ಬ್ರಹ್ಮತ್ವಕ್ಕೂ Relevance ಸಂಬಂಧ ಗೊತ್ತಾಗದಿರುವುದೇ ತಾತ್ವಿಕ ನಾನಾಖ್ಯಾನಗಳಿಗೆ ಕಾರಣ; ಏಕತ್ವ-ನಾನಾತ್ವಗಳ ನಾನಾಖ್ಯಾನವು ನಾನಾ ಜಗತ್ತಿನ ಸ್ವಭಾವವಾಗಿದೆ. ನಾನೇತರವಾದ ಬ್ರಹ್ಮಜ್ಞಾನಕ್ಕೆ ಏಕತ್ವದ ಏಕಾಖ್ಯಾನವೊಂದೇ ವಿವರಣೆ-ಅದು ಕೈವಲ್ಯ, ಕೇವಲತ್ವ. ಸಾಕ್ಷೀ ಭೂತಃ ಕೇವಲೋ ನಿರ್ಗುಣಶ್ಚ !

ವ್ಯಾವಹಾರಿಕ ವಿಶ್ಲೇಷಣ

ವ್ಯವಹಾರದಲ್ಲಿ Relative disorder is irrelevant ಸಾಪೇಕ್ಷ (ಸಾಂಬಂಧಿಕ) ಅಕ್ರಮವು ತ್ಯಾಜ್ಯ ಮತ್ತು Relative order is relevant ಸಾಪೇಕ್ಷ ಕ್ರಮವು ಗ್ರಾಹ್ಯ ಪರಮಾರ್ಥವು ಉಭಯಾತೀತ ಮತ್ತು ಉಭಯಾಧಾರ; ಇದು ಪೂರ್ಣ ನಿತ್ಯ, ಅದು ಅಪೂರ್ಣ ನಿತ್ಯ ಹಾಗೂ ಅನಿತ್ಯ.

೧.


ಅಶೂನ್ಯ — ಶೂನ್ಯ (ಶಾಬ್ದಿಕ)

ಭಾವ (ಅಸ್ತಿತ್ವ, ಅನ[illegible])

ಪೂರ್ಣ (ನಿರಪೇಕ್ಷ, ಕೇವಲ)

ಸಾಪೇಕ್ಷ ಪೂರ್ಣ — ಸಾಪೇಕ್ಷ ಅಪೂರ್ಣ

೨.


ಪದಾರ್ಥ
ಅಶೂನ್ಯ (ಅವಿಕಾರ್ಯಭಾವ)
ಶೂನ್ಯ (ಶಾಬ್ದಾರ್ಥಿಕ)
ಸತ್ = ಪರಮಾರ್ಥ
ತ್ಯತ್ = ಭಾಸಾರ್ಥ
ಪ್ರಾತಿಭಾಸಿಕ
ವ್ಯಾವಹಾರಿಕ
ಸ್ವಾಪ್ನಿಕ
ಔಸ್ಮೃತಿಕ
ಕಾರ್ಯ
ವಿಕಾರ್ಯ (ಭಾವ, ಕಲ್ಪನೆ, ಸಂಬಂಧ)
ಗುಣ
ದ್ರವ್ಯ
ಸಾಮಾನ್ಯ
ಸಮವಾಯ
ವಿಶೇಷ
ಅಭಾವ

ವೈದಿಕ ಅಸ್ತಿತ್ವ= ಅಸ್ತಿತ್ವ ಜಾಗರ; ಅಜಾಗರ ಅಸ್ತಿತ್ವವು ಅರ್ಥಹೀನ. ಜಾಗರವು ಬ್ರಹ್ಮ ಜಾಗರದ ವಿಶ್ವವ್ಯಾಪಿತ್ವದಿಂದ ಹಿಡಿದು ಅಲ್ಪದ ಅತ್ಯಲ್ಪ ಜಾಗರದವರೆಗಿನದು. ಅಸ್ತಿತ್ವದ ಶುದ್ಧ, ಕೇವಲ ಜಾಗರ (Pure absolute awareness of existence) ಬ್ರಹ್ಮ. ಬ್ರಹ್ಮವು ("ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ") ವ್ಯಾಪಕ; ಜಗತ್ತು (ಗ್ರಹ-ನಕ್ಷತ್ರ-ನೀಹಾರಿಕಾದಿಗಳ ಸಂಘಾತ) ವ್ಯಾಪ್ಯ. ವ್ಯಾಪಕದ ಸತ್ಯತೆ ವ್ಯಾಪ್ಯಕ್ಕಿಲ್ಲ. ವ್ಯಾಪಕವು ಅಖಂಡ, ವ್ಯಾಪ್ಯವು ಖಂಡ; ಖಂಡಸಂಘಾತದ ಅರ್ಥ ಮತ್ತು ಅದಕ್ಕೆ ಅತೀತವಾದ ಅಖಂಡತೆಯ ಅರ್ಥಗಳು ಭಿನ್ನ. ಅಖಂಡತೆಗೆ ಏಕತಾ ಜಾಗರವಿದ್ದರೆ, ಖಂಡಕ್ಕೆ ಮತ್ತು ಖಂಡರಾಶಿಗೆ ಖಂಡತೆಯ ಹಾಗೂ ಖಂಡರಾಶಿಯ ಜಾಗರಗಳಿವೆ. ಖಂಡಗಳನ್ನು (ಅಂಶಗಳನ್ನು) ಒಳಗೊಂಡಿರುವ ಅಥವಾ ಜೋಡಿಗೊಂಡಿರುವ ಅರ್ಥಗಳು ಖಂಡಜಾಗರ ಗ್ರಾಹ್ಯ. ಅಖಂಡ ಜಾಗರಕ್ಕೆ ಅಖಂಡ ಜಾಗರವೊಂದೇ ಗ್ರಾಹ್ಯ. ಅದರ ಅಹಂತ್ವ (ಪುರುಷತ್ವ) ಶುದ್ಧ ಏಕತಾಪರಿಚ್ಛಿನ್ನ; ವ್ಯಕ್ತಿಯ ಅಹಂತ್ವವು ಏಕತ್ವ-ಅನೇಕತ್ವಗಳಿಂದ ಪರಿಚ್ಛಿನ್ನ-ಅವೆರಡೂ ಸಾಪೇಕ್ಷ; ಶುದ್ಧ ಏಕತ್ವವು ಕೇವಲತ್ವ, ಸರ್ವನಿರಪೇಕ್ಷತ್ವ, ಸರ್ವತಂತ್ರ ಸ್ವತಂತ್ರತ್ವ !

ಅಪೂರ್ಣದ ಪೂರ್ಣಜ್ಞಾನವು ಅಪೂರ್ಣ ಜ್ಞಾನ; ಪೂರ್ಣದ ಅಪೂರ್ಣ ಜ್ಞಾನವು ಅಪೂರ್ಣಜ್ಞಾನ. ಅಪೂರ್ಣದ ಪೂರ್ಣಾಪೂರ್ಣಜ್ಞಾನಗಳು ಸಾಪೇಕ್ಷ. ಪೂರ್ಣದ ಪೂರ್ಣಜ್ಞಾನವು ಪೂರ್ಣ, ನಿರಪೇಕ್ಷ. ಪೂರ್ಣವು ಒಳ ಹೊರ ತನಗಳುಳ್ಳದ್ದೆಂದು ತಿಳಿಯುವುದು ಅಪೂರ್ಣಜ್ಞಾನ- ಅದೇ ವ್ಯವಹಾರಾರಂಭ. ವ್ಯವಹಾರಾರಂಭದ Gestalt ಇಡಿತನದ ಜ್ಞಾನವೂ, ಹಾಗೇ ಸಾಪೇಕ್ಷವಾದ ಬಿಡಿತನದ ಜ್ಞಾನವೂ ವಾಸನಾ ಸಂಸ್ಥಾಪಿತ. ವಾಸನೆಯು ಪರಂಪರಾಗತವಾದ ಆನುವಂಶಿಕ- ಆವರಣಿಕ ಸಂಸ್ಕಾರ. ಬಿಡಿಯ ಕಲ್ಪನೆಯೇ ಇಡಿಗೆ ಸಾಪೇಕ್ಷವಾಗಿರುವುದು ಇಂದ್ರಿಯ ಪ್ರತ್ಯಕ್ಷಸಿದ್ಧವಾದುದು. ಸ್ವಾನುಭವವನ್ನು ವಿಶ್ಲೇಷಿಸಿ ನೋಡುವವರಿಗೆ ಏನನ್ನೂ ಬಿಡದ ಸಮಾಧಿಗೆ ಸಮಾಧಾನ ದೊರೆಯದು. ಪರಜ್ಞಾನಕ್ಕೆ ಸ್ವಜ್ಞಾನವೇ ಆಧಾರ.

ಸ್ವಜ್ಞಾನ ಬಹಿಷ್ಕಾರದ ಸೋಗನ್ನು ಹಾಕುವ ವಿಜ್ಞಾನತರ್ಕಬುದ್ಧಿಯು ಬುದ್ಧಿಯೇ? ಅಲ್ಲ- ವಿಕಟ ಬುದ್ಧಿ.

ವಿಕಟ ಪ್ರತಾಪ

ಜಾಗರ ರಹಿತವಾದ "ನಾಹಮಸ್ಮಿ" ಯಂತಹ ಜೈವಿಕ ಅಸ್ತಿತ್ವ ವಿರುವುದು ಕಲ್ಪನಾಬಾಹಿರ. ಇದನ್ನು Anthropomorphism ಮಾನವಾನುಕಲ್ಪನೆ ಎಂದು ಬಹಿಷ್ಕರಿಸುವ ಜೋಡತನವು Solipsism ಅಹವಾದಿ ಅಹಮಾಂತವಾದದ ತರ್ಕಬುದ್ಧಿಗಿಂತಲೂ ಹೆಚ್ಚು ಅಶುದ್ಧವಾದುದು. ಮಾನವತ್ವದ ಐಂದ್ರಿಯ ಅವಸ್ಥೆಯಲ್ಲಿರುವವರು ತಮ್ಮಲ್ಲಿ ಅಮಾನ ವ್ಯವಾದ ವಸ್ತುನಿಷ್ಠತೆ ಇದೆ ಎಂದು ಕೊಚ್ಚಿಕೊಳ್ಳುವುದು ಧೂರ್ತತನ ಅಥವಾ ಮೂಢತನ. ಅಂಥವರ ವಸ್ತುನಿಷ್ಠತೆ, ನಿಷ್ಪಕ್ಷಪಾತತೆ, ವೈಜ್ಞಾನಿ-ಕತೆಗಳು ಅಸಂಬದ್ಧ ಪ್ರಲಾಪಗಳು. ವ್ಯಕ್ತಿ ಬುದ್ಧಿಯಿಂದ ಸಂಪೂರ್ಣ ಮುಕ್ತವಾದ ಬುದ್ಧಿಯುಳ್ಳ ಲೌಕಿಕ ವ್ಯಕ್ತಿ ಇರಬಲ್ಲನೆಂಬುದು ವಿಕಟ ಪ್ರತಾಪ. Self-transcendence ಸ್ವಾತೀತತೆಯು ಮಾನವ ಸಹಜ ಮೂಲ ಪ್ರವೃತ್ತಿಗಳ ಸ್ವಶರೀರಮನಃಪೋಷಕ ಪ್ರಜ್ಞೆಯಿಂದ ಮುಕ್ತರಾದ ಯೋಗಿಗಳಿಗೆ ಮಾತ್ರ ಸಾಧ್ಯ. ಆಧುನಿಕ ಪಾಶ್ಚಾತ್ಯ ತತ್ವಜ್ಞಾನಿಗಳಲ್ಲಿ ಯಾವನೂ ಯೋಗಿಯಲ್ಲ; ಭೋಗಿಯ ತರ್ಕವು ಭೋಗತರ್ಕವಲ್ಲದೆ ಯೋಗತರ್ಕವೆಂದೂ ಆಗದು. ಒಬ್ಬನು ಪ್ರಚ್ಛನ್ನ ಭೋಗಿಯಾದರೆ (ಛವಿಯಾದರೆ) ಇನ್ನೊಬ್ಬ ಪ್ರಕಟ ಭೋಗಿ-ಅಷ್ಟೆ!

ಸಾತತ್ಯಪ್ರಜ್ಞ ಸತ್ಯತೆಯ ಸ್ವರೂಪವು ಸಂಪೂರ್ಣ ನಿಷ್ಕ್ರಿಯಾತ್ಮಕವಾಗಿರಲೇ ಬೇಕೆಂಬುದು ಕಲ್ಪನಾಬುದ್ಧಿಯ ಪ್ರಜ್ಞೆಗೆ ಗ್ರಾಹ್ಯ. ಆದರೆ ಈಶಾವಾಸ್ಯ ಹೇಳುವಂತೆ ಅದರ ನಿಷ್ಕ್ರಿಯತೆಯು ಸಕ್ರಿಯತೆ ಸಾಧಿಸುವ ದಕ್ಕಿಂತ ಹೆಚ್ಚಿನದನ್ನು ಸಾಧಿಸಬಲ್ಲದು- ಏಕೆಂದರೆ, ಅದು ಲೌಕಿಕ ಸಕ್ರಿಯತೆ- ನಿಷ್ಕ್ರಿಯತೆಗಳೆಂಬ ದ್ವಂದ್ವದಿಂದ ಭಿನ್ನವಾದ ನಿರಪೇಕ್ಷ ಸ್ವಸ್ಥಸ್ಥೈರ್ಯ. ಅಸಾತತ್ಯಪ್ರಜ್ಞ ಸತ್ಯಗಳು ಸಾಪೇಕ್ಷ- ತರತಮಭಾವದ ಸಾತತ್ಯಾವಧಿಗಳನ್ನುಳ್ಳಂಥವು; ಸಂಪೂರ್ಣವಾಗಿ ಸಾತತ್ಯ ಕಲ್ಪನಾ

ಮುಕ್ತವಾದವರು ತಮ್ಮ ಸತ್‌ಸ್ವರೂಪವನ್ನು ಕಳೆದುಕೊಳ್ಳುವರು. ಕೇವಲ ಪೂರ್ಣ ಅಸತ್ತೆಂಬುದು ಪೂರ್ಣವಾಗಿ ಅಸತ್ತು, ಅಸತ್ಯ; ಅದರ ಅಕಲ್ಪನೀಯತೆಯು ಕಲ್ಪನಾ ಗ್ರಾಹ್ಯ. ಎಲ್ಲ ಅನುಷೇಧ ಕಲ್ಪನೆಗಳೂ ಸಾಪೇಕ್ಷ- ಅಥವಾ ನಿರಪೇಕ್ಷ ಸಾತತ್ಯವೇ ನಿಕಷ. ನಿಷೇಧಕಲ್ಪನೆ ಸತತ ಸಾಪೇಕ್ಷ. ಅದರಿಂದ ಅತೀತಕ್ಕೆ ತಲುಪಿದ ಕ್ಷಣಭಂಗವಾದದ ಕಲ್ಪನಾತೀತತೆ ಸಿದ್ಧವಾಗುವುದು. ಕಲ್ಪನಾತೀತವನ್ನು ಕಲ್ಪನೀಯವೆಂದು ಗಣಿಸುವುದು ಭ್ರಮಾವಿಲಾಸ. ಕಾಲ್ಪನಿಕ ಅವಲಂಬನೀಯತೆ ಇಲ್ಲದ ಕಲ್ಪನೆಯು ಮರುಮರೀಚಿಕೆ; ಅದೆಂದೂ ತರ್ಕಗ್ರಾಹ್ಯವಲ್ಲ.

ಕಾಲಿಂಗ್‌ವುಡ್ಡರ ಸಿದ್ಧಾಂತ

"There is.... no where in their works any suggestion that by continued study of atoms and electrons one becomes oneself electric or even like electricity— ಪ್ರೊ. ಎಡ್ಡಿಂಗ್‌ಟನ್ ಮತ್ತು ಸರ್ ಜೇಮ್ಸ್ ಜೀನ್ಸ್‌ರ ಕೃತಿಗಳಲ್ಲಿ ಎಲ್ಲಿಯೂ ಅಣು ಮತ್ತು ವಿದ್ಯುತ್ತಿನ ಋಣ ಕಣಗಳ ಸತತಾಭ್ಯಾಸದಿಂದ ಒಬ್ಬ ಅಭ್ಯಾಸಿಯು ತಾನೇ ವೈದ್ಯುತ ಅಥವಾ ವಿದ್ಯುತ್ ಸದೃಶನಾಗಿ ಬಿಡುವ ಸೂಚನೆ ಕಂಡುಬರುವುದಿಲ್ಲ (Philosophical Aspects of Modern Science, P. 202)" ಎಂದು ಜೋಡರು ಜೋರಾಗಿ Knowledge by identity ಜ್ಞೇಯ ದಲ್ಲಿ ಜ್ಞಾತೃ ತಾದಾತ್ಮ್ಯ ಹೊಂದುವ ಜ್ಞಾನಸೂತ್ರವನ್ನು ಅಲ್ಲಗಳೆದು ತಮ್ಮ ನಾನಾತ್ವದ ವೈಯಕ್ತಿಕತೆಯನ್ನು ಘೋಷಿಸಿದ್ದಾರೆ. "This is the positivistic conception of individuality, the conception according to which the individual is constituted as such by being cut off from everything else by a sharp boundary distinguishing clearly what is within it from what is outside. The inner and the outer are mutually exclusive. This is the kind of individuality which is possessed by a stone or any other material body.

It is the primary characteristic of the world of nature, and distinguishes that from the world of mind, where individuality consists not of separateness from environment but of the power to absorb environment to itself—ಇದು ಪಾಶ್ಚಾತ್ಯ ಅನುಭವವಾದಿಗಳು ಹೇಳುವ ವ್ಯಕ್ತಿತ್ವದ ಕಲ್ಪನೆ. ಈ ವ್ಯಕ್ತಿತ್ವವು ಹೊರಗಿನ ಎಲ್ಲ ಪದಾರ್ಥಗಳಿಂದಲೂ ತಾನು ಪ್ರತ್ಯೇಕವೆಂದು ತೋರುವಂತೆ ಸ್ಪಷ್ಟವಾದ ಗಡಿಗೆರೆಯನ್ನು ಹೊಂದಿರುತ್ತದೆ; ಇದರ ಒಳಗು-ಹೊರಗುಗಳು ಪರಸ್ಪರ ವಿನಾಭಾವಿಗಳು. ಇದು ಕಲ್ಲಿನಂಥ ಪ್ರವೃತ್ತಿರುವ ವ್ಯಕ್ತಿತ್ವ. ಇದು ಜಡಪ್ರಕೃತಿಯ ಪ್ರಾಥಮಿಕ ಲಕ್ಷಣ. ಉಕ್ತಲಕ್ಷಣವು ಜಡಸೃಷ್ಟಿಯನ್ನು (ಜೀವ) ಮನಸ್ಸೃಷ್ಟಿಯಿಂದ ಪ್ರತ್ಯೇಕಿಸುತ್ತದೆ. ಮನಸ್ಸು ಈ ಪ್ರಕಾರ ತನ್ನ ಆವರಣದಿಂದ ಭಿನ್ನವಾಗಿರುವುದಿಲ್ಲ. ಮನಃಪ್ರಪಂಚದಲ್ಲಿ ವ್ಯಕ್ತಿತ್ವವೆಂದರೆ ತನ್ನ ಸುತ್ತಲಿನ ಆವರಣವನ್ನು ತನ್ನೊಳಗೆ ಹೀರಿಕೊಳ್ಳುವ ಶಕ್ತಿಯೆಂದರ್ಥ (The Idea of History by R G. Collingwood, P. 162)—ಎಂಬ ಕಾಲಿಂಗ್‌ವುಡ್ಡರ ಪ್ರತ್ಯುತ್ತರವನ್ನು ಟೋಡರು ನೋಡಿಲ್ಲ. ಟಾಯ್ನಬೀಗಳೂ ಇದೇ ಅಪಕಲ್ಪನೆಯನ್ನು ಆಧರಿಸಿದವರು. ಅವರ ಖಂಡನೆ ಮಾಡುವ ಕಾಲಿಂಗ್‌ವುಡ್ಡರು—He regards history as a mere spectacle, something consisting of facts observed and recorded by the historian, phenomena presented externally to his gaze, not experiences into which he must enter and which he must make his own—ಟಾಯ್ನಬೀಗಳು ಇತಿಹಾಸವು ಇತಿಹಾಸಕಾರನು ಕಂಡು ದಾಖಲೆಮಾಡಿದ ಸಂಗತಿಗಳ ಬರಿ ಒಂದು ದೃಶ್ಯ, ಅವನ ಕಣ್ಣ ಮೇಲೆ ಬಿದ್ದ ಹೊರಗಿನ ಒಂದು ಘಟನೆ; ಅದೆಂದೂ ಆತ ಒಳಹೊಕ್ಕು ತನ್ನದನ್ನಾಗಿ ಮಾಡಿಕೊಂಡ ಅನುಭವಗಳ ಸ್ವರೂಪದಲ್ಲ ಎಂದಿದ್ದಾರೆ" ಎಂದು ಉದ್ಗರಿಸಿದ್ದಕ್ಕೆ ಸ್ವಾರಸ್ಯವಿದೆ. ಸಾತ್ತ್ವಿಕವಾಗದ ಜ್ಞಾನವು ಸರ್ವತ್ರ ಅಪ್ರಮಾಣ. ಪ್ರತಿಯೊಂದು ಜಡ ಪದಾರ್ಥಕ್ಕೂ ಅದರ ಭಾವ (Idea, thought) ಎಂಬ ಆತ್ಮವಿದೆ. ಅದನ್ನು ಚೆನ್ನಾಗಿ ಅರಿತುಕೊಳ್ಳ

ಹೋದವನು ಅವರ **ಭಾವದಲ್ಲಿ** ಐಕ್ಯವಾಗುತ್ತಾನಲ್ಲದೆ ಅದರಲ್ಲಲ್ಲ; ವಿಜ್ಞಾನಿಯಾದವರೂ ಅವರ ಭಾವದ ಅಂಶವನ್ನಲ್ಲದೆ **ಅದನ್ನು** ಅರಿತು ಕೊಳ್ಳುವುದಿಲ್ಲ—ಅದು ಅವನ ಮನಸ್ಸಿನಿಂದ ಹೊರಗೇ ಇರುತ್ತದೆ ಮತ್ತು ಅವನ ಮನಸ್ಸು ಅದರಿಂದ ಭಿನ್ನವಾಗಿ ಅವನ ತಲೆಯೊಳಗೇ ಇರುತ್ತದೆ. ಕ್ರಿಯಾದ್ವೈತವು ಅವ್ಯವಹಾರ್ಯ; ಭಾವಾದ್ವೈತವೇ ಜ್ಞಾನ-ಪ್ರಕ್ರಿಯೆಯ ಮೂಲಾಧಾರ. ಆತ್ಮವೊಂದು ಭಾವ, ಬ್ರಹ್ಮವೊಂದು ಭಾವ--ಭಾವತ್ವದ ಸಾಧಾರಣತೆ ಅವುಗಳ ಐಕ್ಯದ ಸಾಧ್ಯತೆಗೆ ಆಧಾರ; ವಾಸ್ತವಿಕವಾಗಿ, ನಿತ್ಯೈಕ್ಯವುಳ್ಳ ಅವುಗಳ ಭಾವೇತರ ಅಂಶಗಳಲ್ಲಿಯ ಭೇದಗಳಷ್ಟನ್ನೇ ಪರಮ ಸತ್ಯವೆಂದು ಭಾವಿಸಿದ ಮಾನವನು ಆ ತಿಳಿ-ವಳಿಕೆಯನ್ನು ಬಿಟ್ಟು ಅವುಗಳ ಭಾವರೂಪದ ನಿತ್ಯೈಕ್ಯವನ್ನು ಸಹಜ ಸಮಾಧಿ ಶಕ್ತಿಯಿಂದ ಹೀರಿಕೊಳ್ಳುವುದೇ ಮೋಕ್ಷ.

"ವಿಚಾರಮಾಡುವ ಕ್ರಿಯೆಯು ವ್ಯಕ್ತಿನಿಷ್ಠವೂ ಹೌದು, ವಸ್ತುನಿಷ್ಠವೂ ಹೌದು. ಅದು ವಿಚಾರಣ (ಆಲೋಚನ) ಕ್ರಿಯೆಯಷ್ಟೇ ಅಲ್ಲ, ವಿಚಾರಣೀಯ ಪದಾರ್ಥವೂ ಆಗಿದೆ. ಆದರೆ- ಅದು ಕೇವಲ ವಸ್ತುನಿಷ್ಠವಾಗಿರದುದರಿಂದ ಅದನ್ನು ವಿಶಿಷ್ಟರೀತಿಯಿಂದ ವಿಚಾರಕ್ಕೆ ಗುರಿಪಡಿಸಬೇಕಾಗುತ್ತದೆ. ಆ ವೈಶಿಷ್ಟ್ಯ ಅದಕ್ಕೆ ಅನನ್ಯ. ವಿಚಾರಪರವಾದ ಮನಸ್ಸಿನೆದುರು ಸಿದ್ಧರೂಪದಲ್ಲಿ ಅದನ್ನು ತಂದು ನಿಲ್ಲಿಸಲು ಸಾಧ್ಯವಿಲ್ಲ; ಆ ಮನದಿಂದ ಅದು ಪೂರ್ಣ ಸ್ವತಂತ್ರವಾಗಿರುವಂತೆ ಕಂಡು ಹಿಡಿಯಲ್ಪಟ್ಟ ಅಂಥ ಸ್ವಾತಂತ್ರ್ಯದ ಅವಸ್ಥೆಯಲ್ಲಿ ಅದು ಇರುವಂತೆಯೇ ಅದನ್ನು ಅಭ್ಯಸಿಸಲು ಸಾಧ್ಯವಿಲ್ಲ. ವ್ಯಕ್ತಿನಿಷ್ಠತೆಯನ್ನು ಹೊರಗಿಟ್ಟ ವಸ್ತುನಿಷ್ಠತೆಯ ದೃಷ್ಟಿಯಿಂದ ಅದನ್ನೆಂದೂ ಅಭ್ಯಸಿಸಲು ಸಾಧ್ಯವಿಲ್ಲ. ಅದನ್ನು ಅದು ಇರುವಂತೆಯೇ ಒಂದು ಕ್ರಿಯೆ ಎಂದು ತಿಳಿದೇ ಅಭ್ಯಸಿಸ ಬೇಕಾಗುತ್ತದೆ. ಆ ಕ್ರಿಯೆಯು (ಸಂಪೂರ್ಣವಾಗಿ ಅಲ್ಲದಿದ್ದರೂ) ವ್ಯಕ್ತಿನಿಷ್ಠತೆ ಅಥವಾ ಅನುಭವ ಎನ್ನಿಸಿರುವುದರಿಂದ ಅದನ್ನು ಅದರ ವ್ಯಕ್ತಿನಿಷ್ಠ ಇರವಿನಲ್ಲೇ ಅಭ್ಯಸಿಸಬೇಕಾಗುತ್ತದೆ—ಅಂದರೆ ತನ್ನದೇ ಕ್ರಿಯೆಯಾದ ವಿಚಾರವನ್ನು ವಿಚಾರಿಯು ಅಭ್ಯಸಿಸಬೇಕಾಗುತ್ತದೆ. ಈ ಅಭ್ಯಾ

ಸವು ಕೇವಲ ಅನುಭವ ಅಥವಾ ಜಾಗರ ಇಲ್ಲವೆ ಸ್ವಜಾಗರವಲ್ಲ; ಇದು ಸ್ವಜ್ಞಾನ (Self-Knowledge). ಹೀಗೆ ವಿಚಾರಕ್ರಿಯೆಯು ವ್ಯಕ್ತಿನಿಷ್ಠ (ವೈಯಕ್ತಿಕ) ವಾಗುವುದರಲ್ಲಿ ತನ್ನ ವಸ್ತುನಿಷ್ಠತೆಯನ್ನು ಕಳೆದುಕೊಳ್ಳದು; ಇದು ಸ್ವಜ್ಞಾನದ ವಿಷಯ; ಶುದ್ಧ ಜಾಗರದಿಂದ ಇದು ಭಿನ್ನವಾದ ಸ್ವಜಾಗರದಿಂದ ಪ್ರತ್ಯೇಕವಾಗಿರುತ್ತದೆ; ಈ ಸ್ವಜ್ಞಾನವು ಒಬ್ಬನು ತನ್ನ ವಿಚಾರವನ್ನು ವಿಮರ್ಶಿಸಿ ಅರಿತುಕೊಳ್ಳುವುದೇ ಆಗಿದೆ- ಇದೆಂದೂ 'ಇದು ಬರಿ ತನ್ನ ಆಲೋಚನೆ' ಎಂಬಷ್ಟೇ ಮಟ್ಟದ ಜಾಗರವಲ್ಲ"- ಎಂಬ (The Idea of History, P. 292) ವಿವರಣೆಯು Solipsism ಅಹವಾದಿ ಅಹಮಾಂತವೆಂದು ಮನಃಕ್ರಿಯೆಗಳ ಅಗ್ರಾಹ್ಯತೆಯನ್ನು (ಅವಾಸ್ತವಿಕತೆಯನ್ನು, ಅವೈಜ್ಞಾನಿಕತೆಯನ್ನು) ಸಾರುವ ಆತ್ಮಜ್ಞಾನ ವಿರೋಧಿಗಳಿಗೆ ತಕ್ಕ ಉತ್ತರವಾಗಿದೆ.

ಮಾಯೆ, ಅಮಾಯೆ

ಒಂದು ವಿಚಾರವು ಶಂಕರಾಚಾರ್ಯರ ತಲೆಯಲ್ಲಿದ್ದಿರಬಹುದು; ಅದೇ ವಿಚಾರವು ನನ್ನ ತಲೆಯಲ್ಲೂ ಇರಬಲ್ಲದು; ಆವರಣ ಬೇರಾದ್ದರಿಂದ ಆಲೋಚನೆ ಬೇರೆಯಾಗಲೇ ಬೇಕೆಂಬ ನಿಯಮವಿಲ್ಲ. ಅವರ ಆಲೋಚನೆಯನ್ನು ನಾನು Re-enact ಪುನಃ ರಂಗತಾಲೀಮು ಮಾಡಬಲ್ಲೆ. ಆದುದರಿಂದ ಉಕ್ತ ವಿಚಾರದ ಏಕತ್ವಕ್ಕೆ ಭಂಗ ಉಂಟಾಗದು (cf:I H-P 301) ಹೀಗೆ ಬ್ರಹ್ಮವನ್ನು ಪ್ರನಾರಚಿಸಿಕೊಳ್ಳುವುದೇ ಬ್ರಹ್ಮಸಾಕ್ಷಾತ್ಕಾರವೆಂದರೆ ಏನೆಂಬ ಕಲ್ಪನೆಯನ್ನು ಕೊಡಬಲ್ಲದು. ಸ್ಮೃತಿ-ವಿಸ್ಮೃತಿಗಳ ಮೂಲಕ ಹರಿದು ಹೋಗುವ ವಿಚಾರವೊಂದು ತನ್ನ ಸ್ವರೂಪೈಕ್ಯವನ್ನು ಉಳಿಸಿಕೊಳ್ಳಬಲ್ಲದು. ಬದ್ಧತ್ವದಲ್ಲಿ ಅಜಾಗರಿತವಾದ ಭೂತವಸ್ತುಸ್ವರೂಪದ ಬ್ರಹ್ಮವನ್ನು ಮುಕ್ತತ್ವದಲ್ಲಿ ಜಾಗರಿಸಿಕೊಳ್ಳಬಹುದು. ಈ ಜಾಗರಣೆ ಕೇವಲ ವಿಚಾರದಲ್ಲಿ, ಜೀವಂತ ವಿಚಾರ ಅರ್ಥಾತ್ ಅವೈಯಕ್ತಿಕ ಭಾವನಾದಲ್ಲಿ ಪರಿಪುಷ್ಟವಾಗುವುದು. ವಿಚಾರದಂತೆಯೇ ವಿಚಾರಯುಕ್ತ ಭಾವನಾತ್ಮಕ ಅನುಭವವನ್ನೂ ಪುನಃ ಅನುಭವಿಸಲು ಬರುವುದರಿಂದ ಅದೂ ಅಮರ.

ಜಗದ್ರೂಪದ ಮಾಯಾ ಪ್ರವಾಹವು ಅನಾದಿ, ಅನಂತ; ಬ್ರಹ್ಮವೂ ಅನಾದಿ, ಅನಂತ; ಆದರೆ ಒಂದಕ್ಕೆ ಪರಿವರ್ತನ ಸ್ವರೂಪದ ಪ್ರವಾಹಧರ್ಮವಿದ್ದರೆ, ಇನ್ನೊಂದಕ್ಕೆ ಅಪರಿವರ್ತನ ರೂಪದ ಅಚಲಧರ್ಮವಿದೆ. ಬದ್ಧತೆ ಇರುವುದು ಪರಿವರ್ತನ ಸ್ವರೂಪದಲ್ಲಿ ಲೀನವಾಗಿರುವುದರಲ್ಲಿ; ಮುಕ್ತತೆ ಇರುವುದು ಅಚಲ ಸ್ವರೂಪದಲ್ಲಿ ಒಂದಾಗಿರುವುದರಲ್ಲಿ. ಚಲಸಾತ್ಮ್ಯವು ಅವಲಂಬನೀಯವಲ್ಲ; ಏಕೆಂದರೆ ಚಲಪದಾರ್ಥವು ರೂಪಾಂತರ, ಅರ್ಥಾಂತರಗಳಿಗೆಡೆಗೊಡುವ ಸ್ವಭಾವವುಳ್ಳದ್ದು— ಅಚಲಪದಾರ್ಥವು ಏಕರೂಪಿ ಮತ್ತು ಏಕಾರ್ಥಕ; ಆದ್ದರಿಂದ ಅದು ಸರ್ವದಾ ಅವಲಂಬನೀಯ. ಮಾಯಾಮಯತೆ ಬೇಡವಾದವರು ಪ್ರಯತ್ನಿಸಿ ಬ್ರಹ್ಮಮಯರಾಗಬಹುದು- ಎಂಬುದೇ ಮಾನವ ಸ್ವಾತಂತ್ರ್ಯದ ಸಾರ— ವ್ಯಕ್ತಿನಿಷ್ಠತೆ ಬೇಡವಾದವರು ವಸ್ತುನಿಷ್ಠತೆಗೆ ಹೇಗೆ ಹೋಗಲು ಸ್ವತಂತ್ರರೋ ಹಾಗೆ: ಇದರ ತಿರುಗು ಮುರುಗೂ ಸುಲಭ ಸಾಧ್ಯ. ಬ್ರಹ್ಮಕ್ಕೆ ಮಾಯೆ ಮಿಥ್ಯೆ, ಅರ್ಥಾತ್ ಅನವಲಂಬನೀಯ, ಅರ್ಥಹೀನ; ಮಾಯೆಗೆ ಬ್ರಹ್ಮವು ಮಿಥ್ಯೆ, ಅಂದರೆ ಅಜ್ಞಾತ, ದುಷ್ಕಲ್ಪನೀಯ. ಮಾಯೆಗೆ ಮಾಯೆ ಅನಿರ್ವಚನೀಯ; ಬ್ರಹ್ಮಕ್ಕೆ ಬ್ರಹ್ಮ ಅನಿರ್ವಚನೀಯವಲ್ಲ. ಮಾಯೆಗೆ ಆತ್ಮವೇ ಇಲ್ಲದುದರಿಂದ ಆತ್ಮಜ್ಞಾನವಿಲ್ಲ; ಬ್ರಹ್ಮವೇ ಆತ್ಮವಾಗಿರುವುದರಿಂದ ಅದಕ್ಕೆ ಆತ್ಮಜ್ಞಾನವಿದೆ. ಬ್ರಹ್ಮದ ಅನೇಕ ಜೀವಾತ್ಮಕತೆಯೂ ಜಡಾತ್ಮಕತೆಯೂ ಮಾಯೆ, ಅಧ್ಯಾಸ, ಆಭಾಸ; ಒಂದೊಂದು ಜೀವದ ಆತ್ಮಾನುಭವವೂ ಬ್ರಹ್ಮಾನುಭವ, ಪರಮಾರ್ಥ, ಪರಮಸತ್ಯ. ಮಾಯೆಯನ್ನು ಬ್ರಹ್ಮವೆಂದೂ ಬ್ರಹ್ಮವನ್ನು ಮಾಯೆಯೆಂದೂ ತಿಳಿಯುವುದು ದುರರ್ಥಗಳಲ್ಲಿ ಒಂದನ್ನು ಇನ್ನೊಂದೆಂದು ಪರಿಗಣಿಸುವುದಕ್ಕೆ ಸರಿಸಮ. ಬ್ರಹ್ಮಕ್ಕೆ ಮಾಯೆ ಅರ್ಥವಲ್ಲ, ಮಾಯೆಗೆ ಬ್ರಹ್ಮ ಅರ್ಥ (ಪ್ರಯೋಜನ, ಗುರಿ, ಉದ್ದೇಶ, ಜ್ಞೇಯ); ಬ್ರಹ್ಮೇತರವಾದುದೆಲ್ಲ ಮಾಯೆ, ನಿಸ್ಸಾರ.

ಬ್ರಹ್ಮಾನುಭವರಹಿತವಾದ ಜೀವ ಕೋಟಿಯು ವ್ಯಾವಹಾರಿಕವಾದುದು, ಮಾಯಾಮಯವಾದುದು. ಆ ಮಾಯೆಯಲ್ಲಿ ಬ್ರಹ್ಮಾನುಕೂಲ ಮಾಯೆಯು Progressive ಪ್ರಗತಿಶೀಲ; ಬ್ರಹ್ಮಪ್ರತಿಕೂಲ ಮಾಯೆಯು...

ಅಪ್ರಗತಿಶೀಲ. ಒಂದು ವಿದ್ಯೆಯಾದರೆ ಇನ್ನೊಂದು ಅವಿದ್ಯೆ. ವಿದ್ಯೆಯಲ್ಲಿ ಮನಸ್, ಬುದ್ಧಿ, ಅಹಂಕಾರ, ಚಿತ್ತ, ಇಂದ್ರಿಯ ವಿಷಯಗಳಾವುವೂ ಆತ್ಮನಂತೆ ಅಪರಿವರ್ತನೀಯವಾದವುಗಳಲ್ಲ ಎಂಬ ಅನುಭವವು ಕ್ರಮಶಃ ತಲೆದೋರುತ್ತ ಹೋಗುತ್ತದೆ. ಅಂಥ ವಿದ್ಯಾಭ್ಯಾಸಕ್ಕೆ ಸಾಧನ ಚತುಷ್ಟಯವು ಬುನಾದಿ ಶಿಕ್ಷಣ, ಪ್ರಾಥಮಿಕ ಶಿಕ್ಷಣ. ಲೋಕದಲ್ಲಿ ಸಾಮಾಜಿಕ, ರಾಜಕೀಯ, ಆರ್ಥಿಕ ನ್ಯಾಯದ ಶಕ್ಯವಿರುವ ಅತ್ಯಧಿಕಾಂಶವು ಅನುಭವಕ್ಕೆ ಬರಬೇಕಾದರೆ ಪ್ರತಿ ವ್ಯಕ್ತಿಯೂ ಉಕ್ತ ನಾಲ್ಕು ಸಾಧನ ಗಳಲ್ಲಿ ಪ್ರಥಮವೆನ್ನಿಸಿರುವ ಶಮ, ದಮ, ಉಪರತಿ, ತಿತಿಕ್ಷೆ, ಶ್ರದ್ಧೆ, ಸಮಾಧಿ (ಸಮಾಧಾನ) ಗಳೆಂಬ + ಷಡ್ಗುಣಗಳನ್ನು ಅಳವಡಿಸಿಕೊಳ್ಳಲು ಕಲಿಯಬೇಕು. ಇಂಥ ಗುಣತ್ವವು ಪ್ರತಿಪ್ರಜೆಯಲ್ಲೂ ಬೆಳೆಯುವಂತೆ ನೋಡಿಕೊಳ್ಳುವುದೇ ಸುರಾಜ್ಯಭಾರ.

+ ಶಮನ = Appeasing, soothing, conquering, alleniation; calmness; End, stop, destruction; Hurting, destroying = **Satisfaction of mind.** ದಮನ = Taming; Becoming Passionless; Punishing; killing = **self-restraint.** ಉಪರತಿ = ceasing; Dying; Freeing from sex-consciousness; Becom-unritualistic = **Giving up of selfish desires** for possessing and using other things and persons at their cost. ತಿತಿಕ್ಷೆ= Endurance; patience; resignation = **Forbearance.** ಶ್ರದ್ಧೆ= **Faith** in the possibility of attaining the perfect changeless state. ಸಮಾಧಾನ = **Fixing the mind** on that state under all circumstances gradually to a greater and greater degree.

ಅಚಲಭಾವವನ್ನು ಅಳವಡಿಸಿಕೊಳ್ಳುತ್ತ ಹೋಗಲು ಅಚಲ ಪದಾರ್ಥ ಅನವಲಂಬನೀಯವೆಂಬ ಶ್ರದ್ಧೆ ಬೇಕು; ಅದಕ್ಕೆ ಚಲಪದಾರ್ಥಗಳ ಆತ್ಯಂತಿಕ ಅನ-ವಲಂಬನೀಯತೆಯನ್ನರಿತು ಅವುಗಳ ಬಗ್ಗೆ ಆಸೆ ಕಡಿಮೆಯಾಗಬೇಕು; ಹಾಗಾಗಲು ಅಹಂಕಾರದ ನಿಗ್ರಹವನ್ನು ಕಲಿಯಬೇಕು; ಆ ಕಲಿಕೆಗೆ ಮಮಕಾರವನ್ನು ಬಿಡುವುದು ಅಗತ್ಯ.

ರಾಜಕೀಯ ಸಾಧನ

ಶಮ ಸಾಧನೆಗೆ ಮುಮುಕಾರ ಹೋಗಬೇಕು. ಅದಕ್ಕೆ ಆರ್ಥಿಕ ವಿಷಮತೆ ಕಡಿಮೆಯಾಗಬೇಕು—ಅತ್ಯಂತ ದುರ್ಭಾಗ್ಯ ಕನಿಷ್ಠಾವಸ್ಥೆಗೆ ಅದು ಮುಟ್ಟಬೇಕು. ಹಾಗಾಗಲು ಗಾಂಧೀಜಿಯವರ ವಿಶ್ವಸ್ತ್ರತೆಯ ಸಿದ್ಧಾಂತವನ್ನು **ಕಾಯಿದೆ ಬದ್ಧವಾಗಿ** ಜಾರಿಗೆ ತರಬೇಕು. ಅಂತು ಜಾರಿಗೆ ತರಲು ಯೋಗ್ಯವಾದ ಅಸೈನಿಕ ಅಥವಾ ಸೈನಿಕ ಸರ್ವಾಧಿಕಾರಿ ಮಂಡಲ ಅಧಿಕಾರ ವಹಿಸಿಕೊಳ್ಳಬೇಕು; ಹಾಗೆ ಅಧಿಕಾರ ವಹಿಸಿ ಜನರಲ್ಲಿ ಶಮಾದಿಗುಣಗಳು ಬೆಳೆಯುವಂತಹ ವಿಚಾರ-ಆಚಾರಗಳನ್ನು ಸರಿಯಾಗಿ ಇಟ್ಟುಕೊಂಡ ಶಿಕ್ಷಣ ಪ್ರಸಾರ ನಡೆಯಬೇಕು. ಅಂಥ ವ್ಯವಸ್ಥೆಗಾಗಿ ಜನರು ಆಸೆ ಪಡುವಷ್ಟು ಸಾಂಸ್ಕೃತಿಕ ಉನ್ನತಿ (ವಿಚಾರ ಪ್ರಬೋಧ) ಉಂಟಾಗಬೇಕು. ಹಾಗಾಗುವುದು ಈಶ್ವರೇಚ್ಛೆಯಿಂದ. ಅದಕ್ಕಾಗಿ ತತ್ತ್ವಜ್ಞರು ಸರ್ವದಾ ಪ್ರಚ್ಛನ್ನವಾಗಿಯೂ ಪ್ರಕಟವಾಗಿಯೂ ಈಶ್ವರ ಪ್ರಾರ್ಥನೆಯನ್ನು ಮಾಡುತ್ತಿರಬೇಕು, ತತ್ತ್ವಪ್ರಚಾರನಿರತರಾಗಿರಬೇಕು. ತತ್ವಜ್ಞಾನಾನ್ನಿಶ್ರೇಯಸಾಧಿಗಮಃ!

ವ್ಯವಹಾರಕ್ಕೆ ವೇದಾಂತವು ತರ್ಕಾನ್ವಿತ ಆಧಾರವಾದಲ್ಲದೆ ಅದು ಶುದ್ಧವಾಗದು. ವೇದಾಂತವು ಮಾನಸ ಶಾಸ್ತ್ರೀಯ ತರ್ಕವಿಲ್ಲದೆ ಸ್ಪಷ್ಟವಾಗದು. ಅದು ಸ್ಪಷ್ಟವಾದ ಹೊರತು ಅದರಲ್ಲಿ ಶ್ರದ್ಧೆಯುಂಟಾಗದು. ಆ ಶ್ರದ್ಧೆಯಿಲ್ಲದೆ ತದನುಗುಣವಾದ ಆಚಾರಪರತೆ ಬೆಳೆಯದು. ಅಂಥ ಆಚಾರವಂತಿಕೆಯೇ ಧರ್ಮ, ನೀತಿ. ಧರ್ಮದ ಪ್ರಕಾರ ವಿಷಯಭೋಗ ನಡೆಸುವುದೇ ಸರ್ವೋದಯ ಅಥವಾ ಸಮಾಜವಾದೀಯ ಸಮಾಜ. ಅದಕ್ಕಿಂತ ಹೆಚ್ಚಿನ ಸಾಮಾಜಿಕ—ವೈಯಕ್ತಿಕ ನ್ಯಾಯ ಇನ್ನೊಂದಿಲ್ಲ. ಅದೇ ಮಾನವತೆ, ಮಾನವೀಯತೆ, ಆತ್ಮಗುಣ ಪ್ರಧಾನವಾದ ಸರ್ವಭೂತ ದಯೆ, ಸರ್ವೋದಯಾಕಾಂಕ್ಷೆ. ಸರ್ವೋದಯದ ಮೂಲಕವೇ ಸ್ವೋದಯವಾಗಬೇಕೆಂಬವರ ಗಣ್ಯತೆ ಸಮಾಜದಲ್ಲಿ ಹೆಚ್ಚುವುದೇ ಸಂಸ್ಕೃತಿ, ಅತ್ಯುಚ್ಚ ನಾಗರಿಕತೆಯ ಆತ್ಮ. ಆಡಳಿತದ ಚತುರೋಪಾಯಗಳೇ ಸರ್ವ

ವ್ಯಕ್ತಿಗಳೂ ಉದಯಾರ್ಹರಾಗುವಂತೆ ಮಾಡಬಲ್ಲದು. ಉಪಾಯೇನ ಹಿ ಯಚ್ಛಕ್ಯಂ ನತಚ್ಛಕ್ಯಂ ಪರಾಕ್ರಮೈಃ!

ಜ್ಞಾನ ಮತ್ತು ಅನುಭವ

ವ್ಯವಹಾರಪ್ರಪಂಚದಲ್ಲಿ ಮಾನವನಿಗೆ ಇಂದ್ರಿಯ ಪ್ರತ್ಯಕ್ಷವೇ ಜ್ಞಾನಾರಂಭ. ಮಾನವನು ಜ್ಞಾತೃ; ಅವನ ಬಹಿರ್ಮುಖವಾದ ಮನಸ್ಸು, ಇಂದ್ರಿಯಗಳು ಜ್ಞಾನಸಾಧನಗಳು ಮತ್ತು ಅವನಿಂದ ಭಿನ್ನವೆಂದು ಅವನು ತಿಳಿಯುವ ಪದಾರ್ಥಗಳೆಲ್ಲವೂ ಜ್ಞೇಯವಿಷಯಗಳು. ಇದು ಸರ್ವಮಾನವ ಶಿಶುಗಳಿಗೂ ಸಾಧಾರಣ, ಸ್ವಾಭಾವಿಕ. ಸ್ವಭಾವವು ದುರತಿಕ್ರಮ, ಅನತಿಕ್ರಮವಲ್ಲ. ಭೇದವು ಇಂಥ ಜ್ಞಾನಕ್ಕೆ ಮೂಲಾಧಾರ. ಆದರೆ ಭೇದವಿರುವುದು ಜ್ಞಾನಕ್ರಿಯೆಯ ಆದಿಯಲ್ಲಿ; ಅದರ ಪ್ರಕ್ರಿಯಾಂತದ ಕೊನೆಯ ಕ್ಷಣದಲ್ಲಿ ಜ್ಞೇಯದೊಡನೆ ತಾದಾತ್ಮ್ಯಸ್ಫುರಣವಾಗುವುದು; ಆಗ ಅದರ ಐಕ್ಯವಾದ ಪೂರ್ಣಜ್ಞಾನ ಲಭಿಸುವುದು. ಉತ್ತರ ಕ್ಷಣದಲ್ಲಿ ಮತ್ತೆ ಜ್ಞಾತೃ-ಜ್ಞೇಯಭೇದ ಉದಯವಾಗಿ ಜ್ಞಾತೃವು ಕೇವಲ ಜ್ಞಾನಸ್ಮೃತಿ ಸಂಪನ್ನವಾದ ಪ್ರತ್ಯೇಕ ವ್ಯಕ್ತಿಯಾದ ಅನುಭವ ಬರುತ್ತದೆ.

ಅನುಭವವು ಅಸ್ತಿತ್ವದ (ಇರವಿನ) ವರ್ತಮಾನಾರ್ಥ ಉಳ್ಳದ್ದು, ಅದರಲ್ಲಿ ಬುದ್ಧಿ-ಭಾವನೆ-ಇಚ್ಛಾಂಶಗಳ ಸಾಮರಸ್ಯವಿರುತ್ತದೆ. ಜ್ಞಾನದ ಕೇವಲ ಬೌದ್ಧಿಕತೆಯು ಭೂತಕಾಲಿಕ ಮತ್ತು ಭವಿಷ್ಯತ್ಕಾಲಿಕವಷ್ಟೇ. ದೇಶ-ಕಾಲಗಳು ಎಲ್ಲ ಪ್ರತ್ಯೇಕತಾಭಾವಗಳಿಗೂ ಆಧಾರಗಳು. ಐಕ್ಯಾನುಭವವು ವಿಷಮಾಧಾನ. ವ್ಯವಹಾರ ಪ್ರಪಂಚದಲ್ಲಿ ಎಲ್ಲವೂ ವಿಷಮಸ್ಥ. ಆದುದರಿಂದ ವ್ಯವಹಾರಿಯು ಯಾವಾಗಲೂ ಸಮಸ್ಥಿತಿಗಾಗಿ ಹೋರಾಡುತ್ತಿರುತ್ತಾನೆ. ಅಪೂರ್ಣವಾದ ವಿಷಮಸ್ಥಿತಿ, ಸಮಸ್ಥಿತಿಗಳಲ್ಲಿ ಅಪೂರ್ಣಜ್ಞಾನಿಯು ಯಾವುದನ್ನಾದರೂ ಯಾವುದಾದರೊಂದು ಕಾರಣದಿಂದ ಸಮಸ್ಥಿತಿಯೆಂದು ಗ್ರಹಿಸುತ್ತಾನೆ, ಅದನ್ನು ಪಡೆಯಲು ಪ್ರಯತ್ನಿಸುತ್ತಾನೆ. ಒಬ್ಬನಿಗೆ ವಿಷಮವೆನ್ನಿಸಿದ್ದು ಕಾರಣಾಂತರಗಳಿಂದ ಇನ್ನೊಬ್ಬನಿಗೆ ಸಮ

ವೆನ್ನಿಸಬಹುದು; ಒಬ್ಬನಿಗೇ ಒಂದು ಅವಸ್ಥೆಯಲ್ಲಿ ಹಾಗೆನ್ನಿಸಿದ್ದು ಅವಸ್ಥಾಂತರದಲ್ಲಿ ಹೀಗೆನ್ನಿಸಬಹುದು. ಸಮಸ್ಥಿತಿಯೇ ಸುಖ, ಸಮಾಧಾನ, ಮುಕ್ತಿ, ಸ್ವಾತಂತ್ರ್ಯ ಎಂಬ ಮೌಲ್ಯ. ಸತ್ಯವೊಂದು ಸಮಸ್ಥಿತಿಯ ವ್ಯವಸ್ಥೆ, ಸೌಂದರ್ಯ-ಔಚಿತ್ಯ-ಉಪಯುಕ್ತತೆಗಳೂ ಹಾಗೆ. ಸ್ಥಿತಿ ಎಂದರೆ ಇರವು; ಅರಿವಿಲ್ಲದ ಇರವು ಅಪೂರ್ಣ, ಅಪೂರ್ಣದೇಶ- ಅಪೂರ್ಣ ಕಾಲಗಳಲ್ಲಿರುವ ಇರವು ಅಪೂರ್ಣ; ಅನುಭವದ ಸರ್ವಾಂಗಗಳಿಂದ ಸಮನ್ವಿತವಾಗದ ಇರವು ಅಪೂರ್ಣ. ಸಮನ್ವಯವು ಸಾಪೇಕ್ಷ ಪೂರ್ಣ, ಸಾಮರಸ್ಯವು ನಿರಪೇಕ್ಷವಾಗಿ ಪೂರ್ಣ; ಅದು ಸಾಮರಸ್ಯಕ್ಕೆ ಪರ್ಯಾಯಾರ್ಥಕ; ಸಾಮರಸ್ಯ=ಐಕ್ಯರಸ್ಯಗಳು ಅಭಿನ್ನ. ಮೊದಲು ಇದ್ದದ್ದು ಏಕವೋ? ಅನೇಕವೋ? ಕೊನೆಗೆ ನಿಲ್ಲುವುದು ಏಕವೋ ಅನೇಕವೋ?- ಎಂಬುದೇ ಚರ್ಚಾವಸ್ತು; ನಿತ್ಯತೆ ಆತ್ಯಂತಿಕವೋ ಅನಿತ್ಯತೆ ಆತ್ಯಂತಿಕವೊ?- ಎಂಬುದೂ ಚರ್ಚಾವಿಷಯ.

ನೈಸರ್ಗಿಕ ಮಾನವನ ಇರುವಿನ ಆದಿ-ಅಂತ್ಯಗಳು ನೈಸರ್ಗಿಕವಾಗಿ ಪ್ರತ್ಯಕ್ಷತಃ ಅವನಿಗೆ ಗೊತ್ತಿರುವುದಿಲ್ಲ, ಅವನ ಅನುಭವಕ್ಕೆ ಸೂಚಿತವಾಗಿಯೂ ಬಂದಿರುವುದಿಲ್ಲ. ಮಾನವನ ಅಹಂ ಹೀಗೆ ಮಧ್ಯಸ್ಥವಾದ ದೇಹಾತ್ಮಭಾವ; ಅದು ಅವನ ಸ್ವ, ಜ್ಞಾತೃ, ಅನುಭೋಕ್ತೃತ್ವ, ಕರ್ತೃತ್ವ ಎನ್ನಿಸಿದ ಮನಃಕೇಂದ್ರ. ತನಗೆ ಮನಸ್ಸಿದೆ ಎಂದು ತಿಳಿದುಕೊಳ್ಳುವ ಮನಸ್ಸು ಇದೆ ಅವನಿಗೆ. ಅದಕ್ಕೆ ವಸ್ತುನಿಷ್ಠವಾದ ಪ್ರತ್ಯಕ್ಷ ಪ್ರಮಾಣವಿಲ್ಲ. ಪ್ರಮಾಣ ಅಗತ್ಯ ಪ್ರಮಿತಿಗೆ ಎಂಬ ಜ್ಞಾನವೂ ಹಾಗೇ ಸ್ವತಃಸಿದ್ಧ. ಸತ್ಯವೊಂದು, ಅದಕ್ಕೆ ಸಾಕ್ಷಿ ಇನ್ನೊಂದು-ಎಂಬುದೇ ವ್ಯವಹಾರ. ಸತ್ಯವೇ ಸಾಕ್ಷಿಯಾಗುವುದು ಪರಮಾರ್ಥ- ಸತ್ಯವೇ ಜ್ಞಾನ, ಅನಂತ, ಸತ್, ಚಿತ್, ಆನಂದ ವ್ಯವಹಾರದಲ್ಲಿ ಜ್ಞಾತೃ, ಜ್ಞೇಯ, ಜ್ಞಾನ ಪ್ರಮಾಣ, ಜ್ಞಾನ ಪ್ರಕ್ರಿಯೆಗಳೆಲ್ಲವೂ ಪ್ರತ್ಯೇಕವೆಂದು ಗಣಿತವಾಗಿದೆ. ಈ ಗಣನೆಯೊಂದು ವ್ಯವಹಾರಕ್ಕೆ ಅನಿವಾರ್ಯವಾದ ಕಲ್ಪನೆ. ಪ್ರತ್ಯೇಕತೆಯು ಅಪೂರ್ಣತೆ (ಸಾಪೇಕ್ಷತೆ)ಯನ್ನು ಅಲಕ್ಷಿಸಿದರೆ ಮಾತ್ರ ವ್ಯವಹಾರವು ಸಾಧ್ಯ, ವ್ಯಾವಹಾರಿಕ ತರ್ಕವು ಸಾಧ್ಯ. ಇಂಥ ಅಲಕ್ಷ್ಯಗಳ ಅನುಕೂಲಸಿಂಧು

ನ್ಯಾಯವನ್ನು 'ವ್ಯಾವಹಾರ', 'ವಿಜ್ಞಾನ' ಎಂದು ಮುಂತಾಗಿ ಕರೆಯುವುದು ಸಂಪ್ರದಾಯ. All Knowing or experiencing is selective under natural human conditions- ಸ್ವಾಭಾವಿಕವಾದ ಮಾನುಷ ಸಂನಿವೇಶಗಳಲ್ಲಿ ತಿಳಿಯುವುದು, ಅನುಭವಿಸುವುದು ಎಂಬೀ ಎಲ್ಲವೂ ಆಯ್ಕೆಯನ್ನವಲಂಬಿಸಿವೆ. ಆ ಆಯ್ಕೆಯು ಅಜ್ಞಾತ, ಅರ್ಧಜ್ಞಾತ ಅಥವಾ ಪೂರ್ಣಜ್ಞಾತ ಎನ್ನಿಸುವುದು ವ್ಯವಹಾರತರ್ಕದಿಂದ ಸಿದ್ಧ. ಲೌಕಿಕವಾದ ಪ್ರತ್ಯಕ್ಷ-ಪರೋಕ್ಷಜ್ಞಾನಗಳೆರಡನ್ನೂ ಈ ನಿಯಮವು ಬಂಧಿಸಿದೆ. ಜಗತ್ತಿನ ಪ್ರತಿಯೊಂದೂ ಕಾರ್ಯಪುಂಜ ಅಥವಾ ಗುಣಪುಂಜ ಎಂದು ಇಂದಿನ ವಿಜ್ಞಾನ ಹೇಳುವಾಗ ವ್ಯಾಕರಣದ ಪದವರ್ಗಗಳಲ್ಲಿ ಕ್ರಿಯಾಪದ-ವಿಶೇಷಣಗಳನ್ನು ಬಿಟ್ಟರೆ, ಉಳಿದಯಾವುದಕ್ಕೂ ಆತ್ಯಂತಿಕ ಲೋಕಸತ್ಯತೆ ಇಲ್ಲವೆಂದಾಯಿತು. ಉಕ್ತ ಕರ್ಮಪುಂಜದ ಅನುಭವವು ಪೂರ್ಣತರ ಭಾವಾತ್ಮಕ, ಜ್ಞಾನವು ಅಪೂರ್ಣತರ. ಭಾವಾತ್ಮಕ (ಅಮೂರ್ತ Abstract) ಜ್ಞಾನದ ದೃಷ್ಟಿಯಿಂದ ಅದನ್ನು ಗುಣಪುಂಜವೆಂದು ಎಣಿಸುವುದು ಹೆಚ್ಚು ಸ್ವಾಭಾವಿಕ. ಅನುಭವದ ಅಥವಾ ಜ್ಞಾನದ ಇಂದ್ರಿಯಾದಿ ಸಾಧನಗಳು ಮೂರ್ತವಿರಲಿ, ಅಮೂರ್ತವಿರಲಿ- ಪರಿಮಿತ ಶಕ್ತಿ ಸಂಪನ್ನವಾಗಿರುವುದರಿಂದ ಅವು ದತ್ತ ಕಾರ್ಯ ಅಥವಾ ಗುಣಪುಂಜ (Bundle of qualities) ದೊಂದರ ಕೆಲವೇ ಗುಣ ಭಾವಗಳನ್ನು ಗ್ರಹಿಸಬಲ್ಲವಲ್ಲದೆ, ಎಲ್ಲ ಗುಣ ಭಾವಗಳನ್ನೂ ಅಲ್ಲ. ಈ ನಿಯಮವು ಪ್ರತ್ಯಕ್ಷಜ್ಞಾನದ ಮತ್ತು ಅದನ್ನಾಧರಿಸುವ ಅನುಮಿತಿ-ಉಪಮಿತಿಜ್ಞಾನಗಳ ಅಪೂರ್ಣತೆಯನ್ನು, ಅಸಮಗ್ರತೆಯನ್ನು ಎತ್ತಿ ಹೇಳುತ್ತದೆ. All selection involves exclusion- ಎಲ್ಲ ವಿಧದ ಆಯ್ಕೆಯೂ ಕೆಲ ಅಂಶಗಳನ್ನು ಹೊರಗೆ ತೆಗೆದಿಡುತ್ತದೆ- ಕವಿ, ವಿಜ್ಞಾನಿ, ಸಾಮಾನ್ಯರೆಲ್ಲರ ಜ್ಞಾನಪ್ರಕ್ರಿಯೆಯಲ್ಲೂ ಆಯ್ಕೆಯು ಅನಿವಾರ್ಯನಿಯಮವೆಂಬುದು ಮಾನಸ ಶಾಸ್ತ್ರೀಯ. ಆದುದರಿಂದ ಲೌಕಿಕನಾವನೂ ಒಂದರಲ್ಲಿ ವ್ಯಾವಹಾರಿಕ ಸತ್ಯವಾಗಿ ಇರುವ ಇಲ್ಲವನ್ನು ಹೇಳಲಾರ; ಎಲ್ಲರೂ ಮುಕ್ಕಾಲು ವ್ಯವಹಾರಿಗಳು (Empiricists) ಈ ದೃಷ್ಟಿಯಿಂದ ಪ್ರತ್ಯಕ್ಷಾನುಮಾನಗಳನ್ನಾಧರಿಸಿದ ವಿಚಾರವೆಲ್ಲವೂ

‘ಕಾಲಿಲ್ಲದ ಕತೆ’ ಯಾಗುತ್ತವೆ. ಆದರಿಂದ ಕನಕನ ಮುಂಡಿಗೆಯೊಂದರಲ್ಲಿ “ಕಾಲಿಲ್ಲದಾತನು ಮರವನ್ನು ಹತ್ತಿದ ತಂದಾರ್ಯತಾನ” ಎಂದು ಉದ್ಗರಿಸಲಾಗಿದೆ. ಶ್ರೀ ಶಂಕರಾಚಾರ್ಯರು “ತರ್ಕೋಽಪ್ರತಿಷ್ಠಃ” ಎಂದು ಧರ್ಮರಾಯನಂತೆ ಘೋಷಿಸಿದ್ದು ಈ ಅಂಶವನ್ನು ಗಮನಿಸಿಯೇ !

ಸಾಧಕ ಧರ್ಮ

ಪರಮಾರ್ಥ ವಿಷಯದಲ್ಲಿ ಕಪಟ ಸಂನ್ಯಾಸಿಗಳ ಮಾತಿನಲ್ಲಿ ಶ್ರದ್ಧೆ ಇಡುವವರಂತೆ ಅಪೂರ್ಣಜ್ಞರಾದ ವಿಜ್ಞಾನಸಿದ್ಧ ನಾನಾತ್ವವಾದಿಗಳ ಮಾತಿನಲ್ಲಿ ಶ್ರದ್ಧೆಯಿಡುವುದೂ ಉಚ್ಚಸಾಂಸ್ಕೃತಿಕ ಮೌಲ್ಯಗಳ ದೃಷ್ಟಿಯಿಂದ ಅತ್ಯಂತ ಹಾನಿಕರ; ಆದರೆ ಯಾರನ್ನೂ ಯಾವುದರಲ್ಲೂ ನಂಬದ ಸಂಶಯಾತ್ಮಕತೆ ವಿನಾಶಕರ. ಜೊತೆಗೆ, ಲೋಕಜೀವನದ ಸಾಮಾನ್ಯ ವ್ಯವಹಾರ ನಡೆಯಲು ನಾನಾತ್ವದ ವೇದಾಂತಕ್ಕೆ ಅವಿರುದ್ಧವಾದ ನ್ಯಾಯವೈಶೇಷಿಕತೆಯೊಂದೇ ಮಾರ್ಗದರ್ಶಕ. ಆಪ್ತವಾಕ್ಯದ ಪ್ರಾಮಾಣ್ಯವನ್ನು (ಲೋಕಾತೀತ ಸತ್ಯದ ಬಗ್ಗೆ) ಪ್ರಶ್ನಿಸಲು ಬಂದಾಗ ಅವರು ಆ ವಿಷಯದಲ್ಲಿ ಅಪೂರ್ಣಜ್ಞರೆಂದು ತಳ್ಳಿಹಾಕಲೇಬೇಕಾಗುವುದು. ಉಪನಿಷದಾದಿ ಆಪ್ತವಾಕ್ಯಗಳ ಅರ್ಥಸಮನ್ವಯಗಳು ಒಂದಕ್ಕಿಂತ ಹೆಚ್ಚಿರುವುದರಿಂದ ಅವುಗಳ ಪ್ರಾಮಾಣ್ಯವನ್ನೇಕೆ ಪ್ರಶ್ನಿಸಬಾರದು? ಎಂದು ಕೇಳಬಹುದು; “ನೈಕೋ ಋಷಿರ್ಯಸ್ಯ ವಚಃ ಪ್ರಮಾಣಂ” ಎಂದು ಧರ್ಮರಾಯ ಅಂದೇ ಹೇಳಿದ್ದನು. ಇಂಥ ಸಂದರ್ಭದಲ್ಲಿ ಅನುಭವ, ತರ್ಕ, ಮನಃಶಾಸ್ತ್ರಗಳ ಸಹಾಯದಿಂದ ಬುದ್ಧಿವಂತನು ಮೌಲ್ಯ ತಾರತಮ್ಯವನ್ನು ನಿಷ್ಕರ್ಷಿಸಿ ಅರ್ಥಮಾಡಿಕೊಳ್ಳುವುದು ಅವನವನಿಗೇ ಬಿಟ್ಟದ್ದು. ವಿಜ್ಞಾನಕ್ಕೆ ಬೇಕಾದ್ದಕ್ಕಿಂತಲೂ ಹೆಚ್ಚಿನ ಮಟ್ಟದ ಪೂರ್ವಗ್ರಹರಾಹಿತ್ಯ ಇದಕ್ಕೆ ಆವಶ್ಯಕ; ಅಸಾಧಕ ಜಿಜ್ಞಾಸುಗಳಿಗೆ ಮಾತ್ರ ಈ ಪ್ರಯತ್ನದಲ್ಲಿ ಸ್ಥಾನವಿಲ್ಲ; ಅವರದೆಲ್ಲ ಒಣಚರ್ಚೆ.

Absolute ಕೇವಲ ಪರಮಪರಿಪೂರ್ಣ ಸತ್ಯವೆಂಬುದಿಲ್ಲವೆನ್ನಲು ಅಂಥ ಸತ್ಯವಿರುವುದು ಅಸಂಗತ್ಯ, ಜಗತ್ತನ್ನರ್ಥಮಾಡಿಕೊಳ್ಳಲು--ಎಂಬ ಅನಿಶ್ಚಿತಮತಿವಂತಿಕೆಯೊಂದೇ ಕಾರಣ. ವಿಜ್ಞಾನವು ಪ್ರಮಾಣಿಸಬಲ್ಲ ಮಟ್ಟದಲ್ಲೇ ನಿಲ್ಲಿಸಿಬಿಟ್ಟು ತೃಪ್ತರಾಗುವ ಸತ್ಯಶೋಧಕರ ಅಕೃತಕೃತ್ಯತೆ ಪುರುಷಾರ್ಥ ವಿವೇಚಕರಾದ ಎಲ್ಲರಿಗೂ ಸಮಾಧಾನಕರವಾಗುವುದೆಂಬುದು ಸುಳ್ಳು. ಅರ್ಥದಿಂದ ಪೂರ್ಣವನ್ನು ಖಂಡಿಸಿ ಹೋಗುವುದೂ ವಾಮನನು ತ್ರಿವಿಕ್ರಮನು ಇರುವುದೇ ಸುಳ್ಳೆಂಬುದೂ ಒಂದೇ. "Be content with what you have— ಮನಸಿಚ ಪರಿತುಷ್ಟೇ ಕೋಽರ್ಥವಾನ್ ಕೋ ದರಿದ್ರ:" ಎಂಬುದು ಭೋಗ ಸಾಮಗ್ರೀ ಸಂಚಯದ ಬಗೆಗೆ ಅನ್ವ-ಯಿಸುವ ಗಾದೆಯಲ್ಲವೆ, ಸತ್ಯ ಜಿಜ್ಞಾಸೆಯ ಬಗೆಗೆ ಅನ್ವಯಿಸುವ ಮಾತಲ್ಲ. "ಉ. ಮ. ಹೇ" ಎಂದಿಗೂ ಮಹಾನಾಗರಿಕತೆಯನ್ನು ಕಟ್ಟಲಾರದು. ಶುದ್ಧ ಪ್ರಾಪಂಚಿಕತೆ, ನಾಸ್ತಿಕತೆ, ಭೌತವಾದ, ವ್ಯವಹಾರ ವಾದಗಳಿಂದ ಧ್ಯೇಯ ಸ್ಫೂರ್ತಿಯು ತರ್ಕ ಶುದ್ಧವಾಗಿ ಯಾರಿಗೂ ದೊರಕಲಾರದು. ಒಂದು ಸಾವಿರದ ಗುರಿಯನ್ನಿಟ್ಟುಕೊಂಡವನು ನೂರನ್ನಾದರೂ ಗಳಿಸಿಯೇ ತೀರುತ್ತಾನೆ ಎಂಬುದೇ ಧ್ಯೇಯವಾದದ ವ್ಯಾವಹಾರಿಕ ಗುಟ್ಟು. ಧ್ಯೇಯವಾದದ ತತ್ವಶಾಸ್ತ್ರೀಯ ವ್ಯಾಪಕತೆಯು ಜೀವನದ ಮೇಲೆ ಇರುವಷ್ಟು ಇನ್ನಾವ ಶಾಸ್ತ್ರ (ವಿಜ್ಞಾನ)ಕ್ಕೂ ಇಲ್ಲ. ಆದುದರಿಂದಲೇ ಅದರ ಅನ್ವೀಕ್ಷಣ ಶಕ್ತಿಯನ್ನು ಕೌಟಿಲ್ಯ ಕೊಂಡಾಡಿದ್ದಾನೆ. ವಿಜ್ಞಾನದ ಪ್ರಪಂಚದರ್ಶನವು ಪಾಕ್ಷಿಕವೆಂದು ಜೋಡರೇ ಸಾರಿದ್ದಾರೆ. ಹಾಗೇ ತತ್ವೇತರ ಶಾಸ್ತ್ರಗಳೆಲ್ಲವುಗಳ ಪ್ರಪಂಚಾರ್ಥವ್ಯಾಖ್ಯೆಯೂ ಅಂಥ ಪಾಕ್ಷಿಕ ಚಿತ್ರವನ್ನು ಕೊಡುವ ಯಾವುದಾದರೊಂದು ಶಾಸ್ತ್ರವನ್ನೋ ವಿಜ್ಞಾನವನ್ನೋ ಆಧರಿಸಿ ಅದರ ಗುಲಾಮವಾದ ತತ್ವಶಾಸ್ತ್ರವು ತತ್ವಶಾಸ್ತ್ರದ ಬರಿಯ ಆಭಾಸವೇ ಸರಿ. ವಿಜ್ಞಾನದಾಸ ತತ್ವಜ್ಞ ರಸೆಲ್; ಜೋಡರಲ್ಲ. ಜೋಡರು ದಾಸರಾಗದಿದ್ದರೂ ವಿಪರೀತ ವ್ಯಾಖ್ಯಾತೃಗಳಾದರು; ವಿಜ್ಞಾನಿಗಳ ತತ್ವಜ್ಞತೆ ತರ್ಕಶುದ್ಧವಾಗಿಲ್ಲವೆಂದು ತೋರಿಸಹೋಗಿ ಅಯುಕ್ತಿಕತೆಗಿಳಿಯುವ ಅತಾರ್ಕಿಕತೆ-ಕುತಾರ್ಕಿಕತೆಗಳನ್ನು ಪ್ರದರ್ಶಿಸಿದ್ದಾರೆ; ತಮ್ಮ ಘಾವಾ

ಬಲಜನ್ಯವಾದ ಪೂರ್ವಗ್ರಹಗಳನ್ನು ಗ್ರಂಥದಲ್ಲಿ ಅನೇಕ ಕಡೆ ಹೊರಗೆಡಹಿದ್ದಾರೆ. ಅದರಲ್ಲಿ ಹೇಗೋ ಹಾಗೇ ಯೋಗಿಗಳ ತತ್ವಜ್ಞತೆಯನ್ನು ವಿಮರ್ಶಿಸುವುದರಲ್ಲಿ ಇನ್ನಷ್ಟು ಅಪತರ್ಕದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಅವರ "ದೀಪ್ ಠಾಣ್ಯ" ತನವನ್ನಿಲ್ಲಿ ಖಂಡಿಸಲು ಹೊರಟದ್ದು ಮಹಾಮಲ್ಲನಿಬರ್ಹಣನ್ಯಾಯದಂತೆ ಶಂಕರರು ಸಾಂಖ್ಯವನ್ನು ಮೊದಲು ಖಂಡಿಸಲು ಹೊರಟದ್ದನ್ನು ಕಂಡೇ.

ವಿಜ್ಞಾನ ಮತ್ತು ಸಂಸ್ಕೃತಿ

ವಿಜ್ಞಾನ ಹೇಳುವ ವಸ್ತುಸ್ವರೂಪವು ವೈಜ್ಞಾನಿಕ ನವನಿರ್ಮಿತಿಗಳಿಗೆ ಹೆಚ್ಚಾಗಿ ಉಪಯುಕ್ತ. ಅದರ ಜಡತರ್ಕವು ಸರ್ವಾಂಶತಃ ಜೀವತ್ ಪ್ರಪಂಚಕ್ಕೆ ಅನ್ವಯಿಸದು. ಅದರ ತತ್ವಜ್ಞರೆಂಬ ಜಡಾದ್ವೈತವಾದರೂ ಜಡಪ್ರಪಂಚಕ್ಕೆ ಪರಿಸೀಮಿತ, ಜಡದ ಬಾಹ್ಯದ ಯಾಂತ್ರಿಕ ಸ್ವರೂಪ-ರಚನೆಗಳ ಉಪಯೋಗಿಕ ಅರ್ಥವೃತ್ತಿಗಷ್ಟೇ ಕಾರಣ—ವ್ಯವಹಾರ ಪ್ರಪಂಚದಲ್ಲಿ. ಅದರ ಈ ತಾತ್ವಿಕ ಬುನಾದಿಯನ್ನು ಆಧರಿಸುವ ಜೀವಶಾಸ್ತ್ರ, ಮನಃಶಾಸ್ತ್ರ, ತತ್ವಶಾಸ್ತ್ರ, ತರ್ಕಶಾಸ್ತ್ರಗಳೆಲ್ಲವೂ ಜೀವನದ ಮೌಲ್ಯಗಳ ವಿವೇಚನೆಯಲ್ಲಿ ಅಸಮರ್ಥವಾಗುವುವು, ಅಪವ್ಯಾಖ್ಯಾತೃಗಳಾಗುವುವು, ಅಂಧಗಜನ್ಯಾಯ ಪರಾಯಣವಾಗುವುವು. ಅವುಗಳ Physicalism ಭೌತನಿಷ್ಠತೆಯು ಜೀವನದಲ್ಲಿ ಅಲ್ಪವ್ಯಾಪ್ತಿಯುಳ್ಳದ್ದು. ಅವಕ್ಕೆ ಪುರುಷಾರ್ಥಗಳ (Values) ವಿವೇಚನೆಗಿಳಿಯುವ ಹಕ್ಕಿಲ್ಲ. ಅವರ "ಪುರುಷಾರ್ಥಗಳು" ಕೇವಲ ತದ್ಧಿತವಾದ ಪ್ರಯೋಜನ ಪರ್ಯಾಯಗಳು; ಅವರ ಸತ್ಯ, ಸೌಂದರ್ಯ, ಸೌಜನ್ಯಗಳೂ ಹಾಗೇ ಅತ್ಯಂತ ಮರ್ಯಾದಿತ ಕಾರ್ಯಕ್ಷೇತ್ರಕ್ಕೆ ಪರಿಸೀಮಿತ, ಪ್ರತ್ಯಕ್ಷಾನುಮಾನಗಳನ್ನು ಪ್ರಧಾನವನ್ನಾಗಿ ಇಟ್ಟುಕೊಂಡ ಶಾಸ್ತ್ರಗಳು ಲೋಕ ವ್ಯಾವಹಾರವೆಲ್ಲವುಗಳ ಲೌಕಿಕ ಮೌಲ್ಯಗಳ ವಿವೇಚನೆಯ ಹಕ್ಕುಳ್ಳಂಥವುಗಳು. ಧರ್ಮಾರ್ಥಕಾಮಗಳು ಲೌಕಿಕವಾದ ಸಾಂಸ್ಕೃತಿಕ ಮೌಲ್ಯಗಳು. ಧರ್ಮವು (ನೀತಿಯು) ಲೌಕಿಕ-ಅಲೌಕಿಕ ಮೌಲ್ಯಗಳ ಸೇತು; ಅದರ ವ್ಯಾಪ್ತಿ ಮಿಕ್ಕೆರಡು ಲೌಕಿಕ

ಮೌಲ್ಯಗಳಿಗಿಂತ ಹೆಚ್ಚು. ಮೋಕ್ಷವು ಲೋಕಕ್ಕೆ ಪ್ರತ್ಯಕ್ಷವಾಗಿ ಅಸಂಬದ್ಧ, ಪರೋಕ್ಷವಾಗಿ ಪರಾತ್ಪರ ಆಧಾರ. ಮೌಲ್ಯಕಲ್ಪನೆಯ ಮಹಾಪ್ರೇರಕ ನೀತಿ, ಧರ್ಮ. ಅದರ Self-transcendence ಸ್ವಾತೀತತೆಯೇ ಮೋಕ್ಷ!

ಮೌಲ್ಯವು ಮನಃ ಸಮಾಧಾನದ ಒಂದು ಘಟ್ಟ. ಮೌಲ್ಯಗಳ ನಿರ್ಮಿತಿಯಲ್ಲಿ ಮುಕ್ತಿಯದು ಕೊನೆಯ ಮೆಟ್ಟಲು. ಸತ್ಯವು ಅನುಭವಾತ್ಮಕವಾದ ಪ್ರಾಥಮಿಕ ಮೌಲ್ಯ. ಉಳಿದ ಮೌಲ್ಯಗಳೆಲ್ಲವೂ ಅದರ ಅವಿನಾಭಾವಿಗಳು. ವ್ಯಾಪಕಾರ್ಥದ ಮನಸ್ಸು ಇಂದ್ರಿಯ, ಮನ, ಬುದ್ಧಿ, ಚಿತ್ತ, ಅಹಂಕಾರ, ಆತ್ಮಗಳೆಲ್ಲವುಗಳನ್ನು ಒಳಗೊಳ್ಳುತ್ತದೆ--ವಿಜ್ಞಾನ ತಾತ್ವಿಕ ಪ್ರಪಂಚದಲ್ಲಿಂದು; ಆದರೆ ಆತ್ಮ ಇಲ್ಲಿ ಜೀವಾತ್ಮವಲ್ಲದೆ ಪರಮಾತ್ಮನಲ್ಲ—ದೇಹವೇ ಈ ಆತ್ಮನಿಗೆ ಅವಚ್ಛೇದಕ. ಧರ್ಮ ಅಥವಾ ನೀತಿ ಎಂಬ ಮೌಲ್ಯಕ್ಕೆ ಸೌಜನ್ಯ ಎಂಬ ಪಾಶ್ಚಾತ್ಯ ಮೌಲ್ಯವು ಸಮ; ಅರ್ಥಕ್ಕೆ ಪ್ರಯೋಜನ (utility) ಸರಿ; ಕಾಮಕ್ಕೆ + ಸೌಂದರ್ಯ (ರಸ) ಸಮ; ಮೋಕ್ಷಕ್ಕೆ ಸ್ವರ್ಗವಾಸ (ಅಥವಾ ನರಕವಾಸ) ಇಲ್ಲದೆ ಯಾವ ಸ್ಥಿತಿ ಸಮಸ್ಥಾನೀಯ.

"ಭಾರತೀಯ ವೈಚಾರಿಕತೆಯಲ್ಲಿ ಕಂಡು ಬರುವ ನೀತಿಯ ಅಭಾವವು ಅದರ 'ಪ್ರಪಂಚ ಜೀವನ ನಶ್ವರ' ಎಂಬ ತತ್ವದ ತಾರ್ಕಿಕ ಪರಿಣಾಮ; ಅದೇ ಭಾರತದ ಎಲ್ಲ ಸಂಕಟಗಳಿಗೆ ಕಾರಣವಾಗಿದೆ" ಎಂದು ಶ್ವೈಟ್ಜರ್ ಹೇಳಿದ್ದು ಕೆಲ ಪಾಶ್ಚಾತ್ಯ ವಿದ್ವಾಂಸರ ಹಳೆಯ ಅಭಿಪ್ರಾಯದ ಹೊಸ ರೂಪಾಂತರ ಮಾತ್ರ. ಈಗ ಪಾಶ್ಚಾತ್ಯ ವಿಜ್ಞಾನ ಅದೇ ತತ್ವವನ್ನು ತೋರಿಸಿಲ್ಲವೇ? ಅದರಿಂದ ಪಾಶ್ಚಾತ್ಯರ ಸಮೃದ್ಧ ದೇಶಗಳಲ್ಲಿ ಯಾವ

+ ಅಭಿಮಾನಾತ್ ರತಿಃ ಸಾಚ ಪರಿಪೋಷ ಮುಪೇಯುಷೀ
ವ್ಯಭಿಚಾರ್ಯಾದಿ ಸಾಮಾನ್ಯಾ ಚ್ಛೃಂಗಾರ ಇತಿನೀಯತೇ ॥೪॥
ತದ್ಭೇದಾಃ ಕಾಮಮಿತರೇ ಹಾಸ್ಯಾದ್ಯಾ ಅಪ್ಯನೇಕಶಃ
ಸ್ವಸ್ವಸ್ಥಾಯಿ ವಿಶೇಷೋತ್ಥ ಪರಿಪೋಷ ಸ್ವಲಕ್ಷಣಾಃ ॥೫॥

—ಅಗ್ನಿ ಪುರಾಣದ ೩೩೯ನೆಯ ಅಧ್ಯಾಯ

ಪಾಪರೂ ಒಂದಕ್ಕೆ ಸಂಕಟ ಉಂಟಾಗಿದೆಯೆ? ಅಥವಾ ಅವರ ಸಂಕಟಕ್ಕಿಂತ ಹೆಚ್ಚಿನ ಸಂಕಟ ಈಗ ಭಾರತಕ್ಕೆ ಒದಗಿದೆಯೇ? ಭಾರತದಲ್ಲಿ ಎಲ್ಲರೂ ಯಾವಾಗಲಾದರೂ ನಶ್ವರವೆಂದು ಜೀವನವನ್ನು ಸಂನ್ಯಾಸಿಗಳಂತೆ ನಡೆಸಿದ್ದುಂಟೇ? ಮಹಾಭಾಗರಾದರೂ ಹಾಗೆ ಮಾಡಿದರೆ? ನಶ್ವರತ್ವವು ವೈಜ್ಞಾನಿಕ; ಅದರ ತಾರ್ಕಿಕ ನಿಗಮನ ಒಂದಲ್ಲ—ವಿವಿಧ. ಭಾರತ ಇಡಿಯಾಗಿ ಎಂದೂ ಅದರ ಒಂದು ವಿಧದ ತಾರ್ಕಿಕ ಪರಿಣಾಮವಾದ ನಿರಾಶಾವಾದವನ್ನು ಹಿಡಿದದ್ದಿಲ್ಲ. ಪ್ರತ್ಯಕ್ಷ ಅಸತ್ಯಕ್ಕೆ ಉದ್ದದ ಪ್ರತ್ಯುತ್ತರ ಅನಗತ್ಯ. 'ನಿಷ್ಕಾಮ ಕರ್ಮ' ಮತ್ತು 'ನಿವೃತ್ತಿಕರ್ಮ'ಗಳ ಅರ್ಥವನ್ನು ಅರಿಯಲಾರದವರು ಪಾಶ್ಚಾತ್ಯರಷ್ಟೇ ಅಲ್ಲ– ಅನೇಕ ಪೌರಸ್ತ್ಯರೂ ಎಂಬುದೇ ಭಾರತದ ಇಂದಿನ ದಿವಾಳಿಬುದ್ಧಿಗೆ ಕಾರಣ. ಅವೆರಡರ ಸಾರವಿರುವುದು ಸಜ್ಜನೋಪಕಾರದಲ್ಲಿ, ಸುಜೀವಸೇವೆಯಲ್ಲಿ, ಸರ್ವೋದಯದಲ್ಲಿ! ಒಂದು ಅಮುಕ್ತನಿಗೆ ಹೇಳಿದ ಶುದ್ಧಿಮಾರ್ಗ, ಇನ್ನೊಂದು ಬ್ರಹ್ಮ ಸಹಜ ವರ್ತನಾ ನೀತಿ!

ಮಹಾದರ್ಶಗಳು ಸರ್ವದಾ ವಂದ್ಯ; ಅವುಗಳು ಮಾನವ ಪ್ರಗತಿಯ ಕೊನೆಯ ಹಂತಗಳು. ಅವುಗಳತ್ತ ಒಯ್ಯುವ ಇತರ ಆದರ್ಶಗಳು ಯಥಾಶಕ್ತಿ ಗ್ರಾಹ್ಯವೆಂಬುದನ್ನೂ ಆಚರಣೀಯವೆಂಬುದನ್ನೂ ಎಲ್ಲ ತತ್ತ್ವಜ್ಞಾನಿಯೂ ಇಲ್ಲಿ ಹೇಳುತ್ತ ಬಂದಿದ್ದಾನೆ. ಆಯಾ ಐತಿಹಾಸಿಕ ಅವಧಿಗೆ ತಕ್ಕ ತತ್ತ್ವಪರಿಭಾಷೆ ಆಗಾಗ ಅರ್ಥವಿವರಣೆಗಾಗಿ ಬಳಸಲ್ಪಟ್ಟಿದೆ. ಸದ್ಯದ ಕಷ್ಟವು ಭಾರತಕ್ಕೆ ಎಲ್ಲ ಐತಿಹಾಸಿಕ ಅವಧಿಗಳಲ್ಲೂ ಇತ್ತೆಂಬುದು ಸುಳ್ಳು. ಭಾರತದಲ್ಲೇ ಮಾತ್ರವಲ್ಲ—ಯಾವ ದೇಶದಲ್ಲಿಯೂ ಅರಾಜಕೀಯ ತತ್ತ್ವಜ್ಞರ ಸಿದ್ಧಾಂತಗಳು (ಸತ್ಪರಿಣಾಮಕರವಾಗಿರಲಿ, ದುಷ್ಪರಿಣಾಮಕರವಾಗಿರಲಿ) ದೇಶಾದ್ಯಂತ ಶೀನಿ-ಕಿಟ್ಟ-ನಾಣಿ ಮತ್ತು ಗಾಂಧಿ-ನೆಹರು-ಸರದಾರರ ಮೇಲೆ ಪ್ರಭಾವ ಬೀರಿ ಪೂರ್ವವನ್ನು ಪಶ್ಚಿಮಗೊಳಿಸಿಯೇ ತೀರುತ್ತವೆ ಎಂಬುದು ಅನೈತಿಹಾಸಿಕ. ಪುರುಷಾರ್ಥಗಳ ಚತುರ್ವಿಧತೆಯನ್ನು ನಿತ್ಯವೂ ಒತ್ತಿ ಹೇಳುತ್ತ ಬಂದ ಭಾರತೀಯ ಪರಂಪರೆಯನ್ನು ಅನೈತಿಹಾಸಿಕವೆಂಬವನು ಕೇವಲ ಅನೃತವಾದಿ. ಪ್ರತಿಯೊಂದು ದೇಶಕ್ಕೂ ಕಷ್ಟ-

ಸುಖಗಳ ಅವಧಿಗಳು ಬರುತ್ತವೆ, ಹೋಗುತ್ತವೆ. ಅವುಗಳಿಗೆ ಅನೇಕ ಕಾರಣಗಳಿದ್ದರೂ "ರಾಜಾ ಕಾಲಸ್ಯ ಕಾರಣಂ" ಎಂಬುದು ಗಣ್ಯಕಾರಣದ ಉಲ್ಲೇಖ. ಜೀವನದ ಮಾನವ್ಯವ್ಯವಸ್ಥೆಯು ಪ್ರತ್ಯಕ್ಷಮೂಲ ಸರಕಾರ. ಭಾರತದ ಯಾವ ಸರಕಾರವೂ (ಅಲ್ಲಿ ಇಲ್ಲಿ ಒಂದೆರಡನ್ನು ಬಿಟ್ಟರೆ) "ಧರ್ಮ ಭೋಳಿ" ಆಗಿರಲಿಲ್ಲ. ಭಾರತಕ್ಕೆ ಹಿಂದೆ ಪಾಶ್ಚಾತ್ಯ ಪ್ರಪಂಚಕ್ಕಿರುವುದಕ್ಕಿಂತ ಹೆಚ್ಚಿನ ಕೀರ್ತಿ ಇತ್ತೆಂಬುದನ್ನು ಪ್ರಾಚೀನ ಇತಿಹಾಸವು ಸ್ಪಷ್ಟಪಡಿಸಿದೆ. ಅಂದು ಅತ್ತೆತನವನ್ನು ತೋರಲಿಲ್ಲ ಭಾರತ; ಇಂದು ಪಾಶ್ಚಾತ್ಯಬುದ್ಧಿ ಅತ್ತೆತನದಿಂದ ಮೂದಲಿಸುತ್ತಿದೆ. ಇದೇ ಸಾಕು ಯಾವುದರ ಸಂಸ್ಕೃತಿಯ ಮಟ್ಟ ಎಷ್ಟೆಂಬುದನ್ನು ತಿಳಿಸಲು!

ಸ್ವಸ್ತಿ ಪಂಥ

ಸೃಷ್ಟಿ-ಸ್ಥಿತಿ-ಲಯುಗಳು ಜಗತ್ತಿನಲ್ಲಿ ನಿತ್ಯವೂ ಕಂಡು ಬರುತ್ತವೆ; ಆದರೆ ಈ ಮೂರರಲ್ಲಿ ನಡುವಿನದು ಸಾತತ್ಯದಿಂದ ಸಾಗುತ್ತಿರುವುದು ಪರಮಸತ್ಯದ ಜಾಗತಿಕ ರೂಪಾಂತರದ ನಿಜವಾದ ಅಥವಾ ಅತಿಗಣ್ಯವಾದ ಮುಖವನ್ನು ನಿರ್ದೇಶಿಸುತ್ತದೆ. ಜಗತ್ತು ಇಡಿಯಾಗಿ ಅವಿನಷ್ಟ. Nothing is lost when a candle burns—ಮೇಣದ ಬತ್ತಿ ಉರಿದಾಗ ಏನೂ ನಷ್ಟ ಹೊಂದುವುದಿಲ್ಲ. ಅದೇ ವ್ಯಾವಹಾರಿಕವಾದ ಅಹಿಂಸೆ ಎಂಬ ಸತ್ಯ. ಅದು ಭಾರತದ ಜೀವನ ನೀತಿ. ಅದರ ವ್ಯಾಪ್ತಿಯನ್ನು ಮಹಾತ್ಮಾ ಗಾಂಧಿಯವರು ಅತ್ಯಂತ ಸ್ಪಷ್ಟವಾಗಿ ವಿವರಿಸಿದ್ದಾರೆ. ಅವರ ವಿವರಣೆ ತೀರ ತರ್ಕಶುದ್ಧ ಮತ್ತು ವ್ಯವಹಾರ್ಯ—ಎಂಬುದು ಸೂಕ್ಷ್ಮಜ್ಞರಿಗೆ ಸುಲಭಗ್ರಾಹ್ಯ. ಅದೆಂದೂ ಧೀರವೃತ್ತಿ ವಿರೋಧಿಯಲ್ಲ, ಧೀರವೃತ್ತಿಗೆ ಅತ್ಯಂತ ಉತ್ತೇಜಕವಾದುದು. ಅಧೀರನು ದಾನವೀರನಲ್ಲ, ದಯಾ-ವೀರನಲ್ಲ, ಧರ್ಮವೀರನಲ್ಲ, ಆಧ್ಯಾತ್ಮಿಕವೀರನಲ್ಲ – ಎಂಬುದು ಭಾರತದ ಪ್ರೌಢ ವಿದ್ಯಾವಂತರೆಲ್ಲರಿಗೂ ತಿಳಿದ ಸಂಗತಿ. ಔದಾರ್ಯವು ಧೀರತೆಯ ಅವಿನಾಭಾವಿ; ಅದೇ ತ್ಯಾಗ, ಪರೋಪಕಾರ, ಸರ್ವೋದಯ, ಜೀವನ ಪೋಷಕ ಆಚಾರ. ಆಧ್ಯಾತ್ಮಿಕತೆಯ ನೀತ್ಯತೀತತೆಯು ಅನೀತಿವಂತಿಕೆ

ಯಿಲ್ಲ; ನೀತಿಯು ಸಹಜ ಸ್ವಭಾವವಾಗಿ ಬಿಡುವುದೆಂದೇ ಅರ್ಥ—ಮುಕ್ತರಲ್ಲಿ. ಇದೇ ವೇದೋಕ್ತ ಸ್ವಸ್ತಿಪಂಥ: ದುಷ್ಟ ನಿಗ್ರಹ-ಶಿಷ್ಟ ಪರಿಪಾಲನ ಈಶ್ವರನ ಮತ್ತು ಅವನ ಆರಾಧಕರೆಲ್ಲರ ಅನುಲಂಘನೀಯ ಧರ್ಮವೆಂದು ಭಾರತ ತಿಳಿದಿತ್ತು, ತಿಳಿದಿದೆ. ಆದರೆ "ಬಲೀಯಸೀ ಕೇವಲಮೀಶ್ವರೇಚ್ಛಾ" ಎಂಬಂತೆ ಐತಿಹಾಸಿಕ ಶಕ್ತಿ-ಅಶಕ್ತಿಗಳು ದೇಶವೊಂದರ ಸಾರ್ವಜನಿಕ ಪರಿಸ್ಥಿತಿಯನ್ನು ಅದರ ನಿಯಾಮಕ ಮುಖಂಡರಲ್ಲಿ ಪ್ರವೇಶಿಸಿ ಬದಲಾಯಿಸಿಬಿಡುತ್ತವೆ. ಇಂಥ ಬದಲಾವಣೆಗೆ ಅದರ ತತ್ವಜ್ಞಾನ ಹೊಣೆಗಾರವಾಗದು. ಆಕಸ್ಮಿಕಗಳೆಲ್ಲವೂ ಮಾನವ ಯೋಜನೆಗೆ ಮೀರಿದಂಥವುಗಳು. ಮಾನವನಲ್ಲಿ ಅವಿಚಾರ-ವಿಚಾರಗಳೆರಡೂ ಅಜ್ಞಾತ-ಜ್ಞಾತಪ್ರಜ್ಞಾಸ್ತರಗಳಲ್ಲಿ ಇರುವುದು ಈಶ್ವರದತ್ತ. ಅಸಾಂದರ್ಭಿಕ ವಿಚಾರವು ಅವಿಚಾರ; ಅದು ಐತಿಹಾಸಿಕ ಅಶಕ್ತಿ; ಪ್ರಭುತ್ವ ಸಂಪನ್ನರಲ್ಲಿ ಕಂಡುಬಂದರೆ! ಈಶ್ವರನೇ ಐತಿಹಾಸಿಕ ನಿಯಾಮಕ-ಅವನನ್ನು ನಿಸರ್ಗವೆಂದರೆ ಅರ್ಥಬದಲಾಗದು; ನಿಸರ್ಗವು ಬ್ರಹ್ಮಸ್ವಭಾವ, ಮಾಯೆ. ಜಗತ್ತಿನ ರಾಷ್ಟ್ರಗಳಲ್ಲಿ ಭಾರತವೆಂದೂ ಅತಿಹೆಚ್ಚು ಅದೃಷ್ಟಹೀನವೆನ್ನಿಸಿಲ್ಲ. ಈಗಿನ ತುಲನಾತ್ಮಕವಾದ ದುರ್ದಶೆ ಅಪನಾಯಕತ್ವದ ಫಲ. ಅಪನಾಯಕತ್ವದ ಪರಿಹಾರವೀಗ ಅದೂರಸ್ಥ! ಅಪನಾಯಕರ ಸ್ಥಾನಾಪನ್ನತೆಗೆ ಜನರ ತಾತ್ಕಾಲಿಕ ಮನೋದೈಹಿಕ ಸೋಮಾರಿತನವೇ ಕಾರಣ!

ಸೂತ್ರ ಮತ್ತು ಭಾಷ್ಯ

ಜಗತ್ತಿನಲ್ಲಿ ಅಪರಿವರ್ತನೀಯವಾದುದಿಲ್ಲ; ಅದಿರುವುದು ಅಜಗತ್ತಿನಲ್ಲಿ. ಜಗತ್ತು ಅಜಗತ್ತಿಗೇರಲು ಬಯಸುವುದೇ ಮುಮುಕ್ಷುತ್ವ. ಮಾನವನು ಜಗಲ್ಲಕ್ಷಣ ಸಂಪನ್ನ. ಜಗತ್ತು ಸಾಪೇಕ್ಷವಾದುದೆಂದರೆ ಅದು ಅಜಗತ್ತಿನೊಡನೆ; ಅದರ ಆಂತರಿಕ ವ್ಯಕ್ತಿಗಳು ಸಾಪೇಕ್ಷವಾಗಿರುವುದು ಪರಸ್ಪರ, ಜಾಗತಿಕ ಮತ್ತು ಅಜಾಗತಿಕ. ಜಗತ್ತು ಅಜಗತ್ತಾಗುವುದು ಅದರ ಪರಿವರ್ತನ ಸ್ವಭಾವದ ಅನಿವಾರ್ಯವಾದ ತಾರ್ಕಿಕ ಪರಿಣಾಮ; ಮಾನವ ಅದರಿಂದಲೇ ಇಲ್ಲಿ ವಿಸ್ಮೃತಿಯ ಆವರಣವನ್ನು ಹೊತ್ತಿದ್ದಾನೆ;

ಮಾನವನ ದಿವ್ಯೀಕರಣ ಸಾಧ್ಯವೆಂದವರು ಅರವಿಂದರು. ಜಗದ್ಭೋಗದ ತ್ಯಾಗವು ಕೆಲ ವ್ಯಕ್ತಿಗಳಿಗೆ ಕೆಲ ಜೀವನಾವಸ್ಥೆಗಳಲ್ಲಿ ಮಾನಸಶಾಸ್ತ್ರೀಯ ವಾಗಿ ಅಗತ್ಯವಾದ ನೈತಿಕ ತರಬೇತಿನ ಸಾಧನ. ಯಶಸ್ವಿ ವಿಜಿಗೀಷು ಸರ್ವಜಿತ್-ಯಾಗವನ್ನು ಮಾಡಲೇ ಬೇಕು! ಕಾಳಿದಾಸ ಚಿತ್ರಿಸಿದ ದಿಲೀಪನ ಪಾತ್ರವು ಭಾರತೀಯ ಐಹಿಕ ಜೀವನದ ಅತ್ಯಂತ ತರ್ಕಶುದ್ಧ ಐತಿಹಾಸಿಕ ಆದರ್ಶಚಿತ್ರ. ಭಾರತದ ತತ್ವಜ್ಞಾನದ ತಾರ್ಕಿಕ ಪರಿಣಾಮಕ್ಕೆ ಕಾಳಿದಾಸ ನಿರ್ಮಿಸಿದ ಪಾತ್ರಗಳೇ ತಕ್ಕ ಮಾದರಿಗಳು! ಬ್ರಹ್ಮಸೂತ್ರಕ್ಕೆ ಶಾಂಕರ ಭಾಷ್ಯವಿರುವಂತೆ ಭಾರತೀಯ ನಾಗರಿಕತೆಯ ಸಾಂಸ್ಕೃತಿಕ ತತ್ವಜ್ಞಾನಕ್ಕೆ ಕಾಳಿದಾಸನ ಕೃತಿಗಳೇ ನಿಜವಾದ ಭಾಷ್ಯಗಳು; ವ್ಯಾಸಕೃತಿಯ (ಮಹಾ ಭಾರತದ) ಭಾಷ್ಯರೂಪವು ಕ್ಲಿಷ್ಟವೆನ್ನಿಸಿದವರು ಕಾಳಿದಾಸನ ಕೃತಿಗಳನ್ನು ಅವಲೋಕಿಸಲಿ! ವಾಲ್ಮೀಕಿ-ವ್ಯಾಸ-ಕಾಳಿದಾಸರ ಸಾಹಿತ್ಯವು ಭಾರತದ ತತ್ವದರ್ಶನದ ಮಹಾಭಾಷ್ಯ! ಅವರ ಸಾಕ್ಷಿಗೆ ವಿರುದ್ಧವಾದುದು ಭಾರತೀಯ ನಾಗರಿಕತೆ-ಸಂಸ್ಕೃತಿ-ತತ್ವಜ್ಞಾನಗಳ ಲಕ್ಷಣವನ್ನುಳ್ಳದ್ದಲ್ಲ!

ತತ್ವಜ್ಞಾನದ ಸ್ಥಾನ ಮತ್ತು ಅರ್ಥದ ಅರ್ಥ

"It is a little difficult to pass from England to America, and then to Russia, and then to India and China and yet keep one's social philosophy unchanged. (Outlines of philosophy by Will Durant, P. 416)–ಇಂಗ್ಲೆಂಡಿ ನಿಂದ ಅಮೇರಿಕಕ್ಕೆ, ಅಲ್ಲಿಂದ ರಶಿಯಕ್ಕೆ, ರಶಿಯದಿಂದ ಭಾರತ-ಚೀನ ಗಳಿಗೆ ಹೋಗುವುದು ಸ್ವಲ್ಪ ಕಷ್ಟ; ಹಾಗೆ ಹೋದರೆ ಹೋದಾತನು ತನ್ನ ಸಾಮಾಜಿಕ ತತ್ವಜ್ಞಾನವನ್ನು ಬದಲಾಯಿಸದೆ ಹಾಗೇ ಇಟ್ಟುಕೊಳ್ಳು ವುದೂ ಸ್ವಲ್ಪ ಕಷ್ಟ"– ಎಂಬ ವಿಲ್‌ಡ್ಯೂರೆಂಟರ ಅಭಿಪ್ರಾಯವು– ತತ್ವ ಜ್ಞಾನವು ಸಾಮಾಜಿಕ, ಆಯಾ ದೇಶಕಾಲಗಳಲ್ಲಿ ಬದುಕಿದ ಸಮಾಜದ ಸಾಂಸ್ಕೃತಿಕ ಭಾಷೆ– ಎಂದು ಅರ್ಥಮಾಡುತ್ತದೆ. ಅಂದರೆ ತತ್ವಜ್ಞಾನಗಳು ವಸ್ತ್ರ; ಅವು ಮಾನವೇತಿಹಾಸದಲ್ಲಿ ಬಂದು ಹೋಗುತ್ತಿರುತ್ತವೆ– ಎಂದ

ಹಾಗಾಯಿತು. ಭಾರತದ ಪರಮಾರ್ಥ ದರ್ಶನದ ತತ್ವಜ್ಞಾನವನ್ನು ಯಾರೂ ಇಲ್ಲಿ ಹಾಗೆಂದು ತಿಳಿದಿಲ್ಲ. ಹಾಗೆ ತಿಳಿಯುವುದು ತಪ್ಪೆಂದರೆ, ಹಾಗೆ ತಪ್ಪೆನ್ನುವುದು ತಪ್ಪೆನ್ನಬಹುದು. ಏಕೆಂದರೆ, ನಮ್ಮ ಪರಮಾರ್ಥವು (ಮೋಕ್ಷ, ಬ್ರಹ್ಮ) ದಿಕ್ಕಾಲಾದ್ಯನವಚ್ಛಿನ್ನ- **Not bound by space and time**- ದೇಶ ಕಾಲಗಳಿಂದ ಸೀಮಿತವಾದುದಲ್ಲ; ಹಾಗೇ ಸಮಾಜ ಸೀಮಿತವೂ ಅಲ್ಲ. ನಮ್ಮ ವ್ಯವಹಾರಾರ್ಥವು ಅಂಥ ಪರಮಾರ್ಥದ ಪಂಚಾಂಗದ ಮೇಲೆ ನಿಂತಿರಬೇಕೆಂಬುದು ಅರ್ಥ-ಕಾಮ-ಧರ್ಮಶಾಸ್ತ್ರಗಳ ನಿಲುವು! ನಿರ್ಗುಣವು ಗುಣಾಧಾರ, ನಿಷ್ಕ್ರಿಯ ಕ್ರಿಯಾಧಾರ, ಅದ್ರವ್ಯವು ದ್ರವ್ಯಾಧಾರ! ಹೇಗೆ? ಸೀಮಿತದ ಸೀಮಿತತ್ವವೇ ಅಸೀಮಿತವನ್ನು ಆಧಾರವನ್ನಾಗಿ ತೆಗೆದುಕೊಳ್ಳುವ ತಾರ್ಕಿಕ ಒತ್ತಾಯವನ್ನು ತರುತ್ತದೆ. ಅಸೀಮಿತವನ್ನು (ಗಡಿಗುರುತುಗಳಿಲ್ಲದ್ದನ್ನು) ಏನೆಂದು ವರ್ಣಿಸಲೂ ಸಾಧ್ಯವಾಗದಾಗ, ಅದನ್ನು ನಿರ್ಗುಣ, ನಿಷ್ಕರ್ಮ, ನಿರ್ದ್ರವ್ಯ ಎನ್ನಬೇಕಾದ್ದು (ನೇತಿ ನೇತೀತಿ ವಾಕ್ಯವ್ಯಂಗ್ಯವನ್ನಾಗಿ ಮಾಡಬೇಕಾದದ್ದು) ಅತ್ಯಂತ ಅನಿವಾರ್ಯವಾಗುವುದು ಅತ್ಯಂತ ಹೆಚ್ಚಿನ ಕಲ್ಪನಾಶಕ್ತಿಯುಳ್ಳ ದೇಶಕ್ಕೆ ಸಹಜ. ವಿಚಾರಕ್ಕೆ ನಿರ್ವಿಚಾರ ಆಧಾರ ಎಂಬಂಥ ತಾರ್ಕಿಕ ವಿರೋಧಗಳಿಂದ ವ್ಯವಹಾರ-ಪರಮಾರ್ಥಗಳನ್ನಿಡುವುದು ತರ್ಕ ಭಾಷೆಗೆ ಅನಿವಾರ್ಯ. ಈ ಅನಿವಾರ್ಯತೆಯು ಅಪಾರ್ಥಕ್ಕೆಡೆಗೊಡದಿರಬೇಕಾದರೆ ಮಾನಸಶಾಸ್ತ್ರದ ಪೂರ್ವೋಪಯುಕ್ತ ಭಾಷೆಯಿಂದ ಪೂರ್ಣಾಪೂರ್ಣ ವಿವರಣೆ ಕೊಡಬೇಕಾಗುತ್ತದೆ. ಅಸೀಮಿತವು ಅರ್ಥಾತೀತ, ಅರ್ಥವು ತನ್ನ ಅರ್ಥತ್ವವನ್ನಿಟ್ಟುಕೊಳ್ಳಬೇಕಾದರೆ ಸೀಮಾರೇಖೆಗಳಿಗೆ ಒಳಪಟ್ಟಿರಬೇಕಾಗುತ್ತದೆ!

"Nature seems, then, to present to our contemplation events of two different kinds, the physical and psycho-physical. The former are the events of the inorganic realm, which physical science explains with ever-increasing success in terms of mechanistic causation (the principal of causation that finds the explanation of present events

in terms only of the causal influence of antecedent events, without reference of any kind to possible future events). Psycho-physical events, on the other hand, cannot be completely explained in this way; for the explanation of them we have to take into account foresight of the possible future course of events and striving guided by such fore-sight. All such events, all foresighted strivings, seems to be instances of a second fundamental type of causation, that type which we call purposive or telelogical —ಭೌತಿಕ ಮತ್ತು ಮಾನಸ ಭೌತಿಕ ಎಂಬ ಇಬ್ಬಗೆಯ ಘಟನೆಗಳನ್ನು ನಿಸರ್ಗವು ನಮ್ಮ ಚಿಂತನೀಯ ವಿಷಯಗಳನ್ನಾಗಿ ಮುಂದಿರಿಸುವಂತೆ ತೋರುತ್ತದೆ. ಮೊದಲನೆಯವು ನಿರವಯ ಪದಾರ್ಥಗಳ ಪ್ರಪಂಚಕ್ಕೆ ಸೇರಿದ್ದು; ಯಾಂತ್ರಿಕ ಕಾರ್ಯಕಾರಣ ನಿಯಮದ ಪ್ರಕಾರ ವಿಜ್ಞಾನವು ಅವನ್ನು ಹೆಚ್ಚು ಹೆಚ್ಚು ಯಶಸ್ವಿಯಾಗಿ ವಿವರಿಸುತ್ತ ಬಂದಿದೆ. (ಆ ನಿಯಮದ ಮೇರೆಗೆ ವರ್ತಮಾನ ಘಟನೆಗಳನ್ನು, ಭವಿಷ್ಯತ್ತಿನಲ್ಲಿ ಸಾಧ್ಯವಾಗಬಹುದಾದ ಯಾವ ಜಾತಿಯ ಘಟನೆಗಳಿಗೂ ಸಂಬಂಧಿಸಿರದಂತೆ, ತತ್ಪೂರ್ವ ಘಟನೆಗಳ ಕಾರಣಿಕ ಪ್ರಭಾವ ಮಾತ್ರದಿಂದ ವಿವರಿಸಲಾಗುತ್ತದೆ). ತದ್ವಿರುದ್ಧವಾಗಿ, ಮಾನಸ ಭೌತಿಕ ಘಟನೆಗಳನ್ನು ಆ ಪ್ರಕಾರ ವಿವರಿಸಲಾಗುವುದಿಲ್ಲ. ಅವುಗಳ ವಿವರಣೆಗೆ ನಾವು ಆ ಘಟನೆಗಳ ಸಾಧ್ಯವಾದ ಭವಿಷ್ಯತ್ ಪ್ರವಾಹಗತಿಯ ಪೂರ್ವ ದರ್ಶನವನ್ನೂ ಅಂಥ ಪೂರ್ವದರ್ಶನದಿಂದ ನಿರ್ದೇಶಿತವಾದ ಪ್ರಯತ್ನವನ್ನೂ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಅಂಥ ಘಟನೆಗಳೆಲ್ಲವೂ—ಪೂರ್ವದರ್ಶನ ನಿರ್ದೇಶಿತವಾದ ಪ್ರಯತ್ನಗಳೆಲ್ಲವೂ—೨ನೆಯ ಮಾದರಿಯ ಕಾರ್ಯ ಕಾರಣ ಸಂಬಂಧ, ಅರ್ಥಾತ್, ಔದ್ದೇಶಿಕ ಅಥವಾ ಧ್ಯೇಯ, ಗುರಿ, ಅಂತ್ಯಕಾರಣ, ಉದ್ದೇಶ, ಮೌಲ್ಯ ಇಲ್ಲವೆ ಒಳಿತು ಎಂಬುದನ್ನು ತಿಳಿಸುವ ಶಾಸ್ತ್ರಕ್ಕೆ ಸಹಜವಾದ ಕಾರಣ-ಕಾರ್ಯಪ್ರಕಾರ—ಎಂಬುವರ ನಿದರ್ಶನಗಳಾಗಿ ತೋರುತ್ತದೆ ("The Energies of Men" by W. Mc Dougal, P. 5)"— ಎಂದು ವಿಲಿಯಂ ಮೆಕ್ ಡೂಗಲ್ ಹೇಳಿರುವುದು ಕೇವಲ ಭೌತವಾದಿಯರಾದ ತತ್ವಶಾಸ್ತ್ರಕಾರರ

ಕಣ್ಣುಗಳನ್ನು ತೆರೆಯಿಸದಿದ್ದುದು ಪರಮಾಶ್ಚರ್ಯ. ಕ್ಷುತ್ಪಿಪಾಸಾದಿ ದೈಹಿಕ ಮೂಲಪ್ರವೃತ್ತಿಗಳೂ ಭಯಕ್ರೋಧಾದಿ ಮಾನಸಿಕ ಮೂಲ ಪ್ರವೃತ್ತಿಗಳೂ ಮನುಷ್ಯನಿಗೆ ಹೇಗೆ ಸಹಜವೋ ಹಾಗೇ ಉದ್ದೇಶೋನ್ಮುಖವಾದ ಮನೋದೈಹಿಕ ವರ್ತನೆಯು ಮಾನವ ಪ್ರಾಣಿಗೆ ಸಹಜವಾಗಿರುವಾಗ, ಅವನ ತಿಳುವಳಿಕೆಯು ಸರ್ವಾಂಶಗಳಲ್ಲೂ ಸರ್ವಸಂದರ್ಭಗಳಲ್ಲೂ (ಆ ತಿಳಿವಳಿಕೆ ಯಾವ ಸಾಧನದ ಮೂಲಕ ಅವನಿಗೆ ಉಂಟಾದರೂ) ಉದ್ದೇಶ ವಿಮುಖತೆಯ ಅತ್ಯಂತಾಭಾವವಿರುವುದು ಅತ್ಯಂತ ಸಂಭವ. ಅವನು 'ಸತ್ಯಕ್ಕಾಗಿ ಸತ್ಯ' ಎಂದು ಶೋಧಿಸಹೊರಟರೂ ನಿರುದ್ದೇಶ ಸತ್ಯವನ್ನವನು ಊಹಿಸುವುದೂ ಕೇವಲ ಅಸ್ವಾಭಾವಿಕವಾದುದು. ಮಾನವನು ಸರ್ವಾ-ವಸ್ಥೆಗಳಲ್ಲೂ ಜಾಗ್ರದಜಾಗ್ರತ್ ಸ್ವರೂಪದ ಉದ್ದೇಶವನ್ನು ಉಳ್ಳವ-ನಾದುದರಿಂದ ಉದ್ದೇಶವಿಲ್ಲದ ಯಾವುದೂ ಅವನಿಗೆ ಅರ್ಥವತ್ತೆನ್ನಿಸಲಾರದು. ಅರ್ಥಹೀನವಾದ ಜಗತ್ತು, ನಿಸರ್ಗ, ಸೃಷ್ಟಿ ಮುಂತಾದ ಕಲ್ಪನೆಗಳು ಅವನ ಪ್ರಕೃತಿಗೆ ವಿರುದ್ಧ, ಅನಾರೋಗ್ಯಕರ, ಅಸತ್ಯ. ನಿರವಯವ ಪದಾರ್ಥ ಪ್ರಪಂಚದ ಯಾಂತ್ರಿಕ ಕಾರ್ಯ ಕಾರಣಭಾವದ ಅಸ್ತಿತ್ವ ಕೂಡ ಅವನಿಗೆ ಅರ್ಥಪೂರ್ಣ (ಅರ್ಥವತ್— Significant) ಎನ್ನಿಸುವುದು ನಿಜವಾದರೆ, ಅದು ತನಗೆ ಸಂಬಂಧಿಸಿದ ಪ್ರತ್ಯಕ್ಷ ಅಥವಾ ಪರೋಕ್ಷವಾದ ಅರ್ಥವನ್ನು (ಬೆಲೆಯನ್ನು, ಗುರಿಯನ್ನು, ಮೌಲ್ಯವನ್ನು, ಉದ್ದೇಶವನ್ನು, ಆತ್ಯಂತಿಕ ಸಮಾಧಾನಕರ ಮನಃಸ್ಥಿತಿಯನ್ನು ಉಂಟುಮಾಡುವ ಗುಣವನ್ನು) ಹೊಂದಿಯೇ ಇರುತ್ತದೆ—ಎಂಬುದು ಅಧೀದ್ಯಾನುಭವ. ಮಾನವನು ನಿಸರ್ಗದ ಹೊರಗಿನ ಪದಾರ್ಥವಲ್ಲ; ಅದರ ಅಂಕೆಗೊಳಗಾದ ವಿವಿಧ ಪದಾರ್ಥಜಾತಿಗಳಲ್ಲಿ ಒಂದು ಪದಾರ್ಥ ಜಾತಿಗೆ ಸೇರಿದವನು. ಅವನದು ಉದ್ದೇಶಯುಕ್ತವಾದ ಪ್ರಪಂಚ; ಅವನು ಉದ್ದೇಶಮಯ. ಅವನನ್ನು ಹಾಗೆ ನಿರ್ಮಿಸಿದ್ದು ನಿಸರ್ಗ, ಪ್ರಕೃತಿ, ಈಶ್ವರ ಸ್ವಭಾವ. ಮನಃಶಾಸ್ತ್ರೋಕ್ತವಾದ ಎಂಟು ಪ್ರಸಿದ್ಧ ಮೂಲಪ್ರವೃತ್ತಿಗಳು ಮಾನವನ ದೇಹರಕ್ಷಣೋದ್ದೇಶವನ್ನುಳ್ಳವುಗಳಾಗಿರುವುದು ಅನುಭವಕ್ಕೆ ಬಂದಿರುವುದರಿಂದ, ಹಾಗೇ ಅವನ ಬುದ್ಧಿಯೆಂಬ ಮಾನಸ ಮೂಲಪ್ರವೃತ್ತಿಯೂ ಅವನ ಸ್ವತ್ವದ

(ವ್ಯಕ್ತಿತ್ವದ, ಆತ್ಮದ) ಆರೋಗ್ಯವನ್ನು ಕಾಪಾಡುವ ಉದ್ದೇಶವನ್ನೇ ಉಳ್ಳದ್ದಾಗಿವೆ; ಅವುಗಳ ಸಾಪೇಕ್ಷ ಕುರುಡುತನದಂತೆಯೇ ಇವರ ಸಾಪೇಕ್ಷ ಕುರುಡುತನವೂ ಎಷ್ಟೋಸಲ ಉದ್ದೇಶ ಹಾನಿಯನ್ನುಂಟುಮಾಡಿ ಅವನಿಗೆ ಅರಕ್ಷಿತತೆಯನ್ನು ತಂದೊಡ್ಡುತ್ತವೆ. ಆದುದರಿಂದ ಮಾನವ ವಿಭಾಗದಲ್ಲಿ ಸೋದ್ದೇಶವಾದ ಸೃಷ್ಟಿಯು ಜಡವಿಭಾಗದಲ್ಲಿ ನಿರುದ್ದೇಶವಾಗಿರುವುದು ಆ ಈ ಮನುಷ್ಯಬುದ್ಧಿಗೆ ತೋರುವ ಆಭಾಸವೋ ನಿಜವೋ ? ಯಾರು ನೈಸರ್ಗಿಕವಾಗಿ ನಿರ್ಣಯಿಸಬಲ್ಲರು? ಅನಿರ್ಣೀತವು ನಂಬಲರ್ಹವಾದ ಸತ್ಯವಲ್ಲ. ಜೊತೆಗೆ, ಉದ್ದೇಶಮಯಸೃಷ್ಟಿಗೆ ಉದ್ದೇಶವನ್ನು ತನ್ನ ಹೊರಗೆ ಕಾಣುವುದು ಎಷ್ಟು ಸ್ವಾಭಾವಿಕವೋ ನಿರುದ್ದೇಶವನ್ನು ಕಾಣುವುದು ಅಷ್ಟೇ ಅಸ್ವಾಭಾವಿಕ. ವಿಚಾರ ಜೀವಿಯಾದ ಮಾನವನ ವಿಚಾರದ ಆದಿ-ಅಂತಗಳು ಉದ್ದೇಶವನ್ನು ಆಧರಿಸಿರುತ್ತವೆ. ಆದುದರಿಂದ ಸೃಷ್ಟಿ ವಿಚಾರವು ಸೃಷ್ಟಿಯು ನಿರ್ವಿಚಾರವೆಂದು ತೀರ್ಮಾನಿಸುವುದೂ ವಿಚಾರಮಾಡುವುದು ಪ್ರಯೋಜನವಿಲ್ಲವೆಂದು ವಿಚಾರಿಸಿ ನಿಗಮನಿಸುವುದೂ ಒಂದೇ. ಜೀವತ್ ಪದಾರ್ಥಕ್ಕೆ ಉದ್ದೇಶಯುಕ್ತ ವರ್ತನೆ ಇರುವುದಾದರೆ, ಸಂಪೂರ್ಣ ಜೀವ ಶಕ್ತಿ ಸಂಪರ್ಕ ಇಲ್ಲವೇ ಇಲ್ಲವೆಂದು ನಿರ್ಣಯಿಸಿ ಹೇಳಲು ತಕ್ಕ ಜಡ ಪದಾರ್ಥವು ಅಲಭ್ಯ. ವಿಚಾರವು ಜೀವಸಾಪೇಕ್ಷ. ಪ್ರಾಣಿಗಳಲ್ಲಿ ವಿಚಾರಶಕ್ತಿ ಅಲ್ಪಾಂಶವೂ ಇಲ್ಲವೆಂಬುದು ಪ್ರತ್ಯಕ್ಷ ವಿರುದ್ಧವಾದ ಅಸಂಬದ್ಧ ಪ್ರಲಾಪ, ಆಭಾಸಿಕ ವಿಜ್ಞಾನ. ಆದುದರಿಂದ ಎಲ್ಲವೂ ಜೀವಶಕ್ತಿಮಯ, ಆತ್ಮಸಾರವತ್, ಆನಂದವನ್ನು (ಮುಕ್ತಿಯನ್ನು) ಪರಮೋದ್ದೇಶವನ್ನಾಗಿ ಉಳ್ಳದ್ದು—ಎನ್ನುತ್ತವೆ ವ್ಯಾಸಭಾರತ, ಔಪನಿಷದಿಕ ಪ್ರಪಂಚ!

> "ಆನಂದಾದ್ಧ್ಯೇವ ಖಲ್ವಿಮಾನಿ ಭೂತಾನಿ ಜಾಯಂತೇ
> ಆನಂದೇನ ಜಾತಾನಿ ಜೀವಂತಿ
> ಆನಂದಂ ಪ್ರಯಂತ್ಯಭಿ ಸಂವಿಶಂತಿ !"

ಸತ್ಯ, ಸುಳ್ಳು, ಆಶಾವಾದ

ನಿರುದ್ದೇಶವೂ ಒಂದು ಉದ್ದೇಶವೆಂಬುದೂ ಸಂಪೂರ್ಣ ಪೂರ್ವಗ್ರಹ ರಹಿತವಾದ ಸತ್ಯಶೋಧನವೆಂಬುದೂ ಒಂದೇ. ಮಾನವ ಬುದ್ಧಿಯೊಂದು

ಪೂರ್ವಗ್ರಹ, ಸಹಜಪ್ರವೃತ್ತಿ, ಮೂಲಪ್ರವೃತ್ತಿ, ಅದು ಸ್ವತಃಪ್ರಮಾಣ ಸಿದ್ಧ; ಅದಕ್ಕೆ ಪರತಃ ಪ್ರಮಾಣವಿಲ್ಲ- ಅವನವನ ದೃಷ್ಟಿಯಿಂದ ಅದು ವ್ಯಕ್ತಿನಿಷ್ಠ-ರಸೆಲ್ಲಾದಿಗಳ ವಿಚಾರಸರಣಿಯನ್ನನುಸರಿಸಿದರೆ. ಆಗ ಅವನವನು ಕಂಡದ್ದು ಅವನವನಿಗೇ ಸತ್ಯವೆನ್ನಬೇಕಾಗಿ ಬಂದು ತತ್ವವಿಚಾರದ ವಿಮರ್ಶೆ ಅರ್ಥಹೀನವಾಗಿ ಹೋಗುವುದು. ಬಹು ಮನುಷ್ಯ ಸಾಮಾನ್ಯವಾದ ಅನುಭವಗಳಿರುವವರಿಗೆ ಹಾಗೆ ಹೇಳುವುದು ಅವಾಸ್ತವಿಕವಾಗುತ್ತದೆ. ಆತ್ಮಾನುಭವ ಸಂಪನ್ನನು ಜಗತ್ತಿನಲ್ಲಿ ಒಬ್ಬನೇ ಒಬ್ಬನು ಆಗಿಹೋಗಿದ್ದರೆ ಹಾಗೂ ಹೇಳಬಹುದಾಗಿತ್ತು. ಬಹುಮತನ ವೇದ್ಯವಾದ ಆತ್ಮಜ್ಞರ ಆಪ್ತವಾಕ್ಯಗಳು ಆತ್ಮಸತ್ಯತೆಯನ್ನು ಸಾರುವಾಗ ಅದನ್ನು ವಸ್ತುನಿಷ್ಠ (ಅಥವಾ ಉಳಿದೆಲ್ಲವುಗಳಂತೆ ಅಂತರ್ ವೈಯುಕ್ತಿಕ) ಎನ್ನಲು ಯಾವ ಅಭ್ಯಂತರವೂ ಇಲ್ಲ. ಕಲ್ಪನೆಗಳಲ್ಲಿ ಹೇಗೋ ಹಾಗೇ ಆಪ್ತವಾಕ್ಯಗತ ಆತ್ಮಾನುಭವಗಳಲ್ಲೂ ಸತ್ಯಾಸತ್ಯತೆಗಳಿರುವುದು ಮನುಷ್ಯ (ಸತ್ಯಶೋಧಕ) ಕಲ್ಪಿಸಿಕೊಂಡ ಸತ್ಯದ ಲಕ್ಷಣವನ್ನು ಆಧರಿಸಿರುತ್ತದೆ. ಪ್ರಮಾಣಶಾಸ್ತ್ರವು ಸತ್ಯದ ಒಂದಕ್ಕಿಂತ ಹೆಚ್ಚಿನ ಲಕ್ಷಣಗಳನ್ನು ಕೊಟ್ಟಿರುವುದು ಈ ಮಾತಿಗೆ ಸಾಕ್ಷಿ. ಸ್ವಪ್ನಸತ್ಯದಂಥ ಕೆಲಸಕ್ಕೆ ಬಾರದ ಅನುಭವ, ಘಟನೆ, ವಿಷಯ ಎಂಬುದನ್ನು ಜಗತ್ತಿನ ಆಧಾರ ಸತ್ಯವೆಂದು ಹೇಗೆ ಒಪ್ಪುವುದಿಲ್ಲವೋ ಹಾಗೇ ವಿಜ್ಞಾನೋಪಕರಣಕ್ಕಷ್ಟೇ ಗೋಚರವಾಗುವ ಭೌತಿಕತೆ ಎಂಬ ಸತ್ಯವನ್ನು ಅಥವಾ ಶುಷ್ಕಬುದ್ಧಿಗೆ ಮಾತ್ರ ಗೋಚರವಾಗುವ ವೈಚಾರಿಕತೆ, ಗಾಣಿತಿಕತೆ (ತಾರ್ಕಿಕತೆ) ಎಂಬ ಸತ್ಯಭಾವವನ್ನೂ ಭಾರತವು ಜಗದಾಧಾರ ಸತ್ಯದ ಲಕ್ಷ್ಯತಾವಚ್ಛೇದಕವೆಂದು ಒಪ್ಪಿಕೊಳ್ಳುವುದಿಲ್ಲ. ಸತ್ಯ ಪ್ರಪಂಚಗಳು ೨ ರೆಂಬ ಜೋಡವಾದದಂತೆ ೨ಕ್ಕೂ ಹೆಚ್ಚಿನ ಸತ್ಯಜಾತಿಗಳನ್ನು ಹೇಳಬಹುದು. ಆಗ ಸುಳ್ಳೂ ಒಂದು ಜಾತಿಯ ಸತ್ಯವೇ ಆಗಬೇಕಾಗಿ ಬರುವುದು. + ವಿಚಾರದ ಈ ದುರವಸ್ಥೆಯನ್ನು ಪರಿಹರಿಸಿಕೊಳ್ಳಲು ಜಗದಾಧಾರ ಸತ್ಯವು ಒಂದೇ ಎಲ್ಲ ಕೆಲಸಕ್ಕೆ ಬರುವ ಮೂಲ

+ "Lie is the first step towards truth."

ಸತ್ಯ; ಉಳಿದವುಗಳು ಸಾಪೇಕ್ಷವಾಗಿ ಆಭಾಸಿಕವಾದ ಸತ್ಯಗಳು ಎಂದು ವೇದಾಂತವು ವರ್ಣಿಸಹೊರಟದ್ದು!

ಪರಮಾತ್ಮನು ಜಗತ್ತನ್ನು ತನ್ನ ಲೀಲೆಗಾಗಿ ನಿರ್ಮಿಸಿದನೆಂಬ ನಂಬಿಗೆಗೆ ಎದುರಾಗಿ ಮನುಷ್ಯರನ್ನೂ ಇತರ ಜೀವಿಗಳನ್ನೂ ಆತನು ಆಟಿಗೆಯ ಸಾಮಾನುಗಳಂತೆ ಅವರ ಸುಖದುಃಖಗಳನ್ನು ಗಣಿಸದೆ ಬೇಕು ಬೇಕಾದ ಹಾಗೆ ನಡೆಸಿಕೊಳ್ಳುವುದರ ಮೂಲಕ ಗೋಳು ಹೊಯ್ದುಕೊಳ್ಳುತ್ತಾನೆ– ಅವನೆಂಥ ದೇವರು? ಎಂಬ ಪ್ರಶ್ನೆ ಬಂದದ್ದುಂಟು. "ನಿಷ್ಕರ್ಮಿ"ಗಳಾದ ಮುಕ್ತರ ಕರ್ಮದಂತೆ, "ನಿರ್ಗುಣಿ"ಗಳ ಗುಣ ವಂತಿಕೆಯಂತೆ, "ನಿಃಸ್ಪೃಹರ" ಲೋಕಹಿತೇಚ್ಛೆಯಂತೆ ಪರಮಾತ್ಮನ ಲೀಲೆಯಾದ ಸೃಷ್ಟಿ-ಸ್ಥಿತಿ-ಲಯಗಳಾದರೂ ಸ್ವಸ್ತಿಪಂಥವೆಂದೇ ಭಾವಿಸ ಲರ್ಹ. ಅಧಿಷ್ಠಾನ, ಕರ್ತೃ, ಕರಣ, ಕರ್ಮ ಮತ್ತು ದೈವೇಚ್ಛೆಗಳೆಂಬ ಐದು ಕಾರಣ ಸಾಮಗ್ರಿಗಳಿಂದ ಪ್ರಪಂಚದ ಅವಸ್ಥೆಗಳು ಸಂಭವಿಸುವು- ವೆಂದಾಗ ದೈವೇಚ್ಛೆಯು ಕಾರಣತ್ವ ಐದನೆಯ ಒಂದು; ಉಳಿದ ನಾಲ್ಕು ಅಂಶಗಳು ದೇವರ ಇಚ್ಛೆಯು ಜಾತಿಗೆ ಸೇರಿದ ಸ್ವಭಾವರೂಪದವುಗಳು. ಮಾಯಾತ್ಮಕ ಸ್ವಭಾವದ ಜಾಲದಿಂದ ಮುಕ್ತರಾಗಲು ಮನುಷ್ಯರು ದೇವರಿತ್ತ ಇಚ್ಛಾಶಕ್ತಿಯ ಬಲದಿಂದ ದೈವೇಚ್ಛೆಯನ್ನು ಅನುಕೂಲಿಸಿ ಕೊಂಡು ಜಡದ ಕಾರ್ಯಜಾಲದಿಂದ ಮುಕ್ತರಾಗಬಹುದೆಂಬುದು ಲೀಲಾ ವಾದದಿಂದ ನಿಗಮನಿಸಲಾದ ನಿರಾಶಾವಾದಕ್ಕೆ ಉತ್ತರ. ವಿಜ್ಞಾನವು ಜಗತ್ತಿನ "ಏಕೆ"ಗೆ ಉತ್ತರ ಕೊಡಲಾರದೆ "ಹೇಗೆ"ಗೆ ಉತ್ತರ ಕೊಡ ಹೋದರೂ ಸಂಪೂರ್ಣ ಯಶಸ್ವಿಯಾಗಿಲ್ಲ. ಆದುದರಿಂದ ಪಾರಿಶೇಷಿಕ ನ್ಯಾಯದಂತೆ ವಿದಗ್ಧನಿಗುಳಿದದ್ದು ಕಾರ್ಯಕಾರಣಧರ್ಮಕ್ಕೆ ವಿರುದ್ಧವಾದ ಇಚ್ಛಾಶಕ್ತಿಯ ರಕ್ಷಣೆಯೊಂದೇ. ಅದೇ ಆಶಾವಾದದ ಅನಿವಾರ್ಯ ಆಧಾರ.

ವ್ಯಾಸನ ಆತ್ಮ

ಈ ಬಗೆಯ ಮೂಲಭೂತ ಆಶಾವಾದವು ಭಾರತದ ತತ್ತ್ವಜ್ಞಾನದ ಒಳದನಿಯಾಗಿರುವಾಗ "ಟ್ರಾಜೆಡಿ" ಪ್ರಿಯರಾದ (ಆ ಪ್ರಿಯತೆಯುಳ್ಳವರ

ನಿರಾಶಾವಾದವನ್ನು ಮೆಚ್ಚಿಕೊಂಡ) ಪಾಶ್ಚಾತ್ಯರು ಭಾರತ ನಿರಾಶಾವಾದಿ, ನಿಷ್ಕ್ರಿಯವಾದಿ ಎಂದೂ ಪಶ್ಚಿಮಾರ್ಧಗೋಲದವರು ಆಶಾವಾದಿ, ಕ್ರಿಯಾವಾದಿಗಳೆಂದೂ ಹೇಗೆ ಹೇಳುವರೋ ಅವರಿಗೇ ಗೊತ್ತು. ನಿರಾಶಾಸ್ಥಿತಿಯು, ಜಗತ್ತುಚ್ಛಬುದ್ಧಿಯು, ಭೋಗಜಿಹಾಸೆಯು ಸಾಧಕನ ಸಾಧನದ ಒಂದು ಮುಖ್ಯ ಹಂತ, ಅವಸ್ಥೆ; ಅದು ಸಾಧಕನ ಸರ್ವಾವಸ್ಥೆಗಳಿಗೆ ಸಾಧಾರಣವೂ ಅಲ್ಲ, ಅಂತ್ಯಾವಸ್ಥೆಯೂ ಅಲ್ಲ. ಪೂರ್ಣತ್ವವೇ ಸಿದ್ಧಿ. ಪೂರ್ಣತೆ, ಮುಕ್ತಿ, ಬ್ರಹ್ಮತ್ವ, ಆತ್ಮಸಾಕ್ಷಾತ್ಕಾರ Absolute perfection of spiritual personality ಎಂಬಿವು ಪರ್ಯಾಯಾರ್ಥಕ ಪದಗಳು. ರಮಣರೂ ಅರವಿಂದರೂ ಈ ಶತಮಾನದ ಪೂರ್ಣಾತ್ಮರು—ವ್ಯಾಸಧರ್ಮಪ್ರಭರು, ಭಾರತದ ಮತ್ತು ಜಗತ್ತಿನ ಆದರ್ಶಮಾನವರು. ದಾನವ, ಮಾನವ, ದೇವರುಗಳು ನಿತ್ಯಪದಾರ್ಥದ ದೃಷ್ಟಿಯಿಂದ ಜಾತ್ಯಾಭಿನ್ನರಲ್ಲ; ಅವರಿಗೆ ಆತ್ಮವು ಸಾಧಾರಣ; ಆತ್ಮಕ್ಕೆ ಹೊದಿಕೆಯಂತಿರುವ ತಾಮಸ, ರಾಜಸ, ಸಾತ್ವಿಕಗುಣಗಳು ಅವರ ಪ್ರತ್ಯೇಕತೆಗೆ ಅವಚ್ಛೇದಕಗಳು. ಆದುದರಿಂದ ಮಾನವ ಕಲ್ಪಿತ ನಿರಾಕಾರ ಬ್ರಹ್ಮನೂ Anthropomorphic ಮಾನವಾಕೃತ ಕಲ್ಪನೆಯಿಂದ ಕಲ್ಪಿತವಾದ ಆಕಾರವೆಂಬ ವಾದದಲ್ಲಿ ಹುರುಳಿಲ್ಲ. ಮಾನವ್ಯ ಕಲ್ಪನಾಚ್ಛಾಯೆ ಅದರಲ್ಲೂ ಇದೆಯೆಂಬುದಾದರೆ, **ಮಾನವನಿಗೆ ಅಂಥ ಮಾನವೀಯ ಛಾಯಾಂಶ ಕೂಡ ಇಲ್ಲದ ಅಮಾನವತೆಯನ್ನು ಕಲ್ಪಿಸಲು ಅಸಾಧ್ಯ**ವೆಂದು ಕಠೋರವಾಗಿ ಪ್ರತ್ಯುತ್ತರ ಕೊಡಬೇಕಾದೀತು; ಆಗ ವಿಜ್ಞಾನದ ಭೌತಿಕತೆಯುಳ್ಳ ಪ್ರಾಥಮಿಕ ಗುಣಪುಂಜಗಳಲ್ಲೂ ಮಾನವೀಯ ಕಲ್ಪನೆ ಹುದುಗಿದೆ ಎಂದು ಮಾರುತ್ತರ ಕೊಡಬಹುದು. ಮಾನತ್ವದಲ್ಲಿ ಅವನ ಶರೀರದ ಜಡಾಂಶವಿದೆ; ಅದು ಸರ್ವವಸ್ತು ಸಾಧಾರಣ; ಹಾಗೇ ಆದರಲ್ಲಿ ಆತ್ಮಭಾವವಿದೆ; ಅದೂ ಸರ್ವವಸ್ತು ಸಾಧಾರಣ. ಹೀಗಿರುವಾಗ ವಿಶಿಷ್ಟ ಮಾನವೀಯತೆ ಎಂದರೆ ಏನು? ಅದೆಲ್ಲಿದೆ? ವ್ಯವಹಾರ ಮಾನವನು ಭೋಗಾಸಕ್ತ; ಅವನಷ್ಟೇ ಸರ್ವ ಮಾನವ ಪ್ರತಿನಿಧಿಯೆಂದು ಒಪ್ಪುವುದು ಪ್ರತ್ಯಕ್ಷ ವಿರುದ್ಧ; ಹಾಗೆಂದು ತಿಳಿದ ಅಲ್ಪವ್ಯಾಪ್ತಿಯ ಪ್ರತ್ಯಕ್ಷಕ್ಕೆ ಅವನು ರಾಜಸ. ತಾಮಸತ್ವ, ರಾಜ

ಸತ್ವ, ಸಾತ್ವಿಕತ್ವಗಳು ಆತ್ಮವಿಕಾಸದ ಮೂರು ಅವಸ್ಥೆಗಳು. ಮಾನವತ್ವವು ಆತ್ಮದ ಅಳತೆಯ ಮೂಲ ಘಟಕವಲ್ಲ. ಆತ್ಮವೇ ಸರ್ವಮೂಲ. ಆತ್ಮವು ಸಾತ್ವಿಕತೆಯನ್ನೂ ಮೀರಿ ನಿಂತ ಸ್ವಸ್ತಿಪಂಥದ ಬ್ರಹ್ಮ ಎಂದು ಕೂಡ ವರ್ಣಿತವಾಗಿರುವಾಗ, ಈಶ್ವರಕಲ್ಪನೆಯ ದೇವತ್ವಕ್ಕೂ ಅದೇ ಮೂಲಾಧಾರವೆಂದಿರುವಾಗ, ಅದೆಂದೂ ಈಶ್ವರನಷ್ಟು ಅತ್ಯಲ್ಪಾಂಶ ಮಾನವೀಯಕಲ್ಪನೆಯಿಂದ ಪರಿಸೀಮಿತವಾದುದಲ್ಲ. ಆದುದರಿಂದ ವ್ಯಾಸನ ಆತ್ಮದ ವ್ಯಾಸವು (Diameter) ಪರಧಿರಹಿತವಾದದ್ದು!

ಪಾಶ್ಚಾತ್ಯ ಆರೋಪ

ಹಿಂದುಗಳ ಅನುಭಾವ (ಯೋಗ) ಸಿದ್ಧಾಂತವು ವಿಧಿವಾದಕ್ಕೊಯ್ದು ಮುಟ್ಟಿಸುವುದು, ಅದನ್ನು ನಾವು ಸ್ವೀಕರಿಸೆವು, ಜೀವನ ಅದನ್ನು ಅಲಕ್ಷಿಸಿ ಕಟ್ಟಿಕಡಿದು ಮುಂದೆ ಹರಿದು ಹೋಗುತ್ತದೆ—ಎಂಬ ಅಭಿಪ್ರಾಯ ವಿಲಿಯಂ ಜೇಮ್ಸ್ ಎಂಬ ಅಮೇರಿಕಾದ 'ತತ್ವಜ್ಞಾನಿ' ಯದೆಂದು outlines of philosophy (P. 438) ಹೇಳಲು, ತತ್ವಜ್ಞಾನವು ಆತ್ಯಂತಿಕ ಸತ್ಯ ಒಂದೇ ಒಂದೆಂದು ಹೇಳಕೂಡದು, ಅದು ನಮ್ಮ ಅತಿಪ್ರಿಯ ಆಸೆಗಳನ್ನೂ ಹೃದಯಗತ ಪ್ರತ್ಯಾಶೆಗಳನ್ನೂ ನಿರಾಶೆಗೀಡುಮಾಡುವಂತಿರಬಾರದು ಎಂದು ಹೇಳುವ **ಹುಕುಂಶಾಹಿ** ತರ್ಕವೇ ಕಾರಣ. ಇಂಥ ಅಭಿಪ್ರಾಯಗಳೂ ಖಂಡನತರ್ಕಗಳಾಗಬಹುದಾದರೆ ಹಟಮಾರಿ ಮಗುವಿನ ಅವಿಧೇಯತೆ ಕೂಡ ಮಹಾತತ್ವಜ್ಞಾನ ಸಮರ್ಥಿತವಾಗಬಹುದು! ಆದರೆ ಹಿಂದುಗಳಲ್ಲಿ ಹಲವರ ಹಿಂದು ತತ್ವಜ್ಞಾನವಿಂದು ಜೇಮ್ಸ್ ಹೇಳಿದಂತೆಯೇ ಇರುವುದೇನೋ ನಿಜ; ಹಾಗೇ ಜೇಮ್ಸ್‌ನಂಥ ವಾದಿಗಳೂ ಇಂದು ಹಿಂದುಗಳಲ್ಲಿ ಹುಟ್ಟಿದ್ದಾರೆ! ಹಿಂದುಗಳಲ್ಲಿ ಯಾರನ್ನಾದರೂ ಎತ್ತಿ ಹಿಡಿದು ಅವರು ಮಾಡಿದ ಉಪನ್ಯಾಸ ಅಥವಾ ಜ್ಞಾನಲವದುರ್ವಿದಗ್ಧನಾದ ಯಾವ ನಾವರೂ ಪಾಶ್ಚಾತ್ಯಹಿಂದುಧರ್ಮಜ್ಞ ಹೇಳಿದ ವಿವರಣೆ ಸಾಕೆಂದು, ಅದನ್ನಾಧರಿಸಿ ಹಿಂದು ತತ್ವಜ್ಞಾನ ಹಾಗಿದೆ, ಹೀಗಿದೆ ಎನ್ನಲು ಪಾಶ್ಚಾತ್ಯರೂ ಅವರ ಅಂಧಾನುಯಾಯಿಗಳಾದ ಪೌರಸ್ತ್ಯರೂ ಭಾರತದ ಪ್ರಿಬಪ್

ಆಡಳಿತದ ಅವಧಿಯಿಂದ ಪ್ರಚಾರಮಾಡಲಾರಂಭಿಸಿದ್ದು ಎಲ್ಲರಿಗೂ ತಿಳಿದ ಸಂಗತಿ. ಇಂಥ ಮಿಶನರಿ ಬುದ್ಧಿಗೆ ಮ್ಯಾಕ್ಸ್‌ಮುಲ್ಲರ ಕೂಡ ಹೊರತಾಗಿಲ್ಲ (ಅವನ Chips from the German workshop ಸಂಪುಟಗಳನ್ನೋದಿರಿ). ಸಾಂಸ್ಕೃತಿಕ ಕೃತಿಗಳ ತೂಕದ ತಾರತಮ್ಯವನ್ನರಿಯದೆ ಅಥವಾ ಅವುಗಳ ವಿವಿಧ ಭಾಷ್ಯ-ವ್ಯಾಖ್ಯಾನಾದಿಗಳ ಸಾಪೇಕ್ಷ ಸತ್ಯಾಂಶಗಳ ಆಧಿಕ್ಯವನ್ನು ಅರಿಯಲಾರದೆ ಒಂದು ದೇಶದ ಸಂಸ್ಕೃತಿ-ನಾಗರಿಕತೆಗಳ ಚರಿತ್ರೆ ಬರೆಯ ಹೊರಡುವ ಅಧಿಕ ಪ್ರಸಂಗವನ್ನು ಪಾಶ್ಚಾತ್ಯರಲ್ಲಿ ಮಾಡಿದಷ್ಟು ಜನರು ಪೌರಸ್ತ್ಯರಲ್ಲಿ ಸಿಗಲಿಕ್ಕಿಲ್ಲ. ವಿಧಿವಾದ ದಾಸ್ಯ-ಪೌರಾಣಿಕತೆಗಳು ಬಹು ಸಂಖ್ಯಾತ ಹಿಂದುಗಳನ್ನು ಅಹಿಂದುಗಳನ್ನಾಗಿ ಮಾಡಿರುವುದೀಗ ದುರ್ದೈವದ ಸಂಗತಿ; ಹಾಗೇ 'ನಿಸರ್ಗ'ದ ಅರ್ಥವ್ಯಾಪ್ತಿಯನ್ನು ಸಂಪೂರ್ಣವಾಗಿ ಅರಿಯದೆ ನಿಸರ್ಗವನ್ನಾಳುವ ಗಂಡುತನ ಮಾನವನಲ್ಲಿದೆ ಎಂದು ಮುಂತಾಗಿ ಕೊಚ್ಚುವ, ನಿಸರ್ಗಪರಿಹಾಸಕ್ರೀಡಾದ, ಢೋಂಗಿದಾಸ ಪಾಶ್ಚಾತ್ಯರ ಅನುಯಾಯಿಗಳಾಗ ಹೊರಟ ಹಿಂದುಗಳ ಪೌರುಷಾಭಾಸವೂ ಕರುಣಾಸ್ಪದ! "When we have learned to reverence liberty as well as wealth, we too shall have our Renaissance—ಸ್ವಾತಂತ್ರ್ಯವನ್ನೂ ಐಶ್ವರ್ಯವನ್ನೂ ಗೌರವ ಪ್ರೀತಿಗಳಿಂದ (ಭಯಭಕ್ತಿಗಳಿಂದ) ನೋಡಲು ಕಲಿತಾಗ ನಮಗೂ ಒಂದು ಪುನರುಜ್ಜೀವನದ ಕಾಲ ಬಂದೇ ಬರುವುದು" ಎಂಬ ವಿಲ್‌ಡ್ಯೂರಂಟನೂ ಒಬ್ಬ ತತ್ವಜ್ಞಾನಿ, ತತ್ವಜ್ಞಾನದ ಇತಿಹಾಸಕಾರ! ಭಾರತದ ಬುದ್ಧಿವಂತ ಇವನ್ನು ನಂಬಬೇಕು—ಆಧುನಿಕನೆನ್ನಿಸಬೇಕಾದರೆ! ಏಕೆ ? ಇತ್ತೀಚಿನ ಗತಚರಿತ್ರಾವಧಿಯಲ್ಲಿ ೩೦೦ ವರ್ಷಗಳ ಹಿಂದೆ ಯುರೋಪಿನಲ್ಲಿದ್ದ ವಿಜ್ಞಾನ ವಿಮುಖತೆ ಭಾರತದಲ್ಲೂ ಇದ್ದುದಲ್ಲದೆ, ಅದಕ್ಕಿಂತ ಅತಿಮಂದಗತಿಯಿಂದಲೇ ಈಗಲೂ ಐಹಿಕ ಜೀವನದ ಪ್ರಗತಿಗೆ ಹೇತುವಾದ ವಿಜ್ಞಾನಾಭ್ಯಾಸ ಭಾರತದಲ್ಲಿ ನಡೆಯುತ್ತಿರುವುದು ಕಾರಣ.

ವಿಜ್ಞಾನ ಮತ್ತು ವೇದಾಂತ

ವಿಜ್ಞಾನ ವೇದಾಂತಗಳು ಪ್ರತ್ಯಕ್ಷ-ಅಪರೋಕ್ಷ ಅನುಭವಗಳ ರುಮಂತೆ-

ಅಮುಕ್ತ ಜಿಜ್ಞಾಸುವಿನ ದೃಷ್ಟಿಯಲ್ಲಿ. ಅವು ಪರಸ್ಪರ ಎಂದೂ ಎಣ್ಣೆ-ಸೀಗೆ ಸ್ನೇಹ ಉಳ್ಳವುಗಳಲ್ಲ; ಒಂದರ ಜ್ಞಾನ ಪ್ರಮಾಣಗಳೇ ಬೇರೆ, ಇನ್ನೊಂದರ ಜ್ಞಾನ ಪ್ರಮಾಣಗಳೇ ಬೇರೆ. ಭಿನ್ನ ಪ್ರಮಾಣಗಳನ್ನು ಆಧರಿಸಿದ ಎರಡು ಶಾಸ್ತ್ರಗಳಲ್ಲಿ ಒಂದನ್ನಿನ್ನೊಂದು ಖಂಡಿಸಲಾರದು. ಅಮುಕ್ತನಿಗೆ ಎರಡೂ ಅನಿವಾರ್ಯ ಪ್ರಯೋಜನಕಾರಿಗಳು- ದೇಹ-ಆತ್ಮಗಳಂತೆ, ಪ್ರಪಂಚ-ಪರಮಾತ್ಮರಂತೆ, ವಾಸ್ತವ-ಆದರ್ಶಗಳಂತೆ. ಮುಕ್ತನಿಗೆ ಕೂಡ ಅಮುಕ್ತನ ದೃಷ್ಟಿಯಿಂದ ಎರಡೂ ಕರ್ಮಸಾಧನಗಳು; ಸ್ವದೃಷ್ಟಿಯಿಂದ ಮಾತ್ರ ಅವನಿಗೆ ವೇದಾಂತಾನುಭವವೊಂದೇ ಪರಮಾರ್ಥ, ಪರಮ ಪ್ರಯೋಜನ, ಪರಮಸತ್ಯ. ಆದುದರಿಂದ Science without philosophy is blind and philosophy without science is lame— ವೇದಾಂತರಹಿತ ವಿಜ್ಞಾನವು ಕುರುಡು, ವಿಜ್ಞಾನರಹಿತ ವೇದಾಂತವು ಕುಂಟು ಎನ್ನಬಹುದು, ಪ್ರಾಪಂಚಿಕರು! ಸಿದ್ಧಾಂತರಹಿತ ವ್ಯವಹಾರವು ಹೀನಾರ್ಥ, ವ್ಯವಹಾರರಹಿತ ಸಿದ್ಧಾಂತವು ಅರ್ಥಹೀನ ಹತ್ತುಸಮಸ್ತರಿಗೆ! ಅನುಭವಕ್ಕೆ ಬರುವ ವರೆಗೆ ವೇದಾಂತವೊಂದು ಸಿದ್ಧಾಂತ!

ಮನುಷ್ಯರು ಮತ್ತು ಅವರ ಜೀವನ ಸೂತ್ರಗಳು- ಎಂಬೆರಡರಲ್ಲಿ ಮನುಷ್ಯರೇ ಪ್ರಧಾನರು. ಏಕೆಂದರೆ ಜೀವನಸೂತ್ರಗಳನ್ನು ಕಂಡು ಹಿಡಿಯುವವರೂ ಅವರೇ, ಅವುಗಳನ್ನು ಆಯ್ದೋ ಹಾಗೆಯೋ ಅನುಸರಿಸುವವರೂ ಬಿಡುವವರೂ ಅವರೇ; ಮೌಲ್ಯಗಳೆಂದು ಯಾವುವನ್ನಾದರೂ ಗುರುತಿಸುವವರೂ ಅವರೇ, ಅವುಗಳನ್ನು ನಂಬಿ ಅವುಗಳನ್ನು ಸಾಧಿಸಲು ಯತ್ನಿಸುವವರೂ ಬಿಡುವವರೂ ಅವರೇ. ಅಂಥ ಮನುಷ್ಯರಿಗೆ ಸ್ವಜ್ಞಾನ-ಆತ್ಮಜ್ಞಾನಗಳಿಲ್ಲದೆ ಹೋದರೆ ಅವರ ಪರಜ್ಞಾನ ಎಷ್ಟು ವೈಜ್ಞಾನಿಕವೆಂದು ಗ್ರಹಿಸಿದರೂ ಪರವಾದ ಸುತ್ತಲಿನ ಜೀವ-ಜಡ ಜಗತ್ತಿನೊಡನೆ ಅವರು ಸಂಪೂರ್ಣ ಸಮಾಧಾನಕರವಾಗಿ ಹೊಂದಿಕೊಂಡು ಹೋಗಲು ಶಕ್ತರಾಗುತ್ತಾರೆಯೇ? ಪಾಶ್ಚಾತ್ಯರೇ ತಮ್ಮನ್ನು Extroverts ಬಹಿರ್ಮುಖರೆಂದುಕೊಂಡು ಆತ್ಮಜ್ಞಾನವಿಮುಖರಾಗಿ ತತ್ತ್ವಜ್ಞಾನ ಹೇಳಹೊರಟಿರುವುದು ಶುದ್ಧ ಅವೈಜ್ಞಾನಿಕ. ಪ್ರಪಂಚದಲ್ಲಿರುವ ತಾತ್ತ್ವಿ

ಇತರರಿಗೆ ತಮಗಿತರರು ಹೇಗೋ ಹಾಗೇ ವಸ್ತುನಿಷ್ಠ ಪದಾರ್ಥಗಳಾಗ ಬಲ್ಲರೆಂಬುದನ್ನು ಮರೆತ ಅವರ ವಿಚಾರಕ್ಕೂ ಜೀವನೋಪಯೋಗಿಯಾದ ಆಚಾರಕ್ಕೂ ಸರಿಯಾದ ಸಂಬಂಧವಿಲ್ಲ. ಅವರ ಉತ್ಕರ್ಷ ಏನಾದರೂ ಲೌಕಿಕವಾಗಿ ಕಂಡುಬಂದರದು ಅವರು ಹೇಳುವುದು ಶಾಸ್ತ್ರ, ಹಾಕುವುದು ಗಾಳ ಎಂಬಂತೆ ನಡೆದುಕೊಂಡಿರುವುದರಿಂದಲೇ. Introverts ಅಂತರ್ಮುಖರಾದ ಪೌರಸ್ತ್ಯರು ಆತ್ಮಜ್ಞಾನವಾಗುವವರೆಗೆ ಪರಜ್ಞಾನ ಗೌಣವೆಂದು ಮಧ್ಯಯುಗದಿಂದ ಈವರೆಗೆ ತಿಳಿದು ನಡೆದುಕೊಂಡದ್ದು ಹಾನಿಕರ. ಸ್ವಪರ-ಜ್ಞಾನಗಳೆರಡೂ ಒಟ್ಟೊಟ್ಟಿಗೇ ಆಗುತ್ತ ಹೋಗುವುದೇ ಆರೋಗ್ಯಕರ, ಸ್ವಾಭಾವಿಕ. ಸ್ವ-ಪರತ್ವಗಳು ಸಾಪೇಕ್ಷ, ಅನಿತ್ಯ; ಭೂತವಸ್ತುವಾದ ಬ್ರಹ್ಮ (ಆತ್ಮ) ಎರಡಕ್ಕೂ ಅತೀತ ಮತ್ತು ಆಧಾರ. ಪ್ರಾಚೀನ ಪಾಶ್ಚಾತ್ಯತೆಗೆ ಇದರ ಅಂಶಗೊತ್ತಿತ್ತು. ಆದುದರಿಂದ ಭಾರತದಂತೆಯೇ ಪಾಶ್ಚಾತ್ಯಪ್ರಪಂಚವೂ ತನ್ನ ಪ್ರಾಚೀನ ನಾಗರಿಕತೆಯನ್ನು ಸಮ ಸಮ ಔನ್ನತ್ಯಕ್ಕೆ ಒಯ್ದು ಮುಟ್ಟಿಸಲು ಸಮರ್ಥವಾಯಿತು.

ವಿಜ್ಞಾನವು ಸ್ವೇತರ ಶಾಸ್ತ್ರಗಳನ್ನು ಅಪ್ರಾಮಾಣಿಕವೆಂದುದನ್ನು ಡಾ. ರಾಧಾಕೃಷ್ಣರು ಹೀಗೆ ಖಂಡಿಸಿದ್ದಾರೆ: Any metaphysical theory can be verified indirectly by the adequacy to account for the observed facts. Speculative Metaphysics is a tenable enquiry with a field of its own. Empirical adequacy and logical consistency govern the Indian theory of Reality. 'Reality is what is ideally intelligible. What may be, if it must be, it is' .... Nature and human existence are not self-explanatory........There is a fundamental principle standing behind and beyond the world process which inspires and informs the process which is steadily manifesting new values ....Science reveals to us that there is a spiritual presence greater than man. The end of man is to place himself in har-

mony with this presence........... A tennis ball is an object but man is both subject and object to himself........Man becomes aware of his finitude because he has infinite longings —ದೃಗ್ಗೋಚರವಾದ ಸಂಗತಿಗಳಿಗೆ ತಕ್ಕ ವಿವರಣೆಯನ್ನು ಕೊಡುವ ಶಕ್ತಿಯೆಂಬ ಪರೋಕ್ಷ ಪರೀಕ್ಷೆಯಿಂದ ಯಾವ ಅತಿಭೌತಶಾಸ್ತ್ರೀಯ ಸಿದ್ಧಾಂತವನ್ನೂ ಪರೀಕ್ಷಿಸಿ ಸರಿಯೋ ತಪ್ಪೋ ಎಂದು ನಿರ್ಧರಿಸಬಹುದು. ತನ್ನದೇ ಆದ ಕ್ಷೇತ್ರವುಳ್ಳ ಊಹಾಪ್ರಧಾನ ಅತಿಭೌತ ಶಾಸ್ತ್ರವು ಗ್ರಾಹ್ಯವೆನ್ನಿಸುತ್ತದೆ. ಸತ್ಯದ ಭಾರತೀಯ ಸಿದ್ಧಾಂತಕ್ಕೆ ಐಹಿಕ ಪರಿಪೂರ್ಣತೆ ಮತ್ತು ತಾರ್ಕಿಕ ಸಾಮಂಜಸ್ಯಗಳು ನಿಯಾಮಕಗಳಾಗಿವೆ. 'ಧ್ಯೇಯವಾದೀಯವಾಗಿ ತಿಳಿಯುವುದೇ ಸತ್ಯಪದಾರ್ಥ. ಇರಬಹುದಾದದ್ದು, ಅದು ಇರಲೇ ಬೇಕಾದುದಾದರೆ, ಇದ್ದೇ ಇದೆ'............ನಿಸರ್ಗವೂ ಮಾನವ ಜೀವನವೂ ತಮಗೆ ತಾವೇ ವಿವರಣೆಯನ್ನು ಕೊಡಲಾರದಂಥವು. ಜಗತ್ ಪ್ರವಾಹದ ಹಿನ್ನೆಲೆಯಲ್ಲಿ ಒಂದು ಮೂಲಭೂತ ತತ್ತ್ವವಿದೆ; ಅದು ಕ್ರಮಶಃ ಹೊಸ ಹೊಸ ಮೌಲ್ಯಗಳನ್ನು ಹೊಳೆಯಿಸುತ್ತದೆ......ಮನುಷ್ಯನಿಗಿಂತ ಹಿರಿಯದಾದ ಆಧ್ಯಾತ್ಮಿಕ ಇರವೊಂದು + ಇದೆ ಎಂಬುದನ್ನು ವಿಜ್ಞಾನ

\+ ಅಕ್ಷರಂ ಪರಮಂ ಬ್ರಹ್ಮ
ಸನಾತನಮಲಂ ವಿಭುಂ ।
ವೇದಾಂತೇಷು ವದಂತ್ಯೇಕಂ
ಚೈತನ್ಯಂ ಜ್ಯೋತಿರೀಶ್ವರಂ ॥೧॥
ಆನಂದಃ ಸಹಜಸ್ತಸ್ಯ
ವ್ಯಜ್ಯತೇ ಸ ಕದಾಚನ ।
ವ್ಯಕ್ತಿಃ ಸಾತಸ್ಯ ಚೈತನ್ಯ-
ಚಮತ್ಕಾರರಸಾಹ್ವಯಾ ॥೨॥
ಆದ್ಯಸ್ತಸ್ಯ ವಿಕಾರೋಯಃ
ಸೋऽಹಂಕಾರ ಇತಿ ಸ್ಮೃತಃ ।
ತತೋऽಭಿಮಾನಸ್ತತ್ರೇದಂ
ಸಮಾಪ್ತಂ ಭುವನತ್ರಯಂ ॥೩॥

—ಅಗ್ನಿಪುರಾಣದ ೩೩೯ನೆಯ ಅಧ್ಯಾಯ

ಹೊರಗೆಡಹುತ್ತದೆ…… ಈ ಇರವಿನೊಡನೆ ಸಾಮಶ್ರುತ್ಯವನ್ನು ಸಾಧಿಸಿ ಕೊಳ್ಳುವುದೇ ಮಾನವನ ಗುರಿ. ಟೆನಿಸ್ ಚಂಡೊಂದು ವಸ್ತು, ವಿಷಯ; ಮನುಷ್ಯನು ತನಗೆ ತಾನೇ ಜ್ಞಾತೃ ಮತ್ತು ಜ್ಞೇಯ (ವಸ್ತು)……… ಅಪ್ರಮಿತ ಆಸೆಗಳಿರುವುದರಿಂದಲೇ ಮನುಷ್ಯನಿಗೆ ತನ್ನ ಪರಿಮಿತಿಯ ಜಾಗರ ಉಂಟಾಗುವುದು!

ಪಾಶ್ಚಾತ್ಯ ಸಿದ್ಧಾಂತ

ಥಾಮಸ್ ಹಾಬ್ಸ್ (೧೫೮೮—೧೬೭೯)

ಹುಟ್ಟಿನಿಂದಲೂ ಪರಿಣಾಮಗಳಿಂದಲೂ ಎಲ್ಲ ಜ್ಞಾನವೂ ವ್ಯಾವಹಾರಿಕ (Emperical). ಕಾರಣಗಳಿಂದ ಕಾರ್ಯಗಳನ್ನೂ ಕಾರ್ಯಗಳಿಂದ ಕಾರಣಗಳನ್ನೂ ತರ್ಕಿಸಿ ನಿರ್ಣಯಿಸುವುದೇ ತತ್ವಜ್ಞಾನ. ನಮ್ಮ ಎಲ್ಲ ಪ್ರತ್ಯಕ್ಷ ಜ್ಞಾನಗಳಿಗೂ ಅತ್ಯಂತ ಕನಿಷ್ಠವಾದ ಸರ್ವಸಾಧಾರಣ ಅಭಿದಾಯಕಗಳೆಂದರೆ (Denominators) ಭೌತಪದಾರ್ಥ (Matter) ಮತ್ತು ಚಲನ. ಕೇವಲ ಕಾಯಗಳೂ ಅವುಗಳ ಚಲನವಲನಗಳೂ ತತ್ವಜ್ಞಾನದ ವಿಷಯಗಳು. ತನ್ನ ಸಂವೇದನಾತ್ಮಕ ಮತ್ತು ಜ್ಞಾನಾತ್ಮಕ ಅವಸ್ಥೆಗಳಲ್ಲಿ ಪ್ರಜ್ಞೆಯು (Consciousness) ನರಮಂಡಲದ ಒಂದು ಅಪಸ್ವರ (Jarring) ಅಥವಾ ಘರ್ಷಣ; ತನ್ನ ಭಾವನಾತ್ಮಕ, ಇಚ್ಛಾತ್ಮಕ ಮತ್ತು ಸಂವೇಗವಾಹಕ ಕರ್ಮೇಂದ್ರಿಯ ಕ್ರಿಯಾವಸ್ಥೆಗಳಲ್ಲಿ ಅದು ಒಂದು ಹಿಂದೊದೆತ. ಭೌತಿಕ ಮತ್ತು ಮಾನಸಿಕ ಘಟನೆಗಳೆಲ್ಲವನ್ನೂ ತತ್ವಜ್ಞಾನದ ೪ ವಿಭಾಗಗಳು ತಮ್ಮಲ್ಲಿ ಅಡಕಗೊಳಿಸಿ ಕೊಳ್ಳುತ್ತವೆ: ಜ್ಯಾಮಿತಿಯು ಕಾಯಗಳ ದೇಶಿಕ ಚಲನವಲನಗಳನ್ನು ವರ್ಣಿಸುತ್ತದೆ; ಭೌತಶಾಸ್ತ್ರವು ಚಲ ಕಾಯಗಳು ಪರಸ್ಪರ ಉಂಟುಮಾಡುವ ಪರಿಣಾಮಗಳನ್ನು ಹೇಳುತ್ತದೆ; ನೀತಿಶಾಸ್ತ್ರವು ನರಮಂಡಲಗಳ ಚಲನಗಳನ್ನು ವಿವರಿಸುತ್ತದೆ; ರಾಜ್ಯಶಾಸ್ತ್ರವು ನರ-ಮಂಡಲಗಳು ಪರಸ್ಪರ ಉಂಟುಮಾಡುವ ಪರಿಣಾಮಗಳನ್ನು ಬಣ್ಣಿಸುತ್ತದೆ. ನ್ಯೂಟನ್ನನ ಪ್ರಥಮ ಚಲನ ವಿಧಿಯು ಮನುಷ್ಯನಲ್ಲಿ ಆತ್ಮಸಂಗೋಪನ, ಆತ್ಮಾಸ್ತಿತ್ವಸಮರ್ಥನೆಗಳ ರೂಪದಲ್ಲಿ ವ್ಯಕ್ತವಾಗುತ್ತದೆ. ಆದುದರಿಂದ ಸಾವಯವ-ನಿರವಯವ (ಸೇಂದ್ರಿಯ-ನಿರಿಂದ್ರಿಯ, ಜೀವ-ಜಡ) ಕಾಯಗಳೆಲ್ಲವುಗಳ ಪ್ರಾಥಮಿಕ ಸ್ಥಿತಿಯೂ ಘರ್ಷಣ, ಸಂಘಟ್ಟನ ಮತ್ತು ಯುದ್ಧ. ದ್ವಿತೀಯ ಚಲನ ವಿಧಿಯು—ತನ್ನ ಜೀವಕ್ಷೇತ್ರೀಯ ಅನ್ವಯದಲ್ಲಿ—ತಮ್ಮ ಸ್ವಾಭಾವಿಕ ಹಕ್ಕಾದ ಆತ್ಮಾಸ್ತಿತ್ವ ಸಮರ್ಥನೆಯಲ್ಲಿ ಅಲ್ಪಾಂಶವನ್ನು ಪರಸ್ಪರಾನುಕೂಲಕ್ಕಾಗಿ ಬಿಡಬೇಕೆಂದು ಮಾನವರನ್ನು ಪ್ರೇರಿಸುತ್ತದೆ. ಈ ಪ್ರಕಾರ ಪರಸ್ಪರ ವಿರುದ್ಧವಾದ ವೈಯಕ್ತಿಕ ಹಕ್ಕುಗಳ

ಹಾಗೂ ಇಚ್ಛಾಶಕ್ತಿಗಳ ಬಲಗಳ ಒಂದು ಅಂಗಿಯು ಸ್ಥಾಪಿತವಾಯ್ತು, ಒಂದು ಸಂಮಿಶ್ರಕಾಯವು ಸಿದ್ಧವಾಯ್ತು. ಅದು ಸಾಮಾಜಿಕ ಒಪ್ಪಂದದ ರೂಪದಲ್ಲಿ ವ್ಯಕ್ತವಾಯಿತು. ಅದೊಂದು ಶಾಂತಿ ಸಂಧಿ. ಅದೇ ರಾಜ್ಯದ ಅಸ್ತಿವಾರ. ಸಂಮತಿಸಲಾದ ಈ ಸಾಮಾಜಿಕ ಸಂಧಿಯನ್ನು ದ್ವಿತೀಯ ಚಲನ ವಿಧಿಯು ಒತ್ತಾಯದ ಪ್ರಕಾರ ಜಾರಿಗೆ ತರಲು ಪ್ರಥಮ ಚಲನ ವಿಧಿಗೆ ವಿಧೇಯರಾಗಿ ಸ್ವಭಾವತಃ ಯುದ್ಧ ಮಗ್ನರಾದ ವ್ಯಕ್ತಿಗಳು ಸಾರ್ವಭೌಮತ್ವವನ್ನು ಸ್ಥಾಪಿಸಿ ಸರಕಾರದ ಮೂಲಕ ಅದನ್ನು ಆಚರಣೆಗೆ ತರಬೇಕಾಗುತ್ತದೆ. ಯಾವ ಗಾತ್ರದ ಸಮಾಜದಲ್ಲೇ ಆಗಲಿ— ಸಾರ್ವಭೌಮತ್ವವನ್ನು ಕೆಲ ಜನರಿಗೆ ವಹಿಸಿಕೊಡಲೇ ಬೇಕಾಗುತ್ತದೆ. ಆದರೆ ಅದನ್ನು ಒಬ್ಬನೇ ಒಬ್ಬನಿಗೆ ವಹಿಸಿಕೊಟ್ಟು ಅವನನ್ನು ಪರಿಪೂರ್ಣ ಏಕೈಕ ಪ್ರಭುವನ್ನಾಗಿ ಮಾಡಿದರೆ ಲಭ್ಯವಾಗುವಷ್ಟು ದಕ್ಷತೆಯು ಒಂದು ಗುಂಪಿಗಾಗಲಿ, ಪಾರ್ಲಿಮೆಂಟಿಗಾಗಲಿ ವಹಿಸಿಕೊಟ್ಟರೆ ಲಭ್ಯವಾಗದು.

ರೆನಿ ಡೆಸ್‌ಕಾರ್ಟಿಸ್ (೧೫೯೬—೧೬೫೦)

ಡೆಸ್‌ಕಾರ್ಟೀಸನು ಯೂರೋಪೀಯ ಪ್ರಮಾಣಶಾಸ್ತ್ರದ ಒಬ್ಬ ಸಂಸ್ಥಾಪಕ. ಕಲ್ಪನೆಗಳ (Ideas) ಸ್ಪಷ್ಟತೆ ಮತ್ತು ಪ್ರತ್ಯೇಕತೆಗಳು ಅವನ ಪ್ರಕಾರ ಸತ್ಯಕ್ಕೆ ನಿಕಷ. ಈ ಒರೆಗಲ್ಲಿಗೆ ಹತ್ತುವ ಎಲ್ಲವೂ ಸ್ವಯಂ ಸ್ಪಷ್ಟ. ಸ್ವಯಂಸ್ಪಷ್ಟ ಸತ್ಯಗಳಿಂದ ಇತರ ಸತ್ಯಗಳನ್ನು ಅವನು ತರ್ಕದಿಂದ ಅನುಮಾನಿಸಿ ಹೊರದೆಗೆದನು. ಕಲ್ಪನೆಗಳಲ್ಲಿ ಮೂರು ಬಗೆಗಳು: (೧) ಸಹಜ ಅಥವಾ ವಸ್ತುಗಳನ್ನೂ ವಿಚಾರಗಳನ್ನೂ ಆಲೋಚಿಸುವ ಮಾನಸಶಕ್ತಿ; (೨) ಆನುಷಂಗಿಕ ಅಥವಾ ಮನುಷ್ಯನಿಗೆ ಹೊರಗಿನಿಂದ ಬರುವಂಥವು; (೩) ಸಾಂಗತಿಕ ಅಥವಾ ಅವನ ಮನಸ್ಸಿನಲ್ಲಿಯೇ ಉತ್ಪನ್ನವಾದಂಥವು. "ನಾನು ಆಲೋಚಿಸುತ್ತೇನೆ, ಆದುದರಿಂದ ನಾನು ಇದ್ದೇನೆ" ಎಂದು ಘೋಷಿಸಿ ಅವನು ತನ್ನ ಕ್ರಮದ ಪ್ರಕಾರ ವಿಚಾರಾತ್ಮನನ್ನು ಕಂಡು ಹಿಡಿದನು. ಇದೊಂದು ಪ್ರಾತಿಭ ಪ್ರತ್ಯಕ್ಷ. ದೇವರೆಂಬ ಅತ್ಯನ್ನತ ಅಸ್ತಿತ್ವ ಸಂಪನ್ನ ಪದಾರ್ಥವು ಅವನಿಗೆ ಸ್ಪಷ್ಟವಾದ

ಎರಡನೆಯ ಸತ್ಯ. ಇದು ಪ್ರಾತಿಭವೂ ಹೌದೂ ತರ್ಕಸಿದ್ಧವೂ ಹೌದು –ಅವನ ಪ್ರಕಾರ. ಮಾನಸೇತರವಾದ ಕಾಯುವುಳ್ಳ ಪ್ರಪಂಚದ ಬಗೆಗೆ ಮೊದಲು ಅವನಿಗೆ ಸ್ಪಷ್ಟ ಕಲ್ಪನೆಗಳು ಉಂಟಾಗಲಿಲ್ಲ. ಅವರ ಅಸ್ತಿತ್ವ ವನ್ನವನು ಕೇವಲ ಶಂಕಿಸಿದನು; ಆದರೆ ಕೊನೆಯಲ್ಲಿ ಆನುಷಂಗಿಕ ಕಲ್ಪನೆಗಳಿಗೆ ಅವು ಕಾರಣಗಳಾದುದರಿಂದ ಸ್ವಮಾನಸೇತರ ಕಾಯಗಳು ಇರುವುವೆಂದು ಅವನು ಸಿದ್ಧಮಾಡಿಕೊಂಡ. ದ್ರವ್ಯಗಳ ಬಗೆಗಳು ಮೂರು: (೧) ಸೃಷ್ಟಜೀವನಗಳು, ಮಾನವರ ಪರಿಮಿತವಾದ ಜೀವಾತ್ಮಗಳು; ಈ ಜೀವಗಳು ಅಭೌತಿಕ ಕರ್ತಾರರು, ಇವು ಜೈವಿಕ ಕ್ರಿಯೆಗಳನ್ನು ಮಾಡ ಬಲ್ಲವು––ಕಾಯಗಳೊಂದಿಗೆ ಸಡಿಲವಾಗಿ ಕೂಡಿಕೊಂಡಿರುವುದರಿಂದ; ಆಲೋಚನೆ ಅಥವಾ ವಿಚಾರವು ಅವುಗಳ ಸಾರವಾಗಿರುವುದರಿಂದ ಅವುಗಳಿಗೆ ವಿಸ್ತಾರವಿಲ್ಲ: (೨) ಅಸೃಷ್ಟ ಆತ್ಮ ಅಥವಾ ದೇವರು; ಈತನು ದೇಶ-ಕಾಲಾತೀತ, ನಿರ್ದೋಷಾರೋಪ ಸದ್ಗುಣ ಮತ್ತು ಸರ್ವಶಕ್ತ; ಈತನ ಅಸ್ತಿತ್ವವನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬಹುದಾದರೂ ಸ್ವಭಾವವನ್ನು ಭೂವಾಸಿಗಳಾದ ಮನುಷ್ಯರು ಚೆನ್ನಾಗಿ ತಿಳಿದುಕೊಳ್ಳಲಾರರು–––ಅವನೇ ಕ್ರೈಸ್ತರ ದೇವ, ಸೃಷ್ಟಿಕರ್ತ, ವಿಧಿವಿಧಾತನಾದ ಪರಮೇಶ್ವರ, ಜಗತ್ತಿನ ಆತ್ಯಂತಿಕ ಕಾರಣ: (೩) ಕಾಯಗಳು––ಸೃಷ್ಟವಾದ ಭೌತಪದಾರ್ಥಗಳು ಅವು ಮಾನವ ವಿಚಾರ ನಿರಪೇಕ್ಷವಾಗಿರುತ್ತವೆ; ವಿಸ್ತರಣ ಶೀಲವು (ವ್ಯಾಪಕತೆಯು) ಅವುಗಳ ಮುಖ್ಯವಾದ ವಿಶೇಷಣ (ಧರ್ಮ, ಗುಣ). ಸಪೃಶ ಪದಾರ್ಥಗಳ ಒಂದು ಗುಂಪಿನ ಸಮಾನ ಮಟ್ಟದ ಚಲನಗಳಿಂದ ಕೇಂದ್ರದ ಸುತ್ತ ಆದ ವರ್ತುಲಗಳಿಂದ ಕಾಯಗಳುಂಟಾದವೆಂಬುದು ಕಾರ್ಟೀಸಿಯನ್ ಭೌತಶಾಸ್ತ್ರದ ಒಂದು ಸಿದ್ಧಾಂತ. ವಿಭಾಜ್ಯತೆ, ಆಕೃತಿರೇಖಾಗವ್ಯತೆ ಮತ್ತು ಚಲತ್ವಗಳು ವ್ಯಾಪಕತ್ವದ ಲಕ್ಷಣಗಳು. ಅದು ಜ್ಯಾಮಿತೀಯ ದೇಶ, ಸ್ಥಳ, ಅವಕಾಶ. ಭೌತಪ್ರಪಂಚದೊಳಗಿನ ಎಲ್ಲ ಚಲನಗಳಿಗೂ ದೇವರೇ ಪ್ರಥಮ ಕಾರಣ. ಈ ಭೌತ ಪ್ರಪಂಚ (ವಿಶ್ವ) ವೆಂಬುದು ದೇವರು ನಡೆಯಿಸುವ ಒಂದು ಯಾಂತ್ರಿಕ ಮಂಡಲ. ಪ್ರಾಣಿಶರೀರಗಳೂ ಸ್ವಯಂ-ಚಲ ಯಂತ್ರಗಳು. ಸಂವೇದನೆಯು ಜೀವಾತ್ಮ ನಡೆಯಿಸುವ ಒಂದು

ಕೃತ್ಯ. ಮನಸ್ಸು ಮತ್ತು ಭೌತಪದಾರ್ಥಗಳ ಮಧ್ಯದಲ್ಲಿ ಪ್ರಾಣಿ ಭೌತಕಣಗಳೆಂಬ ಅತಿ ಸೂಕ್ಷ್ಮ ಪದಾರ್ಥಗಳಿರುತ್ತವೆ. ಅವೇ "ಪ್ರಾಣಿ ಚೈತನ್ಯಗಳು" (Animal Spirits). ಅವು ವಿಚಾರಕ್ಕೂ ವಿಸ್ತಾರಕ್ಕೂ (Thought and Extension) ಸ್ವಭಾವದಲ್ಲಿ ಮಧ್ಯವರ್ತಿಯಾಗಿವೆ. ಮನುಷ್ಯನ ನಿರ್ಣಯಗಳು ಸ್ವತಂತ್ರ ಇಚ್ಛಾಶಕ್ತಿಯ ಕ್ರಿಯೆಗಳು. ಇಚ್ಛಾ ಶಕ್ತಿಯು ಬುದ್ಧಿಯನ್ನು ಮೀರಿ ನಿಂತಾಗ ನಿರ್ಣಯವು ತಪ್ಪಾದುದೆನ್ನಿಸೀತು. ವಿವೇಕ ಮತ್ತು ಮಿತಭೋಗಗಳು ನಡತೆಯ ನಿಯಾಮಕಗಳು. ತಾನು ಆಯ್ದುಕೊಳ್ಳುವ ಕರ್ಮಮಾರ್ಗಕ್ಕಾಗಿ ಮಾನವನು ಆತ್ಯಂತಿಕವಾಗಿ ದೇವರಿಗೆ ಹೊಣೆಗಾರನು. ಮನುಷ್ಯನ ಭಾವೋದ್ರೇಕಗಳಿಗೂ ವಿಚಾರ ವಿವೇಕಗಳಿಗೂ ಸಂಘರ್ಷ ಉಂಟಾಗುತ್ತವೆ. ಸರಿಯಾದುದು ಯಾವುದೆಂಬ ತಿಳುವಳಿಕೆ ಮತ್ತು ಅದರ ಪ್ರಕಾರ ಮನುಷ್ಯ ಸ್ವಭಾವದ ಕೀಳು ಪ್ರವೃತ್ತಿಗಳನ್ನು ನಿಯಂತ್ರಿಸಿಕೊಳ್ಳುವುದು ಸೌಗುಣ್ಯದ ಜೀವನವನ್ನು ನಡೆಯಿಸಲು ಮನುಷ್ಯನಿಗೆ ಶಕ್ಯವಾಗುವಂತೆ ಮಾಡುವುವು. ಪ್ರಾಥಮಿಕ ಭಾವೋದ್ರೇಕಗಳು ಆರು: (೧) ಆಶ್ಚರ್ಯ, (೨) ಪ್ರೇಮ, (೩) ದ್ವೇಷ, (೪) ಆಸೆ, (೫) ಸುಖ ಮತ್ತು (೬) ದುಃಖ. ಇವು ಪ್ರಜ್ಞೆಯ ನಿಷ್ಕ್ರಿಯ ಸ್ಥಿತಿಗಳು; ಜೀವಾತ್ಮನೂ ಪ್ರಾಣಿ ಚೈತನ್ಯಗಳ ಮೂಲಕ ವರ್ತಿಸುವ ಶರೀರವೂ ಸಹಕರಿಸಿ ಇವುಗಳನ್ನು ಉಂಟುಮಾಡುತ್ತವೆ. ವಿಚಾರ-ವಿವೇಕಗಳ ನಿಯಂತ್ರಣದಲ್ಲಿದ್ದಾಗ ಇವು ಶರೀರಕ್ಕೆ ಒಳಿತಾಗುವಂತೆ ಪ್ರಯತ್ನಿಸಲು ಜೀವಾತ್ಮಕ್ಕೆ ನೆರವೀಯುತ್ತವೆ. ಮಾನಸಿಕ ಶಕ್ತಿಗಳಾವುವೂ ಜೀವಾತ್ಮನಿಂದ ಭಿನ್ನವಾದವುಗಳಲ್ಲ.

ಬೆನಿಡಿಕ್ಟ್ ಸ್ಪಿನೋಜ(೧೬೩೨-೧೬೭೭)

ಬೆನಿಡಿಕ್ಟ್ ಸ್ಪಿನೋಜನದು ಹೆಗೆಲ್ಲನ ಪ್ರಕಾರ ದ್ರವ್ಯವಾದ. ಅವನು ದ್ರವ್ಯನಾನಾತ್ವವನ್ನೊಪ್ಪನು. ಪೂರ್ಣಸತ್ಯವೊಂದೇ ಒಂದು ದ್ರವ್ಯ. ಅವನ ಸಿದ್ಧಾಂತವನ್ನು ಅದ್ವೈತಕ್ಕೆ ಸಮಾನವಾದುದೆನ್ನುವುದುಂಟು. ಎಲ್ಲಜ್ಞಾನವೂ ಜ್ಯಾಮಿತೀಯ ಅಚ್ಚುಕಟ್ಟುತನವುಳ್ಳದ್ದಾಗಿರಬೇಕು. ವಿಜ್ಞಾನ-ತತ್ತ್ವಜ್ಞಾನ

ಗಳಿಗೆ ಸಾರಭೂತವೂ ಸಮನ್ವಿತವೂ ಕ್ರಮಬದ್ಧವೂ ಆದ ಅಭಿವ್ಯಕ್ತಿ-ವಾಕ್ಯಗಳಾಗಿರಬೇಕು-ಎನ್ನುತ್ತಾನೆ ಸ್ಪಿನೋಜ. ಸರ್ವಕಾರಣವಾದ ಆತ್ಯಂತಿಕ ಸತ್ಯವು ಸರ್ವಗ್ರಹವಾದುದು. ಕಾರ್ಯಕಾರಣಭಾವವು ಅಂತರ್ಯಾಮಿತ್ವ-ವುಳ್ಳದ್ದು. ಪ್ರತಿಯೊಂದು ಅಸ್ತಿತ್ವಸಂಪನ್ನ ವ್ಯಕ್ತಿಯೂ ಏಕಮೇವ ದ್ರವ್ಯವಾದ ಆತ್ಯಂತಿಕ ಸತ್ಯದ ಕಕ್ಷೆಯೊಳಗೇ ಇರುವಂಥದು. ಆ ದ್ರವ್ಯವನ್ನು ದೇವರು ಅಥವಾ ನಿಸರ್ಗವೆನ್ನಬಹುದು. ಪರಿಮಿತವಾದ ಯಾವುದೂ ಸ್ವತಂತ್ರಾಸ್ತಿತ್ವವುಳ್ಳದ್ದಲ್ಲ. ಆಲೋಚನೆ ಅಥವಾ ವಿಚಾರ ಮತ್ತು ವ್ಯಾಪಕತ್ವಗಳು ದೇವರ ಲಕ್ಷಣಗಳು. ಅವನಿಗೆ ಇನ್ನೂ ಇತರ ಅಸಂಖ್ಯಾತ ಲಕ್ಷಣ(ಧರ್ಮ,ಗುಣ)ಗಳಿವೆ. ಅವನು ಎಲ್ಲ ದೃಷ್ಟಿಯಿಂದಲೂ ಅಪ್ರಮೇಯ (Infinite), ಅಸೀಮ. ಆದರೆ ಆ ಇತರ ಲಕ್ಷಣಗಳು ನಮಗೆ ಅಜ್ಞಾತ. ವೈಯಕ್ತಿಕ ಜೀವಾತ್ಮಗಳೂ ಪ್ರತ್ಯೇಕವಾದ ಜಡಪದಾರ್ಥಗಳೂ ದೇವರಿಗೆ ವಿಶೇಷಣಗಳು. ಅವು ದ್ರವ್ಯಗಳಲ್ಲ- ದಿವ್ಯವಾದ ಸರ್ವತಂತ್ರ ಸ್ವತಂತ್ರ ಪದಾರ್ಥದ (ದೇವರ) ವಿವಿಧ ಧರ್ಮಗಳು, ಅಂಶಗಳು, ಉಪಾಧಿಗಳು. ಕ್ರೈಸ್ತರ ವೈಯಕ್ತಿಕ ಅಮರತ್ವವೆಂಬುದು ಇಲ್ಲ; ಅವೈಯಕ್ತಿಕವಾದ, ದೇವರಲ್ಲಿ ಹೆಚ್ಚು ಹೆಚ್ಚಾಗಿ ಐಕ್ಯಹೊಂದುವ ಬಗೆಯ ಅಮರತ್ವವೊಂದೇ ಇರುವಂಥದು. ಪ್ರಮಿತ (ಪರಿಮಿತ, ಸೀಮಿತ, ಪ್ರಮೇಯ) ಪದಾರ್ಥಗಳೆಲ್ಲವುಗಳಿಗೂ ಗಡಿಮಿತಿಗಳಿವೆ. ಆ ಗಡಿಗಳು ಭೌತಿಕವಾಗಿರಬಹುದು ಇಲ್ಲವೆ ತಾರ್ಕಿಕವಾಗಿರಬಹುದು. ಅವುಗಳಿಗೆ ಅವುಗಳಲ್ಲದ ಇತರ ಪದಾರ್ಥಗಳೇ ಗಡಿಗಳು. ಎಲ್ಲ ನಿಶ್ಚಯಕರಣವೂ (Determination) ನಿಷೇಧಕರಣ (Negation). ಸಂಪೂರ್ಣ ಅನುಮೇಯವುಳ್ಳ ಅಸ್ತಿತ್ವದಿಂದ ಕೂಡಿದ ಪದಾರ್ಥ ಒಂದೇ ಒಂದು ಇರಬಲ್ಲದು. ಅದು ಸಂಪೂರ್ಣವಾಗಿ ಅಪ್ರಮೇಯವಾಗಿರಬೇಕು. ಈ ವಾದವನ್ನು "(Pantheism) ಸರ್ವಗ್ರಹ ದೇವತಾವಾದ"ವೆಂದು ವರ್ಣಿಸಿದ್ದು ಇದೆ. ಏಕೆಂದರೆ ಇದರಲ್ಲಿ ಪರಮಾರ್ಥೇತರವಾದುದೆಲ್ಲವೂ ಆ ಪರಮಸತ್ಯದ ಅಂಶಗಳು,ಪ್ರಕಾರಗಳು, ವಿಸ್ತಾರಗಳು ಅಥವಾ ವಿಶೇಷಣಗಳು.

ಮನುಷ್ಯರ ಮಾನಸಪ್ರಪಂಚದಲ್ಲಿ ಮುಕ್ತ ಇಚ್ಛಾಶಕ್ತಿ ಎಂಬುದಿಲ್ಲ; ಹಾಗೇ ಭೌತಪ್ರಪಂಚದಲ್ಲಿ ಆಕಸ್ಮಿಕತೆ ಅಥವಾ ಕಾದಾಚಿತ್ಕತೆ ಎಂಬುದಿಲ್ಲ. ನಡೆಯುವ ಪ್ರತಿಯೊಂದು ಘಟನೆಯೂ ದೇವರ ಅಜ್ಞೇಯವಾದ ಸ್ವಭಾವದ ಆವಿರ್ಭಾವ; ಯಾವ ಘಟನೆಯೂ ಹೀಗಲ್ಲದೆ ತರ್ಕಶುದ್ಧವಾಗಿ ಬೇರೆ ರೀತಿಯಲ್ಲಿ ಸಂಭವಿಸದು. ದುಷ್ಟತನ-ಪಾಪಗಳು ಹಾಗೆ ಕಾಣಿಸುವುದು ಪ್ರಮೇಯವಾದ ಪ್ರಾಣಿಗಳ ದೃಷ್ಟಿಯಲ್ಲಿ; ಅವುಗಳಲ್ಲಿ ಅನುಷೇಧಕರ (Positive)ವಾದ ಅಂಶವು ಸದಂಶ, ನಿಷೇಧಕರ (Negative)ವಾದ ಅಂಶವು ದುರಂಶ. ಪೂರ್ಣ ಸತ್ಯಸ್ವರೂಪನಾದ ದೇವರಲ್ಲಿ ನಿಷೇಧವಿಲ್ಲವೇ ಇಲ್ಲ. ಆದುದರಿಂದ ಪಾಪಗಳೆಂದು ನಮಗೆ ತೋರುವ ಘಟನೆಗಳನ್ನು ಆತನ ಇಡಿತನದ ಅಂಗವೆಂದು ಗ್ರಹಿಸಿದಾಗ ಅವು ಇಲ್ಲವಾಗುವುವು. ವಿಶ್ವದ ಎಲ್ಲ ಭಾಗಗಳೂ ತರ್ಕಶುದ್ಧ ಸಂಬಂಧವುಳ್ಳಂಥವುಗಳು. ಮಾನವನ ಮನದಲ್ಲಿ ದೇವರ ನಿತ್ಯವೂ ಅಪ್ರಮೇಯವೂ ಆದ ಜ್ಞಾನ ಸಾಕಷ್ಟಿದೆ. ಭಾವೋದ್ರೇಕಗಳು (Passions) ನಮ್ಮ ಬೌದ್ಧಿಕ ಸ್ವರೂಪದ ಪೂರ್ಣತಾದರ್ಶನವನ್ನು ಅಸ್ಪಷ್ಟಗೊಳಿಸುತ್ತವೆ. ತನ್ನಲ್ಲಿಯೇ ತಾನಿರುವಾಗ ಪ್ರತಿಯೊಂದೂ ತನ್ನ ಇರವನ್ನು ಮುಂಬರಿಸಿ ಕೊಂಡು ಹೋಗಲು ಪ್ರಯತ್ನಿಸುತ್ತದೆ. ಆದುದರಿಂದ ರಾಗ, ದ್ವೇಷ, ಹೋರಾಟಗಳು ಹುಟ್ಟುತ್ತವೆ. ಮಾಡಿದಂತೆ ಮಾಡುವುದರಿಂದ ದ್ವೇಷ ಹೆಚ್ಚುತ್ತದೆ; ಪ್ರೇಮದಿಂದ ದ್ವೇಷವನ್ನು ನಾಶಮಾಡಬಹುದು. ಭಾವೋದ್ರೇಕಗಳಿಗೆ ಆತ್ಮಸಂಗೋಪನವೇ ಮೂಲಭೂತ ಧ್ಯೇಯ. ನಮ್ಮಲ್ಲಿರುವ ಸತ್ಯವೂ ಅನುಷೇಧಕರವೂ ಆದುದು ನಮ್ಮನ್ನು ಇಡಿಯೊಡನೆ ಏಕೀಕರಿಸುವ ಪದಾರ್ಥ—ಎಂಬುದನ್ನು ಸಾಕ್ಷಾತ್ಕರಿಸಿಕೊಂಡಾಗ ಆತ್ಮಸಂಗೋಪನದ ಸ್ವರೂಪವೇ ಬದಲಾಗುವುದು —ನಮ್ಮಲ್ಲಿರುವ ಪ್ರತ್ಯೇಕತೆ ಎಂದು ತೋರುವುದನ್ನು ಉಳಿಸಿಕೊಡುವ ಪದಾರ್ಥದಿಂದ ಅಂಥ ಬದಲಾವಣೆಯಾಗದು ಎಂಬುದು ಆ ಸಾಕ್ಷಾತ್ಕಾರದ ಅಂಗ.

ಹೊರಗಿನ ಕಾರಣಗಳಿಂದ ನಮ್ಮ ಆಗುಹೋಗುಗಳು ಎಷ್ಟರ ಮಟ್ಟಿಗೆ ನಿರ್ಧರಿಸಲ್ಪಡುವುವೋ ಅಷ್ಟರ ಮಟ್ಟಿಗೆ ನಾವು ಬದ್ಧರು

ಎನ್ನಿಸುತ್ತೇವೆ; ಅವು ಎಷ್ಟರ ಮಟ್ಟಿಗೆ ನಮ್ಮ ನಿರ್ಧಾರದಿಂದಲೇ ಸಂಭವಿಸುವುವೋ ಅಷ್ಟರ ಮಟ್ಟಿಗೆ ನಾವು ಮುಕ್ತರು (ಸ್ವತಂತ್ರರು). ಅವ ಕಾರ್ಯಗಳೆಲ್ಲವೂ ಬುದ್ಧಿ ಬೋಧಗಳಿಂದಾಗುವಂಥವು. ತನ್ನ ಪರಿಸ್ಥಿತಿಯನ್ನು ಸಮರ್ಪಕವಾಗಿ ತಿಳಿದುಕೊಂಡವನು ವಿವೇಕದಿಂದ ಕರ್ಮಮಾಡುವನು ಮತ್ತು ಇನ್ನೊಬ್ಬನ ದೃಷ್ಟಿಯಲ್ಲಿ ದುಃಖವೆಂದು ತೋರುವ ಪರಿಸ್ಥಿತಿಯಲ್ಲೂ ಅವನು ಸುಖವಾಗಿರುವನು. ದೇವರ ಜ್ಞಾನವೇ ಮನಸ್ಸಿಗೆ ಲಭ್ಯವಾದ ಅತಿ ದೊಡ್ಡ ಒಳಿತು; ದೇವರನ್ನು ತಿಳಿಯುವುದೇ ಮನಸ್ಸಿಗಿರಬೇಕಾದ ಅತಿ ದೊಡ್ಡ ಸುಗುಣ. ಅಸಮರ್ಪಕ, ಅಪೂರ್ಣಕಲ್ಪನೆಗಳಿಂದ ಹುಟ್ಟುವ ಭಾವನೆಗಳೇ ಭಾವೋದ್ರೇಕಗಳು. ವಿವಿಧ ಮಾನವರಲ್ಲಿಯ ಭಾವೋದ್ರೇಕಗಳು ಸಂಘಟ್ಟಿಸಬಹುದು. ವಿವೇಕಾನುಗುಣವಾಗಿ ವರ್ತಿಸುವವರೆಲ್ಲರೂ ಒಮ್ಮತಕ್ಕೆ ಬರುವರು. ಸ್ವಸ್ವರೂಪದಲ್ಲಿ ಸುಖವು ಒಳಿತು. ಭಯ–ಪ್ರತ್ಯಾಶೆಗಳು ಹಾಳು; ದೈನ್ಯ–ಪಶ್ಚಾತ್ತಾಪಗಳೂ ಹಾಗೇ. ಕಾಲವು ಮಿಥ್ಯೆ. ಆದುದರಿಂದ ಭೂತ-ಭವಿಷ್ಯಗಳಿಗೆ ಸಾರತಃ ಸಂಬಂಧಿಸಿದ ಭಾವನೆಗಳೆಲ್ಲವೂ ವಿವೇಕಾನುಗುಣವಾದವುಗಳಲ್ಲ. ಭೂತದಷ್ಟೇ ಭವಿಷ್ಯವೂ ಅಪರಿವರ್ತನೀಯ. ದೇವರ ಪ್ರಪಂಚದರ್ಶನದಂಥ ದರ್ಶನವನ್ನು ನಾವು ಪಡೆದಾಗ ನಮಗೆ ಜಗತ್ತಿನಲ್ಲಿಯ ಎಲ್ಲವೂ ಇಡಿಯೊಂದರ ಬಿಡಿಭಾಗಗಳಾಗಿ ತೋರುತ್ತವೆ; ಅವು ಇಡಿಯ ಒಳಿತಿಗೆ ಅಗತ್ಯವೆಂದೂ ತೋರುತ್ತವೆ. ಆದುದರಿಂದ ದುಷ್ಟತನದ ಜ್ಞಾನವು ಅಪರಿಪೂರ್ಣ ಜ್ಞಾನ. ದೇವರಿಗೆ ದುಷ್ಟತನದ ಅರಿವಿಲ್ಲ; ಏಕೆಂದರೆ, ತಿಳಿದುಕೊಳ್ಳಬೇಕಾದ ದುಷ್ಟತನವೆಂಬುದು ಅತನಿಗೆ ಇಲ್ಲವೇ ಇಲ್ಲ. ಜಗತ್ತಿನ ಬಿಡಿ ಭಾಗಗಳು ಸ್ವಾಧೀನ ಅವಲಂಬನ ಉಳ್ಳವುಗಳೆಂದು ತಿಳಿದುಕೊಳ್ಳುವುದರಿಂದ ದುಷ್ಟತನದ ಆಭಾಸ ಉಂಟಾಗುತ್ತದೆ. ಅಭಯಸಿದ್ಧಿಯೇ ಪರಮಸಿದ್ಧಿ. ಇಡಿ ಜಗತ್ತಿಗೆ ಯಾವ ಯಾವ ಕೇಡೂ ಉಂಟಾಗದು. ಏಕೆಂದರೆ ಅದು ಅದರ ಹೊರಗಿನ ಯಾವ ಕಾರಣಕ್ಕೂ ಅಧೀನವಾಗಿಲ್ಲ. ತನಗಿಂತ ವಿಶಾಲತರವಾದ ಇಡಿಗೆ ಒಳಪಟ್ಟು ಬಾಳಲೊಲ್ಲದವನು ಬದ್ಧನು; ಇಡಿಯ ಪೂರ್ಣ ಸತ್ಯವನ್ನು ಅವನು ಅರಿತಾಗ ಅವನು ಮುಕ್ತನು. ಎಲ್ಲ ಭಾವನೆಗಳೂ ಹಾಳಲ್ಲ; ಭಾವೋ-

ದ್ರೇಕಗಳಷ್ಟೇ ಹಾಳು. ಏಕೆಂದರೆ ಅವು ನಮಗೆ ನಾವು ಬಾಹ್ಯಶಕ್ತಿಗಳೆದುರು ನಿಷ್ಕ್ರಿಯರೆಂದು ತೋರಿಸುವುವು. ಅವರ ಸ್ಪಷ್ಟವೂ ಪ್ರತ್ಯೇಕವೂ ಆದ ಸ್ವರೂಪ ನಮಗೆ ಗೊತ್ತಾದೊಡನೆಯೇ ಒಂದು ಭಾವನೆಯ ಉದ್ರಿಕ್ತ ಸ್ವರೂಪವು ನಷ್ಟವಾಗಿ ಬಿಡುವುದು. ಸರ್ವವೂ ಅಗತ್ಯ ಎಂಬುದನ್ನು ಅರಿತಾಗ ನಮ್ಮ ಭಾವನೆಗಳ ಮೇಲೆ ನಮಗೆ ಪ್ರಭುತ್ವ ದೊರೆಯುವುದು. ತನ್ನನ್ನೂ ತನ್ನ ಭಾವನೆಗಳನ್ನೂ ಸ್ಪಷ್ಟವಾಗಿಯೂ ಪ್ರತ್ಯೇಕವಾಗಿಯೂ ತಿಳಿದುಕೊಂಡವನು ದೇವರನ್ನು ಪ್ರೀತಿಸುವನು; ಆ ಪ್ರಕಾರ ಹೆಚ್ಚು ಹೆಚ್ಚು ತಿಳಿದುಕೊಂಡ ಹಾಗೆ ದೇವರಲ್ಲಿಯ ಅವನ ಪ್ರೀತಿಯು ಹೆಚ್ಚುತ್ತ ಹೋಗುವುದು. ದೇವರನ್ನು ಭೌದ್ಧಿಕವಾಗಿ ಪ್ರೀತಿಸುವುದೇ ವಿವೇಕ. ಆ ಪ್ರೀತಿಯಲ್ಲಿ ವಿಚಾರ-ಭಾವನೆಗಳ ಏಕೀಕರಣವಿದೆ. ಅದು ನಿಜವಾದ ವಿಚಾರ. ಅದರಲ್ಲಿ ಸತ್ಯಜ್ಞಾನದ ಆನಂದವಿದೆ. ನಿಜ ವಿಚಾರದಲ್ಲಿ ಪಡುವ ಆನಂದವೆಲ್ಲವೂ ಭೌದ್ಧಿಕವಾಗಿ ಮಾಡುವ ದೇವಭಕ್ತಿ (ದೇವ ಪ್ರೇಮ)ಯ ಅಂಶ. ಏಕೆಂದರೆ, ಅದರಲ್ಲಿ ನಿಷೇಧಾಂಶವಾವುದೂ ಇಲ್ಲ— ಆದುದರಿಂದ ಅದು ನಿಜವಾಗಿಯೂ ಇಡಿಯ ಭಾಗ. ದೇವರು ಅನ್ಯರನ್ನು ಪ್ರೀತಿಸಲಾರ; ಅವನು ತನ್ನನ್ನು ಮಾತ್ರ ಪ್ರೀತಿಸುವನು. ಏಕೆಂದರೆ, ಆವನಿಗೆ ಅನ್ಯರೆಂಬವರೇ ಇಲ್ಲ; ಅವನು ಐಕಾತ್ಮ್ಯಪ್ರತ್ಯಯವುಳ್ಳವನು. ಅವನದು ಅಪ್ರಮೇಯವಾದ ಬೌದ್ಧಿಕ ಪ್ರೀತಿ.

ಗಾಟ್‌ಫ್ರೈಡ್ ವಿಲ್‌ಹೆಲ್ಮ್ ಲಿಬ್ನಿಜ್ (೧೬೪೬-೧೭೧೬)

ವ್ಯಾಪಕತ್ವವು ದ್ರವ್ಯಧರ್ಮವಾಗಲಾರದು; ಏಕೆಂದರೆ, ಅದರಲ್ಲಿ ನಾನಾತ್ವ ಅಡಗಿದೆ; ಆದುದರಿಂದ ಅದು ದ್ರವ್ಯರಾಶಿಯಲ್ಲಿ ಮಾತ್ರ ಇರಬಲ್ಲದು. ಪ್ರತಿಯೊಂದು ದ್ರವ್ಯವೂ ಅವ್ಯಾಪಕ (Unextended). ದ್ರವ್ಯಗಳು ಅಸಂಖ್ಯಾತ. ಅವುಗಳು ಪರಮಾಣುಸ್ವರೂಪದವು. ಅಮೂರ್ತ ದೃಷ್ಟಿಯಿಂದ ನೋಡಿದಾಗ ಅವುಗಳಲ್ಲಿ ಪ್ರತಿಯೊಂದಕ್ಕೂ ಒಂದೊಂದು ಭೌತಬಿಂದುವಿನ ಧರ್ಮವಿದೆ. ಪ್ರತಿಯೊಂದು ಅಣುವೂ ಒಂದು ಜೀವ.

ವಿಚಾರವೊಂದೇ ದ್ರವ್ಯಧರ್ಮ. ಭೌತಪದಾರ್ಥಗಳೆಲ್ಲವೂ ಅಸತ್ಯ. ಜೀವಾತ್ಮಗಳು ಅಸಂಖ್ಯಾತವಾದ ಅಣುದ್ರವ್ಯಗಳು.

ದ್ರವ್ಯಗಳು ಪರಸ್ಪರ ಕ್ರಿಯೆ-ಪ್ರತಿಕ್ರಿಯೆಗಳನ್ನು ತೋರಿಸಲಾರವು. ಯಾವ ಎರಡು ಅಣುಗಳ (Monads) ನಡುವೆಯೂ ಪರಸ್ಪರವಾದ ಕಾರ್ಯಕಾರಣ ಸಂಬಂಧವಿರಲಾರದು; ಇದ್ದಂತೆ ಕೆಲವೊಮ್ಮೆ ತೋರಿದರೆ ಅದು ಕೇವಲ ಆಭಾಸ. ಅಣುಗಳು ದ್ವಾರರಹಿತ ಪದಾರ್ಥಗಳು (Windowless). ದೇವರು ಕೊಟ್ಟ ಸ್ವಾಭಾವಿಕ ಶಕ್ತಿಯಿಂದ ಪ್ರತಿಯೊಂದು ಅಣುವೂ ವಿಶ್ವವನ್ನು ಪ್ರತಿಬಿಂಬಿಸುತ್ತದೆ. ಭಿನ್ನ ಅಣುಗಳಲ್ಲಿ ಉಂಟಾಗುವ ಬದಲಾವಣೆಗಳಲ್ಲಿ ದೇವರಿಂದಾದ ಪೂರ್ವಸಿದ್ಧವಾದ ಸಾಮರಸ್ಯ (Harmony) ಇದೆ; ಅದು ಅವುಗಳಲ್ಲಿ ಪರಸ್ಪರ ಕ್ರಿಯೆ-ಪ್ರತಿಕ್ರಿಯೆಗಳಿರುವ ಆಭಾಸವನ್ನು ಉಂಟು ಮಾಡುತ್ತದೆ.

ಅಣುಗಳದೊಂದು ತರತಮ ಭಾವವುಳ್ಳ ನಿಃಶ್ರೇಣಿ. ವಿಶ್ವವನ್ನು ಸ್ಪಷ್ಟವಾಗಿಯೂ ಪ್ರತ್ಯೇಕವಾಗಿಯೂ ಪ್ರತಿಬಿಂಬಿಸುವುದರಲ್ಲಿ ಕೆಲವು ಅಣುಗಳು ಉಳಿದವುಗಳಿಂದ ಉತ್ತಮ. ಆ ಎಲ್ಲವುಗಳಲ್ಲೂ ಪ್ರತ್ಯಕ್ಷದಲ್ಲಿ ಕೆಲವಂಶ ಗಲಿಬಿಲಿಯಿದೆ. ಆಯಾ ಅಣ್ವಾತ್ಮದ ಗಾಂಭೀರ್ಯಕ್ಕೆ ಅದರ ಗಲಿಬಿಲಿಯ ಪ್ರಮಾಣ ಅನುಗುಣವಾಗಿರುತ್ತದೆ. ಮಾನವ ಶರೀರದ ತುಂಬ ಅಣುಗಳಿವೆ; ಅದರಲ್ಲಿ ಪ್ರತಿಯೊಂದೂ ಒಂದೊಂದು ಜೀವಾತ್ಮ. ಪ್ರತಿಯೊಂದು ಜೀವಾತ್ಮವೂ ಅಮರ; ಆದರೆ ಶರೀರಗತವಾದ ಅನೇಕಾತ್ಮಗಳಲ್ಲಿ ಒಂದೇ ಒಂದು ಹೆಚ್ಚು ಪ್ರಧಾನವಾಗಿರುತ್ತದೆ. ಅದನ್ನೇ ಮಾನವನು ತನ್ನ ಆತ್ಮವೆಂದು ಹೇಳಿಕೊಳ್ಳುತ್ತಾನೆ. ಇದರ ಪ್ರತ್ಯಕ್ಷಾನುಭವವು ಸ್ಪಷ್ಟತರವಾಗಿರುತ್ತದೆ; ಮಾನವ ಶರೀರದಲ್ಲಿಯ ಬದಲಾವಣೆಗಳು ಸಾಮಾನ್ಯವಾಗಿ ಇದಕ್ಕಾಗಿಯೇ ಸಂಭವಿಸುತ್ತಿರುತ್ತವೆ. ಇದನ್ನು ಮನಸ್ಸೆಂದು ಕರೆಯಬಹುದು. ಇಚ್ಛಾಶಕ್ತಿಯಿಂದ ಇದು ತಾನಿರುವ ಶರೀರದ ಮೇಲೆ ಪ್ರಭುತ್ವವನ್ನು ನಡೆಯಿಸುತ್ತದೆ ಎಂದು ಹೇಳಬಹುದು.

ಭೌತಶಾಸ್ತ್ರ ಹೇಳುವ ಹಾಗೂ ಇಂದ್ರಿಯಗಳಿಗೆ ತೋರುವ ದೇಶ (ಸ್ಥಳ, ಅವಕಾಶ) ಎಂಬುದು ಮಿಥ್ಯೆ. ಆದರೆ ಅದಕ್ಕೆ ಬದಲಾಗಿ ಮೂರು ವಿಧದ ಅಳತೆಯಲ್ಲಿ ಅವುಗಳ ವಿಶ್ವವನ್ನು ಕನ್ನಡಿಸುವ ದೃಷ್ಟಿಗನುಗುಣವಾಗಿ ಅಣುಗಳ ಕ್ರಮಬದ್ಧವಾದ ವ್ಯವಸ್ಥೆಯಿದೆ. ಪ್ರತಿಯೊಂದು ಅಣುವೂ ತನಗೆ ವಿಶಿಷ್ಟವಾದ ದೃಷ್ಟಿಯಿಂದ ಜಗತ್ತನ್ನು ನೋಡುತ್ತದೆ- ಇದನ್ನೇ ನಾವು ಅಣುವಿಗೆ ಇರುವ ದೇಶಿಕಸ್ಥಾನವೆಂದು ಸ್ಥೂಲವಾಗಿ ಹೇಳಬಹುದು. ಖಾಲಿಸ್ಥಳವೆಂಬುದು ಇಲ್ಲವೇ ಇಲ್ಲ. ಶಕ್ಯವಿದ್ದ ಎಲ್ಲ ದೃಷ್ಟಿಕೋನವನ್ನು ಒಂದೇ ಒಂದು ನಿಜವಾದ ಅಣುವು ತುಂಬಿಕೊಂಡಿರುತ್ತದೆ. ಯಾವ ಎರಡು ಅಣುಗಳೂ ಸರಿಯಾಗಿ ಒಂದನ್ನೊಂದು ಹೋಲುವುದಿಲ್ಲ. ಇದೇ ಅಜ್ಞೇಯ ಪದಾರ್ಥಗಳ ಗುರುತಿನ ತತ್ವ (Identity of indiscernibles).

"ಸಾಕಷ್ಟು (ಸಮರ್ಪಕವಾದಷ್ಟು) ಕಾರಣ ಬದ್ಧತೆ"ಯ ತತ್ವದ ಪ್ರಕಾರವಾಗಿ ಹೋದರೆ ಕಾರಣವಿಲ್ಲದೆ ಯಾವುದೂ ಘಟಿಸದು. ಆದರೆ ಮಾನವರಂಥ ಇಚ್ಛಾಶಕ್ತಿಸಂಪನ್ನ ಪ್ರಾಣಿಗಳ ಕಾರ್ಯಗಳಿಗೆ ಇಂಥ ತಾರ್ಕಿಕ ನಿಯಮ ಅನ್ವಯಿಸದು. ದೇವರ ಕಾರ್ಯಗಳಿಗೂ ಅದೇ ತರಹದ ಕಾರಣ ಮುಕ್ತತೆಯಿದೆ. ಅತ್ಯುತ್ತಮ ಪರಿಣಾಮಕ್ಕಾಗಿಯೇ ಅವನು ಸದಾ ಕಾರ್ಯ ಮಾಡುತ್ತಾನೆ; ಆದರೆ ಅವನಿಗೆ ಹಾಗೆ ಮಾಡಲು ಯಾವ ತಾರ್ಕಿಕ ಅಗತ್ಯದ ಒತ್ತಾಯವೂ ಇಲ್ಲ. ದೇವರು ತರ್ಕವಿಧಿಗಳಿಗೆ ವಿರುದ್ಧವಾಗಿ ನಡೆದುಕೊಳ್ಳಲಾರನು. ಆದರವನು ತಾರ್ಕಿಕ ಶಕ್ಯತೆಯುಳ್ಳ ಕಾರ್ಯಗಳು ನಡೆಯುವಂತೆ ವಿಧಿಸಬಲ್ಲ. ಇದರಲ್ಲಿ ಅವನಿಗೆ ಬೇಕಾದಷ್ಟು ಆಯ್ಕೆಯ ಸ್ವಾತಂತ್ರ್ಯ ಸಿಗುತ್ತದೆ. ಅವನು ವಿಶ್ವೋತ್ತರನಾದ ವಿಶ್ವಕಾರಣನು.

ಜಾನ್ ಲೋಕೆ (೧೬೩೨-೧೭೦೪)

ಜಾನ್ ಲೋಕೆಯು ಮೊದಲನೆಯ ದೊಡ್ಡ ಬ್ರಿಟಿಷ್ ವ್ಯವಹಾರವಾದಿ (Empiricist). ಅವನ ಪ್ರಕಾರ ಸಹಜ ಕಲ್ಪನೆಗಳು (Innate ideas),

ಪದಾರ್ಥಗಳು (Categories) ಮತ್ತು ನೈತಿಕ ತತ್ವಗಳು ಇಲ್ಲ. ಹುಟ್ಟಿದಾಗ ಮನಸ್ಸೊಂದು ಖಾಲಿವಸ್ತು; ಅದರ ಹೂರಣವೆಲ್ಲವೂ ಸಂವೇದನಾ ಜನ್ಯ, ಸಂವೇದನೆಗಳಿಂದ ತರ್ಕಿಸಿ ಗ್ರಹಿಸಿದ್ದು. ತರ್ಕವು (ಅನುಮಾನವು) ಸ್ಮೃತಿನಿಷ್ಠ ಮತ್ತು ಧ್ಯಾನ, ಪ್ರತ್ಯೇಕೀಕರಣ, ಸಾದೃಶ್ಯ-ಅಸಾದೃಶ್ಯಗಳ ಹೋಲಿಕೆ ಮಾಡುವುದು ಮತ್ತು ಕಲ್ಪನಾಶಕ್ತಿಯಿಂದ ಪುನಾರಚಿಸುವುದು ಮುಂತಾದ ಚಟುವಟಿಕೆಗಳನ್ನಾಧರಿಸಿದ್ದು. ಅನಂತತೆ (Infinity), ಶಕ್ತಿ (Power), ಕಾರಣ-ಕಾರ್ಯ, ದ್ರವ್ಯ ಮತ್ತು ವ್ಯಕ್ತಿತ್ವದ ಗುರುತು ಮುಂತಾದ ಬಹಳ ಅಮೂರ್ತವಾದ ಕಲ್ಪನೆಗಳು ಸಹ ಅನುಭವಜನ್ಯವಲ್ಲವೆಂದು ತೋರುತ್ತವೆ; ಇವು ಕೂಡ ಮೇಲಿನ ನಿಯಮಕ್ಕೆ ಹೊರತಾದವುಗಳಲ್ಲ. ಈ ಪ್ರಕಾರ, ಅನಂತತೆಯು ನಮ್ಮ ಸಂವೇದನೆಗಳ ದೇಶಿಕ–ಕಾಲಿಕ ವ್ಯಾಪಕತೆಯನ್ನು ವಾಸ್ತವಿಕವಾಗಿ ಅಥವಾ ಕಾಲ್ಪನಿಕವಾಗಿ ಪರಿಸೀಮನಗೊಳಿಸಲು ಸಾಧ್ಯವಾಗದುದರ ಸಾಕ್ಷಿ. ಗುಣಗಳು ಪ್ರತ್ಯೇಕ ಗುಂಪುಗಳಾಗುವುದು ಏಕೆ ಎಂಬುದನ್ನು ಪ್ರತ್ಯಕ್ಷೀಕರಿಸಿಕೊಳ್ಳಲು ಅಥವಾ ತಿಳಿದುಕೊಳ್ಳಲು ಸಾಧ್ಯವಾಗದುದಕ್ಕೆ ಪ್ರಮಾಣ. ಈ ಗುಂಪುಗಳು ಹೇಗೆ ಮತ್ತು ಏಕೆ ಒಂದನ್ನೊಂದು ಅನುಸರಿಸಿ ಬರುವುವು ಮತ್ತು ಆಭಾಸಿಕವಾಗಿ ಜನ್ಯ-ಜನಕಗಳಾಗುವುವು– ಅಲ್ಲದೆ, ಹೇಗೆ ನಮ್ಮ ಇಚ್ಛಾ ಪ್ರಯತ್ನಗಳು ಅವುಗಳನ್ನು ಫಲರೂಪದಲ್ಲಿಡುವಂತೆ ಮಾಡುವ ಚಲನಗಳನ್ನು ಉಂಟುಮಾಡುವುವು– ಎಂಬುದನ್ನರಿಯಲಾಗದುದಕ್ಕೆ ಶಕ್ತಿ ಹಾಗೂ ಕಾರಣ ಕಾರ್ಯಗಳನ್ನು ಕಲ್ಪಿಸಿಕೊಂಡದ್ದು ಸಾಕ್ಷಿ. ಬಿಡುಗಡೆಯೆಂದರೆ ಸ್ವಾತಂತ್ರ್ಯ. ಅದು ಸಾಕಷ್ಟು ಉದ್ದೇಶಪ್ರೇರ್ಯವಾದ ಆಯ್ಕೆಯ ಸ್ವಾತಂತ್ರ್ಯವಲ್ಲ—ಆಯ್ಕೆಗೆ ಅನುಗುಣವಾದ ಕಾರ್ಯದ ಸ್ವಾತಂತ್ರ್ಯ. ವಸ್ತುಗಳ (Things) ವ್ಯಕ್ತಿತ್ವದ ಗುರುತು ಸಂವೇದನಾ ಸಂಘಾತಗಳ ಹೂರಣದ ದೇಶಿಕ–ಕಾಲಿಕ ಸಾತತ್ಯ (Continuity) ದಿಂದ ಜನ್ಯವಾದದ್ದು. ರಚನೆಯ ಪ್ರತ್ಯೇಕತೆಯ ಗುರುತು ಬದಲಾಗುವ ಹೂರಣದ ಕ್ರಮವಿನ್ಯಾಸದ ಸಾತತ್ಯದಿಂದ ಲಭ್ಯವಾದದ್ದು. ವ್ಯಕ್ತಿಯ ಪ್ರತ್ಯೇಕತೆಯ ಗುರುತು ಸ್ಮೃತಿಯ ಮೂಲಕ ಪ್ರಜ್ಞೆಯು ಸತತವಾಗುವುದರಿಂದ ಅನುಮೇಯ; ಅದರಿಂದ ಒಂದೇ

ಶರೀರದಲ್ಲಿ ಭಿನ್ನವ್ಯಕ್ತಿತ್ವಗಳು ಒಂದಾದಮೇಲೊಂದರಂತೆ ಬಂದು ಹೋಗಬಹುದು ಮತ್ತು ಒಂದೇ ಒಂದು ವ್ಯಕ್ತಿತ್ವವು (Personality) ಒಂದರಿಂದ ಇನ್ನೊಂದು ಶರೀರಕ್ಕೆ ಸ್ಥಳಾಂತರ ಹೊಂದಬಹುದು.

ಇಂಥ ಪರಿಸ್ಥಿತಿಯಲ್ಲಿ ನಿಜಜ್ಞಾನವು ಬಹಳ ಪರಿಮಿತವಾಗಿ ಹೋಗಿದೆ. ಸಾಮಾನ್ಯಗಳು (universals) ಮೇಲು ಮೇಲಿನ ಸಾದೃಶ್ಯಗಳಷ್ಟನ್ನು ಗ್ರಹಿಸುತ್ತವೆ; ವಸ್ತುಗಳ ನಿಜ ಸಾರವನ್ನವು ಗ್ರಹಿಸುವುದಿಲ್ಲ. ಏಕತ್ವ, ನಾನಾತ್ವ, ಸಂಬಂಧಗಳು, ಸಹ-ಅಸ್ತಿತ್ವಗಳು, ವಸ್ತುಸಾರದಲ್ಲಿಯ ಆವಶ್ಯಕ ಸೂತ್ರಬದ್ಧತೆಗಳು ನೇರವಾಗಿ ಅನುಭವದ (Intuition) ಪ್ರಾತಿಭ ಪ್ರತ್ಯಕ್ಷದ ಫಲಗಳು; ಅನುಭವವು ಸ್ಮೃತಿ ಸಹಾಯದಿಂದ ಇವುಗಳಿಗೆ ಸಂಬಂಧಿಸಿದ ಕಲ್ಪನೆಗಳ ಸಾಂಗತ್ಯ-ಅಸಾಂಗತ್ಯಗಳನ್ನು ಅರಿತುಕೊಳ್ಳುವುದು. ನಮ್ಮ ಅನುಭವವು ನಮ್ಮ ಹೊರಗಿನಿಂದ ಬರುವುದೆಂಬುದು ನೇರವಾಗಿ ನಮ್ಮ ಸಂವೇದನೆಗೆ(Sensation)ಗೊತ್ತಾಗುತ್ತದೆ. ರುಚಿ, ವಾಸನೆ, ಬಣ್ಣ, ಶಬ್ದ ಮುಂತಾದವು ನಮ್ಮ ಒಳಗಿರುವ ದ್ವಿತೀಯ ಶ್ರೇಣಿಯ (ಗೌಣ) ಗುಣಗಳು; ವ್ಯಾಪಕತೆ, ಆಕಾರ, ವಿಶ್ರಾಂತಿ, ಚಲನ, ವಸ್ತುವೊಂದರ ಆವಯವಿಕ ಹೊಂದಿಕೆಯಿಂದ ಲಭ್ಯವಾಗುವ ಸ್ವರೂಪನಿಷ್ಠ ಏಕತ್ವ ಮತ್ತು ವಸ್ತುನಾನಾತ್ವ ಎಂಬ ಪ್ರಾಥಮಿಕ (ಮೂಲಭೂತ) ಗುಣಗಳು ಪ್ರಾಣಿಪ್ರತ್ಯಕ್ಷಕ್ಕೆ ನಿರಪೇಕ್ಷವಾಗಿ ಹೊರಗಿನ ಜಗತ್ತಿನಲ್ಲಿ ಸಮವೇತ (Inherent) ವಾಗಿರುವಂತೆ ತೋರುತ್ತವೆ. ದೇವರ ಅಸ್ತಿತ್ವವನ್ನು ನಿರ್ಧರಿಸಬಲ್ಲ ನೈದರ್ಶನಿಕ (Demonstrative) ಜ್ಞಾನವು ನಮಗಿದೆ. ದೇವರಿಂದ ಭಿನ್ನವಾದ ವಸ್ತುಗಳ ಬಗೆಗೆ ಸಂವೇದನಾಜನ್ಯವೂ ಸಂವೇದನಾ ಪರಿಮಿತವೂ ಆದ ಜ್ಞಾನವನ್ನು ಬಿಟ್ಟರೆ ಬೇರೆ ಬಗೆಯ ಜ್ಞಾನವಿಲ್ಲ.

ಇಂಗ್ಲೆಂಡಿಗೆ ವಿಶಿಷ್ಟವಾದ Divine right of kings— ರಾಜರ ದೇವದತ್ತಾಧಿಕಾರದ ವಿರುದ್ಧವಾಗಿ ಲಾಕೆ ವಾದಿಸಿದನು; ಪ್ರೈಬಿಷ್ಟಂ-ಚರ್ಚುಗಳ ಪ್ರಾಧಿಕಾರವನ್ನವನು ಧಿಕ್ಕರಿಸಿ ತರ್ಕಿಸಿದನು. ಅವನ ಪ್ರಕಾರ, ರಾಜಕೀಯ ಸಾರ್ವಭೌಮಾಧಿಕಾರವು ಪ್ರಜೆಗಳ ಸಮ್ಮತಿಯನ್ನವಲಂಬಿಸಿದೆ.

ಮತಧಾರ್ಮಿಕ ಪ್ರಾಧಿಕಾರವು ವಿವೇಕ-ವಿಚಾರಗಳನ್ನು ಆಧರಿಸಿದಂಥವು.
ವಿಚಾರ-ವಾಕ್ ಸ್ವಾತಂತ್ರ್ಯಗಳ (ವಿಚಾರವನ್ನು ಪ್ರಕಟವಾಗಿ ಮಾಡುವ
ಮತ್ತು ಅಭಿಪ್ರಾಯವನ್ನು ಹೇಳುವ ಹಕ್ಕುಗಳ) ಸಮರ್ಥನೆಯನ್ನು
ಲೋಕೆ ಚೆನ್ನಾಗಿ ಮಾಡಿದನು.

ಕಾಯದಿಂದ ಪ್ರತ್ಯೇಕಿಸಲಾಗದಂತಹ ಗುಣಗಳು ಪ್ರಾಥಮಿಕ;
ಅವುಗಳ ಪರ್ಯಾಯಗಳು-ಘನತ್ವ, ವ್ಯಾಪಕತ್ವ, ಆಕೃತಿ, ಚಲನ ಅಥವಾ
ವಿಶ್ರಾಂತಿ ಮತ್ತು ಸಂಖ್ಯೆ—ಎಂಬುದಾಗಿವೆ; ನಾನಾತ್ವವು ಸಂಖ್ಯೆ, ಏಕತ್ವವು
ಘನತ್ವ, ವ್ಯಾಪಕತ್ವವು ವಿಸ್ತಾರ್ಯತೆ. ವಸ್ತುಗಳ ಪ್ರಾಥಮಿಕ ಗುಣಗಳು
ಅವುಗಳ ಕಾಯಗಳಲ್ಲಿವೆ; ಅವುಗಳ ಗೌಣ ಗುಣಗಳು ಗ್ರಹಣಕರ್ತ
ನಲ್ಲಿರುತ್ತವೆ. ಪ್ರತ್ಯಕ್ಷವೇ ಪರಮ ಪ್ರಮಾಣ. ಅತಿಭೌತ ಶಾಸ್ತ್ರವು
ಪ್ರಪಂಚದ ಬಗೆಗೆ ಹೇಳುವುದೆಲ್ಲವೂ ಶಾಬ್ದಿಕಜ್ಞಾನ. ವಸ್ತುಗಳಿಗೆ ಸಾರ
ವಿರಬಹುದು; ಅವು ನಮಗರಿಯವು; ಅತಿಭೌತಶಾಸ್ತ್ರ ಹೇಳುವ ವಸ್ತು
ಸಾರವು ಕೇವಲ ಶಾಬ್ದಿಕ. ವಸ್ತು-ಪ್ರಾಣಿಗಳನ್ನು ವರ್ಗೀಕರಿಸಲು
ಮನುಷ್ಯ ಹಿಡಿಯುವ ಪರಿಸೀಮನ ತತ್ವವು ಮನುಷ್ಯ ಕೃತಕ. ಅವ
ನವನ ಮನಸ್ಸಿನಲ್ಲಿರುವುದು ಅವನವನ ಜ್ಞಾನ. ಕಲ್ಪನೆಗಳೆರಡು
ಅಸಂಗತ ಅಥವಾ ಸುಸಂಗತ ಎಂದು ಪ್ರತ್ಯಕ್ಷವಾಗುವುದೇ ಜ್ಞಾನ.
ನಮಗಿರುವ ನಮ್ಮ ಜ್ಞಾನವು ಪ್ರಾತಿಭ (Intuitive); ನಮಗಿರುವ ದೇವ
ಜ್ಞಾನವು ನೈದರ್ಶನಿಕ (Demonstrative) ಇಂದ್ರಿಯಗೋಚರವಾಗುವ
ಬಾಹ್ಯವಸ್ತುಗಳ ಜ್ಞಾನವು ಐಂದ್ರಿಯಿಕ. ಸರಳ ಕಲ್ಪನೆಗಳು ಅವುಗಳು
ನಿರ್ದೇಶಿಸುವ ವಸ್ತುಗಳೊಡನೆ ಸಂಗತವಾಗಿರುತ್ತವೆ. ಬಾಹ್ಯವಸ್ತುಗಳು
ಸ್ವಾಭಾವಿಕವಾಗಿ ಮನಸ್ಸಿನ ಮೇಲೆ ಮಾಡುವ ಪರಿಣಾಮಗಳೇ ವಸ್ತು
ಕಲ್ಪನೆಗಳು. ಜ್ಞಾನ ಮಾರ್ಗಗಳು ಮೂರು: (೧) ಪ್ರತಿಭೆ (Intuition),
(೨) ವಿಚಾರ ತರ್ಕ ಕಲ್ಪನೆಗಳೆರಡರ ಸಾಂಗತ್ಯ-ಅಸಾಂಗತ್ಯಗಳ ಪರಿ
ಶೀಲನೆ; (೩) ಸಂವೇದನೆ ಪ್ರತ್ಯೇಕವಾದ ಬಾಹ್ಯವಸ್ತುಗಳ ಪ್ರತ್ಯಕ್ಷೀ
ಕರಣ.

ಸುಖಕರವಾದದ್ದು ಒಳ್ಳೆಯದು; ದುಃಖಕರವಾದದ್ದು ಕೆಟ್ಟದ್ದು. ಸುಖಪ್ರೇಂವೇ ಇಚ್ಛಾ ಪ್ರೇರಕ. ನಮಗೆ ಅನುಭವಿಸಲು ಶಕ್ಯವಾಗುವ ಸಂತೋಷದ ಪರಮಾವಧಿಯೇ ಸುಖ. ನಿಜಸುಖವನ್ನು ಅನುಸರಿಸಿ ಕೊಂಡು ಹೋಗುವ ಅಗತ್ಯವೇ ಸ್ವಾತಂತ್ರ್ಯದ ಬುನಾದಿ, ಒಳಿತನ್ನು ಬಿಟ್ಟು ಕೇಡನ್ನಿಟ್ಟುಕೊಳ್ಳುವುದು ಪ್ರಕಟವಾದ ಅಪನಿರ್ಣಯ. ಭಾವೋದ್ರೇಕ ಗಳನ್ನು ನಿಯಂತ್ರಿಸಿಕೊಳ್ಳುವುದೇ ಸ್ವಾತಂತ್ರ್ಯದ ನ್ಯಾಯವಾದ ಸುಧಾ ರಣೆ. ವೈಯಕ್ತಿಕ ಹಾಗೂ ಸಾರ್ವಜನಿಕ ಹಿತಾರ್ಥಗಳೆರಡೂ ದೀರ್ಘ ಕಾಲದನಂತರ ಅಂತ್ಯದಲ್ಲಿ ಒಂದೇ. ಜಾಗ್ರತೆ ವಹಿಸಿ ನಡೆದುಕೊಳ್ಳುವುದು ಮತ್ತು ಧಾರ್ಮಿಕತೆಗಳಿರುವೆಡೆ ಮಾತ್ರ ಕಾಯಿದೆ ಬದ್ಧವಾದ ಸ್ವಾತಂತ್ರ್ಯ ವಿರಬಲ್ಲದು. ಯಾವ ಸರಕಾರವೂ ಯಾರಿಗೂ ಸಂಪೂರ್ಣ ಸ್ವಾತಂತ್ರ್ಯ ವನ್ನು ಕೊಡಲಾರದು. ಆಸ್ತಿವಂತಿಕೆಯು ಸರಕಾರದ ಅಗತ್ಯದ ಮೂಲಾ ಧಾರ. ಸರಕಾರವು ವ್ಯಕ್ತಿಗಳ ಹಕ್ಕುಗಳ ರಕ್ಷಕ. ಅದೊಂದು ಲೌಕಿಕ ವಿಷಯ. ಅದೊಂದು ಸರಕಾರ-ಪ್ರಜೆಗಳಲ್ಲಾದ ಸಾಮಾಜಿಕ ಒಪ್ಪಂದ. ಸಾರ್ವಜನಿಕ ಹಿತಕ್ಕಾಗಿ ಕಾಯಿದೆ ಮಾಡುವುದು ಸರಕಾರದ ಹಕ್ಕು. ಸರಕಾರವು ನಿರಂಕುಶವಾಗಿರಕೂಡದು. ಬಹುಸಂಖ್ಯಾತರ ಮತವೇ ಕೊನೆಯದಾಗಿ ನಿರ್ಣಾಯಕವಾಗಿರಬೇಕು. ವ್ಯಕ್ತಿಯ ಆಸ್ತಿಯ ಮೇಲಿನ ಹಕ್ಕನ್ನು ಸರಕಾರ ಕಸಿದುಕೊಳ್ಳಲಾರದು; ಅದು ಹಾಗೆ ಮಾಡುವುದು ಅದರ ಅಧಿಕಾರಕ್ಕೆ ಮೀರಿದ್ದು. ಆಯಾ ಮನುಷ್ಯನಿಗೆ ವ್ಯವಸಾಯ ಮಾಡಲು (ಮಾಡಿಸಲು ಅಲ್ಲ) ಸಾಧ್ಯವಾಗುವಷ್ಟು ಭೂಮಿ ಅವನ ಆಸ್ತಿ. ಸರಕಾರದ ಕಾರ್ಯಾಂಗ, ನ್ಯಾಯಾಂಗ, ಶಾಸನಾಂಗಗಳ ಅಧಿಕಾರಗಳು ಪ್ರತ್ಯೇಕವಾಗಿರಬೇಕು.

ಜಾರ್ಜ್ ಬರ್ಕ್ಲೆ (೧೬೮೫—೧೭೫೩)

ಜಾರ್ಜ್ ಬರ್ಕ್ಲೆಯು ನಾನಾತ್ವೀಯ ಧ್ಯೇಯವಾದಿ. ರೂಪ, ಗಾತ್ರ, ಸನ್ನಿವೇಶಗಳೆಂಬ ಧರ್ಮಗಳು ಅನುಭವಿಯಾದ ಮಾನವನ ಪ್ರಜ್ಞೆಯಲ್ಲ- ಲ್ಲದೆ ಹೊರಗಿಲ್ಲ. ವಿಶ್ವಮನವೆಂಬುದೇ ದೇವರು. ವಾಸ್ತವಿಕ ಪ್ರಪಂಚ

ವೆಂದು ಕರೆಯಲ್ಪಡುವ ಪದಾರ್ಥ ಅದರ ಹೂರಣ. ಪರಿಮಿತ ಜೀವಗಳನ್ನು ದೇವರು ಸೃಷ್ಟಿಸಿದ್ದಾನೆ. ಅವುಗಳ ವಿವಿಧ ಅನುಭವಗಳು ಅವನು ಅವರಿಗೆ ಕೊಟ್ಟ ಸಂದೇಶಗಳು. ಆ ಸಂದೇಶಗಳು ಅವರವರ ಗ್ರಹಣ ಶಕ್ತಿಗೆ ಪರಿಮಿತ; ಅವು ಆತನ ದಿವ್ಯಾನುಭವಗಳಿಂದ ಬಂದಂಥವು. ಜಗತ್ತಿನ ಭೌತಿಕಾಂಶಗಳೆಲ್ಲವನ್ನೂ ಮಾನಸಿಕ ಘಟನೆಗಳನ್ನಾಗಿ ಪರಿವರ್ತಿಸಬಹುದು. ಭೌತ ಪದಾರ್ಥವು ಮಿಥ್ಯೆ; ಅದಕ್ಕೆ ಅಸ್ತಿತ್ವವಿಲ್ಲ. ಪ್ರತ್ಯಕ್ಷವಾಗುವ ಪ್ರಾಥಮಿಕ-ಗೌಣ ಗುಣಗಳು ಮನೋಮಯ; ಅವುಗಳಿಗೆ ಹೊರಗಿನ ಆಶ್ರಯ ದ್ರವ್ಯವಿಲ್ಲ. ಅದವೊಂದು ದ್ರವ್ಯ. ಕೆಲ ಭೌತಿಕ ಪದಾರ್ಥಗಳು ಅಪ್ರತ್ಯಕ್ಷವಾಗಿರುತ್ತವೆ. ಮನಸ ಮತ್ತು ಅದರಲ್ಲಿಯ ಘಟನೆಗಳಿಗಷ್ಟೇ ಅಸ್ತಿತ್ವರೂಪದ ಸತ್ಯತೆಯಿದೆ.

ಡೇವಿಡ್ ಹ್ಯೂಂ (೧೭೧೧—೧೭೭೬)

ಸಂವೇದನೆ ಮತ್ತು ಆಲೋಚನೆಗಳೇ ತಿಳಿವಳಿಕೆ (Cognition) ಎಂಬುದರ ಮೂಲ. ಸರಳ ಕಲ್ಪನೆಗಳೆಲ್ಲವೂ ಸರಳ ಭಾವಪ್ರಕಾರಗಳ (Impressions) ಪಡಿಯಚ್ಚುಗಳು. ಜಟಿಲ ಕಲ್ಪನೆಗಳು ಜಟಿಲ ಭಾವ-ಪ್ರಕಾರಗಳ ಪಡಿಯಚ್ಚುಗಳಾಗಿರಬಹುದು ಅಥವಾ ಸರಳ ಕಲ್ಪನೆಗಳ ಕಾಲ್ಪನಿಕ ಸಂಯೋಗಗಳಿಂದ ಉಂಟಾಗಿರಲೂ ಬಹುದು. ಕಲ್ಪನೆಗಳ ತುಲನೆಯಿಂದ ಜ್ಞಾನ ಲಭಿಸುವುದು; ಅವುಗಳ ಅಂತರ್ಗತವಾದ ಸಹಜ ಹೋಲಿಕೆಯೇ ಅದರ ಹೂರಣ. ಹೋಲುವ ಕಲ್ಪನೆ (Idea) ಗಳನ್ನು ಬೇರೆ ಹೋಲಿಕೆ ಎಂಬುದಿಲ್ಲ; ಅಮೂರ್ತ ಸಾಮಾನ್ಯ ಕಲ್ಪನೆಗಳೆಂಬವು ಇಲ್ಲವೇ ಇಲ್ಲ. ಕಲ್ಪನೆಗಳ ಸಾಮಾನ್ಯತೆಯನ್ನು (Generality) ಪ್ರಾತಿನಿಧಿಕ ಕಲ್ಪನೆಗಳಂತಿರುವ ಎಲ್ಲ ಕಲ್ಪನೆಗಳನ್ನು ಭಾವಪ್ರಕಾರಗಳನ್ನು ಪದೇ ಪದೇ ಬಳಸುವುದು ನಿರ್ಧರಿಸುತ್ತದೆ. ಹೋಲಿಕೆಯ ಮೇಲೆನಿಂತ ಕಲ್ಪನೆಗಳ ಸಂಬಂಧಗಳೇ ಜ್ಞಾನ. ಬೇರೆ ಬೇರೆ ಇರವುಗಳ ನಡುವಿನ ಒಂದೇ ಒಂದು ಸಂಬಂಧವೆಂದರೆ ಕಾರ್ಯ-ಕಾರಣ ಸಂಬಂಧ; ಅದರಿಂದಲೇ

ಒಂದರಿಂದ ಇನ್ನೊಂದನ್ನು ಅನುಮಾನಿಸಲು (Infer) ಸಾಧ್ಯ. ಕಾರ್ಯ-ಕಾರಣಗಳ ನಡುವೆ ಸಾದೃಶ್ಯವಿರಲೇಬೇಕೆಂಬ ನಿಯಮವಿಲ್ಲ. ಆದುದರಿಂದ ಕಾರಣನಿಷ್ಠವಾದ ಅನುಮಾನವು ಪ್ರತ್ಯಕ್ಷಾನುಭವದ ದೃಷ್ಟಿಯಿಂದ ಅಥವಾ ತರ್ಕಶಾಸ್ತ್ರೀಯ ಔಪಚಾರಿಕತೆಯ ದೃಷ್ಟಿಯಿಂದ ಖಾತ್ರಿಯಾದುದೆಂದು ಹೇಳಲು ಬರಲಾರದು. ಕಾರಣ-ಕಾರ್ಯಗಳ ಪೌರ್ವಾಪರ್ಯಸಂತಾನ ಮತ್ತು ಕಾಲ-ದೇಶಿಕ ಸಾತತ್ಯಗಳು ಅನಿವಾರ್ಯ ಸಂಬಂಧವಾದುದನ್ನು ಸೂಚಿಸುವುದಿಲ್ಲ. ಈ ಸಂಬಂಧದ ಸ್ಥಿರತೆಯು (Constancy) ಕೇವಲ ಪುನರಾವೃತ್ತಿಯಾಗಿರುವುದರಿಂದ ಯಾವ ಹೊಸ ಕಲ್ಪನೆಯನ್ನೂ ಇದು ಒದಗಿಸಕೊಡದು. ಆದುದರಿಂದ ಕಾರಣಸಂಬಂಧದ ಅನಿವಾರ್ಯತೆಯನ್ನು ಮಾನಸಶಾಸ್ತ್ರದ ದೃಷ್ಟಿಯಿಂದಲೇ ವಿವರಿಸಬೇಕಾಗುತ್ತದೆ. ಹೀಗೆ ಆಲೋಚನೆಯ ಭಾವಪ್ರಕಾರವು (ಸಂಸ್ಕಾರವು)- ಅಂದರೆ, ಸಾಹಿತ್ಯದ (Association) ಭಾವನಾನುಭವಿಕ ಬಲವು ಸಂಯುಕ್ತ ಭಾವಪ್ರಕಾರಗಳ ಅನೇಕ ಸಲದ ಪುನರಾವೃತ್ತಿಗಳ ಅನಂತರ ಉತ್ಪನ್ನವಾಗುವದರಿಂದ—ಅನಿವಾರ್ಯತೆಯು (ಆವಶ್ಯಕತೆಯು) ಕಲ್ಪನೆಗೆ ಆಕಾರವಾಗುತ್ತದೆ. ಆರಂಭ ಇರುವ ಎಲ್ಲವುದಕ್ಕೂ ಕಾರಣ ಇದ್ದೇ ಇರಬೇಕು ಮತ್ತು ಸದೃಶ ಕಾರಣಗಳಿಂದ ಸದೃಶ ಕಾರ್ಯಗಳು ಸಂಭವಿಸಬೇಕು ಎಂಬ ಭಾವನಾಂಶವು (Feeling) ಅಭ್ಯಾಸ ಅಥವಾ ರೂಢಿಯಿಂದ ಲಭ್ಯವಾದದ್ದೆಂಬುದು ತಕ್ಕ ವಿವರಣೆಯಾಗುತ್ತದೆ. ಭಿನ್ನ ಇರವುಗಳ (Existences) ನಡುವೆ ತಾರ್ಕಿಕವಾಗಿ ಆವಶ್ಯಕವೆನ್ನಿಸುವ ಸಂಬಂಧವಿದೆಯೆಂದು ಪ್ರಾತಿಭವಾಗಿ (Intuitively) ಅಥವಾ ನ್ಯಾಯವಾಕ್ಯ ಪದ್ಧತಿಯ ಪ್ರಕಾರ (Demonstrately) ಗ್ರಹಿಸಲು ಸಾಧ್ಯವಿಲ್ಲ. ಪ್ರತ್ಯಕ್ಷದ ಕ್ರಿಯಾನುಕ್ರಮ ತಳೆದಾಕುವ ಅವಧಿಗಳಲ್ಲಿ ಸ್ವತಂತ್ರವೂ ಸಾತತ್ಯವುಳ್ಳದ್ದೂ ಎಂದು ತೋರುವ ಹಾಗೆ ಪ್ರತ್ಯಕ್ಷಾನುಭವದ ಜಾಲಗಳಲ್ಲಿರುವ ನಟಿಸುವ ಪ್ರವೃತ್ತಿಯೇ ಬಾಹ್ಯವಸ್ತುಗಳು ಇವೆ ಎಂದು ನಾವು ನಂಬಲು ಕಾರಣ. ಈ ಪ್ರವೃತ್ತಿಯು (Propensity) ಕೆಲವು ಪ್ರತ್ಯಕ್ಷಾನುಭವ ಜಾಲಗಳು ತೋರಿಸುವ ಸ್ಥಿರತೆ ಮತ್ತು ಸಾಂಗತ್ಯ (Coherence) ಗಳಿಂದ ಹಾಗೂ ಜ್ಞಾನ ಮತ್ತು ಸಾಮಾನ್ಯವಾದ ಕಾರಣ

ಗತ ನಂಬಿಗೆಗಳ ಗಡಿಗಳನ್ನು ಮೀರಿ ಹೋಗುವ ಕಲ್ಪನಾ ಶಕ್ತಿಯು ಸಕರ್ಮಕತೆಯ ಬಲದಿಂದ ನಿಷ್ಪ್ರಷ್ಟವಾಗುತ್ತದೆ. ದೈವಭಕ್ತಿಗೂ ನೀತಿವಂತಿಕೆಗೂ ಯಾವ ಸಂಬಂಧವೂ ಇಲ್ಲ. ನೀತಿವಂತಿಕೆಯು ಅಭ್ಯಾಸ-ರೂಢಿಗಳನ್ನು ಆಧರಿಸಿದ್ದು; ಅದಕ್ಕೆ ತಾರ್ಕಿಕ ಅನಿವಾರ್ಯತೆಯ ತಳಪಾಯವಿಲ್ಲ. ಸ್ವಾರ್ಥ ಮತ್ತು ಪರಹಿತದ ಬಗೆಗಿನ ಸಹಾನುಭೂತಿಗಳೇ ನೀತಿವಂತಿಕೆಯ ಮೂಲ. ಅನುಭವದಿಂದಲೂ ನಿರೀಕ್ಷಣೆಯಿಂದಲೂ ನಾವು ಏನನ್ನೂ ಹೊಸದಾಗಿ ಕಲಿತುಕೊಳ್ಳಲಾರೆವು. ಯಾವ ನಂಬಿಗೆಗೂ ತರ್ಕದ (Reason) ಆಧಾರ ವಿಲ್ಲ.

ಜೀನ ಜಾಕ್ಸ್ ರೂಸೋ (೧೭೧೨-೧೭೭೮)

ಮನುಷ್ಯನು ಸ್ವಾಭಾವಿಕವಾಗಿ ಒಳ್ಳೆಯವನು. ಸಂಸ್ಥೆಗಳು ಅವನನ್ನು ಕೆಟ್ಟವನನ್ನಾಗಿ ಮಾಡಿವೆ. ಪ್ರಾಣಿ ಸಹಜವಾದ ನೈಸರ್ಗಿಕ ಬಾಳು ಎಂಬುದು ಮನುಷ್ಯರಲ್ಲಿ ಬಹುಶಃ ಎಂದೂ ಇದ್ದಿಲ್ಲ, ಇನ್ನೆಂದೂ ಉಂಟಾಗಲಾರದು. ಮನುಷ್ಯರಲ್ಲಿ ನಿಸರ್ಗ ಸಹಜವಾದ ವಿಷಮತೆ ಇದೆ; ವಯಸ್ಸು, ಆರೋಗ್ಯ, ಬುದ್ಧಿಮತ್ತೆ ಮುಂತಾದವುಗಳಲ್ಲಿ ಅವರು ಅಸಮಾನರು. ಆದರೆ ಪರಂಪರಾಗತವಾದ ಹಕ್ಕುಗಳಲ್ಲಿ ವೈಷಮ್ಯವಿರುವುದು ಅಸಾಧು. ವೈಯಕ್ತಿಕ (ಖಾಸಗಿ) ಆಸ್ತಿವಂತಿಕೆಯೇ ಸಾಮಾಜಿಕ ವಿಷಮತೆಗೆ ಕಾರಣ. "ನಾಗರಿಕತೆ" ಯನ್ನು ಬಿಟ್ಟು ಸರಳ ಜೀವನವನ್ನು ಹಿಡಿಯುವುದೇ ಅದಕ್ಕೆ ಪರಿಹಾರ; ತಾಪಸ ಸೌಗುಣ್ಯವೇ ತಾರಕ ಮಾರ್ಗ. ಪ್ರಜಾಪ್ರಭುತ್ವವು ಗ್ರಾಹ್ಯ; ರಾಜರಿಗೆ ಆಳಲು ದೈವದತ್ತ ಅಧಿಕಾರವಿಲ್ಲ. ಮಾನವನಲ್ಲಿಯ ಗೌರವ ಪೂರ್ಣಭಯ ಅಥವಾ ಅದ್ಭುತಾನುಭವ, ಸರಿ-ತಪ್ಪುಗಳ ಕಲ್ಪನೆ, ಮಹಾತ್ವಾಕಾಂಕ್ಷೆಯ ಭಾವನಾಂಶ ಮುಂತಾದವು ದೈವಶ್ರದ್ಧೆಗೆ ಮೂಲಾಧಾರ. ಮನಃಸಾಕ್ಷಿಯು ನ್ಯಾಯವಾದ ಕರ್ತವ್ಯವನ್ನು ಪ್ರೇರಿಸುವ ಅಭೇದ್ಯವಾದ ಸಾಧನ. ನಮ್ಮ ಸ್ವಾಭಾವಿಕ ಪ್ರವೃತ್ತಿಗಳು ಸಾರ್ವಜನಿಕ ಹಿತಗಳಿಗಾಗಿ ದುಡಿಯಲು ಪ್ರೇರಿಸುತ್ತವೆ; ಆದರೆ ನಮ್ಮ ವಿಚಾರ ಶಕ್ತಿಯು ಸ್ವಾರ್ಥ

ಸಾಧನೆಯನ್ನು ಹಿಡಿಯೆಂದು ಒತ್ತಾಯಿಸುತ್ತವೆ. ಸುಗುಣಿಗಳಾಗಬೇಕಾದರೆ ನಾವು ಭಾವನಾನುಯಾಯಿಗಳಾಗಬೇಕು. ತರ್ಕಬುದ್ಧಿಯ ಅನುಯಾಯಿಗಳಾಗಬಾರದು. ನೈಸರ್ಗಿಕ ಧರ್ಮಕ್ಕೆ ಶ್ರುತಿಗಳ ಆಧಾರ ಬೇಕಾಗಿಲ್ಲ. ದೇವರು ಹೃದಯಕ್ಕೆ ಕೊಟ್ಟ ಸಂದೇಶವನ್ನು ಕೇಳಿದ್ದರೆ ಜಗತ್ತಿನಲ್ಲಿ ಒಂದೇ ಒಂದು ಮತ ಧರ್ಮವಿರುತ್ತಿತ್ತು; ಅದೇ ಸ್ವಾಭಾವಿಕ ಮತ ಧರ್ಮ; ಅದು ನಿತ್ಯ ಅಭೇದ್ಯ. ಶಾಬ್ದಜ್ಞಾನವು ಯಾವಾಗಲೂ ಭೇದ್ಯ (Fallible). ಶ್ರುತಿಗಳ ನರಕವೂ ಅಗ್ರಾಹ್ಯ ಶ್ರದ್ಧಾವಸ್ತುಗಳು. ಇವುಗಳಿಂದ ಮುಕ್ತನಾದ "ಅನಾಗರಿಕನು" ಒಳ್ಳೆಯ ಗಂಡ ಮತ್ತು ದಯಾವಂತ ತಂದೆ. ಅವನಿಗೆ ಲೋಭವಿಲ್ಲ, ನೈಸರ್ಗಿಕ ದಯಾವಂತಿಕೆಯೇ ಅವನ ಮತಧರ್ಮ. ಸರ್ವಾಧಿಕಾರಿ ಪ್ರಭುತ್ವಕ್ಕೆ ಸಮೀಪವರ್ತಿಯಾದದ್ದೇ ಆದರ್ಶಪ್ರಭುತ್ವ: ಸಣ್ಣರಾಜ್ಯಗಳಿಗೆ ಪ್ರಜಾಪ್ರಭುತ್ವ ಉತ್ತಮ, ಮಧ್ಯಮ ಗಾತ್ರದ ರಾಜ್ಯಗಳಿಗೆ ಕುಬೇರಪ್ರಭುತ್ವ (Aristocracy) ಉತ್ತಮ, ದೊಡ್ಡ ರಾಜ್ಯಗಳಿಗೆ ರಾಜಪ್ರಭುತ್ವವೇ ಉಚಿತ. ಒಮ್ಮೆ ಸ್ವಾತಂತ್ರ್ಯ ಹೋದರೂ ಚಿಂತೆಯಿಲ್ಲ, ಸಮತೆಯನ್ನು ಕಳೆದುಕೊಳ್ಳಬಾರದು. ಹಾಬ್ಸ್ ಹೇಳಿದ್ದಕ್ಕೆ ಸದೃಶವಾದ ಸಾಮಾಜಿಕ ಒಪ್ಪಂದದ ಸಿದ್ಧಾಂತವು ಗ್ರಾಹ್ಯ. ಸಮಷ್ಟಿಯು ವ್ಯಷ್ಟಿಯನ್ನು ಕಾಯಬೇಕು. ಸರ್ವರೊಡನೆ ಒಂದಾಗಿಯೂ ವ್ಯಕ್ತಿಯು ತನಗಷ್ಟೇ ತಾನು ವಿಧೇಯನಾಗಿರುವ ಸ್ವಾತಂತ್ರ್ಯವನ್ನು ಇಟ್ಟುಕೊಳ್ಳಬಲ್ಲ. ವ್ಯಕ್ತಿಯ ಹಕ್ಕುಗಳೂ ಸ್ವಾತಂತ್ರ್ಯವೂ ಅಮುಖ್ಯ. ಅವರಿಗಿರುವುದು ನೈಸರ್ಗಿಕ ಹಕ್ಕುಗಳಷ್ಟೇ. ಸಮಾಜಕ್ಕೆ ಅಹಿತವಾಗುವಂಥ ಯಾವ ಬಂಧನವನ್ನೂ ಸಾರ್ವಭೌಮಾಧಿಕಾರವು ವ್ಯಕ್ತಿಯ ಮೇಲೆ ಹೇರಲಾರದು. ಆದರದೇ ಸಮಾಜದ ಹಿತಾ-ಹಿತಗಳಾವುವೆಂಬುದನ್ನು ನಿರ್ಧರಿಸಬಲ್ಲದು. 'ಸಾರ್ವಭೌಮ' ಎಂದರಿಲ್ಲಿ ಸಾಮೂಹಿಕವಾಗಿ ಕಾಯಿದೆ ಮಾಡಬಲ್ಲ ಸಮಾಜ ಅಥವಾ ಸಮುದಾಯವೆಂದರ್ಥ. ಸಾರ್ವಭೌಮನ ಸಂಕಲ್ಪವು ಯಾವಾಗಲೂ ನ್ಯಾಯವಾದುದು. ಏಕೆಂದರೆ ಅದು ಸಾರ್ವಜನಿಕ ಸಂಕಲ್ಪಶಕ್ತಿ. ವ್ಯಕ್ತಿಗಳದ್ದೆಲ್ಲವೂ ರಾಜ್ಯದ ಆಸ್ತಿ. ಪೂರ್ವಭಾವಿಯಾಗಿ ಮಾತಾಡಿಕೊಳ್ಳದೆ ವಿಷಯಜ್ಞಾನ ಚೆನ್ನಾಗಿ ಉಳ್ಳ ಜನರು

ಚರ್ಚಿಸಿದರೆ ಯಾವಾಗಲೂ ಒಳ್ಳೆಯ ನಿರ್ಣಯವನ್ನೇ ಅವರು ತೆಗೆದು ಕೊಳ್ಳಬಲ್ಲರು. ಸ್ವಾರ್ಥದಲ್ಲಿ ವ್ಯಷ್ಟ್ಯರ್ಥ ಮತ್ತು ಸಮಷ್ಟ್ಯರ್ಥಗಳೆರಡೂ ಅಡಕವಾಗುತ್ತವೆ. ಭಿನ್ನ ವ್ಯಷ್ಟ್ಯರ್ಥಗಳಲ್ಲಿ ಸಂಘರ್ಷ ಚೆನ್ನಾಗಿ ಆದರೆ ಅವು ನಿಷ್ಕ್ರಿಯವಾಗಿ ಹೋಗಿ ಸಮಷ್ಟ್ಯರ್ಥವು ಸಾರ್ವಜನಿಕ ಸಂಕಲ್ಪ ರೂಪದಲ್ಲಿ ಉಳಿಯುವುದು. ಒಂದು ರಾಜ್ಯದೊಳಗೆ ರಾಜ್ಯದಂಥ ಇತರ ಅಧೀನ ಸಂಘಗಳಿರಬಾರದು; ಇದ್ದರೆ ಸಾರ್ವಜನಿಕ ಸಂಕಲ್ಪವು ಅನೇಕ ಮತ್ತು ಭಿನ್ನವಾಗಿ ಪರಸ್ಪರ ಸಂಘರ್ಷದಿಂದ ನಿಷ್ಕ್ರಿಯವಾಗುವುದು. ಆದುದರಿಂದ ಹೀಗೆ ವ್ಯಕ್ತಿಯ ಮತದಾನದ ಹಕ್ಕು ನಿಃಸಾರವಾಗಿ ಸಂಘಗಳ ಮತದಾರಿಕೆಯಷ್ಟೇ ಉಳಿಯುವುದು ತಪ್ಪಬೇಕಾದರೆ ಮೇಕಿಯವೆಲ್ಲಿ ಹೇಳಿದಂತೆ ಪಾಕ್ಷಿಕ ಸಮಾಜಗಳೆನ್ನಿಸಬಹುದಾದ ಪಾರ್ಟಿಗಳು ಒಂದು ರಾಜ್ಯದಲ್ಲಿರಬಾರದು—ಅಂಥ ಪಾರ್ಟಿ ರಾಜಕೀಯವಾದದ್ದಾಗಿರಲಿ, ಆರ್ಥಿಕವಾದದ್ದಾಗಿರಲಿ, ಮತ ಧಾರ್ಮಿಕವಾದದ್ದಾಗಿರಲಿ ಅಥವಾ ಇನ್ನಾವ ಬಗೆಯದಾದರೂ ಆಗಿರಲಿ. ಒಮ್ಮೆ ಅಂಥ ಪಕ್ಷಗಳಿರುವುದಾದರೆ ಅವು ಅನೇಕವಾಗಿರುವುದುತ್ತಮ. ಸರಕಾರಿ ಅಧಿಕಾರಿಯಲ್ಲಿ ಸ್ವಾರ್ಥ, ಸರಕಾರಾರ್ಥ ಮತ್ತು ಸಾಮಾಜಿಕ ಅರ್ಥಗಳ ಬಗೆಗಿನ ೨ ಸಂಕಲ್ಪಗಳಿರುತ್ತವೆ. ಪ್ರಜಾಪ್ರಭುತ್ವ (ಆಯ್ದ ಕುಬೇರರ ಪ್ರಭುತ್ವ) ಜಯಪ್ರದವಾಗಬೇಕಾದರೆ (೧) ಹವೆ ಅತ್ಯುಷ್ಣ ಅಥವಾ ಅತಿಶೀತವಾಗಿರಬಾರದು, (೨) ರಾಜ್ಯದ ಆವಶ್ಯಕತೆಗಿಂತ ಬಹಳ ಹೆಚ್ಚಿನ ಉತ್ಪಾದನೆ ಇರಬಾರದು—ಇದ್ದರೆ ಅನೇಕರು ಐಷಾರಾಮಿಗಳಾಗಿ ರಾಜ್ಯಘಾತಕರಾಗುವರು: ಆಗ ರಾಜ್ಯವು ರಾಜಪ್ರಭುತ್ವಕ್ಕಿಂತ ಬಹಳ ಕನಿಷ್ಠದರ್ಜೆಗಿಳಿಯುವುದು—ಅದರಲ್ಲಿ ಇದ್ದರೆ ಅವನೂ ಅವನ ಅರಮನೆಯ ಕಂಪನಿ ಅಷ್ಟೇ ಐಷಾರಾಮದಿಂದ ಸ್ವರ ಪರ ಹಾನಿಗಿಳಿಯುವ ಸಂಭವವಿದೆ.

ಇಮ್ಯಾನ್ಯುಯೆಲ್ ಕ್ಯಾಂಟ್ (೧೭೨೪—೧೮೦೪)

ಕ್ಯಾಂಟ್ ಹೇಳಿದ್ದು ವೈಮರ್ಶಿಕ ತತ್ತ್ವಜ್ಞಾನ, ವಿಮರ್ಶೆ, ಅತೀಂದ್ರಿಯ (ಅತಿಮಾನಸ) ತತ್ತ್ವವಾದ ಅಥವಾ ಅತೀಂದ್ರಿಯಧ್ಯೇಯವಾದ (Trans-

cendental Idealism). ಅದರ ಪ್ರಕಾರ ಪ್ರತ್ಯಕ್ಷಾನುಭವವನ್ನು ಸಮನ್ವಯ ಮಾಡುವುದೇ ತರ್ಕದ ಕೆಲಸ. ಕಾರಣ-ಕಾರ್ಯಭಾವ ಮುಂತಾದ ಕೆಲವು ಕಲ್ಪನೆಗಳನ್ನು ಗೃಹೀತವೆಂದಿಟ್ಟುಕೊಳ್ಳುವುದು ಅದಕ್ಕೆ ಅಗತ್ಯ. ಕಾರ್ಯ-ಕಾರಣ ಸಂಬಂಧವು ವ್ಯಷ್ಟಿಪರಾಮರ್ಶೆಯ ಸ್ವಾರ್ಥಾನುಮಾನದಿಂದ ಲಭ್ಯವಾದ ಸಾಮಾನ್ಯತತ್ವಗಳಿಂದ ಸಿದ್ಧವಾಗುವಂಥದಲ್ಲ. ಅನುಭವ ವೆಂದು ಬಿಡಿಗಳಿಂದ ಸಮನ್ವಿತವಾದ ಇಡಿಯೆಂದು ಭಾವಿಸುವುದು ಅಗತ್ಯ; ಅದು ಅರ್ಥಪೂರ್ಣವೆಂದು ಗ್ರಹಿಸುವುದೂ ಆವಶ್ಯಕ. ಅಗತ್ಯವಾದ ಸಮನ್ವಯ ತತ್ವಗಳು ಸಂವೇದನಾನಿಷ್ಠವಾದ ಪತ್ಯಕ್ಷದಿಂದ ಪಡೆಯಲು ಸಾಧ್ಯವಾಗದಿದ್ದರೆ, ಆಗ ಅವು ಸಂಬಂಧಿಸಿದ ಪದಾರ್ಥಗಳ ಸೃಷ್ಟಿಗಿಂತ ಹಿಂದೆಯೇ ಇದ್ದವೆಂದು ತಿಳಿಯಬೇಕು. ಅವು 'ಅತೀಂದ್ರಿಯ, ಅತಿಮಾನಸ, ಎಂದು ಕರೆಯಲ್ಪಟ್ಟಿವೆ. ಅವುಗಳೇನೂ ಅನುಭವಾತೀತವಾದವುಗಳಲ್ಲ. ಸುಸಂಬದ್ಧವಾದ ಬಿಡಿಗಳಿಂದ ಕೂಡಿದ ಇಡಿ ಅನುಭವದ ಕಕ್ಷೆಯಲ್ಲೇ ಅವು ಬರುತ್ತವೆ. ಆಕರದಲ್ಲಿಯೂ ಸ್ಥಾನದಲ್ಲಿಯೂ ಅವು ಸಂವೇದನಾಜ್ಞಾನಗಳಿಗೆ ಮೀರಿದಂಥವು ಅಥವಾ ಭಿನ್ನ—ಅಷ್ಟೆ.

ಸಂವೇದ್ಯತೆಯ ಪ್ರಾತಿಭಜ್ಞಾನದ ಎರಡು ರೂಪಗಳೂ ಅತೀಂದ್ರಿಯ: ದೇಶ ಮತ್ತು ಕಾಲ ಸಂವೇದಿಸಿದ (ಪ್ರತ್ಯಕ್ಷವಾದ) ನಿಸರ್ಗಜ್ಞಾನವು ಯಾವಾಗಲೂ ದೇಶಕಾಲಾವಚ್ಛಿನ್ನ; ಅದು ಯಾವುದಾದರೂ ಒಂದು ಪದಾರ್ಥದ ಅನುಭವ. ಅಂಥ ಪ್ರತಿಯೊಂದು ಜ್ಞಾನಕ್ಕೂ ಅವು ಅವಚ್ಛೇದಕಗಳಾಗಿರುವುದರಿಂದ ಅವೆಂದೂ ವಸ್ತುಮಾತ್ರಗಳ Things-in-themselves) ಸಹಜಗುಣಗಳೆನ್ನಿಸಲಾರವು—ತಾರ್ಕಿಕ ವಿಚಾರದ ಔಪಚಾರಿಕ ಬೇಡಿಕೆಗಳಷ್ಟೇ ಆದಾವು. ದೇಶ-ಕಾಲಗಳು ವ್ಯಾವಹಾರಿಕ ಸತ್ಯಗಳು. ಏಕೆಂದರೆ, ಅವು ಸಾಕ್ಷಾತ್ತಾದ ಅನುಭವದಲ್ಲಿ ಬರುತ್ತವೆ. ಆದರೆ ಅವು ಅತೀಂದ್ರಿಯವಾದ ಧ್ಯೇಯಗಳು (Ideals)—ಅವು ಪ್ರತ್ಯಕ್ಷ ದರ್ಶನದ ಮೇಲೆ ಮನಸ್ಸು ಹೇರುವ ಆಕಾರಗಳಿರುವುದರಿಂದ.

ಪದಾರ್ಥಗಳು (Categories) ತಿಳಿವಳಿಕೆಯ ಸಮನ್ವಿತ ಆಕೃತಿಗಳು, ಶುದ್ಧ ತತ್ವಗಳು. ಅವು ಹನ್ನೆರಡು.+ ಪರಿಮಾಣ, ಗುಣ, ಸಂಬಂಧ ಮತ್ತು ರೀತಿಭಾವ (Modality) ಎಂಬ ನಾಲ್ಕರಲ್ಲಿ ಅವು ವರ್ಗೀಕರಿಸಲ್ಪಡುತ್ತವೆ. ಸಂವೇದ್ಯತೆಯ ಆಕೃತಿಗಳಲ್ಲಿ ಅಡಕವಾಗುವ ಸಂವೇದನಾ ದ್ರವ್ಯಗಳೇ (Sensuous materials) ಪ್ರತ್ಯಕ್ಷದ ಪ್ರತಿಮೆಗಳು. ವಿಚಾರ ಶಕ್ತಿಯು (Reason) ತಿಳಿವಳಿಕೆಯ ಮೂಲಕ (understanding) ಆ ಪ್ರತಿಮೆಗಳನ್ನು ತರ್ಕ ಕಲ್ಪನೆ (Concepts) ಮತ್ತು ತತ್ವಗಳನ್ನು (Principles) ತಂದು ಅರ್ಥವತ್ತಾದ ನಿಸರ್ಗನಿರ್ಣಯ (Judgments of Nature) ಗಳನ್ನಾಗಿ ಸಮನ್ವಯಿಸುತ್ತದೆ. ಈ ರೂಪಕ್ಕೆ ತರದೆ ಹೋದರೆ ಮಾನವನಿಗೆ ನಿಸರ್ಗದ ಯಾವ ಜ್ಞಾನ ಅಥವಾ ಅನುಭವವೂ ಉಂಟಾಗದು. ಆದರೆ ದೇವರು, ಅಮರ ಆತ್ಮ ಮತ್ತು ಸಾರ್ವರೂಪದ ಪ್ರಪಂಚ ಎಂಬಂಥ ಅತಿಭೌತಶಾಸ್ತ್ರೀಯ ಪದಾರ್ಥಗಳನ್ನು ಲಕ್ಷಿಸಿ ಹೇಳಲು ಸಂವೇದ್ಯತೆಯ ಹಾಗೂ ತಿಳಿವಳಿಕೆಯ ಆಕೃತಿಗಳಾವುವೂ ಉಪಯುಕ್ತವಾಗುವುದಿಲ್ಲ. ಲೋಕಾನುಭವದ ಅವಶ್ಯ ಉಪಾಧಿಗಳಾಗಿರುವ (Necessary conditions) ಕಾರಣದಿಂದ ಉಕ್ತ ಆಕೃತಿಗಳು ಅನುಭವದಲ್ಲಿ ಸತ್ಯವಾಗಿ ತೋರಿದರೂ ಅವುಗಳನ್ನು ಅನುಭವಾತೀತವಾದ ಪದಾರ್ಥಗಳಿಗೆ ಅನ್ವಯಿಸಬಹುದೋ ಬಾರದೋ ಎಂಬುದನ್ನು ನಿರ್ಣಯಿಸಲು ಯಾವ ದಾರಿಯೂ ಇಲ್ಲ. ಹೀಗೆ ಅತಿಭೌತಶಾಸ್ತ್ರದ ನಿರ್ಣಯಗಳು ಪ್ರತ್ಯಕ್ಷನಿಷ್ಠ ತರ್ಕದಿಂದ ಸಮರ್ಥಿಸಲು ಬಾರದಂಥವುಗಳಾದರೂ ತೀರ ನಿರುಪಯುಕ್ತಗಳೆನ್ನಿಸುವುದಿಲ್ಲ. ಶುದ್ಧ ವಿಚಾರದ (Pure reason) ಕಲ್ಪನೆಗಳು ನಿಯಾಮಕತೆಯ ಶಕ್ತಿಯಿಂದ ಉಪಯುಕ್ತಗಳಾಗುತ್ತವೆ; ಅಂದರೆ ಅವು ತಾವು ಭಾಗಿಗಳಾಗಿರಲಾರದ ಸಾಮಾನ್ಯ ಪದಾರ್ಥಗಳನ್ನು ಸೂಚಿಸಬಲ್ಲವು. ಸೈದ್ಧಾಂತಿಕ ಜ್ಞಾನವು ಅನುಭವ ಕ್ಷೇತ್ರಕ್ಕೆ ಪರಿಸೀಮಿತವಾದದ್ದು; ಈ ಕ್ಷೇತ್ರದಲ್ಲಿ ನಾವು ವಸ್ತು ಮಾತ್ರಗಳ (ಕೇವಲ

+ (೧) ಏಕತ್ವ, ನಾನಾತ್ವ, ಸಾಕಲ್ಯ; (೨) ಸತ್ಯತೆ, ನಿಷೇಧ, ಪರಿಮಿತಿ; (೩) ದ್ರವ್ಯ-ಆಕಸ್ಮಿಕಧರ್ಮ, ಕಾರಣ-ಕಾರ್ಯ, ಪಾರಸ್ಪರಿಕತೆ; (೪) ಸಾಧ್ಯತೆ, ಅಸ್ತಿತ್ವ, ಅವಶ್ಯಕತೆ.

ಪದಾರ್ಥಗಳ) ಜ್ಞಾನವನ್ನು ಪಡೆಯಲಾರೆವು. ನಮಗೆ ತಿಳಿಯುವುದು ವಿಚಾರಶಕ್ತಿಯು ತರ್ಕಪೂರ್ವ (a priori), ಪ್ರಾತಿಭ ಆಕೃತಿಗಳ ಮೂಲಕ ವಸ್ತುಗಳು ತೋರುವ ರೀತಿಯಷ್ಟನ್ನೇ. ಅಂಥ ತೋರಿಕೆಗಳೇ ಘಟನೆಗಳು.

ಆದರೆ ವಿಚಾರಶಕ್ತಿಯು (ತರ್ಕಶಕ್ತಿಯು) ಕೇವಲ ಸೈದ್ಧಾಂತಿಕ ಪ್ರಯೋಜನಕ್ಕಷ್ಟೇ ಪರಿಸೀಮಿತವಾಗಿಲ್ಲ. ಪ್ರತ್ಯಕ್ಷಜ್ಞಾನ, ಆಲೋಚನೆಗಳ ವಸ್ತುಗಳಂತೆಯೇ (objects ವಿಷಯಗಳಂತೆಯೇ) ಇಚ್ಛಾಶಕ್ತಿ ಮತ್ತು ಭಾವನಾಂಶಗಳ [will and feeling] ವಿಷಯಗಳೂ ಇವೆ. ಸೈದ್ಧಾಂತಿಕ ಉಪಯುಕ್ತತೆಯಲ್ಲಿಯೂ ವಿಚಾರಶಕ್ತಿಯು ನಿಸರ್ಗಕ್ಕೆ ನಿಯಮಗಳನ್ನು ಹಾಕಿಕೊಡುವ ಕರ್ತ. ಅದರಿಂದ ಸಂವೇದನೆಗಳು ಸಂವೇದ್ಯತೆ ಮತ್ತು ತಿಳಿವಳಿಕೆಗಳ ಆಕೃತಿಗಳಿಗೆ ಹೊಂದುವಂತಾಗುತ್ತವೆ. ಇಲ್ಲವಾದರೆ, ನಿಸರ್ಗದ (ಸೃಷ್ಟಿಯ) ಅರ್ಥ ಯಾರಿಗೂ ಆಗದು. ಆದರೆ ನೈತಿಕ ಅನುಭವದ ಕ್ಷೇತ್ರದಲ್ಲಿ ವಿಚಾರವಂತನ ಇಚ್ಛಾಶಕ್ತಿಯು ಸ್ವಾಯತ್ತವಾಗಿರುತ್ತದೆ—ಅದಕ್ಕದೇ ನಿಯಮವಾಗಿರುತ್ತದೆ. ಆದರೆ ನಿರುಪಾಧಿಕವಾದ [unconditional] ನೀತಿ ನಿಯಮ ಅಥವಾ ಕರ್ತವ್ಯವು ಸಾಧ್ಯವಾಗುವುದು ಇಚ್ಛಾಶಕ್ತಿಯು ನಿಜವಾಗಿ ಸ್ವತಂತ್ರ ಎಂಬ ನಂಬಿಗೆಯಿಂದ ಮಾತ್ರ. ನಮ್ಮ ಘಟನಾ ಸಂತಾನ ಸ್ವರೂಪದ ದೆಸೆಯಿಂದ ನಾವು ನಿಸರ್ಗ-ವಿಚಾರಶಕ್ತಿಗಳೆರಡರ ನಿಯಮಗಳಿಗೂ ಬದ್ಧರು; ಆದರೆ ನಮ್ಮ ಶುದ್ಧ ವೈಚಾರಿಕ ಇಚ್ಛಾಶಕ್ತಿಗಳ ಸ್ವರೂಪದಲ್ಲಿ ನಾವು ಸ್ವತಂತ್ರವೂ ಜ್ಞಾನಮಯವೂ ಆದ (ಗ್ರಾಹ್ಯವಾದ ಅರ್ಥವುಳ್ಳ) ಕ್ಷೇತ್ರದಲ್ಲಿ ಸಂಚರಿಸುವೆವು. ಅದರಲ್ಲಿ ಮಾನವ ಕುಲವನ್ನು ಕೇವಲ ಸಾಧನವನ್ನಾಗಿ ಅಲ್ಲದೆ ಸಿದ್ಧಿಯನ್ನಾಗಿಯೂ ತಿಳಿದು ನಡೆದುಕೊಳ್ಳುವಂಥ ಸ್ವಯಮಾರೋಪಿತವಾದ ವಿಚಾರಯುಕ್ತ ನಿಯಮದಿಂದ ಮಾತ್ರ ನಾವು ಬದ್ಧರು.

ದೇವರ ಸತ್ಯತೆ ಮತ್ತು ಜೀವಾತ್ಮಗಳ ನಿತ್ಯತೆಗಳು ತರ್ಕ ಸಮರ್ಥನೆಗೆ ಮೀರಿದವುಗಳಾದರೂ ವ್ಯಾವಹಾರಿಕ ವಿಚಾರ-ವಿವೇಕಗಳಿಗೆ ಆಧಾರ ತತ್ವಗಳಾಗುತ್ತವೆ. ಸೌಜನ್ಯಕ್ಕೆ ಸುಖ ಮತ್ತು ದೌರ್ಜನ್ಯಕ್ಕೆ ದುಃಖ

ಉಂಟಾಗುವಂತೆ ಜಗತ್ತನ್ನು ನೈತಿಕವಾಗಿ ನಡೆಯಿಸಿಕೊಂಡು ಹೋಗಲು ದೇವರು ಆಧಾರ. ಮಾನವನ ಐಹಿಕ ಜೀವನದಾಚೆಗೂ ನೈತಿಕವಾಗಿ ಪೂರ್ಣತೆಯನ್ನು ಪಡೆಯುವ ಪ್ರಯತ್ನವು ಮುಂದುವರಿಯಲು ಆತ್ಮದ ಅಮರತ್ವವು ಆಧಾರ. ಈ ಆಧಾರ ತತ್ವಗಳು, ನೈತಿಕ ಸ್ವಾತಂತ್ರ್ಯ ಮತ್ತು ಜನಪ್ರಿಯ ಹಕ್ಕುಗಳು—ಕ್ಯಾಂಟನು ವ್ಯಾವಹಾರಿಕ ವಿಚಾರ-ವಿವೇಕಗಳಿಗೆ ಪ್ರಥಮ ಪ್ರಾಶಸ್ತ್ಯವನ್ನು ಕೊಡಲು—ಬುನಾದಿಯಾಗಿವೆ.

ರಸಾಸ್ವಾದದ ಮತ್ತು ಸ್ವಾಭಾವಿಕ ಉದ್ದೇಶವಂತಿಕೆಗಳಲ್ಲಿ ಬುದ್ಧಿ-ಇಚ್ಛಾಶಕ್ತಿಗಳನ್ನು ಸಂಬಂಧಿಸುವಂತೆ ಮಾಡಲಾಗಿದೆ. ರಸಾಸ್ವಾದವು ಜ್ಞಾನಾಕೃತಿಗಳಲ್ಲಿ ಇಂದ್ರಿಯಗ್ರಾಹ್ಯ ವಸ್ತುವೊಂದು ಸಾಮರಸ್ಯ (Harmony) ಹೊಂದುವುದರಿಂದ ಉಂಟಾಗುತ್ತದೆ. ಆಗ ನಿಸರ್ಗ-ಸ್ವಾತಂತ್ರ್ಯಗಳಲ್ಲಿ ಸಂಪೂರ್ಣ ಹೊಂದಿಕೆಯುಂಟಾದಂತಾಗುವುದು. ಪ್ರತಿಭೆಯಲ್ಲಿ ಅದಕ್ಕೆ ದೃಷ್ಟಾಂತ ದೊರಕುವುದು. ತದ್ವಿರುದ್ಧವಾಗಿ, ಸ್ವಾಭಾವಿಕ ಉದ್ದೇಶವಂತಿಕೆ ಎಂಬುದು ಯಾವಾಗಲೂ ನಿಸರ್ಗಕ್ಕೆ ವಿಶೇಷವಾಗಿರುತ್ತದೆ ಎಂಬ ನಿಯಮವಿಲ್ಲ; ಅದೊಂದು ತರ್ಕಪೂರ್ವದ ಸಂಶೋಧಕ ತತ್ವ, ಅಪ್ರತಿಹತವಾದ ಸಂಭಾವ್ಯ ಊಹೆ; ಅದರ ಮೂಲಕವೇ ನಾವು ನಿಸರ್ಗವನ್ನು ಅದರ ವೈಯಕ್ತಿಕ ಹೂರಣಗಳಿಗೆ (Contents) ಅರ್ಥವನ್ನೂ ಪ್ರಾಧಾನ್ಯವನ್ನೂ ಕೊಡುವ ಅತ್ಯುನ್ನತ ಗುರಿ, ದಿವ್ಯಾಕೃತಿ ಎಂದು ಭಾವಿಸುವೆವು.

ಜಗತ್ತಿನಲ್ಲಿ ಸಂಯುಕ್ತವಾದ ರಾಷ್ಟ್ರಗಳ ಸಂಘವಿರಬೇಕು. ಪ್ರಜಾರಾಜ್ಯದ ಸ್ವರೂಪ ಅದಕ್ಕಿರಬೇಕು. ಪ್ರಜಾಪ್ರಭುತ್ವದ ಬಹುಸಂಖ್ಯಾದ ಪ್ರತಿನಿಧಿಗಳ ಆಳಿಕೆಯಲ್ಲಿ ನಿರಂಕುಶತೆ ಬರುವುದರಿಂದ ಅದರಲ್ಲಿ ಸರ್ವ ಪ್ರಜೆಗಳ ಇಚ್ಛೆಯೆಂಬುದು ತನ್ನಲ್ಲೇ ತಾನು ವ್ಯಾಹತಿಯ ಆಘಾತಕ್ಕೆ ತುತ್ತಾಗಬೇಕಾಗುವುದು; ಸ್ವಾತಂತ್ರ್ಯದ ತತ್ವಕ್ಕೂ ಅದು ವಿರುದ್ಧವಾಗಿ ವರ್ತಿಸುವಂತಾಗುವುದು. ಆದುದರಿಂದ ರಾಜಪ್ರಭುತ್ವದಲ್ಲಿ ಪರಿಪೂರ್ಣ ಸರಕಾರದ ರಚನೆ ಸುಲಭ ಸಾಧ್ಯ.

ಟಿಪ್ಪಣಿಗಳು:

ಕ್ಯಾಂಟನ ಅತೀಂದ್ರಿಯತೆ ಅಥವಾ ಅತಿಮಾನಸಿಕತೆಯು ಪ್ರಮಾಣ ಶಾಸ್ತ್ರೀಯ (Epistemological), ಜ್ಞಾನಶಾಸ್ತ್ರೀಯ (The Theory of Knowledge), ಅಂದರೆ ಜ್ಞಾನ ಕ್ರಿಯೆ ಕಂಡ ಒಂದು ಪದಾರ್ಥವು ವ್ಯಾವಹಾರಿಕವಾಗಿಯೂ ಇರಬಹುದು, ಹಾಗಿಲ್ಲದೆಯೂ ಇರಬಹುದು- ಎಂಬರ್ಥ. ಭ್ರಾಂತಿ (Illusion) ಮತ್ತು ಮಾಯೆ (Hallucination) ಗಳೂ ತಾರ್ಕಿಕ ಆವಶ್ಯಕತೆಯಿಂದಾದ ಕಾಲ್ಪನಿಕ ಭಾವಗಳೂ ಹೊರಗಿನ ವ್ಯವಹಾರ ಜಗತ್ತಿನ ಆಚೆಗಿನವು ಎನ್ನಿಸಿಕೊಳ್ಳುತ್ತವೆ, ಅದರಿಂದ ಭಿನ್ನವಾಗಿರುತ್ತವೆ. ಗಣ್ಯವಾಗಿ ವ್ಯವಹಾರವು ವಸ್ತುಸತ್ಯನಿಷ್ಠ, ವಿಚಾರವು ಜ್ಞಾನಸತ್ಯನಿಷ್ಠ. ಈ ಸತ್ಯಗಳ ಪೂರ್ಣ ಸಾದೃಶ್ಯವು ವ್ಯವಹಾರದ ಪ್ರಾಮಾಣಿಕತೆಗೆ ಅಗತ್ಯ. ಜ್ಞಾನವೆಂದರೆ ಗೊತ್ತಾದ ವಸ್ತುಸಂಬಂಧಗಳು, ಭಾವಸಂಬಂಧಗಳು; ಬುದ್ಧಿಗತವಾದಸತ್ಯ; ಅಭಿಪ್ರಾಯಕ್ಕೆ ವಿರುದ್ಧವಾದುದು; ನಿಶ್ಚಿತ ಜ್ಞಾನವು ಅಭಿಪ್ರಾಯವನ್ನು ಮೀರಿದ್ದು-ಆದರೆ ಸತ್ಯಕ್ಕಿಂತ ಸ್ವಲ್ಪ ಕೆಳಮಟ್ಟದ್ದು; ವಿಧೇಯ-ಉದ್ದೇಶಗಳ ನಡುವಿನ (ಕರ್ಮ-ಕರ್ತೃಗಳ ಮಧ್ಯದ) ಸಂಬಂಧ. ಜ್ಞಾನ-ಸತ್ಯಗಳ ಸ್ವಭಾವವನ್ನು ಅರಿಯಲು ಅಗತ್ಯವಾದ ಪ್ರಮಾಣಗಳ ಸ್ವರೂಪವನ್ನು ತಿಳಿಸುವುದು ಪ್ರಮಾಣಶಾಸ್ತ್ರ; ಜ್ಞಾನದ ಸತ್ಯತೆಯ ಲಕ್ಷಣಗಳನ್ನು ಗುರುತಿಸುವ ತತ್ವಗಳನ್ನು ಹೇಳುವ ಶಾಸ್ತ್ರವು ಜ್ಞಾನಶಾಸ್ತ್ರ- ಎರಡಕ್ಕೂ ಜ್ಞಾನಕ್ರಿಯೆಯು ಸಾಧಾರಣಧರ್ಮ; ಎರಡೂ ವಿವೇಚನೀಯ ಜ್ಞಾನಾಂತರ್ಗತವಾದುದರಿಂದ ಅಭಿನ್ನವೆಂದು ಗ್ರಹಿಸಲ್ಪಟ್ಟಿವೆ.

೧) ಜ್ಞಾನದ ಶಕ್ಯತೆ, ೨) ಜ್ಞಾನದ ಸೀಮಾರೇಖೆಗಳು, ೩) ಜ್ಞಾನದ ಆಕರ, ೪) ಜ್ಞಾನಾರ್ಜನೆಯ ಮಾರ್ಗಗಳು, ೫) ತರ್ಕಪೂರ್ವದ ಜ್ಞಾನ, ೬) ಮುಖ್ಯವಾದ ಜ್ಞಾನ ಜಾತಿಗಳನ್ನು ವಿಂಗಡಿಸುವುದು, ೭) ಜ್ಞಾನ-ಸನ್ನಿವೇಶದ ರಚನಾವಿಧಾನ; ೮) ಸತ್ಯದ ಸ್ವರೂಪ-ಎಂಬ ವಿಷಯಗಳ ಚರ್ಚೆ-ನಿರ್ಧಾರಗಳು ಪ್ರಮಾಣಶಾಸ್ತ್ರ (ಜ್ಞಾನಶಾಸ್ತ್ರ) ವೆಂಬುದರಲ್ಲಿ ಬರತಕ್ಕಂಥವು.

ಬಾಹ್ಯಪ್ರಪಂಚದ ಸತ್ಯವಾದ ಪೂರ್ಣಜ್ಞಾನವು ಮಾನವನಿಗೆ ಅಶಕ್ಯವೆಂಬವರಲ್ಲಿ (ಅ) Sensory Sceptics ಇಂದ್ರಿಯಗಳ ಸಾಪೇಕ್ಷತೆಯನ್ನಾಧರಿಸಿ ಅವು ಅನವಲಂಬನೀಯವೆಂಬವರು, (ಬ) Rational-Sceptics ಬಹಳ ಸಲ ವ್ಯಾಪತ್ತಗ್ರಸ್ತವಾಗುವುದರಿಂದ ವಿಚಾರಶಕ್ತಿಯು ಅನವಲಂಬನೀಯವೆಂಬವರು ಎಂಬ ಎರಡು ಬಗೆಯವರಿದ್ದಾರೆ; ಇಬ್ಬಗೆಯವರನ್ನೂ Solipsists or Ego-centricists ಅಹಂಮೂಲ ಜ್ಞಾನಾರಂಭವಾದಿಗಳು ಅಥವಾ ಅಹಂಕೇಂದ್ರ ಜ್ಞಾನವಾದಿಗಳು ಎಂದು ಹೇಳುವ ರೂಢಿಯಿದೆ. Subjectinist ವ್ಯಕ್ತಿ (ಸ್ವ, ಕರ್ತೃ) ನಿಷ್ಠಜ್ಞಾನವಾದಿಯು-ವ್ಯಕ್ತಿಯ ಕ್ರಿಯಾತ್ರಯ ಸಹಿತವಾದ ಮನಸ್ಸಿನಷ್ಟೇ ಪ್ರತ್ಯಕ್ಷಜ್ಞಾನವು ಪರಿಸೀಮಿತ; ಬಾಹ್ಯ ಪ್ರಪಂಚದ ಜ್ಞಾನವು ಅಂಥ ಮನಸ್ಸಿನ ವಿವಿಧ ವ್ಯಕ್ತಿನಿಷ್ಠ ಅವಸ್ಥೆಗಳಿಂದ ಅನುಮೇಯವಾದ ಪರೋಕ್ಷಜ್ಞಾನ-ಎನ್ನುತ್ತಾನೆ. ಈತನೂ ಮೇಲಿನವರ ಸಾಲಿಗೇ ಸೇರುತ್ತಾನೆ ಎಂಬುದು ವಸ್ತುನಿಷ್ಠ ಜ್ಞಾನವಾದಿಗಳ ಮತ. ನಮಗೆ ಪ್ರತ್ಯಕ್ಷವಾಗಿ ಗೊತ್ತಾಗುವ ಎಲ್ಲ ಸಂಗತಿಗಳೂ ನಮಗಧೀನವಾಗದ, ನಮ್ಮ ಗ್ರಹಣಾಗ್ರಹಣಗಳಿಂದ ಸ್ವತಂತ್ರವಾದ ಅಥವಾ ಅವುಗಳಿಗೆ ನಿರಪೇಕ್ಷವಾದ ವಸ್ತುಸತ್ಯತೆಯನ್ನು ಉಳ್ಳಂಥವುಗಳೆಂಬುದು Objectinism ವಸ್ತುನಿಷ್ಠಜ್ಞಾನವಾದ.

ಜ್ಞಾನದ ಗಡಿಮಿತಿಗಳನ್ನು ನಿರ್ಧರಿಸಲು ಅತಿರೇಕಕ್ಕೆ ಮುಟ್ಟುವ ಅನವಲಂಬನೀಯತಾವಾದ (Agnosticism) ವನ್ನು ಬಿಡಬೇಕಾಗುತ್ತದೆ. ಹಾಗೆ ಬಿಟ್ಟ ಕ್ಯಾಂಟನು ಜ್ಞಾನವನ್ನು Noumenon ಶುದ್ಧಜ್ಞಾನ ಮತ್ತು Phenomenon ಬಾಹ್ಯ ಸಂಗತಿಗಳ ಜ್ಞಾನ ಎಂದು ಎರಡು ವಿಧವಾಗಿ ವರ್ಗೀಕರಿಸಿದ್ದಾನೆ. ಇತ್ತೀಚಿನ Positivists ಅನುಷೇಧವಾದಿಗಳೂ Radical empiricists ಮೂಲಭೂತ ವ್ಯವಹಾರವಾದಿಗಳೂ-ಜ್ಞಾನವೆಂದರೆ "ಅರ್ಥ" ಪೂರ್ಣವೂ ಪರೀಕ್ಷಣೀಯವೂ ಆದದ್ದು ಅಜ್ಞೇಯ-ಎನ್ನುತ್ತಾರೆ. ಇಲ್ಲಿ ಪರೀಕ್ಷಣೀಯತೆಯು ವೈಜ್ಞಾನಿಕ ಪ್ರಯೋಗವನ್ನು ಮಾತ್ರ ಆಧರಿಸಿದ್ದು; ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಕೆಲಮಟ್ಟಿಗೆ ಜೀವಶಾಸ್ತ್ರ ಗಣಿತ ಹಾಗೂ ಖಗೋಲಶಾಸ್ತ್ರಗಳು ಮಾತ್ರ ಆಧಾರಭೂತ ವಿಜ್ಞಾನ

ಶಾಸ್ತ್ರಗಳು—ಅಂದರೆ ಘನ, ದ್ರವ, ವಾಯು ಮತ್ತು ಶಕ್ತಿಗಳ ಅವಸ್ಥೆಯಲ್ಲಿರುವ ಬಾಹ್ಯ ನಿರ್ಜೀವ ವಸ್ತುಗಳಷ್ಟೇ ಆಧಾರ ಸತ್ಯವಾದಂಥವುಗಳು. ಮಿಕ್ಕವು ಅಸತ್ಯಗಳು ಅಥವಾ ಸತ್ಯಾಭಾಸಗಳು ಇಲ್ಲವೆ ಅಹಂಕೇಂದ್ರೀಯವಾದ ಅಲ್ಪಕಾಲಿಕವಾದ, ವ್ಯಕ್ತಿನಿಷ್ಠವಾದ ವಿಶಿಷ್ಟ (Particular) ಸತ್ಯಗಳು. ಘನಾದಿ "ದ್ರವ್ಯ"ಗಳ ಹಾಗೂ ಶಕ್ತಿರೂಪಗಳ ಅಳತೆಗಳೇ ಚರಮ ಸತ್ಯಗಳು ಎಂಬುದು ವೈಜ್ಞಾನಿಕ ವ್ಯವಹಾರವಾದ; ಬಾಹ್ಯ ಜಗತ್ತಿನ ನಮ್ಮ ಜ್ಞಾನದ ಸತ್ಯತೆಯು ಚರಮ ಸ್ವರೂಪವು ಅಮೂರ್ತ ಹಾಗೂ ಗಣಿತ ಸಂಕೇತಾತ್ಮಕ- ಎಂಬುದು ಅದರ ತಾತ್ಪರ್ಯ: ದ್ರವ್ಯಕ್ಕೆ ದ್ರವ್ಯತ್ವವೆಂಬುದಿಲ್ಲ- ಎಲ್ಲವೂ ಗುಣಪುಂಜ ಅಥವಾ ಘಟನೆಗಳು- ಎಂಬುದು ರಸೆಲ್ಲೀಯ ವೈಜ್ಞಾನಿಕ ತರ್ಕ.

ವಿಚಾರಶಕ್ತಿ [Reason] ನಿಜವಾದ ಜ್ಞಾನದ ಆಕರ ಎಂಬವರು ಡೆಸ್ಕಾರ್ಟೀಸ್, ಸ್ಪಿನೋಜ, ಲಿಬ್ನಿಜ್ಜರಂಥ ವಿಚಾರವಾದಿಗಳು. ಪ್ರತ್ಯಕ್ಷಾನುಭವವೊಂದೇ ಅದರ ಆಕರ ಎಂಬವರು ಲೋಕೇ, ಬರ್ಕ್ಲೀ ಮತ್ತು ಹ್ಯೂಮರಂಥ ವ್ಯವಹಾರವಾದಿಗಳು. ಸಂಕುಚಿತ ವ್ಯವಹಾರವಾದದ ಪ್ರಕಾರ ಇಂದ್ರಿಯ ಸಂವೇದನೆಗಳಷ್ಟೇ ಜ್ಞಾನಕ್ಕೆ ಆಕರ. ಪ್ರತ್ಯಕ್ಷಾನುಮಾನಗಳೆರಡಕ್ಕೂ ತಕ್ಕ ಸ್ಥಾನಗಳನ್ನು ಕೊಟ್ಟು ವ್ಯವಹಾರವಾದ [Empiricism] ಮತ್ತು ವಿಚಾರವಾದ [Rationalism] ಗಳನ್ನು ಸಮನ್ವಯಿಸಿದವನು ಕ್ಯಾಂಟ್.

Deductive and demonstrative procedures ಪರಾರ್ಥಾನುಮಾನ ಮತ್ತು ನೈದರ್ಶನಿಕ ಮಾರ್ಗಗಳನ್ನು ವಿಚಾರವಾದಿಗಳು ಜ್ಞಾನಸಾಧನಗಳೆಂದರೆ, ವಿಶಿಷ್ಟ ವೈಯಕ್ತಿಕ ದೃಷ್ಟಾಂತ ಸಂಗ್ರಹ (Induction) ಮತ್ತು ಸಂಭಾವ್ಯ ಊಹೆ [Hypothesis] ಗಳನ್ನು ಜ್ಞಾನಸಾಧನಗಳೆಂದು ವ್ಯವಹಾರವಾದಿಗಳು ಸ್ವೀಕರಿಸಿದ್ದಾರೆ. ಕ್ಯಾಂಟ್ ಮತ್ತು ಹೇಗೆಲ್ಲರ ಅತೀಂದ್ರಿಯ ಮಾರ್ಗ ಮತ್ತು Dialectical method ತರ್ಕಸಮನ್ವಯ ಮಾರ್ಗಗಳು ನಿಸರ್ಗವಿಜ್ಞಾನಗಳ (ವ್ಯವಹಾರವಾದದ) ವೈಯಕ್ತಿಕ ದೃಷ್ಟಾಂತ ಸಂಗ್ರಹದ ಮಾರ್ಗಕ್ಕೆ ಹಾಗೂ ಗಣಿತಶಾಸ್ತ್ರದ ನೈದರ್ಶನಿಕ

ಮಾರ್ಗಕ್ಕೆ ಇಳಿಸಲಾಗದಂಥವುಗಳು. ಕ್ಯಾಂಟ್ ಮತ್ತು ಹೆಗೆಲ್ಲರ ಮಾರ್ಗಗಳ ತರ್ಕಶುದ್ಧತೆ ಮತ್ತು ಯುಕ್ತ ಮಾರ್ಗದ್ವಯಕ್ಕೆ ಇಳಿಸಲಾಗದಿರುವಿಕೆಗಳನ್ನು ಕೆಲವರು ಪ್ರಶ್ನಿಸಿದ್ದಾರೆ. Pragmatism ವ್ಯಾಪಾರ ಸತ್ಯತಾವಾದ, operationalism ಕ್ರಿಯಾನುಕ್ರಮವಾದ Phenomenology ಘಟನಾ ವಿಜ್ಞಾನವಾದ ಮುಂತಾದವುಗಳ ಕೆಲ ಅಂಶಗಳಿಂದ ಪ್ರಮಾಣ ಶಾಸ್ತ್ರೀಯ ಮಾರ್ಗಗಳ ಬೆಲೆಯನ್ನು ಇತ್ತೀಚೆಗೆ ನಿರ್ಧರಿಸಲು ಪ್ರಾರಂಭಿಸಲಾಗಿದೆ.

ತರ್ಕಪೂರ್ವಜ್ಞಾನದ ಬಗ್ಗೆ ೩ ಸಿದ್ಧಾಂತಗಳಿವೆ: (೧) ತರ್ಕಶಾಸ್ತ್ರ, ಗಣಿತ ಶಾಸ್ತ್ರ, ನಿಸರ್ಗವಿಜ್ಞಾನಗಳು ಮತ್ತು ತತ್ವಜ್ಞಾನಗಳ ಮೂಲ ತತ್ವಗಳು ಸ್ವತಃ ಪ್ರಮಾಣವಾದಂಥವುಗಳೆಂಬುದೊಂದು; ಆ ತತ್ವಗಳ ಸ್ಪಷ್ಟತೆ ಮತ್ತು ಕಲ್ಪನಾಗತ ಪ್ರತ್ಯೇಕತೆಗಳು ಅವುಗಳ ಸ್ವತಃಸಿದ್ಧತೆಯ ಲಕ್ಷಣಗಳು—ಎಂಬುದು ವಿಚಾರವಾದೀಯ; (೨) ತರ್ಕಪೂರ್ವ ಸತ್ಯಗಳ ಪ್ರಯತ್ನನಿಷ್ಠ ನಿರಾಕರಣೆಯ ಅಥವಾ ಅವುಗಳು ಅನುಭವಕ್ಕೆ ಪರ ಬಹುಮಾನ ಸಾಧ್ಯತೆಯ ಬಲದಿಂದ ಅವುಗಳನ್ನು ತರ್ಕಸಿದ್ಧವೆನ್ನುವ ಲಿಬ್ನಿಜ್-ಕ್ಯಾಂಟರಂಥವರ ೨ನೆಯ ವಾದ; (೩) ಅವು ಔಪಚಾರಿಕ ಪರಾರ್ಥಾನುಮಾನ ರಚನೆಗಳಲ್ಲಿ ನಿರಕುಂಶವಾಗಿ ಕಲ್ಪಿಸಿಕೊಂಡ ನಿಯಮಗಳೆಂಬುದು ನಿಯಮ ಕಲ್ಪನಾವಾದ; ಗಣಿತಶಾಸ್ತ್ರೀಯ ನಿಯಮ ತಂತ್ರಗಳಿಂದ ಈ ವಾದವನ್ನು ಸಮರ್ಥಿಸಲಾಗಿದೆ.

(೧) ಪ್ರತ್ಯಕ್ಷ, ಸ್ಮೃತಿ ಮೊದಲಾದವುಗಳಿಂದ ಅನುಮಾನೇತರ ಕ್ರಮಗಳಿಂದ ಮಾಡಿಕೊಳ್ಳುವ ವಸ್ತುಜ್ಞಾನ; ಇದನ್ನು ಪರಿಚಯನಿಷ್ಠ ಜ್ಞಾನವೆಂದು ಗಣಿಸಲಾಗಿದೆ: (೨) ಅನುಮಾನ (Inference) ಬಲದಿಂದ ಅಪ್ರತ್ಯಕ್ಷವಾದ ವಸ್ತುಗಳ ಜ್ಞಾನವನ್ನು ಪಡೆದರೆ ಅದು ಆನುಮಾನಿಕ ಜ್ಞಾನವಾಗುತ್ತದೆ; ಇದನ್ನು ವರ್ಣನಾನಿಷ್ಠ ಜ್ಞಾನವೆಂದು ಎಣಿಸಲಾಗಿದೆ. ಪರಿಚಯವು ದ್ವಿವಿಧ: (೧) ಬಾಹ್ಯವಸ್ತುಗಳ ಪ್ರತ್ಯಕ್ಷೀಕರಣ ಮತ್ತು (೨) ಅಂತರ್ ನಿರೀಕ್ಷಣೆ (ಅಂತರ್ಮುಖವಾದ ಆತ್ಮಪರಿಶೀಲನೆ). ಅನುಮಾನದಿಂದ ಲಬ್ಧವಾದ ಅನುಭೂತಿ ಎಂಬ ಜ್ಞಾನದಲ್ಲಿ

ಇತರ ಜೀವಾತ್ಮಗಳ ಜ್ಞಾನ ಹಾಗೂ ಐತಿಹಾಸಿಕ ಜ್ಞಾನಗಳು ಅಡಕವಾಗುತ್ತವೆ. ಕೆಲವೊಮ್ಮೆ ಇತರ ಜೀವಾತ್ಮಗಳ ಜ್ಞಾನವು ಪ್ರತ್ಯಕ್ಷದಿಂದಲೂ ಲಭಿಸಬಹುದು. ಸಂಕುಚಿತಾರ್ಥದ ಚಾರಿತ್ರಿಕ, ಖಗೋಲಶಾಸ್ತ್ರೀಯ, ಜೀವಶಾಸ್ತ್ರೀಯ, ಮಾನವಶಾಸ್ತ್ರೀಯ, ಭೂಗರ್ಭಶಾಸ್ತ್ರೀಯ ಮತ್ತು ಸೃಷ್ಟಿಶಾಸ್ತ್ರೀಯ ಜ್ಞಾನಗಳೂ ವಿಶಾಲಾರ್ಥದ ಐತಿಹಾಸಿಕ ಜ್ಞಾನದಲ್ಲಿ ಸೇರುತ್ತವೆ. ಭೂತಕಾಲೀನ ಅನುಭವದ ಪುನಾರಚನೆ ಎನ್ನಿಸುವ ಐತಿಹಾಸಿಕ ಜ್ಞಾನದಲ್ಲಿ ವಿಜ್ಞಾನದ ಅನುಮಾನಲಬ್ಧ ಮತ್ತು ನಿರೀಕ್ಷಣಾ (Observation) ಲಬ್ಧ ಜ್ಞಾನಗಳನ್ನು ಸೇರಿಸುವುದುಂಟು.

ಜ್ಞಾನ ಸನ್ನಿವೇಶದ ರಚನೆಯ ವಿಷಯದಲ್ಲಿ ಎರಡು ವಾದಗಳಿವೆ: (೧) ಜ್ಞಾನಕ್ಕೆ ವಿಷಯ (ವಸ್ತು) ವಾದುದರ ಚಿತ್ರವನ್ನು ಜ್ಞಾತೃವಿನಲ್ಲಿ ದೂರದರ್ಶನ ಯಂತ್ರದಂತೆ ಮುದ್ರಿಸುತ್ತದೆ ಎಂಬುದು ವ್ಯಕ್ತಿನಿಷ್ಠವಾದ; (೨) ಪ್ರತ್ಯಕ್ಷ-ಪರೋಕ್ಷಗಳಿಂದ ಗೊತ್ತಾದ ಗುಣಗಳೆಲ್ಲವೂ ವಸ್ತುನಿಷ್ಠವೆನ್ನುವುದು ಸಾರ್ವವಸ್ತುನಿಷ್ಠವಾದ. ಈ ವಾದಗಳ ಅತಿರೇಕ ಸ್ವರೂಪಗಳಲ್ಲಿ ರಾಜಿಮಾಡಿಸಹೋದ ಪ್ರಾತಿನಿಧಿಕ ಪ್ರತ್ಯಕ್ಷ ಸಿದ್ಧಾಂತವು ವಸ್ತುಗಳ ಪ್ರಾಥಮಿಕ ಗುಣಗಳನ್ನು ವಸ್ತುನಿಷ್ಠವೆಂದೂ ಗೌಣ ಗುಣಗಳನ್ನು ವ್ಯಕ್ತಿನಿಷ್ಠವೆಂದೂ ಹೇಳುತ್ತದೆ. ಸಂವೇದನಾ ಜ್ಞಾನ ಮತ್ತು ವಸ್ತುಗಳು ಒಂದೇ ಎಂಬುದು ಪ್ರಮಾಣಶಾಸ್ತ್ರೀಯ ಅದ್ವೈತವಾದ; ಅವು ಸಂಖ್ಯಾತ್ಮಕವಾಗಿ ಪ್ರತ್ಯೇಕ ಎಂಬುದು ಪ್ರಮಾಣಶಾಸ್ತ್ರೀಯ ದ್ವೈತವಾದ; ಜ್ಞಾತೃನಿರಪೇಕ್ಷವಾಗಿ ವಸ್ತುವಿರುತ್ತದೆ ಎಂಬುದು ಪ್ರಮಾಣಶಾಸ್ತ್ರೀಯ ಧ್ಯೇಯವಾದ; ಜ್ಞೇಯವಸ್ತುವು ಜ್ಞಾತೃವಿಗೆ ಅಧೀನ ಎಂಬುದು ಪ್ರಮಾಣಶಾಸ್ತ್ರೀಯ ವಾಸ್ತವತಾವಾದ.

ಸತ್ಯದ ನಿಕಷ ಸೂತ್ರಗಳು ಮೂರು: (೧) ಸಾದೃಶ್ಯ ಸಿದ್ಧಾಂತ: ವಸ್ತುವಿಗೂ ಅದರ ಭಾವಕಲ್ಪ (ಕಲ್ಪನೆಗೂ) ನಡುವೆ ಒಂದಕ್ಕೊಂದು ಎಂಬಂಥ ಸಾಧಾರಣವಾದ ತ್ರೈತ್ರಿಕ ಅಥವಾ ಅನುಪಾತಿಕ ಸಂಬಂಧ (ಬಿಂಬ-ಪ್ರತಿಬಿಂಬಭಾವ) ವಿರುವುದು ಭಾವವಾಚಕ ಪ್ರಮೇಯ ವಾಕ್ಯದ

ಸತ್ಯತೆಗೆ ನಿಕಷ. (೨) ಸಾಂಗತ್ಯ ಸಿದ್ಧಾಂತ: ಒಂದು ಪ್ರಮೇಯ ವಾಕ್ಯದ ತಾರ್ಕಿಕ ಸಾಂಗತ್ಯವು ಇನ್ನೊಂದು ವಿಶಾಲತರವಾದ ಪ್ರಮೇಯ ವಾಕ್ಯಮಾಲೆಯೊಡನೆ ಇರುವುದು ಅದರ ಸತ್ಯತೆಗೆ ನಿಕಷ: ಸತ್ಯವು ಒಂದು ವ್ಯಾಪಕವಾದ ಸಂಗತ ಪ್ರಮೇಯವಾಕ್ಯಗಳ ಅವಿಭಾಜ್ಯಗುಣ ಮತ್ತು ಅವುಗಳ ಇಡಿಗೆ ಸೇರಿದಂತಿರುವ ಪ್ರತಿಯೊಂದು ಬಿಡಿ ವಾಕ್ಯಕ್ಕು ಅದೇ ಅವಿಭಾಜ್ಯಗುಣ (Property) : ಬಿಡಿಗಳಿಂದ ಕೂಡಿದ ಇಡಿಯು ಕ್ರಮಬದ್ಧವಾದ ಸಾಂಗತ್ಯದ (coherence) ಪರಿಪೂರ್ಣತೆಗೆ ತಕ್ಕ ಅನು ಪಾತದಲ್ಲಿ ಅದಕ್ಕೆ ಸೇರಿದ ಬಿಡಿಯು (ಬಿಡಿವಾಕ್ಯದ) ಸತ್ಯದ ಡಿಗ್ರಿ (ಅಂಶ) ಇರುತ್ತದೆ. (೩) ಅಂತರ್ಗತ ಮೌಲ್ಯ ಸಿದ್ಧಾಂತ: ಬಿಡಿಗಳಿಗೂ ಇಡಿಗೂ ಅಂತರ್ಗತವಾದ ಸಂಬಂಧವಿರುವುದು ಒಂದು ಪ್ರಮೇಯ ವಾಕ್ಯದಲ್ಲಿ ಕಂಡು ಬಂದರೆ ಸತ್ಯವು ಅದರ ಅಂತರ್ಗತ ಅವಿಭಾಜ್ಯ ಗುಣವೆನ್ನಿಸುವುದು; ಆಯಾ ಪ್ರಮೇಯ ವಾಕ್ಯದ ಸತ್ಯತೆ ಅದಕ್ಕೇ ಸಲ್ಲುತ್ತದೆ: ವಾಚ್ಯ—ವಾಚಕಗಳ ಅಂತರ್ಗತ ಮೌಲ್ಯ ಒಂದೇ ಆಗಿರ ಬೇಕು ಮತ್ತು ಆ ಪ್ರಮೇಯ ವಾಕ್ಯದ ಪ್ರಯೋಗಸಿದ್ಧ ವ್ಯಾಪಾರ ಕ್ಷಮತೆ ಅಥವಾ ತೃಪ್ತಿಕರತ್ವ ತನ್ನಿಷ್ಠವಾಗಿರಬೇಕು—ಎಂಬ ವ್ಯಾಪಾರ ವಾದೀಯ ಸತ್ಯಸಿದ್ಧಾಂತವೂ ಇಲ್ಲಿ ಗೃಹೀತ: ಅರ್ಥ ಕ್ರಿಯಾಕಾರಿತ್ವವು ಇದರ ಸಾರ.

ಜಾರ್ಜ ವಿಲ್‌ಹೆಲ್ಮ್ ಫ್ರೆಡ್ರಿಕ್ ಹೆಗೆಲ್ (೧೭೭೦-೧೮೩೧)

ಹೆಗೆಲ್ಲನ್ನದು ತ್ರಿಪಾದ ಪದ್ಧತಿಯ ತರ್ಕಸಮನ್ವಯ ಸಿದ್ಧಾಂತ; ಅದರಲ್ಲಿ ಅನ್ವಯ, ಪ್ರತ್ಯನ್ವಯ ಮತ್ತು ಸಮನ್ವಯಗಳು ತ್ರಿಪಾದಗಳು. ಈ ಸಿದ್ಧಾಂತವನ್ನು Absolute Idealism ಪೂರ್ಣಧ್ಯೇಯವಾದ ಎಂದೂ ಕರೆಯಲಾಗುತ್ತದೆ. ಪರಮಾತ್ಮ ಅಥವಾ ಪರಮ ಕಲ್ಪನೆ ಎಂಬುದೇ ಈ ಸಿದ್ಧಾಂತದಲ್ಲಿ ಪರಾಕಾಷ್ಠೆ.

ಬಿಡಿಯಾದ ಪ್ರಮಿತ ಪದಾರ್ಥಗಳ ಪ್ರತ್ಯೇಕತೆಯೊಂದು "ಭ್ರಮೆ". ಇಡಿಯಾದ ಒಂದೇ ಒಂದು ಪೂರ್ಣಸತ್ಯ. ಆದರದು ಸರಳವಾದ ಒಂದು ದ್ರವ್ಯವಲ್ಲ; ಅವಯವಿಕ ಸ್ವರೂಪದ ಒಂದು ಜಟಿಲ ಜಾಲ. ಪ್ರಪಂಚದ ಬಿಡಿಗಳು ಸಂಪೂರ್ಣವಾಗಿ ಭ್ರಮಾತ್ಮಕ ಪದಾರ್ಥಗಳಲ್ಲ; ಅವೆಲ್ಲವೂ ಸತ್ಯದ ವಿವಿಧ ಡಿಗ್ರಿ (ಅಂಶ)ಗಳನ್ನುಳ್ಳಂಥವು. ನಿಜದೃಷ್ಟಿಯಿಂದ ನೋಡಿದಾಗ ಅವುಗಳ ಇಡಿತನದ ಏಕಮೇವಾದ್ವಿತೀಯ ಮುಖ ಗೋಚರವಾಗುವುದು. ದೇಶ-ಕಾಲಗಳು ಆತ್ಯಂತಿಕ ಸತ್ಯಗಳಲ್ಲ; ಅವು ಹಾಗಿದ್ದರೆ ಪದಾರ್ಥಗಳ ಪ್ರತ್ಯೇಕತೆಯೂ ನಾನಾತ್ವವೂ ನಿತ್ಯವಾಗಬೇಕಾಗುತ್ತದೆ.

ಸತ್ಯವು ವಿಚಾರ ಬದ್ಧ, ವಿಚಾರಬದ್ಧವಾದದ್ದು ಸತ್ಯ. ವ್ಯಾವಹಾರಿಕನು ಕಾಣುವ ಸತ್ಯವು ವಿಚಾರ ಬದ್ಧವಲ್ಲ. ವ್ಯಾವಹಾರಿಕ ಪದಾರ್ಥಗಳ ನಾನಾತ್ವವು ಆಭಾಸಿಕ. ಇಡಿಯು ಬಿಡಿಮುಖಗಳಿಂದು ತೋರಿದಾಗ ಮಾತ್ರ ಪದಾರ್ಥಗಳಲ್ಲಿ ಸತ್ಯತೆಗೆಡೆಯಿದೆ. ವಿಚಾರಬದ್ಧವೆನ್ನಿಸಿದ ಪರಮಸತ್ಯವು ಇದ್ದದ್ದೆಲ್ಲವೂ ನ್ಯಾಯ್ಯವೆಂಬ ಸಮಾಧಾನ ಬುದ್ಧಿಗೆ ಎಡೆಗೊಡುವುದು— ಎನ್ನುತ್ತಾನೆ ರಸೆಲ್. ಆದರೆ ಸತ್ಯ-ನ್ಯಾಯಗಳು ಅವಿನಾಭಾವಿ ಪರ್ಯಾಯಗಳಾದಾಗ, ಪದಾರ್ಥ, ಸಂಗತಿ, ಸಂನ್ನಿವೇಶಗಳಲ್ಲಿ ಸತ್ಯವು ಭಿನ್ನಾಂಶಗಳಲ್ಲಿರುವುದನ್ನೊಪ್ಪಿಕೊಂಡಾಗ-ಅವುಗಳಲ್ಲಿರುವ ನ್ಯಾಯವೂ ಭಿನ್ನ ಪ್ರಮಾಣಗಳಲ್ಲಿರುವುದೆಂಬುದು ಸರಿಯಾದ ನಿಗಮನವಾಗುತ್ತದೆ. ಪರಮ ಸತ್ಯವು ಪರಿಪೂರ್ಣವಾದುದು. ಅದು ಆಧ್ಯಾತ್ಮಿಕ; ಆದರದಕ್ಕೆ ಸ್ಪಿನೋಜ ಹೇಳಿದ ವ್ಯಾಪಕತ್ವ ಮತ್ತು ವಿಚಾರ (ಆಲೋಚನಾ) ಶಕ್ತಿ ಎಂಬ ಧರ್ಮಗಳಿಲ್ಲ-ಎಂಬುದು ಹೆಗೆಲ್‌ಮತ. ಹೆಗೆಲ್ಲನ ಪ್ರಕಾರ ಸ್ವಯಂವ್ಯಾಹತವಾಗಿರದುದು ಸತ್ಯ. ತರ್ಕಶಾಸ್ತ್ರ, ಅತಿಭೌತಶಾಸ್ತ್ರಗಳಲ್ಲಿ ಅವನಿಗೆ ಭೇದವಿಲ್ಲ. ಯಾವ ಸಾಮಾನ್ಯ ವಿಧೇಯವೂ(Predicate) ಇಡಿ(ಪೂರ್ಣ) ಸತ್ಯದ ಧರ್ಮವಾಗದು; ಏಕೆಂದರೆ, ಅದು ಆಗ ಸ್ವಯಂ ವ್ಯಾಹತವಾಗುವುದು: ಹಾಗಾಗಲು ಅದರ ಪರಿಮಿತತ್ವವೇ ಕಾರಣ. ಹೆಗೆಲ್ಲನ ತ್ರಿಪಾದ ಪದ್ಧತಿಯ ತರ್ಕಕ್ಕೆ ಉದಾಹರಣೆ:

ಪೂರ್ಣ ಸತ್ಯವು ಶುದ್ಧವಾದ ಇರವು-ಅನ್ವಯ (Thesis)
(The Absolute is a Pure Being)

ಆದರೆ ನಿರ್ಗುಣವಾದ ಶುದ್ಧ ಇರವೆಂಬುದು ಶೂನ್ಯ.
ಆದುದರಿಂದ –
ಪೂರ್ಣ ಸತ್ಯವೆಂಬುದು ಶೂನ್ಯ–ಪ್ರತ್ಯನ್ವಯ (Antithesis)
ಇರವು ಬರಿದುಗಳ ಐಕ್ಯವೇ ಆಗುವಿಕೆ–ಸಮನ್ವಯ (Synthesis)
ಆದುದರಿಂದ–
ಪೂರ್ಣ ಸತ್ಯವೆಂದರೆ ಆಗುವಿಕೆ.
[ಆಗುವಿಕೆಗೊಂದು ಕರ್ತೃ ಬೇಕು; ಅದು ಪೂರ್ಣವಾಗಿರಬೇಕು;
ಅದೇ ಪೂರ್ಣಸತ್ಯ (ಪರಮಾತ್ಮ, ಪರಮಕಲ್ಪನೆ)]

ಇಡಿ ಜ್ಞಾನಕ್ರಿಯೆಯು ತ್ರಿಪಾದಚಾರಿ. ಇಂದ್ರಿಯ ಸಂವೇದನೆಯಿಂದ ಅದು ಆರಂಭವಾಗುತ್ತದೆ. ವಿಶ್ವಾಸವಿಡದ ಪ್ರಾಶ್ನಿಕನ ತರ್ಕವನ್ನು ಅದ-ರೆದುರೊಡ್ಡಿದಾಗ ಸಂವೇದನೆಗೆ (ಪ್ರತ್ಯಕ್ಷಕ್ಕೆ) ಜ್ಞಾನಪ್ರಾಮಾಣ್ಯ ಹೊರಟು ಹೋಗಿ ಜ್ಞಾನದ ಸ್ವರೂಪವು ವ್ಯಕ್ತಿನಿಷ್ಠವೆಂದೆನ್ನಿಸಬೇಕಾಗುತ್ತದೆ. ಮುಂದಿನ ತರ್ಕಪರಿಷ್ಕಾರದಿಂದ ಅದು ಸ್ವಜ್ಞಾನ (ಆತ್ಮಜ್ಞಾನ Self-Consciousness) ಮಾತ್ರ ಜ್ಞಾನ ಎಂಬ ಮಟ್ಟಕ್ಕೆ ಬರುತ್ತದೆ. ಸ್ವಜ್ಞಾನದಲ್ಲಿ ಜ್ಞಾತೃ-ಜ್ಞೇಯಗಳ ಭೇದ ಅಳಿದು ಹೋಗುತ್ತದೆ. ತಿಳಿದುಕೊಳ್ಳುವುದರಲ್ಲಿ ಪರಿಮಿತ ಶಕ್ತಿಯುಳ್ಳ ಮಾನವನ ಆತ್ಮಜ್ಞಾನವು ಪರಿಮಿತ; ಅಪರಿಮಿತ ಶಕ್ತಿಯುಳ್ಳ ಪೂರ್ಣಸತ್ಯದ ಸ್ವಜ್ಞಾನವು ಅಪರಿಮಿತ ಅಥವಾ ಪೂರ್ಣ. ಸತ್ಯ, ಸುಳ್ಳುಗಳು ಸಂಪೂರ್ಣ ವಿರುದ್ಧವಾದವುಗಳಲ್ಲ. ನಮ್ಮ ಯಾವ ಜ್ಞೇಯವೂ ಪೂರ್ಣ ಸುಳ್ಳು ಅಲ್ಲ, ಪೂರ್ಣ ಸತ್ಯವೂ ಅಲ್ಲ. ನಾವು ಜಗತ್ತನ್ನು ತಿಳಿದುಕೊಳ್ಳುವರೀತಿಯು ತಪ್ಪಾಗಲು ಯಾವುದಾದರೊಂದು ತಿಳಿವಳಿಕೆಯ ತುಣುಕಿಗೆ ಪೂರ್ಣ ಸತ್ಯತೆ ಇದೆಯೆಂದು ನಂಬುವುದು ಕಾರಣ. ಯಾವ ಬಿಡಿಯೂ ಪೂರ್ಣ ಸತ್ಯವಲ್ಲ. ತತ್ವಜ್ಞಾನದ ಪ್ರಕಾರ ಇಡಿಯೊಂದೇ ಪೂರ್ಣ ಸತ್ಯ. ವಿಚಾರವಂತಿಕೆಯ ಡಿಗ್ರಿ ಹೆಚ್ಚಾದ ಹಾಗೆ ಪ್ರತಿಯೊಬ್ಬನೂ ಪರಮಸತ್ಯದಲ್ಲಿ ಹೆಚ್ಚು ಹೆಚ್ಚು ಭಾಗವಹಿಸುತ್ತ ಹೋಗುವುದರಿಂದ ಪೂರ್ಣತರನಾಗುತ್ತ ಹೋಗುವನು.

ಇಡಿ ಆಲೋಚನೆಯು ತನ್ನನ್ನೇ ಕುರಿತು ಆಲೋಚಿಸುತ್ತಿರುವುದು ಪೂರ್ಣಸತ್ಯದ ಸ್ವರೂಪ. ಪೂರ್ಣಸತ್ಯವು ತನ್ನನ್ನಲ್ಲದೆ ಇನ್ನೊಂದನ್ನೂ ಆಲೋಚಿಸಲಾರದು. ಏಕೆಂದರೆ ಅದು ಏಕಮೇವಾದ್ವಿತೀಯ. ಅದರಲ್ಲಿ ವ್ಯಕ್ತಿನಿಷ್ಠತೆ, ವಸ್ತುನಿಷ್ಠತೆಗಳ ಐಕ್ಯವಿದೆ. ಆ ಐಕ್ಯವು ಎಲ್ಲ ಗುಣಗಳನ್ನೂ (ಧರ್ಮಗಳನ್ನೂ, ಲಕ್ಷಣಗಳನ್ನೂ, ಉಪಾಧಿಗಳನ್ನೂ) ಒಳಗೊಂಡಿರುತ್ತದೆ. ಪೂರ್ಣಸತ್ಯವು ಕಾಲಾತೀತ. ಕಾಲವೊಂದು ಭ್ರಮೆ, ಮಾಯೆ. ಇಡಿಯನ್ನು ತಿಳಿಯಲಾರದ ನಮ್ಮ ದೌರ್ಬಲ್ಯದಿಂದ ಅದು ಹುಟ್ಟುತ್ತದೆ. ಅದರೂ ತರ್ಕಸಮಸ್ಯೆಯ ಶುದ್ಧತಾರ್ಕಿಕ ಕ್ರಿಯಾನುಕ್ರಮಕ್ಕೂ ಕಾಲದ ಕ್ರಿಯಾನುಕ್ರಮಕ್ಕೂ ನಿಕಟವಾದ ಸಂಬಂಧವಿದೆ. ವಿಚಾರಶಕ್ತಿಯು ಜಗತ್ತಿನ ಸಾರ. ಅದೇ ಪೂರ್ಣ ಕಲ್ಪನೆ; ಅದು ನಿತ್ಯ, ಸತ್ಯ, ಸರ್ವಶಕ್ತ. ಅದೇ ಆತ್ಮ, ಸರ್ವಸ್ವ. ಇರವು ಪರಮ ಸತ್ಯ, ಅದರ ಆಗುವಿಕೆಯೇ ಜಗತ್ತು. ಇರವು ಶುದ್ಧ, ಅದರ ಅಶುದ್ಧ ರೂಪವೇ ಜಗತ್ತು; ಅದು ಅನಂತ, ಇದು ಸಾಂತ (Infinite, finite). ಅದರ ಕೇವಲಾಸ್ತಿತ್ವ ಮತ್ತು ಇದರ ನಿತ್ಯಪರಿಣಾಮತ್ವಗಳು ಧ್ರುವಾಂತರ ವಿರುದ್ಧ ಸಂಬಂಧ ಉಳ್ಳಂಥವು. ಅದರದು ಆತ್ಮಸ್ವರೂಪ, ಇದರದು ಜಡಪ್ರಕೃತಿ (Matter) ಸ್ವರೂಪ. ಮುಕ್ತತೆಯು ಆತ್ಮದ ಸಾರ, ಗುರುತ್ವವು ಪ್ರಕೃತಿಸಾರ. ಜಡಪ್ರಕೃತಿ ತನ್ನ ಹೊರಗಿದೆ, ಆತ್ಮದ (ಚೈತನ್ಯದ) ಕೇಂದ್ರ ಅದರಲ್ಲೇ ಇದೆ- ಆತ್ಮದ ಅನುಭವವು ಆತ್ಮಗತ- ಆತ್ಮವು ಶುದ್ಧ ಏಕತ್ವ (Identity); ಆ ಏಕತ್ವವು ಅಭೇದ್ಯ, ಅನಂತ ಮತ್ತು ಏಕಜಾತೀಯ. ವೈವಿಧ್ಯವಿರುವುದು ಇಡಿಯಲ್ಲಿ, ಬಿಡಿಯಲ್ಲಲ್ಲ.

ಜೆರಿಮಿ ಬೆಂಥ್ಯಾಂ(೧೭೪೮-೧೮೩೨)

ತತ್ತ್ವಜ್ಞಾನದಲ್ಲಿ ಆಂಗ್ಲ ಪ್ರಯೋಜನಪ್ರಸ್ಥಾನವೊಂದಿದೆ. ಅದರ ಸಂಸ್ಥಾಪಕ ಜೆರಿಮಿ ಬೆಂಥ್ಯಾಂ. ಅವನ ಪ್ರಕಾರ ಅತ್ಯಧಿಕ ಸಂಖ್ಯಾತರ ಅತ್ಯಧಿಕ ಸುಖವು ವೈಯಕ್ತಿಕ ಮಾನವರ ಮತ್ತು ಮಾನವ ಸಮಾಜದ ಅತ್ಯುನ್ನತ ನೈತಿಕ ಧ್ಯೇಯ. ಮಾನವರ ಕಾರ್ಯಗಳ ನೈತಿಕತೆಗೆ ಪ್ರಯೋ

ಜನವು ಪ್ರಾಯೋಗಿಕವಾಗಿ ಮೌಲ್ಯನಿರ್ಧಾರ ಮಾಡಬಲ್ಲ ನಿಕಷ. ಒಂದು ಕಾರ್ಯದ ಸುಖೋತ್ಪಾದಕ ಶಕ್ತಿಯೇ ಪ್ರಯೋಜನ. ಬೆಂಥ್ಯಾಮನ ಸಂಯೋಗ (Association) ತತ್ವವು ಪಾವ್‌ಲೋವನ ಆಧುನಿಕ "ಉಪಾಹಿತ ಕ್ಷೇಪ" (Conditioned Reflex) ಸಿದ್ಧಾಂತಕ್ಕೆ ಸರಿಸಮವಾದುದು.

ಸಾಮಾನ್ಯಸುಖವೇ ಸರ್ವೋಚ್ಚ ಹಿತ. ಭಾವನಾತ್ಮಕ ಮತ್ತು ಶಾಸನ ನೀತಿನಡತೆಗಳು ಆಳುವವರ ಹಿತಾರ್ಥಗಳನ್ನು ಕಾಯುವುವು. ತ್ಯಾಗ ಬೋಧಕರು ತಮಗಾಗಿ ಮಂದಿ ತ್ಯಾಗ ಮಾಡಬೇಕೆಂಬ ಆಶೆಯನ್ನು ಒಳಗಿಟ್ಟುಕೊಂಡಿರುತ್ತಾರೆ. ಹಿತಾರ್ಥಗಳ ಸಮತೋಲದಿಂದಲೇ ನೈತಿಕ ಕ್ರಮಬದ್ಧತೆಯುಂಟಾಗುವುದು. ಪ್ರಶಾಸಕರು ತಮ್ಮ ಹಾಗೂ ಪ್ರಜಾಸ್ವರ ಹಿತಾರ್ಥಗಳು ಒಂದೇ ಆಗಿವೆ ಎಂದು ಹೇಳುತ್ತಾರೆ; ಆದರೆ ಸುಧಾರಕರು ಅಂಥ ಐಕ್ಯ ಆಗಲೇ ಸಾಧಿಸಲ್ಪಟ್ಟಿಲ್ಲ ಎಂದು ತೋರಿಸಿಕೊಟ್ಟು ಅದನ್ನು ಸಾಧಿಸಲು ಪ್ರಯತ್ನಿಸುತ್ತಾರೆ. ನೀತಿಗೂ ಶಾಸನವಿಧಿಗೂ (ಕಾಯಿದೆಗೂ) ಪ್ರಯೋಜನವೇ ಒರೆಗಲ್ಲು; ಅದೇ ಸಮಾಜಶಾಸ್ತ್ರಕ್ಕೆ ತಳಹದಿಯನ್ನು ಹಾಕಿಕೊಡುತ್ತದೆ. ಜೇಮ್ಸ್ ಮಿಲ್, ಜಾನ್ ಸ್ಟ್ಯುಅರ್ಟ್ ಮಿಲ್ ಮುಂತಾದವರೂ ಇಂಥ ಪ್ರಯೋಜನವಾದಿಗಳು.

ಕಾರ್ಲ್ ಮಾರ್ಕ್ಸ್ (೧೮೧೮—೧೮೮೩)

"ತರ್ಕಸಮನ್ವಯದ ಭೌತವಾದ" ವನ್ನು ಕಾರ್ಲ್ ಮಾರ್ಕ್ಸ್ ಮತ್ತು ಫ್ರೆಡ್ರಿಕ್ ಎಂಗಲ್ಸ್ ಸಂಸ್ಥಾಪಿಸಿದರು. ವ್ಯವಹಾರವಾದದ ಪ್ರಮಾಣಪದ್ಧತಿಯನ್ನದು ಅನುಸರಿಸುತ್ತದೆ. ಪುರುಷಾರ್ಥ ಶಾಸ್ತ್ರ (Axiology) ದಂತೆ ಅದು ಅನೇಕ ಕಡೆಗಳಲ್ಲಿ ದಯಾಧರ್ಮದ ಬಣ್ಣವನ್ನುಳ್ಳ ಒಂದು ಹಿತಾರ್ಥ ಮೌಲ್ಯ ಸಿದ್ಧಾಂತವನ್ನು ಹಿಡಿಯುತ್ತದೆ. ಉಕ್ತ ಭೌತವಾದದ ಸಮಾಜ ಸಿದ್ಧಾಂತವು ಮೂಲಭೂತವಾದ ಅರ್ಥಶಾಸ್ತ್ರೀಯ ಪೂರ್ವ ನಿಷ್ಕರ್ಷವಾದ (Determinism) ವನ್ನು ಕೆಲಮಟ್ಟಿಗೆ

ಆಧರಿಸುತ್ತದೆ; ಹಾಗೇ ಸಮಾಜವು ವರ್ಗಮಯವೆಂಬುದನ್ನೂ ಗ್ರಹಿಸುತ್ತದೆ. ಅರ್ಥಶಾಸ್ತ್ರದಲ್ಲಿ ಅದು ಮೌಲ್ಯದ ಶ್ರಮಸಿದ್ಧಾಂತಕ್ಕೆ ಅಂಟಿಕೊಂಡಿದೆ; ಬಂಡವಾಳ ಶಾಹಿಯ ಉಳಿಕೆ (Surplus) ಬೆಲೆಯ ಕಲ್ಪನೆ ಅದರಲ್ಲಿ ಅಡಕವಾಗಿದೆ. ಬಂಡವಾಳ ಶಾಹಿಯು ಅನ್ಯಾಯ. ಸಮಾಜವಾದವು ಅದನ್ನು ಮೆಟ್ಟಬೇಕು. ಶ್ರಮಜೀವಿಗಳ ಕ್ರಾಂತಿಯಿಂದ ಅದಕ್ಕೆ ಆ ಶಕ್ತಿ ಬರುತ್ತದೆ. ಆಗ (ಪ್ರಾಲಿಟೇರಿಯಟ್ಟಿನ) ಸಾಮಾನ್ಯರ ಸರ್ವಾಧಿಕಾರ ಸ್ಥಾಪನೆಯಾಗಿ ಸಮಾಜವಾದದ ಸಂಸ್ಥಾಪನೆಯಾಗುವದು. ಅದು ಕ್ರಮೇಣ ರಾಜ್ಯದ ಪ್ರಭುತ್ವವೇ ಅಳಿದು ವರ್ಗರಹಿತ ಸಮಾಜ ರೂಪಿತವಾಗಿ ಸಾಮುದಾಯಿಕ ಅರ್ಥನೀತಿ ಅಮಲಿನಲ್ಲಿ ಬಂದು ರಾಜಕೀಯದಲ್ಲಿ ಸ್ವಯಂನಿಯಾಮಕವಾಗುವುದು.

ಜ್ಞಾನಾರ್ಜನೆಯಲ್ಲಿ ಜ್ಞಾತೃವಷ್ಟೇ ಅಲ್ಲ, ಜ್ಞೇಯವೂ ಬದಲಾಯಿಸುವ ಸ್ವಭಾವವುಳ್ಳದ್ದು; ಅವು ಪರಸ್ಪರವಾಗಿ ಹೊಂದಿಕೊಳ್ಳಲು ಸತತಪ್ರಯತ್ನ ಮಾಡುತ್ತಿರುತ್ತವೆ. ಈ ಪ್ರಯತ್ನದ ಕ್ರಿಯಾನುಕ್ರಮವು ಎಂದೂ ಪೂರ್ಣವಾಗುವಂಥದಲ್ಲವಾದ್ದರಿಂದ ತರ್ಕಸಮನ್ವಯ ನಿಷ್ಫಲವೆಂದೆನ್ನಿಸಿದೆ. ಸಂವೇದನೆಯೊಂದು ಕ್ರಿಯೆ ಚಟುವಟಿಕೆ. ವಸ್ತುಗಳು ಜಗತ್ತಿನ ಸತತಕಾರ್ಯ ಗತಿಯ ಅಂಗಗಳು. ಕ್ರಿಯೆ ಅಥವಾ ಕಾರ್ಯ ಎಂಬುದನ್ನು ಮರೆತ ಸಿದ್ಧಾಂತಗಳೆಲ್ಲವೂ ದುರ್ಮಾರ್ಗದರ್ಶಕಗಳಾದ ಕಲ್ಪನಾವಿಲಾಸಗಳು. ಜಡವಲ್ಲದೆ, ಜೀವವೆಂದೂ ಪ್ರಚೋದಕಶಕ್ತಿಯೆನ್ನಿಸದು; ಜಡದೊಡನೆ ಮಾನವನಿಗಿರುವ ಸಂಬಂಧವೇ ಪೂರ್ಣಾರ್ಥದಲ್ಲಿ ಸರ್ವಮಾನವರಿಗೂ ಪ್ರಚೋದಕವಾದ ಶಕ್ತಿ; ಮಾರ್ಕ್ಸನ ಈ ಜಡಪ್ರಕೃತಿವಾದವು ವ್ಯವಹಾರದಲ್ಲಿ ಅರ್ಥನೀತಿಯಾಗಿಬಿಡುವದು. ವಿತರಣಕ್ಕಿಂತ ಹೆಚ್ಚಾಗಿ ಉತ್ಪಾದನ ಕ್ರಮಗಳೇ ಒಂದು ಯುಗದ ರಾಜಕೀಯ, ಮತಧರ್ಮ, ತತ್ವಜ್ಞಾನ ಮತ್ತು ಕಲೆಗಳ ಸ್ಥೂಲ ರೂಪರೇಷೆಗಳನ್ನು ಹಡೆಯುವಂಥವುಗಳು.

ಟಿಪ್ಪಣಿ

"ಅರಿಸ್ಟಾಟಲನ ವರೆಗಿನ ಗ್ರೀಕ್ ತತ್ವಜ್ಞಾನವು ನಗರ ರಾಜ್ಯಕ್ಕೆ ಅನುಗುಣವಾದ ಮನಃಸ್ಥಿತಿಯನ್ನು ವ್ಯಕ್ತಪಡಿಸುತ್ತದೆ. ವಿಶ್ವಜನೀನವಾದ

ನಿರಂಕುಶ ಪ್ರಭುತ್ವಕ್ಕೆ ಸಮಂತ್ವದ ತತ್ವಜ್ಞಾನವು (Stoicism) ತಕ್ಕ ಅಭಿವ್ಯಕ್ತಿ. ಪ್ರಾಸ್ಥಾನಿಕ (Scholastic) ತತ್ವಜ್ಞಾನವು ಸಂಘಟಿತವಾದ ಚರ್ಚಿನ ಬೌದ್ಧಿಕ ಅವತಾರ. ಡೆಸ್ಕಾರ್ಟಿಸ್ ಮತ್ತು ಲೋಕೆಗಳ ಕಾಲದಿಂದ ಮಾರ್ಕ್ಸನ ಕಾಲದ ವರೆಗಿನ ತತ್ವಜ್ಞಾನವು ವ್ಯಾಪಾರಿ ಮಧ್ಯಮವರ್ಗದವರ ಪೂರ್ವಗ್ರಹಗಳ ಸಾರ. ಮಾರ್ಕ್ಸ್ ಮತ್ತು ಫ್ಯಾಸಿಸ್ಟ್ವಾದಗಳು ಆಧುನಿಕ ಉದ್ಯಮಪ್ರಧಾನ ರಾಜ್ಯಕ್ಕೆ ತಕ್ಕಂಥವುಗಳು"—ಎಂಬ ರಸೆಲ್ಲನ ಪ್ರಕಾರ ಉಕ್ತ ಪ್ರಸ್ಥಾನಗಳೆಲ್ಲವೂ ವ್ಯಕ್ತಿನಿಷ್ಠ ಮತ್ತು ತನ್ನ ತರ್ಕವಿಶ್ಲೇಷಣ ಪದ್ಧತಿಯನ್ನಾಧರಿಸಿದ ಜಡಪ್ರಕೃತಿವಾದವೊಂದೇ ವಸ್ತುನಿಷ್ಠ. ಇದು ರಸೆಲ್ಲನ ಪೂರ್ವಾಗ್ರಹಕ್ಕೆ ಅತಿದೊಡ್ಡ ಉದಾಹರಣೆ; ಏಕೆಂದರೆ, ಭೌತಶಾಸ್ತ್ರ ಇತ್ತೀಚಿಗೆ ಪರಿಪೂರ್ಣ ವಸ್ತುನಿಷ್ಠ ಜ್ಞಾನವೆಂಬುದು ಮಾನವನಿಗಸಾಧ್ಯವೆಂಬುದನ್ನು ತೋರಿಸಿಕೊಟ್ಟಿದೆ. ಅವನ ತತ್ವಜ್ಞಾನವು ಕೇವಲ ಭೌತಶಾಸ್ತ್ರೀಯ ತರ್ಕದಿಂದ ಬದ್ಧವಾದ ಅಲ್ಪದರ್ಶನವೆಂಬುದು ಸರ್ವವಿದಿತವಾಗಿದೆ. ತನ್ನ ತಾನರಿಯದವನಿಗೆ ಅನ್ಯತೆಯ ನಾನಾತ್ವವನ್ನು ಆಧರಿಸಿದ ವಸ್ತುನಿಷ್ಠವಾದವು ಯಾವಾಗಲೂ ಪ್ರಿಯ; ಅಹಂಕಾರದ ವ್ಯಕ್ತಿವೈವಿಧ್ಯಗಳಿರುವಷ್ಟು ತತ್ವಜ್ಞಾನದ ವಸ್ತುವೈವಿಧ್ಯಗಳಿರಬಹುದು. ಲೌಕಿಕವಾದ ಸಂಕುಚಿತ ವ್ಯಕ್ತಿತ್ವವಿರುವ ವರೆಗೆ ಮುಕ್ತತ್ವವಿಲ್ಲದುದರಿಂದ ಅಂಥ ವ್ಯಕ್ತಿತ್ವವುಳ್ಳ ರಸೆಲ್ ಸದೃಶರ ಚಾರ್ವಾಕತನ ಎಲ್ಲ ಕಾಲದಲ್ಲೂ ಇದ್ದದ್ದೇ. ಜಡಾದ್ವೈತ-ಜೀವಾದ್ವೈತಗಳು ಪರಸ್ಪರ ಸಮಾನತೆಯುಳ್ಳಿದ್ದರೆ ಅವು ಸದಾ ಪರಸ್ಪರ ಪೂರ್ವಗ್ರಹಗಳೇ; ಪೂರ್ವಗ್ರಹ-ಉತ್ತರಗ್ರಹಗಳ ಸಂಬಂಧವೂ ಅದೇ ಚಕ್ರಗತಿಯ ಮಾನವೇತಿಹಾಸದಲ್ಲಿ!

ಹೆನ್ರಿ ಬರ್ಗ್ಸನ್ (೧೮೫೯-೧೯೪೧)

ಬರ್ಗ್ಸನ್ನನ ತತ್ವಜ್ಞಾನವು ಆಧುನಿಕ ಕಾಲವಾದ. ಇದು ಯಾಂತ್ರಿಕತಾವಾದದ ವಿರೋಧಿಯಾದ ಅಧ್ಯಾತ್ಮನಿಷ್ಠ ಅತಿಭೌತಶಾಸ್ತ್ರ. ಹದ

ಪ್ರಧಾನವಾದ ಒರಟು ನಿಸರ್ಗವಾದ ಬರ್ಗ್ಸನ್ನನಿಗೆ ಹಿಡಿಸದು. ಯಾಂತ್ರಿಕವೂ ನಿಷ್ಕ್ರಿಯಾತ್ಮಕವೂ ಆದ ಜಡಪ್ರಕೃತಿವಾದವನ್ನವನು ಒಪ್ಪನು.

ಪ್ರತಿಭೆಗಿಂತ ಕಾಲಾವಧಿಯ ದೀರ್ಘತೆಯೇ ಬರ್ಗ್ಸನ್ನನ ಸಿದ್ಧಾಂತದ ಕೇಂದ್ರಬಿಂದು. ತಾಳಿಕೆಯೇ ಬಾಳಿಕೆ. ಅದು ತತ್ತ್ವ ಅಥವಾ ಮೂಲ ಪದಾರ್ಥ, ಮೂಲದ್ರವ್ಯ. ತಾಳಿಕೆ (Duration) ಪ್ರತ್ಯಕ್ಷಾನುಭವದಲ್ಲಿ ಆವಿರ್ಭವಿಸುತ್ತದೆ. ಪ್ರಜ್ಞೆ, ಜಡಪ್ರಕೃತಿ, ಕಾಲ, ವಿಕಾಸ ಅಥವಾ ಪರಿಣಾಮ, ಚಲನೆ ಮತ್ತು ಪೂರ್ಣವಾದ ಸರ್ವನಿರಪೇಕ್ಷ ಸತ್ಯ ಎಂಬೀ ಎಲ್ಲವೂ ತಾಳಿಕೆಯ ಬಿಗಿತದ (tensional)- ವಿಶಿಷ್ಟ ರೂಪಗಳು. ಮೂಲತಃ ಒಂದು (Life force)- ಚೈತನ್ಯಶಕ್ತಿ ಇದೆ. ಅದು ಅಭಿವೃದ್ಧವಾದ ವೈಯಕ್ತಿಕ ರೂಪಗಳ (ಆಕಾರಗಳ) ಮೂಲಕ ಜೀವಿಗಳ ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಹರಿಯುತ್ತ ಬಂದಿದೆ; ಈ ರೂಪಗಳೇ ಒಂದು ತಲೆಮಾರಿಗೂ ಇನ್ನೊಂದಕ್ಕೂ ಸೇತುವೆಗಳು. ಎಲ್ಲ ಜೀವಿಗಳನ್ನೂ ತಲೆಮಾರಿನ ಅನುಕ್ರಮವಾಗಿ ವಿಕಾಸ ಹೊಂದುತ್ತ ಬಂದವುಗಳೆಂದು ಸರಪಳಿ ಹೆಣೆಯುವ ಡಾರ್ವಿನೀಯರೀತಿ ಕೇವಲ ಕಲ್ಪನಾ ವಿಲಾಸ. ನಿಜವಾದ ಸರ್ಜನಾತ್ಮಕ (Creative)—ವಿಕಾಸವು (Evolution) ಬಹು ಪರಿಮಾಣಿಕ (Pluri-dimensional). ಜೀವಿಗಳ ಪ್ರತಿಯೊಂದು ದಿಕ್ಕಿನ ವಿಕಾಸದಲ್ಲಿಯೂ ಜೀವಚೈತನ್ಯವು ಸಂರಕ್ಷಿತವಾಗಿದೆ. ಅದು ಬಹುರೂಪ ನಿರ್ಮಾಪಕ, ಬಹುನಮೂನೆಯ ಜಾತಿಗಳ ನಿರ್ಮಾಪಕ; ತನ್ನ ಉತ್ಕ್ರಾಂತಿಯಲ್ಲಿದು ನಾನಾವಿಧವಾಗಿ ವಿಭಕ್ತವಾಗುತ್ತ ಹೋಗುತ್ತದೆ. ಅದಕ್ಕೆ ಪೂರ್ವನಿರ್ದಿಷ್ಟವಾದ, ಖಚಿತವಾದ ಮತ್ತು ಕೊನೆಯದಾದ ಮುಟ್ಟುವಸ್ಥಾನವೆಂಬುದಿಲ್ಲ. ಆದುದರಿಂದ ಅದರಲ್ಲೇ ಅವರ ಅಂತರ್ಯಾಮಿಯಾದ ಉದ್ದೇಶ ಸಿದ್ಧಾಂತ ಅಡಗಿದೆ, ಮೌಲ್ಯವಿವೇಕ ತಲೆಮರೆಸಿಕೊಂಡಿದೆ.

ಬರ್ಗ್ಸನ್ನನ ಪ್ರಕಾರ ಪ್ರತಿಭೆಯು (Intuition) ಜೀವಶಾಸ್ತ್ರೀಯ, ಜನನಶಾಸ್ತ್ರೀಯ ಉತ್ಕ್ರಿಯಾಮಂತಿಕೆಯುಳ್ಳದ್ದು. ಪ್ರಾತಿಭಜ್ಞಾನವು

ವಿಚಾರಮಾಡಬಲ್ಲ ಎಲ್ಲ ಮನಸ್ಸುಗಳ ಸಾಮಾನ್ಯ ಹುಟ್ಟುಗುಣ. ಅದು ಆಯಾ ವ್ಯಕ್ತಿಯ ಮನಸ್ಸು ತನ್ನ ಒಡಲನೂಲಿನಿಂದ ನೇಯ್ದ ಜೇಡನ ಜಾಲವಲ್ಲ. ಅದರಲ್ಲಿ ವೈಜ್ಞಾನಿಕ ವಸ್ತುನಿಷ್ಠತೆಯೂ ಇದೆ, ಕಲಾತ್ಮಕವಾದ ಪ್ರತ್ಯಕ್ಷತೆಯೂ ಇದೆ.

ಅಚಲ (Static) ಜಡಪ್ರಕೃತಿವಾದ ಮತ್ತು ನ್ಯೂಟನ್ನನು ಕಂಡ ನಿಸರ್ಗವನ್ನು ದೇಶರೂಪಕ್ಕೆ (form of space) ತಿರುಗಿಸುವುದು—ಬರ್ಗ್ಸನ್ನನ ಪ್ರಕಾರ ಅಪಬುದ್ಧಿವಾದಗಳು. ಯಾಂತ್ರಿಕತಾವಾದವ ಮತ್ತು ಜಡಪ್ರಕೃತಿವಾದವನ್ನು ಹಿಡಿದ ವಿಜ್ಞಾನದ ಸರ್ವಜ್ಞತೆಯು ಅವನಿಗೆ ಅಮಾನ್ಯ. ಅತ್ಯುನ್ನತ ವಿಚಾರಪರರ ಧ್ಯೇಯದೊಡನೆ ಸಾಮಂಜಸ್ಯ ಹೊಂದುವುದಕ್ಕಾಗಿ ವಿಚಾರಶಕ್ತಿಗೆ ತನ್ನನ್ನೇ ತಾನು ಮೀರಲು ಅವನು ಹೇಳಿದನು. ಮುಖ್ಯವಾಗಿ ಸತ್ಯವು ಉತ್ಕ್ರಿಯಾತ್ಮಕ, ನಿಷ್ಕ್ರಿಯಾತ್ಮಕವಲ್ಲ. ವಿಚಾರ, ಆಲೋಚನೆ, ತರ್ಕಗಳನ್ನು ಬರ್ಗ್ಸನ್ನನ ತತ್ವಜ್ಞಾನವು ಸದಾ ಪರಾಮರ್ಶೆಗೆ ಗುರಿಪಡಿಸುತ್ತಿರುತ್ತದೆ. ಅವನ ಸಿದ್ಧಾಂತವು ಕ್ಯಾಂಟನ ಸಂಪ್ರದಾಯಕ್ಕೆ ಸೇರಿದ್ದು. ಅವನ ಪ್ರತಿಭೆಯ ಕಲ್ಪನೆ ಸ್ಪಿನೋಜನ ಪ್ರತಿಭಾಕಲ್ಪನೆಗೆ ಸದೃಶವಾದುದು. ಅವನದು ವಿಚಾರ ವಿಮುಖತೆಯಲ್ಲ, ವಿಚಾರವನ್ನು ಪೂರ್ಣಗೊಳಿಸುವ ಕ್ರಮ— ಎಂದು ಹೇಳಿರುವುದು ಅತೀಂದ್ರಿಯ ಪದಾರ್ಥದ ಬಗೆಗಿನ ಪ್ರಸಿದ್ಧ ತರ್ಕೋತ್ತರ ಧ್ಯೇಯವಾದಗಳೆಲ್ಲವುಗಳಿಗೂ ತಕ್ಕ ಸಮರ್ಥನೆಯಾಗುತ್ತದೆ. ಜೀವಶಕ್ತಿಯು (ಜೀವಶಕ್ತಿಯಂತೆ?) ಒಬ್ಬ ಅಮರ ಕಲೆಗಾರ; ಜಗತ್ತಿನ ಸೃಷ್ಟಿಸ್ಥಿತಿಲಯಗಳ ಪ್ರವಾಹವು ಅವನ ಸ್ಫೂರ್ತಿಕಲಾಕೃತಿ. ಈ ಕಲೆಗಾರಿಕೆಗೆ ಅಂತವಿಲ್ಲ, ಪಾರವಿಲ್ಲ—ಎಂಬುದು ಬರ್ಗ್ಸನ್ನನ ಸರ್ಜನಾತ್ಮಕ ವಿಕಾಸವಾದ, ಭೇದಜನಕವಾದ ಬುದ್ಧಿಯು ದೇಶದೊಡನೆ ನಿತ್ಯಸಂಬಂಧವುಳ್ಳದ್ದು, ಅಭೇದ ಜನಕವಾದ ಮೂಲ ಪ್ರವೃತ್ತಿ ಅಥವಾ ಪ್ರತಿಭೆಯು ಕಾಲದೊಡನೆ ನಿತ್ಯಸಂಬಂಧವುಳ್ಳದ್ದು. ಬರ್ಗ್ಸನ್ನನ "ಕಾಲವು" ಪ್ರತ್ಯೇಕವಾದ ಮುಹೂರ್ತಗಳ (ಕ್ಷಣಗಳ) ಸಜಾತೀಯ ಸಮೂಹವಲ್ಲದೆ, ಗಣಿತ

ಶಾಸ್ತ್ರೋಕ್ತವಾದ ಕಾಲವಲ್ಲ. ಗಾಣಿತಿಕ ಕಾಲವು ದೇಶದ್ದೇ ಒಂದು ವಿಶಿಷ್ಟ ರೂಪ. ತಾಳಿಕೆ ಅಥವಾ ಕಾಲಸಾತತ್ಯವು ಜೀವಶಕ್ತಿಯ ಸಾರ. ಜೀವನವೆಂದರೆ ಒಡೆದು ಹಾರಿದ ಗುಂಡಿನ ಚೂರುಗಳು ಪುನಃ ಚಿಕ್ಕ ಚಿಕ್ಕ ಗುಂಡುಗಳೇ ಆಗಿ ಪರಿಣಮಿಸುವ ಕ್ರಿಯೆ ಅನಂತಕಾಲದ ವರೆಗೆ ನಿರುದ್ದೇಶದಿಂದ ನಡೆಯುತ್ತ ಹೋಗುವುದು. ಕಾರ್ಯಕ್ಕೆ ಕಾರ್ಯವೇ ಉದ್ದೇಶ. ಇದೊಂದು ಕರ್ಮಪ್ರವಾಹ ಸಿದ್ಧಾಂತ. ಈ ಪ್ರವಾಹಕ್ಕೆ ಆದಿಯಿಲ್ಲ, ಅಂತವಿಲ್ಲ. ಕ್ರಿಯೆ, ಕಾರ್ಯ, ಬದಲಾವಣೆ, ಉತ್ಕ್ರಿಯೆ—ಎಂಬ ಯಾವ ಹೆಸರಿಟ್ಟರೂ ಜೀವನದ ಅರ್ಥ ಕರ್ಮಸಂತಾನವೆಂದೇ ಆಗುತ್ತದೆ. ಈ ಕರ್ಮಸಾತತ್ಯರೂಪದ ಜೀವನದ ತಾಳಿಕೆಯ ಲಕ್ಷಣ ಹೀಗಿದೆ: ನಮ್ಮ ಜಾಗ್ರತ ಅವಸ್ಥೆಗಳು ತಾಳುವ ರೂಪವೇ ತಾಳಿಕೆ; ಅವು ಅಂಥ ರೂಪವನ್ನು ತಾಳುವುದು ನಮ್ಮ ಅಹಂಕಾರವು ತನ್ನನ್ನು ತಾನೇ ಬದುಕಲು ಬಿಟ್ಟಾಗ—ಅಂದರೆ ಅದು ತನ್ನ ವರ್ತಮಾನ ಅವಸ್ಥೆಯನ್ನು ಭೂತಕಾಲದ ಅವಸ್ಥೆಗಳಿಂದ ಪ್ರತ್ಯೇಕವಾಗದಂತೆ ನಿಯಂತ್ರಿಸಿದಾಗ; ಆದು ಭೂತ-ವರ್ತಮಾನಗಳನ್ನು ಒಂದೇ ಒಂದು ಅಂಗರೂಪದ (ಆವಯವಿಕ) ಇಡಿಯನ್ನಾಗಿ ಮಾಡುತ್ತದೆ—ಅದರಲ್ಲಿ ಪರಸ್ಪರ ಹಂಚು ಪ್ರವೇಶವಿದೆ, ಪ್ರತ್ಯೇಕತೆಯನ್ನು ಹೊಂದದ ಉತ್ತರೋತ್ತರ ಕ್ರಿಯಾತರಂಗವಾಹಿಯಿದೆ. ನಮ್ಮ ಅಹಂಕಾರದ ವಲಯದೊಳಗೆ ಪರಸ್ಪರ ಬಾಹ್ಯತೆಯಿಲ್ಲದ ಉತ್ತರೋತ್ತರ ತರಂಗಿತತೆಯಿದೆ; ಅಹಂಕಾರಪ್ರಜ್ಞೆಯ ಹೊರಗೆ ಇರುವುದು ಶುದ್ಧ ದೇಶ—ಅದರಲ್ಲಿ ಉತ್ತರೋತ್ತರತ್ವರಹಿತವಾದ ಪರಸ್ಪರ ಬಾಹ್ಯತೆ ಇದೆ, ಪ್ರತ್ಯೇಕತೆ ಇದೆ. ಕರ್ತೃ-ಕರ್ಮಗಳ ಪ್ರತ್ಯೇಕತೆ-ಏಕತೆಗಳು ಕಾಲಸಂಬಂಧವುಳ್ಳವುಗಳಲ್ಲದೆ, ದೇಶ ಸಂಬಂಧವುಳ್ಳವುಗಳಲ್ಲ. ನಾವು ಕಾರ್ಯ ಮಾಡುತ್ತಿರುವುದನ್ನು ವೀಕ್ಷಿಸುವ ತಾಳಿಕೆಯ ಅವಧಿಯಲ್ಲಿ ಭಿನ್ನ ಅಂಗಗಳಿರುತ್ತವೆ; ಆದರೆ ನಾವು ಕಾರ್ಯಮಾಡುತ್ತಿರುವ ತಾಳಿಕೆಯ ಅವಧಿಯಲ್ಲಿ ನಮ್ಮ ಅವಸ್ಥೆಗಳು(States) ಒಂದರಲ್ಲಿ ಒಂದು ಕರಗಿ ಹೋಗಿ ಬಿಡುತ್ತವೆ. ಶುದ್ಧವಾದ ತಾಳಿಕೆಯ ಅವಧಿಯು ಬಾಹ್ಯತೆಯಿಂದ ಬಹುದೂರವಾಗಿರುತ್ತದೆ, ಬಾಹ್ಯತೆ ಅತ್ಯಲ್ಪ ಅಂಶದಿಂದ ಅದರಲ್ಲಿ

ಪ್ರವೇಶಿಸಿರುತ್ತದೆ ಎಂದು ಕೂಡ ಹೇಳಲುಬಾರದು: ಅದರಲ್ಲಿ ಭೂತ ಕಾಲವು ದೊಡ್ಡದು, ಅದರೊಡನೆ ತೀರ ಹೊಸದಾದ ಸಣ್ಣ ವರ್ತಮಾನವು ಅನುಸ್ಯೂತವಾಗಿರುತ್ತದೆ. ಆದರೆ ಈ ತಾಳಿಕೆಯನ್ನು ಸಾಧಿಸುವ ಯತ್ನದಲ್ಲಿ ನಮ್ಮ ಇಚ್ಛಾಶಕ್ತಿ ಬಹಳ ಕಷ್ಟಪಟ್ಟು ಪ್ರಯತ್ನಿಸುತ್ತಿರಬೇಕಾಗುತ್ತದೆ. ಜಾರಿಹೋಗುತ್ತಿರುವ ಭೂತಕಾಲದ ಕರ್ಮವನ್ನು ನಾವು ಜಗ್ಗಿ ಹಿಡಿದು ಕೊಳ್ಳಬೇಕಾಗುತ್ತದೆ; ಅದನ್ನು ಇಡಿಯಾಗಿ ವರ್ತಮಾನದಲ್ಲಿ ತುರುಕಬೇಕಾಗುತ್ತದೆ. ಅಂಥ ವೇಳೆಯಲ್ಲೇ ನಾವು ನಿಜವಾಗಿ ಸ್ವಾಧೀನರಾಗಿರುತ್ತೇವೆ. ಆದರೆ ಅಂಥ ವೇಳೆಗಳು ವಿರಳ. ತಾಳಿಕೆಯು ಸತ್ಯದ ಸಾರ, ಅದು ನಿತ್ಯ ಪರಿಣಾಮಿ, ಅದನ್ನೇನೂ ಯಾರೂ ಮಾಡುವುದಿಲ್ಲ, ಅದೇ ಆಗುತ್ತ ಹೋಗುತ್ತದೆ. ಸ್ಮೃತಿಯಲ್ಲಿ ಜಡಪ್ರಕೃತಿಯನ್ನು ಮನಸ್ಸು ಊಹಿಸಿದ ರೀತಿಯಲ್ಲಿ ಅಭಿನಯಿಸಬೇಕಾಗುತ್ತದೆ; ಹಾಗೆ ಮಾಡುವುದು ಬುದ್ಧಿಯ ಕೆಲಸ ಅಲ್ಲವೇ ಅಲ್ಲ. ಸ್ಮೃತಿಯು ಜಡ ಪ್ರಕೃತಿಯ ಅಭಿವ್ಯಕ್ತಿಯಲ್ಲ, ಅವತಾರವಲ್ಲ; ಅದು ಸ್ವತಂತ್ರ. ತಾಳಿಕೆಯು ಆತ್ಮಪ್ರದರ್ಶನ ಮಾಡುವುದು ಸ್ಮೃತಿಯಲ್ಲಿ—ಅದರ ಯಾಂತ್ರಿಕ ಸ್ಮೃತಿಯಲ್ಲಲ್ಲ, ಭೂತಕಾಲಕರ್ಮಜ್ಞಾನವುಳ್ಳ ಸ್ಮೃತಿಯಲ್ಲಿ. ಸ್ಮೃತಿಯಲ್ಲಿಯೇ ನಮಗೆ ಚೇತನೆಯ (Spirit) ಸ್ಪರ್ಶವಾಗುವುದು.

ವಿಲಿಯಂ ಜೇಮ್ಸ್ (೧೮೪೨-೧೯೧೦)

ಜೇಮ್ಸನದು ಮೂಲಭೂತ ವ್ಯವಹಾರವಾದ. ಅದರ ಪ್ರಕಾರ ಕರ್ತೃ-ಕರ್ಮ ಸಂಬಂಧವು ಮೂಲಭೂತವಾದುದಲ್ಲ; ಸ್ವಜ್ಞಾನವೊಂದನ್ನುಳಿದರೆ ಮಿಕ್ಕ ಜ್ಞಾನಗಳೆಲ್ಲವೂ ಜ್ಞಾತೃ-ಜ್ಞೇಯಭೇದ ಉಳ್ಳಂಥವು ಎಂಬುದು ಮೂಲತಃ ಸತ್ಯವಲ್ಲ. ಪ್ರಜ್ಞೆ (Consciousness) ಎಂಬುದು ಒಂದು ಅಭಾವ ದ್ರವ್ಯ; ಅದಕ್ಕೆ ಆದಿತತ್ವವೆಂಬ ಸ್ಥಾನವಿಲ್ಲ. ನಮ್ಮ ಆಲೋಚನೆಗಳ ಹೂರಣವಾದ ಜಡ ಪ್ರಕೃತಿಯ ವಸ್ತುಗಳಿಗೆ ವಿರುದ್ಧವಾದ ಮೂಲಭೂತ ಇರುವಿಕೆಯ ಗುಣ ಅಥವಾ ದ್ರವ್ಯ ಎಂಬುದಿಲ್ಲ. ಪ್ರಜ್ಞೆಯು

ದ್ರವ್ಯವಲ್ಲ, ಒಂದು ವಸ್ತುವಲ್ಲ. ಜಗತ್ತಿನ ಎಲ್ಲದರ ಸಾರಾಂಶವೂ ಒಂದೇ ಒಂದು ಮೂಲಪದಾರ್ಥದ ಸ್ವರೂಪವುಳ್ಳದ್ದು. ಆ ಪದಾರ್ಥದ ಹೆಸರು 'ಶುದ್ಧ ಅನುಭವ' ಎಂದು. ಶುದ್ಧ ಅನುಭವದ ಎರಡು ಚೂರುಗಳ ನಡುವಿನ ವಿಶಿಷ್ಟ ಸಂಬಂಧವೇ ತಿಳಿವಳಿಕೆ. ಜ್ಞಾತೃ—ಜ್ಞೇಯ(ಕರ್ತೃ-ಕರ್ಮ)ಸಂಬಂಧವು ಜನ್ಯ. ಅನುಭವದಕ್ಕೆ ಅಂಥ ಒಳ ಕಾಪಟ್ಯವಿಲ್ಲ. ಒಂದು ಸಂದರ್ಭದಲ್ಲಿ ಜ್ಞಾತೃವಾದದ್ದು ಇನ್ನೊಂದರಲ್ಲಿ ಜ್ಞೇಯವಾಗಬಹುದು. ಅನಂತರದ ಆಲೋಚನೆಗೆ ವಸ್ತುವನ್ನು (ಸಾಮಗ್ರಿಯನ್ನು) ಒದಗಿಸಿಕೊಡುವ ಸದ್ಯದ ಜೀವತ್‌ಕ್ರಿಯಾಸಂತಾನವೇ ಶುದ್ಧ ಅನುಭವ.

ಮನಸ್ಸು ಮತ್ತು ಜಡಪ್ರಕೃತಿಗಳಲ್ಲಿ ಭೇದವಿಲ್ಲ. ಅವು ಒಂದೇ ಕ್ರಿಯಾಸಂತಾನದ ಎರಡು ಬಗೆಯ ಮುಖಗಳು. ಇದೊಂದು ತಟಸ್ಥ ಅದ್ವೈತ. ಇದರ ಪ್ರಕಾರ ಜಗದ್ವಸ್ತುವು ಮಾನಸವೂ ಅಲ್ಲ, ಜಡಪ್ರಕೃತಿಯೂ ಅಲ್ಲ; ಇವೆರಡಕ್ಕೂ ಮೂಲವಾದ ಒಂದು ಪದಾರ್ಥ. ಜೇಮ್ಸನ ಶುದ್ಧಾನುಭವವು ಬರ್ಕ್ಲೇಯ ಧ್ಯೇಯವಾದಕ್ಕೆ ಸದೃಶ. ನಮ್ಮಲ್ಲಿ ಯಾವುದಾದರೂ ಅಭ್ಯಾಸವನ್ನು ಉಂಟುಮಾಡಬಲ್ಲದ್ದು ಅನುಭವ. ಸ್ಮೃತಿಯು ಒಂದು ವಿಧದ ಅನುಭವ. ಅನುಭವದ ವ್ಯಾಪ್ತಿಯು ಜೀವನದ ಮೂಲಪದಾರ್ಥದಷ್ಟಿಲ್ಲವೆಂಬುದನ್ನು ಜೇಮ್ಸ್ ಒಪ್ಪಿಕೊಂಡಿಲ್ಲ. 'ಸತ್ಯವನ್ನು ನಂಬು, ಅಸತ್ಯವನ್ನು ಬಿಡು' ಎಂಬುದು ಜೇಮ್ಸ್ ಹೇಳಿದ ನೀತಿ ತತ್ವ. ವಿರುದ್ಧ ಸಾಕ್ಷಿ ಸಿಗುವವರೆಗೆ ಯಾವುದನ್ನಾದರೂ ನಂಬಬೇಕು-ಎನ್ನುತ್ತಾನವ. ಅವನು ಸಂಭಾವ್ಯತೆಯನ್ನೂ ಹೇಳಿಲ್ಲ. ಒಂದರಲ್ಲಿ ಪೂರ್ಣ ವಿಶ್ವಾಸ ಅಥವಾ ಪೂರ್ಣ ಅವಿಶ್ವಾಸ- ಎಂಬ ಎರಡೇ ವಿಕಲ್ಪಗಳನ್ನವನು ಒಪ್ಪುತ್ತಾನೆ. ಜನರನ್ನು ಗುಣವಂತರನ್ನಾಗಿಯೂ ಸುಖಿಗಳನ್ನಾಗಿಯೂ ಮಾಡುವ ಯಾವ ಮಾತಿದ್ದರೂ ಅದು ಅವನ ಪ್ರಕಾರ ಸತ್ಯ. ತಾತ್ವಿಕ ಸಿದ್ಧಾಂತಗಳೆಲ್ಲವನ್ನೂ ಅವರವರ ಮುಂದಾಗುವ ಪರಿಣಾಮಗಳಿಂದ ಅರಿದು ಸತ್ಯತೆಯನ್ನು ನಿರ್ಧರಿಸಬೇಕೆಂಬುದು ಅವನ Pragmatism ಕಾರ್ಯಾರ್ಥವಾದ; ಅವುಗಳೆಲ್ಲವೂ ಪರಿಣಾಮ ಸಾಧನ

ಗಳಲ್ಲದೆ ಒಗಟುಗಳ ಉತ್ತರಗಳಲ್ಲ. ನಮಗೆ ಲಾಭಕರವಾಗುವ ಕಲ್ಪನೆಗಳೆಲ್ಲವೂ ಸತ್ಯ. ಸತ್ಯವೆಂಬುದು ಒಂದು ತರಹದ ಒಳಿತು; ಅದೊಂದು ಪ್ರತ್ಯೇಕ ಪದಾರ್ಥವಲ್ಲ. ಈ ಮಾತನ್ನು ಸತ್ಯದ ಲಕ್ಷಣವನ್ನು ಏಕಾಖಂಡಿತವಾಗಿ ಸರ್ವಗ್ರಹವಾಗಿ ಕೊಡದುದರಿಂದ ರಸೆಲ್ಲನಂಥವರು ಆಕ್ಷೇಪಿಸುತ್ತಾರೆ. ಸತ್ಯದ ಜ್ಞಾನವು ಒಂದಲ್ಲ ಒಂದುವಿಧದ ತೃಪ್ತಿಗೆ ಕಾರಣವಾಗಿದ್ದರೆ ಅದು ಸತ್ಯವೆನ್ನಿಸಬಲ್ಲುದೇ? ಎಂಬುದು ಮರುಸವಾಲು.

ಜಾನ್ ಡ್ಯೂಯಿ (೧೮೫೯-೧೯೫೨)

ಡ್ಯೂಯಿಗೆ ಜ್ಞಾನಶಾಸ್ತ್ರೀಯವಾಗಿ ಸತ್ಯ ಮುಖ್ಯವಲ್ಲ, 'ಶೋಧ' (Inquiry) ಮುಖ್ಯ. ಸತ್ಯವು ಈತನಿಗೆ ನಿತ್ಯವಲ್ಲ, ನಿಷ್ಕ್ರಿಯ, ಅಚಲ ಅಲ್ಲ. ಮಗ್ಗಿ ಕೋಷ್ಟಕವೇ ಸತ್ಯದ ಅತ್ಯುತ್ತಮ ಮಾದರಿ. ಡ್ಯೂಯಿಗೆ ಜೀವಶಾಸ್ತ್ರವು ಗಣಿತಶಾಸ್ತ್ರಕ್ಕಿಂತ ಹೆಚ್ಚು ಗಣ್ಯ. ವಿಚಾರವೊಂದು ವಿಕಾಸದ ಕ್ರಿಯಾನುಕ್ರಮ. ಯಾವ ಜ್ಞಾನಾಂಶವೂ ಕಟ್ಟಕಡೆಯದಲ್ಲ. ಪೂರ್ಣ ಸತ್ಯ ಹಾಗೂ ಅದರ ನಿತ್ಯಪ್ರಪಂಚಗಳು ಡ್ಯೂಯಿಯ ವಿಚಾರ ಕ್ಷೇತ್ರದಲ್ಲಿಲ್ಲ. ಮನುಷ್ಯನ ಜ್ಞಾನವು ಆಪೇಕ್ಷಿಕ; ಅವನ ತಿಳುವಳಿಕೆ ಕ್ರಮೇಣ ಬೆಳೆಯುವಂಥದು; ಅದು ಇಡಿಯಾಗಿ ಪೂರ್ಣವಾದಾಗ ಮಾತ್ರ ಪೂರ್ಣ; ಬಿಡಿಭಾಗಗಳಲ್ಲಿ ಅದು ಅಪೂರ್ಣ. ಮನಸ್ಸು ಮತ್ತು ದೇಹಗಳು ಒಟ್ಟು ಒಂದು ಅವಯವಿ, ಅಂಗಿ, ಇಡಿ. ಸತ್ಯ-ಸುಳ್ಳುಗಳೆರಡೂ ಅಪೂರ್ಣ; ಕೇವಲ ಪೂರ್ಣತೆ ಅವುಗಳಿಗಿಲ್ಲ. ಅವಯವಿಯೊಂದು ಆವರಣದೊಡನೆ ಮಾಡಿಕೊಂಡ ಹೊಂದಿಕೆಯು 'ಶೋಧ'. ಒಂದು ನಡತೆಯ ಬಗೆಯನ್ನು ಒಬ್ಬನಲ್ಲಿ ಪ್ರೇರಿಸಬಲ್ಲ ಘಟನೆಯೇ ಅದನ್ನು ಹೇಳಿದ ವಾಕ್ಯದ ಅರ್ಥವತ್ತೆ (Significance). ಅಂಥ ಘಟನೆ ನಡೆಯದಿದ್ದಾಗ ಆ ವಾಕ್ಯದ ಅರ್ಥವತ್ತೆ ಸುಳ್ಳು, ನಡೆದಾಗ ಸತ್ಯ. ಅರ್ಥವತ್ತೆ ಅಥವಾ ಅರ್ಥಪೂರ್ಣತೆಯು ವಾಕ್ಯದ ಭಾಷಾರಚನೆಯನ್ನು ಅವಲಂಬಿಸುತ್ತದೆ. ಹೀಗೆ ಅರ್ಥವತ್ತೆ ಎಂದರೆ ಅರ್ಥಕ್ರಿಯಾಕಾರಿತ್ವ. ಶೋಧವೆಂದರೆ ಒಂದು ಅನಿಷ್ಕೃಷ್ಟ ಸನ್ನಿವೇಶವನ್ನು- ಅದರ ಅಂಗಗಳೆಲ್ಲವೂ ಏಕೀಕೃತ ಇಡಿಯಾಗುವಂತೆ- ತನ್ನ ಆಂಗಿಕ ಪ್ರತ್ಯೇಕತೆಗಳನ್ನೂ ಸಂಬಂಧಗಳನ್ನೂ

ನಿಷ್ಕೃಷ್ಟಗೊಳಿಸಿಕೊಳ್ಳಲು ತಕ್ಕಹಾಗೆ ನಿಯಂತ್ರಿತ ಅಥವಾ ನಿರ್ದೇಶಿತ ಪರಿವರ್ತನಕ್ಕೆ ಗುರಿಪಡಿಸುವುದೇ ಆಗಿದೆ. ಶೋಧವು ಯಾವಾಗಲೂ ವಸ್ತುನಿಷ್ಠವಾದ ವಸ್ತು ಸಂಗತಿಯು ವಸ್ತುನಿಷ್ಠ ಪರಿವರ್ತನೆಗೇ ಸಂಬಂಧಪಟ್ಟಿರುತ್ತದೆ. ಅನಿಷ್ಕೃಷ್ಟ ಸನ್ನಿವೇಶದ ಅಸ್ತವ್ಯಸ್ತತೆಯು ಆಭಾಸಿಕ; ಅದರ ಕ್ರಮಬದ್ಧವಿನ್ಯಾಸವು ಅದರ ನಿತ್ಯ ಸತ್ಯ ಸ್ವರೂಪ. ಇಲ್ಲಿ ಹೆಗೆಲ್ಲನ ಆಭಾಸ-ಸತ್ಯಗಳ ಕಲ್ಪನೆ ಅಡಕವಾಗಿದೆ; ಅದರ ಪ್ರಕಾರ ಅವಯವಿತ್ವವು ಸತ್ಯಸ್ವರೂಪಕ್ಕೆ ಅತ್ಯಗತ್ಯ. ಸತ್ಯಶೋಧಕರೆಲ್ಲರೂ ಕೊನೆಯದಾಗಿ ಒಪ್ಪಿಕೊಳ್ಳುವುದೇ ಸತ್ಯ. ಒಂದು ವಸ್ತುವಿನ ನಿತ್ಯ ಸತ್ಯತೆ ಬರುವುದು ಆ ಅವಯವಿಯು ಹಾಗೂ ಸಂನಿವೇಶದ ಅತೃಪ್ತಿಕರ ಸಂಬಂಧಗಳನ್ನು ಅವಕ್ಕೇ ಹೆಚ್ಚಾಗಿ ಅನುಗುಣವಾಗುವಂತೆ ಹೊಂದಿಸಿದಾಗ. ಹೀಗೆ ಹೊಂದಿಸುವ ಕ್ರಿಯಾಕ್ರಮವೇ 'ಶೋಧ'. ಅದರಿಂದ ಅವುಗಳ ನಡುವಿನ ಸಂಬಂಧಗಳು ಅವಯವಿಗೆ ತೃಪ್ತಿಕರವಾಗುವುವು. ಹಾಗೆ ಹೊಂದಿಸುವುದೆಂದೂ ಪೂರ್ಣವಾಗಿ ಅದಕ್ಕೆ ಅಥವಾ ಇದಕ್ಕೆ ಅನುಗುಣವಾಗಿ ಅಲ್ಲ.

ಪರಿಣಾಮಗಳಿಂದ ನಂಬಿಗೆಯ ಬೆಲೆಯನ್ನು ನಿರ್ಧರಿಸುವುದು ಡ್ಯೂಯಿಯ ಕ್ರಮ; ಭೂತಕಾಲಕ್ಕೆ ಸಂಬಂಧಿಸಿದ ನಂಬಿಗೆಯ ಬೆಲೆಯನ್ನು ಅದರ ಕಾರಣಗಳಿಂದ ನಿರ್ಧರಿಸುವುದು ರಸೆಲ್ಲನ ಕ್ರಮ. ಸತ್ಯವು ಡ್ಯೂಯಿಗೆ Warranted Assertability ಅಧಿಕೃತ ವಚನಾರ್ಹತೆ ಅಥವಾ ಉಕ್ತೀಯಾರ್ಹತೆ. ಅಂಥ ಉಕ್ತೀಯಾರ್ಹತೆಯು ಒಂದು ನಂಬಿಗೆಯ ಪರಿಣಾಮಗಳಿಂದ ಲಬ್ಧವಾಗುವ ಬೆಲೆ. ಅದು ಭೂತಕಾಲಕ್ಕಷ್ಟೇ ಅಲ್ಲ, ಭವಿಷ್ಯತ್ಕಾಲಕ್ಕೂ ವ್ಯಾಪಿಸಿದೆ; ಅಂದರೆ ಭೂತಕಾಲೀನ ಘಟನೆಗಳನ್ನಷ್ಟೇ ಅಲ್ಲದೆ ಭವಿಷ್ಯತ್ಕಾಲದ ಘಟನೆಗಳನ್ನೂ ಅವಲಂಬಿಸಿದೆ.

ಡ್ಯೂಯಿಯ ತತ್ತ್ವಜ್ಞಾನವು ಅಮೇರಿಕದ ಉದ್ಯಮವಾದದ ಸಂಸ್ಕಾರದಿಂದ ಹುಟ್ಟಿತೆಂದೂ ರಸೆಲ್ಲನದು ಇಂಗ್ಲೆಂಡಿನ ಜಮೀನುದಾರಿ ಕುಲೀನ ಪ್ರಭುತ್ವವಾದದ ಸಂಸ್ಕಾರದಿಂದ ಹುಟ್ಟಿತೆಂದೂ ಹೇಳುವುದುಂಟು.

ಡ್ಯೂಯಿಯದು ಮಾನವಪ್ರಪಂಚ; ಗ್ರಹ, ತಾರೆ, ಸೂರ್ಯ, ನೀಹಾರಿಕೆಗಳಲ್ಲಿ ಗಣ್ಯವಲ್ಲ. ಅವನದು ಬೆಲೆಯುಳ್ಳದ್ದೆಂದು ಅನುಭವಕ್ಕೆ ಬಂದ Power Philosophy ಸಾಮುದಾಯಿಕ ಶಕ್ತಿ ತತ್ವಜ್ಞಾನ. ಅದನ್ನಾತ philosophy of Instrumentalism 'ಕರಣವಾದದ ತತ್ವಜ್ಞಾನ' ಎಂದು ಹೇಳಿದ್ದಾನೆ. ಅದರ ಪ್ರಕಾರ ನಿಸರ್ಗದ ಕೆಲ ಚಲನಗಳನ್ನು ನಿಯಂತ್ರಿಸ ಬಲ್ಲವನಾದ ಮಾನವನು ಅಧಿಕನೆಂಬ ಭಾವನೆಯುಂಟಾಗುವುದು.

ಬರ್ಟ್ರೆಂಡ್ ರಸೆಲ್ (೧೮೭೨— ....)

ಪ್ರಯೋಗ ವಿಜ್ಞಾನ ಒದಗಿಸಿದ ಸಂಗತಿಗಳ ತಾರ್ಕಿಕ ಪರಾಮರ್ಶೆಯೇ ತತ್ವಜ್ಞಾನ. ಅವನ ತತ್ವಜ್ಞಾನವನ್ನವನು "ತಾರ್ಕಿಕ ವಿಶ್ಲೇಷಣವಾದ" ಎಂದು ಕರೆದುಕೊಂಡಿದ್ದಾನೆ. ಗಣಿತವು ತರ್ಕದ ದೀರ್ಘೀಕೃತ ಅಥವಾ ವಿಸ್ತೃತ ವಿವರಣೆ. ವಾಕ್ಯರಚನೆಯ ವಿಶಿಷ್ಟತೆಯಿಂದ ತಾತ್ವಿಕ ಸತ್ಯತೆಯನ್ನು ನಿರ್ಧರಿಸಬಹುದು. ವಾಕ್ಯರಚನೆಯ ವಿಶ್ಲೇಷಣವೆಂದರೆ ಲಿಂಗ ಪರಾಮರ್ಶೆ; ಅದರಿಂದ ಹೇತ್ವಾಭಾಸಗಳಿದ್ದರೆ ಅವು ಹೊರಬೀಳುವವು-ಎಂಬುದು ತಾತ್ಪರ್ಯ. ತನ್ನ ಈ ಅಭಿಪ್ರಾಯಕ್ಕೆ "ಅಸಿದ್ಧ" ಹೇತ್ವಾಭಾಸದ ಉದಾಹರಣೆಗಳನ್ನು ಕೊಟ್ಟು ತನ್ನ ಹಿಂದಿನ ತತ್ವಜ್ಞಾನಿಗಳೆಲ್ಲರೂ ಒಂದಲ್ಲ ಒಂದು ದೊಡ್ಡ ಹೇತ್ವಾಭಾಸವನ್ನು ತಮ್ಮ ತರ್ಕ ಸಮರ್ಥನೆಯಲ್ಲಿ ಉಳಿಯಗೊಟ್ಟಿದ್ದಾರೆ ಎಂದು ವಾದಹೂಡಿದ್ದಾನೆ. ರಸೆಲ್ ಉಳಿಸಿದ (fallacy) ಹೇತ್ವಾಭಾಸ ಇಂತಿದೆ:

ಸಾವಿರದವರೆಗೆ ಸಾವಿರ ಅಂಕೆಗಳಿವೆ;

ದಶಲಕ್ಷದವರೆಗೆ ದಶಲಕ್ಷ ಅಂಕೆಗಳಿವೆ;

ಯಾವ ಪ್ರಮಿತಾಂಕವನ್ನು (finite number) ಯಾರು ಹೇಳಿದರೂ ಒಂದರಿಂದ ಅದರವರೆಗಿನ ಅಂಕೆಗಳನ್ನು ಎಣಿಸಿದ ಮೇಲೆ ಮುಂದೆಯೂ ಹೆಚ್ಚಿನ ಅಂಕೆಗಳು ಉಳಿಯುತ್ತವೆ.

ಆದುದರಿಂದ ಪ್ರಮಿತ ಪೂರ್ಣಾಂಕಗಳ ಸಂಖ್ಯೆ ಅಪರಿಮಿತ (Infinte). ಈ ನ್ಯಾಯ ವಾಕ್ಯದಲ್ಲಿ (Syllogism) ಎಣಿಸಲು ಬೇಕಾದ ಕಾಲ-ಕ್ರಮಗಳು ಮಾನವ ಶಕ್ತಿಯಲ್ಲೂ ಯಂತ್ರಶಕ್ತಿಯಲ್ಲೂ ಪರಿಮಿತ ಪ್ರಮಾಣದಲ್ಲಿವೆಯೆಂಬ ಗೃಹೀತಾಂಶವು ಅಡಗಿದೆ. ಇದನ್ನು ಗೃಹೀತವನ್ನಾಗಿ ಇಟ್ಟುಕೊಳ್ಳಲು ಯಾರು ಹೇಳಿದರೂ ಅದು ತರ್ಕ ನೀತಿಗೆ ಗ್ರಾಹ್ಯವಾಗದು. ಸೂರ್ಯನ ಹತ್ತಿರ ಯಾವನಿಗೂ ಯಾವ ಯಂತ್ರಕ್ಕೂ ಹೋಗಿ ಅದನನ್ನು ಮುಟ್ಟಿ ರೂಪಾಂತರ ಹೊಂದದೆ ಹಿಂಬರಲು ಸಾಧ್ಯವಿಲ್ಲದೆಂದಾಕ್ಷಣ ಭೂಮಿಗೂ ಸೂರ್ಯನಿಗೂ ಇರುವ ದೂರ ಅಪ್ರಮೇಯ ಎಂದರೆ ಅಂಥ ಹೇತ್ವಾಭಾಸವನ್ನು ಉಳಿಯಗೊಟ್ಟಂತೆಯೇ ಆಗುವುದು. ಇದನ್ನು "ವ್ಯಾಪ್ಯತ್ವಾಸಿದ್ಧ" ಹೇತ್ವಾಭಾಸವೆಂಬುದು ಭಾರತೀಯ ರೂಢಿ.

ಪೂರ್ಣ ಸಂಖ್ಯೆಗಳು ಅಪ್ರಮೇಯ— (ಪ್ರತಿಜ್ಞಾವಾಕ್ಯ)

ಎಣಿಸಲು ಸಾಧ್ಯವಾದುದರಿಂದ—(ಹೇತುವಾಕ್ಯ)

ಯಾವ ಯಾವುದು ಅಸಂಖ್ಯೇಯವೋ ಅದೆಲ್ಲವೂ ಅಪ್ರಮೇಯ:
ಒಟ್ಟು ಮಾನವರೆಲ್ಲರ ತಲೆ ಕೂದಲುಗಳ ಹಾಗೆ—(ಉದಾಹರಣವಾಕ್ಯ)

ಇದೂ ಅದರಂತೆಯೇ ಇದೆ – (ಉಪನಯವಾಕ್ಯ)

ಆದುದರಿಂದ ಪೂರ್ಣಾಂಕಗಳು ಅಸಂಖ್ಯೇಯ—(ನಿಗಮನವಾಕ್ಯ)

ಎಣಿಸಲಸಾಧ್ಯವೆಂಬುದು ನಿಜವಾಗ ಬೇಕಾದರೆ ಪ್ರಯೋಗವಿಜ್ಞಾನವು ಮತ್ತು ಹೆಚ್ಚು ಶಕ್ತಿಯುಳ್ಳ ಹಾಗೂ ವೇಗವುಳ್ಳ ಎಣಿಕೆಯ ಯಂತ್ರಗಳನ್ನು ಕೊನೆಯೇ ಇರದಂತೆ ರಚಿಸುತ್ತ ಹೋಗಬೇಕಾಗುವುದು. ಹಾಗೆ ಮಾಡಿ ಅದು ಅದನ್ನು ಸಿದ್ಧಮಾಡಿದ ಮೇಲೆ ಅಸಂಖ್ಯೇಯತೆಗೆ—ಅಪ್ರಮೇಯತೆಗೆ (ಅಪ್ರಮಿತತೆಗೆ) ತಕ್ಕ ವ್ಯಾಪ್ತಿಯು ಉಂಟಾಗುತ್ತದೆ. ಅಲ್ಲಿಯವರೆಗೆ ಅದರ ವ್ಯಾಪ್ತಿಯು ಅಸಿದ್ಧ (Unproved). ಹಾಗೆ ಸಿದ್ಧಮಾಡಬೇಕಾದ ಕೆಲಸ ಉಳಿದಿರುವುದೊಂದು ಉಪಾಧಿ. ಆದುದರಿಂದ ಎಣಿಸಲಸಾಧ್ಯವೆಂಬುದು ವ್ಯಾಪ್ಯತ್ವಾಸಿದ್ಧವಾದ ಹೇತು. ತ್ರೈಕಾಲಿಕವಾದ ಅನುಭವಿಕ ಸಾಧ್ಯತೆ-ಅಸಾಧ್ಯತೆಗಳನ್ನು ಉಪಾಧಿಯನ್ನಾಗಿ ಹಿಡಿಯುವುದು

ಪರಾರ್ಥಾನುಮಾನದಲ್ಲಿಲ್ಲದಿದ್ದರೂ ರಸೆಲ್ಲನ ಮೂಲ ನ್ಯಾಯವಾಕ್ಯವು ಅದನ್ನಾಧರಿಸಿದ್ದರಿಂದ ಅದಕ್ಕೆ ಜಾತ್ಯುತ್ತರವೆಂದು ಅದನ್ನಿಲ್ಲಿ ಉಪಾಧಿಯೆಂದು ಗ್ರಹಿಸಲೇ ಬೇಕಾಗಿಬರುತ್ತದೆ.

ಆಲ್ಬರ್ಟ್ ಐನ್‌ಸ್ಟೀನನ ಪ್ರಕಾರ (Space) ದೇಶವೆಂಬುದು ಪ್ರಮೇಯ. ಅದರಲ್ಲಿ ಎಷ್ಟು ಪೂರ್ಣಾಂಕಗಳನ್ನು ತುಂಬಿದರೂ ಅದು ಪ್ರಮೇಯವೆಂಬುದನ್ನು ಯಾರೂ ಸುಲಭವಾಗಿ ತಿಳಿದುಕೊಳ್ಳಬಹುದು. ಏಕೆಂದರೆ, ಪ್ರಮೇಯದಲ್ಲಿ ಅಪ್ರಮೇಯ ಹಿಡಿಸುವುದೆಂಬುದು ಅಸಾಧ್ಯ. ಅದರಿಂದಲೇ ಗಣಿತಶಾಸ್ತ್ರಕಾರರು Infinity ಅಪ್ರಮೇಯವನ್ನು ಅಂಕೆಯೆಂದು ಗಣಿಸುವುದಿಲ್ಲವೆಂದು ತೋರುತ್ತದೆ. ಇದನ್ನು ಗಣಿತಶಾಸ್ತ್ರಜ್ಞರು ಪರಾಮರ್ಶಿಸಲಿ.

ಭೌತಶಾಸ್ತ್ರವೂ ಗಣಿತಶಾಸ್ತ್ರವೂ ತಾರ್ಕಿಕವಿಶ್ಲೇಷಣವಾದಕ್ಕೆ ವಿಷಯಗಳನ್ನು ಒದಗಿಸಿಕೊಟ್ಟಿವೆ ಎಂದು ರಸೆಲ್ ಹೇಳಿದಾಗ ಇತರ ಶಾಸ್ತ್ರಗಳ ವಿಷಯಗಳು ಅವುಗಳ ವಿಷಯಗಳಷ್ಟು ವಿಶ್ಲೇಷಣಾರ್ಹವಲ್ಲ ಎಂಬ ಧ್ವನಿ ಹೊರಡುತ್ತದೆ. ಈ ಧ್ವನಿಯು ಸ್ವಕಪೋಲಕಲ್ಪಿತ ಸಿದ್ಧಾಂತ, ಆತನ ಮನಸ್ಸು ತಿಂದ ಮಂಡಿಗೆ, ಮತ್ತೇನೂ ಅಲ್ಲ. ಐನ್‌ಸ್ಟೀನ್ ಹೇಳಿದ ಘಟನೆಗಳು (Events) ಭೌತಿಕ ಮಾತ್ರ. ಅದರಿಂದ ಇತರ ಘಟನೆಗಳು ವಿಚಾರಾನರ್ಹವೆಂದಾಗದು, ಸತ್ಯರಹಿತವೆಂದಾಗದು. ಭೌತಘಟನೆಗಳಿಗೆ ಸಹಜಗುಣ (Properties) ಗಳಿರುವುವೆನ್ನುತ್ತಾನೆ ರಸೆಲ್. ಅಂದರೆ ಅವನ ಪ್ರಕಾರ (ಭೌತ) ಕ್ರಿಯೆಯು ಧರ್ಮಕ್ಕೆ (ಸಹಜ ಗುಣಗಳಿಗೆ) ಆಶ್ರಯವಾಗಬಲ್ಲದು; ದ್ರವ್ಯವೆಂದರೆ ಘಟನಾಸಮೂಹ. ಭೌತ ಅಣುವಿನಲ್ಲಿ ಕೆಲಕಾಲ ಒಂದು ಸ್ಥಿತಿಯಿದ್ದು ಕೂಡಲೇ ಭಿನ್ನ ಸ್ಥಿತಿಯುಂಟಾಗುವುದು ಕಂಡು ಬಂದುದರಿಂದ ಚಲನವು (Motion) ಯಾವಾಗಲೂ ಸತತ (Continuous) ಎಂಬ ನಂಬಿಕೆಯನ್ನು ಬಿಡಬೇಕು-ಎಂಬುದೂ ರಸೆಲ್ಲನ ಮತ. ಮನಃಸ್ಥಿತಿಗಳೆಲ್ಲವೂ ಆತ್ಯಂತಿಕವಾಗಿ Conditioned Reflexes ಉಪಾಹಿತ ಕ್ಷೇಪಗಳೆಂಬುದೂ ಅವನ ನಂಬಿಕೆ. ಅದರ

ಪ್ರಕಾರ ಜೇಮ್ಸ್ ಹೇಳಿದ ತರಸ್ಥಾದ್ವೈತ ಸಿದ್ಧಿಸುತ್ತದೆ— ಅಂದರೆ ಭೌತವೂ ಮಾನಸವೂ ಸಾರತಃ ಒಂದೇ ಜಾತಿಗೆ ಸೇರಿದಂಥವು: ಕೆಲ ಘಟನೆಗಳು ಕೇವಲ ಭೌತಿಕವಾದರೆ ಉಳಿದ ಘಟನೆಗಳು ಭೌತ-ಮಾನಸ ಸ್ವರೂಪದವುಗಳು. ಇದರಿಂದ ಶುದ್ಧವಾದ ಮಾನಸಿಕ ಘಟನೆಗಳಿಗೆ ಸತ್ಯ ಮೌಲ್ಯವಿಲ್ಲವೆಂದು ಧ್ವನಿತವಾಗುವುದು. ಮತ್ತೆ ಅವನು ಸತ್ಯದ ಕ್ಷೇತ್ರದ ವ್ಯಾಪ್ತಿಯನ್ನು ಹೀಗೆ ನಿರ್ದಿಷ್ಟಗೊಳಿಸುತ್ತಾನೆ: ಸೂರ್ಯ-ಚಂದ್ರರು ಭಿನ್ನ. ಸಾಮಾನ್ಯನು ಕಾಣುವ ಸೂರ್ಯನು ಖಗೋಲ ಶಾಸ್ತ್ರಜ್ಞ ತಿಳಿದ ಸೂರ್ಯನಿಂದ ಭಿನ್ನ; ಹಾಗೇ ಅವನಿಗೆ ಕಾಣಿಸಿದ ಚಂದ್ರನು ಇವನು ತಿಳಿದ ಚಂದ್ರನಿಂದ ಭಿನ್ನ. ಹೀಗೆ ಪ್ರತ್ಯಕ್ಷ-ವಿಜ್ಞಾನಗಳ ಬಲದಿಂದ ತಿಳಿದ ರಚನಾಗತವಾದ ಅಮೂರ್ತ ಧರ್ಮಗಳ ಮೇಲಿನಿಂದ ಭೇದ ಚತುಷ್ಟಯ (ಅವನ ಸೂರ್ಯ-ಚಂದ್ರ + ಇವನ ಸೂರ್ಯ–ಚಂದ್ರ = ೪) ಲಭ್ಯವಾಗುತ್ತದೆ.

ಪ್ರತ್ಯಕ್ಷ ಸೂರ್ಯ —> ಪ್ರತ್ಯಕ್ಷ ಚಂದ್ರ
| |
V V
ವಿಜ್ಞಾನಸೂರ್ಯ —> ವಿಜ್ಞಾನಚಂದ್ರ

ಒಂದರ್ಥದಲ್ಲಿ ಸೂರ್ಯನು ದುಂಡಾಗಿದ್ದಾನೆ ಎನ್ನಬಹುದು; ಆದರೆ ಆ ದುಂಡುತನವು ಪ್ರತ್ಯಕ್ಷದಲ್ಲಿ ಕಾಣುವ ಅವನ ದುಂಡುತನಕ್ಕೆ ತೀರ ಹೊಂದುವಂಥದಲ್ಲ. ಆದರೆ ಅದು ಪ್ರಕಾಶಮಾನವಾಗಿದೆ ಅಥವಾ ಬಿಸಿಯಾಗಿದೆ ಎಂದು ನಂಬಲು ನಮಗೆ ಅಧಿಕಾರವಿಲ್ಲ. ಏಕೆಂದರೆ ಭೌತಶಾಸ್ತ್ರವು ಬೆಳಕು-ಬಿಸಿಗಳು ಆಭಾಸಿಕ ಎಂದು ತೋರಿಸಿಕೊಡಬಲ್ಲದು. ಈ ಉದಾಹರಣೆಯಿಂದ ರಸೆಲ್ ನಂಬುವ ಸತ್ಯದ ಲಕ್ಷಣವು ತೀರ ಸ್ಪಷ್ಟವಾಗುತ್ತದೆ. ಭೌತಿಕವೊಂದನ್ನುಳಿದು ಇನ್ನಾವ "ಸತ್ಯ"ವನ್ನು ಸತ್ಯವೆಂದೂ ಹೇಳಲು ರಸೆಲ್ ನಮಗೆ ಅಧಿಕಾರ ಕೊಡನು! ಭೌತಿಕ ಸತ್ಯಗಳು ಏಕವಲ್ಲ, ನಿತ್ಯವಲ್ಲ, ಪೂರ್ಣವಲ್ಲ, ನಿರಪೇಕ್ಷವಲ್ಲ,

ಆತ್ಯಂತಿಕವಲ್ಲ—ಭಾರತೀಯ ವೇದಾಂತದ ಪ್ರಕಾರ; ಹಾಗೇ ಅವು ವ್ಯಾವಹಾರಿಕವೂ ಅಲ್ಲ—ಪ್ರತ್ಯಕ್ಷವಾದರೆ ಮಾತ್ರ ಅವು ವ್ಯಾವಹಾರಿಕ ನಶ್ವರಸತ್ಯಗಳೆನ್ನಿಸಬಲ್ಲವು: ಆದುದರಿಂದ ಅವುಗಳನ್ನು ಪ್ರತ್ಯಕ್ಷಾತೀತ ಆನುಮಾನಿಕ ಸತ್ಯಗಳೆನ್ನಬಹುದಾಗಿ ತೋರುತ್ತದೆ.

ಟಿಪ್ಪಣಿ:

ರಸೆಲ್ ಲಕ್ಷಿಸಿದ ಸತ್ಯಜಾತಿಗಿಂತ ಭಿನ್ನವಾದವುಗಳೆಲ್ಲವೂ Deep seated prejudices ಜನರಲ್ಲಿ ಆಳವಾಗಿ ಬೇರೂರಿದ ಪೂರ್ವಗ್ರಹಗಳೆಂದು ಅವನು ಘೋಷಿಸಿದ್ದಾನೆ. ಆದುದರಿಂದ ಅವುಗಳನ್ನಷ್ಟೇ ಆಧರಿಸುವವರು ಆತನು ಹೇಳುವ ಜಾತಿಯ ಸತ್ಯವು ಅವನಲ್ಲಿ ಆಳವಾಗಿ ಬೇರೂರಿದ ಪೂರ್ವಗ್ರಹವೆಂದು ಸಾರಬಹುದು. ಏಕೆಂದರೆ, ಸತ್ಯದ ಭೌತಿಕತೆ, ಘಟನಾತ್ಮಕತೆ ಅಥವಾ ಜಡಶಕ್ತಿಚಲನಸ್ವರೂಪವು ಮಾತ್ರ ಆಧೇಯವೆಂದು ಹೇಳಲು ಅವನು ಯಾವ ಸಮರ್ಥನೆಯನ್ನೂ ಕೊಡಲಿಲ್ಲ. ಕ್ರಿಯೆ (ಘಟನೆ, ಚಲನೆ) ಪ್ರವ್ಯಾಭಾಸವನ್ನು ತೋರಿಸುವುದೆಂದಾದರೆ ಎಲ್ಲ ಕ್ರಿಯೆಗಳೂ ಯಾವಾಗಲೂ ಹಾಗೇಕೆ ತೋರಿಸುವುದಿಲ್ಲ? ಕ್ರಿಯೆಗಳಲ್ಲಿ ಎಷ್ಟು ಜಾತಿಗಳಿವೆ? ಪ್ರವ್ಯಾಭಾಸಕ್ಕೆ ಕ್ರಿಯೆ ಆಶ್ರಯವಾಗಬಹುದಾದರೆ ಕ್ರಿಯೆಗೆ ಯಾವುದಾದರೂ ಆಶ್ರಯ ಬೇಡವೆ? ಕ್ರಿಯೆಯು ಸಾಪೇಕ್ಷ ಚಂಚಲವೋ ನಿರಪೇಕ್ಷ ಚಂಚಲವೋ? ಅದು ಸಾಪೇಕ್ಷವಾದರೆ ಯಾವುದಕ್ಕೆ? ಪರಸ್ಪರ ಸಾಪೇಕ್ಷತೆ ಕ್ರಿಯೆಗಳಲ್ಲಿದೆಯೆಂದರೆ ಅಂಥ ಕ್ರಿಯೆಗಳು ಅಸಂಖ್ಯೇಯವೋ (ಅಪ್ರಮೇಯವೋ) ಸಂಖ್ಯೇಯವೋ (ಪ್ರಮೇಯವೋ)? ಅವುಗಳಲ್ಲಿ ಕಾರ್ಯಕಾರಣ ಭಾವವಿದೆಯೋ ಅಕಸ್ಮಾತ್ತಾದ ಸಂಪರ್ಕವಿದೆಯೋ? ಕಾರ್ಯಕಾರಣ ಸಂಬಂಧವಿದ್ದರೆ ಯಾವ ಕ್ರಿಯೆ ಆದಿ ಕಾರಣ? ಆಕಸ್ಮಿಕತೆ ಸಂಬಂಧವಲ್ಲಿದೆಯೆಂಬುದು ತರ್ಕಬಾಹಿರ ವಿಚಾರ! ಕ್ರಿಯಾಶಕ್ತಿ ಗುರುವಾದ ರಸೆಲ್ಲನು ಈ ಎಲ್ಲ ಪ್ರಶ್ನೆಗಳಿಗಲ್ಲದೆ ಇನ್ನೂ ಅನೇಕ ಪ್ರಶ್ನೆಗಳಿಗೆ ತರ್ಕಬದ್ಧವಾದ ಉತ್ತರವನ್ನು ಕೊಡುವವರೆಗೆ ಅವನ ವಾದ

ಲಂಬಿ ಸಿದ್ಧಾಂತವು ಸ್ವೀಕಾರಾನರ್ಹ: ಭೌತಶಾಸ್ತ್ರದ ನಿಗಮನವೇನಾದರೂ ಬದಲಾದರೆ ಕೂಡಲೇ ಅವನ ಸಿದ್ಧಾಂತವೂ ಸತ್ಯಲಕ್ಷಣ-ಸತ್ಯಸ್ವರೂಪಗಳೂ ಬದಲಾಗಬೇಕಾಗುತ್ತವೆ. ಕ್ರಿಯಾನಿರಾಶ್ರಯತೆಯು, ಕ್ರಿಯೆಯ ಕಾರಣ ರಹಿತತೆಯು, ಕ್ರಿಯಾಽಸಂಖ್ಯೇಯತೆಯು (ಅಪ್ರಮೇಯಕತೆಯು), ಕ್ರಿಯಾ ಜಾತ್ಯೈಕ್ಯವು, ಕ್ರಿಯಾಭೌತಿಕೈಕತೆಯು, ಕ್ರಿಯಾ ಮಾತ್ರಸತ್ಯತೆಯು ನಿಗಮನಗಳೆಲ್ಲವೂ ಅಸಿದ್ಧಗಳಾಗಿವೆ. ಪ್ರತ್ಯಕ್ಷವು ಐಂದ್ರಿಯಕ ಆಭಾಸ ವಾದರೆ ವೈಜ್ಞಾನಿಕ ತಿಳಿವಳಿಕೆಯು ಬೌದ್ಧಿಕ ಆಭಾಸ ಹೇಗಲ್ಲ? ಬುದ್ಧಿ ಯೆಂಬ ಭೌತಕ್ರಿಯೆ ಉಳಿದ ಭೌತಕ್ರಿಯೆಗಳ "ಜ್ಞಾನವನ್ನು" (ಅಥವಾ ಕ್ರಿಯೆಯನ್ನೋ!) ಹೇಗೆ ಮಾಡಿಕೊಳ್ಳಲು ಸಮರ್ಥವಾಯಿತು? ಅದು ಮಾಡಿಕೊಂಡ ಅರ್ಥ ನಿಜವೆನ್ನಲು ಅದರ ವೈಜ್ಞಾನಿಕ ಸಾಧನರೂಪದ ಕ್ರಿಯೆಯ ಸತ್ಯತೆ ಮೊದಲು ಸಿದ್ಧವಾಗಿರಬೇಡವೆ? ಅದರ ಸತ್ಯತೆ ಪ್ರತ್ಯಕ್ಷಾನುಮಾನ ಉಪಮಾನ ಶಬ್ದಗಳಲ್ಲಿ ಯಾವುದರಿಂದಲಾದರೂ ಸಿದ್ಧ ವಾದಷ್ಟುಂಟೇ? ಉಪಮಾನ-ಶಬ್ದ ಮತ್ತು ಪ್ರತ್ಯಕ್ಷನಿಷ್ಠ ಅನುಮಾನ ಗಳನ್ನು ಒಪ್ಪದೆ ಬಿಟ್ಟಮೇಲೆ ಅದರ ಸತ್ಯತೆ ಸ್ವತಃ ಪ್ರಮಾಣವೆಂದು ಹೇಳಬೇಕೆ? ಇದು ಯಾವ Heaven-sent intuition ದಿವ್ಯಪ್ರತಿಭಾವ ತಾರ? ಬೌದ್ಧಿಕವಾದ ವಿಜ್ಞಾನಜನ್ಯಜ್ಞಾನವು ಬುದ್ಧಿಕ್ರಿಯಾರಹಿತವಾಗಿ ಹುಟ್ಟಿತೆ? ಅದರ ಬುದ್ಧಿಸಾತ್ಮ್ಯಭಾವ ಅದರ ವೈಜ್ಞಾನಿಕತೆಯನ್ನು ಉಳಿಯಗೊಡುವುದೇ? ಬುದ್ಧಿಯು ಜಡಪ್ರಕೃತಿಗಿಂತ (ಭೌತಪ್ರವೃತ್ತಿಗಿಂತ) ಭಿನ್ನವಲ್ಲವಾದಾಗ ಅದೂ ಅದರಲ್ಲಿಯ "ಜ್ಞಾನ"ವೂ ಕ್ರಿಯೆಯೇ ಆಗ ಬೇಕಾಯಿತಲ್ಲ? ಅಂದರೆ ಕ್ರಿಯೆಯೂ "ಜ್ಞಾನ"ವೂ ಕ್ರಿಯಾತ್ಮಕವಾಗ ಬೇಕಾಯಿತು! ಹೌದೇ? ವಿಜ್ಞಾನವು ಅಬೌದ್ಧಿಕ ಕ್ರಿಯೆಯೋ? ವೈಜ್ಞಾನಿಕ ಜಡವೂ ಬೌದ್ಧಿಕ ಜಡವೂ ಬೇರೆ ಎಂದು ಜಡಾದ್ವೈತಿಯು ಗಣಿಸಿದ್ದು ಹೇಗೆ? ಹಾಗೆ ಗಣಿಸಿ ಶುದ್ಧ ಬೌದ್ಧಿಕ ಜಡಕ್ರಿಯಾತ್ಮಕ ಜ್ಞಾನವು ಅಸತ್ಪದಾರ್ಥವೆನ್ನಲು ಪ್ರಮಾಣವೆಲ್ಲಿದೆ?

ಶಾಸ್ತ್ರಜಾಲಂ ಮಹಾರಣ್ಯಂ ಬುದ್ಧಿಭ್ರಮಣಕಾರಿಣೀ ।
ವಾಗ್ವೈಖರೀ ಶಬ್ದಝರೀ ಭುಕ್ತಯೇ ನ ತು ಮುಕ್ತಯೇ ॥

ಎಂದು ತೋರುವ ತಾರ್ಕಿಕ ವಿಶ್ಲೇಷಣವಾದ, ಹಾಗೇ ಅವಕ್ಕೆ ಸಂಬಂಧಿಸಿದ Logical Positivism ತಾರ್ಕಿಕ ಅನುಷೇಧವಾದ— ಆಧುನಿಕ ಯೂರೋಪೀಯ ಪೂರ್ವಗ್ರಹಗಳು—ಕೇವಲ ಭೌತಿಕತೆಯ ಕ್ರಿಯಾತ್ಮಕ ಸ್ವರೂಪವುಳ್ಳದ್ದಷ್ಟೇ ಸತ್ಯ ಎಂಬುದೇ ಅವುಗಳಿಗೆ ಮೂಲಾಧಾರ.

ಕ್ರಿಯೆ ಚಲನಾತ್ಮಕ, ಪರಿವರ್ತನಾತ್ಮಕ. ಅದಕ್ಕೆ ಆಶ್ರಯವಾಗಿ ದೇಶ-ಕಾಲ ದಿಕ್ಕುಗಳು ಬೇಕು ಮತ್ತು ಕರ್ತೃ ಒಂದು ಅವಶ್ಯಕ. ದೇಶ ಕಾಲಗಳ ನಾಲ್ಕು ಅಳತೆಗಳು ಅದನ್ನು ಪರಿಸೀಮಿಸುವುದೆಂದು ಭೌತ ಶಾಸ್ತ್ರ ಹೇಳಿದರೆ, ಅದರಿಂದ ಆದೊಂದು ಘಟನೆ (Event) ಸಂಗತಿ (Fact) ಎಂದಾದರೆ, ಭೌತಿಕವಾದ ಜ್ಞಾತೃ-ಜ್ಞೇಯ-ಜ್ಞಾನಗಳೇ ಸತ್ಯ-ತಾರ್ಹವೆಂದು ಏಕೆ ಹೇಳಬೇಕು ? ಭೌತಿಕತೆ ಎಂದರೇನು ? ವೈಜ್ಞಾನಿಕ ಸಾಧನರೂಪದ ಭೌತಿಕತೆಗೆ ಮಾತ್ರ ಸತ್ಯನಿಷ್ಕರ್ಷೆಯ ಅಧಿಕಾರ ಹೇಗೆ ಬಂದಿತು ? ಎಲ್ಲವೂ ಭೌತಿಕವೆಂದು ಹೇಳಿದಾಗ ಉಳಿದ ಭೌತಿಕ ಸಾಧನಗಳಿಗೇಕೆ ಅಂಥ ಅಧಿಕಾರವಿಲ್ಲ? ಕರ್ತೃವಿಲ್ಲದ ಕ್ರಿಯೆಯು ಯಾವಾಗ ಕರ್ತೃಸ್ಥಾನದಲ್ಲಿರುತ್ತದೆ, ಯಾವಾಗ ಕರ್ಮಸ್ಥಾನದಲ್ಲಿರುತ್ತದೆ ಮತ್ತು ಯಾವಾಗ ಕ್ರಿಯಾಸ್ಥಾನದಲ್ಲಿರುತ್ತದೆ? ಯಾವ ಜಡಕ್ರಿಯೆ ಅದರ ದೇಶ-ಕಾಲ- ಸ್ಥಾನಗಳನ್ನೂ ಪರಿಮಿತಸಾತತ್ಯವನ್ನೂ ನಿರ್ದಿಷ್ಟಗೊಳಿಸುತ್ತದೆ? ಈ ಎಲ್ಲ ಶಕ್ತಿಗಳನ್ನು ಭಿನ್ನ ಭಿನ್ನವಾಗಿ ಕ್ರಿಯಾಪುಂಜಗಳಲ್ಲಿ ಹೇಗೆ ಯಾವಾಗ ಯಾರು ನೆಲೆಗೊಳಿಸಿದರು? "ನಿಸರ್ಗ"ವೆಂದು ಹೇಳಿದರೆ ಅದೂ "ಭೌತ"ದಂತೆಯೇ ಅಲಕ್ಷಣಿತ (undefined) ಪದ—ಅಜ್ಞಾತಕ್ಕೆ ಪರ್ಯಾಯ ! ಭೌತಿಕ ಧರ್ಮಗಳ ಭೌತಿಕತೆಯಂತೆಯೇ ನಿಸರ್ಗಚಲನಗಳ ನೈಸರ್ಗಿಕತೆ ಲಂಗುಲಗಾಮಿಲ್ಲದ, ಗಡಿ-ಮಿತಿಗಳಿಲ್ಲದ, ಅರ್ಥರೂಪದ(?) ಕಟ್ಟೆಯಿಲ್ಲದ ತಟ್ಟೆ ! Finiteness ಪ್ರಮೇಯತ್ವವಿಲ್ಲದಲ್ಲಿ Definiteness ನಿಶ್ಚಿತತೆ, ನಿಷ್ಕೃಷ್ಟತೆ ಇರದು—ಎಂಬುದು ಪರಿಮಿತ ದೇಶಾವಕಾಶವುಳ್ಳ ವಿಶ್ವದಲ್ಲಿ ಅಭೇದ್ಯ, ಅಪ್ರತಿಹತ ಸತ್ಯ. ತನ್ನದೇ ಆದ ವಿಷಯ ಮತ್ತು ತಾರ್ಕಿಕ ಕ್ರಮಗಳಿಂದ ಯಾವುದಾದರೂ ಜಡಸತ್ಯವು ಸ್ಪಷ್ಟವಾಗದೆ ಹೋದರೆ ಆ ಪ್ರಕರಣವನ್ನು ಆನಾಮತ್ತಾಗಿ ಅನಿಶ್ಚಿತತೆಯಲ್ಲೇ ಇಟ್ಟಿರಬೇಕು

—ಎಂದಿದ್ದಾನೆ ರಸೆಲ್, ಇಂಥ ಅನಿಶ್ಚಿತತೆಗಳನ್ನಿಟ್ಟುಕೊಂಡೇ ಪ್ರಕೃತಿಯಿಂದ ಕಾರ್ಯಪ್ರವೃತ್ತನಾಗುವವ ನಿಜವಾದ ತತ್ವಜ್ಞಾನಿಯಂತೆ! ಅನಿಶ್ಚಿತತೆಯು ಆಶ್ಚರ್ಯಕ್ಕೆ ಕಾರಣವಾಗುವುದರಿಂದ ರಸೆಲ್ ಬಯಸದಿರುವ ವಿಧಿವಾದ (Law of Chance) ವನ್ನು ಹಿಡಿದಂತಾಗುವುದೆಂಬುದನ್ನು ಆತ ಕಂಡುಕೊಂಡಿಲ್ಲ!

ಆಲ್‌ಫ್ರೆಡ್ ನಾರ್ತ್ ವೈಟ್‌ಹೆಡ್ (೧೮೬೧ — ೧೯೪೭)

ಭೌತಶಾಸ್ತ್ರದ Relativity ಸಾಪೇಕ್ಷತಾವಾದವು ಅತಿಭೌತಶಾಸ್ತ್ರ ಸಂಪುಟದ ಬಾಯಿಯನ್ನು ತೆರೆಯುವ ಕೀಲಿಕೈ. ವಿಜ್ಞಾನದ ಅತ್ಯಮೂರ್ತ ಕಲ್ಪನೆಗಳನ್ನು ವಾಸ್ತವಿಕ ಸತ್ಯಪದಾರ್ಥಗಳೆಂದು ತಿಳಿಯಬಾರದು. ನಿಜವಸ್ತುವು ಒಂದೇ ಒಂದು. ಪ್ರತ್ಯಕ್ಷಜ್ಞಾನದಲ್ಲಿ ತೋರುವುದೆಲ್ಲಾ ಸತ್ಯ. ಕರ್ತೃರೂಪದ ವ್ಯಕ್ತಿಗಳು ಪಡೆಯುವ ಅನುಭವಗಳೆಲ್ಲವೂ ವಾಸ್ತವಿಕ. ಆ ಅನುಭವಗಳನ್ನು ಬಿಟ್ಟರೆ ಬೇರೆ ಯಾವುದೂ ಸತ್ಯವಲ್ಲ. ನಿಷ್ಕ್ರಿಯವಾದ ಕಲ್ಪನೆಗಳಾಗಲಿ, ದ್ರವ್ಯಗಳಾಗಲಿ, ಜಗತ್ತಿನಲ್ಲಿ ಇಲ್ಲ; ಅಲ್ಲಿರುವುದು ಘಟನೆಗಳ ಜಾಲ ಮಾತ್ರ. ಅಂಥ ಘಟನೆಗಳೆಲ್ಲವೂ ದೇಶ-ಕಾಲಿಕ ಏಕರೂಪಗಳ ನಿಜವಾದ ವಿಸ್ತಾರಗಳು, ವ್ಯಾಪಕ ಸ್ವರೂಪಗಳು. ತನ್ನ ತತ್ವಪ್ರಸ್ಥಾನವನ್ನು ವೈಟ್‌ಹೆಡ್ಡನು "ಅವಯವಿಕತೆಯ ತತ್ವಜ್ಞಾನ (The Philosophy of Organism)" ಎಂದು ಕರೆದುಕೊಂಡಿದ್ದಾನೆ. ಅದರ ಪ್ರಕಾರ ಘಟನೆಗಳು ಸಂಭವಿಸುವುದರಲ್ಲಿ ಪ್ರಾಕಾರಿಕ ಕ್ರಿಯಾನುಕ್ರಮ (Patterned Process) ವಿದೆ. ಎಲ್ಲ ಘಟನೆಗಳೂ (ಪದಾರ್ಥಗಳೂ) ತಮ್ಮಿಂದ ಭಿನ್ನವಾದ ಮಿಕ್ಕ ಪದಾರ್ಥಗಳೆಲ್ಲವುಗಳ ಬಗೆಗೂ Sensitive ಸೂಕ್ಷ್ಮ-ಖೇಂದ್ರಿಯವುಳ್ಳಂತಿರುತ್ತವೆ. ಅವುಗಳಲ್ಲಿಯ ಪರಸ್ಪರ ಸಂಬಂಧವು ಒಂದು ವಿಧದ Feeling ಭಾವನಾಸಂಬಂಧದಂತಿರುತ್ತದೆ. ಪ್ರತಿಯೊಂದು ವಾಸ್ತವಿಕ ಪದಾರ್ಥವೂ ಒಂದು "Prehensive occasion—ತಾನು ಪ್ರವೇಶಿಸುವ ಅಂಥ ಇತರ ಪದಾರ್ಥಗಳೊಡನೆ ಎಲ್ಲ ಕಾರ್ಯಮಾಡುವ ಸಂಬಂಧಗಳನ್ನೂ ಉಳ್ಳದ್ದಾಗಿರುತ್ತದೆ. Negative prehension

ನೈಷೇಧಿಕ ಕಾರ್ಯಮಯಸಂಬಂಧದಿಂದ ವಾಸ್ತವಿಕ ಪದಾರ್ಥವೊಂದರ ಅಸ್ತಿತ್ವವನ್ನು ಇನ್ನೂ ಚೆನ್ನಾಗಿ ನಿಶ್ಚಯಿಸಬಹುದು; ಅಂದರೆ ಆ ಪದಾರ್ಥ ವಲ್ಲದ ಎಲ್ಲವನ್ನೂ ಅದರಿಂದ ದೂರವೆಂದು ಭಾವಿಸುವುದು. ಹೀಗೆ ಪ್ರತಿಯೊಂದು ಭಾವನಾಂಶವೂ ಒಂದೊಂದು ಅನುಷೇಧಾತ್ಮಕ (ಅನುಷೇಧಿಕ) ಕಾರ್ಯಮಯಸಂಬಂಧ; ಪ್ರತಿಯೊಂದು ಅಮೂರ್ತಪದಾರ್ಥವೂ (Abstraction) ಒಂದೊಂದು ನೈಷೇಧಿಕ ಕಾರ್ಯಮಯಸಂಬಂಧ. ನಾಶ ಹೊಂದಿದಾಗ ಪ್ರತಿಯೊಂದು ವಾಸ್ತವಿಕ ಪದಾರ್ಥವೂ ತನ್ನ ವೈಯಕ್ತಿಕತೆಯನ್ನು ಕಳೆದುಕೊಳ್ಳುತ್ತದೆ; ಆದರೆ ವಿಶ್ವದ ಸೀಮಿತ ಯೋಜನಾ ಜಾಲದಲ್ಲಿ (Frame work) ಉಳಿದ ಪದಾರ್ಥಗಳೊಡನಿರುವ ತನ್ನ ಸಂಬಂಧಗಳ ಮೂಲಕ ಸಂರಕ್ಷಿತವಾಗಿರುತ್ತದೆ. ಸಂಭವಿಸಿದ ಘಟನೆ ಯೆಲ್ಲವೂ ಕೇವಲ ಸಂಗತಿ (Absolute fact) ಗಳಾಗಿ ಉಳಿದಿರುತ್ತವೆ. ಇದೊಂದನ್ನುಳಿದರೆ ವಾಸ್ತವಿಕ ಪದಾರ್ಥಗಳೆಲ್ಲವೂ ವಿಶ್ವದ Flux ಅಣವಿಕ ಪ್ರವಾಹದಲ್ಲಿ ಸಿಲುಕಿಕೊಂಡಿರುತ್ತವೆ. ಆ ಪ್ರವಾಹದಲ್ಲಿ ಸಾಧ್ಯತೆಗಳ (Possibilities) ರಾಜ್ಯದಿಂದ ನಿತ್ಯಪದಾರ್ಥಗಳ ಅಂತಃಪ್ರವೇಶವು (Ingression) ಆ ಅಣುಪ್ರವಾಹದಲ್ಲಿ ಆಗುವುದು. ನಿತ್ಯಪದಾರ್ಥಗಳೆಲ್ಲವೂ Universals ಸಾಮಾನ್ಯಧರ್ಮಗಳು. ವಾಸ್ತವಿಕ ಪದಾರ್ಥಗಳಿಗೆ (Entities) ಅವುಗಳ ಆಯ್ಕೆಯು ಅಗತ್ಯ. ಈ ಪ್ರಕಾರವಾಗಿ ವಾಸ್ತವಿಕ ಪ್ರಪಂಚವೆಂಬುದೊಂದು ನಿತ್ಯವಸ್ತುಗಳಿಂದ ಆಯ್ದುತೆಗೆದ ಕೆಲವು ಅಂಶ ಗಳು. ದೇವರು ಮೂರ್ತೀಕರಣದ (Concretion) ತತ್ವ. ಆ ತತ್ವವು ಉಕ್ತ ಆಯ್ಕೆಯನ್ನು ನಿರ್ಧರಿಸುತ್ತದೆ. ವಾಸ್ತವಿಕತೆಯು ಹೊಸತನ ದತ್ತ ಮುಂಬರಿಯುವಾಗ ಸಾಧ್ಯತೆಗಳನ್ನಾಯುವ ಕೆಲಸವು ದೇವರ Creativity ಸರ್ಜನಶೀಲಕ್ಕೆ ಹೊಸಲು. ಅದೇ ಜಗತ್ತಿನ ಆದಿಕಾರಣ. ಈ ಚಲನವನ್ನು (Movement) ದೇವರ ಪಾರಿಣಾಮಿಕ ಸ್ವಭಾವವೆಂದು ಹೇಳಬಹುದು. ನಿತ್ಯವಸ್ತುಗಳ (Eternal objects) ಶುದ್ಧವಾದ ಸಾಧ್ಯತೆ ಯನ್ನು ಅವನ ಮೂಲ ಸ್ವಭಾವ (ಮೂಲ ಪ್ರಕೃತಿ) ಎಂದು ಕರೆಯ ಬಹುದು.

ಟಿಪ್ಪಣಿಗಳು :

ವೈಟ್‌ಹೆಡ್ಡನ ತತ್ವಜ್ಞಾನದಲ್ಲಿ ಬರುವ ನಿತ್ಯಪದಾರ್ಥಗಳ ಸಾಮಾನ್ಯತೆಗಳು ಪರಮಾವಧಿಕ ಅಥವಾ ಪೂರ್ಣಸ್ವರೂಪದವುಗಳಲ್ಲ. ಅವು Finite universals ಪರಿಮಿತ ವ್ಯಾಪ್ತಿಗಳನ್ನುಳ್ಳ ಸಾಮಾನ್ಯತೆಗಳು ಅಥವಾ ಜಾತಿಗಳು. ಏಕೆಂದರೆ, "Kant's **transcendental dialectic** has proved that the forms of sensibility and understanding cannot be employed beyond the experience (of the empirical world) in order to define the nature of meta physical entities— ಕ್ಯಾಂಟನ ಅತೀಂದ್ರಿಯ ತರ್ಕಸಮರ್ಥನ ಶಾಸ್ತ್ರವು—ಇಂದ್ರಿಯಪ್ರತ್ಯಕ್ಷದ ಮತ್ತು ತಿಳುವಳಿಕೆಯ ರೂಪ (ಆಕಾರ) ಗಳನ್ನು ವ್ಯಾವಹಾರಿಕ ಜಗತ್ತಿನ ಆಚೆಗೆ ಅತಿಭೌತಪದಾರ್ಥಗಳನ್ನು ಲಕ್ಷಣಿಸುವುದಕ್ಕೆ ಬಳಸಲು ಸಾಧ್ಯವಿಲ್ಲವೆಂದು ಸಿದ್ಧಮಾಡಿದೆ". ಅದರ ಪ್ರಕಾರ ಅತೀಂದ್ರಿಯ ಲೋಕದಲ್ಲಿ ನಾನಾತ್ವವನ್ನು ಕಲ್ಪಿಸುವುದು ಕೇವಲ ಕಲ್ಪನಾವಿಲಾಸವಾಗಿ ಬಿಡುತ್ತದೆ. ಹಾಗೇ ಕೇವಲವೆನ್ನಿಸಿದ್ದೆಲ್ಲವೂ ನಿತ್ಯ ಅಸ್ತಿತ್ವವುಳ್ಳದ್ದಾಗದು; ಅದರ ನಿತ್ಯತೆ ಕಲ್ಪನೆ (Concept) ಯು ಅಥವಾ ಭಾವದ ರೂಪದಲ್ಲಿ ಎಲ್ಲಾದರೂ ಒಂದೆಡೆ ಅಭಿಜ್ಞಾತವಾಗಿಯೋ ಅನಭಿಜ್ಞಾತ ವಾಗಿಯೋ ಉಳಿದೀತೆಂಬ ಹಾರಯಿಕೆಯಷ್ಟೆ. ಕೈವಲ್ಯವು ತನ್ನತನ, ಆಮತನ; ತತ್ವ, ಅದರ ಭಾವ. ನಿತ್ಯತೆಯು ಅಸೀಮ, ಅಪ್ರಮೇಯ, ಅಪೂರ್ಣವಾಗಿ ಕಲ್ಪನೀಯ, ಅಂಗಾಂಗಿಭಾವರಹಿತ. ನಿತ್ಯತೆಗಳೆಂದಾಗ ಅವು ವೈಟ್ ಹೆಡ್ಡನ ಸಾಮಾನ್ಯತೆಗಳಂತೆಯೇ ಪರಿಮಿತ ಕಾಲವಿಭಾಗಗಳಾಗಿ ಬಿಡುತ್ತವೆ. ಆದುದರಿಂದ ಭಾರತೀಯ ಪರಮಸತ್ಯವು "ಏಕಂ ನಿತ್ಯಂ ಸರ್ವದಾ ಸಾಕ್ಷಿಭೂತಂ"—ಏಕವೂ ನಿತ್ಯವೂ ಮತ್ತು ಮಿಂಕೋವಸ್ಕಿ ಹೇಳಿದಂತೆ ದೇಶ-ಕಾಲಗಳ ಏಕೀಕೃತ ಕಲ್ಪನೆ ಇರುವ ಮಟ್ಟದಲ್ಲಿ ಮೂಲ ಸತ್ಯವು (ಜಡ ಕೂಡ) ನಿಷ್ಕ್ರಿಯ, ಅಚಲ, ಸಾಕ್ಷಿಭೂತ. ದೇಶ-ಕಾಲಗಳ ಕಲ್ಪನೆಗಳು ಪ್ರತ್ಯೇಕವಾದಾಗ ಮಾತ್ರ ಚಲ ಘಟನೆಗಳು ಜಗತ್ತಿನಲ್ಲಿ ಉದಯಿಸುತ್ತವೆ. ದೇಶ ಕಾಲೈಕ್ಯದಲ್ಲಿ ಯಾವ ಘಟನೆಯೂ ಘಟಿಸದು;

ಅದು ದೇಶ-ಕಾಲಗಳು ಭಿನ್ನವೆಂದು ತೋರಿದಾಗ ಘಟಿಸುವ ಘಟನೆಗಳೆಲ್ಲವು
ಗಳ ಭಿನ್ನತೆಯ ಮೂಲ ರೂಪ. ಪ್ರತ್ಯಕ್ಷ ಹಾಗೂ ತಿಳಿವಳಿಕೆಗಳ ಪ್ರತಿಮೆ
ಗಳೆಲ್ಲವೂ ಪ್ರಮೇಯಗಳು; ವ್ಯಾವಹಾರಿಕ (Empirical, Phenomenal)
ಘಟನೆಗಳೂ ಹಾಗೇ ಪರಿಮಿತತೆಗಳನ್ನುಳ್ಳಂಥವುಗಳು. ಪರಿಮಿತತೆ ಸಚ್ಛಿ-
ತ್ರತೆಗೆ, ಸ್ಪಷ್ಟತೆಗೆ, ನಶ್ವರತೆಗೆ, ಸಕ್ರಿಯತೆಗೆ, ರೂಪಾಂತರೀಕರಣಕ್ಕೆ ಮತ್ತು
ಚಲತ್ವಕ್ಕೆ ಕಾರಣ. ಅಪರಿಮಿತತೆ ಇಷ್ಟಲ್ಲಿ ಉಕ್ತ ಭಾವಗಳೊಂದೂ ಇರು-
ವುದಿಲ್ಲ. ದೇವರ ಸಾರ್ವಭೌಮನಿಯಾಮಕತ್ವವನ್ನು ವೈಟ್‌ಹೆಡ್ ಒಪ್ಪಿರು
ವುದರಿಂದ ಅವನು ಹೇಳುವ ನಿತ್ಯ "ಸಾಧ್ಯತೆಗಳು" ದೇವರ ಸರ್ಜನಾತ್ಮಕ
ವಾದ ಶಕ್ತಿ, ಮಾಯೆ, ಪ್ರಕೃತಿ ಎನ್ನಬಹುದು. ಮಾಯೆಯಿಂದ ದೂರ
ಇರುವ ದೇವರ ಕಲ್ಪನೆ ನಿರ್ಗುಣಾತ್ಮಕ; ಅದನ್ನು ಬಳಸುವ ದೇವರ
ಕಲ್ಪನೆ ಸಗುಣಾತ್ಮಕ, ಈಶ್ವರಾತ್ಮಕ. ದೇವರೊಡನೆ ಇತರ ನಿತ್ಯ
ಪದಾರ್ಥಗಳನ್ನು ಒಪ್ಪುವುದು ಆಭಾಸಿಕವೇ ಆದ ದ್ವೈತವಾದ ಅಥವಾ
ನಾನಾತ್ವವಾದ. ಅದು ಕ್ಯಾಂಟ್ ಖಂಡಿತವಾಗಿದೆ. ನಾನಾತ್ವದಲ್ಲಿ ತೋರುವ
ಏಕತ್ವವು ನಿತ್ಯ; ನಾನಾತ್ವವು ಅನಿತ್ಯ ಅಥವಾ ಪರಿಣಾಮಿ ನಿತ್ಯ. ಹಾಗಲ್ಲ
ವಾದರೆ ಏಕತ್ವ-ನಾನಾತ್ವಗಳ ಸ್ವರೂಪಭೇದವು ಅಕಲ್ಪನೀಯವಾಗುತ್ತದೆ.
ಅನಿತ್ಯ ಏಕತ್ವಗಳ ಗುಂಪೇ ನಾನಾತ್ವ; ನಾನಾತ್ವವು ನಿತ್ಯ ಏಕತ್ವದಲ್ಲಿ
ಕಲ್ಪನೀಯವಲ್ಲದೆ (ಅದು ಅಪ್ರಮೇಯವಾದುದರಿಂದ), ಅದರಲ್ಲಿ ಇದಿದೆ
ಎನ್ನುವುದು ಕಲ್ಪನಾದೋಷ; ನಾನಾತ್ವವು ವ್ಯಾಪ್ಯ, ನಿತ್ಯಏಕತ್ವವು
ವ್ಯಾಪಕ. ಕಲ್ಪನಾಸ್ವಾಚ್ಛಂದ್ಯವು ಅಸಂಬದ್ಧ ಪ್ರಲಾಪ.

ಹಾಗೇ ಜಡಪ್ರಕೃತಿಯ ಭೌತವು ಸರ್ವಮೂಲವೆಂದು ಹೊರಡುವುದೂ
ಕಲ್ಪನಾಸ್ವಾಚ್ಛಂದ್ಯವಾಗುತ್ತದೆ. ಜೀವ-ಜ್ಞಾನಕ್ಕೆ ಇರುವ ವ್ಯಾಪಕತೆ ಜಡ
ಶಕ್ತಿಗಿಲ್ಲ. ಅದು ವ್ಯಾಪಕ, ಇದು ವ್ಯಾಪ್ಯ. ಹೀಗಿರುವಾಗ ಜೀವ-ಜ್ಞಾನ
(ಚೈತನ್ಯ) ಶಕ್ತಿಯು ಜಡಕ್ರಿಯೆಯ ವಿಕಾಸವೆಂದು ಹೇಳುವುದು
ಅಸಂಬದ್ಧ, ಅಸಂಗತ. ಘನ, ದ್ರವ, ಅನಿಲರೂಪಗಳಾಗಲಿ,
ಕ್ರಿಯಾರೂಪಗಳಾಗಲಿ, ಶಕ್ತಿರೂಪಗಳಾಗಲಿ ಚೈತನ್ಯದಷ್ಟು (ಜೀವಶಕ್ತಿ-
ಜ್ಞಾನ ಅಥವಾ ಪ್ರಜ್ಞಾಶಕ್ತಿಯಷ್ಟು) ಸೂಕ್ಷ್ಮವೂ ಅದರಿಂದಲೇ ವ್ಯಾಪಕವೂ

ಅಷ್ಟೆ. ಆದುದರಿಂದಲೇ ಭಾರತೀಯ ವೇದಾಂತವು ಬ್ರಹ್ಮನೆಂಬ ಅಥವಾ ಆತ್ಮವೆಂಬ ಶುದ್ಧ ಚೈತನ್ಯವನ್ನೇ ಸರ್ವಮೂಲವೆಂದು ಹೊರಡುತ್ತದೆ. ಈ ಔಚಿತ್ಯವನ್ನು ಚಾರ್ವಾಕರಾಗಲಿ, ಪಾಶ್ಚಾತ್ಯ ನಿರೀಶ್ವರ ದ್ರವ್ಯ-ಕ್ರಿಯಾವಾದಿಗಳಾಗಲಿ ಕಂಡುಕೊಳ್ಳಲಿಲ್ಲ. ವ್ಯಾಪ್ತಿಕಲ್ಪನೆಯು ಶುದ್ಧತೆಯನ್ನೇ ತರ್ಕಶುದ್ಧತೆ ಅವಲಂಬಿಸಿದೆ. ತರ್ಕದ ಸ್ವರೂಪವೇ ಊಹೆ (Imagination). (Incoherent) ಪರಸ್ಪರ ಹೊಂದಿಕೆ ಇಲ್ಲದ ಊಹೆಗೆ ತನ್ನನ್ನೇ ತಾನು ನಂಬಲಾರದ ಗತಿಯು ಪ್ರಾಪ್ತವಾಗುತ್ತದೆ. ಗರ್ಭಶಾಸ್ತ್ರ (Embryology) ದಲ್ಲಿ ಏಕೈಕವಾದ ಶುಕ್ಲ-ಶೋಣಿತ ಕಣವು ಸಾವಿರಾರು ವಿಧದ ಗುಣ-ಶಕ್ತಿಗಳನ್ನುಳ್ಳ ಕಣಗಳನ್ನು ಹಡೆಯುವ ಕಾರಣ-ಕಾರ್ಯಸಂಬಂಧವು ಮಾಯಾಶಕ್ತಿಗೆ (ಅಧ್ಯಾಸೋತ್ಪಾದಕ ಶಕ್ತಿಗೆ) ಸರಿಸಮಾನವಾಗಿದೆ. ನಾನಾ ಕಾರಣಗಳಿಂದ ಏಕಕಾರ್ಯ ಉಂಟಾಗುವುದು ಇಂದ್ರಿಯದ ಬಾಹ್ಯಪ್ರತ್ಯಕ್ಷಕ್ಕೆ ಗೋಚರ. ಏಕಕಾರಣದಿಂದ ನಾನಾ ಕಾರ್ಯರೂಪಗಳು ಉತ್ಪನ್ನವಾಗುವುದು ಗರ್ಭೋತ್ಪತ್ತಿ-ವಿಕಾಸಗಳ ಶಾಸ್ತ್ರಕ್ಕೆ ಗೋಚರ. ಕಾರಣದಲ್ಲಿ ತೋರದ (ಶುದ್ಧ ಚೈತನ್ಯದಲ್ಲಿಲ್ಲದ) ಗುಣಧರ್ಮಗಳು ಕಾರ್ಯದಲ್ಲಿ (ವಿಶ್ವದಲ್ಲಿ) ತೋರಿಬರುವುದರಿಂದಲೇ ವೇದಾಂತವು ಈ ಅದ್ಭುತ ಕಾರ್ಯಕಾರಣಭಾವವನ್ನು **ವಿವರ್ತ**ವೆಂದು ಹೇಳಿದೆ.

“ಸಾಪೇಕ್ಷತ್ವಾದನಾದಿತ್ವಾದ್ವೈಚಿತ್ರ್ಯಾದ್ ವಿಶ್ವವೃತ್ತಿತಃ
ಪ್ರತ್ಯಾತ್ಮನಿಯಮಾದ್ ಭುಕ್ತೇರಸ್ತಿ ಹೇತುರಲೌಕಿಕಃ”

ಎಂದು ಉದಯನಾಚಾರ್ಯನು ತನ್ನ ನ್ಯಾಯಕುಸುಮಾಂಜಲಿಯಲ್ಲಿ ವಿಶ್ವದ ಮೂಲ (ಆತ್ಯಂತಿಕ, ಆದಿ) ಕಾರಣವು ಅಲೌಕಿಕ, (Transcendental) ಅತೀಂದ್ರಿಯ, ಅತಿಮಾನಸ, ಅತಿಭೌದ್ಧಿಕ ಎಂದು ಸಿದ್ಧಮಾಡಿದ್ದಾನೆ. ಇಂದ್ರಿಯ, ವಿಜ್ಞಾನಸಾಧನ, ಭೌದ್ಧಿಕವೆನ್ನಿಸಿರುವ ತರ್ಕ ಮುಂತಾದ ಪ್ರತಿಯೊಂದೂ ಪರಿಮಿತಶಕ್ತಿಸಂಪನ್ನ ಪದಾರ್ಥಗಳಾಗಿರಲು ವಿಶ್ವದ ಪರಿಮಿತತೆಯೇ ಕಾರಣ; ಅವೆಲ್ಲವೂ ವಿಶ್ವಾಂತರ್ಗತ, ವಿಶ್ವವನ್ನು ಒಳಹೊರಗಿಂದ ವ್ಯಾಪಿಸಲು ಶಕ್ತವಾದವುಗಳಲ್ಲ. ಜ್ಞಾನದ

ಸಾಮಾನ್ಯ ಸಾಧನವಾದ ಹೋಲಿಕೆ (Comparison, analogy) ಕೂಡ ವಿಶ್ವಾಂತರ್ಗತ. ಅದರಿಂದಲೇ ಎಲ್ಲ ಧರ್ಮಗಳ ದೇವರೂ ವಿಶ್ವದಲ್ಲಿಯ ಒಂದಲ್ಲ ಒಂದು ಪದಾರ್ಥವನ್ನೋ ಗುಣಪುಂಜವನ್ನೋ ಪರಮ ಪ್ರಮಾಣದಲ್ಲಿ ಹೊಂದಿರುವಂತೆ ಕಲ್ಪಿತವಾದದ್ದು. ವಿಶ್ವೋತ್ತರ ಪದಾರ್ಥದ ಕಲ್ಪನೆ ತರ್ಕ(ಊಹಾ)ಶಕ್ತಿಗೆ ಅರ್ಧ ನಿಲುಕುತ್ತದೆ, ಪೂರ್ಣ ನಿಲುಕದು. ಅದರಿಂದಲೇ ಅದನ್ನು ಉಕ್ತ ಸಾಧನಗಳೆಲ್ಲವುಗಳಿಂದಲೂ ಭಿನ್ನವಾದ ಪ್ರತಿಭೆ(ಆತ್ಮಿಕ ಶಕ್ತಿ)ಯಿಂದ (Intuition) ಸಾಕ್ಷಾತ್ಕರಿಸಿಕೊಳ್ಳಬೇಕೆಂದು ವೇದಾಂತವು ಹೇಳಬೇಕಾಯಿತು. ಆದರೆ ವಿಶ್ವವನ್ನು ಒಳಹೊರಗೆ ಒಂದು ಪದಾರ್ಥ ವ್ಯಾಪಿಸಿದರೆ ವಿಶ್ವವೆಂಬ ಭಿನ್ನ ಪದಾರ್ಥಕ್ಕೆ ಎಲ್ಲಾದರೂ ಉಳಿದಿರಲು ಜಾಗವನ್ನು ಕಲ್ಪಿಸಲು ಸಾಧ್ಯವೇ? ಅದರಿಂದಲೇ ವಿಶ್ವವೊಂದು appearance ಆಭಾಸ, ಅದಕ್ಕೆ ವಿಶ್ವೋತ್ತರ ನಿತ್ಯಸತ್ಯವಾದ ಶುದ್ಧ ಚೈತನ್ಯವೊಂದೇ ಆಧಾರ ಎಂದು ಕಲ್ಪನಾ ಸಾಂಗತ್ಯವನ್ನು ತರುವ ಒತ್ತಾಯ ಉಂಟಾಯಿತು.

ಫ್ರಾನ್ಸಿಸ್ ಹರ್ಬರ್ಟ್ ಬ್ರಾಡ್ಲಿ (೧೮೪೬-೧೯೨೪)

ಮೇಲೆ ಹೇಳಿದ ಕಾರಣದಿಂದ ಬ್ರಿಟಿಷ್ ತತ್ವಜ್ಞಾನಿಯಾದ ಬ್ರಾಡ್ಲಿಯು ವ್ಯವಹಾರವಾದದಲ್ಲಿಯ ಸಂವೇದನಾವಾದದ ಹಾಗೂ ಪ್ರಯೋಜನವಾದದ ಅತಿರೇಕಗಳನ್ನು ತೊಳೆದು ಶುದ್ಧಮಾಡಲೆಂದು Absolute Idealism ಕೇವಲ ಧ್ಯೇಯವಾದವನ್ನು ಮಂಡಿಸಿದನು. ಅದರಲ್ಲಿ Degrees of Truth ಸತ್ಯದ ಅಂಶಗಳು ಅಥವಾ ಸತ್ಯವು ವಿವಿಧ ಆಂಶಿಕತೆಯಿಂದ ಕೂಡಿದ್ದು ಎಂಬ ಸಿದ್ಧಾಂತವನ್ನು ಸಾರಲಾಗಿದೆ; ಆ ಮೂಲಕ ಬ್ರಾಡ್ಲಿಯು ಕೊನೆಯಲ್ಲಿ Platonic Mysticism ಪ್ಲೇಟೋ ಯೋಗಸಮಾಧಿವಾದಕ್ಕೆ ಬಂದು ಮುಟ್ಟಿದನು. ಅದನ್ನು Impersonalistic Monism ಅವ್ಯೈಯಕ್ತಿಕ ಅದ್ವೈತವೆಂದೂ ಹೇಳುವುದುಂಟು. ಯೋಗ ಅಥವಾ ಅನುಭಾವವು ನೇರವಾದ ದೇವನಿಷ್ಠ ಸಾತ್ಮ್ಯಸಂಪರ್ಕ (Direct Communion with God) ದಿಂದ ಲಕ್ಷಣಿಸಲ್ಪಟ್ಟಿದೆ.

ಟಿಪ್ಪಣಿಗಳು :

ಶ್ರೀರಾಮಾನುಜರು ಆಂಶಿಕ ಸತ್ಯತೆಯ ವಾದವನ್ನು ಒಪ್ಪರು. ಏಕೆಂದರೆ ಪರಮ ಸತ್ಯವು ಅಖಂಡ, ಅವಿಭಾಜ್ಯ, ಏಕಮೇವಾದ್ವಿತೀಯ ಎಂಬ ಅನುಭವಕ್ಕೆ ಅದು ವಿರುದ್ಧವಾಗುತ್ತದೆ. ಈ ಪ್ರಕಾರ ಧ್ಯೇಯವಾದೀಯ ತತ್ವಜ್ಞಾನದಲ್ಲಿ ಯಾವಾಗಲೂ ದೃಷ್ಟಿದ್ವಯವಿರುತ್ತದೆ. ಶ್ರೀರಾಮಾನುಜರದು ಸಿದ್ಧರ ದೃಷ್ಟಿ; ಜಗತ್ತಿಗೆ ಒಂದಲ್ಲ ಒಂದು ತರದ ಸತ್ಯತೆಯನ್ನು ಅನ್ವ-ಯಿಸುವವರದು ಸಾಧಕರ ದೃಷ್ಟಿ. ಆಯಾ ದೃಷ್ಟಿ ಅವರವರಿಗೆ ಅನಿವಾರ್ಯ, ಅತ್ಯಾಜ್ಯ ಎಂಬುದನ್ನು ಗಮನಿಸಿದರೆ ದೃಷ್ಟಿವಿರೋಧ ಎಂದೂ ನಿತ್ಯವಲ್ಲ, ಅವಸ್ಥಾಭೇದವನ್ನು ಆಧರಿಸಿದ್ದು ಮತ್ತು ಸಾಧಕನು ಸಿದ್ಧನಾದ ಮೇಲೆ ಮಾತ್ರ ರಾಮಾನುಜವಾದವು ಅಖಂಡನೀಯ ಸತ್ಯ ಎಂಬುದು ಗೊತ್ತಾಗುತ್ತದೆ. ಅಂಶಿ-ಅಂಶ (ಇಡಿ-ಬಿಡಿ) ಭಾವವು ವಿಶ್ವಗತವಾದ ಬುದ್ಧಿಗೆ ಅವಿನಾಭಾವಿಯಾದದ್ದು; ಅದಿಲ್ಲದೆ ಅದು ಏನನ್ನೂ ಕಲ್ಪಿಸಲಾರದು. ಆದುದರಿಂದಲೇ ಕೇವಲಾದ್ವೈತ ವಿದ್ವಾಂಸರೂ ಭಾರತದಲ್ಲಿ ವ್ಯಾವಹಾರಿಕ ಸಂದರ್ಭಗಳಲ್ಲಿ ಪಾರಮಾರ್ಥಿಕ ದೇವರ ಅವತಾರ, ಅಂಶ, ಶಕ್ತಿ, ಭಾಗ ಎಂದು ಮುಂತಾಗಿ ನಾನಾತ್ವ ಬೋಧಕ ಪದಗಳನ್ನು ಬಳಸುತ್ತಾರೆ.

ವ್ಯಾಸವಾದಿಗಳಾದ ಶ್ರೀಶಂಕರರ ಪ್ರಕಾರ ಕೂಡ ವಿಶ್ವದ (ಅಜ್ಞಾನಿಗಳ) ದೃಷ್ಟಿಯಲ್ಲಿ ಬ್ರಹ್ಮನು ಸಗುಣ, ಈಶ್ವರ, ದೇವ, ವ್ಯಕ್ತಿತ್ವಸಂಪನ್ನವಾದ ಶಕ್ತಿ. ಅವರ ಧ್ಯೇಯವಾದವಾದರೋ ಸಂಪೂರ್ಣವೂ ಕೇವಲವೂ ಆದ ಬ್ರಹ್ಮವೆಂಬ ಆತ್ಮಸಾರಪ್ಯ ಐಕಾಂತಿಕ ಸತ್ಯದ ವಾದ. ಬ್ರಹ್ಮವು ಅವ್ಯಕ್ತಿಕ (Impersonal). ಆದರೆ ಬ್ರಹ್ಮಸಾತ್ಮ್ಯ (ಸಾಯುಜ್ಯ) ಲಭಿಸುವವರೆಗೆ ಸಾಧಕನು ವೇದಾಂತದ ಪರಮಸತ್ಯದ ಬಗೆಗೂ ವ್ಯಾವ-ಹಾರಿಕ ಕಲ್ಪನೆಯ ಪರಿಭಾಷೆಯನ್ನಲ್ಲದೆ ಇನ್ನಾವುದನ್ನೂ ಬಳಸಲಾರ. ಬ್ರಾಡ್ಲಿಯಾದರೂ ಮೊದಲು ಅಂಶಸತ್ಯ ಸಿದ್ಧಾಂತವನ್ನು ಹೇಳಿದ; ಕೊನೆಯಲ್ಲಿ ಯೋಗಸಮಾಧಿಪಾದದಲ್ಲಿ ಮುಗಿತಾಯವನ್ನು ಕಂಡನು. ನಿರ್ಗುಣ ಬ್ರಹ್ಮರೂಪದ ಪರಾತ್ಪರ ದೇವರಲ್ಲಿ ಐಕಾತ್ಮ್ಯಭಾವವನ್ನು ಅನು-ಭವಿಸುವುದೇ ಯೋಗ ಸಮಾಧಿಯ ಪರಾಕಾಷ್ಠೆ.

ಅಸೀಮವಾದ ಪರಮಸತ್ಯಕ್ಕೂ ಪರಿಮಿತವಾದ ವಿಶ್ವಸತ್ಯಕ್ಕೂ ಒಂದೇ ಸ್ವರೂಪವ ನಿರೂಪಿಸ್ಸುರೆ ಅಂಥ ಭೇದವನ್ನು ಮಾಡಲು ನಮಗೆ ಅಧಿಕಾರವಿಲ್ಲ. ನಿರೂಪಣಗಳು (ಅಥವಾ ಮಾನದಂಡಗಳು) ಭಿನ್ನಸ್ವರೂಪದವುಗಳಾಗಿರುವುದರಿಂದಲೇ ನಿತ್ಯ(ಪರಮ)ಸತ್ಯ ಬೇರೆ, ಅನಿತ್ಯ(ಪರಿಣಾಮಿ ನಿತ್ಯ)ಸತ್ಯ ಬೇರೆ ಎಂದು ವಿಭಾಗಿಸಲು ನಮಗೆ ಅಧಿಕಾರ ಬರುತ್ತದೆ. ಅನಿತ್ಯಸತ್ಯವನ್ನು ನಿತ್ಯಸತ್ಯದ ಸ್ವರೂಪದಿಂದ ತೀರ ಭಿನ್ನವಾದ ಸ್ವರೂಪವುಳ್ಳದ್ದೆಂದು ತಿಳಿದ ಮೇಲೆ ಅದನ್ನು ಆಭಾಸ (Appearance) ಎಂದು ಕರೆಯುವ ಅಗತ್ಯವುಂಟಾಯಿತು. ಆಭಾಸ (ಅವಿದ್ಯೆ, ಮಾಯೆ, ವಿವರ್ತ)ವನ್ನು ಸತ್ಯವೆನ್ನುವುದರಲ್ಲಿ ಔಚಿತ್ಯವನ್ನು ಕಾಣದವರು ಅದನ್ನು ಅಸತ್, ಅಸತ್ಯ ಎಂದರು; ಇತರರು ವ್ಯಾವಹಾರಿಕ-ಪ್ರಾತಿಭಾಸಿಕಸತ್ಯವೆಂದೇ ಹೇಳಿದರು. ಆಭಾಸವು ಒಂದು ತರಹದ ವಿಕೃತ ಪ್ರತಿಬಿಂಬ; ಜಗತ್ತು ಬ್ರಹ್ಮದ ವಿಕೃತ ಪ್ರತಿಬಿಂಬ. ಅದರಿಂದಲೇ ಸತ್ಯದ ದೃಷ್ಟಿಯಿಂದ ಹೆಸರಿಸುವುದರಲ್ಲಿ ಕೆಲಮಟ್ಟಿನ ಗೊಂದಲ ಉಂಟಾದದ್ದು. ತಾತ್ಪರ್ಯಗ್ರಹಣ ಮಾಡಬಲ್ಲವರಿಗೆ ಇದರಿಂದ ಗೊಂದಲ ವುಂಟಾಗದು. ನಾಮ, ರೂಪ (ಆಕಾರ), ದೇಶ, ಕಾಲ, ಬಣ್ಣ ಮುಂತಾದ ಗುಣಗಳು ಇಂದ್ರಿಯ ಪ್ರತ್ಯಕ್ಷದ ಕಕ್ಷೆಯಲ್ಲಿ ಮತ್ತು ತನ್ನಿಷ್ಠ ಅನುಭೂತಿಯ ಕಕ್ಷೆಯಲ್ಲಿ ಬರುತ್ತವೆ. ಇವೇ ಪರಿಸೀಮಾನದ ಕಾರಕಗಳು. ಸತ್, ಚಿತ್, ಆನಂದ, ಸತ್ಯ, ಜ್ಞಾನ, ಅನಂತ ಮುಂತಾದವುಗಳನ್ನು ಧರ್ಮ, ಗುಣ, ಉಪಾಧಿ, ವಿಶೇಷಣಗಳ ಕಕ್ಷೆಯಿಂದ ಹೊರಗಿಟ್ಟದ್ದು ಅನಿವಾರ್ಯತೆಯಿಂದ, ವ್ಯಾವಹಾರಿಕತೆ ಕೊಟ್ಟ ಅಸಹಾಯಕತೆಯಿಂದ. ಈ ಪರಂಪರೆಯನ್ನು ಪ್ರಶ್ನಿಸುವುದು ಒಣ ತರ್ಕವೆನ್ನಿಸುತ್ತದೆ. ಸತ್ವ, ರಜಸ್ಸು, ತಮಸ್ಸುಗಳೆಂಬ ದ್ರವ್ಯ-ಗುಣ-ಜ್ಞಾನ-ಕ್ರಿಯಾಸಾರಗಳು ಸಾಂಖ್ಯರು ಹೇಳುವಂತೆ ಜಡ ಪ್ರಕೃತಿಯ ಕಕ್ಷೆಯಲ್ಲಿ ಬರುವುವೆಂಬುದು ವೈಜ್ಞಾನಿಕವಾದರೂ "ಶುದ್ಧ ಸತ್ವ", "ಶುದ್ಧ ಬುದ್ಧಿ" ಎಂಬ ಪದಗಳಿಂದ ಶುದ್ಧ ಆತ್ಮ (ಪ್ರಪಂಚವನ್ನವಲಂಬಿಸದ ಚೈತನ್ಯ)ವನ್ನು ವರ್ಣಿಸಲು ಕೆಲವರು ಹೊರಟದ್ದು, "ಸಿಪಿಯನು ತಿಂದಿಹ ಮೂಕನವೊಲು ಇದೆ ಗಹನವು ಅವರ ವಿಚಾರ" ಎಂಬಂಥ

ವಾಗ್ಬಂಧನಕಾರಕ ಅನುಭವದ ಹಿಡಿತದಲ್ಲಿ ಸಿಕ್ಕಿದ ಕಾರಣದಿಂದ. ಪರಮ ಸಮಾಧಿಯನ್ನು ಯೋಗವು ಅಸಂಪ್ರಜ್ಞಾತ (Not known clearly) ಎಂದು ಕರೆದಿರುವುದು "ಮೌನಂ ವ್ಯಾಖ್ಯಾನಂ" ಎಂಬ ಪ್ರಸಿದ್ಧಿಗೆ ಕಾರಣ. "Mysticism, East and West" ಎಂಬ ಗ್ರಂಥದಲ್ಲಿ ರುಡೋಲ್ಫ್ ಒಟ್ಟೊ ಕೊಟ್ಟ ಅನುಭಾವ (ಯೋಗ) ವರ್ಣನೆಗಳನ್ನು ಓದುವುದು ಈ ಸಂದರ್ಭದಲ್ಲಿ ಹೆಚ್ಚು ಬೆಳಕನ್ನು ಬೀರಬಲ್ಲದಾಗಿದೆ.

"All problems of existence are essentially problems of harmony— ಬದುಕಿನ ಎಲ್ಲ ಸಮಸ್ಯೆಗಳೂ ಸಾರತಃ ಸಾಮರಸ್ಯದ ಸಮಸ್ಯೆಗಳು" ಎಂದರು ಶ್ರೀ ಅರವಿಂದರು. ಭೌತಿಕವು (Matter ಜಡಪ್ರಕೃತಿ) ಜೀವದ (Life) ಒಂದು ಪ್ರಚ್ಛನ್ನರೂಪ; ಜೀವವು ಪ್ರಚ್ಛನ್ನ ಪ್ರಜ್ಞೆಯ ಒಂದು ರೂಪ. "The attempt to deny or stifle a truth because it is yet obscure in its outward workings and too often represented by obscurantist superstition or a crude faith, is itself a kind of obscurantism— ಒಂದು ಸತ್ಯವು ತನ್ನ ಬಾಹ್ಯ ಕ್ರಿಯಾರೂಪದಲ್ಲಿ ಇನ್ನೂ ಅಸ್ಪಷ್ಟವಾಗಿದೆ ಅಥವಾ ಅನೇಕ ವೇಳೆ ಅಸ್ಪಷ್ಟತಾವಾದಿತ್ವದ ಕುರುಡು ನಂಬಿಗೆಯ ಅಥವಾ ಅಸಂಸ್ಕೃತ ಶ್ರದ್ಧೆಯ ಮೂಲಕ ಪಡಿಮೂಡಿದೆ-ಎಂಬಷ್ಟೇ ಕಾರಣದಿಂದ ಅದನ್ನು ಇಲ್ಲವೆನ್ನುವುದು ಅಥವಾ ಪ್ರಕಟವಾಗದಂತೆ ದಮನಮಾಡುವುದೂ ಒಂದು ವಿಧದ ಅಸ್ಪಷ್ಟತಾವಾದಿತ್ವವೇ ಆಗುವುದು" ಎಂದು ಕೊಟ್ಟ ಎಚ್ಚರಿಕೆಯು ಶ್ರೀ ಅರವಿಂದರದೇ. ಅವರೇ ಮುಂಬರಿಸಿದ್ದಾರೆ:

"ಭೌತನಿಸರ್ಗದಲ್ಲಿ ವಿಕಾಸವಿರುವುದು ನಿಜವಾದರೆ ಮತ್ತು ಆ ವಿಕಾಸವು ಅರಿವು ಉಳ್ಳ ಜೀವದ ಇರವಿನದಾದರೆ (ಅರಿವು ಅಥವಾ ಪ್ರಜ್ಞೆ ಮತ್ತು ಜೀವಶಕ್ತಿ ಎಂಬಿವೆರಡೂ ಆ ಇರವಿನ ಕೇಂದ್ರಬಿಂದುಗಳೂ ಸಾಮರ್ಥ್ಯಗಳೂ ಆಗಿರುವುದರಿಂದ), ಈ ಇರವಿನ, ಅರವಿನ, ಜೀವದ ಪೂರ್ಣತೆಯೆಂಬುದೇ ನಮ್ಮ ಅಭಿವೃದ್ಧಿಯ ಗುರಿಯಾಗಿರಬೇಕು. ಆ ಗುರಿಯತ್ತ ನಾವು ಒಲಿದಿದ್ದೇವೆ. ನಮ್ಮ ಭವಿತವ್ಯದ ಪೂರ್ವದ ಅಥವಾ ಉತ್ತರಾ

ಬೆಳೆದ ಅವಸ್ಥೆಯಲ್ಲಿ ಆ ಗುರಿಯು (ಧ್ಯೇಯವು, ಸತ್ಯವು) ಮೈದೋರಿಯೇ ತೋರುವುದು. ಜೀವದ ಹಾಗೂ ಜಡದ ಹುಟ್ಟು ಮೊದಲಿನ ಅಜ್ಞಾನಾವಸ್ಥೆಯಿಂದ ಹೊರಟು ಮೈದೋರಲಾರಂಭಿಸಿದ ಆತ್ಮ, ಚೈತನ್ಯ, ಸತ್ಯ ಎಂಬುದು ತನ್ನ ಇರವು-ಅರಿವುಗಳ ಸಂಪೂರ್ಣ ಸತ್ಯವನ್ನು ಜೀವ-ಜಡಗಳಲ್ಲಿ ವಿಕಾಸಗೊಳಿಸುತ್ತದೆ. ಅದು ತನ್ನನ್ನೇ ತಾನು ಸೇರಬಯಸುವುದು- ಅಥವಾ ಅದರ ಗುರಿಯು ತನ್ನ ಪರಬ್ರಹ್ಮವನ್ನು ಸೇರುವುದೇ ಆದರೆ, ಅದು ಹಾಗೆ ಹಿಂದಿರುಗಲು ಬಯಸುವುದು- ಅದರೆ ಆ ನಿವರ್ತನವು ಜೀವನದಲ್ಲಿ ನಿರಾಕರಣೆಯಾಗಿ ಅಲ್ಲ, ಜೀವನದಲ್ಲಿಯು ತನ್ನ ಆಧ್ಯಾತ್ಮಿಕ (ಚೈತನಿಕ) ಪೂರ್ಣತೆಯು ಮೂಲಕವೇ. ಅಜ್ಞಾನಾವರಣದಲ್ಲಿ ನಡೆವ ನಮ್ಮ ವಿಕಾಸದಲ್ಲಿ ಆಗೀಗ ನಮಗೆ ಸುಖ-ದುಃಖಗಳುಂಟಾಗುತ್ತಿರುತ್ತವೆ. ಯಾವುದರಿಂದ? ಸ್ವಸ್ವರೂಪದ ಆವಿಷ್ಕಾರ ಮತ್ತು ಜಗತ್ಸ್ವರೂಪದ ಆವಿಷ್ಕಾರಗಳಿಂದ, ಆ ವಿಕಾಸದ ಅರೆ-ಬಿರಕೆ ಸಿದ್ಧಿಗಳಿಂದ, ಅದರ ಸತತವಾದ ಶೋಧಕಾರ್ಯ ಮತ್ತು (ಶೋಧನೆಯ ಪದಾರ್ಥವು) ಕಣ್ಮರೆಯಾಗುವ ಸಂದರ್ಭಗಳಿಂದ. ಇದು ನಮ್ಮ ಹುಟ್ಟು ಮೊದಲಿನ ಸ್ಥಿತಿ. ಇದು ಅನಿವಾರ್ಯವಾಗಿ ನಮ್ಮನ್ನು (ಪರಬ್ರಹ್ಮ) ಜ್ಞಾನದವರೆಗೆ ವಿಕಾಸಕ್ರಮದಿಂದ ಒಯ್ದೇತೀರಬೇಕು. ಆ ಜ್ಞಾನವೆಂದರೆ, ಆತ್ಮದ ಸ್ವಶೋಧ ಮತ್ತು ಸ್ವ-ಆವಿಷ್ಕಾರ, ನಮಗಿನ್ನೂ ಅತಿನಿಗೂಢವಾಗಿಯೇ ಉಳಿದಿರುವ ನಿಸರ್ಗದಲ್ಲಿರುವ (ಪರಾಪ್ರಕೃತಿಯಲ್ಲಿರುವ) ತನ್ನ ನಿಜವಾದ ಶಕ್ತಿಯಲ್ಲಡಗಿರುವ ದೇವತ್ವ (ದಿವ್ಯತೆ) ದ "ಆತ್ಮಾವಿಷ್ಕಾರ". ಅಂದರೆ ಆತ್ಮದ (ಬದ್ಧ ಜೀವದ) ಸ್ವ-ಸ್ವರೂಪ ಜ್ಞಾನವು ಒಂದು ಮುಕ್ತಿ; ಪರಬ್ರಹ್ಮನಲ್ಲಿ ಆತ್ಮವು ಲೀನವಾಗುವುದು ಇನ್ನೊಂದು ವಿಧದ ಮುಕ್ತಿ. ಒಂದನ್ನು ಮೊದಲನೆಯ ಹಂತವೆನ್ನಬಹುದು, ಇನ್ನೊಂದನ್ನು ಕೊನೆಯ ಹಂತವೆನ್ನಬಹುದು. ಹೇಗೆಂದರೆ, ಜೀವಾತ್ಮನ ಮುಕ್ತಿಯು Higher supramental status ಉನ್ನತತರ ಅತಿಮಾನಸ ಸ್ಥಾನವೆನ್ನಲಾಗಿದೆ; ಅದು Highest ಅತ್ಯುನ್ನತ ಮಟ್ಟವಾದ ಬ್ರಹ್ಮೈಕ್ಯ ಹೊಂದಬಹುದು. ಮುಕ್ತಸ್ಥಿತಿಯೊಂದು ದಿವ್ಯಜೀವನ, ದೇವಸ್ಥ ಜೀವನ; ಅದರಲ್ಲಿ ಭೌತಿಕ ನಿಸರ್ಗ

ದಲ್ಲಿ ಮೈದೋರಿದ ದಿವ್ಯದೃಷ್ಟಿ, ದಿವ್ಯಶಕ್ತಿ, ದಿವ್ಯಸುಖ ಇರುತ್ತವೆ. ಮುಕ್ತರು ದಿವ್ಯಮಾನವರು, ಅತಿಮಾನವರು; ಅವರು ಆತ್ಮಜ್ಞಾನಿಗಳು ಚೈತನಿಕ ಆತ್ಮವನ್ನು ಬೆಳೆಯಿಸಿ ಕೊಂಡವರು, ಆತ್ಮದ ಉತ್ಕಟತೆಯನ್ನು ಒತ್ತಡವನ್ನೂ ಸಾಧಿಸಿಕೊಂಡವರು— ಅದರ ಮುಕ್ತಿಯನ್ನೂ ಅದರ ಸಾರ್ವಭೌಮವಾದ ಬೆಳಕು-ಶಕ್ತಿ-ಸೌಂದರ್ಯಗಳನ್ನು ಸಾಧಿಸಿಕೊಂಡವರು. ಮಾನವತೆಯ ಮೇಲಿನ, ಅದಕ್ಕೂ ಹೆಚ್ಚು ವ್ಯಾಪಕವಾದ ಧರ್ಮವೇ ಅತಿಮಾನವತೆ—ಅಲ್ಪವ್ಯಾಪ್ತಿಯ ಜೀವಾತ್ಮನು ಪರಮ ಮಹದ್ವ್ಯಾಪ್ತಿಯನ್ನು ಹೊಂದುವ ಜ್ಞಾನಿಜೀವನಕ್ರಮ— ಸುಖ-ದುಃಖಗಳಿಲ್ಲದ ಪರಮಾನಂದ ಸ್ಥಿತಿ, ಸಂಪೂರ್ಣ ಸಮಶ್ರುತಿಯ ಜೀವನ.

ಹತ್ತು ವಾದ ಪ್ರಕಾರಗಳು

೧. **ಧ್ಯೇಯವಾದ:** ಆದರ್ಶವು ಯಾವ ಸಿದ್ಧಾಂತಕ್ಕೆ ಮೂಲಭೂತ ಮಾನದಂಡವೋ ಅದು ಧ್ಯೇಯವಾದ; ಮನಸ್ಸು, ಆತ್ಮ, ಚೈತನ್ಯ, ಜೀವ ಅಥವಾ ಅವುಗಳಿಗೆ ಅತಿಮುಖ್ಯವೆನಿಸಿದ ಮೌಲ್ಯ—ಇವುಗಳನ್ನು ಒತ್ತಿಹೇಳುವ ಸಿದ್ಧಾಂತ. ಭೌತ(ಜಡಪ್ರಕೃತಿ)ವಾದಕ್ಕಿದು ವಿರುದ್ಧವಾದುದು. ಭೌತವಾದವು ದೇಶ, ಚಿತ್ರ, ಕಾಯ, ಇಂದ್ರಿಯ, ಮೌಲ್ಯಮಾಪನವಿಮುಖತೆ, ವಸ್ತುಸಂಗತಿ ಮತ್ತು ಯಂತ್ರಗಳಿಗೆ ಸಂಬಂಧಿಸಿದ ಅರ್ಥಗಳನ್ನು ಗಣ್ಯವೆನ್ನುತ್ತವೆ. ಧ್ಯೇಯವಾದವು ಅದೇಶ ಅತಿದೇಶ, ಅಚಿತ್ರ, ಅಕಾಯ, ಅತೀಂದ್ರಿಯ, ಮಾನದಂಡ ಅಥವಾ ಮೌಲ್ಯಮಾಪನ ಮತ್ತು ಉದ್ದೇಶ, ಗುರಿ, ಪರಮಾರ್ಥ, ಆತ್ಯಂತಿಕ ಕಾರಣ, ಬೆಲೆ, ಒಳಿತು ಮುಂತಾದವುಗಳಿಗೆ ಸಂಬಂಧಿಸಿದ ಅರ್ಥಗಳನ್ನು ಪ್ರಧಾನವಾಗಿ ತೆಗೆದುಕೊಳ್ಳುತ್ತವೆ. ಕಲ್ಪನೆ ಅಥವಾ ಭಾವ, ಮನಸ್ಸು, ಚೈತನ್ಯ, ಪುರುಷ ಮುಂತಾದವುಗಳ ಅರ್ಥವಿಸ್ತಾರವನ್ನು ಒಳಗೊಳ್ಳುತ್ತವೆ. ಪ್ಲೇಟೋವಿನ, ಪುರುಷನಿಷ್ಠ, ವಸ್ತುನಿಷ್ಠ, ನೈತಿಕ ಮುಂತಾದ ಧ್ಯೇಯವಾದಗಳು ಪಾಶ್ಚಾತ್ಯರಲ್ಲಿ ಪ್ರಸಿದ್ಧ.

೨. **ವಾಸ್ತವತಾವಾದ:** ಅಮೂರ್ತ ಅಥವಾ ಸಾಮಾನ್ಯ ಪದಗಳ ಅಥವಾ ಜಾತಿಗಳ ವಾಸ್ತವಿಕತೆಯನ್ನು ಎತ್ತಿ ಹಿಡಿಯುವ ಸಿದ್ಧಾಂತವೇ ವಾಸ್ತವತಾವಾದ. ಅವುಗಳ ವಾಸ್ತವಿಕತೆ ಕೆಲವು ಸಲ ಸಾಕ್ಷಾತ್ತಾದ ಭೌತಿಕ ಬಿಡಿವಸ್ತುಗಳ ವಾಸ್ತುವಿಕತೆಗಿಂತ ಹೆಚ್ಚಿನದೆಂದು ತಿಳಿದುಕೊಳ್ಳಲಾಗುತ್ತದೆ. ಸಾಮಾನ್ಯ ಧರ್ಮಗಳು ವಿಶಿಷ್ಟ ವಸ್ತುಗಳಿಗಿಂತ ಮೊದಲೇ ಇದ್ದಂಥವು. ನಾಮವಾದವು ಇವಕ್ಕೆ ವಿರುದ್ಧವಾದುದು. ಅದರ ಪ್ರಕಾರ ಬಿಡಿವಸ್ತುಗಳನ್ನಾಧರಿಸಿಯೇ ಸಾಮಾನ್ಯಧರ್ಮಗಳ ಅಸ್ತಿತ್ವವಿದೆ. ಶುದ್ಧಾಸ್ತಿತ್ವವಾದದ ಪ್ರಕಾರ (ಮೂಲಭೂತ ತತ್ವಗಳ, ವಸ್ತುಸಾರವಿಜ್ಞಾನದ, ಆತ್ಯಂತಿಕ ಪದಾರ್ಥಗಳ ಶಾಸ್ತ್ರದ ಪ್ರಕಾರ) (೧) ಸಾಮಾನ್ಯಧರ್ಮಗಳ ವಾಸ್ತುವಿಕತೆಯನ್ನು (ಸತ್ಯತೆಯನ್ನು) ಕೆಳಗಿಳಿಸುವುದು ತಪ್ಪು; ಅವುಗಳದು ಸಾರಗಳ ರಾಜ್ಯ; ಅವುಸಾಧ್ಯವಾದ ಸಾಮಾನ್ಯಗಳು; ಬಿಡಿವಸ್ತುಗಳ ಅಸ್ತಿತ್ವದಷ್ಟೇ ಆದರೂ ಸತ್ಯತೆ ಅವುಗಳಿಗಿವೆ. (೨) ಪ್ರಮಾಣಶಾಸ್ತ್ರದ ಪ್ರಕಾರ ಇಂದ್ರಿಯ ಪ್ರತ್ಯಕ್ಷವು ಪರಿಮಿತವಾಗಿಯಾದರೂ ವಸ್ತುಗಳ ಸತತವಾದ ಸತ್ಯಚಿತ್ರಗಳನ್ನು ಕೊಡುತ್ತದೆ. ವಸ್ತುಪ್ರಪಂಚದ ನೇರವೂ ಅನುಗುಣಾತ್ಮಕವೂ ಆದ ಜ್ಞಾನವನ್ನು ಪಡೆಯುವುದು ಸಾಧ್ಯ. ಪ್ಲೇಟೋ-ಅರಿಸ್ಟಾಟಲರದು ಒಂದೊಂದು ವಿಧದ ವಾಸ್ತವತಾವಾದಗಳು. ವೈಟ್‌ಹೆಡ್, ಹಾರ್ಟ್ಮನ್ ಮತ್ತು ಅಲೆಕ್ಸಾಂಡರರದು ಆಧುನಿಕ ವಾಸ್ತವತಾವಾದಗಳು.

೩. **ವಿಚಾರವಾದ:** ವಿಚಾರದದಲ್ಲಿ ಬೌದ್ಧಿಕ ಮತ್ತು ಆನುಮಾನಿಕ ಪ್ರಮಾಣಗಳಲ್ಲದೆ ಇಂದ್ರಿಯಪ್ರತ್ಯಕ್ಷವು ಸತ್ಯದ ನಿಕಷವಲ್ಲ. ಗಣಿತಶಾಸ್ತ್ರೀಯಕ್ರಮಗಳನ್ನು ತತ್ವಶಾಸ್ತ್ರದಲ್ಲಿಂದು ಅನುಪ್ರವೇಶ ಮಾಡಿದೆ. ಎಲಿಯಾಟಿಕ್ಕರು, ಪೈತಾಗೋರಿಯನ್ನರು. ನವಪ್ಲೇಟೋವಾದಿಗಳು, ಡೆಸ್‌ಕಾರ್ಟಿಸ್, ಲಿಬ್ನಿಜ್, ಸ್ಪಿನೋಜ ಮತ್ತು ಧ್ಯೇಯವಾದಿಗಳು ವಿಚಾರವಾದದ ಪುರಸ್ಕರ್ತರು. ಇವರಲ್ಲಿ ನವಪ್ಲೇಟೋವಾದಿಗಳೂ ಧ್ಯೇಯವಾದಿಗಳೂ ಪ್ಲೇಟೋ ಹೇಳಿದ ವಿಚಾರದ (ತರ್ಕದ, ಅನುಮಾನದ) ಸ್ವಯಂಪೂರ್ಣತಾ ತತ್ವವನ್ನು ಸ್ವೀಕರಿಸಿದಂಥವರು.

೪. ಜಡಪ್ರಕೃತಿವಾದ, ಭೌತವಾದ: (೧) ಭೌತಪದಾರ್ಥ ಮಾತ್ರ ಇವೆ, ಅವಷ್ಟೇ ಸತ್ಯ. ಭೌತಪದಾರ್ಥವೇ ವಿಶ್ವದ ಮೂಲಭೂತ ಅಂಶ. ವಿಶ್ವವಸ್ತುವನ್ನು ಪರಮಾಣುಗಳನ್ನಾಗಿ ವಿಂಗಡಿಸಬಹುದು. ಇಂದ್ರಿಯ ಪ್ರತ್ಯಕ್ಷಕ್ಕೆ ಗೋಚರವಾಗುವ ಪದಾರ್ಥಗಳು, ಕ್ರಿಯಾನುಕ್ರಮಗಳು ಅಥವಾ ಹೂರಣಗಳು ಮಾತ್ರ ಸತ್ಯ. ಬುದ್ಧಿ, ಉದ್ದೇಶ ಅಥವಾ ಆತ್ಯಂತಿಕ ಕಾರಣಗಳಿಂದ ಜಗತ್ತು ನಿಯಂತ್ರಿಸಲ್ಪಟ್ಟಿಲ್ಲ. ಪ್ರತಿಯೊಂದೂ ನಿರ್ಜೀವವೂ ಅಮಾನಸವೂ ಪ್ರಾಥಮಿಕ ಭೌತಿಕ ಶಕ್ತಿಗಳನ್ನುಳ್ಳವುಗಳೂ ಆದ ಭೌತಿಕ (ಜಡಪ್ರಾಕೃತಿಕ) ಕ್ರಿಯಾನುಕ್ರಮ ಹಾಗೂ ಯಾಂತ್ರಿಕ ಪದಾರ್ಥಗಳಿಂದಾದುದು. ಮಾನಸಿಕ ಪದಾರ್ಥಗಳೂ ಕ್ರಿಯಾನುಕ್ರಮಗಳೂ ಘಟನೆಗಳೂ ಭೌತಿಕ ಪದಾರ್ಥ-ಕ್ರಿಯಾನುಕ್ರಮ-ಘಟನೆ-ಗಳಿಂದಲೇ ಸಂಭವಿಸಿದಂಥವು; ಸ್ವತಃ ಅವುಗಳಿಗೆ ಕಾರಣಿಕ ಪರಿಣಾಮವಿಲ್ಲ. ಇದೇ Epiphenomenalism ನಿರ್ವೀರ್ಯ ಘಟನಾವಾದ ಅಥವಾ Mechanism ಯಾಂತ್ರಿಕತಾವಾದ. ಅತಿಪ್ರಾಕೃತಿಕವಾದ ಯಾವುದೂ ಇಲ್ಲ. ಇದು ನಿಸರ್ಗವಾದ. ಮಾನಸಿಕವಾದ ಯಾವುದೂ ಇಲ್ಲ. (೨) ಚಲ ಭೌತಪದಾರ್ಥ ಅಥವಾ ಭೌತಪದಾರ್ಥ ಮತ್ತು ಶಕ್ತಿ ಅಥವಾ ಕೇವಲ ಭೌತಪದಾರ್ಥ ಎಂಬುದರ ಮೂಲಕ ಎಲ್ಲವುದರ ವಿವರಣೆಯನ್ನೂ ಕೊಡಲು ಸಾಧ್ಯ. ಇದು ಭೌತಿಕ ಪದಾರ್ಥವೆಂದರೇನೆಂದು ಯಾರು ಹೇಗೆ ಕಲ್ಪಿಸಿಕೊಳ್ಳುತ್ತಾರೆ ಎಂಬುದನ್ನು ಅವಲಂಬಿಸಿದೆ. ಎಲ್ಲ ಗುಣ (Qualitative) ಭೇದಗಳನ್ನೂ ಪಾರಿಮಾಣಿಕ (Quantitative) ಭೇದ-ಗಳನ್ನಾಗಿ ಪರಿವರ್ತಿಸಿ ಇಳಿಸಬಹುದು. ವಿಜ್ಞಾನವು ಶೋಧಮಾಡಬಹುದಾದ ವಸ್ತುಗಳೆಂದರೆ ಸಾರ್ವಜನಿಕವೂ ಹೊಂದಿಸಬಲ್ಲವುಗಳೂ ಅಮಾನಸವೂ ನೈಸರ್ಗಿಕವೂ ಅಥವಾ ಇಂದ್ರಿಯಗ್ರಾಹ್ಯವೂ ಆದ ವಸ್ತುಗಳು ಮಾತ್ರ. (೩) ಐಶ್ವರ್ಯ, ದೈಹಿಕ ತೃಪ್ತಿಗಳು, ಐಂದ್ರಿಯ ಸುಖಗಳು ಮುಂತಾದವುಗಳಷ್ಟೇ ಮನುಷ್ಯ ಬಯಸುವ ಅಥವಾ ಸಾಧಿಸಿಕೊಳ್ಳಬಲ್ಲ ಅತಿಹೆಚ್ಚಿನ ಪುರುಷಾರ್ಥಗಳು (ಬೆಲೆಗಳು). (೪) ಮಾನವಕಾರ್ಯಗಳೂ ಸಾಂಸ್ಕೃತಿಕ ಪರಿವರ್ತನವೂ ಆರ್ಥಿಕ ಕಾರಕಗಳಿಂದಲೇ ನಿಷ್ಕೃಷ್ಟವಾಗುತ್ತವೆ. ಇವೇ

ಆರ್ಥಿಕ ನಿಷ್ಕೃಷ್ಟತಾವಾದ (Economic Determinism). (೫) ಮೇಲಿನ ಯಾವುದಾದರೂ ಒಂದು ಪ್ರಮೇಯಕ್ಕೆ ತಾಳುವ ಅನುಕೂಲ ಪ್ರವೃತ್ತಿ ಮನಃಪ್ರಣಾಲಿ, ತತ್ತ್ವಸೂತ್ರ, ಸಂಭಾವ್ಯಸಿದ್ಧಾಂತ, ಘೋಷ ಅಥವಾ ಗೃಹೀತಕರಣ (Assumption) ಭೌತವಾದಾಂಶವೆನ್ನಿಸುತ್ತದೆ. ಭೌತಿಕ ಆವರಣದಿಂದ ಇಲ್ಲದೆ ಸಂಸ್ಕೃತಿಯು ಭೌತಿಕ ಅಂಶಗಳಿಂದ ಪರಿಸೀಮಿತವಾಗಿ ಅವುಗಳನ್ನು ಮೀರಲಾರದ, ಪರಿಹರಿಸಿಕೊಳ್ಳಲಾರದ ಅಥವಾ ಅವುಗಳಿಗೆ ಚೆನ್ನಾಗಿ ಹೊಂದಿಕೊಳ್ಳಲಾರದ ಸ್ಥಿತಿಯೂ ಅದರ ಕಕ್ಷೆಯಲ್ಲಿಯೇ ಬರುತ್ತದೆ. ಅಮಾನಸವೂ ಅನಾತ್ಮಿಕವೂ ಆದ ಕೆಳವಟ್ಟದ ವೈಷಿಕ ಮೌಲ್ಯಗಳಿಗೆ ಗುಲಾಮರಾಗಿರುವ ಅಥವಾ ಅವುಗಳಲ್ಲೇ ಲಂಪಟರಾಗಿರುವ ಸ್ಥಿತಿಯನ್ನೂ ಭೌತವಾದವೆಂದು ಹೇಳುವುದುಂಟು.

೫ **ಆಧ್ಯಾತ್ಮಿಕತಾವಾದ:** (೧) ಆತ್ಮವು ಜಗತ್ತಿನಲ್ಲಿ ಆತ್ಯಂತಿಕ ಸತ್ಯ. ಅದು ಜೀವಾತ್ಮನಂತಹದೇ ಆದ ಒಂದು ಅತಿಮಾನಸ (Over-mind); ಅದರದು ಇಡಿ ಜಗತ್ತಿನ ತುಂಬ ಅದರ ಆಧಾರವೂ ವಿವರ-ಣೆಯೂ ಆಗಿ ಹಬ್ಬಿಕೊಂಡಿದೆ. ಈ ವಾದವು ಭೌತವಾದಕ್ಕೆ ವಿರುದ್ಧವಾದುದು. (೨) ಆತ್ಮ-ಪರಮಾತ್ಮರಷ್ಟೇ ಸತ್ಯ; ಇಂದ್ರಿಯ ಪ್ರತ್ಯಕ್ಷದ ಪ್ರಪಂಚವು ಬರಿಯ ಕಲ್ಪನೆ (Idea) (೩) ಆತ್ಮನ ಮೇಲೆ ಪರಮಾತ್ಮನ ಪ್ರಭಾವವಿದೆ. ಪೂಜೆಯಿಂದಲೆ ಆತ್ಮ-ಪರಮಾತ್ಮರ ಪತ್ರ-ವ್ಯವಹಾರವಿದ್ದಹಾಗೆ. (೪) ಸತ್ತಾತ್ಮಗಳು ಜೀವಂತವಾಗಿರುವವರ ಮೈಮೇಲೆ ಆಳಬರುವುದು ಎಂಬ ಭೂತಾವೇಶವಾದ (Spiritism).

೬ **ವ್ಯವಹಾರವಾದ:** (೧) ಅನುಭವವೇ ಜ್ಞಾನದ ಆಕರ. ಅನುಭವವಿಲ್ಲದೆ ಇರುವ ಜ್ಞಾನವು ಇಲ್ಲ ಅಥವಾ ಅಸಾಧ್ಯ. ಪ್ರತ್ಯಕ್ಷವೊಂದೇ ಅನುಭವ. ಪ್ರತ್ಯಕ್ಷಾನುಮಾನಗಳಿಗೆ ಪೂರ್ವದಲ್ಲಿ ಯಾರಿಗೂ ಇರುವ ಯಾವುದರ ಜ್ಞಾನವೂ ಉಂಟಾಗದು; ಅಂದರೆ ಸಾಮಾನ್ಯವೂ ಅವಶ್ಯಕವೂ ಆದ ಸತ್ಯಗಳಿಲ್ಲ; ಭೂತ, ಭವಿಷ್ಯತ್, ವರ್ತಮಾನಗಳಲ್ಲಿ

ಉಂಟಾದ ಅನುಭವವನ್ನು ಮೀರಿದ ಜ್ಞಾನವಿಲ್ಲ; ಹುಟ್ಟುತ್ತಲೇ ಬರುವ ಜ್ಞಾನವೆಂಬುದಿಲ್ಲ; ಸ್ವಾಭಾವಿಕ ತರ್ಕಕ್ಕೆ ಒಪ್ಪುವ ಸ್ಪಷ್ಟತೆ ಅಥವಾ ಸ್ವತಃಪ್ರಾಮಾಣ್ಯ ಎಂಬುದು ಸತ್ಯಕ್ಕೆ ನಿಕಷವಲ್ಲ. ಒಂದರ ವಿರುದ್ಧ ಪದಾರ್ಥದ ಅಕಲ್ಪನೀಯತೆಯ ದೆಸೆಯಿಂದ ಅದು ಸಿಕ್ಕಿದಾಕ್ಷಣ ಅದರ ನಿಶ್ಚಿತಜ್ಞಾನ ನಮಗಾಯಿತೆನ್ನಲು ಶಕ್ಯವಿಲ್ಲ. ನಿಶ್ಚಿತವಾಗಿ ಗೊತ್ತಾದ ಒಂದರ ಅಥವಾ ಎಲ್ಲ ಜ್ಞಾನದ ಅವಶ್ಯಕ ಪೂರ್ವಗೃಹೀತತೆ ಇದೆಯೆನ್ನಲು ಬರದು. ಯಾವುದಾದರೊಂದನ್ನು ಇಲ್ಲವೆಂದು ಹೇಳುವುದರಿಂದ ಅದರ ಪುನರ್‌ದೃಢೀಕರಣವಾಗದು. ಸಾಂಪ್ರದಾಯಿಕ ಅಥವಾ ಸ್ವಕಪೋಲಕಲ್ಪಿತ ಲಕ್ಷಣಗಳಾಗಲಿ, ಗೃಹೀತಾಂಶಗಳಾಗಲಿ ಜ್ಞಾನಕಾರಕಗಳಾದಾವೆಂದು ಒಪ್ಪುವುದಿಲ್ಲ. (೨) ಭಾವ, ಕಲ್ಪನೆ, ಸಾಮಾನ್ಯಗಳಲ್ಲಿ ವಾಸ್ತವಿಕ ಅಸ್ತಿತ್ವ ಉಳ್ಳಂಥವುಗಳು ಅನುಭವದ ಅಥವಾ ಅದರ ಅರ್ಥಪೂರ್ಣ ಅಂಶಗಳಿಂದಲೇ ಹುಟ್ಟಿರುತ್ತವೆ. (೩) ಭಾವ, ಕಲ್ಪನೆ-ಸಾಮಾನ್ಯಗಳೆಲ್ಲವೂ ನೇರವಾಗಿ ಪ್ರತ್ಯಕ್ಷಾನುಭವಕ್ಕೆ ಸಂಬಂಧಿಸಿರುತ್ತವೆ; ಅಥವಾ ಅರ್ಥ, ಭಾವ, ಕಲ್ಪನೆ, ಸಾಮಾನ್ಯಗಳು ಪ್ರಥಮತಃ ಅನುಭವದ ಹೂರಣಕ್ಕೆ ಸಂಬಂಧಿಸಿಯೇ ಇರತಕ್ಕಂಥವು; ಅಥವಾ ಒಂದು ಪದದ ಅರ್ಥವು ಅದರ ಅನುಭವದ ಸಾಧ್ಯವಾದ ಪರಿಣಾಮಗಳ ಮೊತ್ತವಷ್ಟೇ ಆಗಿರುತ್ತದೆ; ಅಥವಾ ಎರಡು ಪ್ರಮೇಯಗಳ (Propositions) ಸಾಧ್ಯ ಅನುಭವಿಕ ಪರಿಣಾಮಗಳೆಲ್ಲವೂ ಏಕರೂಪವವುಗಳಾಗಿದ್ದಾಗ ಅವುಗಳ ಅರ್ಥಗಳೂ ಒಂದೇ ಆಗಿರುತ್ತವೆ. (೪) ಸಾಧ್ಯವಾದ ಪ್ರತಿಯೊಂದು ಉಕ್ತ ಪದಾರ್ಥವೂ (Referent) ತನಗೆ ನೇರ ಪರಿಚಯ ಉಳ್ಳದ್ದು ಅಥವಾ ನಿರ್ವಿಶೇಷವಾಗಿ ಪರಿಚಿತ ಪದಾರ್ಥಗಳಿಂದ ಕೂಡಿದ್ದಾಗಿರುತ್ತದೆ; ಅಥವಾ ಅನುಭವದ ಸದ್ಯದ ಹೂರಣವನ್ನಷ್ಟೇ ಯಾವನಾದರೂ ಅರಿತುಕೊಳ್ಳಬಲ್ಲ. ಅಥವಾ ತನ್ನ ಅಥವಾ ಇತರ ಎಲ್ಲರ ಅನುಭವ ಕ್ಷೇತ್ರದ ಹೊರಗಿರುವ ಪದಾರ್ಥಗಳ ಅನುಭವ ಒಬ್ಬನಿಗಿದ್ದರದು ಯಾವಾಗಲೂ ಅನಿಶ್ಚಿತ; ಏಕೆಂದರೆ ಅವನ್ನವನು ಅನುಭವದ ಮೂಲಕ ಪಡೆದುದಲ್ಲ. (೫) ಅನುಭವ ಮತ್ತು ಸತ್ಯಗಳ ನಡುವಿನ ಯಾವುದಾದರೊಂದು ಸಂಬಂಧವು ಸತ್ಯದ ಸ್ವರೂಪದ ಅಥವಾ ಅದರ

ಗುರುತುಹಿಡಿಯುವ ಸಾಧನದ ಲಕ್ಷಣವಾಗಿರುತ್ತದೆ. (೬) ಅನುಭವ
ವೊಂದೇ ಅಸ್ತಿತ್ವ-ಸತ್ಯತೆಗಳಲ್ಲಿ ಒಂದನ್ನೋ ಎರಡನ್ನೋ ಉಳ್ಳದ್ದು;
ಅಥವಾ ನಿಸರ್ಗವೊಂದು ಅನುಮಾನಿಕ ಕ್ರಿಯಾನುಕ್ರಮ, ಸಂಪೂರ್ಣ
ವಿಚಾರಯುಕ್ತ ಎಂಬುದು ಸುಳ್ಳು; ಅಥವಾ ಸಾಮಾನ್ಯಕ್ಕಿಂತ ಬದಲಾಗುವ
ವಿಶಿಷ್ಟವಾದ, ವಿಕಲ್ಪನೀಯ, ಆಕಸ್ಮಿಕ ಎನ್ನಿಸಿದ್ದು ವಸ್ತುಹೃದಯಕ್ಕೆ
ಸಾಮಾನ್ಯ, ಬದಲಾಗದ ಮತ್ತು ಅವಶ್ಯಕವೆನ್ನಿಸುವ ಪದಾರ್ಥಕ್ಕಿಂತ
ನಿಕಟವರ್ತಿಯಾದುದು. (೭) ಮೇಲಿನ ಪ್ರಮೇಯಗಳಲ್ಲಿ ಎರಡು-ಮೂರರ
ಸಂಯೋಗ, ಅವುಗಳಿಗೆ ಅರ್ಥದಲ್ಲಿ ಹತ್ತಿರವಾದ ವಾಕ್ಯಗಳ ಸಂಯೋಗ,
ಆಯಾ ಪ್ರಮೇಯ ವಾಕ್ಯಗಳ ಸದ್ಯದ ಧ್ವನಿತಗಳ ಸಂಯೋಗ ಅಥವಾ
ಅವುಗಳನ್ನು ಒಟ್ಟಿಗೆ ತೆಗೆದುಕೊಂಡಾಗ ಇಲ್ಲವೆ ಅವುಗಳ ನ್ಯಾಯವಾಕ್ಯ
ಗತವಾದ ನಿಗಮನೇತರ ಸಹವಾಕ್ಯಗಳೊಡನೆ ತೆಗೆದುಕೊಂಡಾಗ ಉಂಟಾ
ಗುವ ಸಂಯೋಗ ವ್ಯವಹಾರ ಗ್ರಾಹ್ಯ. (೮) ನೇರವಾದ ನಿರೀಕ್ಷಣೆ
ಅಥವಾ ಸದ್ಯದ ಅನುಭವ ಅವಲಂಬನೀಯ; ಅದರ ವಿಶ್ಲೇಷಣ-ವಿಚಾರಣ
ಗಳನ್ನು ಹೊರತುಪಡಿಸಬೇಕು; ಕೇವಲ ಚರ್ಚಾತ್ಮಕವೂ ಅನುಮಾನಿಕವೂ,
ಊಹಾತ್ಮಕವೂ ಅತೀಂದ್ರಿಯವೂ ತರ್ಕ ಸಮರ್ಥನಯುಕ್ತವೂ ಆದ ಕ್ರಮ
ಗಳನ್ನು ಬಿಟ್ಟು- ಪ್ರಯೋಗ ಅಥವಾ ಪದ್ಧತಿಯಾಗಿ ರೂಪಿತವಾದ ವಿಶಿಷ್ಟ
ನಿದರ್ಶನಲಬ್ಧವಾದ ಪ್ರಮಾಣದಿಂದ ತೀರ್ಮಾನಿಸಿದ ಸಿದ್ಧಾಂತ (Induc-
tion) ವನ್ನು ಬಳಸುವುದು ನಿಯಮ; ಅಥವಾ ಒಂದು ಶೋಧದಲ್ಲಿ
ತೊಡಗಿದ ಮನಸ್ಸಿನ ಸರ್ವರೀತಿಗಳನ್ನೂ ಅವಲಂಬಿಸುವುದು (ಲೆಕ್ಕಕ್ಕೆ
ತೆಗೆದುಕೊಳ್ಳುವುದು) ಅಗತ್ಯ. (೯) ಮೇಲಿನ ಯಾವುದಾದರೊಂದು
ಪ್ರಮೇಯದ, ಆಚಾರದ, ಕ್ರಮದ ಅಥವಾ ಕ್ರಮಶಾಸ್ತ್ರದ ಬಗ್ಗೆ ಅನು
ಕೂಲವಾಗಿರುವ ಹೇಳಿಕೆ, ನಂಬಿಗೆ, ಸಂಭಾವ್ಯಾನುಮಿತಿ, ಗೃಹೀತಕರಣ
(Assumption) ತತ್ವಸೂತ್ರೀಕರಣ (Postulation) ಅಥವಾ ಮನಃ
ಪ್ರಣಾಲಿ ಗ್ರಾಹ್ಯ. ಅಥವಾ ಬುದ್ಧಿಗಿಂತ ಇಂದ್ರಿಯದ ಮೇಲೆ ಹೆಚ್ಚು
ಅವಲಂಬಿಸುವ ಮನಃಪ್ರಣಾಲಿ; ಅಥವಾ ಕಾಲ್ಪನಿಕ ಸಂಗತಿಗಳಿಗಿಂತ
ವಾಸ್ತವಿಕ ಸಂಗತಿಗಳೇ ಬೇಕೆಂಬುದು, ವಾಸ್ತವಿಕ ಸಂಗತಿಗಳು ಅವುಗಳ

ಅನುಮಿತಾರ್ಥಗಳಿಗಿಂತ ಲೇಸೆಂಬುದು; ಅಥವಾ ಶೋಧಕ್ಕೆ ವೈಜ್ಞಾನಿಕ ಮನಃಪ್ರಣಾಲಿ ಅಗತ್ಯವೆಂಬುದು; ಅಥವಾ ಸಾಮಾನ್ಯ ವಿವೇಕ ಹಾಗೂ ವ್ಯಾವಹಾರಿಕತೆಗಳಿಗೆ ನಿಕಟವಾದ ಮನೋಧರ್ಮಯೋಗ್ಯವೆಂಬುದು–ಇಲ್ಲವೆ, ಘೋಷಿತನದಿಂದ ಮುಕ್ತವಾಗಿರುವುದು ಅಥವಾ ವಸ್ತುಗಳಿಗೆ ಗೋಚರವಾದುವನ್ನೇ ಗಣ್ಯವಾಗಿ ನಂಬುವುದು ವ್ಯವಹಾರವಾದದ ಗುರುತುಗಳು.

೭ **ಅನುಷೇಧವಾದ :** ಇಂದ್ರಿಯ ಸಂವೇದನೆಗಳ ಸರಳ ವರ್ಣನೆಯೇ ಜ್ಞಾನದ ಅತ್ಯುನ್ನತ ರೂಪ. ಗಣಿತದ ತುಲಾಬಂಧ (Formulas) ಗಳಿಂದ ಮಾತ್ರ ಅನುಷೇಧಿಕ ವರ್ಣನೆ ಲಭ್ಯ—ಅಂತರ್ ನಿರೀಕ್ಷಣೆಯನ್ನಾಧರಿಸಿದ ಮನಃಶಾಸ್ತ್ರದಿಂದ ಅಲಭ್ಯ; ಶುದ್ಧ ಕಾಯಿದೆ (ವಿಧಿ) ತನ್ನಿಂದ ಭಿನ್ನವಾದ ಯಾವ ಹೆಚ್ಚಿನ ಕಾಯಿದೆ (ನಿಯಮ) ಯನ್ನೂ ಒಳಗೆ ಸೇರಿಸ ಕೂಡದು—ಎಂಬುದು ಅನುಷೇಧ.

೮ **ಅಭಿವ್ಯಕ್ತಿವಾದ:** ಕಲಾತ್ಮಕ ನಿರ್ಮಿತಿಯೊಂದು ಅಭಿವ್ಯಕ್ತಿ. ಅದು ಕಲೆಗಾರನ ಅನಿಸಿಕೆ (Impression), ಭಾವನೆ, ಪ್ರಾತಿಭ ಸ್ಫೂರ್ತಿ (Intuition) ಮತ್ತು ಮನಃಪ್ರಣಾಲಿಗಳನ್ನು ಸ್ಪಷ್ಟಪಡಿಸುವ ಒಂದು ಕ್ರಿಯಾನುಕ್ರಮ. ಕಲೆಗಾರನ ಅನುಭವ-ಭಾವನೆಗಳೇ ಅವನ ಕಲಾಕೃತಿಗಳ ಮೂಲಾಧಾರ. ಅವನ ಕೃತಿಯು ಅವನ ಆತ್ಮಕ್ಕೆ ಅವನು ಬರೆದ ಭಾಷ್ಯ; ಬಾಹ್ಯ ಜಗತ್ತಿನ ವ್ಯಾಖ್ಯಾನ ಅದೆಂದೂ ಅಲ್ಲ. ಇಂಥ ಸರ್ಜನ ಚೈತನ್ಯದ ಹೊಸತನ ಮತ್ತು ವ್ಯಕ್ತಿವೈಶಿಷ್ಟ್ಯಗಳನ್ನೇ ಅವನ ಕೃತಿಯು ಬಿಡಿ ಆಧರಿಸಿರುತ್ತದೆ. ಬಲವಾಗಿಯೂ ಸ್ಪಷ್ಟವಾಗಿಯೂ ಭಾವಿಸು (ಭಾವನಿಸು) ವವನೇ ಕಲೆಗಾರ. ಅವನ ಕಲೆ ಅವನು ಭಾವಿಸಿದ್ದರ ಒಂದು ಅಭಿಲೇಖ (ದಾಖಲೆ). ವಾಸ್ತವಿಕತೆಗೆ ಕಲೆಗಾರ ಯಾವ ಗೌರವವನ್ನೂ ಕೊಡಬೇಕಾಗಿಲ್ಲ; ಅವನು ಯಾವ ಸಭಿಕರನ್ನೂ ಸಂತೋಷಪಡಿಸಬೇಕಾಗಿಲ್ಲ. ಈ ವಾದದ ಪ್ರಕಾರ ಪ್ರಾಮಾಣಿಕತೆ (ಅವನಿಗೆ ಅವನು), ಭಾವನೋದ್ರೇಕ ಮತ್ತು ಅನನ್ಯತೆಗಳೇ ಸೌಂದರ್ಯ.

೯ **ಅಂತಃಪ್ರಭಾವವಾದ :** ಕಲೆಯು ಒಂದು ವಸ್ತುವನ್ನು, ದೃಶ್ಯವನ್ನು ಅಥವಾ ಘಟನೆಯನ್ನು ಭಾವಿಸಿ (ಭಾವನಿಸಿ) ಕಂಡ ಗುಣವನ್ನು ಪ್ರಕಟಿಸಬೇಕು; ಅದು ಕಲೆಗಾರನಲ್ಲಿ ಉಂಟುಮಾಡಿದ ಒಟ್ಟಿನ ಮೇಲಿನ ಪರಿಣಾಮವನ್ನು ಪ್ರಕಾಶಪಡಿಸಬೇಕು. ಒಂದು ವಸ್ತುವಿನ ಭೌತಿಕ ರಚನೆಗೆ ನಿರಪೇಕ್ಷವಾಗಿ, ಅದರಿಂದ ಮನಸ್ಸಿಗಾದ ಅರ್ಥವನ್ನು ಹೊರತು ಪಡಿಸಿ, ಅದರ ಸದ್ಯದ (Immediate) ಇಂದ್ರಿಯ ಪ್ರತ್ಯಕ್ಷವಷ್ಟನ್ನು ಪಡಿ ಮೂಡಿಸುವುದು ಗ್ರಾಹ್ಯ; ಉದ್ದೀಪನ ವಿಭಾವಗಳ ಆವರಣದಲ್ಲಿ ತೋರುವ ಒಂದು ವಸ್ತುವಿನ (ಅಥವಾ ವ್ಯಕ್ತಿಯ) ತಾತ್ಕಾಲಿಕವಾದ ಬಾಹ್ಯ ಲಕ್ಷಣ ಗಳನ್ನು ಪ್ರತಿಬಿಂಬಿಸುವುದಿಲ್ಲಿ ಮುಖ್ಯ—ಈ ಬದಲಾವಣೆಗಳಿಗೆ ಒಳಗಾದ ಮತ್ತು ಲಕ್ಷಣಗಳಿಗೆ ಆಧಾರಭೂತವಾದ ಕಲ್ಪಿತ (Supposed) ನಿಜವಸ್ತು (ನಿಜವ್ಯಕ್ತಿ) ಯಾವುದಾದರೂ ಇದ್ದರೆ ಅದನ್ನು ಗಮನಿಸತಕ್ಕದ್ದೇ ಅಲ್ಲ.

೧೦ **ಅಸ್ತಿವಾದ :** ಪ್ರಜ್ಞೆಯು ಕೊಡುವ ಶುದ್ಧವಾದ ದತ್ತಗಳು (Data) ಇಲ್ಲಿ ಮುಖ್ಯ. ಅವರಲ್ಲಿರುವ ಜೀವಶಾಸ್ತ್ರೀಯ ವೈಶಾಲ್ಯವು ಜ್ಞಾನಪ್ರೊಂದರ ಯೋಗ್ಯತೆಗೆ ನಿಕಷ. ಆದರೆ ಉಕ್ತದತ್ತಗಳು ಭಾವನೆ, ಇಚ್ಛಾ ಪ್ರಯತ್ನ (ಸಂಕಲ್ಪ ಶಕ್ತಿ) ಮತ್ತು ಸಾಮಾಜಿಕ ಪೂರ್ವಗ್ರಹಗಳಿಂದ ಮುಕ್ತವಾಗಿರಬೇಕು. ಜ್ಞಾನದ ಆಕರ ಮತ್ತು ಅಂಗ (ಅಂಶ) ಗಳೆರಡೂ ನಮ್ಮ ಪ್ರಜ್ಞೆ (Consciousness) ಯಲ್ಲಿರುವ ಸ್ವರೂಪದ ಸಂವೇದನೆಗಳು. ಒಳ-ಹೊರ ಜಗತ್ತುಗಳಲ್ಲಿ ಯಾವ ಭೇದವೂ ಇಲ್ಲ; ಏಕೆಂದರೆ, ಮಾನಸ ಶಾಸ್ತ್ರೀಯವಾಗಿ ಪರೀಕ್ಷಿಸಲಾರದ ಯಾವ ನೈಸರ್ಗಿಕ ಘಟನೆಯೂ ಇಲ್ಲ. ಆಯೆಲ್ಲವುದಕ್ಕೂ ಮನಸ್ಸಿನ ಸ್ಥಿತಿಗಳಲ್ಲಿ ಅಸ್ತಿತ್ವವಿದೆ. ಅಸ್ತಿತ್ವವಿಲ್ಲಿ ಸಾರ (Essence) ವಲ್ಲ. ಪ್ರಜ್ಞೆಯ ಮೇಲೆ ನರಮಂಡಲ, ಪೌಷ್ಟಿಕ ಆಹಾರ ಮತ್ತು ಆವರಣಗಳು ಪ್ರಭಾವ ಬೀರುತ್ತವೆ. ಇವೇ ನಮ್ಮ ಅನುಭವದ ಕಾರಕಗಳು. ಇರವು, ಸಮಾನತೆ, ಸಾದೃಶ್ಯ, ಪ್ರತ್ಯಕ್ಷ, ಪ್ರತಿನಿಧಿತತೆ ಮುಂತಾದವುಗಳಿಗೆ ತಾರ್ಕಿಕ ಅಥವಾ ಸತ್ಯಾತ್ಮಕವಾದ ವೈಶಾಲ್ಯವಿಲ್ಲ; ಅವು ಕೇವಲ ಜೀವ ಶಾಸ್ತ್ರೀಯ ಲಕ್ಷಣಗಳು. ಭೌತಿಕ

ಹಾಗೂ ಮಾನಶಾಸ್ತ್ರೀಯ ಎಂದು ಗ್ರಹಿಸುವ ಭೇದವು ಅಗ್ರಾಹ್ಯ. ತನ್ನ ಕರ್ತೃವಿನ ಅಸ್ತಿತ್ವವನ್ನು ನೇರವಾಗಿ ಹೇಳುವ ಪ್ರಮೇಯವೆಂದರೆ ಇಲ್ಲಿ "ಒಳಿತು ಇದೆ" ಎಂಬಂತಹದು. "ಎಲ್ಲ ಮಾನವರೂ ಮರ್ತ್ಯರು" ಎಂಬುದನ್ನು "ಅಮರರಿಗೆ ಅಸ್ತಿತ್ವವಿಲ್ಲ" ಎಂದು ರೂಪಾಂತರಿಸಿ ಹೇಳುವುದು ಈ ಸಂಪ್ರದಾಯದ ಇನ್ನೊಂದು ಉದಾಹರಣೆ. ಇವರ ಮನ:ಶಾಸ್ತ್ರದ ಪ್ರಕಾರ ಪ್ರತಿಮಾರಚಿತವಾದ ಆಲೋಚನೆ ಎಂಬುದಿಲ್ಲ; ವ್ಯಕ್ತಿಯ ಮನದ ಅನುಭವಗಳನ್ನು ಅಸ್ತಿತ್ವಗಳು (Existences) ಎಂದು ಗ್ರಹಿಸಿ, ಅಂತರ್‌ನಿರೀಕ್ಷಣಾಪದ್ಧತಿಯಿಂದ ಗೊತ್ತಾದ ಅವರ ಆ ಅನುಭವಗಳ ವರ್ಣನೆ, ವಿಶ್ಲೇಷಣ ಮತ್ತು ವರ್ಗೀಕರಣಗಳನ್ನು ಮಾಡುವುದು ಇಲ್ಲಿ ಮನ:ಶಾಸ್ತ್ರದ ಕೆಲಸ.

ವ್ಯಾಸಾಯನ

ವ್ಯಾಸನ ಮಹಾಭಾರತವು ಒಳಗೊಂಡಿರುವುದು ಕ್ರಿಸ್ತಪೂರ್ವ ೧|| ಅಥವಾ ೨ ಸಾವಿರಕ್ಕೂ ಹಿಂದೆ ನಡೆದ ಕೆಲ ಗಣ್ಯವಾದ ಐತಿಹಾಸಿಕ ಘಟನೆಗಳನ್ನು—ಎಂಬುದು ಅನೇಕ ವಿದ್ವಾಂಸರ ಮತ. ಅವುಗಳಲ್ಲಿ ಪರಸ್ಪರ ಪೌರ್ವಾಪರ್ಯವಿದ್ದರೂ ಅದರ ಆಳತೆ ಬಹಳ ದುರೂಹ್ಯವಾಯಿತು. ಉಕ್ತ ಗ್ರಂಥದ ರಚನಾವಧಿ ಕ್ರಿ. ಪೂ. ೪೦೦ ರಿಂದ ಕ್ರಿ. ಶ. ೪೦೦ ರ ವರೆಗೆ ಎಂಬುದು ಪ್ರಸಿದ್ಧ ಸಂಶೋಧಕರಲ್ಲಿ ಕೆಲ ಗಣ್ಯರ ಮತ. ಅದು ಶತಸಹಸ್ರ ಪದ್ಯಗಳಿಂದ ಕೂಡಿದ್ದೆಂದು ಪರಂಪರೆಯಲ್ಲಿ ನಡೆದು ಬಂದ ನಂಬಿಗೆ ದೃಷ್ಟಾಂತಸಿದ್ಧವಾಗಿದೆ.

ಮಹಾಭಾರತ ತೋರಿಸುವ ಭಾರತೀಯ ಜನಜೀವನದ ಚಿತ್ರವು ಅಸಂಸ್ಕೃತ (ಅಪ್ರಬುದ್ಧ) ಎಂದು ಸಂಶೋಧಕ—ವಿಮರ್ಶಕರಾರಿಗೂ ಎನ್ನಿಸಿಲ್ಲ. ಕಡತಂದ,[1] ಅಥವಾ ಅಲ್ಲಿ ಇಲ್ಲಿ ಸ್ವತಃ ತಯಾರಿಸಿದ ಕೆಲ ವೈಜ್ಞಾನಿಕ ಸಾಧನಗಳ ಸಂಪತ್ತನ್ನು ಬಿಟ್ಟರೆ ಮಿಕ್ಕ ಸಾಂಸ್ಕೃತಿಕ ಸಂಪದ್ವಿಭಾಗಗಳು ನವಭಾರತದ ಸಮಷ್ಟಿ ಜನತೆಯಲ್ಲಿ ಮೂಲಭೂತವಾಗಿ ಅಪೂರ್ವ ನವತ್ವವನ್ನು ಹೊಂದಿದ ಸ್ವರೂಪಗಳನ್ನು ತಾಳಿವೆ ಎಂದು ನಾಗರಿಕತೆಯ ಇತಿಹಾಸಕಾರ ಹೇಳಲಾರ.

ವೃಕ್ಷ ಹೊಸದಾದರೆ ಅದರ ಬೀಜ ಅದಕ್ಕಿಂತ ಹಳೆಯದಾಗಿರುವಂತೆ ಭಾರತದ ನವತ್ವ ಇರಬಲ್ಲುದು, ಇರಬೇಕು—ಬಹುಸಂಖ್ಯರಲ್ಲಿ ಹಿಂದು ಸಂಸ್ಕೃತಿಗೆ ಸೇರಿರುವ ವರೆಗೆ. 'ಹಿಂದು' ಎಂಬುದು "ಇಸ್ಲಾಂ", "ಕ್ರೈಸ್ತ" ಎಂಬ ಮತಗಳಂತೆ "ಮತ"ವಲ್ಲ; ಅದೊಂದು ಧರ್ಮ ಅಥವಾ ಸಂಸ್ಕೃತಿ, ನಾಗರಿಕತೆ; ಮತವೆಂದು ಇದನ್ನು ಕರೆಯುವವರು ಮಿಥ್ಯ

---

(1) ಕಡವಲ್ಲದಿದ್ದರೆ, ಸಾಲವಲ್ಲದಿದ್ದರೆ, ಕ್ರಯವೂ ಅಲ್ಲದಿದ್ದರೆ ದಾನ ಹಿಡಿದ ಸಾಧನಗಳೆಂಬುದಿಲ್ಲಿ ಗೃಹೀತ. ಓದಿದ ಅಲ್ಪ ಸಂಖ್ಯಾತರಲ್ಲಿ ಅಲ್ಪರ ಆಧುನಿಕತೆಯು ಕೇವಲ ಪಾಶ್ಚಾತ್ಯತೆ; ಅದು ಕೂಡ ಸಾಮಾಜಿಕ ಆವರಣದಲ್ಲಿ ಜೀರ್ಣವಾಗಿ ರಕ್ತಗತವೆನ್ನಿಸಿಲ್ಲ.

ಪೂರ್ವದ ನಾಗರಿಕತೆಯನ್ನು ಇಸ್ಲಾಮೀಯವೆಂದೂ ಪಾಶ್ಚಾತ್ಯ ನಾಗರಿಕತೆಯನ್ನು ಕ್ರಿಸ್ತೀಯವೆಂದೂ ಒಪ್ಪಿಕೊಳ್ಳಬೇಕಾಗುತ್ತದೆ. ಆಗ ಮತವನ್ನು ಸಂಸ್ಕೃತಿ-ನಾಗರಿಕತೆಗಳಷ್ಟು ವ್ಯಾಪಕಾರ್ಥವುಳ್ಳ ಧರ್ಮವೆಂದು ಅರ್ಥಮಾಡಬೇಕಾಗುತ್ತದೆ. ಪಾಶ್ಚಾತ್ಯವೆಲ್ಲವನ್ನೂ "ಆಧುನಿಕ" ಎಂದು ತಿಳಿದುಕೊಂಡದ್ದು ಸರಿಯಲ್ಲವೆಂದು ಮೊದಲು ತೋರಿಸಿ ಕೊಟ್ಟವರು ದಿವಂಗತ ರವೀಂದ್ರನಾಥ ಠಾಕೂರರು. ಅದು ಪಾಶ್ಚಾತ್ಯ ಅಥವಾ ಕ್ರೈಸ್ತ—ಸಾಂಸ್ಕೃತಿಕವಾಗಿ.

ಜೀವ, ಜ್ಞಾನ ಮುಂತಾದ ಎಲ್ಲವೂ ಜಡವಾದ ನಿಸರ್ಗವೆಂಬ ಬಾಹ್ಯ ವಸ್ತುವಿನಿಂದ ಹುಟ್ಟಿದ್ದೆಂಬ ತರ್ಕಾಭಾಸವು ಹಿಂದೆ ಹೇಳಿದಂತೆ ಆಧುನಿಕ ವೈಜ್ಞಾನಿಕತೆಯ ಮೂಲಾಧಾರ. ಈ ಆಧಾರವು ಪ್ರಯೋಗ ಪರೀಕ್ಷೆಗೆ ಅತೀತವಾದುದು. ಇಂಥ ಅತೀತತತ್ವದಲ್ಲಿಯ ಭಾರತ ಹೇಳಿದ ಮನೋ-ವಾಗತೀತ ಬ್ರಹ್ಮ ಚೈತನ್ಯಕ್ಕೆ ಸರಿದೊರೆ. ಮಾನವತ್ವವು ಈ ನಿಸರ್ಗ ಅಥವಾ ಪ್ರಕೃತಿ ಎಂಬ ಅನವಚ್ಛಿನ್ನ ಪದಾರ್ಥದ ಅರ್ಥವ್ಯಾಪ್ತಿಯ ಹೊರಗಿನದಾಗಿಲ್ಲ—ನಿಸರ್ಗವಿಕಾಸವಾದದ ಪ್ರಕಾರ. ಹಿಂದು ಅಥವಾ ಭಾರತೀಯ ಧರ್ಮದಲ್ಲಿ ಬ್ರಹ್ಮಚೈತನ್ಯವೇ ಸರ್ವಮೂಲ. ಒಬ್ಬನು ಉತ್ತರ ಧ್ರುವದಿಂದ ದಕ್ಷಿಣಕ್ಕೆ ಹೊರಟರೆ, ಇನ್ನೊಬ್ಬನು ದಕ್ಷಿಣದಿಂದ ಉತ್ತರಕ್ಕೆ ಹೊರಡುತ್ತಾನೆ. ಆದರೆ ಈ ಇಬ್ಬರು ಪ್ರಯಾಣಿಕರೂ ದೇಶ ಕಾಲಗಳಿಂದ ಅವಚ್ಛಿನವಾದ ಇಂದ್ರಿಯಾನುಭವದ ಈ ವಿಶ್ವದಲ್ಲಿ ಸಂಧಿಸುತ್ತಾರೆ. ಇಹಜೀವನ ಇಬ್ಬರಿಗೂ ಸಾಧಾರಣ. ವಿಜ್ಞಾನದ ಕಕ್ಷೆಯ ಹೊರಗಿನ ನೀತಿಶಾಸ್ತ್ರವೂ ಮೂಲತತ್ವಗಳಲ್ಲಿ ವ್ಯಾವಹಾರಿಕವಾಗಿ ಸಾಧಾರಣ. ಭಾರತದ ಅಹಿಂಸಾದಿ ಪಂಚಮಹಾಧರ್ಮಗಳ ಆದರ್ಶವು ವಿಶ್ವ ಸಾಮಾನ್ಯ; ಅವುಗಳ ಆಚರಣೆಯ ವ್ಯಾಪ್ತಿ, ಅಂಶ, ಕ್ಷೇತ್ರ-ಪಾತ್ರಪ್ರಕಾರಗಳು ಮಾತ್ರ ಭಿನ್ನ; ರಾಜಕೀಯ ಸರಕಾರದ ವಿಧಿಗಳ ಮೂಲಕ ಅವುಗಳನ್ನು ಸಾರ್ವತ್ರಿಕ ವ್ಯವಹಾರಕ್ಕಿಳಿಸುವುದರಲ್ಲಿಯೂ ಆ ಬಗೆಯ ಭೇದವಿದೆ.

ಮಾನಸ, ಅತಿಮಾನಸ

ವಿಜ್ಞಾನದ ಸಂಶೋಧನ-ನವನಿರ್ಮಾಣಗಳೆಲ್ಲವೂ ಬುದ್ಧಿ ಮೂಲವಾದವುಗಳು. ಕಾರ್ಲ್‌ಜಿ. ಯುಂಗ್ ಮಹಾಶಯನ ಪ್ರಕಾರ ಬುದ್ಧಿಯು ಮಾಡುವ ಆಲೋಚನೆ ಎಂಬ ಕಾರ್ಯವು ಕೇವಲ ಒಂದು ಸಮಕ್ರಿಯೆ, ಅದರಲ್ಲಿ ನಾವು ಹಾಕಿದ್ದಷ್ಟು ಮಾತ್ರ ನಮಗೆ ಸಿಗುತ್ತದೆ- ಬುದ್ಧಿಯು ಕ್ರಿಯೆಯೇ ಅಂಥದು; ಆ ಬಗೆಯು ತಿಳುವಳಿಕೆ ಮಾತ್ರ ನಮಗೆ ಲಭ್ಯ. ವಿಚಾರ, ಆಲೋಚನೆ, ಚಿಂತನ ಎಂಬ ಮನೋವ್ಯಾಪಾರವು ಆರ್ಥಿಕ ವ್ಯಾಪಾರಕ್ಕೆ ಸರಿದೊರೆ; ಅಥವಾ ಅದಕ್ಕೂ ಕಡಿಮೆ ಲಾಭದಾಯಕ: ಏಕೆಂದರೆ ಸಾಮಂತ ಅಥವಾ ಬಂಡವಾಳ ಪದ್ಧತಿಯು ತಾನು ಹಾಕಿದ್ದಕ್ಕಿಂತ ಹೆಚ್ಚನ್ನು ಹಾಕಿದವನಿಗೆ ಕೊಡಿಸುತ್ತದೆ! 'ಬುದ್ಧಿರುತ್ಪದ್ಯತೇ ಕಾರ್ಯಾತ್' ಎಂಬ ವ್ಯಾಸವಾಣಿಗೆ ಉಕ್ತ ಅರ್ಥವ್ಯಾಪ್ತಿ ಇದೆ. ಮನಸ್ಸಿನ ಕ್ರಿಯೆ ಅಥವಾ ಕಾರ್ಯವೆಂದರೆ ಇಚ್ಛಾಮೂಲವಾದ ಭಾವನೆ. ಇಚ್ಛೆ ಭಾವನೆಗಳು ಅವಿನಾಭಾವಿಗಳು ಮತ್ತು ಪರಸ್ಪರ ಪ್ರೇರಕಗಳು. ಇವೇ ಬುದ್ಧಿಯ ಬುಡ-ತಲೆಗಳು. ಅವು ಅಬೌದ್ಧಿಕ ಪ್ರಜ್ಞೆಗಳು. ಬುದ್ಧಿಯು ಅವುಗಳ ಸೇವಕ, ಹೆಚ್ಚೆಂದರೆ ಸಾರಥಿ ಅಥವಾ ಮಂತ್ರಿ. ಈ ಮೂರರ ಒಟ್ಟಿನ ಹೆಸರು ಜಾಗ್ರತ ಮನಸ್ಸು ಎಂದು. ಅಹಂಕಾರ-ಮಮಕಾರಗಳು ಇದರ ದೇಹಾಂತರಗಳೆಂಬುದು ವೈಯಕ್ತಿಕ ಮನದ ಪಾಶ್ಚಾತ್ಯ ವ್ಯಾಖ್ಯೆ(2). ಮನಸ್ಸುಗಳ ಮನಸ್ಸುತನವೆಂಬುದು ಅತಿ ಭೌತವಾದ ಆತ್ಮ, ಜೀವಾತ್ಮ ಅಥವಾ ಅಹಂಕಾರ ತಾನಲ್ಲ, ದೇಹಾತ್ಮಭಾವ ಉಳ್ಳ ವಿಜ್ಞಾತೃ, ಅನುಭವ ಭೋಕ್ತೃ—ಎಂಬುದು ಮಹಾಭಾರತ. ಮಾನಸ ಸಂವೇದನೆ, ಸ್ಮೃತಿ, ಕಲ್ಪನೆ, ಭಾವನೆ, ಊಹನೆ, ತರ್ಕ, ಮಾನಸಿಕ ಪ್ರಯತ್ನ ಮುಂತಾದವುಗಳಿಗೆ ಮನಸ್ಸು ಕರ್ತೃ ಎಂಬುದು ಮನಃಶಾಸ್ತ್ರದ ಪಾಶ್ಚಾತ್ಯ ವಿವರಣೆ. ಆದುದರಿಂದ ಈ ಮನಸ್ಸು ಭಾರತದ ಜೀವಾತ್ಮನ ಅರ್ಥವನ್ನು ಒಳಗೊಂಡದ್ದಾಗಿದೆ. ಇಂಥ ಮನೋವಂತ ದೇಹವೇ ವ್ಯಕ್ತಿ. ಮನಸ್ಸು

(2) The Dictionary of philosophy, page 198.

ದೇಹದ ಕೃತ್ಯ ಎಂಬುದಕ್ಕೆ ಅರಿಸ್ಟಾಟಲ, ಹಾಬ್ಸ, ಹೆಗೆಲ್ ಮತ್ತು ವರ್ತನಾವಾದಿ ಮನಃಶಾಸ್ತ್ರಜ್ಞರ ಸಹಿಯಿದೆ; ಅದು ದೇಹದ ಮಾನಸಿಕ ಆಭಾಸ ಎಂಬುದಕ್ಕೆ ಬರ್ಕ್ಲೀ, ಲಿಬ್ನಿಜ್, ಷೋಪೆನ್' ಹೋರರ ರುಜುವಿದೆ.

ಶಿರಸಿಯ ಈ ವರ್ಷದ ಹೋಳಿಹಬ್ಬದ ಬೀದಿ ಪ್ರದರ್ಶನಗಳಿಗೂ ಅಲಾವಿ ಹಬ್ಬದ ನೃತ್ಯಾದಿ ಪ್ರದರ್ಶನಗಳಿಗೂ ವ್ಯತ್ಯಾಸ ಬಹಳ ಕಾಣ-ದಿರುವುದು ಲೌಕಿಕತೆಯ ವಿಜಯವೆಂದು ಭಾವಿಸುವಷ್ಟರಲ್ಲಿ ಹುಬ್ಬಳ್ಳಿ-ಯಲ್ಲಿ ತದ್ವಿರುದ್ಧವಾದ ಗಲಭೆ ನಡೆದ ಪತ್ರಿಕಾವರದಿಯನ್ನೋದಿ "ಈಶ್ವರ ಅಲ್ಲ ಶೇರ್ ನಾಮ- ನಿನ್ನ ಹೆಸರು ಈಶ್ವರನಲ್ಲ" ಎಂದು ಭಾಸವಾಯ್ತು! "ಎಲೆಲೇ ರಸ್ತೆ ಏನು ಅವ್ಯವಸ್ಥೆ! ಕುಡಿದಿದ್ದೀಯಾ ನೀನು?" ಎಂಬ ಯೆಂಡ್ಕುಡ್ಕರತ್ನನ ಭವಿಷ್ಯವಾದ ಖರೆಯಾಗಿ ಪರಿಣಮಿಸಿದ ಈ ಕಾಲದಲ್ಲಿ Reason ತರ್ಕವು ವ್ಯವಹಾರದಲ್ಲಿ ಎಂದಾದರೂ ಬಂದೀತೇ? ಇನ್ನು Rhyme ಅಂತೂ ನಮ್ಮಕವಿಗಳ ಹಾವಳಿಯಲ್ಲಿ ತಲೆಮರೆಸಿಕೊಂಡಿದೆ! ಅಂದಮೇಲೆ ಕೇಳಬೇಕೇ?

"ನಮ್ಮ ಊರಿನ ರಸಿಕರ"ಲ್ಲಿ ಪ್ರಸಿದ್ಧನಾದ ನಾಣಿ ಪುನರ್ಜನ್ಮವನ್ನು ನಂಬಿದವನಾದುದರಿಂದ ಅವ್ಯವಸ್ಥೆಯಲ್ಲಿಯೂ ಒಂದು ವ್ಯವಸ್ಥಿತ ಪ್ರಾಸ-ವನ್ನು ಕಾಣಬಲ್ಲ ಪೋಲೀಸ್ ಇನ್ಸ್‌ಪೆಕ್ಟರನಾಗಿ ಈಗ ಹುಟ್ಟಿದ್ದು ಬ್ಯಾನರ್ಜಿ ಅವರ ರಾಜಸ್ಥಾನದ ಪ್ರಯೋಗಾಲಯದಲ್ಲಿ ಮೊನ್ನೆ ಚೆಕ್ಕಿಗೆ ಬಂದಿತು. ಅವನಿಗೆ ಹಿಂದಿನ ಜನ್ಮದಲ್ಲಿ ನೀನು ಯಾರಾಗಿದ್ದೆ? ಎಂಬ ಪ್ರಶ್ನೆಯನ್ನು ಹಾಕಿದ ಕೂಡಲೇ—

ಶಾಲು ಸಾಬಿಯು ಬೊಮ್ಮನೆಂದೆನ್ನುತಿದ್ದ
ಜೋಯಿಸರು ಎಲೆ ನಾಣಿ ಶೂದ್ರನೀ ಸಿದ್ಧ—
ಜನಿವಾರ ವಿಲ್ಲದವ ಹೋಗೊ ಹೋಗೆಂದು
ಬೈದಾಗ ನಕ್ಕೆ ನಾ ಮರವೇರಿ ನಿಂದು!

ಎಂದು ತನ್ನ ಪೂರ್ವ ವೃತ್ತಾಂತವನ್ನು ಕವಯಿಸಿ ಬಿಟ್ಟನು. ಜಾತೀಯ ಗಲಭೆಗಳನ್ನು ನಿಲ್ಲಿಸಲು "ಕಣ್ಣೀರು ಗಾಳಿ"ಯನ್ನು ಮೊನ್ನೆ ಛೂ ಬಿಟ್ಟಾಗ ಅದೇಕೆ ವಿಫಲವಾಯ್ತೆಂದು ಅವನನ್ನು ಕೇಳಿದಾಗ—

ಅರ್ಧನಾರೀಶ್ವರನ ಭಕ್ತನಾಗಿದ್ದೆ
ಹಿಂದು-ಮುಸ್ಲಿಂ ಯೋಗ ಹಿಡಿದು ನಿಂತಿದ್ದೆ;
ಉಸಿರ ಬಿಗಿ ಹಿಡಿದಾಗ ಬಂದೂಕಿನಿಂದ
ಗಾಳಿ ಹೊರಬರುವುದೇ ಹೇಳಿ ಒಳಗಿಂದ?

ಎಂದು ಪ್ರಾಸಯಿಸಿ ಬಿಟ್ಟ. ಅನಂತರ ಬ್ಯಾನರ್ಜಿಯವರು ಬೆಂಕಿ ಹಿಡಿದ ಮನೆಯಿಂದ ಹಿಂದುಗಳನ್ನು ತಪ್ಪಿಸಲು ಮುಸಲ್ಮಾನನಾದ ನೀನು ಹೇಗೆ ಹೋದೆ? ಎಂದು ಕೇಳಿದರು. ಅದಕ್ಕಾತನು—

ಗಡ್ಡವಿಲ್ಲದೆ ಹುಟ್ಟಿದುದು ಗೊತ್ತು ನನಗೆ ಮಹಮದ್
ಆ ವೇಳೆ ಗಡ್ಡ ಬಿಟ್ಟುದು ನವ್ಯ ಕಾವ್ಯದ ಪರತ್
ಇನ್‌ಸ್ಪೆಕ್ಟರಿಕೆ ಬರುವ ಮೊದಲು ನಾನಿದ್ದೆ ಮುಸ್ಲಿಂ
ಆ ವೇಳೆ ನಾನರಿತೆ ಶಾಂತಿಗೇ ಎಂಬರಿಸ್ಲಾಂ!

"ನೀನು ವಿಚಿತ್ರ ಮುಸಲ್ಮಾನನಾಗಿ ತೋರುವೆ" ಆದುದರಿಂದ ನಿನ್ನ ನಾಟಿತ್ವಕ್ಕೂ ಹಿಂದೆ ಏನಾಗಿದ್ದೆ? ಹೇಳು!" ಎಂದು ಬ್ಯಾನರ್ಜಿಯವರು ಕೇಳಿದಾಗ—

"ಇಂಗ್ಲೆಂಡಿನಲ್ಲಿ ನಾ ಕ್ರೈಸ್ತನಾಗಿದ್ದೆ
ಬಂಗ್ಲೆ ಕಟ್ಟಿಸಿಕೊಂಡು ಮಾಡಿದ್ದೆ ನಿಷ್ಠೆ
ಯೇಹೂದ್ಯಳೊಬ್ಬಳನು ಮದುವೆಯಾಗಿದ್ದೆ
ಸುಳ್ಳು ಹೇಳದೆ ಇರುವ ವ್ರತವ ಹಿಡಿದಿದ್ದೆ

ಬ್ಯಾನರ್ಜಿ—"ಸುಳ್ಳು ಹೇಳಿದರೆ ಪಾಪ ಬರುತ್ತದೆ ಎಂದು ನಂಬಿದ್ದೆಯಾ?"

ಇನ್ಸ್‌ಪೆಕ್ಟರ್—ಸುಳ್ಳನ್ನು ಹೇಳದರೆ ಹೇಳುವಾತನ ಇರವು
ಸುಳ್ಳನದಿರದು ಒಂದಲ್ಲ ಒಂದು ದಿನ
ಅಲ್ಲಾನ ಆಣೆಗೆಂಡಿಲ್ಲ!

ಬ್ಯಾನರ್ಜಿ— ಅಲ್ಲಾ ನಿನ್ನನ್ನು ಕಂಡು ಎಂದು ಆಜ್ಞೆ ಕೊಟ್ಟ?
ಇನ್ಸ್‌ಪೆಕ್ಟರ್—ಎಲ್ಲರನ್ನೂ ಕಂಡು ಎಂದೂ ಕೊಟ್ಟಿದ್ದನವ
ಇಲ್ಲ ನೆನಪಿಟ್ಟು ಕೊಂಡವರು ಬಹಳ ಜನ—
ದೊಳ್ಳು ಕಣ್ಗಡ್ಡ ಬಂತಲ್ಲ!"

ಈ ಸಂವಾದವು ಅತಿಮಾನಸಮನಃಶಾಸ್ತ್ರ ಪ್ರಸ್ಥಾನದ ಉದಾಹರಣೆ. ಸ್ಪಿನೋಜನೂ ತಟಸ್ಥ ಏಕಮೂಲವಾದಿಗಳೂ ದೇಹ-ಮನಸ್ಸುಗಳು ಅವೆರಡಕ್ಕೂ ಅತೀತವಾದ ಏನೆಯು ಪದಾರ್ಥದ ಅಭಿವ್ಯಕ್ತಿಗಳೆನ್ನುತ್ತಾರೆ. ಆ ಪದಾರ್ಥವು ದೈಹಿಕವೂ ಅಲ್ಲ, ಮಾನಸಿಕವೂ ಅಲ್ಲ—ಭಾರತ ಹೇಳುವಂತೆ ಅವೆರಡಕ್ಕೂ ಮೂಲವಾದ ಆತ್ಮರೂಪದ ಆಧಾರ—ಆ ಆಧಾರವು ಅತಿಮಾನಸ.

ದೇಹಪ್ರಜ್ಞೆ-ಮನಃಪ್ರಜ್ಞೆಗಳು ಪರಸ್ಪರ ಪ್ರೇರಕಗಳೆಂಬುದು ಡೆಸ್ಕಾರ್ಟಿಸ್ಸನ ಮತ. ಕ್ಲಿಫರ್ಡ್, ಹಕ್ಸ್ಲಿ, ಹಾಡ್ಗ್‌ಸನ್ ಮುಂತಾದವರು ಪ್ರಜ್ಞೆಯು ಮೂಲಭೂತವಾದ (ದೈಹಿಕ) ಕ್ರಿಯಾಸಂತಾನದ ಆನುಷಂಗಿಕ ಘಟವೆನ್ನುತ್ತಾರೆ. ಇಂದ್ರಿಯ ಸಂವೇದನೆಗಳಿಂದ ಸ್ವತಂತ್ರವಾದ ಮನಸ್ಸೆಂಬುದು ಒಂದು ಮಾಯೆ ಅಥವಾ ಅವಿದ್ಯೆ ಎನ್ನುತ್ತಾನೆ ರಸೆಲ್; ಅದರ ಕ್ರಿಯೆಗಳು ಮುಗಿಲ ಹೂಗಳು!

ಪ್ರಕೃತಿ

ಮಹಾಭಾರತದಲ್ಲಿ-ಬ್ರಹ್ಮದಲ್ಲಿ ಅವ್ಯಕ್ತವೂ ಅವ್ಯಕ್ತದಲ್ಲಿ ಮಹತ್ತೂ ಮಹತ್ತಿನಲ್ಲಿ ಬುದ್ಧಿಯೂ ಬುದ್ಧಿಯಲ್ಲಿ ಮನಸ್ಸೂ ಮನಸ್ಸಿನಲ್ಲಿ ಇಂದ್ರಿಯಗಳೂ ವ್ಯಾಪ್ಯಗಳಾಗಿವೆ. ಬ್ರಹ್ಮವು ವಿಶ್ವದ ಒಳ ಹೊರಗಿರುವ ಅನಂತ ಚೈತನ್ಯ ಶಕ್ತಿ. ಅವ್ಯಕ್ತ ಅಥವಾ ಪ್ರಕೃತಿಯು ಅದರ ಹೊರ ಸ್ವಭಾವ. ಮಹತ್ತು ದೇಹಿಗಳ ಒಳಗಿನ ಅತಿಮಾನಸ ಕರ್ತೃವಾದ ಜೀವಾತ್ಮ; ಬುದ್ಧಿ ಅದರ ಸಾಧನ. ಮನಸ್ಸು ಸಂಕಲ್ಪ-ವಿಕಲ್ಪಾತ್ಮಕ; ಇಂದ್ರಿಯಗಳು ಅದರ ಮಂತ್ರಿಗಳು! ಸತ್ವ-ರಜಸ್ತಮಗಳ ಒಂದು ಮೊತ್ತವೇ ಪ್ರಕೃತಿ.

ಸತ್ವವೆಂದರೆ ನಿಶ್ಚಿತ ಜ್ಞಾನ, ಅದರ ಧಾರಣೆ, ಸ್ಮೃತಿ ಮತ್ತು ಸಂತೋಷ. ರಜಸ್ಸೆಂದರೆ ಅತ್ಯಾಸೆ, ಸಿಟ್ಟು, ಅತಿಕಾಮ, ಭಯ, ಸುಸ್ತು ಅಥವಾ ಮಾನಸಿಕ ಶ್ರಮ ಮತ್ತು ಅನವಧಾನ. ತಮಸ್ಸೆಂದರೆ ದುಃಖ, ನೋವು, ವಂಚನೆ, ಜಂಭ ಮತ್ತು ಕ್ರೌರ್ಯ. ಮೊದಲನೆಯದು ಬ್ರಾಹ್ಮ, ಎರಡನೆಯದು ಕ್ಷಾತ್ರ, ಮೂರನೆಯದು ವೈಶ್ಯ. ದುಃಖವು ಅಸಂತೋಷ.

ಸಾಮಾಜಿಕ ಗುಂಪುಗಳ ಸಾಧನ, ರೂಢಿ ಮತ್ತು ಸಂಸ್ಥೆಗಳನ್ನು ಸಂಸ್ಕೃತಿ ಎಂದು ಹೇಳಿದವನು ಸ್ಪೆಂಗ್ಲರ್. ವಿಶ್ವದ ಮತ್ತು ಸಮಾಜದ ಹಕ್ಕು, ಸುಗುಣ, ಕರ್ತವ್ಯ, ಬಳಕೆ (ರೂಢಿ), ಕಾಯದೆ (ವಿಧಿ)ಗಳನ್ನು ಧರ್ಮವೆಂದು ಸಾರಿದ್ದು ಮಹಾಭಾರತ. ಸಮಾಜವೆಂದರೊಂದು ಭೌತಿಕ ಪದಾರ್ಥ, ಅವಯವಿ (ಅವರಲ್ಲೂ ಜಟಿಲ ಅಂಗಿ), ವಿವಿಧ ವಂಶೀಯರ ಸಂಘರ್ಷದಿಂದ ಹುಟ್ಟಿದ ರಚನೆ ಹಾಗೂ ಸಂಸ್ಥೆಗಳ ಒಂದು ಘಟನೆ, ಸಜಾತಿಯತೆಯ ಪ್ರಜ್ಞೆ, ವಿವಿಧ ಮಾನವ ಗುಂಪುಗಳ ಸಂಬಂಧಗಳ ವ್ಯಾವಹಾರಿಕತೆ (ವಾಸ್ತವಿಕತೆ), ಸಾಂಘಿಕ ಮನ ಎಂದಿರುವುದು ಪಾಶ್ಚಾತ್ಯ. ವೃತ್ತಿವಿಭಾಗಗಳನ್ನು ವರ್ಣಗಳೆಂದು ಹೇಳಿದ್ದು ಮಹಾಭಾರತ. ವರ್ಣಗಳ ವ್ಯವಸ್ಥಿತವಾದ ಸಣ್ಣ ಅಥವಾ ದೊಡ್ಡ ಗುಂಪಿಲ್ಲಿ ಸಮಾಜ. ಭಾರತೀಯ ಸಮಾಜ ಶಾಸ್ತ್ರದಲ್ಲಿ ವರ್ಣವು ಬಣ್ಣವಲ್ಲ. ವೃತ್ತವು ವೃತ್ತಿಪ್ರಭಾವಿತ; ಶೀಲವು ನೀತಿ ಜನಿತ, ನೀತಿಯು ಸಾಮಾಜಿಕ ಸಂಬಂಧ, ಸಂಸ್ಕೃತಿಯು ಅದರ ಫಲ. ಸಂಬಂಧವು ಸುಸಂಬಂಧ ಅಥವಾ ಸಮನ್ವಿತ ಜೀವನ ಮಾರ್ಗ, ನೀತಿಯು ವಂಶಪಾರಂಪರಿಕ; ವೃತ್ತವು ಪ್ರಭಾವಿ ಮನಃಪ್ರವೃತ್ತಿಗೆ ಸಹಜವಾಗಿ ಆಯ್ದುಕೊಂಡ ಕರ್ಮಾಭ್ಯಾಸದ ಫಲ. ಒಂದು ಮಾನವ ಜನ್ಮಸಹಜ; ಇನ್ನೊಂದು ಆಚರಣ ಸಂಸ್ಕಾರಜನ್ಯ.

ಶಾಶ್ವತ ಧರ್ಮ

"ಸುಪ್ರಜ್ಞಮಪಿ ಚೇಚ್ಛೂರಂ ಬುದ್ಧಿರ್ಮೋಹಯತೇನರಂ- ಶೂರ ವಿದ್ವಾಂಸನನ್ನೂ ಸಿರಿಯು ಅಜ್ಞಾನ, ಅಹಂಕಾರ ಕಾಮ ಕ್ರೋಧಗಳಿಗೆ

ಯಜಮಾನಿಕೆ ವಹಿಸಿಕೊಟ್ಟು ಆ ಮೂಲಕ ಅವನ್ನು ಪಾಪ (ಪರಹಿಂಸೆ ಪರ ಶೋಷಣೆ) ಮಾಡಲು ಕಾರಣವಾಗುತ್ತದೆ-ಎಂಬ ನಿತ್ಯನೂತನ ಎಚ್ಚರಿಕೆ ಕೊಟ್ಟದ್ದು ಮಹಾಭಾರತ. ಇಂಥ ಎಚ್ಚರಿಕೆಗಳೇ ನಿಜವಾದ ಸಮಾಜ ಶಿಕ್ಷಣ.

ಪ್ರಣಷ್ಟಃ ಶಾಶ್ವತೋ ಧರ್ಮಃ ಸದಾಚಾರೇಣ ಮೋಹಿತಃ |
ತೇನ ವೈದ್ಯಸ್ತಪಸ್ವೀ ವಾ ಬಲವಾನ್ ವಾ ವಿಮುಹ್ಯತೇ ||

ನಿಕೃಷ್ಟವೃತ್ತಿಗಳುಳ್ಳ ವರ್ಣಗಳಿಗೂ ಅನಿಕೃಷ್ಟ ವೃತ್ತಿಗಳುಳ್ಳ ಅವರ್ಣ (ಲಿಂಗಿ) ಗಳಿಗೂ ಸಾಮಾನ್ಯವಾದ ಅಹಿಂಸಾದಿ ಧರ್ಮಗಳ ವ್ಯಾವಹಾರಿಕ ಅಭಿವ್ಯಕ್ತಿಯನ್ನು ಗುರುತಿಸುವ ಶಕ್ತಿಯನ್ನು ಜನರು ಇತಿಹಾಸದ ಅಂಥ ಕಾರಯುಗದಲ್ಲಿ ಕಳೆದುಕೊಳ್ಳುತ್ತಾರೆ; ವಿದ್ಯಾವಂತರೂ ತಪಸ್ವಿಗಳೂ (ಸಂಶೋಧಕರೂ) ಪೌರುಷಬಲ ಸಂಪನ್ನರೂ ಒಮ್ಮೆ ಅಂಥ ಅಜ್ಞಾನಕ್ಕೆ ಆಗ ಇಳಿಯುವುದುಂಟು. ವಿಜ್ಞಾನಿಗಳಿದಕ್ಕೆ ಹೊರತಲ್ಲ "ವಿಜ್ಞಾನವು" ಜ್ಞಾನ (ಸಮನ್ವಿತ ಜೀವನ ಜ್ಞಾನ) ವಲ್ಲ.

ಕ್ರಿಸ್ತ ಹೇಳಿದಂತೆ ಯೆಹೂದ್ಯಮತದಿಂದ ಪ್ರವಾದಿಗಳನ್ನೂ ಉತ್ತರ ಕಾಲೀನ ಪ್ರಕ್ಷೇಪಗಳನ್ನೂ ಕಿತ್ತೆಸೆದರೆ ಅದು ಜಗತ್ತಿನ ಮನುಕುಲದ ಎಲ್ಲ ಸಂಕಟಗಳನ್ನೂ ಪರಿಹರಿಸಬಲ್ಲ ಉಪದೇಶಗಳಿಂದ ಕೂಡಿದ ಧರ್ಮವೆನ್ನಿಸುತ್ತದೆ- ಎಂದು ಹೇಳಿದ್ದು ಆಲ್ಬರ್ಟ್ ಐನ್‌ಸ್ಟೀನ್-ಲೇಖದಲ್ಲಿ. ಇಂಥ ಮಾತನ್ನು ಮಹಾಭಾರತಕ್ಕೆ ಇನ್ನೂ ಹೆಚ್ಚಾಗಿ ಅನ್ವಯಿಸಿ ಹೇಳಬಹುದು. ಅದರ ಮತೀಯ ಹಾಗೂ ತಾತ್ಕಾಲಿಕ ಹಿತಾಧಾರಗಳನ್ನು ಬದಿಗಿಟ್ಟು ನೋಡಿದಾಗ ಅದರಲ್ಲಿರುವ ಉಪದೇಶಗಳು ತಮ್ಮ ವಿಶ್ವವ್ಯಾಪಕತೆಯಲ್ಲಿ ಅಪ್ರತಿಮವಾಗಿ ತೋರದಿರಲಾರವು. ಮಾನವ ನಾಗರಿಕತೆಯ ಉಳಿವು, ಅದು ನಿರ್ಮಿಸುವ ನೈತಿಕ ಶಕ್ತಿಯನ್ನೇ ಹೆಚ್ಚಾಗಿ ಅವಲಂಬಿಸಿದೆ- ಎಂದು ಅಭಿಪ್ರಾಯ ಪಟ್ಟದ್ದು ಉಕ್ತ ಜ್ಞಾನವೃದ್ಧನೇ. "ಯತೋ ಧರ್ಮಸ್ತತೋ ಜಯಃ"[3] ಎಂದದ್ದು ಮಹಾಭಾರತ; "ಧರ್ಮಾತ್

(3) ಧರ್ಮವಿದ್ದಲ್ಲಿ ಜಯವಿದೆ; ಶಾಶ್ವತಧರ್ಮಾನುಕೂಲ ಆಚರಣೆಯಿಂದಲೇ ಅಂತ್ಯ ಜಯ.

ದರ್ಥಶ್ಚ ಕಾಮಶ್ಚ ಸಕಿಮರ್ಥಂ ನ ಸೇವ್ಯತೇ[4] ಎಂಬದ್ದೂ ಅವರ ಪ್ರಶ್ನಾರನೇ. ಆದರೆ ಸರ್ವವ್ಯಾಪಕ ಧರ್ಮಸೂತ್ರಗಳ ಪ್ರಭಾವವನ್ನು ಅಡಗಿಸುವ ಹಾಗೆ ಅಲ್ಪವ್ಯಾಪ್ತಿಯ ಸೂತ್ರಗಳನ್ನು ಪ್ರಚುರ ಪಡಿಸುತ್ತ ಬಂದುದರಿಂದ ಹಿಂದು ಧರ್ಮವು ಇತರ ಧರ್ಮಗಳಂತೆಯೇ ಪರಕೀಯರಿಗೆ ಒಂದು ಮತವಾಗಿ ತೋರಿತು. **ಸಾರ್ವನೈತಿಕಸೂತ್ರಗಳಿಗೆ ವಿರುದ್ಧವಾಗಿ ಪರಿಣಮಿಸುವ ಸದಾಚಾರ, ಶಿಷ್ಟಾಚಾರಗಳು ಒಂದು ಧರ್ಮವನ್ನು ಮತದ ಸಂಕುಚಿತತೆಗೆ ಇಳಿಸುತ್ತವೆ.** ದೇಶ (ಅವಕಾಶ), ಕಾಲಗಳು ವ್ಯಾಪ್ತಿಯ ಸೀಮಾ ರೇಖೆಗಳು. ಅವುಗಳನ್ನು ಬಹಳ ಸಣ್ಣ ಸಣ್ಣ ತುಂಡುಗಳನ್ನಾಗಿ ಮಾಡುತ್ತ ಹೋದುದೇ ಅನವಶ್ಯಕ ಜಾತಿಸ್ತರಗಳ ನಿರ್ಮಾಣ ಭಾರತದಲ್ಲಿ ಆಗುವಂತಾಯ್ತು; "ಭೇದವು ಭಯಾವಹ" ಎಂಬ ಯಾಜ್ಞವಲ್ಕ್ಯೋಕ್ತಿಯಂತೆ ಜಾತಿಭೇದಗಳನ್ನು ರಾಜಶಕ್ತಿಯು ಜನಶೋಷಣೆಗೆ ಉಪಾಯವನ್ನಾಗಿ ಮಾಡಿದ ಭಯಂಕರ ಸಂನಿವೇಶವು ಉಂಟಾಯಿತು. ಅಧಿಕಾರ ಬಲಸಂಪನ್ನರಲ್ಲಿ ಅನೇಕರಿಲ್ಲಿ ಇತಿಹಾಸದ ವಿವಿಧ ಅವಧಿಗಳಲ್ಲಿ ಜಾತಿಗಳಲ್ಲಿ ಒಡಕನ್ನು ಎಚ್ಚರಿಸಿ, ಸ್ವಾಧಿಕಾರ ಪ್ರಮತ್ತರಾಗಿ ವರ್ತಿಸಿದರು. ಆದುದರಿಂದ ಹಿಂದುವಿಂದು ಜಾತ್ಯತೀತನಾಗಲು ಯೋಚಿಸುವುದು ಕ್ರಮಪ್ರಾಪ್ತ; ಆದರೆ ಅದಕ್ಕೆ ಬೇಕಾದುದು ಪಂಚವಾರ್ಷಿಕ ಯೋಜನೆಯಲ್ಲ ಶತವಾರ್ಷಿಕ ಯೋಜನೆ; ಉಪಜಾತಿಭೇದಗಳಿಂದ ಮುಕ್ತನಾಗಲು ದಶವಾರ್ಷಿಕ ಯೋಜನೆಯೊಂದು ಸಾಕು. ಶಾಸ್ತ್ರವಿಧಿಯಂತೆ (ಅಂದರೆ ಯೋಜನಾಬದ್ಧವಾಗಿ) ಮಾಡಹೋದರೆ ಮಾತ್ರ ಸುಧಾರಣೆ ಚಿರಸ್ಥಾಯಿಯಾದೀತು. ದ್ವೇಷವೆಂದೂ ಐಕ್ಯವನ್ನು ಸಾಧಿಸಿಕೊಡದು; ತಿರಸ್ಕಾರವೆಂದೂ ಪುರಸ್ಕಾರವನ್ನು ಗಳಿಸಿಕೊಡದು; ಕಾಲಕ್ರಮಣಕ್ಕೆ ಅವಕಾಶಕೊಡದೆ ಯಾವುದೂ ಸಿದ್ಧಿಸದು. ಜಾತಿಭೇದನಿರಸನವು ಸಾಂಸ್ಕೃತಿಕ ಮಟ್ಟಗಳ

---

4 ಅರ್ಥ-ಕಾಮಗಳನ್ನು ಧರ್ಮಾನುಗುಣವಾಗಿ ಏಕೆ ಅನುಭವಿಸಬಾರದು ? ಅಲ್ಪವ್ಯಾಪ್ತಿಯುಳ್ಳ ನೀತಿಯು ಮಹಾವ್ಯಾಪ್ತಿಯ ನೀತಿಗೆ ಅವಿರುದ್ಧವಾಗಿಯೂ ಅರ್ಥಕಾಮಗಳ ಅರ್ಜನೆ, ಭೋಗಗಳು ಹಾಗೇ ಧರ್ಮಕ್ಕೆ ಅವಿರುದ್ಧವಾಗಿಯೂ ಇರುವಂತೆ ನಡೆದು ಕೊಳ್ಳಬಾರದೇಕೆ ?

ಅವನತಿಗೆ ಕಾರಣವಾಗುವಂತೆ ವರ್ತಿಸುವುದು ನರಕಕ್ಕೆ ಬರಲು ಆಮಂತ್ರಣ ಕೊಟ್ಟಂತೆಯೇ ಸರಿ; ಸಾಂಸ್ಕೃತಿಕ ಅಧಃಪತನವು ಸಮಾಜವನ್ನು ಜೀವಚ್ಛವದ ದರ್ಜೆಗೆ ಇಳಿಸುತ್ತದೆ. ಹಾಗೇ ತಜ್ಞರಲ್ಲಿ ನಿರಾಶಾಜನಕವಾಗುವಷ್ಟು ಅಭಿಪ್ರಾಯ ಭೇದಗಳು ಆ ಈ ವಿಷಯದ ಬಗ್ಗೆ ಉಂಟಾಗುವುದೂ ಅಧಃಪತನ ಹೇತು.

ಜೀವನನಿರ್ವಾಹದ ಅರ್ಥಾರ್ಜನೆಗೆ ನೇರವಾಗಿ ಸಂಬಂಧಿಸಿದ ಕೆಲಸಗಳು ಸಾಂಸ್ಕೃತಿಕವೆಂದದ್ದು ಐನಸ್ಟೀನ್ ಮಹಾಶಯನೇ. ಜ್ಞಾನಿಗಳಿಂದ ಭಿನ್ನರಾದ ಕರ್ಮಿಗಳು (ಜ್ಞಾನಕರ್ಮಿಗಳಲ್ಲದ ಕರ್ಮಜ್ಞಾನಸಂಪನ್ನ ಕರ್ಮಿಗಳು) ಯಾವಾಗಲೂ ಬಹುಸಂಖ್ಯಾತರು. ಅವರು ತಮ್ಮ ಸಂತಾನದ ಕ್ರಮಿಕ ಸಾಂಸ್ಕೃತಿಕ ವಿಕಾಸಕ್ಕಾಗಿ ಅಲ್ಪಸಂಖ್ಯಾತ ಜ್ಞಾನಿಗಳನ್ನು ಪೋಷಿಸಿಕೊಂಡು ಬರುವುದು ಸರ್ವಮಾನವ ಸಾಧಾರಣ. ವೇದವ್ಯಾಸನು ಅಂಥ ಜ್ಞಾನಿ; ಆಳುವವರೂ ಊಳುವವರೂ ಇತರ ಐಹಿಕ ಸಾಧನೋತ್ಪಾದಕರು ಕೊಡು-ಕೊಳ್ಳುವ ವ್ಯವಹಾರ ನಿರ್ವಾಹಕರೂ ಕರ್ಮಿಗಳು, ಮತವಿರೋಧಗಳು ಜ್ಞಾನಿಗಳನ್ನು ಜನರು ಸಮಾನಪೂಜ್ಯರೆಂದೂ ಗಣಿಸಲು ವಿಘ್ನಕಾರಿಯಾಗುತ್ತವೆ. ಜ್ಞಾನಿಮಾನಿಗಳೊಳೆದ ಮರಣೋತ್ತರ ಕಾಲೀನ ಅವಸ್ಥೆಗಳ ಬಗೆಗಿನ ಭಿನ್ನಾಭಿಪ್ರಾಯಗಳು ಅಂಥ ವಿಘ್ನಕಾರಿತ್ವಕ್ಕೆ ಒಂದು ದೃಷ್ಟಾಂತ. ಹಲವು ಸಲ ಅಭಿಪ್ರಾಯ ಭೇದಗಳು ಶಬ್ದಭೇದ, ವಿಚಾರಕ್ರಮಭೇದ, ಕಲ್ಪನಾಪ್ರಕಾರ ಭೇದಗಳಿಂದ ಅನವಶ್ಯಕವಾಗಿಯೂ ಉಂಟಾಗುತ್ತವೆ; ಅನಂತರ, ಅಪತರ್ಕ, ಅಪೂರ್ಣತರ್ಕ, ಅಸಮನ್ವಯದೃಷ್ಟಿಯತರ್ಕ, ಕಲ್ಪನಾಪೋಷತರ್ಕ, ಕಲ್ಪನಾದರಿದ್ರತರ್ಕ ಮುಂತಾದವುಗಳ ದೆಸೆಯಿಂದ ಮೋಕ್ಷೇತರ ಪುರುಷಾರ್ಥಗಳ ಬಗೆಗೂ ನಿರುಪಯುಕ್ತವಾಗುವ ವಾದವಿವಾದಗಳು ನಡೆಯುತ್ತವೆ. ಇವೂ ಸಾಂಸ್ಕೃತಿಕ ಪ್ರಗತಿಗೆ ಕಂಟಕಗಳಾಗಬಲ್ಲವು. ಮುಳ್ಳಿಲ್ಲದ ಗುಲಾಬಿ ಇಲ್ಲವಂತೆ. ಈ ಜಗತ್ತು ಇಂಥದೇ! ಮೋಕ್ಷವೊಂದೇ (ಸ್ವರ್ಗವಲ್ಲ) ಮುಳ್ಳಿಲ್ಲದ ಗುಲಾಬಿ— ಎಂಬುದು ಮಹಾಭಾರತೀಯ

ಸಿದ್ಧಾಂತ. ಅದನ್ನು ವ್ಯಾಸನು ಕರ್ಮಿಗಳಾದ ಲೌಕಿಕರ ಮೇಲೆ ಹೇರಲಿಲ್ಲ; ಅವನು ಹೇಳಹೊರಟದ್ದು ಧರ್ಮವೊಂದನ್ನೇ. ಅದು ಸಾಮಾಜಿಕ ಆರೋಗ್ಯಕ್ಕೆ ಅಗತ್ಯವಾದ ಪೌಷ್ಟಿಕ ರಸಾಯನ. ಪ್ರತಿಯೊಬ್ಬ ವ್ಯಕ್ತಿಯಲ್ಲೂ ಸಮಾಜಾಂಶ – ವ್ಯಕ್ತಿವಿಶಿಷ್ಟಾಂಶಗಳಿರುತ್ತವೆ. ಸಮಾಜಸಾಧಾರಣಾಂಶವೆಂಬುದು ಯಾವಾಗಲೂ ವ್ಯಕ್ತಿಯ ತಾತ್ಕಾಲಿಕ ಲಾಭಾಲಾಭ, ಜಯಾಪಜಯ, ಸುಖದುಃಖಗಳಲ್ಲಿ ವ್ಯಕ್ತಿವಿಶಿಷ್ಟಾಂಶಗಳಿಗಿಂತ ಸಂಘರ್ಷ ಸಂದರ್ಭಗಳೆಲ್ಲವುಗಳಲ್ಲೂ ಬಲವತ್ತರವೆಂಬು ಭಾವಿಸಬೇಕಾದುದೇ ಸಾಮಾನ್ಯ ಧರ್ಮದ ಆತ್ಮ, ಶಾಶ್ವತ ಧರ್ಮದ ಸಾರ. ಅಸಂಘರ್ಷ ಸಂದರ್ಭ (ಅವಿರೋಧ ಸಂದರ್ಭ) ಗಳಲ್ಲೂ ವ್ಯಕ್ತಿಭೋಗ್ಯವನ್ನು ಬಹಿಷ್ಕರಿಸಲು ಭಾರತಧರ್ಮವು ಮುಂದಾಗದು. ಸಂಘರ್ಷ-ಸಂಘರ್ಷಾಭಾಸಗಳು ಉಂಟಾಗುವ ಸನ್ನಿವೇಶವನ್ನು ದೃಷ್ಟಿಯಲ್ಲಿಟ್ಟುಕೊಂಡೇ—

‘ದೃಶ್ಯತೇಹಿ ಧರ್ಮರೂಪೇಣಾ ಧರ್ಮಂ ಪ್ರಾಕೃತಶ್ಚರನ್
ಧರ್ಮಂಚಾಧರ್ಮರೂಪೇಣ ಕಶ್ಚಿದಪ್ರಾಕೃತಶ್ಚರನ್—

ಪ್ರಾಕೃತನ (ಅಸಂಸ್ಕೃತನ, ಅನಾಗರಿಕನ) ಅಧರ್ಮಾಚರಣೆ (ಎಷ್ಟೋ ಸಲ) ಧರ್ಮವೆಂದು ತೋರುತ್ತದೆ; ಅಪ್ರಾಕೃತನ ಧರ್ಮಾಚರಣೆ ಹಾಗೇ ಅಧರ್ಮವೆಂದು ಕಾಣುತ್ತದೆ’ ಎಂದು ಮಹಾಭಾರತದಲ್ಲಿ ಹೇಳಲಾಗಿದೆ. ಇರುವಿಕೆಯಂತೆ ತೋರಿಸುವುದೂ ಇಲ್ಲದ್ದನ್ನು ಇರುವಂತೆ ತೋರಿಸುವುದೂ ಮನುಷ್ಯರ ಸಮೂಹಗಳಲ್ಲಿ ಕಂಡುಬರುವ ಸಂದರ್ಭಗಳು ಅನೇಕಸಲ ತಪ್ಪಾಗಿ ಗ್ರಹಿಸಲ್ಪಡುವ ಉದಾಹರಣೆಗಳಿರುವುದರಿಂದ ಜೀವನದ ಬಗೆಗಿನ ವೇದವಾದಗಳಂತೆಯೆ ವಿಜ್ಞಾನವಾದಗಳೂ ಅನೇಕವಾಗಿವೆ; ವಿಶ್ವದ-ಸೃಷ್ಟಿ-ಲಯಗಳ ಬಗೆಗಿನ ಅನೇಕ ಉಭಯ ಜಾತಿಯವಾದಗಳೂ ಪೌರಾಣಿಕವಾಗಿರುವುದು ನಿದರ್ಶನ. ಜೀವನವು ಸ್ಥಿತಿಯೆಂಬ ಅವಸ್ಥೆ. ಅದಕ್ಕೆ ಅಸ್ಮಿತಾ ಜ್ಞಾನವು ಪ್ರಧಾನ ಕೇಂದ್ರ. ಅಂಥ ಜ್ಞಾನವು ಪಂಚವಿಧ: ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ,

ಆನಂದಮಯ. ಇವುಗಳಲ್ಲಿ ಇಂದ್ರಿಯ ಗ್ರಾಹ್ಯವಾದ ಅನ್ನಮಯ(ಶಾರೀರಿಕ) ಅಸ್ತಿತ್ವಜ್ಞಾನವು ಸಾರ್ವಜನಿಕವಾದ ಆಂಶಿಕಸತ್ಯ (ಸಾಪೇಕ್ಷ ಸತ್ಯ); ಮಿಕ್ಕನಾಲ್ಕು ಇದಕ್ಕಿಂತ ಕಡಿಮೆ ವ್ಯಾಪ್ತಿಗಳನ್ನುಳ್ಳವುಗಳಾಗಿರುವುದು ಅಸ್ಮಿತಾಪ್ರಜ್ಞೆಯುಳ್ಳ ಜೀವಿಗಳ ಸಂಖ್ಯಾಮಾನದಿಂದ.

ವ್ಯಕ್ತಿನಿಷ್ಠ ಮತ್ತು ವ್ಯಕ್ತಿಯು ವಸ್ತುನಿಷ್ಠ ಎಂದು ಗ್ರಹಿಸುವ ಗುಣಗಳೆರಡನ್ನೂ ವ್ಯಾವಹಾರಿಕ ಸತ್ಯವೆಂಬುದು ಮಾನವ ಸಾಧಾರಣ. ಮಹಾಭಾರತ ಇದಕ್ಕೆ ಎರಡಾಡದು. ಅದರ ಧರ್ಮೋಪನ್ಯಾಸ ಈ ಸ್ವಪರ-ಭೇದವನ್ನು ಮರೆತಿಲ್ಲ. ಮಾನವರ ಸಾಮಾಜಿಕ ಸಂಬಂಧಗಳಿಗೆ ಸತ್ಯದ ಈ ಸ್ವರೂಪವೇ ನೆಲೆ, ಆಧಾರ, ಅಡಿಗಲ್ಲು; ಅಂಥ ಸಂಬಂಧಗಳಿಂದ ಸುಖ, ತೃಪ್ತಿ, ಸಂತೋಷ ಉಂಟಾಗಬೇಕೆಂಬುದೇ ಅವನ ಬಯಕೆ. ಅಂಥ ಸುಖವು ಹೆಚ್ಚು ಹೆಚ್ಚು ಸಾತತ್ಯ ಉಳ್ಳಂತಾಗುವುದು ಅಪೇಕ್ಷಿತ. ಅದಕ್ಕೇನು ಮಾಡಬೇಕೆಂಬುದೇ ಧರ್ಮವು ಪರಿಹರಿಸಲು ಎತ್ತಿಕೊಳ್ಳುವ ಪ್ರಶ್ನೆ. ಅದು ನಿತ್ಯವಾಗಬೇಕಾದರೆ ತನ್ನ ಸ್ವರೂಪವನ್ನು ಬದಲಾಯಿಸಿಕೊಂಡು ಆನಂದತ್ವವನ್ನು ಹೊಂದಬೇಕಾಗುತ್ತದೆ. ಆನಂದವೇ ಮೋಕ್ಷ, ಸಂಪೂರ್ಣಾರ್ಥದ ಬಿಡುಗಡೆ.

ವರ್ಣಧರ್ಮ

"ಪಾಶ್ಚಾತ್ಯ ರಾಜನೈತಿಕ ತತ್ತ್ವಜ್ಞಾನಿಗಳು" ಎಂಬ ಗ್ರಂಥದ ಮುನ್ನುಡಿಯಲ್ಲಿ ಮಾರಿಸ್ ಕ್ರಾನ್‌ಸ್ಟನ್ನನು ಪೌರಸ್ತ್ಯ ತತ್ತ್ವಜ್ಞಾನಿಗಳು ಐಹಿಕ ಮುಕ್ತತೆಗೆ (ರಾಜಕೀಯ ಸ್ವಾತಂತ್ರ್ಯಕ್ಕೆ) ವಿಶೇಷ ಮಹತ್ತ್ವವನ್ನು ಕೊಟ್ಟಿಲ್ಲವೆಂಬ ಆರೋಪವನ್ನು ಮಾಡಿದ್ದಾನೆ. ಪೌರಸ್ತ್ಯ ಜೀವನ ಧರ್ಮಶಾಸ್ತ್ರವಾದ ಮಹಾಭಾರತವು ಕರ್ತವ್ಯಾರ್ಥದ ಧರ್ಮವನ್ನು ಹೇಳುವಾಗ ಜೀವನ ಸ್ವಾತಂತ್ರ್ಯವನ್ನು ಹೇಳಿದೆ ಎಂಬುದನ್ನು ಮರೆಯು. ವೃತ್ತಿವರ್ಣ (ವರ್ಗ) ಗಳ ಕರ್ತವ್ಯದಲ್ಲಿ ಸ್ವಾತಂತ್ರ್ಯದ ಕಲ್ಪನೆ ಬಂದಿದೆ. ಹಾಗೆ ಬಂದಿರುವುದು ಸಮಾಜಾಧಿಕ್ಯ-ವ್ಯಕ್ತ್ಯಾಧಿಕ್ಯಗಳೆಂಬ ಅತಿವಾದಗಳ ಘರ್ಷಣೆಗೆ

ಅವಕಾಶವಿಲ್ಲದಂತೆ ಮಾಡಿವೆ. ವೃತ್ತಿನಿಷ್ಠವಾದ ನಾಲ್ಕು ವರ್ಣಗಳು ತಮ್ಮ ತಮ್ಮ ವೃತ್ತಿನಿಯಮಗಳಂತೆ ನಡೆದುಕೊಂಡರೆ ಒಂದು ರಾಜಕೀಯ ಸರಕಾರದ ಆಳಿಕೆಗೆ ಒಳಪಟ್ಟ ಪ್ರತಿಯೊಬ್ಬನೂ ಸ್ವತಂತ್ರತೆಯನ್ನು (ಸ್ವಾಚ್ಛಂದ್ಯವನ್ನಲ್ಲ) ಅನುಭವಿಸುವುದು ಸಹಜವಾಗುತ್ತದೆ. ವೃತ್ತಿಯು ವ್ಯಕ್ತಿಲಾಭ-ಸಮಾಜೋಪಕಾರಗಳೆರಡನ್ನೂ ಸಾಧಿಸುವಂತಹ ನಿಯಮಗಳಿಂದ ಬದ್ಧವಾಗಿರುವುದು ನಾಗರಿಕವಾದುದು. ಅದರ ಆ ನಾಗರಿಕತೆಯು ಅನ್ಯೂನವಾಗುವಂತೆ ನೋಡಿಕೊಳ್ಳುವುದು ಪ್ರಭುಶಕ್ತಿ, ಪ್ರಶಾಸನ ಕರ್ತವ್ಯನಿಷ್ಠೆ. ಅಧ್ಯಯನ, ಅಧ್ಯಾಪನ, ಯಜನ, ಯಾಜನ, ದಾನ, ಪ್ರತಿಗ್ರಹವೆಂಬ ಕೆಲಸಗಳನ್ನು ಮಾಡುವುದು ಬ್ರಾಹ್ಮವರ್ಗ. ಸರ್ವಪರಂಪರಾಗತವಾದ ವೃತ್ತಿನಿಯಮಗಳನ್ನು ದಕ್ಷತೆಯಿಂದ ಪಾಲಿಸುವಂತೆ ನೋಡಿಕೊಳ್ಳುವುದು ಕ್ಷಾತ್ರಧರ್ಮ. ಕೃಷಿ, ಗೋರಕ್ಷೆ, ವಾಣಿಜ್ಯಗಳೆಂಬ ಉತ್ಪಾದನ-ವಿತರಣ ಕಾರ್ಯಗಳನ್ನು ಸದಾಚಾರದ ಮಟ್ಟಗಳಂತೆ ನಡೆಸಿಕೊಂಡು ಹೋಗುವುದು ವೈಶ್ಯಧರ್ಮ. ಅಧಿಕಾರಿ, ನೌಕರ, ಸೇವಕ ಮುಂತಾದವರ ಕೆಲಸಗಳನ್ನು ಪ್ರತಿಫಲರೂಪದ ವೇತನಗಳನ್ನು ಪಡೆದು ಆಯಾ ನಿಯಮಗಳಂತೆ ಪ್ರಭುಶಕ್ತಿಯ ಕೈಂಕರ್ಯವನ್ನು ಯಥಾವಿಧಿ ಮಾಡುವುದು ಶೂದ್ರಧರ್ಮ. ಕುಲಕಸಬುದಾರಿಕೆಯ ಪರಂಪರೆ ಶತಮಾನಗಟ್ಟಲೆ ನಡೆಯುತ್ತ ಬಂದುದೇ ಸಾಮಾಜಿಕ ಮೇಲು ಕೀಳುತನಗಳ ಕಲ್ಪನೆಗೆ ಕಾರಣವಾಯ್ತು. ಆದಿಂದು ಸೌಕರ್ಯಬಲದಿಂದ ತ್ಯಜಿಸಲ್ಪಡುತ್ತ ಹೋಗಿದೆ; ಆದರೆ ಪ್ರಶಾಸನಶಕ್ತಿ ಮಾತ್ರ ಇಂದು ರೋಗಗ್ರಸ್ತವಾಗಿದೆ. ತತ್ಫಲವಾಗಿ ಪ್ರಜಾರಾಜರ ಕಣ್ಣೆದುರೇ ಅವರ ಆಜ್ಞಾಭಂಗ (ವಿಧಿಭಂಗ) ಸಕಲ ವರ್ಗಗಳಿಂದಲೂ ಮಿತಿಮೀರಿ ನಡೆಯಲಾರಂಭಿಸಿದೆ.

ಪ್ರಜಾಪ್ರಭುತ್ವ

ಜಾನ್ ಸ್ಟ್ಯುಅರ್ಟ್ ಮಿಲ್ಲನು ಬಲಾತ್ಕಾರವು ಸ್ವಾತಂತ್ರ್ಯಕ್ಕೆ ವಿರುದ್ಧವಾದುದೆಂದು ಸಾರಿ ಪ್ರಜಾಶಕ್ತಿಪದ್ಧತಿಯ ಮಹಾವಕ್ತಾರನಾದನು.

ವ್ಯಕ್ತಿ, ಸಂಘ, ಪಕ್ಷಗಳ ವಾಕ್ ಸ್ವಾತಂತ್ರ್ಯವನ್ನು ಅವನು ಅದ್ವಿತೀಯವಾಗಿ ಸಮರ್ಥಿಸಿದನು; ಖಂಡನೆ-ಮಂಡನೆಗಳ ಹೋರಾಟವು ಆರೋಗ್ಯಕರವಾದ ವ್ಯವಹಾರ ಸತ್ಯಗಳ ಚಿರಸ್ಥಾಯಿತ್ವವನ್ನು ಸಾಧಿಸಿಕೊಡುತ್ತದೆಂದ. ಆದರೆ ಅವುಗಳ ಅಭ್ಯಾಸಗಳನ್ನೇ ಮಾಡುತ್ತ ಹೋಗುವ ವಿದ್ಯಾವಂತಿಕೆ ಒಂದು ಜನತೆಯ ವಿವಿಧ ವರ್ಗಗಳಲ್ಲಿ ಅತಿಯಾದಾಗ? ಕೇವಲ ಗೊಂದಲವನ್ನಷ್ಟೇ ಕೇಳುವಂತಾಗುತ್ತದೆ. ಅದರ ಫಲವನ್ನು ಒಡೆದಾಳುವ ರಾಜಶಕ್ತಿ-ವೈಶ್ಯಶಕ್ತಿಗಳು ಚೆನ್ನಾಗಿ ಬಳಸಿಕೊಂಡು ಪ್ರಜಾಶೋಷಣೆ (ಪರ ಹಿಂಸೆ) ಯನ್ನು ಸಮರ್ಥವಾಗಿ ಮಾಡುತ್ತವೆ. ಪ್ರಜೆಗಳ ಪ್ರಜಾಧರ್ಮಜ್ಞಾನ- ಪ್ರಜಾಧರ್ಮನಿಷ್ಠೆಗಳೂ ಪ್ರತಿನಿಧಿತ್ವ ಸಂಪಾದಕನ ಸಂಪಾದನ ಧರ್ಮವೂ ಕೇವಲ ಬಾಹ್ಯ ಸೌಂದರ್ಯ ಪ್ರದರ್ಶಕವಾದಾಗ ವ್ಯವಹಾರ-ಆಡಳಿತಗಳ ಉದಾರನೀತಿಯು ಬಲಿಷ್ಠ ಉದರನೀತಿಗೆ ಅತ್ಯಧಿಕ ಅವಕಾಶ ಕೊಟ್ಟು, ರಾಜ್ಯಭಾರವನ್ನು ವಿವಿಧ ಭ್ರಷ್ಟಾಚಾರಗಳಿಗಿಳಿಸಿ, ಶೋಷಣೆ (ಹಿಂಸೆ) ಬಹು–ಸಂಖ್ಯಾತ ಪ್ರಜೆಗಳಿಗೆ ನಾನಾ ರೂಪಗಳಲ್ಲಿ ಬಂದೊದಗು ವುದು. ಅಲ್ಪಸಂಖ್ಯಾತ ಲೋಭಿಗಳಿಗಷ್ಟೇ ಸ್ವಾತಂತ್ರ್ಯ ದೊರಕಿ ಆಗ ಬಹುಸಂಖ್ಯಾತರಿಗೆ ಗುಲಾಮಗಿರಿ ಲಭಿಸುತ್ತದೆ.

"ಭೇದೇ ಗಣಾ ವಿನಶ್ಯಂತಿ ಭಿನ್ನಾಸ್ತು ಸುಜಯಾಃ ಪರೈಃ—ಭೇದ (ಒಡಕು) ಉಂಟಾದರೆ ಗಣರಾಜ್ಯಗಳು ನಾಶವಾಗುತ್ತವೆ; ಒಡಕುಗಳಿಂದ ತುಂಬಿದ ಗಣಪ್ರಭುತ್ವಗಳು ಸುಲಭವಾಗಿ ಶತ್ರುಗಳಿಂದ ಪರಾಜಯ ಹೊಂದುತ್ತವೆ" ಎಂದಿದೆ ಮಹಾಭಾರತ. ವ್ಯಕ್ತಿಗಳ ಗುಂಪುಗಳ, ಜಾತಿಗಳ, ಮತಗಳ, ಕುಲಗಳ, ಪಕ್ಷಗಳ, ಪ್ರಾದೇಶಿಕತೆಗಳ (ಅವುಗಳಲ್ಲಿ ಒಂದರ ಅಥವಾ ಒಂದಕ್ಕಿಂತ ಹೆಚ್ಚು ಕಾರಕಗಳ) ದೆಸೆಯಿಂದ ಪ್ರಜೆಗಳಲ್ಲಿ ಪರಿಹರಿಸಲು ಸಾಧ್ಯವಾಗದ ಒಡಕು ಸ್ವಾರ್ಥದೃಷ್ಟಿಯಿಂದ ಉಂಟಾದರೆ, ಸರ್ವಹಿತಕ್ಕೆ (ಸರ್ವೋದಯಕ್ಕೆ) ಧಕ್ಕೆಯನ್ನುಂಟುಮಾಡುವ ಸ್ವರಾಜ್ಯದ ಅಥವಾ ಪರರಾಜ್ಯದ ಶತ್ರುಗಳು ಒಂದು ಗಣರಾಜ್ಯದ ಪ್ರಭುತ್ವವನ್ನು ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಕಸಿದುಕೊಂಡು ಹೋಗುವು

ಬಂದಿತು. ಸದ್ಯದ ರಾಜಕೀಯ ಪಕ್ಷಗಳ ಪರಸ್ಪರ ವಿರೋಧವು ಕ್ರಮೇಣ ಹೊರಗಿನ ವೈರಿಗಳೊಡನೆ ಒಳಸಂಚು ಮಾಡುವ ವರೆಗೆ ಹೋಗಬಹುದು; ಇಲ್ಲವೇ ಅಧಿಕಾರಾರೂಢ ಪಕ್ಷವು ತನ್ನ ಸದಸ್ಯರ ಪರಸ್ಪರ ಪಾಪ ಸ್ಪರ್ಧೆಯನ್ನು ನಿಲ್ಲಿಸಲಾರದೆ, ಒಕ್ಕಟ್ಟಿನಿಂದ, ಜನವಂಚನೆಯ ನಾನಾ ಉಪಾಯಗಳನ್ನು ಹಿಡಿದು, ಪರಪಕ್ಷೀಯರಲ್ಲಿಯ ಗಣ್ಯರನ್ನು ಆಮಿಷಗಳಿಂದ ತಟಸ್ಥಗೊಳಿಸಿ, ತನ್ನ ಸ್ಥಾನವನ್ನು ಭದ್ರ ಮಾಡಿಕೊಂಡು, ಜನರಲ್ಲಿ ಬಹುಸಂಖ್ಯಾತರ ರಕ್ತವನ್ನು ನಯವಾಗಿ, ಪ್ರಚ್ಛನ್ನವಾಗಿ ಚಿರಕಾಲ ಹೀರುತ್ತ ಹೋಗಬಹುದು. ಜ್ಞಾನಿಗಳ ಸತ್ಯಪ್ರಚಾರಶಕ್ತಿಯನ್ನೂ ಅಂಥ ರೂಢಮೂಲ ಪಕ್ಷವು ವಿಲ್ ಮಹಾಶಯನ ವಕೀಲಿಯನ್ನು ಯಾರಿಂದಲಾದರೂ ಪಡೆದರೂ ಅಮೇರಿಕದ ಸಂಯುಕ್ತ ರಾಜ್ಯದಲ್ಲಿ ಒಮ್ಮೆ ಮಾಡಿದಂತೆ[5] ಸಂಪೂರ್ಣ ಅಹಿಂಸಾತ್ಮಕವೆಂದು ತೋರುವ ಕ್ರಮಗಳಿಂದ ನಿಷ್ಫಲಗೊಳಿಸಬಹುದು.

"ಕಾಯಿದೆಗಳು ನಮ್ಮ ಹಕ್ಕುಗಳನ್ನು ಪರಿಚ್ಛೇದಿಸಿ ನಿರ್ಣಯಿಸಿಟ್ಟಿವೆ; ಅವುಗಳಷ್ಟೇ ನಮ್ಮ ಹಕ್ಕುಗಳು" ಎಂಬುದು ನೋಯಲ್ ಅನ್ನನ್ನನ ಅಭಿಪ್ರಾಯ. ಆಗ ರಾಜ್ಯಶಕ್ತಿಯು ಅಲ್ಪಬಲದ ವ್ಯಕ್ತಿಯ ಅಥವಾ ಗುಂಪಿನ ಶೋಷಣೆಗಾಗಿ ಕಾಯಿದೆ ಮಾಡಿ, ಅದನ್ನು ಆಚರಣೆಗೆ ತಂದರೂ ಅದನ್ನು ನ್ಯಾಯವೆನ್ನಬೇಕಾಗುವುದು. ಆತ್ಮ, ಆತ್ಮಸಾಕ್ಷಿ, ಶೌರ್ಯ, ಮಾನ, ಮಾನವೀಯತೆಯ ಮರ್ಯಾದೆಗಳಲ್ಲಿ ನಂಬಿಗೆಯಿಲ್ಲದ ಅಥವಾ ನಂಬಿಗೆ ಇದ್ದರೂ ಶರೀರ ಮನಗಳಿಗೆ ಬರುವ ಶಿಕ್ಷೆಗಳನ್ನು ಸಹಿಸಿಕೊಳ್ಳಲಾರದ ವ್ಯಕ್ತಿಗಳಷ್ಟೇ ಮನಸ್ಸಿಲ್ಲದ ಮನಸ್ಸಿನಿಂದ ಅಥವಾ ವಂಚನಾಹಿತ ಸಮಾಧಾನಗಳ ದೆಸೆಯಿಂದ ಸ್ಪಷ್ಟವಾಗಿ ಅನ್ಯಾಯವೆಂದು

---

(5) ಕ್ರಿ. ಶ. ೧೯೪೭-೪೮ರ ನಡುವೆ ಹೆನ್ರಿವ್ಯಾಲೇಸ್ ಎಂಬ ಹೊಸ ನಾಯಕನು ಮೂರನೇಯ ರಾಜಕೀಯ ಪಕ್ಷವೊಂದನ್ನು ನಿರ್ಮಿಸ ಹೊರಟಾಗ ಆಗಲೇ ಅಸ್ತಿತ್ವದಲ್ಲಿದ್ದ ಎರಡು ಪಕ್ಷಗಳೂ ಒಳಸಂಚಿನಿಂದ ಅವನನ್ನೂ ಅವನ ರಾಜನೀತಿಯನ್ನೂ ವಂಚನಾ ವಿಧಾನದಿಂದ ಹೇಳಹೆಸರಿಲ್ಲದಂತೆ ಮಾಡಿದವು.

ಗೊತ್ತಾದ ಯೋಜನೆಯನ್ನು ಅಥವಾ ಅವರ ಆಚರಣೆಯನ್ನು ಪ್ರತಿಭಟಿಸದೆ ಉಳಿದಾರು!

ಮಹಾಭಾರತವು ಆತ್ಮಕ್ಕೆ ಶರೀರದ ಇತರ ಎಲ್ಲ ಅಂಗಗಳಿಗಿಂತಲೂ ಅಧಿಕ ಬೆಲೆ ಕೊಡುತ್ತದೆ. ಸ್ಪಷ್ಟವಾಗಿ ಅನ್ಯಾಯವೆಂದು ಆತ್ಮಸಾಕ್ಷಿಯಾಗಿ ಗೊತ್ತಾದುದನ್ನು ಒಪ್ಪುವ ಅಥವಾ ಒಪ್ಪದಿದ್ದರೂ ನಿಷ್ಕ್ರಿಯ ತಾಟಸ್ಥ್ಯವನ್ನು ವಹಿಸುವ ನಾಗರಿಕತ್ವವು ನಾಗರಿಕತೆಯಲ್ಲ, ಅಸಹಾಯಕತೆ ಅಥವಾ ನಿರ್ಲಜ್ಜತೆ. ಆದುದರಿಂದಲೇ ರಾಜನಿಗಿಂತಲೂ ರಾಜಗುರು ಶ್ರೇಷ್ಠನೆಂಬ ತಿಳಿವಳಿಕೆ ಪ್ರಚಲಿತವಾಗಿದ್ದ ಅವಧಿಯಲ್ಲಿಯೂ—

"ಗುರೋರಪ್ಯವಲಿಪ್ತಸ್ಯ ಕಾರ್ಯಾಕಾರ್ಯಮಜಾನತಃ
ಉತ್ಪಥಪ್ರತಿಪನ್ನಸ್ಯ ದಂಡೋಭವತಿ ಶಾಶ್ವತಃ

ಗರ್ವಿಷ್ಠನೂ ಅವಿವೇಕಿಯೂ ದುರ್ಮಾರ್ಗಗಾಮಿಯೂ ಆದ ಗುರು (ಅಥವಾ ಹಿರಿಯ) ಯಾವಾಗಲೂ ಶಿಕ್ಷಾರ್ಹನು" — ಎಂಬುದು ವ್ಯಾಸ ಸಿದ್ಧಾಂತ. ರಾಜಶಕ್ತಿಸಂಪನ್ನನು (ಅಥವಾ ಸಂಪನ್ನರು) ಹಾಗಾದಾಗ ಅವನಿಗೂ ಈ ನ್ಯಾಯವೇ ಅನ್ವಯಿಸುವುದರಿಂದ ಬ್ರಿಟಿಷರ ವಿರುದ್ಧವಾಗಿ ಭಾರತ ನಡೆಸಿದ ಸತ್ಯಾಗ್ರಹ-ಯುದ್ಧ ಮುಂತಾದವು ರಾಜದ್ರೋಹವೆಂಬ ಅಧರ್ಮಸ್ವರೂಪವೆನ್ನಿಸಲಿಲ್ಲ. ಮನು ಕೂಡ ಪ್ರಜಾಕ್ರೋಶದಿಂದ ವೇನಾದಿ ದೊರೆಗಳು ಹತರಾದುದನ್ನು ಉಲ್ಲೇಖಿಸಿದ್ದಾನೆ. ದುರುಪಯುಕ್ತವಾದಾಗ ರಾಜಶಕ್ತಿಯನ್ನು (ಪ್ರಭುತ್ವಸಂಪನ್ನರನ್ನು) ಎಲ್ಲ ಪ್ರಜೆಗಳೂ ಪ್ರತಿಭಟಿಸುವ ಸಾಮರ್ಥ್ಯವನ್ನು ಸಂಪಾದಿಸಿಕೊಂಡಿರುವುದೇ ಸ್ವರಾಜ್ಯ- ಎಂದು ಗಾಂಧಿಯವರು ಹೇಳಿದ್ದು ಮಹಾಭಾರತೀಯ. ಮಾನವ ಮನದ ಅಜ್ಞಾತ ಪ್ರಜ್ಞಾಸ್ತರದಲ್ಲಿ ವಿಶ್ವಾತ್ಮಕೇಂದ್ರ (ವಿಶ್ವೇಶ್ವರ ಕೇಂದ್ರ) ದಿಂದ ಬರುವ ಒತ್ತಡವೇ ಆತ್ಮಸಾಕ್ಷಿ ಅಥವಾ ದಿವ್ಯವಾಣಿ ಎನ್ನುತ್ತಾನೆ ಯೂಂಗ್.

" ವ್ಯಕ್ತಿತ್ವ ಸಮನ್ವಯ " ಎಂಬ ಮಹಾಗ್ರಂಥದಲ್ಲಿ ಯೂಂಗ್ ಮಹಾಶಯನು "ಸೈಕೆ", ವಿಶ್ವಮನ, ವಿಶ್ವಾತ್ಮ, ಅಜ್ಞಾತಪ್ರಜ್ಞೆಗಳ ಸಮಾನಾರ್ಥಕತೆಯನ್ನು ಹೇಳಿದ್ದಾನೆ.

- ವಿಶ್ವಾತ್ಮ (ಅಜ್ಞಾತಮನ ಅಥವಾ ಅಜ್ಞಾತಪ್ರಜ್ಞೆ)
  - ಜೀವಾತ್ಮ (ವಿಶ್ವಜೀವಶಕ್ತಿ) (ಭಾವನೋನ್ಮಾದಿ ಜಟಿಲ ಜಾಲಗಳಿಂದ ಕೂಡಿದ್ದು)
  - ಪರಮಾತ್ಮ (ಮೂಲ ಪ್ರಜ್ಞೆಯ ಬಿಲ್ಲೆಗಳಿಂದ ಈಶಶಕ್ತಿಯುಳ್ಳದ್ದು)

- ವಿಜ್ಞಾತ ಮನ (ಜಾಗ್ರತ್ತಾದ ಮನಸ್ಸು)
  - ಅಹಂಕಾರ (ವೈಯಕ್ತಿಕ ಜೀವಾತ್ಮ) (ವಿಜ್ಞಾತ ಮನಸ್ಸಿನ ಒಳಮುಖ)
  - ಮಮಕಾರ (ವೈಯಕ್ತಿಕ ಸ್ವಾರ್ಥಶೀಲ) (ವಿಜ್ಞಾತ ಮನಸ್ಸಿನ ಹೊರಮುಖ)

- ಅಜ್ಞಾತಮನ + ವಿಜ್ಞಾತ ಮನ (=ಪ್ರಜ್ಞೆ)
  - ಭಾವನಾತತ್ವ (ಮೂಲಪ್ರವೃತ್ತಿಜನ್ಯ)
  - ಬುದ್ಧಿತತ್ವ
  - ದೇವಧರ್ಮ (ದೈವೀಸಂಪತ್ತು)
  - ದೈತ್ಯಧರ್ಮ (ಆಸುರೀ ಸಂಪತ್ತು)

- ವಿಜ್ಞಾತ ಮನ (ಪ್ರಜ್ಞೆ)
  - ಇಂದ್ರಿಯ ಸಂವೇದನೆ
  - ವಿಚಾರ (ಆಲೋಚನೆ)
  - ಭಾವನೆ
  - ಪ್ರತಿಭಾ ಫಲನ

ಪ್ರಜ್ಞೆ ಅಥವಾ ಮನ (ಆತ್ಮ)

ಅವಿಜ್ಞಾತ (ಅಧಿಪ್ರಜ್ಞೆ)	ಅರ್ಧವಿಜ್ಞಾತ (ಅವಪ್ರಜ್ಞೆ)	ವಿಜ್ಞಾತ (ಪುರಃಪ್ರಜ್ಞೆ)
(ಸುಷುಪ್ತ)	(ಸ್ವಪ್ನಮಯ)	(ಜಾಗರಿತ)

ಕೇವಲಾದ್ವೈತ

ತುರೀಯ	ಸುಷುಪ್ತ	ಸ್ವಪ್ನಮಯ	ಜಾಗರಿತ
	(ಪ್ರಾಜ್ಞ)	(ತೈಜಸ)	(ವಿಶ್ವ)

ಕಾಶ್ಮೀರಾದ್ವೈತ

ತುರೀಯಾತೀತ	ತುರೀಯ	ಸುಷುಪ್ತ	ಸ್ವಪ್ನಮಯ	ಜಾಗ್ರತ್

ಅಜ್ಞಾತ ಪ್ರಜ್ಞೆಯಲ್ಲಿರುವ ವಿಶ್ವಾತ್ಮ ಪ್ರಜ್ಞೆಯೆಂದರೆ ದೇವರು, ಪರಮಾತ್ಮ (ಅಥವಾ ಕ್ರೈಸ್ತ ಪರಿಭಾಷೆಯಲ್ಲಿ ತಂದೆ); ಆತ್ಮಪ್ರಜ್ಞೆಯೆಂದರೆ (ಕ್ರೈಸ್ತನಂಥ, ಕೃಷ್ಣನಂಥ) ಅವತಾರ ಪುರುಷ ಸಹಜವಾದ ಪ್ರಜ್ಞೆ. ಮೊದಲನೆಯದರದು ದಿವ್ಯವಾಣಿ, ಎರಡನೆಯದರದು ಅಂತರ್ವಾಣಿ; ಒಂದನೆಯದರಂತೆ ನಡೆದುಕೊಂಡವರು ರಮಣ ಮಹರ್ಷಿಗಳಂಥವರಾದರೆ ಎರಡನೆಯದರಂತೆ ನಡೆದುಕೊಂಡವರು ಗಾಂಧಿಯವರಂಥವರು. ಜ್ಞಾತ ಪ್ರಜ್ಞೆಯ ಮಧ್ಯಬಿಂದು (ಕೇಂದ್ರ) ಅಹಂಕಾರ; ಪರಿಧಿಪ್ರಜ್ಞೆ (ಹೊರ-ವಲಯದ ಪ್ರಣಾಳಿ) ಮಮಕಾರ: ಕ್ರೈಸ್ತ ಪರಿಭಾಷೆಯಲ್ಲಿ ಒಂದನೆಯದು

ಪವಿತ್ರ ಆತ್ಮ (ದೆವ್ವ=ದೇವತೆ), ಎರಡನೆಯದು ಸೈತಾನ! ದಿವ್ಯವಾಣಿ ಆತ್ಮಸಾಕ್ಷಿಯಾದರೆ ಅಂತರ್ವಾಣಿ ಮನಃಸಾಕ್ಷಿ; ಒಂದು ನೈತಿಕವಾದರೆ, ಇನ್ನೊಂದು ನ್ಯಾಯಿಕವಾದುದು; ಒಂದು ವೇದೋಕ್ತಿಯಂತಾದರೆ, ಇನ್ನೊಂದು ನ್ಯಾಯಾಧೀಶೋಕ್ತಿಯಂತೆ. ಎರಡು ವೇದೋಕ್ತಿಗಳಲ್ಲಿ ವಿರೋಧ ಉಂಟಾದಾಗ ನ್ಯಾಯಬುದ್ಧಿ ಯಾವ ನಿರ್ಣಯವನ್ನೂ ಕೊಡಲಾರದು. ಅಂಥ ಸಂದರ್ಭದಲ್ಲಿ ಉಪನಿಷತ್ತಿನ ಮಹಾವಾಕ್ಯದಂಥ ಪೂರ್ಣಪ್ರಜ್ಞೆಯ ಸ್ಫೂರ್ತಿಯೊಂದೇ ನಿರ್ಣಯ ಕೊಡಬಲ್ಲದು.

ಬಯಕೆಯ ಬೀಜವಾದ ಮೂಲಪ್ರವೃತ್ತಿ, ಪ್ರತಿಭೆ, ಭಾವನೆಗಳು ಜಾಗ್ರತ ಪ್ರಜ್ಞೆಯಲ್ಲಿ ಮೂಡುವುವಲ್ಲದೆ, ಅಲ್ಲೇ ಹೊಸದಾಗಿ ಹುಟ್ಟುವಂಥವುಗಳಲ್ಲ. ಬುದ್ಧಿಯ ಮೂಲವೂ ಅಜ್ಞಾತ ಪ್ರಜ್ಞಾಸ್ತರವೇ. ಆದರೂ ಅದರ ಜ್ಞಾತತ್ವದ ಮಟ್ಟದಲ್ಲಿ ಅನೇಕೀಕೃತವಾಗುವುದರಿಂದ ಅಲ್ಲೇ ಅದು ವಿವೇಚಿಸುವ, ವಿಭಜಿಸುವ, ವಿಶ್ಲೇಷಿಸುವ, ಪೃಥಕ್ಕರಿಸುವ, ಪ್ರತ್ಯೇಕೀಕರಿಸುವ ಜಾಗ್ರತೆಯುಳ್ಳದ್ದಾಗಿರುತ್ತದೆ. ಭಾವನೆಗಳು ಏಕತ್ರೋನ್ಮುಖ, ಅವುಗಳ ಐಕ್ಯವು ಅಜ್ಞಾತಪ್ರಜ್ಞಾಸ್ತರದಲ್ಲಿ. ಬುದ್ಧಿಯೋ ಅವುಗಳನ್ನು ಅನೇಕೀಕರಿಸುವ ಪದಾರ್ಥ. ನವರಸಗಳೂ ಸತ್ತ್ವೋದ್ರೇಕದಿಂದ ವಿಕಾಸ ಹೊಂದುವಂಥವು. ಸತ್ತ್ವವು ಅಜ್ಞಾತ ಪ್ರಜ್ಞಾಸ್ತರದಲ್ಲಿರುವ ಪರಾಪ್ರಕೃತಿ, ಶುದ್ಧವಾದ ವಿಶ್ವಜೀವಪ್ರಜ್ಞೆ, ಚೈತನ್ಯ. ಅಪರಾಪ್ರಕೃತಿರೂಪದ ರಜಸ್ತಮಸ್ಸುಗಳು ಬುದ್ಧಿ ಪ್ರಪಂಚಕ್ಕೆ ಸೇರಿದಂಥವುಗಳು. ಸತ್ತ್ವದಿಂದ ಜ್ಞಾನ, ಸತ್ತ್ವೇತರ ಪದಾರ್ಥಗಳಿಂದ "ಸೈನ್ಸ್," "ನಾಲೆಜ್", ವಿಜ್ಞಾನ, ವ್ಯಾವಹಾರಿಕ ಜ್ಞಾನ ಮುಂತಾದವುಗಳೆಲ್ಲವುಗಳ ಪ್ರಕಾಶನ. ಆದುದರಿಂದ ಶುದ್ಧ ಶ್ರದ್ಧೆಯೇ ಜ್ಞಾನ, ಏಕಾತ್ಮಕತೆ. ಅದರ ದಾರ್ಢ್ಯವು ಶುಷ್ಕ ವಿಚಾರ, ವಿಜ್ಞಾನಗಳಿಗಿಲ್ಲ. ಅಂಧಶ್ರದ್ಧೆಯು ಶ್ರದ್ಧಾಭಾಸ; ಅದನ್ನು ವಿಚಾರ-ವಿಜ್ಞಾನಗಳು ನಿರುತ್ತರಗೊಳಿಸಬಲ್ಲವಲ್ಲದೆ, ಜ್ಞಾತ ಪ್ರಜ್ಞಾಸ್ತರದಿಂದ ಓಡಿಸಬಲ್ಲವು; ಆದರೆ ಅಜ್ಞಾತ ಪ್ರಜ್ಞಾಸ್ತರದಿಂದ

ಅಪಸ್ನೋಡಿಸಲು ಶುದ್ಧಶ್ರದ್ಧೆಯು ಸಾಕ್ಷಾತ್ಕಾರ ಮಾತ್ರ ಸಮರ್ಥ. ಶ್ರದ್ಧೆಯು ಸರ್ವಭಾವನಾಮೂಲವಾದ ವಿಶ್ವಾತ್ಮಕತೆಯುಳ್ಳದ್ದು; ಅದು ವಿಜ್ಞಾತಕ್ಕೆ ಅವಿಜ್ಞಾತ.[6]

[6] ಓದಿರಿ: Collected works of C. G. Jung. Vol 10: Civilisation in Transition—Ch. A psychological view of Conscience.

ತಾತ್ವಿಕ ತಳಪಾಯ

"ನಮಗೆ ತೋರುವ ಗುಣಗಳ ಆಧಾರವಾಗಿ ವಸ್ತುವೊಂದರಲ್ಲಿರುವ ಸಾರವೇ ಸತ್ಯ" ಎಂಬುದು ಲೋಕೆಯ ಮತ. ಸಕ್ರಿಯ ಪೂರ್ವಗೃಹೀತ ಭಾವ (ಕಲ್ಪನೆ) ಗಳು ಒಂದು ಮೂರ್ತಸ್ವರೂಪಕ್ಕೆ ಬಂದಾಗ ಕಂಡು ಬರುವ ಐಕ್ಯವೆಂಬುದೇ ಮನಸ್ಸು ಎಂದನವ. ವಸ್ತುವೊಂದರ ಸರಳ ಭಾವಗಳ ಸಾಹಚರ್ಯದ ನಿತ್ಯತೆಯನ್ನು ಇಂದ್ರಿಯಗಳು ಸಮನ್ವಯ ಗೊಳಿಸಿದಾಗ ಆ ಜಟಿಲ ಭಾವವನ್ನು ವಸ್ತು ಅಥವಾ ದ್ರವ್ಯವೆಂದು ಮನಸ್ಸು ಅರ್ಥಮಾಡಿಕೊಳ್ಳುತ್ತದೆ.

ಸಂವೇದನೆಗಳೆಲ್ಲವೂ ಭಾವನಾತ್ಮಕವಾಗಿರುವುದರಿಂದ ವಸ್ತುಗುಣ ಗಳೆಲ್ಲವೂ ಭಾವನಾಧರ್ಮಗಳು, ವಸ್ತುಗತ ಧರ್ಮಗಳಲ್ಲ–ಎಂಬ ಆಧುನಿ ಕತೆ ಲೋಕೆಗಿದ್ದಿಲ್ಲ. ಆದಿಯುಗಿಕ ತತ್ವಪ್ರಸ್ಥಾನಕ್ಕೆ ಅವನ ವಿಚಾರವು ಹತ್ತಿರವಾಗಿತ್ತು. ಭಾವ ಅಥವಾ ಕಲ್ಪನೆಗಳೆಲ್ಲವೂ ಸಾಮಾನ್ಯತೆಯನ್ನು (ಸರ್ವಸಾಧಾರಣತೆಯನ್ನು) ಉಳ್ಳಂಥವು; ಉಕ್ತ ಸರಳಭಾವಗಳ ಸಾಧಾ ರಣ ಧರ್ಮಕ್ಕೆ ಆಧಾರವಾದ ಬಾಹ್ಯವಸ್ತುವಿಗೆ ವಸ್ತುನಿಷ್ಠ ಸತ್ಯತೆ ಇದೆ- ಎಂದ ಡೆಸ್ಕಾರ್ಟಿಸ್. ಭಾವನೆ ವಸ್ತುವಿನ ಜಾತಿಧರ್ಮವನ್ನಲ್ಲದೆ, ವ್ಯಕ್ತಿ ಧರ್ಮವನ್ನೂ ಗ್ರಹಿಸಬಲ್ಲದು. ಭಾವನೆಯ ಉದಯ-ಅಸ್ತಿತ್ವಗಳೆರಡಕ್ಕೂ ವಸ್ತುವಿನ ವೈಯಕ್ತಿಕತೆ ಅಥವಾ ವಿಶೇಷಧರ್ಮವೇ ಆಧಾರ.

ಪ್ರವಾಹಿಕವಾದ ಉತ್ತರೋತ್ತರ ಕ್ಷಣಿಕ ಭಾವಕಣಗಳು ಸಂವೇದನಾ ರೂಪದಲ್ಲಿ ಮನಃಸ್ಥಿತಿಯನ್ನು ಹೊಂದುತ್ತವೆ; ಆದರೆ ಅವು ಪರಸ್ಪರ ಭಿನ್ನವಾದಂಥವು ಎಂಬುದು ಆದಿಯುಗಿಕ ಪ್ರಸ್ಥಾನ. ಲೋಕೆಯ ಬಾಹ್ಯ ವಸ್ತುವು ತನ್ನ ವ್ಯಕ್ತಿತ್ವವನ್ನು ಕಳೆದುಕೊಳ್ಳದೆ ಬದಲಾಗುತ್ತ ಹೋಗು ತ್ತದೆ. ಇದು ಬೌದ್ಧರ ಕ್ಷಣಭಂಗವಾದವನ್ನು ಅಂಶತಃ ಹೋಲುತ್ತದೆ; ಅದರ ಕಾರ್ಯರೂಪದ ಕಲ್ಪನೆಯನ್ನು ಸರಿಗಟ್ಟುತ್ತದೆ.

ವ್ಯಾವಹಾರಿಕ ವಸ್ತುಸಾರ

ಆಧುನಿಕ ಪ್ರಸ್ಥಾನದಲ್ಲಿ ವಸ್ತುನಿರಪೇಕ್ಷವಾದ ಮನಸ್ಸೆಂಬುದಿಲ್ಲ. ಮಾನಸಕ್ರಿಯೆಯು ಮೂಲತಃ ಭಾವನಾತ್ಮಕ; ಕೆಲವೇ ಸತ್‌ಪದಾರ್ಥಗಳಲ್ಲದು ಬೌದ್ಧಿಕತೆಯನ್ನು ಮುಟ್ಟುತ್ತದೆ. ಪ್ರತಿಯೊಂದು ವಸ್ತುವೂ ತನ್ನತನವನ್ನು ಕಳೆದುಕೊಳ್ಳದ ಮೂರ್ತೀಕರಣ. ವಿಕಾಸದ ಐಕ್ಯಸಿದ್ಧಿ. ಇಂಥ ಮೂರ್ತವಸ್ತುಗಳ ಸಮಾಹಾರವೇ ಪ್ರಪಂಚ, ವಿಶ್ವ. ಲೋಕವೂ ಮನುಷ್ಯನೂ ಸಂವೇದನಾತ್ಮಕ ಭೌತವಾದಿಗಳು. ಪ್ರತ್ಯಕ್ಷ ಭಾವದ ಬದಲಾಯಿಸುವ ಸಾಧ್ಯತೆಯನ್ನು ಲೋಕ 'ಶಕ್ತಿ' ಎಂದು ಕರೆಯುತ್ತಾನೆ. ಕರಗಿಸುವ ಶಕ್ತಿ ಒಂದಕ್ಕಿದ್ದರೆ ಕರಗುವ ಶಕ್ತಿ ಇನ್ನೊಂದಕ್ಕಿರುತ್ತದೆ; ಗೆಲ್ಲುವ ಶಕ್ತಿ ಒಬ್ಬನಿಗಿದ್ದರೆ ಸೋಲುವ ಶಕ್ತಿ ಇನ್ನೊಬ್ಬನಿಗಿರುತ್ತದೆ; ಶಕ್ತಿಯು ಇಂದ್ರಿಯ ಗ್ರಾಹ್ಯ ವಸ್ತುಗಳ ಬದಲಾವಣೆಗೆ ಸಂಬಂಧಿಸಿದ್ದು: ಒಂದು ಸಕ್ರಿಯ ಶಕ್ತಿ, ಇನ್ನೊಂದು ನಿಷ್ಕ್ರಿಯ ಶಕ್ತಿ. ಅವು ಪರಸ್ಪರ ಸಾಪೇಕ್ಷ. ವಸ್ತುಸಾರ ಮತ್ತು ಶಬ್ದಸಾರಗಳು ಭಿನ್ನ; ಶಬ್ದ ಕೇವಲ ನಾಮ.

ಜಡ (ಜೀವೇತರ) ಜಗತ್ತಿನ ಮೂಲಭೂತ ಶಕ್ತಿಯು ಸೂಕ್ಷ್ಮತಮ ಕಣಗಳನ್ನು ಭೌತಶಾಸ್ತ್ರವು ೨೨ ಬಗೆಯಾಗಿ ವಿಂಗಡಿಸಿದೆ: (1) Proton, Antiproton, Neutron, Antinutron, Lambda, Chi, Sigma, Antisigma, Neutral Sigma ಎಂಬ ಗುರು ಅಥವಾ ಭಾರವತ್ತಾದ ಕಣಗಳು; (2) Pion, Antipion, Neutral pion, K-meson, Anti-K-meson, Neutral-K-meson ಎಂಬ ಮಧ್ಯಮ ಭಾರದ ಕಣಗಳು; ಮತ್ತು (3) Electron, Positron, Muon, Antimuon ಎಂಬ ಲಘು ಕಣಗಳು; (4) ಕೊನೆಯದಾಗಿ, Photon, Neutrino, Anti-neutrino ಎಂಬ ಭಾರರಹಿತ ಕಣಗಳು.[8]

8

(1) ಘನ ವಿದ್ಯುತ್ಕಣ, ಪ್ರತಿಘನ.... ತಟಸ್ಥ..., ಪ್ರತಿತಟಸ್ಥ......, ಲಂಬ್ಡ..., ಚಿ......., ಸಿಗ್ಮ........, ತಟಸ್ಥ ಸಿಗ್ಮ..., ಪ್ರತಿಸಿಗ್ಮ....! (2) ಪೀಯನ್ನು....,

ಏಕೀಕೃತ ದೇಶ-ಕಾಲದ ಅಚಲ ಹಿನ್ನೆಲೆಯ ಮೇಲೆ ಚಂಚಲಿಸುವ ಮೂಲಶಕ್ತಿಯ ಜಡ ಪ್ರಕಾರಗಳು ೨೨. ಅಣುವಿಶ್ಲೇಷಣದಲ್ಲಿ ಈ ೨೨ ವಿಧಗಳು ಕಂಡು ಬಂದಿವೆ. ಹಾಗೇ ದ್ರವ್ಯವು ಗುಣಜಾಲವೆಂದೂ ಗುಣಜಾಲವು ಕ್ರಿಯಾಸಂತಾನವೆಂದೂ ಕಂಡು ಹಿಡಿಯಲಾಗಿದೆ; ಒಂದೊಂದು ಘಟಿತವಾದ, ಸಾಪೇಕ್ಷವಾಗಿ ಪ್ರತ್ಯೇಕೀಕೃತವಾದ, ತನ್ನತನದ ಐಕಾತ್ಮ್ಯವನ್ನು ಸಮನ್ವಯಿಸಿಕೊಂಡು ತತ್ಕಾಲದಲ್ಲಿ ಅತ್ಯವಿಭಜನೀಯವಾದ ಘನ ಪದಾರ್ಥವೇ ದ್ರವ್ಯ; ಅದರ ಅಂಶಗಳ ಚಂಚಲತೆ ಮತ್ತು ಅದರ (ಇಡಿಯ) ಚಂಚಲತೆಗಳ ನಿಯತಾವಧಿಕ ಸಮತೋಲವು ಅದನ್ನು ಇಂದ್ರಿಯಗ್ರಾಹ್ಯ ಎನ್ನಿಸುವುದು. ಘನತೆ, ವಿಸ್ತಾರ, ಆಕಾರ, ಚಲನ, ವಿಶ್ರಾಂತಿ, ಸಂಖ್ಯೆ ಎಂಬೀ ಆರು ಅವಯವಗಳ ಅವಿನಾಭಾವಿಯಾದ ಸಹಜ ಗುಣಗಳು; ಇವುಗಳನ್ನೇ ಪ್ರಧಾನ ಅಥವಾ ಪ್ರಾಥಮಿಕ ಗುಣಗಳೆಂದು ಕರೆಯಲಾಗಿದೆ. ವಿಜ್ಞಾನಗ್ರಾಹ್ಯವಾದ, ಇವುಗಳಿಗಿಂತ ಭಿನ್ನವಾದ, ಇಂದ್ರಿಯಗ್ರಾಹ್ಯ ಗುಣಗಳು-ರೂಪ, ರಸ, ಗಂಧ, ಶಬ್ದ, ಸ್ಪರ್ಶ ಮುಂತಾದವುಗಳು; ಇವು ಮಾನುಷಪ್ರಜ್ಞೆಯಲ್ಲಿ (ವಿಜ್ಞಾತಮನದಲ್ಲಿ) ಬಹಳ ಬದಲಾವಣೆಗೆ ಒಳಪಾದಂಥವುಗಳೂ ಕಡಿಮೆ ಸ್ಥಿರತೆ (ಶಾಶ್ವತ್ಯ) ಉಳ್ಳಂಥವೂ, ವಿವಿಧ ನಮೂನೆಗಳಲ್ಲಿ ಗೋಚರವಾಗತಕ್ಕಂಥವುಗಳೂ ಆದ ಗೌಣ ಅಥವಾ ದ್ವಿತೀಯ ವರ್ಗದ ಗುಣಗಳು.

ವಿಜ್ಞಾನಗ್ರಾಹ್ಯವಾದ ಗುಣಗಳು ಎಂದರೆ ಪ್ರಯೋಗ ಸಿದ್ಧ ಅಥವಾ ಪ್ರಯೋಗವನ್ನಾಧರಿಸಿ ವಸ್ತುನಿಷ್ಠವೆಂದು ಅನುಮಾನಿಸಿ ಸಮರ್ಥಿಸಲಾಗುವ ಸ್ಥಿರತರ ಗುಣಗಳೆಂದು ಅರ್ಥ. ಇವುಗಳನ್ನು ಮೂಲಭೂತ ಅಥವಾ ಪ್ರಧಾನ ಎಂಬವರು ಭಾವನೇತ್ಯಾಸ್ಪರ್ಶವಿಮುಖರಾದ ಶುದ್ಧ ಬೌದ್ಧಿಕ ಶಾಸ್ತ್ರೋಪ್ರಜ್ಞಾಪರರಾದ ವೈಜ್ಞಾನಿಕ ಭೌತವಾದಿಗಳು,

---

ಪ್ರತಿಜೀವವನ್ನು..., ತಟಸ್ಥಜೀಯನ್ನು..., ಕೇಮಸನ್ನು..., ಪ್ರತಿಕೇಮಸನ್ನು...., ತಟಸ್ಥಕೇಮಸನ್ನು...; (3) ಋಣ ವಿದ್ಯುತ್ಕಣ, ಅತಿಧನ..., ಮ್ಯೂವನ್ನು..., ಪ್ರತಿಮ್ಯೂವನ್ನು; (4) ಜ್ಯೋತಿರ್ವಿದ್ಯುತ್ಕಣ, ಉಪತಟಸ್ಥ..., ಪ್ರತ್ಯುಪತಟಸ್ಥ...

ತಾರ್ಕಿಕ ವಿಶ್ಲೇಷಣವಾದಿಗಳು ಮತ್ತು ತಾರ್ಕಿಕ ವಿಭಾವವಾದಿಗಳು; ಇವರಾರೂ ಅವಯವಿಕ ತತ್ವಪ್ರಸ್ಥಾನಕ್ಕೆ ಸೇರಿದವರಲ್ಲ. ರಸೆಲ್ಲನು ತಾರ್ಕಿಕವಿಶ್ಲೇಷಣವಾದಿ; ವೈಟ್‌ಹೆಡ್ಡನು ಅವಯವಸಂಘಟನವಾದಿ (ಅವಯವಿಕತತ್ವಪ್ರಸ್ಥಾನವಾದಿ). ವ್ಯಾಸದೃಷ್ಟಿಯಲ್ಲಿ ದೇಶ-ಕಾಲೈಕ್ಯದ ಅಚಲಜಡಕ್ಕೆ ಪೂರ್ಣಚೈತನ್ಯ ರೂಪದ ಪರಬ್ರಹ್ಮವೇ ಆಧಾರ; ಈ ಅಚಲ ಹಾಗೂ ಈಶ್ವರೇಚ್ಛೆಯಂತೆ ಚಲ ಎನ್ನಿಸುವ ಜಡವೇ ಅವ್ಯಕ್ತವಾದ ಶಕ್ತಿ, ಅಪರಾಪ್ರಕೃತಿ, ಪ್ರಧಾನ, ಮಾಯೆ. ಸತ್ವರಜಸ್ತಮಂಗಳ ಸಮತೋಲದ ರೂಪದ ನಿಷ್ಕ್ರಿಯ ಜಡಪ್ರಧಾನದ ಚಲನವು ಪುರುಷ (ಶುದ್ಧ ಚೈತನ್ಯಾತ್ಮ) ದೃಷ್ಟಿಪಾತದಿಂದ ಆರಂಭವಾಗುವುದೆಂಬ ಸಾಂಖ್ಯ ವಿಚಾರದಂತೆ, ದೇಶ-ಕಾಲಗಳ ಪ್ರತ್ಯೇಕತೆಯನ್ನು ನಂಬಿದ ಮೇಲೆ ನಮ್ಮ ಜಾಗ್ರತ್‌ಪ್ರಜ್ಞೆಯು ಗ್ರಹಿಸಲಾರಂಭಿಸುವ ೨೪ ನ್ಯಾಯವೈಶೇಷಿಕ ಗುಣಗಳು ಜಗತ್ತಿನ ಇಂದ್ರಿಯಾಘೃತ ಪ್ರತ್ಯಕ್ಷ ಅನುಮಿತಿಗಳೆನ್ನಿಸುವ ವ್ಯಾವಹಾರಿಕ ಸತ್ಯದಲ್ಲಿ ನಿಷ್ಠವಾದವುಗಳು.

ವಿಜ್ಞಾನ ವಿಚಾರ

ಅವಯವಿಕ ಪ್ರಸ್ಥಾನದಲ್ಲಿ ದೇಶ, ಕಾಲ ಮತ್ತು ಈಶ್ವರ ಎಂಬ ಮೂರು ಪದಾರ್ಥಗಳನ್ನು ಮೌಲಿಕವೆಂದು ಗ್ರಹಿಸಲಾಗುತ್ತದೆ. ವ್ಯಕ್ತ ಪ್ರಕೃತಿಯು ಪ್ರತ್ಯಕ್ಷಗ್ರಾಹ್ಯವಾದ ಘಟನೆಗಳ ಆದಿಮಧ್ಯಾಂತ ಸಹಿತವಾದ ಮಹಾಪ್ರಕ್ರಿಯಾಪ್ರವಾಹ. ಅದರ ಮಧ್ಯವು ದೇಶಿಕ ಮತ್ತು ಕಾಲಿಕ ವರ್ತಮಾನ, ಆದ್ಯಂತಗಳು ಭೂತಭವಿಷ್ಯತ್ತುಗಳು. ಅವ್ಯಕ್ತವು ಅಚಲ ಪ್ರಕೃತಿ, ಅವಿಕಾರಿ ಪ್ರಕೃತಿ, ವ್ಯಕ್ತಪ್ರಕೃತಿಯ ಮೂಲಾಧಾರ. ಪ್ರತ್ಯಕ್ಷ ಪ್ರಕೃತಿ = ದೇಶ + ಕಾಲ + ಕಾರ್ಯ; ಪ್ರತ್ಯಕ್ಷ = ಸಂವೇದನೆ + ಸ್ಮಾರ್ತ ವಿಚಾರ. ದ್ವಂದ್ವಗಳಾದ ವಸ್ತುನಿಷ್ಠತೆ-ವ್ಯಕ್ತಿನಿಷ್ಠತೆಗಳು ದೃಷ್ಟಿಕೋನದಿಂದ ಉಪಾಹಿತವಾದಂಥವು.

ವಸ್ತುನಿಷ್ಠ ವಿಚಾರಪ್ರಣಾಲಿಯು ಮೊದಲಿಗೆ ದ್ರವ್ಯದಲ್ಲಿ ಗುಣಕ್ರಿಯೆಗಳೆಂಬ ಭಿನ್ನ ಪದಾರ್ಥಗಳಿರುವುವೆಂಬ ಕಲ್ಪನೆಯನ್ನು ಬದ್ಧೀಕರಿಸಿ

ವಿಜ್ಞಾನ ಎಂದು ದ್ರವ್ಯ=ಗುಣ=ಕರ್ಮ ಎಂದೆನ್ನುತ್ತದೆ. ವಸ್ತುನಿಷ್ಠತೆ ವ್ಯಕ್ತಿನಿಷ್ಠತೆಗಳು ಅಪೂರ್ಣ, ಸಾಪೇಕ್ಷ. ನಿಸರ್ಗದ ಕರ್ಮಸಾಗರದಿಂದ ಒಂದು ಕರ್ಮ (ವಸ್ತು)ವನ್ನು ಆಯ್ದುಕೊಳ್ಳುವ ಕ್ರಿಯೆಯೊಂದು ಅಮೂರ್ತೀಕರಣ (ಭಾವಮಾತ್ರಗ್ರಹಣ). ತರ್ಕದ ವಸ್ತುವಿನ ನಿಜ ಸ್ವರೂಪವು ವ್ಯಾಕರಣ ಕರ್ಮ. ವ್ಯಾಕರಣದ ಕರ್ತೃವು ಒಮ್ಮೆ ಕರಣವಾದರೆ ಇನ್ನೊಮ್ಮೆ ಕರ್ಮವಾಗಬಲ್ಲದು. ವಸ್ತುವಿನ ಕಾರಕ-ಕಾರಕೇತರ ಸಂಬಂಧಗಳೂ ಜಡತ್ವ-ಸಚೇತನತೆಗಳೂ ಅಧಮ-ಮಧ್ಯಮ-ಉತ್ತಮ ಪುರುಷತ್ವಗಳೂ ಪರಿವರ್ತನೀಯ; ಅದರ ಸ್ಥಾಯಿತ್ವದ ಅವಧಿ ವಿವಿಧ ದೇಶಕಾಲ-ಸ್ವರೂಪಗಳಲ್ಲಿ ವಿವಿಧ. ಅಂದರೆ ಸ್ಥಾನ, ಸಂಬಂಧ, ಗುಣಗಳೆಲ್ಲವೂ ರೂಪಾಂತರ ಹೊಂದುವಂಥವು. ಈ ಭೇದಗಳೂ ಪರಿಮಾಣ ಮೂಲವಾದಂಥವು; ಸಂಖ್ಯೆಯು ಪರಿಮಾಣಾಂತರ್ಗತ. ಕಾಲಪರಿಮಾಣ ದೇಶಪರಿಮಾಣಗಳೆರಡೂ ಸಂಕೋಚ-ವಿಸ್ತಾರ ಸ್ವರೂಪಗಳಿಂದ ಭಾಸವಾಗುತ್ತದೆ.

ಸಮನ್ವಯ

ಅಚಲ, ನಿಷ್ಕ್ರಿಯ, ಏಕಪ್ರಕೃತಿಯು ಗೀತೋಕ್ತ ಅಕ್ಷರ ಪುರುಷ+ಅವ್ಯಕ್ತಪ್ರಕೃತಿ; ಚಲ, ಸಕ್ರಿಯ, ಅನೇಕೀಕಾರಕ ಪ್ರಕೃತಿಯು ಕ್ಷರ ಪುರುಷ+ವ್ಯಕ್ತಪ್ರಕೃತಿ. ಪ್ರಕೃತಿಯಿಂದ ಅದರ ಪ್ರೇರಕ ಶಕ್ತಿಯನ್ನು ಮಾನಸಿಕವಾಗಿ ಅಮೂರ್ತೀಕರಿಸಿ ಹೊರತೆಗೆದರೆ, ಆ ಹೊರತೆಗೆದ ಪದಾರ್ಥವೇ ಪುರುಷ. ಗೀತೆಯ ಉತ್ತಮ ಪುರುಷನು ಈ ಇರುವಿಕೆ ಆಗುವಿಕೆಗಳ (ಅಕ್ಷರಗಳ) ನಿಯಾಮಕವಾದ ಈಶ್ವರಶಕ್ತಿ ಅಥವಾ ನಿಸರ್ಗನಿಯಮಗಳು!

ಸತ್ವವು ಅವ್ಯಕ್ತ, ನಿಷ್ಕ್ರಿಯ ಪ್ರಕೃತಿಭಾವ; ರಜಸ್ತಮಸ್ಸುಗಳು ವ್ಯಕ್ತ, ಕ್ರಿಯಾಪದ, ಪ್ರಕೃತಿಭಾವ ಪುರುಷತ್ವವು ಆತ್ಮತ್ವ, ಅಹಂತ್ವ, ಕರ್ತೃತ್ವ-ಭೋಕ್ತೃತ್ವ, ಕೇಂದ್ರೀಭೂತತ್ವ, ಇರುವಿಕೆ-ಆಗುವಿಕೆಗಳ

ಅಪರಿಹಾರ್ಯ ಅವಿನಾಭಾವವುಳ್ಳ ವ್ಯಕ್ತಿತ್ವಪ್ರಜ್ಞೆ. ಈ ದೃಷ್ಟಿಯಿಂದ ಭೋಕ್ತೃತ್ವವನ್ನು ತೆಗೆದರೆ ಈಶ್ವರತ್ವದ ಕಲ್ಪನೆ ಬರುತ್ತದೆ; ಅದರ ಜೊತೆಗೆ ವ್ಯಕ್ತಿತ್ವದ ಕಲ್ಪನೆಯನ್ನೂ ತೆಗೆದರೆ ಪರಬ್ರಹ್ಮತ್ವದ ಕಲ್ಪನೆ ಬರುತ್ತದೆ.

ಭಾವನೇಚ್ಛಾತ್ಮಕ ತಿಳಿವಳಿಕೆಯೇ ಬೌದ್ಧಿಕ ತಿಳುವಳಿಕೆಯ ಮೂಲ. ಅವೆರಡಕ್ಕೂ ಸತ್ವದಜ್ಞಾನವು ಮೂಲ; ಸತ್ವಕ್ಕೆ ಪುರುಷತ್ವ ಸೇರಿಸಿದರೆ ಈಶ್ವರತ್ವವಾಗುತ್ತದೆ; ಸತ್ವಜ್ಞಾನವಾಗುತ್ತದೆ; ಅದಕ್ಕೆ ಪರಬ್ರಹ್ಮಪ್ರಜ್ಞೆ ಆಧಾರ.

ಶುದ್ಧ ಪ್ರಜ್ಞೆಯಷ್ಟೇ ಶಾಶ್ವತವೆಂದು ತಿಳಿದು, ಅದನ್ನು (ಪ್ರಜ್ಞೆಯನ್ನು) ಮಾನಸಿಕ ಸಂಬಂಧಗಳಿಂದ ಪ್ರತ್ಯೇಕಿಸಿ ತೆಗೆದ ಅಮೂರ್ತೀಕರಣದ ಕೌಶಲವೇ ಗೀತೋಕ್ತ ಆತ್ಮಜ್ಞಾನಯೋಗ, ಬ್ರಹ್ಮಜ್ಞಾನಯೋಗ. ಅದು ಭಾವನೆ, ಇಚ್ಛೆ, ಬುದ್ಧಿಗಳೆಲ್ಲವನ್ನು ವ್ಯಾಪಿಸಿದ್ದು ಅವುಗಳಿಂದ ಸ್ವತಂತ್ರವಾಗಿರುವ ದೃಢಾನುಭಾವವನ್ನು ಹೊಂದುವದೇ ಸಾಕ್ಷಾತ್ಕಾರ, ಅಪರೋಕ್ಷಾನುಭೂತಿ. ಜಾಗ್ರತಪ್ರಜ್ಞೆಯ ಜಗಜ್ಞಾನವೆಲ್ಲವೂ ಸಂಬಂಧಾತ್ಮಕ ಅಥವಾ ವಿಶೇಷಣಾತ್ಮಕ ಸಂಬಂಧಗಳೆಲ್ಲವೂ ಸೀಮಾಕರಣಜನ್ಯ; ಅವುಗಳ ಅಸೀಮಾಕರಣವೇ ಬ್ರಹ್ಮತ್ವದ ಸಾಕ್ಷಾತ್ಕಾರ, ಮೋಕ್ಷ, ಸ್ಥಿತಪ್ರಜ್ಞತೆ, ಬ್ರಾಹ್ಮೀಪ್ರಜ್ಞೆ. ಭಾವನೇಚ್ಛೆಗಳನ್ನೊಳಗೊಳ್ಳುವ ಅಮೂರ್ತೀಕರಣವು ಕಲ್ಪನಾ ವಿಲಾಸ, ಶುಷ್ಕವೇದಾಂತ, ಶಾಬ್ದಿಕ ಅರ್ಥ ಜ್ಞಾನ, ಪ್ರತೀಕಾತ್ಮಕ (ಸಂಕೇತಾತ್ಮಕ, ಗಣಿತಾತ್ಮಕ, ತರ್ಕಾತ್ಮಕ, ಊಹಾತ್ಮಕ, ಅನುಮಿತ್ಯಾತ್ಮಕ, ಪರೋಕ್ಷಾನುಭವ). ಬುದ್ಧಿ-ಭಾವನೆ-ಇಚ್ಛೆಗಳ ವಿಶ್ವಪ್ರಮಾಣದ ವಿಸ್ತರಣವು ವಿಶ್ವಾತ್ಮಕತ್ವ ಅಥವಾ ಈಶ್ವರತ್ವ; ಇದನ್ನು ದಿವ್ಯೀಕರಣವೆನ್ನಬಹುದು; ವಿಶ್ವೇತರತ್ವವು ಬ್ರಹ್ಮೀಕರಣ ಜನ್ಯವಾದ ಅಸೀಮತ್ವ, ಅನಂತತ್ವ, ಕೇವಲ ಪೂರ್ಣಸತ್ಯತ್ವ, ಆನಂದ ಮಯತ್ವ.

ಆಕಸ್ಮಿಕತೆಯ ತತ್ವದ ಪರಿಣಾಮ

ಕಾರಣವಿಲ್ಲದೆ ಕಾರ್ಯವಿಲ್ಲ ಎಂಬುದು ಬುದ್ಧಿಯ ಸಹಜಗುಣ.

ಅದನ್ನು ಬಿಟ್ಟರೆ ಚಿಂತನ, ವಿಚಾರ, ತರ್ಕ ಎಂಬುದಕ್ಕೆ ಅರ್ಥವಿಲ್ಲ; ವಿಜ್ಞಾನವು ಅಜ್ಞಾನವಾಗುವುದು; ಆದುದರಿಂದ ಅನಂತಕಾರಣಪರಂಪರೆ ದುರೂಹ್ಯವಾಗುವುದರಿಂದ ಮತ್ತು ಯಾವ ವಿಜ್ಞಾನ ನಿಸರ್ಗನಿಯಮವೂ ಜಗತ್ತಿನ ಎಲ್ಲ ಕಾರ್ಯಗಳಿಗೂ ಕಾರಣವಾಗಬಲ್ಲದೆಂದು ಹೇಳಲು ಸಾಧ್ಯವಿಲ್ಲ ವೆಂಬುದನ್ನು ಭೌತಶಾಸ್ತ್ರದ ಅನಿಶ್ಚಿತತಾ (ಕಾದಾಚಿತ್ಕತಾ) ಸಿದ್ಧಾಂತವು ಸಾರಿರುವುದರಿಂದಲೂ ಅನಂತ, ಅಸೀಮ, ಅವ್ಯಯ, ಅದ್ವಿತೀಯ, ಸರ್ವ-ಧಾರಿಯಾದ ಒಂದು ಪದಾರ್ಥವನ್ನು ಕಲ್ಪಿಸಿಯೇ ಚಿಂತಕನು ವಿರಮಿಸ-ಬೇಕಾಗುತ್ತದೆ. ನಿತ್ಯಪ್ರಶ್ನೆಯೊಂದು ಮೂಲಕಾರಣದ ಬಗ್ಗೆ ಕೇಳಬಾರ-ದೆಂಬುದು ದೇಶದ (Space) ಆಚೆಗೆ ಏನಿದೆ? ಎಂದು ಕೇಳಬೇಡಿರಿ-ಎಂದು ಐನ್‌ಸ್ಟೈನ್ ಹೇಳಿದಹಾಗಾಗುತ್ತದೆ. ಪ್ರತಿಯೊಂದು ತಲೆಮಾರಿನಲ್ಲೂ ವಿಶ್ವದ ವಿಜ್ಞಾನವು ಪರಮ ಸತ್ಯದ ಹತ್ತಿರ ಹತ್ತಿರಕ್ಕೆ ಹೋಗುತ್ತಿದೆ ಎಂಬ ರಸೆಲ್ಲನ ಪೂರ್ವಗ್ರಹವು ಪ್ರಮಾಣಸಿದ್ಧವಲ್ಲ–Law of chance–ಯದೃಚ್ಛೆಯ ಸೂತ್ರವನ್ನು ವಿಜ್ಞಾನ ಘೋಷಿಸಿದ ಮೇಲೆ–ಖಗೋಲ ಶಾಸ್ತ್ರ ಜೀವಶಾಸ್ತ್ರಗಳು ಕಾವ್ಯಮಯವಾಗುತ್ತ ಹೋದಮೇಲೆ!

ಅಖಂಡವಾದ ದೇಶವು (ಅವಕಾಶವು) ಪರಿಸೀಮಿತವೆಂದು ಸಾರಿದ ಮೇಲೆ ಅದಕ್ಕೆ ಅದಕ್ಕಿಂತ ಹೆಚ್ಚು ವ್ಯಾಪಕವಾದ ಆಧಾರ ಅಥವಾ ಹಿನ್ನೆಲೆ ಬೇಕಾಯಿತು. ಅದೇ ವ್ಯಾಸೋಕ್ತ ಬ್ರಹ್ಮ (ಪರಬ್ರಹ್ಮ). ಅದನ್ನು ಅಜ್ಞಾತ ವೆನ್ನಿರಿ, ಊಹ್ಯ ವ್ಯಾಪ್ತಿಗೆ ಒಳಪಡದ ನಿಸರ್ಗವೆನ್ನಿರಿ, ಕಾದಾಚಿತ್ಕ ಶಕ್ತಿ ಯೆನ್ನಿರಿ––ಏನೆಂದರೂ ಸರ್ವನಿರಪೇಕ್ಷ ಪದಾರ್ಥವೊಂದು ಸರ್ವಸಾಪೇಕ್ಷ ಗಳಿಗೂ ಮೂಲವಾಗಿರಬೇಕಾದುದು ವೈಚಾರಿಕ ಅವಶ್ಯಕತೆ. ಪರಿಮಿತ ಪದಾರ್ಥಗಳ ಪರಸ್ಪರ ಸಾಪೇಕ್ಷತೆ ವಿವಿಧವಾಗಿರುವುದರಿಂದ, ಅಲ್ಪವ್ಯಾಪ್ತಿ ಸಂಪನ್ನವಾಗಿರುವುದರಿಂದ, ಅದನ್ನು ಏಕಮೇವಾದ್ವಿತೀಯವಾದ ವಿಶ್ವಾ-ಧಾರ ರೂಪದ ಮೂಲ ಸಂಬಂಧ ಎಂದು ಊಹಿಸಲು ಬರುವುದಿಲ್ಲ. ಅಜ್ಞಾತವನ್ನು 'ಅ' ಎಂದು ಇಟ್ಟುಕೊಂಡರೂ ಒಂದೇ 'ಬ' ಎಂದು ಇಟ್ಟುಕೊಂಡರೂ ಒಂದೇ. ಅದರ ಸರ್ವಾಧಾರತ್ವವೊಂದನ್ನು ಗ್ರಹಿಸಿದರೆ ಸಾಕು. ವೈಟ್ ಹೆಡ್ಡನು ಅದನ್ನು ದೈವವೆಂದರೆ ಪರವಾಯಿಲ್ಲ; ರಸೆಲ್ಲನು

ಅಜ್ಞಾತವೆಂದರೆ ಬೇಸರವಿಲ್ಲ. ಗಣಿತವು ಅನಂತವೆಂದರೆ ದುಃಖವಿಲ್ಲ; ತರ್ಕವು ಅತರ್ಕ್ಯವೆಂದರೆ ತೊಂದರೆ ಇಲ್ಲ.

ಶ್ರದ್ಧಾರಹಿತವಾದ ವಿಜ್ಞಾನ ಬುದ್ಧಿಯು ಕ್ಷಣಭಂಗಶೀಲವುಳ್ಳದ್ದು; ತನ್ನ ಪದಶ್ರದ್ಧೆ, ಅರ್ಥಶ್ರದ್ಧೆಗಳಿಗದು ವೈಜ್ಞಾನಿಕ ಪ್ರಮಾಣಗಳನ್ನು ಕೊಡಲಾರದು. ಅತಿಚಂಚಲವು ಅವ್ಯವಹಾರ್ಯ; ಅದರ ಸಾಪೇಕ್ಷ ಸ್ಥೈರ್ಯದ ಪರಮಾವಧಿಯೇ (ನಿರಪೇಕ್ಷ ಮಟ್ಟವೇ) ಶಾಶ್ವತವಾದ ಅಸೀಮ ಪದಾರ್ಥ. ಮೂರ್ತೀಕೃತವಾದುದೆಲ್ಲವೂ ಸೀಮಿತವಾಗಿರುವುದರಿಂದ, ಪರಮುಮುಖತೆ ಪ್ರಮಾಣವು ಯಾವ ನಿಯಮಕ್ಕೂ ಇಲ್ಲದಿರುವುದರಿಂದ, ಅದ್ವಿತೀಯ ಸರ್ವಧಾರಿಯೊಂದನ್ನು ಆಧಾರವನ್ನಾಗಿ ಇಟ್ಟುಕೊಂಡು ತರ್ಕಿಸುವ, ವಿಜ್ಞಾನಿಸುವ ಸುವ್ಯವಸ್ಥೆಗೆ ವಿರುದ್ಧವಾಗಿ ಲಂಗರಿಲ್ಲದ ಹಡಗಿನ ಸಂಚಾರದಂಥ ವಿಜ್ಞಾನ, ವಿಚಾರ, ಊಹೆಗಳು ಯಾವ ದೃಷ್ಟಿಯಿಂದಲೂ ಅರ್ಥಪೂರ್ಣವಾಗವು. "ಊರ್ಧ್ವಮೂಲಂ ಅಧಃ ಶಾಖಂ" ಎಂಬುದು ಜೀವನ ವೃಕ್ಷದ ಸರಿಯಾದ ವರ್ಣನೆಯೆಂಬುದನ್ನು ವಿವಿಧ ಖಗೋಲ ಶಾಸ್ತ್ರವಾದಗಳೂ ಸಮರ್ಥಿಸಿವೆ. ಜಡಮೂಲವು ಅಧೋಮೂಲವಾದ; ಚೈತನ್ಯಮೂಲವಾದವು ಊರ್ಧ್ವಮೂಲವಾದ. ಈ ವಿಷಯದಲ್ಲಿ ನ್ಯೂಟನ್ನನ ಯೋಗ್ಯತೆ ಮುಂದಿನ ಯಾವ ವಿಜ್ಞಾನಿಗೂ ಬರಲಾರದು. ದೇವರು ನಿಸರ್ಗನಿಯಮಗಳನ್ನು ರಚಿಸಿ ಕಾರ್ಯ ಪರಂಪರೆ ಅವುಗಳಂತೆ ನಡೆಯುವ ಹಾಗೆ ಮಾಡಿ ಸುಮ್ಮನೆ ಕುಳಿತು ಬಿಟ್ಟನು--- ಎಂಬುದು ಬಹಳ ಅರ್ಥಪೂರ್ಣವಾದ ಮಾತು. ಅದರಿಂದ ವೈಜ್ಞಾನಿಕ ಶೋಧದ ಪ್ರಗತಿಗೆ ಯಾವ ವಿಘ್ನವೂ ಉಂಟಾಗದು. ನಮ್ಮ ವ್ಯಕ್ತಿತ್ವ-ಚಾರಿತ್ರ್ಯಗಳ ದಾರ್ಢ್ಯ ಹೆಚ್ಚುತ್ತಲೇ ಹೋಗಲು ಅದು (ಅದರ ಪ್ರಜ್ಞೆ) ಬಲಿಷ್ಠ ಕಾರಣವಾಗುವುದು. ಅವುಗಳ ವ್ಯಾಪಕತೆ ಹೆಚ್ಚುತ್ತ ಹೋಗುವುದೇ ದಾರ್ಢ್ಯವೃದ್ಧಿ.

ವಾದಗಳ ದುರುಪಯೋಗ ಮತ್ತು ಸದುಪಯೋಗ

ದೈವಭಕ್ತಿಯು ಅಂಧಶ್ರದ್ಧೆಗೆ ಎಂದೂ ಒಂದೇ ಒಂದು ಪ್ರಧಾನ ಕಾರಣವಾದದ್ದು ಸುಳ್ಳು. ಅದರ ದುರುಪಯೋಗವಂತೆಯೇ ಪ್ರತಿ-

ಯೊಂದನ್ನೂ (ಪ್ರತಿಯೊಂದು ವಾದವನ್ನೂ ಸಿದ್ಧಾಂತವನ್ನೂ) ದುರುಪಯೋಗ ಮಾಡಲು (ಮಾಡಿಕೊಳ್ಳಲು) ಸಾಧ್ಯವಿದೆ. ಸರ್ವೋದಯವೇ ಅವುಗಳ ಸದುಪಯೋಗಕ್ಕೆ ನಿಕಷ. ಅರ್ಥದಲ್ಲಿ ಸಮರ್ಥಾಸಮರ್ಥರ ಸ್ಪರ್ಧೆ ಅನಿವಾರ್ಯವಾದರೆ ಸರ್ವೋದಯವೆಂದೂ ಸಾಧ್ಯವಾಗದು. "ಶರೀರ ಮಾದ್ಯಂ ಖಲು ಧರ್ಮಸಾಧನಂ" ಆಗಿರುವಂತೆ ಸ್ವಾರ್ಥದ ವಿಸ್ತಾರಣವು ಸರ್ವವನ್ನೂ ಒಳಗೊಂಡರೆ ಅದು ನಿಜವಾಗಿ Expanding universe ವಿಸ್ತರಣಶೀಲ ವಿಶ್ವ. ಯುಕ್ತಾಹಾರ-ವಿಹಾರಗಳನ್ನು ಯೋಗಸಾಧನೆ ಅಗತ್ಯವೆಂದು ಹೇಳುವ ಭಗವದ್ಗೀತೆ ಹುಚ್ಚು ನಿಃಸ್ವಾರ್ಥತೆಯನ್ನು ಸಮರ್ಥಿಸದು. ಸ್ವಶರೀರಕ್ಕೆ ಸುಖಿರಾಜ್ಯಕ್ಕೆ ಸರಾಸರಿಯಾದ ಕನಿಷ್ಠಾಧಿಕ ಸೌಕರ್ಯವನ್ನು ದೊರಕಿಸಿಕೊಳ್ಳಲು ಅಸುಖಿ ಪರಶರೀರಕ್ಕೆ ಅದು ಸಿಗಲೆಂದು ಹೋರಾಡುವುದೇ ವ್ಯಾಸಸಹಜ ಬುದ್ಧಿಮತ್ತೆ. ಜ್ಯೋತಿರ್ಗೋಲಗಳು ಕೇಂದ್ರದಿಂದ ದೂರ ದೂರ ಸರಿಯುತ್ತ ಹೋಗುವುವು–ಎಂಬ ವಿಶ್ವವಿಸ್ತರಣವಾದವೊಂದು ಕಲ್ಪನೆಯ ಹಾರುಂಬಳಿ (Flying Saucer). ಪಂಚವಾರ್ಷಿಕ ಯೋಜನೆಗಳು "ಪಂಚವಾರ್ಷಿಕ ಪರೋಪಕಾರ ಯೋಜನೆಗಳಾ"ಗದೆ, "ಪಂಚವಾರ್ಷಿಕ ಪಳಾರ ಯೋಜನೆ"ಯಾಗುತ್ತ ಹೋದದ್ದೇ ಭಾರತೀಯ ಸಂಸ್ಕೃತಿಯ ಅವನತಿಯ ಪ್ರಧಾನಕಾರಣ.

ತತ್ತ್ವವಿಲ್ಲದ ನೀತಿ, ನೀತಿಯಿಲ್ಲದ ತತ್ತ್ವಗಳು ವಿಚಾರವಿಲ್ಲದ ಆಚಾರ, ಆಚಾರವಿಲ್ಲದ ವಿಚಾರಗಳಂತೆ ಸಮಾಜ ಘಾತಕ. ತ್ರೈಕರಣಿಕ ಅನುಭವವೇ ಲೋಕಗತವಾದ "ಪೂರ್ಣ"ಸಂಭವ. ದೇಶ ಕಾಲಗಳ ನಿಷ್ಕ್ರಿಯ ಸರ್ವ ಕ್ರಿಯಾಧಾರ ಸ್ವರೂಪವು ಪ್ರತ್ಯಕ್ಷವಲ್ಲ, ಪರೋಕ್ಷ. ಅವುಗಳ ಪೂರ್ಣ ಅಕ್ಷತೆಯನ್ನು ಖಂಡಿಸಿದಂತೆ ತೋರಿಸುವ ಕಾರಕವೆಂದರೆ ಪ್ರಮೇಯವಾದ ಘಟನೆಗಳು, ಗುಣಗಳು, "ದ್ರವ್ಯಗಳು". ಕರ್ಮಾಭಾವದಲ್ಲಿ ದೇಶಕಾಲಗಳು ಅನುಪಮ್ಯ, ಅನನುಮೇಯ, ಅಪ್ರಯೋಜಕ ಎನ್ನಿಸುತ್ತವೆ. ಅವುಗಳ ಅಭ್ಯೋಕರಣವು (ವಿಭಜನೆಯು) ಕೇವಲ ಮಾನಸಿಕ, ಅಭೌತಿಕ, ಘಟನಾ ಪರಂಪರಾಪ್ರವಾಹ ನಿಯಂತ್ರಿತ. ಅವುಗಳಿಗೆ ಸಂಬಂಧಿಸಿದ ಮಾನಸ ಕ್ರಿಯೆಗಳು ಸಂವೇದನಾ ಧೃತ. "ದ್ರವ್ಯ"ದ ಶುದ್ಧ ವೈಚಾರಿಕ ಸ್ವರೂಪ

ದಂತೆಯೇ ದೇಶ-ಕಾಲಗಳ ಅಥವಾ ಅವುಗಳ ಸಿಷ್ಟಿಯ ಐಕ್ಯವೂ ಕೇವಲ ವೈಚಾರಿಕ--ವೈಶೇಷಿಕರ ವಿಶೇಷಗಳ ಕಲ್ಪನೆಯಂತೆ. ವಸ್ತು ಸಮಭಾವ ಗಳಂತೆಯೇ ವಸ್ತ್ವರ್ಥಗ್ರಹಣಕ್ಕೆ ಅಗತ್ಯವಾದ ಕಾಲ್ಪನಿಕ (ತಾರ್ಕಿಕ) ಪದಸತ್ಯವೂ ವಿಚಾರ ವ್ಯವಹಾರಕ್ಕೆ ಸಂಕೇತರೂಪದಲ್ಲಿ ಕೆಲವೊಮ್ಮೆ ಅಗತ್ಯವಾಗುತ್ತವೆ.

ಮಹಾಭಾವ-ಮಹಾನುಭಾವ

ಜಾಗ್ರತ ಜೀವನದ ಕಾರ್ಯಗಳಿಗೆ ಶುದ್ಧ ಮಾನಸಿಕ ವಿಚಾರಗಳೂ (ಹಗಲು-ರಾತ್ರಿಗಳಲ್ಲಿ ಕಾಣುವ) ಕನಸುಗಳೂ ಅಂತರ್ವಾಣಿಗಳೂ ಊಪ್ವ-ರೇಚ್ಛೆಗಳೂ (Historical forces) ಕಾರಕ-ಪ್ರೇರಕಗಳಾಗುವುವು ಎಂಬು-ದನ್ನು ಅವಿಜ್ಞಾತಮನದ ವಿಶ್ಲೇಷಣವು ತಿಳಿಯಪಡಿಸುತ್ತದೆ. ಪರಹಿತ ವಿಮುಖರಾದ ವ್ಯಕ್ತಿ ಸ್ವಾರ್ಥಪರಾಯಣರ ಕೈಯಲ್ಲಿ ಯಾವ ಶಾಸ್ತ್ರ, ವಾದ, ಸಿದ್ಧಾಂತ ಸಿಕ್ಕಿದರೂ ಅದನ್ನು ಅವರು ಸ್ವಾರ್ಥಾನುಕೂಲವ್ಯಾಖ್ಯೆಗೆ ಒಳಪಡಿಸುತ್ತಾರೆ. ಆದುದರಿಂದ ಅಹಂಕಾರ-ಮಮಕಾರರಹಿತತೆಯು ಸರ್ವಸಾಧ್ಯ. ಅದನ್ನು ಸಾಧಿಸಿದವರು—

"ವಿಮುಕ್ತಂ ಸರ್ವಸಂಗೇಭ್ಯೋ ಮುನಿಮಾಕಾಶವತ್ ಸ್ಥಿತಂ
ಅಸ್ವಮೇಕಚರಂ ಶಾಂತಂ ತಂ ದೇವಾ ಬ್ರಾಹ್ಮಣಂ ವಿದುಃ—

ಸಂಗ ವಿಮುಕ್ತತೆ ಎಂದರೆ ಇತರರೊಡನೆ ಸ್ವಾರ್ಥಕ್ಕಾಗಿ (ಸ್ವಶರೀರೇಂದ್ರಿಯಾರ್ಥಗಳಿಗಾಗಿ ಮಾತ್ರ ಇರುವ) ಆಸಕ್ತಿಯಿಂದ ಬಿಡುಗಡೆ; ಆಕಾಶ ದಂಥ ಮನಃಸ್ಥಿತಿಯನ್ನು ಹೊಂದುವುದೆಂದರೆ ರಸೆಲ್ಲಸಿಗಿಂತಲೂ ಹೆಚ್ಚು ಪೂರ್ವಗ್ರಹರಹಿತನಾಗುವುದು, ಬಾಲ್ಯದ ಅಪಸಂಸ್ಕಾರಗಳಿಗೆ ಅಂಟಿಕೊಳ್ಳದಿರುವುದು; ತನ್ನ ಆಸ್ತಿಯನ್ನು ಪ್ರಾಣಕ್ಕಿಂತ ಪ್ರಿಯವೆಂದು ಅದರ ಕಾವಲಿಗೆ ನಿತ್ಯವೂ ಘೂರ್ಕನಂತೆ ವರ್ತಿಸುವ ಶೀಲವನ್ನು ಬಿಟ್ಟವನು ಅಸ್ವನು. ಶಾಂತತೆಯೆಂದರೆ ಸಮತೋಲ ಬುದ್ಧಿಯನ್ನು ಇಟ್ಟುಕೊಂಡಿರುವುದು, ಭಾವೋದ್ರೇಕಗಳಿಂದ ಮುಕ್ತನಾಗಿರುವುದು: ಇಂಥವನು ಬ್ರಾಹ್ಮಣ, ಪೂರ್ಣಮಾನವ.

'ಸರ್ವೇ ದೇವಾ ಮರ್ತ್ಯಸಂಜ್ಞಾ ವಿಶಿಷ್ಟಾಃ
ಸರ್ವೇ ಮರ್ತ್ಯಾ ದೇವಸಂಜ್ಞಾ ವಿಶಿಷ್ಟಾಃ,

ಎಲ್ಲ ದೇವರೂ (ಪ್ರಕಾಶಶೀಲರೂ) ಮರ್ತ್ಯಸಂಕೇತ ಉಳ್ಳವರು;
ಎಲ್ಲ ಮರ್ತ್ಯರೂ (ಮರಣಶೀಲರೂ) ದೇವ ಸಂಕೇತ ಉಳ್ಳವರು —

ಎಂಬ ಮಾತಿನಲ್ಲಿ ವ್ಯಾಸನು ಶಬ್ದಗಳೆಲ್ಲವೂ ಪ್ರತೀಕ ಸ್ವರೂಪದವುಗಳೆಂದೂ ಮನುಷ್ಯರ ಲೌಕಿಕ ತಿಳಿವಳಿಕೆಯಲ್ಲಿ ಮರ್ತ್ಯತ್ವ-ಅಮರ್ತ್ಯತ್ವಗಳೆಲ್ಲವೂ ಸಾಂಕೇತಿಕವೆಂದೂ ಹೇಳಿದ್ದು ರಸೆಲ್ಲನ-ಈ ಜಗತ್ತಿನ ಜ್ಞಾನವೆಲ್ಲವೂ ಸಾಂಕೇತಿಕ ಮತ್ತು ಗಾಣಿತಿಕ ಅಮೂರ್ತಸ್ವರೂಪದವು-ಎಂದ ಉದ್ಗಾರಕ್ಕೆ ಸರಿದೊರೆಯಾಗಿದೆ. ಮೂರ್ತತ್ವವು ಕ್ರಿಯಾತ್ಮವು; ಜ್ಞಾನಕ್ಕೆ ಕ್ರಿಯಾ ಸ್ವರೂಪವಿಲ್ಲ. ಮೂರ್ತವಾದುದೂ ನಿಷ್ಕ್ರಿಯವಾಗಿರಲಾರದು. ಕ್ರಿಯೆಯು ಪರಿವರ್ತನಕಾರಕ. ಪರಿವರ್ತನ ಹೊಂದುವವು ಗುಣಗಳು, ಗುಣಸಂಘಾತಗಳು; ಗುಣಗಳು ದ್ರವ್ಯಸ್ಥವೆಂದು ಕೇವಲವಿಚಾರವು ಗ್ರಹಿಸುತ್ತದೆ. ದ್ರವ್ಯವು ವಿಚಾರರೂಪದ ಗುಣಾಧಾರ. ಅದು ಗುಣಜಾತದ ಪ್ರತಿಬಿಂಬವಾಗಿರಬಹುದು ಅಥವಾ ಪ್ರತಿಬಿಂಬರಹಿತವಾಗಿ ಕೇವಲ ಭಾವಪ್ರತೀಕರೂಪದ್ದಾಗಿರಬಹುದು. ಅಪ್ರತೀಕ ಸ್ವರೂಪದ ಭಾವ (ಕಲ್ಪನೆ) ಎಂಬುದು ಇಂದ್ರಿಯಾರೂಢ ಮನದಲ್ಲಿಲ್ಲ. ಪ್ರತಿಮೆಗಳಾಗಲಿ, ಪ್ರತೀಕಗಳಾಗಿ ಭೌತ, ಬಾಹ್ಯ ಜಗತ್ತಿನ ಘಟನಾ ಘಟಕ (ವಸ್ತು) ಗಳನ್ನು ಸಂಬಂಧಿಸಿಯೇ ಇರುತ್ತವೆ.

ಮುಕ್ತತೆಯು ನಿಃಸ್ವಾರ್ಥವಾದ ಪ್ರತೀಕ ಸತ್ಯನಿಷ್ಠತೆ, ಪೂರ್ವಗ್ರಹದ ಸಾಪೇಕ್ಷರಹಿತತೆ, ವೈರಾಗ್ಯ, ಶುದ್ಧವಾದ ದ್ವಂದ್ವಾತೀತ ವಸ್ತುನಿಷ್ಠತೆ; ಮದ್ಧಿತ ಭಿನ್ನವಾದ ತದ್ಧಿತ. ತಲ್ಲಯದಿಂದ ತದ್ಧಿತಸಾಧನೆ ಸಾಧ್ಯ. ತನ್ಮಯ-ತಲ್ಲಯಗಳು ಪರಿಣಾಮತಃ ಒಂದೇ. ಇದೇ ವ್ಯಕ್ತಿತ್ವದ ಬ್ರಾಹ್ಮೀಕರಣ, ಬ್ರಹ್ಮದೃಷ್ಟಿಸಂಪನ್ನತೆ. ಅಂಥ ಸಂಪತ್ತನ್ನುಳ್ಳವರೇ ರಾಜಗುರುಗಳಾಗಬಲ್ಲರೆಂಬುದು ಭಾರತೀಯ ಸಾಮಾಜಿಕ-ರಾಜಕೀಯ ಅನುಭವ. ಈ ವ್ಯಕ್ತಿತ್ವ ಸಿದ್ಧಿಯನ್ನೇ ಪದೇ ಪದೇ ಮಹಾಭಾರತ ಎತ್ತಿಹಿಡಿಯುವುದು—

ಅದಕ್ಕಿಂತ ಕಡಿಮೆ ಮಟ್ಟದ ಯಾರೂ ಸ್ಥಿರವಾದ ಸರ್ವೋದಯ ಪ್ರಶಾಸನವನ್ನು ಯೋಜಿಸಿ ನಡೆಯಿಸಿ ಕೊಡಲಾರರು ಎಂಬುದೇ ಕಾರಣ.

ಕಾಯದೆ ನಿರ್ಮಾಪಕರೇ ಕಾಯದೆ ಭಂಗಮಾಡುವ, ಹಾಗೆ ಮಾಡುವವರನ್ನು ಚೆನ್ನಾಗಿ ಶಿಕ್ಷಿಸದ ಅಥವಾ ಕಂಡು ಅಲಕ್ಷಿಸುವ ಇಲ್ಲವೆ ಪುರಸ್ಕರಿಸುವ ಅನೀತಿಮಂತಿಕೆ ಇರುವಲ್ಲಿ ಯಾವ ರಾಜ್ಯಧರ್ಮ, ಸರಕಾರ ಪದ್ಧತಿ, ಪ್ರಶಾಸನ ಧೋರಣೆ ಯಶಸ್ವಿಯಾದೀತು? "ಯಥಾ ರಾಜಾ ತಥಾ ಪ್ರಜಾಃ"—ರಾಜನ ನಿತ್ಯ-ನೈಮಿತ್ತ ವ್ಯವಹಾರವರ್ತನೆಗಳು ಅನಿವಾರ್ಯವಾಗಿ ಸಾಮಾನ್ಯರಿಂದ ಅನುಕರಿಸಲ್ಪಡುವುದು ಸಾರ್ವತ್ರಿಕ. ಆದುದರಿಂದ ಜನತೆಯ ನಡತೆಯು ರಾಜ್ಯಾಧಿಕಾರಿಗಳ ನಡತೆಗೆ ಕಾರಣವಾಗುವ ಅಂಶಕ್ಕಿಂತ ರಾಜ್ಯಶಕ್ತಿವಂತರ ವರ್ತನೆ ಜನತೆಗೆ ಅನುಕರಣೀಯವಾಗುವ ಅಂಶವೇ ಬಹಳ ಹೆಚ್ಚು. ಅಧಿಕಾರಿಗಳ ಶೀಲದ ನಿಯಂತ್ರಣಕ್ಕಿರುವ ಆದ್ಯತೆ ಜನತಾಶೀಲ ನಿಯಂತ್ರಣಕ್ಕಿಲ್ಲ. ರಾಜ್ಯಧರ್ಮಗಳಲ್ಲಿ ಪ್ರಜಾಪ್ರತಿನಿಧಿ ಪ್ರಭುತ್ವವು ಕಾಲಿಕವಾದ ಸಾಮಾಜಿಕ ಮನಸ್ಥಿತಿಯ ಅಭಿರುಚಿಯನ್ನಷ್ಟೇ ಆಧರಿಸಿದೆ. ಪ್ರತಿಯೊಂದು ರಾಜ್ಯಪದ್ಧತಿಯಲ್ಲಿ ಗುಣಗಳೂ ಇವೇ ದೋಷಗಳೂ ಇವೆ. ದೋಷಸಂಖ್ಯೆ ಕಡಿಮೆಯಾಗಲು ಚಾರಿತ್ರಪಾವಿತ್ರ್ಯ ರಾಜಶಕ್ತಿವಂತರಲ್ಲಿ ಚೆನ್ನಾಗಿರುವಂತೆ ನೋಡಿಕೊಳ್ಳುವುದು ಮೊದಲು ಮಾಡತಕ್ಕ ಕರ್ತವ್ಯ. ರಾಜಶಕ್ತಿವಂತರು ತಮ್ಮ ಸದಸದ್ವರ್ತನೆಗಳೆಲ್ಲವನ್ನೂ ಅನಿವಾರ್ಯವೆಂದೋ ನ್ಯಾಯವೆಂದೋ ಸಮರ್ಥಿಸಿಕೊಳ್ಳುವ ಬಲಾತ್ಕಾರ ಭಾರತದಲ್ಲಿಂದು ಅಸಹ ಮಟ್ಟಕ್ಕಿಳಿದಿದೆ.

ಜ್ಞಾನಾಧಿಷ್ಠಾನ ಮಜ್ಞಾನಂ ತ್ರೀಂಲ್ಲೋಕಾನಧಿತಿಷ್ಠತಿ
ವಿಜ್ಞಾನಾನುಗತಂ ಜ್ಞಾನಂ ಅಜ್ಞಾನೇನಾಪಕೃಷ್ಯತೇ

ಅಜ್ಞಾನಕ್ಕೆ ಜಾಗ್ರತ್ ಸ್ವಪ್ನ ಸುಷುಪ್ತಿಗಳೆಂಬ ಮೂರು ಅವಸ್ಥೆಗಳಲ್ಲೂ ಜ್ಞಾನವೇ ಆಧಾರ; ಅದು ಹಿನ್ನೆಲೆಯಲ್ಲಿದ್ದು ಆಧಾರವಾದದ್ದು; ಅದ್ದರಿಂದ ಅದು ಪ್ರಕಾಶಕ್ಕೆ ಬರುವುದಿಲ್ಲ. ವಿಜ್ಞಾನವನ್ನು (ವಿಶ್ಲೇಷಣಾತ್ಮಕ ಬುದ್ಧಿಯನ್ನು) ಅನುಸರಿಸುವ ಜ್ಞಾನವು ಅಜ್ಞಾನದಿಂದ ಅಧೋಗತಿಗಿಳಿ-

ಸಲ್ಪಡುತ್ತವೆ. ಎಂಬ ಎಚ್ಚರಿಕೆ ಕೊಟ್ಟ ವ್ಯಾಸನು ಚಾರಿತ್ರವಂತಿಕೆಯ ಬೆಲೆಯನ್ನು ಚೆನ್ನಾಗಿ ಬಲ್ಲ. ಎಲ್ಲ ತರಹದ ದೌರ್ಜನ್ಯವೂ ಅವಿವೇಕದಿಂದ ಹುಟ್ಟಿದ್ದೆಂಬುದು ಸ್ಪಷ್ಟ. ಅಜ್ಞಾನ, ಅವಿವೇಕಗಳು ಪೂರ್ವಾಪರ ಕಾರಣ-ಪರಿಣಾಮ, ಸ್ಥಾಯಿತ್ವ-ಅಸ್ಥಾಯಿತ್ವ, ಬಹುಹಿತ-ಅಲ್ಪಹಿತ, ಸುಜನಾರ್ಥ-ದುರ್ಜನಾರ್ಥ, ಆತ್ಯಂತಿಕ ಸ್ವಾರ್ಥ, ತಾತ್ಕಾಲಿಕ ಸ್ವಾರ್ಥ ಮುಂತಾದವುಗಳನ್ನು ಸರಿಯಾಗಿ ವಿಂಗಡಿಸಿ ತಿಳಿದುಕೊಳ್ಳದಂತೆ ಅಧಿಕಾರಾರೂಢರ ಕಣ್ಣುಗಳನ್ನು, ಬಹಳ ಸಲ, ಕಟ್ಟುವುವು. ಅಂಥ ಸಂದರ್ಭಗಳಲ್ಲಿ ರಾಜ್ಯಶಾಸ್ತ್ರಗಳಲ್ಲ, ಧರ್ಮಶಾಸ್ತ್ರಗಳೂ ದುರುಪಯೋಗಕ್ಕೆ ಪಕ್ಕಾಗುತ್ತವೆ—ಎಂಬುದು ತಾತ್ಪರ್ಯ.

ಮಾನವನ ಕರ್ತೃತ್ವ

“ಕರ್ತೃತ್ವಾದೇವ ಪುರುಷಃ ಕರ್ಮಸಿದ್ಧೌ ಪ್ರಶಸ್ಯತೇ,
ಅಸಿದ್ಧೌ ನಿಂದ್ಯತೇ ಚಾಪಿ ಕರ್ಮನಾಶಾತ್ ಕಥಂತ್ವಿಹ.

—ಕರ್ತೃತ್ವ ಶಕ್ತಿಯುಳ್ಳವನೇ ಮಾನವನು; ಕರ್ಮವು ಫಲಿಸುವುದರಲ್ಲಿ ಕರ್ತೃತ್ವವೇ ಪ್ರಶಸ್ತ; ಕರ್ಮವು ನಾಶವಾಗಿ ಫಲಿಸದಾದಾಗ ಮನುಷ್ಯನು ಅನ್ಯರನ್ನು ಹೇಗೆ ನಿಂದಿಸಬಲ್ಲನು?” ಇದು ವ್ಯಾಸನ ವ್ಯವಹಾರೋಪದೇಶ. ಕೇವಲ ಸರಕಾರವನ್ನೇ ಪ್ರಜೆ ಯಾವಾಗಲೂ ನಂಬಿಕೊಂಡು ಕುಳಿತಿರಬಾರದು—ಎಂದು ನಂಬಿದ ಜಾನ್ ಹ್ಯೂಮ್ ಅಧಿಕಾರ ವಿಕೇಂದ್ರೀಕರಣವನ್ನು ಬೋಧಿಸುವಾಗ ಕರ್ತೃತ್ವಶಾಲಿಗಳಾಗಿರುವ ಪ್ರಜೆಗಳ ಮೇಲೆ ಹೆಚ್ಚಿನ ನಂಬಿಗೆಯನ್ನು ವ್ಯಕ್ತಪಡಿಸಿದನು. ಸ್ವಯಂಪ್ರೇರಿತ ಜನಸ್ತೋಮಗಳ, ಜನಸಂಘಗಳ ವೃತ್ತವು ರಾಜ್ಯಶಕ್ತಿಯು ಲಕ್ಷ್ಯಚೇಷ್ಟೆಯೊಡನೆ ಮಹತ್ವವನ್ನು ಹೊಂದದು—ಎಂದು ಅವನು ವಾದಿಸಿದ್ದು ಅವನ ವ್ಯಾಸದೃಷ್ಟಿಗೆ ನಿದರ್ಶನ. ರಾಜ್ಯಶಕ್ತಿಯ ಕಕ್ಷೆಯ ಹೊರಗೂ ಪ್ರಜಾಶಕ್ತಿ ಇರುವುದು ಕೆಟ್ಟ ಸರಕಾರ ಬಂದಾಗ ಅದನ್ನು ಕಿತ್ತೊಗೆವ ಅನುಕೂಲಕ್ಕೆ ಆಧಾರ. ನದಿ, ಗುಡ್ಡ, ಭೂಮಿ, ಆಕಾಶಗಳಂತೆ ಸರಕಾರ, ನಗರ, ಮನೆ ಮುಂತಾದವು ದೇವ ನಿರ್ಮಿತಗಳಲ್ಲ. ಅಂಥ ವ್ಯವಸ್ಥೆಗಳ ಜವಾಬುದಾರಿ ಸಂಪೂರ್ಣ

ವಾಗಿ ಮನುಷ್ಯನ ಪಾಲಿಗೆ ಸೇರಿದ್ದು; ಗಣಿತಜ್ಞರ ಸಂಘ, ರಸಾಯನ ಶಾಸ್ತ್ರಜ್ಞರ ಬಳಗ, ಖಗೋಲ ಶಾಸ್ತ್ರಜ್ಞರ ಕೂಟ, ವ್ಯಾಪಾರನಿಗಮ, ಮತಮಾನ್ಯಗಳು ಅತಿರಾಷ್ಟ್ರೀಯವಾಗಿರಬೇಕೆಂದು ಡ್ಯೂಯಿ ಹೇಳಿದ್ದು ಮಹಾಭಾರತದ ಅವಧಿಯ ನಾಗರಿಕತೆಯನ್ನು ಲಕ್ಷಣಿಸುತ್ತದೆ. ಆದರಿದು ಡ್ಯೂಯಿಯ ಕಾಲದಲ್ಲೇ ಅಮೇರಿಕದಲ್ಲಿ ಪೂರ್ಣದಶೆಯಲ್ಲಿ ಅಲಭ್ಯವಾಯಿತು; ಅಣುವಿಜ್ಞಾನಿಗಳ ಸ್ವಾತಂತ್ರ್ಯವನ್ನು ಮೊಟಕುಗೊಳಿಸಲಾಯಿತು; ಪತ್ರಗಳ ಗುಪ್ತಪರಿಶೋಧನ ಅವರ ಸ್ವಾತಂತ್ರ್ಯಕ್ಕೆ ಅಡ್ಡಬಂದಿತು. ಏಕೆ? ಅದು ಭಾರತದ ಮಹಾಭಾರತದ ನಾಗರಿಕತೆಯಲ್ಲ; ಆದರೆ ಆ ನಾಗರಿಕತೆಯನ್ನು ಉಕ್ತ ಲಕ್ಷಣದಲ್ಲಿ ಬದಲಾಯಿಸಿ ಸದ್ಯದ ಅಮೇರಿಕದ (ಸಂಯುಕ್ತ ರಾಜ್ಯದ) ರಕ್ಷಣಾವಿಧಿಯನ್ನು ಉಗ್ರವಾಗಿ ಭಾರತ ಜಾರಿಗೆ ತರಬೇಕಾಗಿತ್ತು; ಆದರೆ ವ್ಯವಹಾರತಃ ಹಾಗೆ ಮಾಡಿಲ್ಲ. ಅಸಹಾಯಕತೆಯನ್ನು ಅಹಿಂಸೆಯೆಂದು ಭಾರತವೀಗ ಜಪಿಸುತ್ತಿದೆ; ಬಲಿಷ್ಠ ರಾಷ್ಟ್ರಗಳು ಒಳಗೊಳಗೇ ನಗುತ್ತಿವೆ!

ಪ್ರಾಸ್ಥಾನಿಕ ದೃಷ್ಟಿಕೋನಗಳು

ವೈಟ್ ಹೆಡ್ಡನಂತೆಯೇ ಮಾನವಜ್ಞಾನವನ್ನು ಹೆಗೆಲ್ ಒಂದು ಅವಯವಿಕ ಇಡಿ ಎಂದು ತಿಳಿಯುತ್ತಾನೆ. ಅದು ಕ್ರಮೇಣ ಬೆಳೆಯುತ್ತದೆ; ತನ್ನ ಯಾವ ಅಂಗದಲ್ಲಿಯೂ ಅದು ಪರಿಪೂರ್ಣವಲ್ಲ. ಕಟ್ಟ ಕಡೆಗೆ ಅದು ಇಡಿಯಾಗಿ ಪರಿಪೂರ್ಣತೆಯನ್ನು ಹೊಂದುತ್ತದೆ. ಈ ಕ್ರಮವೃದ್ಧಿಯಲ್ಲಿ ಪ್ರತಿಯೊಂದು ಅಂಶಜ್ಞಾನವೂ ಆತ್ಯಂತಿಕವೆಂದು ನಂಬಲಾಗಿದೆ.

ಡ್ಯೂಯಿಯ ಪ್ರಕಾರ ವಾಕ್ಯಗಳ ಸತ್ಯತೆಯು ಅವುಗಳ ಅರ್ಥವತ್ತೆಯನ್ನು ಆಧರಿಸಿದೆ. ಆ ಅರ್ಥವತ್ತೆಯು ಬಳಸಲಾದ ಭಾಷೆಯನ್ನು ಅವಲಂಬಿಸಿರುತ್ತದೆ. ವಾಕ್ಯದ ಅರ್ಥವೆಂದರೆ ನಂಬಿಗೆ. ಅದು ಪೂರ್ಣ ಅಥವಾ ಅರೆಸತ್ಯ ಇಲ್ಲವೆ ಅರೆಸುಳ್ಳಾಗಿರಬಹುದು. ಅನುಭವಗಳ

ಹೊಂದಿಕೆಯ ಅಭಾವವು ಅಸತ್ಯ. ಅಸತ್ಯಕ್ಕೆ ಕೊನೆಯಲ್ಲಿ ಬರುವ ಅಸ್ತಿತ್ವವೇ ಅನೇಕ ಬಾರಿ ನಿಕಷ. ಈ ತತ್ವವಿವೇಚಕನ ಪ್ರಕಾರ ಸುಳ್ಳು ಸತ್ಯಗಳೆರಡೂ ಸಾಪೇಕ್ಷ; ಅರ್ಥಪೂರ್ಣವಾಗಿ ಆಚರಿಸಿದಾಗ ಒಂದು ಘಟನೆಯು ವರ್ತನೆಯನ್ನು ಪ್ರೇರಿಸುವ ಆವಯವಿಕ ಅವಸ್ಥೆ. ಆ ಘಟನೆಯೇ ಉಕ್ತ ನಂಬಿಗೆಯ ಅರ್ಥಪೂರ್ಣತೆ. ಕೆಲಸಕ್ಕೆ ಬರುವುದೆಲ್ಲ ಸತ್ಯ ಎಂದ ಡ್ಯೂಯಿ ಒಂದು ದೃಷ್ಟಿಯಲ್ಲಿ ವ್ಯಾಪಕಾರ್ಥದ ಪ್ರಯೋಜನವಾದಿಯಾಗುತ್ತಾನೆ. ಈ ವ್ಯಾಪ್ತಿಯಲ್ಲಿದು ಸತ್ಯ, ಸೌಂದರ್ಯ, ಸಾಫಲ್ಯಗಳೆಲ್ಲವನ್ನೂ ಒಳಗೊಳ್ಳುತ್ತವೆ. ಧರ್ಮಾರ್ಥ ಕಾಮ ಮೋಕ್ಷಗಳೆಲ್ಲವೂ ಈ ಮಹಾವ್ಯಾಪ್ತಿಯಲ್ಲಿ ಪ್ರಯೋಜನಗಳೇ!

ಪ್ರಯೋಜನ ಪ್ರಸ್ಥಾನವೆಂಬ ಪ್ರತ್ಯೇಕ ಪ್ರಸ್ಥಾನವೊಂದು ಇದೆ. ಬೆಂಥ್ಯಾಮನು ಈ ಪ್ರಸ್ಥಾನದ ದೊಡ್ಡ ವಕ್ತಾರ. ಅವನ ತತ್ವಗಳೆರಡು ಸಂಪರ್ಕ ತತ್ವ ಮತ್ತು ಅತಿ ಹೆಚ್ಚಿನ ಸುಖದ ತತ್ವ. ಹಾರ್ಟ್ಲೀಯು ಸಂಪರ್ಕಸೂತ್ರವನ್ನು ಹಿಂದೆಯೇ ಎತ್ತಿ ಹಿಡಿದಿದ್ದನು. ಸಂಪರ್ಕವು ಇಲ್ಲಿ ಪರಸ್ಪರವಾಗಿ ಭಾವಗಳದು, ಕಲ್ಪನೆಗಳದು, ಭಾಷೆಯದು. ಇದರ ಪ್ರಕಾರ ಮಾನಸಿಕ ಘಟನೆಗಳೆಲ್ಲವೂ ವಿಧಿವಿಹಿತ ಅಥವಾ ಉಪಾಧಿತ ಕ್ಷೇಪಕ್ಕೆ ಸದೃಶ. ಒಂದು ಮಾನಸಿಕ, ಇನ್ನೊಂದು ಶಾರೀರಿಕ–ಅಷ್ಟೇ ವ್ಯತ್ಯಾಸ. ಬೆಂಥ್ಯಾಮನ ಪ್ರಕಾರ ಸಾಫಲ್ಯ, ಒಳಿತು ಎಂಬುದೇ ಶಿವ, ಶುಭ, ಮಂಗಲ (ನೈತಿಕ ಪರಮಾದರ್ಶ). ಅವನ ಮಾನಸ ಶಾಸ್ತ್ರೀಯ ಪೂರ್ವ ನಿಶ್ಚಿತತಾವಾದವು ಸ್ವಾಭಾವಿಕವಾಗಿ ಸಾಮಾಜಿಕರನ್ನು ಸಾಫಲ್ಯ ಭಾವದರನ್ನಾಗಿ ಮಾರ್ಪಡಿಸುವ ಗುರಿಯುಳ್ಳದ್ದಾಗಿತ್ತು. ಭಾರತದ ದೈವ-ಕರ್ಮವಾದಗಳ ಗುರಿ ಇದೇ ಆಗಿತ್ತು. ಆದರೆ ಅವುಗಳ ಸಾಕ್ಷಾತ್ ಪರಿಣಾಮ ಅನೇಕ ಕಡೆ ಸೋಮಾರಿತನದ ಅಸಹ್ಯ ಅಭಿವೃದ್ಧಿ!

ಕ್ಷಾತ್ರಪ್ರಶಿಕ್ಷಣ

ಸಾಫಲ್ಯವೇ ಸುಖ, ಅಸಾಫಲ್ಯವೇ ದುಃಖ– ಎಂದ ಬೆಂಥ್ಯಾಮನ ಕಲ್ಪನೆಯು "ಯತೋ ಧರ್ಮಃ, ತತೋ ಜಯಃ" ಎಂಬ ಧರ್ಮ ಸಾರ್ವ

ಭೌಮತೆಯು ವ್ಯಾಸ ಸಿದ್ಧಾಂತವನ್ನು ಹೋಲುತ್ತದೆ. ಧಾರ್ಮಿಕರಾದ ಪಾಂಡವರು ಅಲ್ಪಸಂಖ್ಯರಾದರೂ ಅವರಷ್ಟೇ ಮಹಾಭಾರತ ಯುದ್ಧಾನಂತರ ಉಳಿದದ್ದು ಅವರ ಧರ್ಮ ಪ್ರಾಧಾನ್ಯದಿಂದ. ಅಧರ್ಮಪ್ರಧಾನರೂ ಅಲ್ಪ ಧರ್ಮಪ್ರಧಾನರೂ ಬಹುಸಂಖ್ಯರಾದರೂ ಉಳಿಯಲು ಅನರ್ಹರು- ಎಂಬುದೇ ವ್ಯಾಸದರ್ಶನ. ಅದೇ ಧರ್ಮಸಂಸ್ಥಾಪನೆ. ಅದಕ್ಕೆ ಸಂಖ್ಯೆ (ಪ್ರಜಾಪ್ರಭುತ್ವದ ಇಂದಿನ ರೂಪದಲ್ಲಿರುವಂತೆ) ಗಣ್ಯವಲ್ಲ. ಸಂಖ್ಯಾಮಾನವು ಸತ್ಯಕ್ಕೆ, ಒಳಿತಿಗೆ ನಿಕಷವಲ್ಲ. ಈ ಸೂತ್ರವು ಮತಸಂಖ್ಯಾ ಮೂಲದ ಪ್ರಜಾಪ್ರಭುತ್ವದ ವ್ಯವಹಾರಕ್ಕೆ ವಿರುದ್ಧ. ರಶಿಯದ ಪ್ರಜಾಸತ್ತೆಯು ಸಂಖ್ಯಾಬಲವನ್ನು ಸತ್ಯಾಪಲಾಪಕ್ಕೆಡೆಗೊಡದಂತೆ ತಡೆಯಲು ಏಕಪಕ್ಷೀಯ ಉಪಶಿಕ್ಷಿತ ಅಲ್ಪಸಂಖ್ಯರ ಬಹುಮತವನ್ನು ರಾಜ್ಯಶಕ್ತಿ ನಿರ್ಣಾಯಕವೆಂಬ ತತ್ವವನ್ನು ಹಿಡಿದಿದೆ.

ಬಹುಸಂಖ್ಯರ ಪ್ರಾತಿನಿಧ್ಯವನ್ನು ವ್ಯಾಸ ಹೇಳಿದಂತೆ "ಸತ್ಯಂ ದಮಸ್ತಪೋ ದಾನಮಹಿಂಸಾ ಧರ್ಮ ನಿತ್ಯತಾ-ಸತ್ಯಸಂಧತೆ, ಭಾವನಾ ನಿಯಂತ್ರಣಶಕ್ತಿ, ಸಂಶೋಧಕ ಬುದ್ಧಿ, ಸ್ವಾರ್ಥತ್ಯಾಗಶೀಲ, ದಯೆ, ವಿಧಿವತ್ ವ್ಯವಹಾರ ಪ್ರವೃತ್ತಿಗಳು" ಇರುವ ವ್ಯಕ್ತಿಗಳು ಮಾತ್ರ ವಹಿಸುವಂತಾದರೆ, ಯಾವ ಪ್ರಭುತ್ವದಲ್ಲೇ ಆಗಲಿ, ಜನಹಿತ ಸಾಧ್ಯವಾದೀತು. ಪ್ಲೇಟೋನಿಂದ ಹಿಡಿದು ರಶಿಯನಿಜಮ್ಮಿನವರೆಗೆ ಪ್ರಭುತ್ವನಿರ್ವಾಹಕರ ಬಗ್ಗೆ ಬರೆದ ರಾಜನೀತಿಶಾಸ್ತ್ರಜ್ಞರಾರೂ ದುರಾತ್ಮ ದುರ್ಬಲಾತ್ಮರನ್ನು ಅಧಿಕಾರ ನಿರ್ವಹಣಕ್ಕಾಗಿ ನಿಯಮಿಸಬೇಕೆಂದು ಹೇಳಿದ್ದಿಲ್ಲ. ಆದುದರಿಂದ ಈ ವಿಷಯದಲ್ಲಿ "great minds think alike" ಮಹಾತ್ಮರು ಆಲೋಚಿಸುವುದು ಸದೃಶರೀತಿಯಿಂದ" ಎಂಬ ಹಾಗೆ ಮನು, ವ್ಯಾಸ, ಕೌಟಿಲ್ಯ, ಶುಕ್ರ, ಬೃಹಸ್ಪತಿ, ಶೌನಕ, ಕಾಮಂದಕ ಮುಂತಾದ ಎಲ್ಲರೂ ರಾಜ(ಆಳುವವ)ಧರ್ಮವನ್ನು ಹೇಳುವಾಗ- ರಾಜಧರ್ಮವಿರುವುದು ಪ್ರಜಾಹಿತದಲ್ಲಿ- ಎಂದು ಹೇಳಿರುವುದರಿಂದ, ಪ್ರಜಾಹಿತೈಷಿತ್ವದ ಗುಣ, ನಡತೆ, ಸಂಸ್ಕಾರಗಳು ಚಿಕ್ಕಂದಿನ ಅವಧಿಯಿಂದಲೇ ಮೊಳೆಯುವಂತೆ

ಭಾವಿ ಪ್ರಜಾಪ್ರತಿನಿಧಿಗಳಿಗಾಗಿ ತಕ್ಕ ಯೋಜನೆ ಮಾಡುವುದು ಪ್ರಬುದ್ಧತೆಯ ಲಕ್ಷಣ. ಸುರಾಜ್ಯ ಸ್ಥಾಪನೆಗೆ ಯಾವ ರಾಜನೀತಿ ಶಾಸ್ತ್ರವೂ ಬೇರೆ ಉತ್ತಮ ತರ ಸಾಧನವನ್ನು ಸೂಚಿಸಲಾರದು. ಇಂದಿನ ಎಂ. ಎಲ್. ಎ. ಭವನ ಹಾಗೂ ಸಚಿವಾಲಯಗಳ “ಪಾರ್ಟಿ”ಗಳನ್ನು ಕಂಡವರಿಗೆ ಇದರ ಅರ್ಥ ಚೆನ್ನಾಗಿ ಆಗುತ್ತದೆ.

“Control of sub-conscious drives by the conscious and super-conscious factors—ಅವಪ್ರಜ್ಞೆಯ ಮೇಲೆ ವಿಜ್ಞಾತ ಪ್ರಜ್ಞೆ ಹಾಗೂ ಅತಿಮಾನಸ ಪ್ರಜ್ಞೆಗಳ ನಿಯಂತ್ರಣ ಇರುವುದೇ ಅಂಥ ಸಂಸ್ಕರಣವು ಕೊಡಬೇಕಾದ ಫಲ-ಎಂಬುದು “ಮಾನವತೆಯ ಪುನಾ-ರಚನೆ” ಯೆಂಬ ಗ್ರಂಥದಿಂದ ತಿಳಿದು ಬರುತ್ತದೆ. ಅತಿಮಾನಸವು ಅವಿಜ್ಞಾತವಾಗಿರುವಾಗ, ಅದರ ಅಸ್ತಿತ್ವವನ್ನೇ ನಂಬದ ವಿಜ್ಞಾನ ಮತವು ಪ್ರಚುರವಾಗಿರುವಾಗ ಏನು ಮಾಡಬೇಕು? ಜೊತೆಗೆ ಅದನ್ನು ನಂಬಿ-ದಂತೆ ನಟಿಸುವ ಕಪಟಿಗಳ ಕೈಯನ್ನು ಹೇಗೆ ಕಟ್ಟಬೇಕು? ಮಾನಸ ಶಾಸ್ತ್ರದ ಪ್ರಯೋಗ ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಿ, ವಾಟ್ಸನ್ ಮತ್ತು ಫ್ರಾಡ್ ಮುಂತಾದವರ ಅಪರಿಪೂರ್ಣವ್ಯಾಪ್ತಿಯ ಸಿದ್ಧಾಂತಗಳನ್ನು ಸರಿ ಪಡಿಸಿ ವ್ಯಾಸ-ಸೊರೋಕಿನ್ನರ ಸಿದ್ಧಾಂತಗಳ ಸಮರ್ಥನೆಯನ್ನು ಪ್ರಯೋಗ ವಿಜ್ಞಾನರೀತ್ಯಾ ನಡೆಯಿಸಬೇಕು.

ವ್ಯಾಹತಿಗಳು ಮತ್ತು ಅವುಗಳ ಪರಿಹಾರ

ಅವಪ್ರಜ್ಞಾಧೀನನು ಅವಮಾನವ (Subman); ಜಾಗರದ ಪ್ರಜ್ಞೆ ಅದನ್ನಾಶ್ರಯಿಸಿದರೆ ಅಧಃಪಾತ ಎಂಬುದು ಸಹಜವಾದರೂ ಆಧುನಿಕ ಪಾಶ್ಚಾತ್ಯರಲ್ಲಿ ಹಲವರು ಅದನ್ನು (Animal instincts ಪ್ರಾಣಿಸಾಮಾನ್ಯ ಮೂಲ ಪ್ರವೃತ್ತಿಗಳನ್ನು) ಜಾಗ್ರತಪ್ರಜ್ಞೆಯ ಮೂಲಾಧಿಷ್ಠಾನವೆಂದು ಅಗ್ರಹಿಸಿ ತಮ್ಮ “ಮಾನವತಾವಾದ”ವನ್ನು ವೈಚಾರಿಕವಾಗಿ ಅದರ ತಳಪಾಯದ ಮೇಲೆ ಕಟ್ಟಲು ಪ್ರಯತ್ನಿಸುತ್ತಿರುವುದು ಮದ ತೋ

ವ್ಯಾಘಾತ. ಅವಿಚಾರವು ವಿಚಾರದ ಮೂಲವಾಗುವುದು, ಅನೀತಿಯು ನೀತಿಯ ವಿಕಾಸಕ್ಕೆ ಜನಕವಾಗುವುದು, ದೇಹಾತ್ಮಭಾವದ ಅಪಪ್ರಜ್ಞೆಯು ಜಾಗರದ(ಜಾಗ್ರತ)ಪ್ರಜ್ಞೆಯ ಆಧಾರವೆನ್ನುವುದು, ಜಡಪ್ರಕೃತಿಯು ಜೀವತ್ ಪ್ರಕೃತಿಯ ಜನನಿಯೆನ್ನುವುದು ಅಲ್ಪವು ಮಹತ್ತಿನ ಬೀಜವೆಂಬಷ್ಟು ವ್ಯಾಪ್ತಿದೋಷವುಳ್ಳ ಊಹೆ. ಸುಳ್ಳು ಸತ್ಯವನ್ನು ಹಡೆಯುವುದು, ನಿರಪೇಕ್ಷವು ಸಾಪೇಕ್ಷದ ಮೇಲೆ ನಿಂತಿರುವುದು, ಸ್ವತಂತ್ರವು ಪರತಂತ್ರವನ್ನಾಶ್ರಯಿಸಿರುವುದು, ಪ್ರೀತಿಯು ದ್ವೇಷಮೂಲವಾಗಿರುವುದು, ಪವಿತ್ರ ಪ್ರೇಮವು ಅಪವಿತ್ರ ಕಾಮಜವೆನ್ನುವುದು, ಜ್ಞಾನವು ಅಜ್ಞಾನಪ್ರತಿಷ್ಠಿತವೆನ್ನುವುದು ಮತ್ತು ಮಾನವನು ಚತುಷ್ಪಾದ ಪ್ರಾಣಿಯ ವಿಕಾಸವೆನ್ನುವುದು ಅಧೋಮೂಲ ಊರ್ಧ್ವಶಾಖವೆಂಬ ಜೀವನಚಿತ್ರ. ಇಂಥ ಅಪ್ರಮಾಣಿತ ಊಹೆ, ಆಭಾಸಿಕ ಪ್ರಮಾಣಗಳ ಮೇಲೆ ನಿಂತ ಕಲ್ಪನೆ, ವಿಜ್ಞಾನ (ವಿಕಟ ಜ್ಞಾನ) ಕ್ಕಂಟಿಸುವ ವಿಪರೀತ ಬುದ್ಧಿವಿಲಾಸ — Analogy ಸಾದೃಶ್ಯವೆಂಬ ಅತ್ಯಂತ ದುರ್ಬಲವಾದ ಜ್ಞಾನಪ್ರಮಾಣವನ್ನು ಅನುಸರಿಸಿ ಮಾಡಿದ ಅಪತರ್ಕ; ಕೆಸರಿಂದ ಕಮಲವೆಂಬುದು ಚಮತ್ಕಾರವಾಗಿ ಕಾಣಬಹುದು; ಸ್ಥೂಲಸತ್ಯವಾಗಿಯೂ ತೋರಬಹುದು. ಆದರೆ ಕ್ಷೇತ್ರಗುಣವು ಬೀಜಗುಣದ ಜಾತಿಮತ್ತೆಯನ್ನು ಬದಲಾಯಿಸಲಾರದೆಂಬ ನಿಷ್ಟುರ ಸತ್ಯವನ್ನು ಅಲ್ಲಗಳೆಯಲಾರದು. ಆದುದರಿಂದ The unknown ಅವಿಜ್ಞಾತವಾದ **Super conscious** ಅತೀಂದ್ರಿಯ, ಸೂಕ್ಷ್ಮ, ಅನಂತ, ಆದ್ಯ ಎನ್ನಿಸಿರುವ **ಅತಿಮಾನಸದ** ಊರ್ಧ್ವಮೂಲ ಅಧಃಶಾಖ ಸ್ವರೂಪದ ಜೀವನ ಚಿತ್ರ (The picture of the tree of life ಜೀವನ ವೃಕ್ಷ ಚಿತ್ರ) ವನ್ನು ಕೊಡುವ ವ್ಯಾಸ ಪದ್ಧತಿಯೇ ಹೆಚ್ಚು ಸಮಂಜಸವೆಂದು ತೋರುತ್ತದೆ. The descent and the ascent of the Divine ದಿವ್ಯದ (ಅತಿಮಾನಸದ) ಅವಕಾಶ-ವಿಕಾಸಗಳು, ಅವತರಣ-ಉತ್ಥಾಗಮನಗಳ, ವಿಕಾರ-ಆಕಾರ ಪರಿಣಾಮಗಳ ಕ್ರಿಯಾಸಂತಾನ ಸ್ವರೂಪಕ್ಕೆ ಇಂಥ ದ್ವಂದ್ವಗಳಿಗೆ–ಅತೀತವಾದ ಶಕ್ತಿಯೇ ಮೂಲಕಾರಣವೆಂಬ ಭಾರತೀಯ ಪ್ರತಿಯು ಉಪಾದೇಯವಾಗುವುದು ಭಾರತೀಯ ಸಂಸ್ಕಾರ

ಸಂಪನ್ನರಿಗೆ ಸಹಜ; ಸಹಜವಾದುದೇ ಸ್ವಧರ್ಮ. ಇದನ್ನೇ "ಸ್ವಧರ್ಮೇ ನಿಧನಂ ಶ್ರೇಯಃ" ಎಂಬ ವ್ಯಾಸವಾಣಿ ಸಮರ್ಥಿಸಿದೆ. ವಿಚಾರಹೀನವಾದುದು ಅಂಧಶ್ರದ್ಧೆಯಾದೀತಲ್ಲದೆ ವಿಚಾರಾತೀತವಾದ ಉನ್ನತ ಕಲ್ಪನೆ ಅಂಧಶ್ರದ್ಧೆಯಾಗದು. ಅವಿಚಾರ (The Irrational) ದಿಂದ ವಿಚಾರ (The Rational) ವಿಕಸಿತವಾಯಿತೆಂಬುದು ವಿಚಾರಹೀನವಾದುದು-ಅಶಕ್ತಿಯಿಂದ ಶಕ್ತಿ ಲಭ್ಯವಾಯಿತೆನ್ನುವ ಹಾಗೆ!

"ಸಾಪೇಕ್ಷತ್ವಾದನಾದಿತ್ವಾದ್ವೈಚಿತ್ರ್ಯಾದ್ವಿಶ್ವವೃತ್ತಿತಃ
ಪ್ರತ್ಯಾತ್ಮನಿಯಮಾದ್ಭುಕ್ತೇರಸ್ತಿ ಹೇತುರಲೌಕಿಕಃ-

ಪ್ರಪಂಚದ ಪದಾರ್ಥಗಳು ಪರಸ್ಪರ ಸಾಪೇಕ್ಷ; ಅದರ ಕ್ರಿಯಾಸಂತಾನವು ಅನಾದಿ; ಅದು ವೈವಿಧ್ಯಮಯ; ಅದು ವಿಶ್ವದೆಲ್ಲೆಡೆಯಲ್ಲೂ ಹಾಗಿದೆ; ಪ್ರತಿಯೊಬ್ಬನ ಅನುಭವವೂ ಅವನವನಿಗೆ ಪರಿಸೀಮಿತ—ಆದುದರಿಂದ ಇಷ್ಟಾಗಲು ಲೌಕಿಕ (ಪ್ರಾಪಂಚಿಕ) ಕಾರಣವಾವುದೂ ಸಾಲದು; ಪ್ರಪಂಚಾತೀತವಾದ ಕಾರಣ ಬೇಕೇ ಬೇಕು- ಎಂದ ಉದಯನಾಚಾರ್ಯನ ತರ್ಕವನು. ಮಹಾ ತಾರ್ಕಿಕವಾನಿಯಾದ ರಸೆಲ್ಲನ ಯಾವ ವಾದವೂ ಖಂಡಿಸಿಲ್ಲ. ಮಹಾವಿಜ್ಞಾನಿಯಾದ ಐನ್‌ಸ್ಟೀನನ ಯಾವ ಗಣಿತ ಸೂತ್ರವೂ ಖಂಡಿಸಲಾರದು.

ಸಿದ್ಧಾಂತ ದೋಷಗಳು

ಸ್ಪೆಂಗ್ಲರ್, ಕ್ರೀಬರ್, ನಾರ್ತ್ರಾಪ್, ಟಾಯ್ನ್‌ಬೀ ಮುಂತಾದ ವಿಚಾರವಾದಿಗಳು ಹೇಳುವ ಸಾಂಸ್ಕೃತಿಕ ಸಿದ್ಧಾಂತಗಳಲ್ಲಿ ಕೆಲವು ಗಣ್ಯವಾದ ದೋಷಗಳಿವೆ:

ಒಂದು ಸಂಸ್ಕೃತಿಯು ಎಷ್ಟು ಭಾಗ ಸಮನ್ವಯ ಹೊಂದಿದೆ, ಎಷ್ಟು ಹೊಂದಿಲ್ಲ—ಎಂಬುದನ್ನು ಅವರ ಸಿದ್ಧಾಂತಗಳು ಕಡೆಗಾಣಿಸಿಲ್ಲ. ಅವರು ಚೀನೀಯ, ಆರ್ಯ, ಐಗುಪ್ತ, ಗ್ರೀಕ್-ರೋಮೀಯ, ಪಾಶ್ಚಾತ್ಯ ಅಥವಾ

ಇತರ ಯಾವುದಾದರೊಂದು ಸಂಸ್ಕೃತಿಯು ಸಮನ್ವಿತವಾಗಿದೆ ಎನ್ನುತ್ತಾನೆ. ಅದರ ಸಮನ್ವಿತತೆಯು ಅಪೂರ್ಣ, ಏಕದೇಶೀಯ, ಅಸಮಗ್ರ ಎಂಬುದನ್ನವರು ಅರಿಯರು. ಮಹಾಸಂಸ್ಕೃತಿಯೊಂದರಲ್ಲಿ ಕೂಡ ಅದರ ಕೇಂದ್ರ ಭಾಗ ಮಾತ್ರ ಮುಖ್ಯವಾದ ಹಾಗೂ ಅರ್ಥಪೂರ್ಣವಾದ ಒಂದು ಕಾರ್ಯ ಕಾರಣ ಪದ್ಧತಿಗೆ ಒಳಪಟ್ಟಿರುತ್ತದೆ; ಮಿಕ್ಕ ಪರಿಸರ ಭಾಗಗಳು ಅಸಮನ್ವಿತ-ವಾಗಿರುತ್ತವೆ ಅಥವಾ ಅದರೊಟ್ಟಿಗೇ ಭಿನ್ನ ಭಿನ್ನವಾಗಿ ವಿವಿಧ ಗುಂಪುಗಳಲ್ಲಿ ಸಮನ್ವಿತವಾಗಿರುತ್ತವೆ. ಸ್ಪೆಂಗ್ಲರ್-ಟಾಯ್ನಬೀಗಳ ಆವಯವಿಕ ಸಿದ್ಧಾಂತ(organic Theory)ದ ಪ್ರಕಾರ ಪ್ರತಿಯೊಂದು ಗಣ್ಯ ಸಂಸ್ಕೃತಿಯೂ ಹುಟ್ಟಿ, ಬೆಳೆದು ನಾಶ ಹೊಂದುತ್ತದೆ. ಇದು ಶುದ್ಧ ಸುಳ್ಳು. ಮಹಾ ಸಂಸ್ಕೃತಿಯೊಂದೂ ಉಕ್ತ ಜೀವಾವಯವಿಕ (Bio-organismic) ಪಥವನ್ನು ಹಿಡಿಯುವುದಿಲ್ಲ. ಅದರ ಬದಲು ಹುಟ್ಟಿದ (ಮೂಡಿದ) ಬಳಿಕ ಅದು ಒಂದು ಅನಿಶ್ಚಿತ ಅವಧಿಯ ವರೆಗೆ ಮುಂದುವರಿಯುತ್ತದೆ; ಹಾಗೆ ಮುಂದುವರಿಯುವಾಗ ಭಿನ್ನ ಭಿನ್ನ ಪ್ರಭಾವಿ ಸಾಂಸ್ಕೃತಿಕ ಪದ್ಧತಿಗಳತ್ತ ಹೊರಳುತ್ತಿರುತ್ತದೆ; ಒಂದು Ideational ಧ್ಯೇಯ ಕಾಲ್ಪನಿಕ, Idealistic ಧ್ಯೇಯವಾದೀಯ ಅಥವಾ Sensate ಇಂದ್ರಿಯ ಪ್ರಾತ್ಯಕ್ಷಿಕ ಪದ್ಧತಿಯಿಂದ ಇನ್ನೊಂದಕ್ಕೆ ಅದು ಹೊರಳುತ್ತಿರುತ್ತದೆ. ಮುಖ್ಯವಾದ ಸಂಸ್ಕೃತಿಗಳ ಚರಿತ್ರೆಯಲ್ಲಿ ಅಂಥ ಹೊರಳಾಟಗಳು ಮುಖ್ಯವಾದ ಪರಿವೃತ್ತಿಬಿಂದು (Turning Point) ಗಳಾಗಿರುತ್ತವೆ. ಸ್ಪೆಂಗ್ಲರ್, ಟಾಯ್ನಬೀ, ನಾರ್ತ್ರಪರ ಭಿನ್ನ ಸಾಂಸ್ಕೃತಿಕ ಮಾದರಿಗಳೆಲ್ಲವೂ ಕೆಲ ಸಾಮಾನ್ಯ ಮಾದರಿಗಳ ಉಪವಿಭಾಗಗಳು. ಅವರು ಆಯಾ ಸಂಸ್ಕೃತಿಯ ಸಾರಭೂತ ಗುಣದಲ್ಲಿ ಒಂದೊಂದು ಅಪರಿವರ್ತನೀಯ ಚಾರಿತ್ರವಿದೆ ಎಂದು ಹೇಳುತ್ತಾರೆ. ಪೌರಸ್ತ್ಯ ಸಂಸ್ಕೃತಿಗೆ ಮತಧಾರ್ಮಿಕ, ಪ್ರಾತಿಭ ಅಥವಾ ರಸಾತ್ಮಕ ಚಾರಿತ್ರ (Character) ಇದೆಯೆಂದೂ ಪಾಶ್ಚಾತ್ಯ ಸಂಸ್ಕೃತಿಗೆ ವೈಜ್ಞಾನಿಕ ಚಾರಿತ್ರವಿದೆಯೆಂದೂ ಹೇಳುವುದು ಶುದ್ಧ ಸುಳ್ಳು. ಮಧ್ಯಯುಗದ ಪಾಶ್ಚಾತ್ಯ ಸಂಸ್ಕೃತಿಯು ಮತಧಾರ್ಮಿಕ, ಪ್ರಾತಿಭ ಅಥವಾ ರಸಾತ್ಮಕವಾಗಿದ್ದುದು ಅಭೇದ್ಯ ಸತ್ಯ; ೧೬ನೆಯ ಶತಮಾನ ಕಳೆದ ಬಳಿಕ ಅದು

ವೈಜ್ಞಾನಿಕವಾಯ್ತು. ವೈಜ್ಞಾನಿಕವೆಂದರೆ ಸೈದ್ಧಾಂತಿಕ (Theoritic). ತದ್ವಿರುದ್ಧವಾಗಿ, ಪೌರಸ್ತ್ಯ ಸಂಸ್ಕೃತಿಗಳಲ್ಲೂ ವೈಜ್ಞಾನಿಕ ಯುಗಗಳಿದ್ದವು. ಈ ವಿಷಯದಲ್ಲಿ ಪ್ರತಿಯೊಂದು ಸಂಸ್ಕೃತಿಯನ್ನೂ ನಿಷ್ಕ್ರಿಯಾತ್ಮಕವೆಂದು ಗಣಿಸುವುದು ಅಸಂಬದ್ಧ, ಅವಾಸ್ತವಿಕ. ಯಾವುದಾದರೂ ಮೇಲು ಮೇಲಿನ ಅಂಶವೊಂದು ಬದಲಾದರೆ ತತ್ಸದೃಶವಾದ ಬದಲಾವಣೆಯು ಒಂದು ಸಂಸ್ಕೃತಿಯ ಇತರ ಅಂಶಗಳಲ್ಲಿ ಉಂಟಾಗುವುದಿಲ್ಲ; ಅದರ ಸಾರಭೂತವಾದ ಮುಖ್ಯಾಂಶವೊಂದು ಬದಲಾದರೆ, ಅದು ಇಡಿಯಾಗಿ ಬದಲಾವಣೆ ಹೊಂದುತ್ತದೆ; ಇಂಥ ಬದಲಾವಣೆಗಳಲ್ಲಿ ಹೆಚ್ಚು ಅಪೇಕ್ಷಣೀಯ, ಕಡಿಮೆ ಅಪೇಕ್ಷಣೀಯ ಎಂಬ ತಾರತಮ್ಯವಿರುತ್ತದೆ; ಈ ತಾರತಮ್ಯಕ್ಕೆ ದೀರ್ಘಕಾಲಿಕವಾದ ಸರ್ವೋದಯವೇ ನಿಕಷ.

ಸರ್ವೋದಯದ ಅರ್ಥ

ಮಹಾಭಾರತದ ಯುದ್ಧದಿಂದಾದುದೇ ಸರ್ವೋದಯ: ಅತಿ ಹೆಚ್ಚು (ಎಂಥೆಂಥವರಾದ) ಜನರ ಅತಿ ಹೆಚ್ಚಾದ ಭೌತಿಕಸಂಪದಭಿವೃದ್ಧಿಯು ಸರ್ವೋದಯವಲ್ಲ. ನ್ಯಾಯವಾದ ಶಾಂತಿಗೆ ಕಾರಣವಾಗದ ಭೌತಿಕ ಸಂಪದಭಿವೃದ್ಧಿಯು ವ್ಯರ್ಥ. ಅಶಾಂತರು ಅತೃಪ್ತರು, ಅತೃಪ್ತರು ಅಸುಖಿಗಳು. ಅನ್ಯಾಯದ ಶಾಂತಿಯು ಆಭಾಸಿಕ, ನಿರ್ವೀರ್ಯತಾ ಪೋಷಕ. ಭೌತಿಕಸುಖಸಾಧನಗಳ ನ್ಯಾಯವಿರುವುದು Each according to the capacity ತನ್ನ ಶಕ್ತಿಗೆ ತಕ್ಕಷ್ಟು ಕೆಲಸಮಾಡಿದಾಗ ಪ್ರತಿಯೊಬ್ಬನಿಗೂ ತನ್ನ Each according to his need ಅವಶ್ಯಕತೆಗೆ ತಕ್ಕಷ್ಟು ಸೌಕರ್ಯ ದೊರಕುವುದರಲ್ಲಿಯೇ. ವ್ಯಕ್ತಿಯ ಶಕ್ತಿಯೂ ಭೌತಿಕ ಆವಶ್ಯಕತೆಗಳೂ ವೃತ್ತಿ, ವಯಸ್ಸು, ಆರೋಗ್ಯಗಳಿಂದ ಉಪಾಹಿತ; ಈ ಉಪಾಧಾನಗಳೇ ಪಾತ್ರತ್ವ ನಿರ್ಣಾಯಕ. "ಧರ್ಮಾದರ್ಥಶ್ಚ ಕಾಮಶ್ಚ ಸ ಕಿಮರ್ಥಂ ನ ಸೇವ್ಯತೇ?" ಎಂಬ ವ್ಯಾಸ ಪ್ರಶ್ನೆಯಲ್ಲಿ ಉಕ್ತ ವ್ಯವಸ್ಥೆ ಅಡಕವಾಗಿದೆ. ದುಷ್ಟ ಶಿಕ್ಷಣ- ಶಿಷ್ಟ ರಕ್ಷಣವೇ ಧರ್ಮಸಂಸ್ಥಾಪನೆ ಅಥವಾ ಸರ್ವೋದಯ. ಸತ್ಪಾತ್ರರೆನ್ನಿಸಿದ ಪರರಿಗಾಗಿ ಬಳಸದ ಧನಸಂಚಯ

ಉಳ್ಳವರು ದುಷ್ಟರೆಂಬುದು ಗಾಂಧಿಯವರ ವಿಶ್ವಸ್ತಿಕೆಯ ಸಿದ್ಧಾಂತ. ನ್ಯಾಯಾವಲಂಬಿಯಾದ ತ್ರಯಸ್ಥ ದೃಷ್ಟಿಯೇ ದುಷ್ಟ-ಶಿಷ್ಟ ವಿಭಾಜಕ. ವೃತ್ತಿಗಳ ಪ್ರಯೋಜನವು ಆಯಾ ನಾಗರಿಕತೆಗಳಿಂದ ಉಪಾಧಿತ (Conditioned, governed). ಭಾರತೀಯ ನಾಗರಿಕತೆಯು ಭಾರತೀಯ ವೃತ್ತಿಗಳ ಉಪಯುಕ್ತತೆಗೆ ನಿರ್ಣಾಯಕ.

ಫ್ರೂಡ್‌ವಾದದ ವಿಮರ್ಶೆ

ಫ್ರೂಡ್‌ಮಹಾಶಯನ ಮನಶ್ಶಾಸ್ತ್ರಪ್ರಸ್ಥಾನದ ಅನೇಕ ಅಂಶಗಳೀಗ ಖಂಡಿಸಲ್ಪಟ್ಟಿರುವುದನ್ನು ಬಹಳ ಜನ ಭಾರತೀಯರು ಗಮನಿಸಿಲ್ಲ. ಆತನ "ಇಡ್" ಮತ್ತು "ಸಬ್‌ಕಾನ್ಷಸ್" ಎಂಬ ಕಲ್ಪನೆಗಳು ಏಕದೇಶೀಯ. ಅವನ "ಇಡ್" ಮೂಲ ಪ್ರವೃತ್ತಿಗಳ ಜನಕ; ಅದು ಶುದ್ಧ ಸ್ವಾರ್ಥಿ; ಅದನ್ನವನು ಅಜ್ಞಾತ (ಅವಿಜ್ಞಾತ) ಪ್ರಜ್ಞೆಗೆ ಸರಿದೂಗಿ ಮಾಡಿದ್ದಾನೆ. ಅವನ "ಸಬ್‌ಕಾನ್ಷಸ್ಸು" ಬಾಲ್ಯದ ಪ್ರವೃತ್ತಿದಮನಗಳ ಮೊತ್ತವೆಂಬ "ಅನ್‌ಕಾನ್ಷಸ್ಸಿ"ನ ಅಂಗ; ಒಂದು ವ್ಯಕ್ತಿಯ ಲಕ್ಷ್ಯಕ್ಕೆ ಗ್ರಾಹ್ಯವಾದರೆ ಇನ್ನೊಂದು ವಿಶಿಷ್ಟ ತಾಂತ್ರಿಕ ಪ್ರಯತ್ನಕ್ಕಷ್ಟೇ ಜ್ಞೇಯ. ಅವನ ಅಹಂ ಮತ್ತು ಅತ್ಯಹಂ (Ego and superego) ಗಳು ಅಸ್ಫುಟ, ಕಲ್ಪನಾ ದುಷ್ಟ; ಮೂಲ ಪ್ರವೃತ್ತಿಗಳ ಜನಕವು ವಸ್ತು ಸತ್ಯದೊಡನೆ ಸಂಪೃಕ್ತವಾದಾಗ ರೂಪಾಂತರ ಹೊಂದಿ ಅಹಂ ಆಗುತ್ತದೆ. ಈ ಅಹಮ್ಮೇ ಜಾಗರಿತವಾದ ಪೂರ್ಣವ್ಯಕ್ತಿತ್ವ. ಹೊರಜಗತ್ತಿನಲ್ಲಿ ತಂದೆ ತಾಯಿಗಳೂ ಪ್ರಾಧಿಕಾರಿಗಳೂ ವಿಧಿಸುವ ವಿಧಿ-ನಿಷೇಧ ವಿಧಾನದ ಕೋಶವನ್ನು ನಿರ್ವಹಿಸುವ ಅಹಮ್ಮಿನ ಭಾಗವು ಅತ್ಯಹಂ. ಅದರ ಕಾರ್ಯವು ಸಾಮಾನ್ಯವಾಗಿ ಅಜ್ಞಾತ (ಅವಿಜ್ಞಾತ); ವಿಜ್ಞಾತವಾದಾಗ ಅದು "ಸಾಕ್ಷಿ" ಎನ್ನಿಸುತ್ತದೆ; ಸಾಕ್ಷಿಯು ಮನಸ್ಸಾಕ್ಷಿ ಅಥವಾ ಆತ್ಮಸಾಕ್ಷಿ. "ಇಡಿಪಸ್ ಕಾಂಪ್ಲೆಕ್ಸ್" ಅದರ ಜನಕ. "ಇಡಿಪಸ್ ಕಾಂಪ್ಲೆಕ್ಸ್"ಂದರೆ ಮಗನ ಪಿತೃದ್ವೇಷಗ್ರಹ. ಅದು ಅಹಮ್ಮನ್ನು ಶಿಕ್ಷಿಸುವ ಕಾರಕ. ಅದರ ಶಿಕ್ಷೆ ಕಾಹಿಲೆಯ ರೂಪದ್ದು. ಇಂಥ ಸ್ವಕಪೋಲಕಲ್ಪಿತ ಪದಾರ್ಥಗಳನ್ನಾಧರಿಸಿದ ಸಮಾಜೋತ್ಪತ್ತಿ, ಸಂಸ್ಕೃತಿ

ಜನನ ಮತ್ತು ನಾಗರಿಕತೆಯ ಸ್ವಭಾವ ಮುಂತಾದವು ಅಸಂಬದ್ಧ ಪ್ರಲಾಪಗಳು.

ನಾಗರಿಕರಲ್ಲಿ ಕಂಡುಬರುವ ಆತ್ಮಿಕ ನರದೌರ್ಬಲ್ಯ (Psycho-neurosis) ಮತ್ತು ಇತರ ಮನೋರೋಗಗಳಿಗೆ ಮನುಷ್ಯನ (Libido) (ಲಿಂಗ) ಕಾಮಶಕ್ತಿಯನ್ನೂ ವಿನಾಶಕ ಪ್ರವೃತ್ತಿಗಳನ್ನೂ ದಮಿಸುವುದೇ ಕಾರಣವೆಂಬ ಫ್ರೂಡೀಯ ಹೇಳಿಕೆಯು ಮೂರ್ಖೋದ್ಗಾರ. ನಾಗರಿಕತೆಯಲ್ಲಿರುವ ಮೌಲ್ಯ, ಮಟ್ಟ ಮತ್ತು ಬೇಡಿಕೆಗಳ ಒತ್ತಾಯವೇ ಅಂಥ ರೋಗಗಳ ಜನಕ. ಆ ರೋಗಗಳು ಅಶಾಂತಿಜನಕಗಳು. ಅತಿಯಾದ ಭೋಗಕರಣ ಮತ್ತು ಸ್ತುರಕಲ್ಪನೆಗಳೇ ಇತ್ತೀಚಿನ ಆತ್ಮಿಕ ನರದೌರ್ಬಲ್ಯಗಳಿಗೆ ಕಾರಣ. ಅವು ಕಾಮಪ್ರವೃತ್ತಿಯು ಅಥವಾ ಮರಣಪ್ರವೃತ್ತಿಯ ಅತ್ಯಹಮ್ಮಿನ ಬಂಧವಿರದ ವಿಯೋಜನೆ ಮಾಡುವುದರಿಂದ ಪರಿಹಾರ ಪಡೆಯುವುದು ಎಂಬುದು ಅನುಭವ ವಿರುದ್ಧವಾಗಿದೆ. ಹಾಗೇ ಅತ್ಯಹಮ್ಮಿನ ಬೇಡಿಕೆಗಳಿಗನುಗುಣವಾಗಿ ಉಕ್ತವಿನಾಶಕ ಪ್ರವೃತ್ತಿಗಳ ಉದಾತ್ತೀಕರಣ ಆ ರೋಗಗಳಿಗೆ ಪರಿಹಾರಕ ಎಂಬುದೂ ಅಪ್ರಾಮಾಣಿಕ. ಫ್ರೂಡನ ಜನನ ನಿಯಂತ್ರಣ ಮುಂತಾದವುಗಳಿಂದೊಡಗೂಡಿದ ಸುಲಭ ವಿಚ್ಛೇದ್ಯ ವಿವಾಹ ಮತ್ತು ಕಾಮಸ್ವಾತಂತ್ರ್ಯ (ಸ್ವಚ್ಛಂದ್ಯ) ಪ್ರಚಾರಗಳು, ತಲೆಹಿಡಿಕತನದವುಗಳು, ವಿಕೃತಕಾಮ ಹಿಡಿದ ಮನಸ್ಸಿನ ಹಗಲುಗನಸುಗಳು!

ಅನ್ಯಾಯವಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳನ್ನು ಆತ್ಮರಿಪುಗಳೆಂದ ವ್ಯಾಸಸಿದ್ಧಾಂತವು ಅಪ್ರತಿಹತ, ಅಭೇದ್ಯ, ಅನುಲ್ಲಂಘನೀಯ. ಏಕೆಂದರೆ ಅವು ಮನಃಕ್ಷೋಭೆಯನ್ನು ನಿಷ್ಪ್ರತೀಕಾರವಾಗಿ, ನಿರಂತರವಾಗಿ ಉತ್ತರೋತ್ತರ ಉಜ್ವಲವಾಗಿ ಉಂಟುಮಾಡುವುವು. ಕ್ಷುಬ್ಧಮನಕ್ಕೆ ಶಾಂತಿಯಿಲ್ಲ.

ಬಿಗಿಯಾದ ಕರ್ತವ್ಯಬುದ್ಧಿಯನ್ನು ಬೆಳೆಸಿಕೊಂಡ ಹಾಗೂ ದೇವ ದಂಡಭಯ ಹಿಡಿದ ವ್ಯಕ್ತಿಯು ಗರಹಿಡಿದವನೆಂದು ಹೇಳುವ ಮನಃ

ಶಾಸ್ತ್ರವೂ ಅಸಂಬದ್ಧ. ಹಲ್ಲಿತಿಂದೆನೆಂದು ಗ್ರಹಿಸಿದವನ ಮನಸ್ಥಿತಿಯನ್ನು ಗರಹಿಡಿದವಮಾದರಿ (Obsessional type) ಎಂದು ಗ್ರಹಿಸುವುದು ಅನುಭವವಿರುದ್ಧವಾದುದು. ಗರಹಿಡಿದವನೊಬ್ಬ ಸಂಶಯಾತ್ಮ, ಅವನು ವಿನಾಶೋನ್ಮುಖ; ದೇವ ಶಿಕ್ಷಾಭಯವು "ಸಾಕ್ಷಿ" ಸಂಸ್ಕಾರವನ್ನು ಬೆಳೆ-ಯಿಸಿಕೊಂಡವನಿಗಿರುತ್ತದೆ. ಸಾಕ್ಷಿವೃತ್ತಿಯು ಸಮಾಜ ಹಿತಕಾರಕ ಗುಣ. ಅದು ಅನಾರೋಗ್ಯಕರವೆಂಬುದು ಅನಾರೋಗ್ಯಕರವಾದ ಮಿದುಳನ್ನು ಬೆಳೆಯಿಸಿಕೊಂಡವನಿಗೆ ಮಾತ್ರ ಸಹಜ. ಇಂಥ ಅಜ್ಞಾನವನ್ನು ವಿಜ್ಞಾನದ ಹೆಸರಿನಲ್ಲಿ ತೂರಿಬಿಡುವ ಪಾಶ್ಚಾತ್ಯತೆಯ ಅನುಕರಣ ಅಂಧಾಚಾರ.

ಪ್ರಾಣಿಶಾಸ್ತ್ರದ ನೀತ್ಯಾಧಾರ

ಪ್ರಾಣಿಶಾಸ್ತ್ರದಿಂದ ಸಂಕುಚಿತ ವ್ಯಕ್ತಿಸ್ವಾರ್ಥದ ನೀತಿನಡತೆಗಳನ್ನು ನಿಗಮನಿಸುವವರು ಮಾತ್ಸ್ಯನ್ಯಾಯವಾದಿಗಳು. ದಕ್ಷಿಣ, ಧೃಷ್ಟ, ಅನು-ಕೂಲ, ಶಠ ಎಂದು ನಾಲ್ಕು ವಿಧದ ನಾಯಕರನ್ನು ನಾಟ್ಯಶಾಸ್ತ್ರ ಹೇಳುತ್ತದೆ. ಅನೇಕರಲ್ಲಿ (ಸಜ್ಜನರಲ್ಲಿ) ಸಮಾನುರಾಗ ಉಳ್ಳವನು ದಕ್ಷಿಣ ನಾಯಕ; ತಪ್ಪುಮಾಡಿಯೂ ತಾನು ಸಂಭಾವಿತನೆಂದು ನಿರ್ಲಜ್ಜವಾಗಿ ತಪ್ಪನ್ನು ಕಂಡವರೆದುರು ನಟಿಸುವವನು ಧೃಷ್ಟನಾಯಕನು; ಒಬ್ಬರಿಗಷ್ಟೇ ಅನುಕೂಲನಾಗಿರುವವನು ಅನುಕೂಲ ನಾಯಕನು; ಒಬ್ಬರಿಗೆ ಅನುಕೂಲ ನಾಗಿ ಅನೇಕರಿಗೆ ಸಮಾನಾನುರಾಗವುಳ್ಳವನೆಂದು ತೋರಿಸಿಕೊಂಡು, ತನಗೆಬೇಕಾದ ಒಬ್ಬರನ್ನುಳಿದು ಮಿಕ್ಕವರಿಗೆ ಗುಪ್ತವಾಗಿ ಅಪ್ರಿಯವನ್ನುಂಟು ಮಾಡುವವನು ಶಠನಾಯಕನು. ಮಾತ್ಸ್ಯನ್ಯಾಯವಾದಿಗಳು ಧೃಷ್ಟವರ್ಗಕ್ಕೆ ಸೇರುತ್ತಾರೆ. ಅಥವಾ ಶಠಜಾತಿಗೆ ಸೇರುತ್ತಾರೆ ಇಲ್ಲವೆ ಅನುಕೂಲರೆನ್ನಿ-ಸುತ್ತಾರೆ; ಅಂತೂ ಅವರು ದಕ್ಷಿಣರೆನ್ನಿಸರು. ಪೌರಸ್ತ್ಯರದು ದಕ್ಷಿಣಾಚಾರ. ಪ್ರಾಣಿ ಜೀವರದು ವಾಮಾಚಾರ. ವಾಮಾಚಾರ ವರ್ತನೆ ಸಮಾಜ ಕಂಟಕ; ಅದಕ್ಕೆ ಧರ್ಮಜ್ಞರಾದ ಹತ್ತು ಸಮಸ್ತರ ಮತ ಎಂದೂ ಸಿಗಲಾರದು. ಡಾರ್ವಿನೀಯ ನೀತಿವಾದವು ಪ್ರಮಾದವಾದ. ಅದು ಭಾರತೀಯ ವ್ಯಾಸದ ತುದಿಗಳಿಂದ ಹೊರಗೆ. ವ್ಯಾಸವಾದವು ವ್ಯಸ್ತವಲ್ಲ, ಸಮಸ್ತ.

ಔದಾತ್ತ್ಯ, ಲಾಲಿತ್ಯ, ಶಾಂತಿಮತ್ತೆ, ಔದ್ಧತ್ಯಗಳೂ ನಾಯಕ ಸ್ವಭಾವ ಭೇದಗಳನ್ನು ಹೇಳುತ್ತವೆ. ಸ್ವಪರಾಕ್ರಮಜಲ್ಪನ, ಅಕ್ಷಮಾಶೀಲ, ಅಗಾಂಭೀರ್ಯ, ಅಲ್ಪಸತ್ವತೆ, ಅಸ್ಥೈಯತೆ, ಪ್ರಕಟಕೋಪ, ಅದೃಢ ವ್ರತಗಳು ಅನುದಾತ್ತ ಲಕ್ಷಣಗಳು; ಚಿಂತಾತುರ, ಕಠಿನ, ಕಲಾವಿಮುಖ ಎನ್ನಿಸಿದವನು ಅಲಲಿತ; ದುರ್ಗುಣಿಯು ಅಶಾಂತ; ಅವಂಚಕತೆ, ಅನುಗ್ರತೆ, ಅಚಾಪಲ್ಯ, ನಿರಹಂಕಾರ, ದರ್ಪರಾಹಿತ್ಯ, ಆತ್ಮಶ್ಲಾಘಾವಿಮುಖತೆ ಅನುದ್ಧತನ ಲಕ್ಷಣಗಳು. ಅನುದಾತ್ತ, ಅಲಲಿತ, ಅಶಾಂತ, ಉದ್ಧತ ಸ್ವಭಾವದವರು ಮಾಡುವ ತರ್ಕಗಳೆಲ್ಲವೂ ಆಯಾ ಗುಣಗಳಿಂದ ಪ್ರೇರಿತವಾದಂಥವು. ಅವರ ನಿಷ್ಪಕ್ಷಪಾತತೆಯೆಂದೂ ನಂಬಲರ್ಹವಲ್ಲ. ಸಂಕುಚಿತ ವ್ಯಕ್ತಿಸ್ವಾರ್ಥದ ಆಸೆ, ಭಾವನೆಗಳಿಂದ ಸಂಪೂರ್ಣ ಮುಕ್ತವಾದ ಬೌದ್ಧಿಕ ಪ್ರಾಮಾಣಿಕತೆ ಅವರಲ್ಲಿಂದೂ ಕಂಡು ಬರಲಾರದು. ಅಂಥವರು ವಿಜ್ಞಾನಿಗಳೆಂದುಕೊಂಡರೂ ಒಂದೇ, ಗಣಿತಜ್ಞರೆಂದುಕೊಂಡರೂ ಒಂದೇ! ಹೃದಯ ಸೌಂದರ್ಯವಿಲ್ಲದ ಬುದ್ಧಿಸೌಂದರ್ಯವು ಭ್ರಮಾತ್ಮಕ; ಆಡಿದಂತೆ ಆಚರಿಸದವನ ನುಡಿಬೆಡಗು ಅನವಲಂಬನೀಯ. ಶಮದಮಾದಿ ಸಾಧನ ಸಂಪತ್ತಿಯಿಲ್ಲದವರ ವಾದಪಾಂಡಿತ್ಯವು ಅಪ್ರಮಾತ್ಮಕ. ಅವರಿಂದ ಪುರುಷಾರ್ಥ ಸಾಧನೆ ಅಸಾಧ್ಯ. ಅಧಾರ್ಮಿಕ ಸತ್ಯವು ಸತ್ಯಾಭಾಸ, ಏಕದೇಶೀಯ ಪ್ರತಿಪಾದನೆ. ತ್ರೈಕರಣಿಕ ಅಪಾವಿತ್ರ್ಯವು ಒಬ್ಬನ ನೂರು ವರ್ಷಗಳ ಆಯುರ್ದಾಯದಲ್ಲಿ ಅನೇಕ ಸಲ ಮಾಡಿ ಮುಳುಗಬಹುದು; ಅವನ ತ್ರೈಕರಣಿಕ ಪಾವಿತ್ರ್ಯ-ಅಪಾವಿತ್ರ್ಯಗಳ ಪರಸ್ಪರ ಆನಂತರ್ಯ-ಉದಯಾಸ್ತಗಳ ಮೇರೆಯಿಂದ ವಾದದ ಪ್ರಾಮಾಣಿಕತೆ ಅನಿಗಮನೀಯವಾಗುತ್ತದೆ. ಅಂಥ ವಾದವು ತ್ಯಾಜ್ಯ-ಹಾನಿಕರವಾದುದರಿಂದ. ಬೌದ್ಧಿಕ ಕತ್ತರಿಯು ಹರಿತವು ಜೀವನದ ಮೂಲ ಸತ್ಯವನ್ನು ಪರಿಚ್ಛೇದಿಸಿ ಹೇಳಲಾರದು—ಆ ಕತ್ತರಿಯು ಜೀವನಾಂತರ್ಗತವಾದುದರಿಂದ.

ಏಕದೇಶೀಯ ವಿಚಾರ

"ಚಿತ್ತಮಿಂದ್ರಿಯಸಂಘಾತಂ ಮನೋಬುದ್ಧಿಸ್ತಥಾಷ್ಟಮೀ
ಅಷ್ಟಾ ಜ್ಞಾನೇಂದ್ರಿಯಾಣ್ಯಾಹು ರೇತಾನ್ಯಧ್ಯಾತ್ಮಚಿಂತಕಾಃ

+ ಭಾವನಾತ್ಮಕ ಮನಸ್ಸು, ಇಂದ್ರಿಯಗಳು (ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮ; ಚರ್ಮ=ಮಾಂಸಲತಾಸಂವೇದನೆ, ಭಾರಸಂವೇದನೆ, ಆಕಾರ ಸಂವೇದನೆ ಮತ್ತು ಮೃದುತ್ವ-ಕಠಿನತ್ವ ಸಂವೇದನೆ ಎಂಬ ೪ ಚಾರ್ಮಣಪ್ರತ್ಯಕ್ಷಗಳ ಕರಣ), ಇಚ್ಛಾತ್ಮಕ ಮನಸ್ಸು ಬುಧ್ಯಾತ್ಮಕ ಮನಸ್ಸು—ಎಂಬೀ ಎಂಟೂ" ಪ್ರಪಂಚದ ಕ್ರಿಯಾಸಂತಾನರೂಪದ ಜೀವನದಿಂದ ವ್ಯಾಪ್ತವಾಗಿವೆ. ಜೆ. ಕೃಷ್ಣಮೂರ್ತಿ ಹೇಳಿದಂತೆ—Most of us are not individuals, but merely the expression of a collective system of traditions, fears and ideals——-ಬಹುಜನರು ಪರಂಪರೆಗಳ ಸಾಮೂಹಿಕ ಪದ್ಧತಿಯ, ಭಯಗಳ ಮತ್ತು ಧ್ಯೇಯಗಳ ಅಭಿವ್ಯಕ್ತಿಗಳು—ತತ್ವಜ್ಞಾನಿ-ಮಾನಿಗಳನೇಕರು ಇದಕ್ಕೆ ಹೊರತಲ್ಲ. ಪ್ರಾಣಿಶಾಸ್ತ್ರದ್ದೊಂದು ಶ್ರದ್ಧಾಪರಂಪರೆ, ಮನಃಶಾಸ್ತ್ರದ್ದೊಂದು ಶ್ರದ್ಧಾಪರಂಪರೆ—ಅವುಗಳನ್ನು

"ಕೇವಲಂ ಶಾಸ್ತ್ರಮಾಶ್ರಿತ್ಯ ನಕರ್ತವ್ಯೋ ವಿನಿರ್ಣಯಃ
ಯುಕ್ತಿಹೀನ ವಿಚಾರೇತು ಧರ್ಮಹಾನಿಃ ಪ್ರಜಾಯತೇ"

ಎಂಬ ಎಚ್ಚರಿಕೆಯನ್ನು ಮರೆತು ಅಥವಾ ಕುಯುಕ್ತಿಗಳನ್ನು ಬಳಸಿ ಅರ್ಥಯಿಸಿ ಸರ್ವಶಾಸ್ತ್ರಾರ್ಥಗಳನ್ನು ವ್ಯಾಪಿಸಿ ಅವುಗಳನ್ನು ಮೀರಿನಿಂತ ಜೀವನ ಮೂಲಸತ್ಯ ವ್ಯಾಪ್ತಿಗೆ ಏಕ ಶಾಸ್ತ್ರವನ್ನವಲಂಬಿಸಿ ಪ್ರತ್ಯೇಕವಾಗಿ ಪ್ರಯತ್ನಿಸುವುದು ಒಂದು ಮನೋರೋಗ. ಜೀವನವು ಏಕ ಶಾಸ್ತ್ರೀಯವಲ್ಲ. ತತ್ವಜ್ಞಾನವು ಸರ್ವಶಾಸ್ತ್ರಗಳ ಆತ್ಯಂತಿಕ ಮೂಲ ಸಿದ್ಧಾಂತಗಳ ಸಮನ್ವಿತ ಸ್ವರೂಪವುಳ್ಳದು. ಪ್ರಾಣಿಶಾಸ್ತ್ರವು "ಜೀವೋ ಜೀವಸ್ಯ ಜೀವನಂ" ಎಂದು ಹೇಳಬಹುದು. ಆದರೆ ಅವರಲ್ಲೇ ಒಂದು ಜಾತಿಯ ಮೀನು ಮತ್ಸ್ಯನ್ಯಾಯವನ್ನು ಮುರಿದು ತನ್ನ ಮರಿಗಳನ್ನು ರಕ್ಷಿಸಲು ನುಂಗಿಟ್ಟುಕೊಂಡು ಜೀವಂತವಾಗಿ ಉಗುಳುವ ನಿದರ್ಶನವೂ ಇರುವುದರಿಂದ ಏಂಕೆ-

+ Emotion, Five Sense organs, Conation, Cognition (Intellect) = 8; Eight sensation Centres = 4 Sense organs + 4 types of sensation Centres in the Skin.

ಅಹಿಂಸೆಗಳೆರಡೂ ಜೀವನದಲ್ಲಿ ಓತಪ್ರೋತವಾಗಿವೆ ಎನ್ನಬೇಕಾಗುತ್ತದೆ. ಫ್ರೊಡನು ಮನುಷ್ಯನಲ್ಲಿ Life instinct ಜೀವನ ಪ್ರವೃತ್ತಿ ಮತ್ತು Death Instinct ಮರಣ ಪ್ರವೃತ್ತಿಗಳೆರಡೂ ಇರುವುವೆಂದು ಹೇಳುವುದಿಲ್ಲಿ ಮನನೀಯ. ಆದರೆ ಸಂಸ್ಕೃತಿ ಇರುವುದು ಸಮ್ಯಗ್ ಜೀವನ ಪೋಷಕತೆಯಲ್ಲಿ. ಸಮ್ಯಕ್ತ್ವವು ಮಾನವ ಜೀವಿತದಲ್ಲಿ Supreme Social Justice ಸಾಮಾಜಿಕವಾದ ಪರಮ ನ್ಯಾಯವನ್ನು ಆಧರಿಸಿದೆ. ವ್ಯಾಸ ವ್ಯಷ್ಟಿಯಲ್ಲಿ ಅದು ಧರ್ಮದ ಮೂಲಸ್ವರೂಪ. ಅತ್ಯುತ್ಕೃಷ್ಟ ಸಾಂಸ್ಕೃತಿಕ ಆದರ್ಶಗಳ ಸಾಧನೆಗೆ ಅನುಕೂಲಿಸುವ ಸಂಬಂಧಗಳನ್ನಿಟ್ಟುಕೊಂಡ (ಸಮಾಜದ) ಸಾಮಾಜಿಕತೆಯೇ ನ್ಯಾಯ ಪಾರಮ್ಯಕ್ಕೆ ತಳಹದಿ. ಶರೀರೈಕ ಸಂಗೋಪನ ವಾದವು ಸಂಸ್ಕೃತ ಸಾಮಾಜಿಕತೆಯಲ್ಲ. ಪ್ರಾಪಂಚಿಕ ಪ್ರಾಣಿ ಜೀವನವು ಶರೀರಾದಿ ಮಾನಸಾಂತ. ಮಾನುಷತ್ವವು ಸ್ವಲ್ಪ ಸುಧಾರಿಸಿದ ಪ್ರಾಣಿತ್ವ. ಅದರಿಂದಲೇ ಸಮ್ಯಕ್ತ್ವವು ಮಾನಸಾದಿ ಆತ್ಮಾಂತವಾದ ದಿವ್ಯತೆಯಲ್ಲಿ ಪರಿಷ್ಕೃತವಾಗಿದೆ. ಆದರೆ ಈ ಘಟ್ಟವು ಅಪವ್ಯಾಸರೂಪಕ್ಕಿಳಿದಾಗ ಸಾಮಾಜಿಕವಾಗಿ ಪೂರ್ವಘಟ್ಟಕ್ಕೆ ವಿರುದ್ಧವಾಗುತ್ತದೆ. ಇದು ಸನಾತನತೆಯ ಹೆಸರಿನಲ್ಲಿ ನಡೆದ ಅಪಸನಾತನತೆ.

ವೈಟ್‌ಹೆಡ್ ಸಿದ್ಧಾಂತದ ವಿಶ್ಲೇಷಣೆ

ವೈಟ್‌ಹೆಡ್ಡನ Doctrine of organism ಅವಯವಿಕ ಸಿದ್ಧಾಂತವು ವ್ಯಕ್ತಿಯ ಸಾದಿತ್ವ-ಸಾಂತತ್ವಗಳನ್ನು ಸಾರುತ್ತದೆ. ಇಲ್ಲಿಯ ವ್ಯಕ್ತಿಯು ಪ್ರಾಪಂಚಿಕ ಮಾನಸಾಂತಿಕ- ಆಧ್ಯಾತ್ಮಿಕನಲ್ಲ. ಆದುದರಿಂದ ಇದು ನಿತ್ಯವೂ ತನ್ನ ವೈಯಕ್ತಿಕ ಪೂರ್ಣತೆಯನ್ನು ಕಳೆದುಕೊಳ್ಳುತ್ತಿರುತ್ತದೆ. ಹಾಗೆ ಕಳೆದುಕೊಳ್ಳುವುದೇ 'ವಾಸ್ತವಿಕ, ವಸ್ತುನಿಷ್ಠ ಅಮರತ್ವ' ಎಂದು ವರ್ಣಿಸಲಾಗಿದೆ. ಸೃಷ್ಟಿಯಾಗುವುದು ಅತೀಂದ್ರಿಯವಾದ ವಸ್ತುನಿಷ್ಠ ಜಟಿಲ ಸಾರಬೀಜದಿಂದ ಭಿನ್ನವ್ಯಕ್ತಿಪದಾರ್ಥಗಳ ರೂಪದಲ್ಲಿ. ಸೃಷ್ಟತೆಯೇ ವ್ಯಕ್ತಿತ್ವದ ವಾಸ್ತವಿಕತೆ, ಪ್ರಾಪಂಚಿಕತೆ. ಆದರಿಲ್ಲಿ ಸೃಷ್ಟತೆ-ನಷ್ಟತೆಗಳು

ಪೂರ್ವೋತ್ತರಕಾಲೀನ ಅವಿನಾಭಾವಿಗಳಾಗಿರುವುದರಿಂದ ಪ್ರಾಪಂಚಿಕ ವ್ಯಕ್ತಿತ್ವಾರ್ಥದ ಅನಂತತೆ, ಅಮರತೆ ಅಸಂಭವ; ಪ್ರಪಂಚೋತ್ತರ (ಅತಿಭೌತ, ಅತಿಮಾನಸ) ಐಕಾತ್ಮ್ಯದ ಸ್ವರೂಪದಲ್ಲಿ ಮಾತ್ರ ಅಮರತ್ವ ಹೊಂದಬಹುದು- ಅಲ್ಲಿ ವೈಯಕ್ತಿಕತೆ ಅಸಂಭವ, ಇಲ್ಲಿಯ ವಾಸ್ತವಿಕತೆ ವಸ್ತುನಿಷ್ಠತೆಗಳು ಅಲ್ಲಿ ಅವಾಸ್ತವಿಕ, ಅವಸ್ತುನಿಷ್ಠ-ಪ್ರಜ್ಞಾಸ್ವರೂಪದಲ್ಲಿ. ಭೌತಮಾನಸ-ಅತಿಭೌತ ಮಾನಸಗಳ ಸಂಮಿಶ್ರಣದ ದ್ವೈತಸಮ್ಯಕ್ತ್ವವು ಶಬ್ದಸಾರವಷ್ಟೇ, ಅರ್ಥಸಾರವಹದು. ಸಾಪೇಕ್ಷ ಐನ್‌ಸ್ಟೀನನ ಸತ್ಯವು ಮಧ್ಯಾವಸ್ಥೆ- ನಿರಪೇಕ್ಷ ಮಿಂಕೋವ್ಸ್ಕಿಯುದು ಆದ್ಯಂತಾವಸ್ಥೆ--ಎಂಬುದು ವ್ಯಾಸದೃಷ್ಟಿಯ ಭೌತಮುಖ.

ಭೌತ-ಮಾನಸ ಪ್ರಪಂಚವು ಚಲಾಚಲ; ಅಚಲೋನ್ಮುಖವಾಗುವುದು ಅಪೇಕ್ಷಣೀಯ, ಚಲೋನ್ಮುಖವಾಗುವುದು ಅನಪೇಕ್ಷಣೀಯ. ಅಚಲತ್ವ ರಹಿತವಾದ ಅಮರತೆಗೆ ಅರ್ಥವಿಲ್ಲ. ಚಲವು ನಾನಾತ್ವ ಸಮವೇತ. ಪ್ರಜ್ಞಾಚಲತ್ವವು ವ್ಯಾಸೋಕ್ತ ಮುಕ್ತಿ, ಅಪ್ರಜ್ಞಾಚಲತ್ವವು ಮಿಂಕೋವ್ಸ್ಕಿಯ ಜಡಮುಕ್ತಿ. ಪ್ರಜ್ಞಾಪೂರ್ಣತೆಯಲ್ಲಿ ಅಪ್ರಜ್ಞಾಂಶವಿಲ್ಲ; ಅಪ್ರಜ್ಞೆಗೆ ಪೂರ್ಣತೆಯಿಲ್ಲ. ಪೂರ್ಣತೆಯು ಸಿದ್ಧವಾದ ಪ್ರಾಜ್ಞ ಏಕತ್ವ. ಅಪೂರ್ಣತೆ ಅಥವಾ ಅಸಮ್ಯಕ್ತ್ವವು ಸಾಪೇಕ್ಷ ಪ್ರಜ್ಞಾಽಪ್ರಜ್ಞಾದಿ ವಿವಿಧ ಸಾದಿ-ಸಾಂತ ಜೀವನ ಕ್ಷಣಗಳ ಸಂತತಿ. ಭೇದಾಭೇದಗಳೆರಡೂ ಪ್ರಾಜ್ಞಿಕ, ಪ್ರಾಜ್ಞೀಯ. ಅಪ್ರಾಜ್ಞೀಯವು ಅನಿರ್ವಚನೀಯ (The unconscious is un-analysable indescribable); ಏಕೆಂದರೆ, ಅದೇ ಸಾಪೇಕ್ಷವಾಗಿ ವ್ಯಾಕೃತ ವರ್ತಿತ- ನಾನಾಕೃತಿಗಳ ದೆಸೆಯಿಂದ. ನಿತ್ಯತ್ವ-ನಾನಾತ್ವಗಳು ಅಸಂಗತವೆಂಬುದನ್ನು ವೈಟ್‌ಹೆಡ್ ಅರಿತುಕೊಳ್ಳಲಿಲ್ಲ. ಅಥವಾ ಅವನದು ಪರಿಣಾಮಿನಿತ್ಯತ್ವ; ಅಪರಿಣಾಮಿನಿತ್ಯತ್ವವು ಎಂದೂ ಅನೇಕತ್ವದೊಡನೆ ಅವಿನಾಭಾವಿಯಲ್ಲ.

೭೨ ಸ್ಪಿನೋಜ

ಅತಿಹೆಚ್ಚು ವ್ಯಾಪಕವಾದ ವ್ಯಾಸದೃಷ್ಟಿಯು ಪಾಶ್ಚಾತ್ಯ ತತ್ವಜ್ಞಾನಿ-

ಯೆಂಬವರೆ ಸ್ಪಿನೋಜ; ಆತನ ಆಧುನಿಕತೆ ರಸೆಲ್ಲನಿಗೂ ಇಲ್ಲ. "Facts have to be discovered by observation, not by reasoning- ನಿರೀಕ್ಷಣೆಯಿಂದ ಸಂಗತಿಗಳನ್ನು ಹುಡುಕಿ ತೆಗೆಯಬೇಕಲ್ಲದೆ, ತರ್ಕದಿಂದಲ್ಲ" ಎಂದು ಸ್ಪಿನೋಜನಿಗಿದಿರಾಡಿದ್ದಾನೆ ರಸೆಲ್. ನಿತರಾಂ ಈಕ್ಷಣಂ-ಬಹಳವಾಗಿ ನೋಡುವುದು, ವೈಜ್ಞಾನಿಕ ಸಾಧನಗಳ ಮೂಲಕ ಬುದ್ಧಿಗತ ಮಾಡಿಕೊಳ್ಳುವುದು—ಇಂದ್ರಿಯದ ವರದಿಗಳನ್ನು ಬುದ್ಧಿಯಿಂದ ದೂರ ಇಡುವುದು—ಎಂಬುದು ರಸೆಲ್ ನಿರೀಕ್ಷಿಸುವ ಅರ್ಥ. ಆತನಿಗೆ ಬುದ್ಧಿಗತವಾದುದೆಲ್ಲವೂ ಅಮೂರ್ತ ಮತ್ತು ಮಾನಸದ ಜೀವಿತಾವಧಿಯವರೆಗೆ ಮಾತ್ರ ಉಳಿಯುವ ವ್ಯಕ್ತಿನಿಷ್ಠ ಸತ್ಯ ಎಂಬ ತುಚ್ಛಭಾವವೂ ಇದೆ. ಬುದ್ಧಿಯನ್ನು ಅಂಗವಾಗಿ ಉಳ್ಳ ಮಾನಸವು ಆತನಿಗೆ ವಸ್ತುನಿಷ್ಠ (ವಾಸ್ತವಿಕ) ಸತ್ಯಪದಾರ್ಥವಲ್ಲ! ಇಂಥವನ "Facts ವಸ್ತುಸಂಗತಿಗಳ" ವರ್ಣನೆಯು ತರ್ಕಶುದ್ಧತೆಯೂ ಅನುಭವ ಪ್ರಾಮಾಣಿಕತೆಯೂ ಸತ್ಯದಿಂದ ಎಷ್ಟು ದೂರ ಮತ್ತು ಪರಸ್ಪರ ವ್ಯಾಹತ ಎಂಬುದು ಸುಲಭವೇದ್ಯವಾಗಿದೆ. ಈ ಮನುಷ್ಯನ ಕೇವಲ ಕಾಲಿಕ (ಉತ್ತರ ಕಾಲೀನತೆಯ) ಆಧುನಿಕತೆಗೆ ತತ್ತ್ವಶಾಸ್ತ್ರದಲ್ಲಿ ಬಹಳ ಬೆಲೆ ಬಾರದು. ಆದರೂ ಆತನಿಂದು ಡಾರ್ವಿನ್ ಮತ್ತು ಫ್ರಾಯ್ಡರಂತೆ ವೈಚಾರಿಕ "ದಿಲ್ಲಿ ರೆಡಿಮೇಡ್ ಫ್ಯಾಶನ್ನು"ಗಳ ನಿರ್ಮಾಪಕನಾಗಿದ್ದಾನೆ. ಅವರಷ್ಟೇ ಶಾಕ್ತ್ಯವು ಅವನಲ್ಲಿದೆ. ಬುದ್ಧಿಯು ವೈಯಕ್ತಿಕ, ವ್ಯಕ್ತಿನಿಷ್ಠ- ಅದು ವಸ್ತುನಿಷ್ಠವೆಂದು ವಿಜ್ಞಾನದಿಂದ ಸ್ವೀಕರಿಸಿದ್ದು ಸ್ವೀಕೃತವಾದ ಕ್ಷಣದಲ್ಲಿ ವ್ಯಕ್ತಿನಿಷ್ಠ; ಹಾಗೇ ವಿಜ್ಞಾನದ ಕಾರ್ಯದಲ್ಲೂ ತರ್ಕ-ಗಣಿತಗಳ (ಬುದ್ಧಿಯ) ಕಾರ್ಯದಂತೆ ಸರಿ-ತಪ್ಪುಗಳಿರುತ್ತವೆ-ಎಂಬುದನ್ನು ಗ್ರಹಿಸದ ಶಾಕ್ತ್ಯವು ಇತರರ ವೈಯಕ್ತಿಕ ಜೀವನ ಚಾರಿತ್ರಗಳ ನಿಂದೆಯನ್ನು ಬಿಸಾತಿಲ್ಲದೆ ಮಾಡುವ ಬಹುಪತ್ನಿ ಪತಿಯಾದ ರಸೆಲ್ ಮಹಾಶಯನಿಗೆ ವಿಶಿಷ್ಟವಾದುದು.

ಜ್ಞಾತೃ-ಜ್ಞಾನಗಳ ಪ್ರತ್ಯೇಕತೆಯು ಡಿಗ್ರಿಪೆಟ್ಟಿದ್ದಷ್ಟೂ ಅಜ್ಞಾನಗಳ ಸತ್ಯತೆ ಅಪೃಥಕ್ತ್ವವೂ ಧೀಪ್ಯವೂ ಆದುದೆಂಬ ಜ್ಞಾನಶಾಸ್ತ್ರೀಯ ಅನುಭವವು ಇಲ್ಲವಾಗ ಪ್ರತಿಬಿಂಬವಾದಿಯೂ ಅಭ್ಯಾಸ ಹವ್ಯಾಸದಿಂದ ಪ್ರಾಪಂಚಿಕ

ವಸ್ತುನಿಷ್ಠತೆಯನ್ನು ಜ್ಞೇಯ ಪರಮಾರ್ಥವೆಂದು ಗ್ರಹಿಸುತ್ತಾನೆ. ಅಂಥವರೆಲ್ಲರೂ ನಾನಾತ್ವದ ಪುರಸ್ಕರ್ತರು. ವ್ಯವಹಾರ ಸತ್ಯಕ್ಕಿಂತ ಹೆಚ್ಚಿನ ಮೌಲಿಕ ಸತ್ಯ ಅವರಿಗೆ ಹೊಳೆಯದು- ಅದು ಸ್ಥೂಲವಾಗಿ ಅವರಿಗೆ ತಿಳಿದಿರುತ್ತದೆ. ವೈಜ್ಞಾನಿಕ ಸತ್ಯತೆ ಅದರಿಂದಲೂ ಅಪೇತವಾದ ವಿಚಿತ್ರ ಅಸಂಬದ್ಧ ಕಲ್ಪನೆ- ಅದೇ ಪರಮಾರ್ಥವೆಂದು ಗ್ರಹಿಸಿದಾಗ.

ವ್ಯವಹಾರವು ಇಷ್ಟಿ, ಭಾವನೆ, ಬುದ್ಧಿಗಳೆಲ್ಲವುಗಳಲ್ಲೂ ದ್ವಂದ್ವಗಳಿಂದ ತುಂಬಿದೆ. ಇಂದ್ರಿಯಗಳ ಕಾರ್ಯವಿಲ್ಲದೆ ವ್ಯವಹಾರವಿಲ್ಲ. ಭೇದ, ದ್ವೈತ, ನಾನಾತ್ವ, ಕುರೂಪ, ಹಿಂಸೆ, ಕೇಡು, ಪಾಪ, ದುರುಪಯೋಗ ಅಥವಾ ಅಪಕಾರ, ತಪ್ಪು, ಶೋಕ, ಮೋಹಗಳ ಏಕವರ್ಗೀಯತೆ ಅನುಭವವೇದ್ಯ. ಇವುಗಳಿಗೆ ವಿರುದ್ಧವಾದ ಕಲ್ಪನೆಗಳು ಇನ್ನೊಂದು ಸವರ್ಗೀಯ ಮಾಲಿಕೆಯಾಗುತ್ತವೆ. ಭೇದಾದಿಗಳು ಆತ್ಯಂತಿಕವಾದರೆ ಅಭೇದಾದಿಗಳ ಬಗ್ಗೆ ಮಾನವ ಪ್ರಯತ್ನಿಸುವುದು ಅವ್ಯವಹಾರವೆನ್ನಿಸಬೇಕಾಗುತ್ತದೆ. ಬಂಧ-ಮೋಕ್ಷಗಳೆರಡರಲ್ಲೂ ವೈಯಕ್ತಿಕ ಸ್ವಾರ್ಥವು ಆಗ ಬಲವತ್ತರವಾದ ಸೂತ್ರವೆನ್ನಿಸಿ ಜೀವ-ಜಡ ವ್ಯಕ್ತಿಗಳೆಲ್ಲರೂ ಪರಸ್ಪರ ಅವಿಶ್ವಾಸ್ಯರೂ ಅಪ್ರಿಯರೂ ಘಾತಕರೂ ಆಗಬೇಕಾಗುತ್ತವೆ. ಈ "ಪರಮಾರ್ಥ"ವನ್ನಾಧರಿಸುವ ಜೀವನ, ಮರಣೋತ್ತರ ಅಸ್ತಿತ್ವಗಳು ಬೌದ್ಧಿಕವಾಗಿ, ವೈಜ್ಞಾನಿಕವಾಗಿ ಕೂಡ ಹಿತಕರವೆಂದು ಹುಚ್ಚರಲ್ಲದ ಯಾರಿಗೂ ಅನ್ನಿಸಲಾರದು. ಪ್ರಪಂಚವು ಅಪೂರ್ಣವಾದುದರಿಂದ ಅದರ ಅಭೇದಾದಿಗಳೂ ಭೇದಾದಿಗಳಂತೆಯೇ ಅಪೂರ್ಣವಾಗಿವೆ; ಅವುಗಳ ಪೂರ್ಣತೆಯೇ ಆತ್ಯಂತಿಕ ಹಿತ, ಮೋಕ್ಷ, ಆನಂದ, ಶಾಂತಿ, ಸತ್ಯ, ಸೌಂದರ್ಯ, ಸಮಾಧಾನ, ಸೌಜನ್ಯ, ಸದುಪಯೋಗ—ಭೇದಾದಿಗಳ ಪೂರ್ಣತೆಯಲ್ಲ. ಪೂರ್ಣಕ್ಕೆ ಭೇದವಿಲ್ಲ, ಭೇದಕ್ಕೆ ಪೂರ್ಣವಿಲ್ಲ. ಪೂರ್ಣತೆಯ ಪೂರ್ಣಕಲ್ಪನೆಯುಳ್ಳವರಿಗೆ ನಿತ್ಯ ಪದಾರ್ಥಗಳು ಅನೇಕವಾಗಿರಬಹುದೆನ್ನಿಸುತ್ತದೆ. "ದ್ವಿತ್ವಾದಿಕಂ ಸರ್ವತ್ರಮನಿತ್ಯ ಮೇವ" ಎಂದ ಅನ್ನಂಭಟ್ಟೋಕ್ತಿ ಅವರಿಗರ್ಥವಾಗಿಲ್ಲ. ಗಣಿತದ ಗುಣಿತತೆಯು (Multiplicity)

ಗೌಣ, ಕೇವಲ ವ್ಯಾವಹಾರಿಕ–ಪಾರಮಾರ್ಥಿಕವಲ್ಲ. ಪರಮಾರ್ಥದ ದೃಷ್ಟಿಯಿಂದ ಅನಿತ್ಯವಾದ ಅದು ಅಪೂರ್ಣಸ್ವರೂಪವಾದ ಅಲ್ಪಮಾಧುರ್ಯ, ಅಲ್ಪಸ್ಥೈರ್ಯ, ಅಲ್ಪಬಂಧವುಳ್ಳದ್ದು. ದೇಶ–ಕಾಲೀನ (ಮಾನಸಿಕ–ಭೌತಿಕ) ಪರಿಮಿತತೆಯುಳ್ಳ ಕಲ್ಪನೆ, ಕಲ್ಪನಾನುಗುಣವಾದ ಘಟನೆ, ಗುಣರಾಶಿ, ಪದಾರ್ಥ–ಎಲ್ಲವೂ ನಶ್ವರ, ವಿವಿಧ ಮತ್ತು ಸಾಪೇಕ್ಷ. ಯಾವ ವಿಜ್ಞಾನವೂ ಈ ನಿಯಮಕ್ಕೆ ಅಪವಾದವನ್ನು ಉದಾಹರಿಸಲಾರದು.

ಪರಮಾರ್ಥದ ಪ್ರಾಧಾನ್ಯ

ಪರಮಾರ್ಥಸದೃಶವಾದ ಅಪೂರ್ಣ ಲೌಕಿಕಅಭೇದಾದಿಗಳು ವ್ಯವಹಾರದಲ್ಲಿ ಮೇಲ್ಪಂಕ್ತಿಯಲ್ಲಿರುವುದು ಸಹಜವಲ್ಲದೆ ಪರಮಾರ್ಥ ವಿರುದ್ಧವಾದ ಭೇದಾದಿಗಳು ಅನುಕರಣೀಯವಾಗುವುದು ಅಸಹಜ. ಸ್ಪಿನೋಜನ ದ್ರವ್ಯದ ಕಲ್ಪನೆಯನ್ನಿಂದು ವಿಜ್ಞಾನ–ತತ್ವಜ್ಞಾನಗಳು ಸ್ವೀಕರಿಸಲಾರವೆಂದು ಎದೆತಟ್ಟಿ ಹೇಳುವ ರಸೆಲ್ಲನು ಅದಕ್ಕೆ ಬದಲಾಗಿ ಕೊಡುವ ಘಟನೆ (Event) ಮತ್ತು ಗುಣರಾಶಿ (Bundle of qualities) ಎಂಬ ವಸ್ತುವರ್ಣನಾತ್ಮಕ ಪದಗಳು ಯಾವ ಮೂಲಜ್ಞಾನವನ್ನು ಕೊಡಬಲ್ಲವು? ದ್ರವ್ಯ, ಗುಣ, ಕರ್ಮಗಳೆಂಬ ಪ್ರಾಪಂಚಿಕ ಕಲ್ಪನೆಗಳಿಂದ ಸೂಚಿತವಾಗುವ ಪದಾರ್ಥಗಳೆಲ್ಲವೂ ನಶ್ವರ; ಆದರೆ ಅವುಗಳ ಸಾತತ್ಯದ ಸಾಪೇಕ್ಷ ಡಿಗ್ರಿಗಳು ವ್ಯವಹಾರಕ್ಕೆ ಅಗತ್ಯವೆಂಬುದನ್ನು ಬುದ್ಧಿವಂತರಾದ ಯಾರೂ ಅಲ್ಲಗಳೆಯಲಾರರು. ವ್ಯವಹಾರ ಸತ್ಯ–ಪರಮಾರ್ಥ ಸತ್ಯಗಳ ನಡುವೆ ವಿಜ್ಞಾನಸತ್ಯ, ಪ್ರತಿಭಾಸಸತ್ಯ, ಕಲಾಸತ್ಯ, ಅಸತ್ಯಗಳೆಂಬ ನಾಲ್ಕು ಸತ್ಯಗಳನ್ನಲ್ಲ, ಇನ್ನೂ ಹೆಚ್ಚು ಸತ್ಯಗಳನ್ನು ಕಲ್ಪಿಸಬಹುದು. ಅವುಗಳಲ್ಲಿ ವ್ಯವಹಾರಕ್ಕೆ ಉಪಯುಕ್ತವಾದಷ್ಟನ್ನು ವ್ಯವಹಾರದಲ್ಲಿ ಉಪಯುಕ್ತವಾಗುವಷ್ಟು ಕಾಲ ವ್ಯವಹಾರಸ್ಥರು ಇಟ್ಟುಕೊಳ್ಳಬಹುದು, ಅನುಸರಿಸಬಹುದು-ಅಷ್ಟೆ. ಅದು ಅವರವರ ಹಿತಾರ್ಥದ ಅಲ್ಪಕಾಲಿಕ, ದೀರ್ಘಕಾಲಿಕ, ಅನಂತಕಾಲಿಕ ಸ್ವರೂಪಗಳಿಂದ ನಿರ್ಧರಿಸಲ್ಪಡುತ್ತದೆ. ದ್ರವ್ಯವನ್ನು ಗುಣಗಳೆಂದು ವರ್ಣಿಸಿದಾಕ್ಷಣ ಅಥವಾ ಘಟನೆಯೆಂದು ಹೇಳಿದಾಕ್ಷಣ ಅದರ

ಸ್ವರೂಪ ಬದಲಾಗುವುದಿಲ್ಲ. ಘನ, ದ್ರವ, ವಾಯು ಎಂಬ ಮೂರು ರೂಪಗಳಲ್ಲಿರುವುದೂ ನೀರೇ ಆಗಿರುವ ಹಾಗೆ ದ್ರವ್ಯ, ಗುಣ, ಕರ್ಮ-ರೂಪಗಳಲ್ಲಿರುವ ಸಾಪೇಕ್ಷ ಚಂಚಲ ಪದಾರ್ಥವನ್ನು ಅಚಂಚಲವೆಂದು ಯಾರೂ ತಿಳಿದುಕೊಂಡಿಲ್ಲ-ನಿರಪೇಕ್ಷಚಂಚಲವೆಂದು ಯಾರೂ ಗ್ರಹಿಸಿಲ್ಲ. ಚಂಚಲತ್ವಕ್ಕೆ ಶೂನ್ಯಕ್ಕೆ ಹೇಗೋ ಹಾಗೇ ನಿರಪೇಕ್ಷತೆ ಅಥವಾ ಪೂರ್ಣತೆ ಇಲ್ಲವೇ ಇಲ್ಲ. ಸಾಪೇಕ್ಷವು ನಿರಪೇಕ್ಷಕ್ಕೆ ಸಾಪೇಕ್ಷ; ನಿರಪೇಕ್ಷವು ಸಾಪೇಕ್ಷಕ್ಕೆ ನಿರಪೇಕ್ಷ-ಎಂಬುದು ಹೊಳೆಯುವಂಥ ಬುದ್ಧಿಯು ಸಾಪೇಕ್ಷ ಬುದ್ಧಿ, ಭಿನ್ನಬುದ್ಧಿ, ಅಬುದ್ಧಿ. ಭ್ರಮೆಯನ್ನು ಅದರ ವಿವಿಧ ಭೇದ-ಗಳನ್ನು ಪ್ರಮೆಯೆಂದು ಕೊಳ್ಳುವವರಿಗೆ ಪ್ರಮೆ ಭ್ರಮೆಯೆನ್ನಿಸುವುದು ಸಹಜ. ಭ್ರಮೆಗಳಲ್ಲಿ ತಾರತಮ್ಯವಿದೆ, ಪ್ರಮೆ ಏಕಮೇವಾದ್ವಿತೀಯ. ಅಬುದ್ಧಿಯ (ಅಲ್ಪಬುದ್ಧಿಯ) ಭೇದಗಳು ಅನೇಕ, ಅವುಗಳ ಸಿದ್ಧಾಂತ-ಗಳೂ ಅನೇಕ; ಅವುಗಳ ಸಂಬಂಧಗಳು ತರ-ತಮಭಾವನಿಷ್ಠ.

"In so far as a man is an unwilling part of a larger whole, he is in bondage; but in so far as, through the understanding, he has grasped the sole reality of the whole, he is free—ಮಾನವನು ತನಗಿಂತ ವಿಸ್ತಾರವಾದ ಇಡಿಯ ಒಲ್ಲದ ಅಂಗವಾಗಿರುವವರೆಗೆ ಬದ್ಧನಾಗಿರುತ್ತಾನೆ; ಆದರೆ ಅವನು ಇಡಿಯ ಒಂದೇ ಒಂದಾದ ಸತ್ಯತೆಯನ್ನು ತನ್ನ ಪ್ರಜ್ಞೆಯ ಮೂಲಕ ತಿಳಿದುಕೊಂಡರೆ ಮುಕ್ತನಾಗುವನು" ಎಂಬುದು ಸ್ಪಿನೋಜ ಸಿದ್ಧಾಂತ. ಅಂಗಾಂಗಿತ್ವದ ಭಾವ ಅಥವಾ ಭೇದಭಾವ ಬಿಡಿಗಿರುವಾಗ (ವ್ಯಕ್ತಿಗಿರುವಾಗ) ಇಡಿಯನ್ನು ಅದು ಪ್ರಾಮಾಣಿಕವಾಗಿ ಒಪ್ಪಲಾರದು, ಬಿಡಿಯಲ್ಲಿ ಇಡಿ ಹಿಡಿಸದು. ಬಿಡಿಯ ಬಿಡಿತನದ ಭಾವ (Thought and feeling) ಇಡಿಯ ಇಡಿತನದಲ್ಲಿ ಲಯ ಹೊಂದುವುದು ಬಂಧ ಮೋಕ್ಷ. ಭಾವವಲ್ಲದ್ದು ಜ್ಞಾನ ವಲ್ಲ; ಜ್ಞಾನವಿಲ್ಲದ್ದಕ್ಕೆ ಭಾವ (ಅಸ್ತಿತ್ವದ ಕಲ್ಪನೆ) ಅದರ ದೃಷ್ಟಿಯಿಂದ (ದೃಷ್ಟಿ ಇದ್ದದ್ದರೆ) ಇಲ್ಲ. ಆದುದರಿಂದ ನಾವು ಅದು ಇದೆ ಎಂದರೆ ಇದೆ, ಇಲ್ಲವೆಂದರೆ ಇಲ್ಲ. ಅದಕ್ಕೆ ತಾನಿದ್ದದ್ದು ಗೊತ್ತಿಲ್ಲದಿರುವಾಗ ನಾವು

‘ಅದು ಇದೆ’ ಎಂಬುದು ಒಂದು ವಿಧದ ಭ್ರಮೆ. ಅಂಥ ಭ್ರಮೆಯನ್ನು ನಿತ್ಯವೆಂದು ನಂಬಿ ಜೀವನ ನಡೆಸುವುದು ಶೋಕಜನಕ. ಆದುದರಿಂದ ಅದು (ಜಡ) ಆಧಾರವಲ್ಲವೆಂದು ತಿಳಿದಾಗ—ಜಡವೇ ಜೀವಕ್ಕೆ ಪರಿಸೀಮನಕಾರಿಯಾದುದರಿಂದ—ವ್ಯಕ್ತಿಯು ಜೀವಕ್ಕೆ ಇಡಿತನದಲ್ಲಿ ವ್ಯಾಪ್ತಿ ಸಿಕ್ಕಿ ಬಂಧಮುಕ್ತವಾಗುವುದು. ಜೀವದಲ್ಲಿ ಚೈತನ್ಯ (ಜೀವಶಕ್ತಿ + ಜ್ಞಾನಶಕ್ತಿ). ಅದರ ಬಂಧವಿರುವುದು ಗೃಹೀತವಾದ ಜಡಚಿತ್ತ ವೈಯಕ್ತಿಕತೆಯ ಜ್ಞಾನದ ಪರಿಸೀಮನದಲ್ಲಿ.

ಆತ್ಮಜ್ಞಾನದ ಅರ್ಥ

ಐಕ್ಯಜ್ಞಾನವು ಬೌದ್ಧಿಕ; ಪ್ರೇಮವು ಅದರ ಭಾವನಾ ರೂಪ; ಬೌದ್ಧಿಕವು ಭಾವನಾಸಾತ್ ಆಗುವುದೇ ಸಾಕ್ಷಾತ್ಕಾರ. ಈ ಬುದ್ಧಿ-ಭಾವನೆಗಳು ಪ್ರಪಂಚೋತ್ತರ-ಅದರಿಂದ ಅತಿಮಾನಸ, ಅತೀಂದ್ರಿಯ ಎನ್ನಿಸುತ್ತದೆ; ಮನ (ಇಚ್ಛೆ + ಬುದ್ಧಿ + ಭಾವನೆ)-ಇಂದ್ರಿಯಗಳಿಗೆ ಪ್ರಪಂಚಲಕ್ಷ್ಯವಾಗದುದರಿಂದ ಅವುಗಳ ಪ್ರಪಂಚಾತೀತ ಸ್ವರೂಪವನ್ನು ಆತ್ಮ ಎಂದು ಕರೆಯಲಾಗುತ್ತದೆ. ಅದರ ಇಡಿ ಸ್ವರೂಪ ಬ್ರಹ್ಮ, ಬಿಡಿಸ್ವರೂಪ ವೈಯಕ್ತಿಕ ಜೀವ (ಪ್ರಾಪಂಚಿಕ ಮನಸ್ಸಿನ ಅಂತಃಸ್ಥ ಚೈತನ್ಯ). “ಅಹಂ ಜಡಾತ್ಮಕಃ” ಎಂಬುದು ಬಂಧಕಾರಕ ತಿಳುವಳಿಕೆ, ಅನುಭವ; “ಅಹಂ ಚೈತನ್ಯಾತ್ಮಕಃ” ಎಂಬುದು ಮೋಕ್ಷಕಾರಕ ಸಾಕ್ಷಾತ್ಕಾರ. ಮುಕ್ತಿಯು Perfect freedom from limitations ಪರಿಸೀಮನಕಾರಕಗಳಿಂದ ಸಂಪೂರ್ಣ ಸ್ವತಂತ್ರನಾದ ಅನುಭವವನ್ನು ಹೊಂದುವುದು. ಪರಿಸೀಮನಕಾರಕಗಳಾದ ಭಾವಗಳೆಲ್ಲವೂ ಜಡನಿಷ್ಠ, ಭೌತ ಪ್ರತಿಷ್ಠಿತ. ಅಪರಿಸೀಮನಕಾರಕವಾದ ಭಾವವು ಬ್ರಹ್ಮಪ್ರತಿಷ್ಠಿತ. ಬ್ರಹ್ಮನಿಗೆ ಬ್ರಹ್ಮಜ್ಞಾನವಿದೆ, ಜಡೋಽಹಂಭಾವಿಕನಿಗೆ ಜಡಜ್ಞಾನವಿದೆ. ವಿನಾಶ ಭಯವಿರುವ ಭಾವವು ಜಡಾಧಾರನಿಷ್ಠ; ಅವಿನಾಶ ದೃಷ್ಟಿಯಿರುವ ಭಾವವು ಚೈತನ್ಯಾ (ಆತ್ಮ, ಬ್ರಹ್ಮ) ಧಾರನಿಷ್ಠ. ವಿನಾಶವು ಭೌತಿಕ ಬದಲಾವಣೆ; ಅವಿನಾಶವು ಅದರ ಪ್ರೇರಣೆಗಳಿಂದ ಮುಕ್ತವಾದ ಸ್ಥಿತಿ. ಅವಿನಾಶ

ಪ್ರಜ್ಞೆಯೇ ಅಮರತ್ವ; ಅಮರತ್ವಾನುಭವ (Thought and feeling) ಆನಂದ. ವಿನಾಶ್ಯಗಳ ಸಂಬಂಧಗಳಲ್ಲಿ ನಿಷ್ಠೆಯನ್ನು ತ್ಯಜಿಸುವುದು ಅವಿನಾಶ್ಯದಲ್ಲಿ ನಿಷ್ಠೆ ಬಲಗೊಳ್ಳಲು ಕಾರಣ. ಅವಿನಾಶ್ಯವು ಅಮೃತ, ಅಮರ, ದೇವ, ಪ್ರಭು. ಅಂಥ ಪ್ರಭುತ್ವಸಂಪನ್ನತೆಯೇ ಆದರ್ಶ ವ್ಯಕ್ತಿತ್ವ, ಜೀವನ್ಮುಕ್ತತೆ. ಅದನ್ನುಳ್ಳವನು ಸ್ಥಿತಪ್ರಜ್ಞನು. ಸ್ಥಿತಪ್ರಜ್ಞನಿಂದಾಗು-ವಷ್ಟು ಜಗದ್ಧಿತ ಇತರ ಯಾರಿಂದಲೂ ಆಗದು. ಅದರಿಂದ ಸ್ಥಿತ ಪ್ರಜ್ಞತೆ ಮಾನವನ ಪರಮಾದರ್ಶ. ಅದು ನಿರ್ಮಮ, ನಿರಹಂಕಾರ, ನಿಸ್ಸಂಕೋಚ, ನಿರಲ್ಪ, ನಿರ್ಲಿಪ್ತ, ಆಕಾಶಸದೃಶ ವ್ಯಾಪ್ತಿಯುಕ್ತ. ಅದು Motionless consciousness—ಅಚಲ ಚೈತನ್ಯ (ಜೀವಶಕ್ತಿ + ಜ್ಞಾನ ಶಕ್ತಿ + ಭಾವನಾಶಕ್ತಿ). ಅದರ ಚಂಚಲತೆ ಜಡಾನುಕರಣ, ಜಡಾತ್ಮೀಕರಣ ಗಳಿಂದ ಉಂಟಾದದ್ದು. ಅದು ಸ್ಥಿರವೆಂದೆನ್ನಿಸಿರುವ ಮರೆಗೆ ಬ್ರಹ್ಮವು ಮನುಷ್ಯನಿಗೆ ಅಸ್ಥಿರ, ಅನವಲಂಬನೀಯ. ಜಡವು ಸಿಪ್ಪೆ, ಚೈತನ್ಯವು ತಿರುಳು; ಒಂದರ ಭಾವವು ಅತ್ಯಲ್ಪ, ಇನ್ನೊಂದರದು ಅತಿಮಹತ್ತಾದುದು. ಅಲ್ಪಭಾವವು ಮಾಯೆ, ಆಭಾಸ; ಮಹಾಭಾವವು ಸತ್ಯ, ಆಭಾಸಾಶ್ರಯ. ಅಲ್ಪತ್ವದಲ್ಲಿ ಮಹತ್ವಕಾಲ್ಪನಿಕ; ಮಹತ್ವದಲ್ಲಿ ಅಲ್ಪತ್ವ ಆಭಾಸಿಕವಾಗಿ-ರುತ್ತದೆ. ಪ್ರಪಂಚವು ಆರ್ತ, ಅಲ್ಪ, ತುಚ್ಛ, ತ್ಯತ್—ಔಪನಿಷದಿಕವಾಗಿ; ಉಪನಿಷತ್ತುಗಳ ಸಾರವು ಮಹಾಭಾರತದ ಹೃದಯವಾದ ಭಗವದ್ಗೀತೆ. ಕಲ್ಪನೆಯು ಬೌದ್ಧಿಕ, ಆಭಾಸವು ಐಂದ್ರಿಯಕ. ಪ್ರಪಂಚನಿಷೇಧದಲ್ಲಿ ಕೇವಲ ಶರೀರೋದಂಭಾವದ ನಿಷೇಧ, ಅಹಂಕಾರ-ಮಮಕಾರಗಳ ನಿಷೇಧ—ಪರಿಪೂರ್ಣ ನಿಸ್ಸ್ವಾರ್ಥತೆಯ ಅನುಷೇಧ, ವಿಶ್ವ ಕುಟುಂಬಿತ್ವಕ್ಕೂ ಹೆಚ್ಚಿನ (ಭೂಮೈಕ್ಯ) ಐಕ್ಯಭಾವ ಎಂಬುದರ ಪ್ರತಿಷ್ಠಾಪನೆ.

ಲೌಕಿಕ ಜ್ಞಾನದ ಸ್ವರೂಪ

ಡಾ. ಬಿ. ಎಲ್. ಆತ್ರೇಯರೆನ್ನುತ್ತಾರೆ, “All our Knowledge is limited and relative– ನಮ್ಮ ಎಲ್ಲ (ಪ್ರಾಪಂಚಿಕ, ಪ್ರಾಪಂಚಿಕ ಮೂಲ) ಜ್ಞಾನವೂ ಪರಿಮಿತ ಮತ್ತು ಸಾಪೇಕ್ಷ” ಎಂದು. ಸಾಮಾನ್ಯ

ವಾದ ಪರಿಮಿತ ವಿಧಾಯಕಗಳು: (೧) ಜಾತಿ (Species) ಜ್ಞಾನ, ವ್ಯಕ್ತಿ (Its individual member) ಜ್ಞಾನಗಳನ್ನು ಪ್ರತ್ಯೇಕಿಸದೆ ಎದುರಿಸುವ ಪದಾರ್ಥವನ್ನು ಗ್ರಹಿಸುವ ಪ್ರವೃತ್ತಿ; (೨) ಕೇವಲ ಜಾತಿಲಕ್ಷಣ ಗ್ರಹಣದ ಪ್ರವೃತ್ತಿ; (೩) ಕೇವಲ ವ್ಯಕ್ತಿಲಕ್ಷಣಗ್ರಹಣದ ಪ್ರವೃತ್ತಿ; (೪) ಕೇವಲ ವರ್ತಮಾನ ನಿಷ್ಠೆಯಿಂದ ವಿಷಯವನ್ನು ಅರ್ಥಮಾಡಿಕೊಳ್ಳುವ ಪ್ರವೃತ್ತಿ; (೫) ಹೇಳಿಕೆಯ ಅಕ್ಷರಾರ್ಥವನ್ನೇ ಪ್ರಧಾನವೆಂದು ಆ ಮೂಲಕ ಮಾತ್ರ ಉಕ್ತ ಪದಾರ್ಥದ ಅರ್ಥವನ್ನು ತಿಳಿದುಕೊಳ್ಳುವ ಪ್ರವೃತ್ತಿ; (೬) ಶಬ್ದದ ವ್ಯುತ್ಪತ್ತಿಯನ್ನೇ ಕಡೆಯ ತನಕ ಆಧರಿಸಿ ಶಬ್ದೋಕ್ತ ಪದಾರ್ಥವನ್ನು ಅರ್ಥಮಾಡಿಕೊಳ್ಳುವ ಪ್ರವೃತ್ತಿ; (೭) ವ್ಯಕ್ತಿಯನ್ನು ಅಥವಾ ವಸ್ತುವನ್ನು ಅದರ ಸದ್ಯದ (ಕರ್ತವ್ಯ) ಕೃತ್ಯದ ಮೂಲಕವಷ್ಟೇ ಅರ್ಥಮಾಡಿಕೊಳ್ಳುವ "ಪ್ರಾಗ್ಮ್ಯಾಟಿಕ್" ಪ್ರವೃತ್ತಿ. ದೇಶ, ಕಾಲ, ಸನ್ನಿವೇಶ, ವ್ಯಕ್ತಿಸಂಸ್ಕಾರ, ವ್ಯಕ್ತಿಯ ಮನೋವೃತ್ತಿ ಮತ್ತು ಮನಃಪ್ರಣಾಳಿಗಳೂ ವ್ಯಕ್ತಿಯೊಬ್ಬನ ಜ್ಞಾನಸಂಗ್ರಹಪ್ರಕ್ರಮಕ್ಕೆ ಇತಿಮಿತಿಗಳಾಗುತ್ತವೆ; ಹಾಗೇ ಲಭ್ಯವಾದ ವೈಜ್ಞಾನಿಕ ಯಂತ್ರೋಪಕರಣಗಳು, ಇಂದ್ರಿಯಗಳ ಶಕ್ತಿ, ಪ್ರಮಾಣ, ಅವಕಾಶಲಭ್ಯತೆ, ಮನೋಧರ್ಮ ಅಥವಾ ಒಲವು, ತರ್ಕಿಸುವ ಅಭ್ಯಾಸ ಮನೋಗತವಾದ ಉದ್ದೇಶ, ಜ್ಞೇಯದ ಬಗೆಗಿನ ಆರ್ಜಿತಜ್ಞಾನ, ಬುದ್ಧಿ ಶಕ್ತಿ ಪ್ರಮಾಣ, ಭಾವನಾಶಕ್ತಿಪ್ರಮಾಣ, ಇಚ್ಛಾದಾರ್ಢ್ಯ ಎಂಬ ೧೬ ಪರಿಸೀಮನ ಕಾರಕಗಳನ್ನೂ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಮೊದಲನೆಯ ಏಳು ಮತ್ತು ಎರಡನೆಯ ಹದಿನಾರು ಅಲ್ಲದೆ ಇನ್ನೂ ಇತರ ಕಾರಕಗಳು ತಿಳಿವಳಿಕೆಯ ದಿಕ್ಕನ್ನೂ ವೇಗವನ್ನೂ ವ್ಯಾಪ್ತಿಯನ್ನೂ ಪರಿಸೀಮನಗೊಳಿಸಬಹುದಾಗಿದೆ. ಈ ಕಾರಕಗಳೆಲ್ಲವುಗಳಿಗೂ ಒಂದೇ ಒಂದಾದ ವ್ಯಾಸನಾಮವೆಂದರೆ ಅವಿದ್ಯೆ. ಅವಿದ್ಯೆಯಿಂದ ಕಾಮ, ಕಾಮದಿಂದ ಜ್ಞಾನಸಂಗ್ರಹಾದಿ ಕರ್ಮಗಳು ಪ್ರಪಂಚಮಯ ಮನಸ್ಕರಲ್ಲಿ ಸಾಗುತ್ತವೆ. ಆದುದರಿಂದ ಅತೀಂದ್ರಿಯ (ಅತಿಮಾನಸ) ಪ್ರತ್ಯಕ್ಷಕ್ಕೆ ಅಂಥ ಆತ್ಮವೇ ಸಾಧನವೆಂದು ವ್ಯಾಸಸಾರುತ್ತಾನೆ; ಆತ್ಮನನ್ನು ಆತ್ಮನಿಂದ ಆತ್ಮನು ಸಾಕ್ಷಾತ್ಕರಿಸಿಕೊಳ್ಳಬಲ್ಲ!

ಭಾರತೀಯ ಶಿಕ್ಷಣದೃಷ್ಟಿ

ಈ ಆತ್ಮವೆಂಬ ಪರಮಾರ್ಥಜ್ಞಾನ ಸಾಧನವನ್ನು ಪಡೆಯಲು ತಪಸ್ಸು, ಯಜ್ಞ, ದಾನ, ಕರ್ಮ, ಯೋಗ ಮುಂತಾದ ಆಚಾರ ಮಾರ್ಗಗಳನ್ನು ಹೇಳಲಾಗಿದೆ. ನಾವು ಮಾನಸವೆಂದು ವ್ಯಾಪಕಾರ್ಥದಲ್ಲಿ ಬಳಸುವ ಪದದ ಶುದ್ಧೀಕರಣ ಆ ಮಾರ್ಗಗಳಿಂದ ಸಾಧ್ಯ. ಅವರ ತಿರುಳೇ ಆತ್ಮ; ಅದು ತಿಳಿಯುವವರೆಗೆ ಅದರ ಸುತ್ತಲೂ ಸುತ್ತಿಕೊಂಡ ದ್ವಂದ್ವಪ್ರೇರಿತ ಸಂಸ್ಕಾರಗಳ ಪ್ರಭಾವಿತ್ವವನ್ನು ನಿರ್ವೀರ್ಯಗೊಳಿಸಲು ಮನೋವಾಕ್ಕಾಯಕರ್ಮಗಳಿಂದ ಶ್ರಮಿಸಬೇಕೆಂಬುದು ವ್ಯಾಸೋಕ್ತ ಧರ್ಮಸಾರ. ಅಧಾರ್ಮಿಕರ ಬ್ರಹ್ಮಜ್ಞಾನ ಸಂಗ್ರಹ ಪ್ರಯತ್ನವು ಕೇವಲ Speculation–Scientific or rational ವೈಜ್ಞಾನಿಕ ಅಥವಾ ವೈಚಾರಿಕ ಊಹೆ. ಭಾರತೀಯ ಶಿಕ್ಷಣವು ಈ ಧಾರ್ಮಿಕತೆಯನ್ನು ಅಳವಡಿಸಿ-ಕೊಳ್ಳದುದರಿಂದಲೇ ಆದರಿಂದ ತರಬೇತಾದ ಜನರು ಭ್ರಷ್ಟಾಚಾರದ ಆಮಿಷಕ್ಕೆ ಹೆಚ್ಚು ಹೆಚ್ಚು ತುತ್ತಾಗುತ್ತ ಹೋಗುತ್ತಿದ್ದಾರೆ. ಈ ಧಾರ್ಮಿಕತೆಯು ಸಂಕುಚಿತ ಮತಧಾರ್ಮಿಕತೆಯಲ್ಲ, ಅಂಧಸನಾತನತೆಯಲ್ಲ, ಅಂಧ ವೈಜ್ಞಾನಿಕತೆಯೂ ಅಲ್ಲ, ಶುಷ್ಕವೈಚಾರಿಕತೆಯೂ ಅಲ್ಲ. ಇದರ ಸಾರವಿರುವುದು ೮ ಆತ್ಮಗುಣಗಳ ಸಿದ್ಧಿಯಲ್ಲಿ. ಅವಾವುವೆಂದರೆ (೧) ಸರ್ವಭೂತದಯೆ, (೨) ಕ್ಷಾಂತಿ, (೩) ಅನಸೂಯೆ, (೪) ಶೌಚ, (೫) ಅನಾಯಾಸ, (೬) ಮಾಂಗಲ್ಯ, (೭) ಅಕಾರ್ಪಣ್ಯ, (೮) ಅಸ್ಪೃಹೆ.

ಮೇಲೆ ಹೇಳಿದ ಮಾರ್ಗಗಳಿಂದ ಈ ಗುಣಗಳು ಸಿದ್ಧಿಸುವಂತಾಗಬೇಕು; ಅಂದರೆ ಶುದ್ಧಬುದ್ಧಿಸ್ವರೂಪದ ಆತ್ಮಸಾಧನವು ಪರಮ ಸತ್ಯದ ಜ್ಞಾನದ ಸಾಧನೆಗೆ ಒದಗುವಂತಾಗುತ್ತದೆ. ಇದು ಭಾರತದಲ್ಲಿ ವ್ಯಕ್ತಿಗೆ ನಾಗರಿಕ, ಸಾಮಾಜಿಕ, ಸರ್ವೋದಯ ಪ್ರವೃತ್ತಿಯನ್ನು ದೃಢವಾಗಿ ನೆಲೆನಿಲ್ಲುವಂತೆ ಬೆಳೆಯಿಸಲು ಕಂಡು ಹಿಡಿದ ಉಪಾಯ. ಇದರ ವಿಶ್ವಜನೀನತೆಯು ಸ್ವತಃ ಸಿದ್ಧ. Man and the Systam ಮನುಷ್ಯ ಮತ್ತು ಅವನ ವ್ಯವಹಾರಪದ್ಧತಿಗಳಲ್ಲಿ ಮನುಷ್ಯನ ಸಂಸ್ಕರಣಕ್ಕೇ ಹೆಚ್ಚಿನ

ದೆಷ್ಟಿನ ಪ್ರಾಧಾನ್ಯವಿದೆಯೆಂಬುದು ವ್ಯಾಸಷ್ಟವಿ. ಮೊದಲು ಅದಿಷ್ಟರೆ ಇತರ ವಾದ ("ಇಜಂ") ಗಳಿಂದ ರೂಪಿತವಾದ ರಾಜಕೀಯಾದಿ ವ್ಯವಹಾರ ಪದ್ಧತಿಗಳು ಅನುಕೂಲ ಬದಲಾವಣೆಗಳ ಮೂಲಕ ಸರ್ವೋದಯಕಾರಿಯಾದಾವು. ಆದುದರಿಂದ ವ್ಯಾವಹಾರಿಕ ವಾದಗಳನ್ನು ರೂಪಿಸಿ ಚರ್ಚಿಸುವ ಕೆಲಸಕ್ಕಿಂತ ಮೊದಲು ಪ್ರತಿಯೊಬ್ಬ ಪ್ರಜೆಯೂ ವ್ಯಾಸ ದೀಕ್ಷಿತನಾಗುವುದು ಅಗತ್ಯ.

ಲೋಕ ಜೀವನ

ಹಾಬ್ಸ್ ಮಹಾಶಯನು ರಾಜ್ಯತತ್ವವೆಂದು ಎತ್ತರದಲ್ಲಿಟ್ಟು ತೋರಿಸಿದ್ದು ನಿರಂಕುಶ ಪ್ರಭುತ್ವವನ್ನು. ಸಾರ್ವಭೌಮನು ಸಾರ್ವಜನಿಕರ ಮನಃಸಾಕ್ಷಿ ಎಂದನವ. ಮಹಾಭಾರತದ ಯಾವ ರಾಜನೂ ಇಂಥ ಅಧಿಕಾರವನ್ನು ಘೋಷಿಸಲಿಲ್ಲ; ಭಾರತದ ಯಾವ ರಾಜನೀತಿಶಾಸ್ತ್ರವೂ ಧರ್ಮಕ್ಕಿಂತ ರಾಜ ಮೇಲಿನವನೆಂದಿಲ್ಲ. ಮಹಾಭಾರತವು ಗಣರಾಜ್ಯದ ಮೂಲನೀತಿಯನ್ನು ಕೂಡ ಹೇಳಿದೆ. ರಾಜಧರ್ಮವೆಂದರೆ ಅದರ ಪ್ರಕಾರ ಸರಕಾರದ ಕರ್ತವ್ಯ. ಲೋಕೇ ಮಹಾಶಯನು ಹಾಬ್ಸನಂತೆ ಕೇವಲ ಅರಾಜಕತೆಯ ಭಯದಿಂದ ಸರಕಾರದ ಸಾರ್ವಭೌಮಾಧಿಕಾರವನ್ನು ಸಮರ್ಥಿಸಲಿಲ್ಲ; ಅವನು ವ್ಯಕ್ತಿಯ ಸ್ವಾತಂತ್ರ್ಯದ ಪ್ರತಿಪಾದನೆಯನ್ನೂ ಮಾಡಿದನು.

"ದಂಡಃ ಸಂರಕ್ಷತೇ ಧರ್ಮಂ ತಥೈವಾರ್ಥಂ ಜನಾಧಿಪ
ಕಾಮಂ ಸಂರಕ್ಷತೇ ದಂಡಸ್ತ್ರಿವರ್ಗೋ ದಂಡ ಉಚ್ಯತೇ—

ಧರ್ಮವನ್ನು, ಹಾಗೇ ಅರ್ಥವನ್ನು ಮತ್ತು ಕಾಮವನ್ನು ಪ್ರಶಾಸನ ಶಕ್ತಿಯು ರಕ್ಷಿಸುತ್ತದೆ; ಆದುದರಿಂದ (ಎಲೈ ಅರಸನೇ,) ಪ್ರಶಾಸನ ಶಕ್ತಿಯು (ಸರಕಾರವು) ಮೂರು ಪುರುಷಾರ್ಥಗಳಿಗೂ ಅನಿವಾರ್ಯವಾಗಿ ಆಧಾರಭೂತವಾದುದು" ಎಂಬ ವ್ಯಾಸೋಕ್ತಿಯು ಪ್ರಜೆಯ ನೈತಿಕಸಿದ್ಧಿ, ಆರ್ಥಿಕಸಿದ್ಧಿ ಮತ್ತು ಭೋಗೋಪಕರಣಸಿದ್ಧಿಗಳು ನಿರಾತಂಕವಾಗಿ ಲಭ್ಯವಾಗಲು ರಾಜ್ಯಶಾಸನ ಅಗತ್ಯವೆಂಬುದನ್ನು ಸಾರುತ್ತದೆ. ಮಹಾಭಾರತದ ಭಾಷೆಯಲ್ಲಿ ಧರ್ಮವು ವ್ಯಕ್ತಿಸ್ವಾತಂತ್ರ್ಯವನ್ನು ಒಳಗೊಳ್ಳುತ್ತದೆ; ಅದು ವ್ಯಕ್ತಿಯ ವಿಚಾರ, ಉಚ್ಚಾರ, ಆಚಾರಗಳ **ನ್ಯಾಯವಾದ** ಅನಿರ್ಬದ್ಧತೆಯನ್ನು ಅಡಕಗೊಳಿಸಿಕೊಂಡಿದೆ. ಸ್ವಾತಂತ್ರ್ಯವು ನೈತಿಕ ಸಿದ್ಧಿ-ಬರಿ ಆರ್ಥಿಕವೂ ಅಲ್ಲ, ಕೇವಲ ಸ್ಥೂಲವಾದ ಕಾಮೋಪಭೋಗಸಾಧನವರ್ಗದ್ದೂ ಅಲ್ಲ. ಧರ್ಮವೆಂದರೆ ಪುಣ್ಯ, ಸುಗುಣ, ಸತ್ಕಾರ್ಯ, ಕರ್ತವ್ಯ, ಹಕ್ಕು, ನ್ಯಾಯ, ನೀತಿ, ಔಚಿತ್ಯ. ಹಕ್ಕು, ಅಧಿಕಾರ, ಸ್ವಾತಂತ್ರ್ಯ ಎಂಬುದು ನೈತಿಕ ಸ್ವರೂಪವುಳ್ಳದ್ದು; ಕರ್ತವ್ಯವೂ ಹಾಗೇ.

ನೀತಿಗೆ ಕಾಯಿದೆಯೂ ವ್ಯಾಪ್ಯ. ಆದುದರಿಂದ ತ್ರಿವರ್ಗ ಸಾಧನೆಗೆ ರಕ್ಷಣೆ ಪಡೆಯುವುದೆಂದರೆ ಅದಕ್ಕೆ ಬೇಕಾದ ಸ್ವಾತಂತ್ರ್ಯವನ್ನು ಪಡೆಯುವುದೆಂಬುದೇ ತಾತ್ಪರ್ಯ. ರಕ್ಷಣೆಯು ರಾಜ್ಯಧರ್ಮ.

ರಾಜಕೀಯ ಆಡಳಿತದ ವ್ಯಾಪ್ತಿ

"ರಾಜೈವ ಕರ್ತಾ ಭೂತಾನಾಂ ರಾಜೈವಚ ವಿನಾಶಕಃ
ಧರ್ಮಾತ್ಮಾ ಯಃ ಸ ಕರ್ತಾ ಸ್ಯಾದಧರ್ಮಾತ್ಮಾ ವಿನಾಶಕಃ

ಜೀವಿಗಳಿಗೆ ರಾಜನೇ ಯಜಮಾನ—ರಕ್ಷಕನೂ ಅವನೇ (ಸರಕಾರವೇ), ಭಕ್ಷಕನೂ ಅವನೇ; ಅವನು ಧರ್ಮಾತ್ಮನಾದರೆ, ಧರ್ಮದಂತೆ ರಾಜ್ಯಭಾರ ಮಾಡಿದರೆ, ರಕ್ಷಕನೆನ್ನಿಸುವನು; ಹಾಗಲ್ಲದೆ ಅಧರ್ಮಕ್ಕಿಳಿದರೆ, ಭಕ್ಷಕನೆನ್ನಿಸುವನು—" ಎಂದಿದೆ ಮಹಾಭಾರತ. ಉತ್ತಮ ರಾಜ್ಯಭಾರಕ್ಕೆ ಭಾರತ ಕೊಡುತ್ತ ಬಂದ ಮಹತ್ವ ಇದರಿಂದ ಗೊತ್ತಾಗುತ್ತದೆ.

ವೇದ, ಸ್ಮೃತಿ, ಸದಾಚಾರ, ಆತ್ಮಜ್ಞಾನಿಗಳು ಧರ್ಮಾಧಿಕಾರಿಗಳಲ್ಲದೆ ರಾಜನಲ್ಲ, ಸರಕಾರವಲ್ಲ—ಅಂದು! ಅವೇ ವಿಧಿ-ನಿಷೇಧಗಳ ಆಕರಗಳು. ವೇದವು ಪ್ರಧಾನತಃ ತ್ಯಾಗಧರ್ಮಬೋಧಕ; ತ್ಯಾಗವು (ಯಜ್ಞ) ವ್ಯಕ್ತಿಯ ದೃಷ್ಟಿಯಿಂದ ಪರ (ಸಮಾಜ) ಹಿತಕ್ಕಾಗಿ. ಪ್ರತಿಯೊಬ್ಬ ಪ್ರಜೆಯೂ ಸಹಜೀವಿಗೆ ಅನುಕೂಲನಾಗಿ ವರ್ತಿಸುವುದು ಅವನವನ ಸ್ವಾತಂತ್ರ್ಯಸಿದ್ಧಿಗೆ ಕಾರಣ. ಈ ಪರಸ್ಪರಭಾವವಿಲ್ಲದಾಗ ತ್ಯಾಗಧರ್ಮವು ಲೌಕಿಕವಾಗಿ ಸಮಾಜಕ್ಕೆಸಗಿದ ಒಂದು ನೈತಿಕ ಅಪರಾಧ. ಅಸಮಾಜವಾದೀಯ ಸಮಾಜದಲ್ಲಿ ತ್ಯಾಗ-ದಾನಗಳಿಗೆ ಪಾತ್ರಾಪಾತ್ರವಿವೇಕ ಅತ್ಯಂತ ಪ್ರಧಾನ. ಈ ಪ್ರಾಧಾನ್ಯವನ್ನು ವಿದುರ ಎತ್ತಿ ಹೇಳಿದ್ದು ವ್ಯಾಸೋಕ್ತವಾಗಿದೆ. ಪರಸ್ಪರಾನುಕೂಲವಾಗಿ ತ್ರಿಕರಣಗಳಿಂದ ಜನರು ನಡೆದುಕೊಳ್ಳುವಂತೆ ಪ್ರಶಾಸನ ಮಾಡುವುದು ರಾಜಧರ್ಮದ ಸಾರ. ಈ ಧರ್ಮಕ್ಕೆ ಅವಿರುದ್ಧವಾಗಿಯೇ ಅರ್ಥಸ್ವಾತಂತ್ರ್ಯ, ಕಾಮಸ್ವಾತಂತ್ರ್ಯಗಳ ಆಚರಣೆ ನಾಗರಿಕನಿಗಿರುವಂತೆ ನೋಡಿಕೊಳ್ಳುವ ಕರ್ತವ್ಯ ಸರಕಾರದ್ದು.

ಸ್ಮೃತಿಗಳು ವೇದಧರ್ಮದ ಆಧಾರವನ್ನು ತೆಗೆದುಕೊಂಡು ಜನ ಹಿತೈಷಿಗಳು ನೆನಪಿನಲ್ಲಿಟ್ಟುಕೊಂಡ ಆಚಾರ ನಿಯಮಗಳು. ಸದಾಚಾರ ಅಂದರೆ ಅಂಥವರು ಮಾಡಿದ ಪೂರ್ವಾಚಾರ. ಆತ್ಮಜ್ಞಾನಿಗಳು ಐತಿಹಾಸಿಕ ಸಂದರ್ಭ ದರ್ಶನದಿಂದ ಆಚಾರದ ದಿಕ್ಕನ್ನು ತೋರಿಸಿಕೊಡುವ ವಿಚಾರವಂತರು. ಅವರ ಸ್ವಾತಂತ್ರ್ಯ ರಾಜಾಧೀನವಲ್ಲ. ಅವರು ದಿವ್ಯವಾಣಿ-ಅಂತರ್ವಾಣಿ ಗಳಿಂದ ರಾಜಾದಿಗಳಿಗೆ ಮಾರ್ಗದರ್ಶನವನ್ನು ವಿಪತ್ಕಾಲದಲ್ಲಿ ಮಾಡಿ ಉಪ ಕರಿಸುವ ಗುರೂತ್ತಮರು. ಮಹಾಭಾರತವೇ ಒಂದು ಮಹಾಸ್ಮೃತಿ. ವೇದವ್ಯಾಸನು ಆತ್ಮಜ್ಞಾನಿ, ಸದಾಚಾರ ನಿದರ್ಶಕ, ಆದರ್ಶ ರಾಜಗುರು-ಪ್ರಜಾಗುರು.

"ದಂಡೇನ ರಕ್ಷ್ಯತೇ ಧಾನ್ಯಂ ಧನಂ ದಂಡೇನ ರಕ್ಷ್ಯತೇ
ಏವಂ ವಿದ್ವನ್ನುಪಾಧತ್ಸ್ವ ಭಾವಂ ಪಶ್ಯಸ್ವಲೌಕಿಕಂ—

ಆಡಳಿತವೇ ಧಾನ್ಯವನ್ನೂ ಧನವನ್ನೂ ಕಾಪಾಡುತ್ತದೆ; ಲೌಕಿಕ ವ್ಯವಹಾರ ನಡೆಯುವ ಬಗೆ ಹೀಗೆ" ಎಂದು ವ್ಯಾಸ ಆಡಿದ ಮಾತನ್ನು ನೆನೆದರೆ, ಯಾವ ರಾಜ್ಯಘಟನೆ (ಸಂವಿಧಾನ) ಎಂಥ ಹಕ್ಕುಗಳನ್ನು ಪ್ರಜೆಗಳಿಗೆ ದಯಪಾಲಿಸಿದರೂ ಅವುಗಳ ಅನುಭವವು ಪ್ರತಿ ಪ್ರಜೆಗೂ ನ್ಯಾಯವಾಗಿ ದೊರಕಬೇಕಾದರೆ ಸರಕಾರದ ಪ್ರಶಾಸನ ದಕ್ಷವಾಗಿರುವುದಗತ್ಯ ಎಂಬುದನ್ನು ಭಾರತದ ರಾಜನೀತಿಜ್ಞರು ಚೆನ್ನಾಗಿ ಅರಿತಿದ್ದರೆಂಬುದು ಗೊತ್ತಾಗುತ್ತದೆ. ಯುದ್ಧವೊಂದೇ ಅಲ್ಲ, ಕಾಯದೆಯೂ ಬಲಾತ್ಕಾರ ಮಾಡುವ ಸಾಧನವೇ ಎಂಬುದನ್ನು ಎಲ್ಲರೂ ಬಲ್ಲರು. ಪಂಡಿತ ಜವಾಹರಲಾಲರೂ ತಮ್ಮ ಆತ್ಮ ಚರಿತ್ರೆಯಲ್ಲಿ ಈ ಅಂಶವನ್ನು ಪ್ರತಿಪಾದಿಸಿದ್ದಾರೆ. ಭಯಪ್ರಧಾನವಾದ ಆಡಳಿತಕ್ಕಿಂತ ಪ್ರೀತಿ-ಔದಾರ್ಯ ಪ್ರಧಾನವಾದ ಆಡಳಿತ ಒಳಿತೆಂಬುದು ಸರಕಾರವು ಅನ್ಯಾಯವೆನ್ನಿಸುವಷ್ಟು ಉಗ್ರರೂಪದ ಆಡಳಿತವನ್ನು ಜಾರಿಗೆ ತಂದಾಗ ಮಾತ್ರ; ಹಾಗಲ್ಲದೆ, ಅದು ಅನ್ಯಾಯವೆನ್ನಿಸುವಷ್ಟು ಬಲಹೀನತೆ ಯನ್ನು ಕಾಯದೆಯಂತೆ ನಡೆದುಕೊಳ್ಳುವವರೆದುರು ತೋರಿಸುತ್ತ ಹೋದರೆ, ಪ್ರಾಮಾಣಿಕ ಪ್ರಜೆಗಳಿಗೆ ಜೀವನವು ನರಕಪ್ರಾಯವಾಗಿ

ಪರಿಣಮಿಸದಿರದು. ಉಗ್ರದಂಡ-ಶಿಥಿಲದಂಡ ಪದ್ಧತಿಗಳೆರಡೂ ಅನ್ಯಾಯ. ಆದರಿಂದಲೇ ವ್ಯಾಸನು—

"ರಾಜ್ಞಃ ಪ್ರಮಾದದೋಷೇಣ ದಸ್ಯುಭಿಃ ಪರಿಮುಷ್ಯತಾಂ
ಅಶರಣ್ಯಃ ಪ್ರಜಾನಾಂ ಯಃ ಸ ರಾಜಾ ಕಲಿರುಚ್ಯತೇ—

ರಾಜನ (ಸರಕಾರದ, ಮಂತ್ರಿಗಳ) ತಪ್ಪುಗಳ ಫಲವಾಗಿ ಪ್ರಜೆಗಳ ವಿತ್ತ-ಜೀವಿತಗಳಿಗೆ ನ್ಯಾಯವಾದ ರಕ್ಷಣೆ ದೊರಕದಂತಾದಾಗ ಅಂಥ ರಾಜನು ಪಾಪಿ" ಎಂದಿದ್ದಾನೆ. ದೋಷಯುಕ್ತವಾದ ಕಾಯದೆಗಳು; ಕಾಯದೆಗಳ ದೋಷಯುಕ್ತವಾದ ಆಚರಣೆ; ಅದಕ್ಷ ಅಥವಾ ದುಷ್ಟ ನೌಕರರ ನಿಯೋಜನ; ಲಂಚ, ವಂಚನೆ, ಕಳ್ಳಪೇಟೆ, ವಿಲಂಬ, ದರದ ಏರಿಕೆ, ಅತಿಪ್ರಸರಣ ಮುಂತಾದವುಗಳಿಗೆ ಅವಕಾಶ ದೊರಕುವಂತಾಗುವುದು—ಈ ಎಲ್ಲವೂ "ರಾಜಪ್ರಮಾದ"ದ ಅಥವಾ ಪ್ರಶಾಸನದ ಅದಕ್ಷತೆಯ ಫಲಗಳು ಎನ್ನಿಸಿಕೊಳ್ಳುತ್ತವೆ. ಅದಕ್ಷ ಸರಕಾರವು ಪ್ರಜಾಪ್ರಭುತ್ವದ ಯಾವ ಪಕ್ಷದ ಮೂಲಕ ಲಭ್ಯವಾದರೆ ಸ್ವೀಕಾರಾರ್ಹ ಎನ್ನಲು ಸಾಧ್ಯ?

"ಯಸ್ಮಿನ್ ಕ್ಷಮಾಚ ಕ್ರೋಧಶ್ಚ ದಾನಾದಾನೇ ಭಯಾಭಯೇ |
ನಿಗ್ರಹಾನುಗ್ರಹೌ ಚೋಭೌ ಸರ್ವೈ ಧರ್ಮವಿದುಚ್ಯತೇ-

ಪ್ರಶಾಸಕನಿಗೆ ಕ್ಷಮೆ-ಅಕ್ಷಮೆ, ದಾನ-ಆದಾನ, ಭಯ-ಅಭಯ, ನಿಗ್ರಹ-ಅನುಗ್ರಹಗಳನ್ನು ನ್ಯಾಯವಾಗಿ ಆಚರಿಸಲು ತಿಳಿದಿದ್ದರೆ ಆಗ ಮಾತ್ರ ಅವನು ರಾಜಧರ್ಮಜ್ಞ (ರಾಜನೀತಿಜ್ಞ)"- ಎಂಬ ವ್ಯಾಸೋಕ್ತಿಯು ಆಡಳಿತದ ದಕ್ಷತೆಯ ಅಗತ್ಯವನ್ನು ಒತ್ತಿ ಹೇಳಿದೆ.

ರಾಜಪ್ರಭುತ್ವ ಮತ್ತು ಪ್ರಜಾಪ್ರಭುತ್ವ

ಆಳುವವನು ಅಥವಾ ಆಳುವವರು ಆನುವಂಶಿಕಪದ್ಧತಿಯ ಪ್ರಕಾರ ಪ್ರಶಾಸನಾಧಿಕಾರ ಪಡೆಯುತ್ತಿದ್ದಾಗ, ಜಗತ್ತಿನ ವಿವಿಧ ರಾಷ್ಟ್ರಗಳ (ರಾಜ್ಯಗಳ) ಜನರು ಅನುಭವಿಸಿದ ಸುಖದುಃಖಗಳ ಗುಣ-ಪರಿಮಾಣಗಳು ಕಾಲಾವಧಿಗಳ ದೃಷ್ಟಿಯಿಂದ ಪ್ರಜಾಪ್ರಭುತ್ವೀಯ ಪದ್ಧತಿಯಂತೆ ಚುನಾಯಿತರಾಗಿ

ಬಂದವರ ಆಳಿಕೆಯಲ್ಲಿ ಅನುಭವಿಸುತ್ತ ಬಂದ ಸುಖದುಃಖಗಳಿಗಿಂತ ಬಹಳ ಅಧಿಕವಾಗವೆಂಬುದು ಇತಿಹಾಸಪ್ರಸಿದ್ಧ. ಆದರೆ ಆಧುನಿಕ ಯುಗದಲ್ಲಿ ಆನುವಂಶಿಕತೆಯ ಬಗ್ಗೆ ಶ್ರದ್ಧೆ ಹೊರಟುಹೋಗಿ ಆಯ್ದ ಪ್ರತಿನಿಧಿಗಳ ಪ್ರಶಾಸನವನ್ನೇ ಆಧರಿಸಲಾಗುತ್ತದೆ. ಕಾಲಭೇದವೊಂದರಿಂದ ರಾಜಪ್ರಭುತ್ವಕ್ಕಿಂತ ಪ್ರಜಾಪ್ರಭುತ್ವ ಮೇಲೆಂಬ ಇಂದಿನ ದಿನಮಾನಕ್ಕಿಂತ ಒಂದೇ ಕಾಲಾವಧಿಯಲ್ಲಿ ಭಾರತದ ವಿವಿಧ ಭಾಗಗಳಲ್ಲಿ ವಿವಿಧ ಪ್ರಭುತ್ವಗಳಿದ್ದುದರ ಪಾಠವು ಜಗತ್ತಿಗಿಂದೂ ಉಪಾದೇಯವಾಗಿದೆ. ಪ್ರಜೆಗಳ ಸಾಮಾಜಿಕ ಮನೋಧರ್ಮಕ್ಕೆ ತಕ್ಕಂಥ ಸಂವಿಧಾನವು ಆಯಾ ಪ್ರಜಾಸ್ತೋಮ ನೆಲಸಿದ ಪ್ರದೇಶ-ದೇಶಗಳಲ್ಲಿ ಇರತಕ್ಕದ್ದು ಮಾತ್ರ ಆರೋಗ್ಯಕರವಾದೀತಲ್ಲದೆ, ಸರ್ವತ್ರ ಯಾವುದಾದರೂ ಒಂದು ಮಾದರಿಯ ಪ್ರಭುತ್ವ ಒಂದು ಖಂಡದಲ್ಲೋ ದೇಶದಲ್ಲೋ ಇರುವುದು ಎಂದೂ ಸರ್ವ ಪ್ರಜೆಗಳ ದೇಹ-ಮನಗಳ ಆರೋಗ್ಯಾಭಿವೃದ್ಧಿಗೆ ಕಾರಣವಾಗದು. ಪ್ರಜಾಪ್ರಭುತ್ವದಲ್ಲಿಯೇ ಇಂದು ಸಾಮ್ಯವಾದ, ಸಮಾಜವಾದ, ಬಂಡವಾಳವಾದ ಎಂದು ಮುಂತಾಗಿ ಅನೇಕ ಪ್ರಕಾರಗಳಿವೆ. ಎಲ್ಲ ವಿಧದ ಪ್ರಜಾಪ್ರಭುತ್ವಗಳಿಗೂ ಬೇಕಾದ "ಗಣವೃತ್ತ" ಮಹಾಭಾರತದಲ್ಲಿ ಬಂದಿದೆ:

ಲೋಭ-ಕ್ರೋಧಗಳು ಒಡಕಿನ ಬೀಜಗಳು. ಒಡಕು ಪ್ರಜಾ-ರಾಜ್ಯವನ್ನು ಉದ್ದೇಶಮಾರಕವನ್ನಾಗಿ ರೂಪಿಸುತ್ತದೆ; ಅಂತಃಶತ್ರುಗಳೂ ಬಹಿಃಶತ್ರುಗಳೂ ಆಗ ಪ್ರಜೆಗಳನ್ನು ಒಡೆದು ಬಹುಸಂಖ್ಯಾತರನ್ನು ವಿನಾಶ-ಕ್ಕೀಡು ಮಾಡುತ್ತಾರೆ. ಸಂಘಶಕ್ತಿ ಅಥವಾ ಐಕ್ಯವೊಂದೇ ಗಣರಾಜ್ಯಗಳ ಯಶಸ್ಸಿಗೆ ಆಧಾರ. ಅದರಿಂದಲೇ ಪರಸ್ಪರ ಸಹಕಾರ ಸಾಧ್ಯ. "ಅಭಿಸಂಧಾನ" ಮನಸ್ಕತೆಯ ಶಿಕ್ಷಣ ಅದಕ್ಕೆ ಅಗತ್ಯ. ಅಭಿಸಂಧಾನ (=ವಿಚಾರ, ವಿಮರ್ಶೆ, ನಿರ್ಣಯ, ಆಚಾರ) (ಸಂವಿಧಾನಾಧಾರವನ್ನು) ಶಾಸ್ತ್ರಾಧಾರವನ್ನು ನಂಬಿದರೆ ಮಾತ್ರ ಸಫಲವಾಗುತ್ತದೆ. ಶಾಸ್ತ್ರವಿಲ್ಲದೆ ಧರ್ಮ (ನ್ಯಾಯ) ನಿರ್ಣಯವಾಗದು. ಇದ್ದದ್ದನ್ನು ಇದ್ದ ಹಾಗೆಯೇ ಗ್ರಹಿಸುವ ಶಕ್ತಿ ಬುದ್ಧಿಗಿದ್ದರೆ ಮಾತ್ರ ಶಾಸ್ತ್ರಾಧಾರದ ಪ್ರಕಾರ ವ್ಯವಹಾರ-

ಗಳನ್ನು ಏಕಮತದಿಂದ ನಿರ್ಣಯಿಸಲು ಸಾಧ್ಯ. ಪುತ್ರರನ್ನೂ ಭ್ರಾತೃಗಳನ್ನೂ ನಿಗ್ರಹಿಸಿ ವಿನಯವಂತರನ್ನಾಗಿ ಇಡುವ ಹಿರಿಯತನ (ನೇತೃತ್ವ) ಜನನಾಯಕರಲ್ಲಿರುವುದು ವಾಸ್ತವವನ್ನು ವಾಸ್ತವವನ್ನಾಗಿಯೇ ನೋಡುವ ದೃಷ್ಟಿಯನ್ನು ವ್ಯವಹಾರದಲ್ಲಿ ತರಲು ಅಗತ್ಯ. ಅದಕ್ಕೆ ಜನನಾಯಕರು ಪ್ರಾಜ್ಞರನ್ನೂ ಶೂರರನ್ನೂ ಮಹೋತ್ಸಾಹಿಗಳನ್ನೂ ಕರ್ಮವೀರರನ್ನೂ ಪೌರುಷವಂತರನ್ನೂ ಹೃತ್ಪೂರ್ವಕವಾಗಿ ಗೌರವಿಸುವ ನೀತಿಯನ್ನು ಹಿಡಿಯುವುದು ಅನಿವಾರ್ಯ. ಕ್ರೋಧ, ಖೇದ, ಭಯ, ದಂಡ, ಕರ್ಷಣ, ನಿಗ್ರಹ, ವಧಗಳು ಅನ್ಯಾಯವಾಗಿ ಆಡಳಿತದಲ್ಲಿ ಪ್ರವೇಶಿಸಿದರೆ ಪ್ರಜಾಪ್ರಭುತ್ವವು ಶತ್ರುಗಳ ಪಾಲಾಗುವುದು; ಹಾಗೆ ಶತ್ರುಗಳ ಪಾಲಾಗುವುದರ ಮುನ್ಸೂಚನೆಯೆಂದರೆ ಆರ್ಥಿಕ ಅಸ್ತವ್ಯಸ್ತತೆ. ಅರ್ಥವೈಷಮ್ಯದಿಂದ ಪರಸ್ಪರವೈಷಮ್ಯ ನಾಯಕರಲ್ಲೂ ಅನುಯಾಯಿಗಳಲ್ಲೂ ಉಂಟಾಗಿ ರಾಜ್ಯವು ದುರ್ಬಲವಾಗುವುದು. ಆಗ ಸಾಂಸ್ಕೃತಿಕ ಔನ್ನತ್ಯವನ್ನು ನಾಶಮಾಡಲಾಗುತ್ತದೆ. ಅಂತಃಶತ್ರುಗಳು ಬಹಿಃಶತ್ರುಗಳಿಂದ ಹೆಚ್ಚಿನ ಹಾಗೂ ಮೊದಲಿನ ರಾಜ್ಯಶಕ್ತಿಮಾರಕರು; ಅದು ಮೂಲಕ್ಕೇ ಕೊಡಲಿ. ಕ್ರೋಧ, ಮೋಹ, ಲೋಭಗಳು ದುಡ್ಡು, ಅಧಿಕಾರ, ಸ್ಥಾನಮಾನಗಳ ಬಗ್ಗೆ ಉಂಟಾಗುವಂತಹ ಶಿಕ್ಷಣ-ಪ್ರಶಾಸನಗಳು ಅಂತಃಶತ್ರು ನಿರ್ಮಾಪಕಗಳು. ಯಾವ ಜನಾಂಗದವರೂ ಎಂದೂ ಮತ ಜಾತಿಗಳಲ್ಲಿ, ಆನುವಂಶಿಕ ಹಿನ್ನೆಲೆಯಲ್ಲಿ, ಉದ್ಯೋಗ-ವೃತ್ತಿಗಳಲ್ಲಿ, ಬುದ್ಧಿ-ರೂಪ-ದ್ರವ್ಯಸಂಪಾದನೆಗಳಲ್ಲಿ ಎಲ್ಲಿಯೂ ನೂರಕ್ಕೆ ನೂರು ಸಮಾನತೆಯನ್ನು ಹೊಂದಿರರು. ಈ ಅಂಶಗಳನ್ನು ಹಿಡಿದೇ ಅಂತಃಶತ್ರುಗಳು ಪ್ರಜೆಗಳನ್ನು ಒಡೆದು ಆಳಲು ಯತ್ನಿಸುತ್ತಾರೆ; ನಾನಾ ವಿಧದ ಅಮಿಷಗಳನ್ನೊಡ್ಡಿ ಅವರಲ್ಲಿ ಘರ್ಷಣೆಯನ್ನು ತಂದು ತಮ್ಮ ಬೇಳೆಯನ್ನು ಬೇಯಿಸಿಕೊಳ್ಳುತ್ತಾರೆ!

ಪ್ರಜಾಪ್ರಭುತ್ವದ ಯಾವ ವಿಧವಾದರೂ ಉಕ್ತ ಗುಣ-ದೋಷಗಳಿಂದಲೇ ಸಫಲತೆ-ವಿಫಲತೆಗಳಿಗಿಳಿಯುವುದು ಎಂಬುದು ಸ್ವಯಂ ಸ್ಪಷ್ಟ. ಅಭಿಸಂಧಾನಕ್ಕೆ ಮತ-ಜಾತಿ-ವಂಶ-ಉದ್ಯೋಗ-ಬುದ್ಧಿ-ರೂಪ (ಬಣ್ಣ), ದ್ರವ್ಯಾರ್ಜನಾದಕ್ಷತೆಗಳಲ್ಲಿ ಯಾವುದೂ-ವ್ಯವಹಾರಗಳಲ್ಲಿ ಮತ್ತು ಆಡಳಿತ

ನೀತಿಯಲ್ಲಿ "ಕಾಯಿದೆಯೆದುರು ಎಲ್ಲರೂ ಸಮಾನರು" ಎಂಬ ತತ್ತ್ವಕ್ಕೆ ವ್ಯವಹಾರತಃ ಭಂಗತಾರದಂತೆ ನೋಡಿಕೊಳ್ಳಬಲ್ಲ ಜನತೆಯಲ್ಲಿ ಮಾತ್ರ ಪ್ರಜಾಪ್ರಭುತ್ವವು ಸಫಲವಾಗುತ್ತದೆ—ಎಂಬ ಅಭಿಪ್ರಾಯಕ್ಕೆ ಎದು-ರಾಡಲು ಸಾಧ್ಯವೇ?

ರೂಸೋ ವಿಚಾರ

ರೂಸೋ ಸಾಮಾಜಿಕ ವಿಕಾಸದ ಮೊದಲನೆಯ ವಕ್ತಾರ. ಆತನು ಸಾಮಾಜಿಕತೆಯ ಉತ್ತರೋತ್ತರಾಭಿವೃದ್ಧಿಯ ದ್ರಷ್ಟಾರ. ಸಮಾಜವಿಕಾಸ-ವೊಂದು ನಿಯತ ಪ್ರಕ್ರಿಯೆಯೆಂದೂ ಕುಟೋದ್ಯದ ಪಾಂಡಿತ್ಯದ ಪ್ರಶಂಸೆ ಹಾಗೂ ಸರ್ವೋದಯ ಶೀಲದ ನಿಂದೆಗಳನ್ನು ಬಿಂಬಿಸುವು-ವೆಂದೂ ಆತನು ಸಾರಿದನು. ಅರಾಜಕವಾದ ಮೂಲಸ್ಥಿತಿ ಮತ್ತು ಸಮಾಜ-ಪ್ರಭುತ್ವಗಳ ಒಪ್ಪಂದ (ಕರಾರು) ಹಾಬ್ಸ್ ಮತ್ತು ಲೋಕೆಗಳ ವಾದದ ಮೂಲ. ಅದರ ಮುಂದಿನ ಆಲೋಚನೆ ರೂಸೋವಿನದು; ಪ್ರಜೆಯೇ ಕಾಯಿದೆ ಮಾಡುವವನಾಗಿರಬೇಕು—ಎಂದು ಪ್ರಜಾಪ್ರಭುತ್ವದ ಬೀಜವನ್ನು ಯೂರೋಪಿನಲ್ಲಿ ಬಿತ್ತಿದನು. "ಪ್ರಜೆ"ಯು "ನಾಗರಿಕ" ಎನ್ನಿಸಿದ್ದು ಅವನ ಸಿದ್ಧಾಂತದಲ್ಲಿ. ಪ್ರಜೆಗಳು, ಜನರು ಅಥವಾ ನಾಗರಿಕರು ಧರ್ಮಮೂಲವೆಂದ ಅವನ ಮಾತೇ ಇಂದು ದೇಶ ವಿದೇಶಗಳಲ್ಲಿ ಆ ಈ ಸಂವಿಧಾನಗಳನ್ನು ರಚಿಸುವ ರೂಢಿಗೆ ಕಾರಣವಾಯಿತು; ಜನತೆ ಜನಾರ್ದನ ನಾದದ್ದು ಅಲ್ಲಿ ಅವನಿಂದ. ಅರ್ದನವೆಂದರೆ ನೋವು, ತೊಂದರೆ, ಉತ್ಕಂಠೆ, ಉದ್ವೇಗ, ಆಂದೋಲನ, ಅಶಾಂತಿ, ಅತೃಪ್ತಿ. ರಾಜ, ಮಹಾರಾಜ, ಚಕ್ರವರ್ತಿಗಳಲ್ಲಿ ಕೆಲವೊಮ್ಮೆ ಕೆಲವರು ತಮ್ಮಲ್ಲಿ ತಾವೇ ಆರೋಪಿಸಿಕೊಂಡ ತಮ್ಮ ಸರ್ವಾಧಿಕಾರ (ನಿರಂಕುಶ ಪ್ರಭುತ್ವ) ವನ್ನು ಜನರಿಗೆ ತಡೆಯಲಾರದಂಥ ತೊಂದರೆಗಳುಂಟಾಗುವಂತೆ ನಡೆಯಿಸಿದ್ದೇ ಜನರ ಜನಾರ್ದನನೆಂಬ ಸಿದ್ಧಾಂತವೆದ್ದು ಪೃಥಿವೀಪತಿಯ ವಿಷ್ಣುತ್ವಕ್ಕೆ (7) ಚ್ಯುತಿಯನ್ನು ತಂದಿತು.

(7) ಈ ವಿಷ್ಣುತ್ವವು ಪಾಶ್ಚಾತ್ಯರ ದೇವದತ್ತ ರಾಜ್ಯಾಧಿಕಾರ ಸಿದ್ಧಾಂತವಲ್ಲ. ಇದು ರಾಜನ ಶರೀರದಲ್ಲಿ ಇಂದ್ರ, ಅನಿಲ, ಯಮ, ಅರ್ಕ, ಅಗ್ನಿ, ವರುಣ, ಚಂದ್ರ,

ಹೀಗಾದದ್ದು ಪಾಶ್ಚಾತ್ಯರಲ್ಲಿ ಮೊದಲು ಎಂಬುದೀಗ ಪ್ರಚಾರವಾಗಿದೆ. ಗ್ರೀಸಿನ ನಾಗರಿಕತೆಗೆ ಸಮಕಾಲೀನವಾದ ಭಾರತದ ಜೈನ-ಬೌದ್ಧಯುಗಗಳ ಆರಂಭಕಾಲದಲ್ಲಿ ಗಣರಾಜ್ಯಗಳಿದ್ದದ್ದು ಉಕ್ತ ಪ್ರಚಾರದ ಅನೈತಿಹಾಸಕತೆಯನ್ನು ಸಿದ್ಧಮಾಡುತ್ತದೆ. ಅದಕ್ಕೂ ಹಿಂದೆ (ಎಂದರೆ, ವೇದದ ಆದಿಕಾಲದಿಂದ) ಗಣರಾಜ್ಯಪದ್ಧತಿ ಭಾರತದಲ್ಲಿ ಇತ್ತು—ಎಂಬುದನ್ನೂ ಡಾ. ಶ್ರೀಕಂಠ ಶಾಸ್ತ್ರಿಗಳು ತಮ್ಮ "ಭಾರತೀಯ ಸಂಸ್ಕೃತಿ"ಯಲ್ಲಿ ಸಾಧಾರವಾಗಿ ಸ್ಪಷ್ಟಪಡಿಸಿದ್ದಾರೆ ('ಭಾರತೀಯ ಸಂಸ್ಕೃತಿ', ಪುಟ ೨೨೮ರಿಂದ ೨೩೩ರ ವರೆಗೆ). ಆದುದರಿಂದ ಭಾರತದಲ್ಲಿ ರಾಜಪ್ರಭುತ್ವ-ಪ್ರಜಾಪ್ರಭುತ್ವಗಳು ಘರ್ಷಣಜನ್ಯಗಳಲ್ಲ. ರಾಜರೂ 'ಜನಾರ್ದನ'ರಾದಾರು, ಜನರ ಪ್ರತಿನಿಧಿಗಳೂ 'ಜನಾರ್ದನ'ರಾದಾರು ! 'ಚಲಿಸು, ಚಲಿಸಲ್ಪಡು' ಎಂಬ ಅರ್ಥಗಳೂ 'ಅರ್ದ್' ಎಂಬ ಧಾತುವಿಗಿರುವುದರಿಂದ, ಒಳ್ಳೆಯ ಅರ್ಥದಲ್ಲೂ ರಾಜ (ಏಕಸ್ವಾಮಿ) ಅಥವಾ ಪ್ರಜಾಪ್ರತಿನಿಧಿ ಜನರನ್ನು ಕರ್ತವ್ಯಗಳಲ್ಲಿ ಉದ್ಯುಕ್ತರಾಗುವಂತೆ ಮಾಡುವ 'ಜನಾರ್ದನ'ನೆನ್ನಿಸಬಹುದು!

ಸಾಮಾಜಿಕ ಒಪ್ಪಂದದ ಪದ್ಧತಿ ಬಹಳ ಜನಸಂಖ್ಯೆಯುಳ್ಳ ರಾಜ್ಯದಲ್ಲಿ ಪ್ರಜಾಪ್ರಭುತ್ವಕ್ಕೊಯ್ದು ಮುಟ್ಟಿಸುವುದರ ಬದಲು ರಾಜ್ಯವನ್ನು ಅತ್ಯಲ್ಪ, ಸಂಖ್ಯರ ಅಥವಾ ಏಕಮೇವಾದ್ವಿತೀಯನ ಸರ್ವಾಧಿಕಾರಕ್ಕೆ ಮುಟ್ಟಿಸಬಹುದೆಂದು ರೂಸೋ ಊಹಿಸಿದನೆನ್ನಲಾಗಿದೆ. ಅದು ಭಾರತದಲ್ಲಿಂದು ನಿಜವಾಗಿ ಪರಿಣಮಿಸಿದೆ. ಜನರಲ್ಲಿ ಒಡಕುಂಟಾದರೆ ಜನರಿಗೆ (ಪ್ರಜಾರಾಜ್ಯದಲ್ಲಿ) ನಾಶ; ಹಾಗೇ ಜನಾರ್ದನರಲ್ಲಿ ಒಡಕುಂಟಾದರೂ ಬಹು ಸಂಖ್ಯಾತ ಜನರಿಗೆ ನಾಶ (ಶೋಷಣೆ, ಹಿಂಸೆ, ನಷ್ಟ, ಅಪಜಯ, ಅಪಮಾನ, ಸಾವು ಇತ್ಯಾದಿ); ಏಕೆಂದರೆ, ಆಗ 'ಸಮದಂಡ' ಉಳಿಯದು, 'ಶಿಥಿಲ-ಉಗ್ರ

ಕುಬೇರರ ಅಂಶವಿದೆಯೆಂದು ರಾಜನ ಧರ್ಮಶಾಸನಕ್ಕೆ ಪ್ರಜೆಗಳು ತಲೆಬಾಗಿಸಬೇಕೆಂಬ ಪ್ರಚಾರದ ಉದ್ದೇಶವುಳ್ಳದ್ದು. ಭಾರತದ ರಾಜರು ಸಾಂಕುಶ ಪ್ರಭುಗಳು, ಧರ್ಮಸ್ಮೃತಿಗಳ ಅಧೀನರು, ಕಾನೂನುಗಳ ರಚನೆಗಾರರಲ್ಲ. ಅವರ ರಾಜಾಜ್ಞೆಗಳು ಅವರ (ಅಥವಾ ವೈಯಕ್ತಿಕ ರಾಜರ) ಆಳಿಕೆಯಲ್ಲಷ್ಟೇ ಆಚರಣೀಯ.

ದಂಡ'ಗಳು ಜನರ ಅನುಭವಕ್ಕೆ ಬರುವುವು—ಅಥವಾ ಭ್ರಷ್ಟಾಚಾರ ವ್ಯಾಪಿಸತೊಡಗುವುದೆಂದು (ನವ ಪರಿಭಾಷೆಯಲ್ಲಿ) ವರ್ಣಿಸಬಹುದು.

ಗಾಂಧಿ ವಿಚಾರ

ಹೇಗೆ ದುರಭಿಮಾನ-ನಿರಭಿಮಾನಗಳಿಂದ ತಮ್ಮ ಅಥವಾ ಇತರರ ಸ್ವಾಭಿಮಾನವನ್ನು ಬಹಳ ಜನರು ಭಿನ್ನವಾಗಿ ಅನುಭವತಃ ಗುರುತಿಸ-ಲಾರರೋ ಹಾಗೇ ಒಡಕು-ಅಭಿಪ್ರಾಯಭೇದಗಳನ್ನೂ ವಿಂಗಡಿಸಿ ತಿಳಿದು ಕೊಳ್ಳಲಾರರು. ಆದುದರಿಂದ ಪರೇಂಗಿತಜ್ಞತೆಯ ಪ್ರಮಾಣಿಕ ಕೌಶಲ ವನ್ನು ಬೆಳೆಸಿಕೊಂಡ ಜನರ ಸಂಖ್ಯೆ ಸರಕಾರದಲ್ಲಿ ಹೆಚ್ಚಾದಾಗ ಮಾತ್ರ ಜನಹಿತಕರವಾದ ಸಾರ್ವನ್ಯಾಯಪಥದ ಮೂಲಕ ಸರ್ವೋದಯ (=ಸರ್ವಸಭ್ಯೋದಯ; ಅಸಭ್ಯರಿಗೆ ಶಿಕ್ಷಣಾರ್ಥವಾಗಿ ಹೇರುವ ಅಸ್ತಂಗತಿ ಯೇ ಉದಯ) ಸಿದ್ಧಿಸುವುದು. ಬಹು ಸಂಖ್ಯಾತರ ಅತಿ ಹೆಚ್ಚಿನ ಲಾಭ ವೆಂಬುದು ಭಾರತದ ಸರ್ವೋದಯ (ಸರ್ವಭೂತಹಿತ) ದಷ್ಟು ನ್ಯಾಯ ವ್ಯಾಪ್ತಿಯುಳ್ಳ ಧ್ಯೇಯವಲ್ಲ. ಬಹುಸಂಖ್ಯಾತರು (ನೂರಕ್ಕೆ ೫೧ರಷ್ಟು ಜನರು) ಅಲ್ಪ ಸಂಖ್ಯಾತರನ್ನು (ನೂರಕ್ಕೆ ೪೯ರಷ್ಟು ಜನರನ್ನು) ದಂಡಿಸುವ ಯೋಜನೆ ಹೋಗಲಿ; ೯೯ ಜನರು ೧೦೦ನೇಯವನಾದ ಒಬ್ಬನನ್ನೂ—ಅವನು ತ್ರಯಸ್ಥರ ದೃಷ್ಟಿಯಿಂದ ನಿರಪರಾಧಿಯಾಗಿದ್ದರೆ—ದಣಿಸಕೂಡದೆಂಬುದೇ ಸರ್ವೋದಯದ ಕೇಂದ್ರಬಿಂದು; ಜೀವ ಜಾತಿಗಳೆಲ್ಲವುಗಳಿಗೂ ಈ ನ್ಯಾಯ ವನ್ನು ಅನ್ವಯಿಸುವುದು ಅದರ ಪೂರ್ಣಾರ್ಥ. ಬಹಳಜನ ಶ್ರೀಮಂತರಿಗೆ ಪುಣ್ಯದಲ್ಲಿ ವಿಶ್ವಾಸವಿದ್ದಾಗ ದಾನದಿಂದ ಅರ್ಥಸಾಮ್ಯ ಸಾಧ್ಯವಾಯಿತು. ಅದು ಮಹಾಭಾರತದ ಯುಗ; ಪುಣ್ಯಶ್ರದ್ಧೆ ಇಲ್ಲದವರಿಗೆ ಕಾಯದೆಯ ಬಲಾತ್ಕಾರವೊಂದೇ ಮದ್ದು; ಅಂಥ ಕಾಯದೆಯ ರಚನೆ ಆಗ್ರಹ, ಬಲಾ-ತ್ಕಾರ, ಬಲಪ್ರಯೋಗಗಳ ನಾನಾ ವಿಧ ಮತ್ತು ಮಟ್ಟಗಳಿಂದ ಮಾತ್ರ ಸಾಧ್ಯವೆಂಬುದನ್ನು ಜಗತ್ತೀಗ ಅರಿತಿದೆ; ಉಪದೇಶಶಕ್ತಿ ಚೆನ್ನಾಗಿ ಇದ್ದ ವೃದ್ಧ ವಯಸ್ಸಿನ ಗಾಂಧಿಯವರಂಥವರಿಲ್ಲದ ರಾಜ್ಯ (ರಾಷ್ಟ್ರ) ದಲ್ಲಿ ಅಥವಾ ಕಾಲದಲ್ಲಿ ಅನ್ಯಮಾರ್ಗವಿಲ್ಲ. ಭೀಷ್ಮ, ದ್ರೋಣ, ಕೃಪ, ವಿದುರ,

ಧೃತರಾಷ್ಟ್ರ, ಕೃಷ್ಣ, ಗಾಂಧಾರಿಯರಲ್ಲಿ ಯಾರೂ ಕೌರವರಿಗೆ ಉಪದೇಶಮಾಡಿ
ಅವರಲ್ಲಿ ಮನಃಪರಿವರ್ತನೆಯನ್ನುಂಟುಮಾಡಲು ಸಮರ್ಥರಾಗದುದ-
ರಿಂದಲೇ ಮಹಾಭಾರತಯುದ್ಧವು ಪಾಂಡವರಿಗೆ ಅನಿವಾರ್ಯವೂ ಪವಿತ್ರ
ಕರ್ತವ್ಯವೂ ಆಯಿತು! ಇದು ಮಹಾಭಾರತದ ಸಾಮ-ದಾನ-ಭೇದ-
ದಂಡಗಳ ಆನುಕ್ರಮಿಕ ನ್ಯಾಯದಿಂದ ಸಿದ್ಧ. ಸೈನಿಕ ಕ್ರಮಗಳಿಗಂಜುವ
ಭಾರತೀಯತೆಯನ್ನು ಗಾಂಧಿಯವರೂ ಸ್ತುತ್ಯವೆಂದಿಲ್ಲ; ಹೇಡಿತನಕ್ಕಿಂತ
ಧರ್ಮ್ಯವಾದ ಹಿಂಸೆಯೇ ಮೇಲೆಂದರವರು! ಭಾರತದಲ್ಲಿ ಅಹಿಂಸಾವೀರರು
ಜಿನ, ಬುದ್ಧರ ಅನಂತರ ಗಾಂಧಿಯವರೊಬ್ಬರೇ; ಮಿಕ್ಕ ವೀರರು ಧರ್ಮ್ಯ
ವಾದ ಯುದ್ಧಗಳನ್ನು ಪಾಂಡವರಂತೆಯೋ ಅಧರ್ಮ್ಯವಾದ ಯುದ್ಧ-
ಗಳನ್ನು ಕೌರವರಂತೆಯೋ ಮಾಡಿಯೇ ಮಡಿದವರು. ರಾಜದ್ರೋಹಕ್ಕೆ
ಯಾವ ಶಿಕ್ಷೆ ಯೋಗ್ಯವೋ ಪ್ರಜಾದ್ರೋಹಕ್ಕೂ ಅದೇ ಶಿಕ್ಷೆಯೋಗ್ಯ-
ವೆಂಬುದು ವ್ಯಾಸ-ಮನುಗಳ ಸಿದ್ಧಾಂತಸಾರ. ಆಪದ್ಧರ್ಮವನ್ನು ನಿತ್ಯ
ಧರ್ಮವೆಂದು ತಿಳಿದು ಆಚರಿಸಬಾರದೆಂದ ಕೂಡಲೇ ಆಪತ್ಕಾಲದಲ್ಲಿಯೂ
ಅದನ್ನಾಚರಿಸಬಾರದೆಂಬಂತಹ ಮನೋಧರ್ಮವು ಜನತೆಯಲ್ಲಿ ಬೆಳೆ
ಯುವುದು ಅತ್ಯಂತ ಜುಗುಪ್ಸಾಜನಕವಾದ ಗತಿ. ದುರ್ಬುದ್ಧಿಗೆ ವಶರಾಗುವ
ಆತ-ತಾಯಿಗಳು ಪ್ರಜೆಗಳಲ್ಲಿ ಮಾತ್ರ ಸಿಕ್ಕುತ್ತಾರೆ ಎಂಬುದು ಸುಳ್ಳು;
ರಾಜ, ಮಂತ್ರಿ, ರಾಜಪುರುಷ, ಸೇವಕಾದಿ ಸರ್ವವರ್ಗಗಳಲ್ಲೂ ಕೆಲದೇಶ
ಕಾಲ ಸಂದರ್ಭಗಳಲ್ಲಿ ಸಿಗಬಹುದಾದುದರಿಂದ ಬ್ರಹ್ಮಹತ್ಯೆ ದೋಷವೆಂದಿದ್ದ
ಕಾಲದಲ್ಲೂ ದ್ರೋಣಹತ್ಯೆ ಅನಿವಾರ್ಯವಾಗಿ ನಡೆಯಿತು. ಭೀಷ್ಮ-
ದ್ರೋಣರ ಕೌರವಪಕ್ಷೀಯತೆಯು ತಪ್ಪೆಂಬುದು ಅವರಿಗೆ ಮರಣ
ಉಂಟಾಗುವಂತಹ ಯುದ್ಧವನ್ನು ನಡೆಯಿಸಿದ ವ್ಯಾಸ-ಕೃಷ್ಣರ ಸಿದ್ಧಾಂತ.
ಕರ್ಮ-ಗುಣಗಳಿಂದ ಜಾತಿನಿರ್ಣಯವೆಂಬ ಸೂತ್ರಕ್ಕೂ ಇದೇ ಉದಾಹರಣೆ.
ಇದು "ಗುಣಾಃ ಪೂಜಾಸ್ಥಾನಂ ಗುಣಿಷು ನ ಚ ಲಿಂಗಂ ನ ಚ ವಯಃ" ಎಂಬ
ತತ್ವದ ವಿಸ್ತರಣೆ. ಆದರೂ ಸಾಮಾನ್ಯವಾಗಿ ರಾಷ್ಟ್ರಾಭಿವೃದ್ಧಿಗೆ ಅನುಕೂಲ
ವಾಗಿದ್ದ ಆನುವಂಶಿಕ ಜಾತಿಪದ್ಧತಿ ಹಿಂದಿನಂತೆ ಆ ಮೇಲೂ ಪ್ರಬಲ-
ವಾಗಿಯೇ ಉಳಿದುಕೊಂಡು ಬಂದು ಕ್ರಮೇಣ ಅಸಂಖ್ಯ ವಿಕೃತ ಉಪ-

ಜಾತಿಗಳಾಗಿ ಬ್ರಿಟಿಷರ ಒಡೆದಾಳು ಕುಟಿಲನೀತಿಗೆ ಅನುಕೂಲವೊದಗಿದ ದುರಂತಕ್ಕೆ ಐತಿಹಾಸಿಕ ಶಕ್ತಿಗಳು ಅಥವಾ ಈಶ್ವರೇಚ್ಛೆ ಕಾರಣವೆಂದು ಹೇಳದೆ ಬೇರೆ ವಿಕಲ್ಪವಿಲ್ಲ. ಆಪದ್ಧರ್ಮ-ನಿತ್ಯಧರ್ಮಗಳಲ್ಲಿ ಹೇಗೋ ಹಾಗೇ ಅಪವಾದ-ಉತ್ಸರ್ಗಗಳಲ್ಲೂ ಅಪಾನ್ವಯವಾದಾಗ ವರ್ಣಧರ್ಮ-ಜಾತಿಧರ್ಮಗಳು ರಾಷ್ಟ್ರಮಾರಕಗಳಾದವು. ಅಪಾನ್ವಯ, ಅಪಸಮರ್ಥನೆಗಳು ಯಾವ ಸಂವಿಧಾನವನ್ನೂ ದುಷ್ಫಲದಾಯಕವಾಗಿ ಪರಿಣಮಿಸುವಂತೆ ಮಾಡುವುದು ಬುದ್ಧಿ ವಿಕಾರ; ಬುದ್ಧಿವಿಕಾರವಂತೆಯೇ ಬುದ್ಧಿ-ಆಕಾರವೂ ದೈವದಿಂದಲೇ ಲಭ್ಯವೆಂದು ವಿದುರನ ಮೂಲಕ ವ್ಯಾಸ ತಿಳಿಸುತ್ತಾನೆ. ಆದುದರಿಂದ ರಾಜಪ್ರಭುತ್ವ-ಪ್ರಭುತ್ವಾದಿ ವಿವಿಧ ಪ್ರಭುತ್ವಗಳ ಲಾಭಾಲಾಭ ಜಯಾಪಜಯಗಳ ವಿಮರ್ಶೆಗಿಂತ ಮಾನವ ಮಾನವನಾಗಿ ವರ್ತಿಸುವ ಯೋಜನೆ ಮಾನವಜೀವನದ ರಾಜಕೀಯ, ಆರ್ಥಿಕ, ಸಾಮಾಜಿಕ, ಕ್ಷೇತ್ರಗಳೆಲ್ಲವುಗಳ ಸರ್ವಹಿತ ಸಿದ್ಧಿಗೂ ಅಗತ್ಯವೆಂಬುದೇ ಮುಖ್ಯ ತತ್ವ. ಶಿಕ್ಷಣ—ಆಡಳಿತ ವಾಣಿಜ್ಯಾದಿ ವ್ಯವಹಾರಗಳಲ್ಲಿಯೇ ಅಂಥ "ಸಮುದಂಡ" ಯೋಜನೆ ಇರುವುದು. ಸರ್ವಹಿತಕ್ಕೆ ಸಾಧನವಾಗದ ಪ್ರಭುತ್ವವಾದವು ವಿಮರ್ಶಾರ್ಹ; ಅದಕ್ಕೆ ಅನುಕೂಲವಾದ ಪ್ರಭುತ್ವವಾದಗಳು ಐತಿಹಾಸಿಕ ಅವಧಿಗಳ ವಿವಿಧ ಸಾಮಾಜಿಕ ಮನೋಧರ್ಮಗಳಿಗೆ ಪೋಷಕವಾಗಿವೆ ಎನ್ನಿಸಿಕೊಳ್ಳಬೇಕಾದರೆ, ರಾಷ್ಟ್ರೀಯ ಸಮಾಜಮನೋವಿಜ್ಞಾನದ ಐತಿಹಾಸಿಕ ಬೆಳವಣಿಗೆಗೆ ಶಿಕ್ಷಣಪದ್ಧತಿ-ವ್ಯವಹಾರ ಪದ್ಧತಿಗಳು ಹೊಂದುವಂತೆ ರೂಪಿತವಾಗಬೇಕು. ಪ್ರಜಾ ಸಂಸ್ಕಾರಸಿದ್ಧಿಯು ತಾತ್ಕಾಲಿಕ ಮನೋದೋಷಗಳ ಜೊತೆಗೇ ಐತಿಹಾಸಿಕವಾಗಿ ಉಳಿದುಕೊಂಡುಬಂದ ಮನೋದೋಷಗಳ ಪರಿಹಾರಕ್ಕೂ ತಕ್ಕ ಶೈಕ್ಷಣಿಕ-ವ್ಯಾವಹಾರಿಕ ಪದ್ಧತಿಗಳನ್ನು ಹುಡುಕಿ ಆಚರಣೆಗೆ ತರುವುದರಿಂದ ಮಾತ್ರ ಸಾಧ್ಯ. ಶಿಕ್ಷಣ-ವ್ಯವಹಾರಗಳು ಪರಸ್ಪರ ವಿರುದ್ಧ, ಭಿನ್ನ ಎನ್ನಿಸಿದಾಗ ಪ್ರಗತಿಗೆ ನೂರಾರು ವಿಘ್ನಗಳು ಉಂಟಾಗುವುವು.

ಇಂದಿನ ಭಾರತ

ಸರಕಾರ ಅಥವಾ ಅತ್ಯುಚ್ಚ ಪ್ರಶಾಸಕ ಮಂಡಲ ಬಹುಸಂಖ್ಯೆಯಿಂದ

ಕೂಡಿರುವುದು ಅವರ ಶಕ್ತಿಹ್ರಾಸಕ್ಕೆ ಕಾರಣ ಮತ್ತು ಅಧಿಕೃತ ಆಡಳಿತದ ವಿಷಯಗಳ ಸಂಖ್ಯೆ ಬಹಳ ಹೆಚ್ಚಾದರೆ ದಕ್ಷತೆ ಇಳಿದು ಹೋಗುತ್ತದೆ ಎಂಬ ರೂಸೋವಾದಕ್ಕೆ ಇಂದಿನ ಭಾರತ ದೃಷ್ಟಾಂತವಾಗಿದೆ. ರಾಜ ಪ್ರಭುತ್ವದಲ್ಲಿ ಈ ಸಂನಿವೇಶಗಳಲ್ಲಿ ಮೊದಲಿನದು ಸಂಭವಿಸುವುದು ರಾಜನು ಹೆಸರಿಗೆ ಮಾತ್ರ ರಾಜನಾಗಿದ್ದಾಗ ಮಾತ್ರ; ಎರಡನೆಯದು ಅವನು ಸ್ವಯಂ ಸರ್ವಾಧಿಕಾರಿ (ನಿರಂಕುಶಪ್ರಭು) ಯಾದಾಗ. ವ್ಯಕ್ತಿ ಸ್ವಾತಂತ್ರ್ಯವೂ ವಿಸ್ತಾರವಾಗಿರಬೇಕು; ಸರಕಾರವೂ ಬಲಿಷ್ಠವಾಗಿರಬೇಕು— ಎಂಬ ಧ್ಯೇಯವನ್ನು ಸಾಧಿಸಬೇಕಾದರೆ, ಪ್ಲೇಟೋವ್ಯಾಸರ ತತ್ವಜ್ಞಾನಿ-ಪ್ರಶಾಸಕರ, ಋಷಿರಾಜರ (ರಾಜರ್ಷಿಗಳ) ಅಥವಾ ವಿಶಿಷ್ಟ ರಾಜಧಾರ್ಮಿಕ ಶಿಕ್ಷಣಪಡೆದ ಪ್ರತಿನಿಧಿಗಳ ತರಬೇತು, ಆಯ್ಕೆಗಳಿಗೆ ಅಗತ್ಯವಾದ ಕಾಯಿದೆ ಬದ್ಧ ಯೋಜನೆ-ಆಚರಣೆಗಳು ಮಾತ್ರ ಸಾಧನಗಳಾದಾವು; ಬೇರೆ ಮಾರ್ಗ ಇಲ್ಲವೇ ಇಲ್ಲ. ಅಂಥ ಸಮತ್ವನೀತಿಜ್ಞರು ರಾಜ್ಯಭಾರದ ಸೂತ್ರವನ್ನು ಹಿಡಿದು ಜನಜೀವನವನ್ನು ತೃಪ್ತಿಕರವಾಗಿ ರೂಪಿಸಿದಾಗ ಸರ್ವಹಿತಸಾಧಕವಾದ ವಿವಿಧ ಪಕ್ಷ, ತತ್ವ, ವಾದ, ಸಿದ್ಧಾಂತಗಳಲ್ಲಿ ತಾರತಮ್ಯ ಚರ್ಚೆ ಸಾಂದರ್ಭಿಕವಾದೀತು— ದಶಕ, ದಶಕ ಕಳೆದ ಹಾಗೆ!

'ನಹಿ ಶೌರ್ಯಾತ್ ಪರಂಕಿಂಚಿತ್ ತ್ರಿಷುಲೋಕೇಷು ವಿದ್ಯತೇ
ಶೂರಃ ಸರ್ವಂ ಪಾಲಯತಿ ಸರ್ವಂ ಶೂರೇ ಪ್ರತಿಷ್ಠಿತಂ —

ಶೌರ್ಯಕ್ಕಿಂತ ಹೆಚ್ಚಿನದು ಮೂರು ಲೋಕಗಳಲ್ಲೂ ಇಲ್ಲ; ಎಲ್ಲವನ್ನೂ ಶೂರ ಮಾತ್ರ ಪಾಲಿಸಬಲ್ಲ; ಶೂರನೇ ಸರ್ವಾಧಾರ' ಎಂಬ ವ್ಯಾಸ ಘೋಷವು ಅರ್ಜುನ ದೃಷ್ಟಾಂತದಿಂದ ಸಮರ್ಥಿತವಾಗುವುದು ಸ್ಪಷ್ಟ. ಅರ್ಜುನನು ನಿಜವಾದ ನರ, ಮಾನವ. ದ್ರೋಣ-ಕೃಷ್ಣರು ಅವನ ನಿಜವಾದ ಶಿಕ್ಷಕರು; ಒಬ್ಬನು ವ್ಯಾವಹಾರಿಕ ಗುರು, ಇನ್ನೊಬ್ಬನು ಸೈದ್ಧಾಂತಿಕ ಗುರು. ನಾರಾಯಣೋನ್ಮುಖ ನರರು ರಾಜ್ಯಾಧಿಕಾರ ಪಡೆಯುವ ಸರ್ವೋದಯ ಯೋಜನೆ ಗಾಂಧಿಯವರಿಗಿದ್ದ ಭಾರತೀಯ ಬಯಕೆ. ಎಂಗೆಲ್ಸ್-ಮಾರ್ಕ್ಸರ ಬಯಕೆ ಈ ವ್ಯಾಸ-ಗಾಂಧಿಗಳ ಸುರಾಜ್ಯದ ಬಯಕೆಗಿಂತ ಬಹಳ ಭಿನ್ನ ವಲ್ಲ; ಅವುಗಳನ್ನು ದೊರಕಿಸಿಕೊಳ್ಳುವ ಸಾಧನಗಳ ಬಗೆಗಿನ ವ್ಯವಹಾರ

ಪದ್ಧತಿಗಳ ಸಿದ್ಧಾಂತಪ್ರಣಾಳಿಗಳು ಭಿನ್ನ. ಮಾರ್ಕ್ಸ್‌ನ ಜನತಾಸರ್ವಾಧಿಕಾರ ಪದ್ಧತಿ ಮತ್ತು ಆ ಪದ್ಧತಿಯನ್ನು ಒಂದು ಜನ ಪಡೆಯಬೇಕಾದರೆ ಹಿಡಿಯಬೇಕಾದ ಮಾರ್ಗ—ಇವುಗಳಲ್ಲಿ ೨ನೆಯದರ ವಾದಪ್ರಸ್ತುತೆ ಒಂದನೆಯದಕ್ಕಿಲ್ಲ. ಈ ಮಾರ್ಗಭೇದಗಳು ಆಯಾ ದೇಶದ ಐತಿಹಾಸಿಕ ಶಕ್ತಿಗಳಿಗಧೀನ; ಅವು ಶುದ್ಧ ವ್ಯವಹಾರಗಳು; ಅವುಗಳ ಸೈದ್ಧಾಂತಿಕ ಭಾಗ ತೀರ ಗೌಣ, ಭೌತಿಕ—ಅನುಕೂಲಸಿಂಧುನ್ಯಾಯ ಮತ್ತು ಆಪದ್ಧರ್ಮನ್ಯಾಯಗಳಿಂದ ಬದ್ಧವಾದಂಥವು. ರಾಜಕೀಯ ಗುರಿಗಳ ರಾಷ್ಟ್ರೀಯ ಸಾಧನಪ್ರಯತ್ನದಲ್ಲಿ ಒಬ್ಬರು ಆಪದ್ಧರ್ಮವೆಂಬುದನ್ನು ಅಧಿಕಾರ ಗಿಟ್ಟಿಸಿಕೊಂಡಿರುವ ಇನ್ನೊಬ್ಬರು ಅಧರ್ಮವೆಂದಾರು !

ವ್ಯಾಸಪ್ರಶ್ನೆ

"ಊರ್ಧ್ವಬಾಹುರ್ವಿರೌಮ್ಯೇಷ ನಚ ಕಶ್ಚಿತ್ ಶೃಣೋತಿಮೇ
ಧರ್ಮಾದರ್ಥಶ್ಚ ಕಾಮಶ್ಚ ಸ ಕಿಮರ್ಥಂ ನಸೇವ್ಯತೇ?"

ಎಂಬ ವ್ಯಾಸಪ್ರಶ್ನೆ ಜಗತ್ತಿನಲ್ಲಿ ಹಾಗೇ ಉಳಿದುಕೊಂಡು ಬಂದುದರಿಂದ ಮಹಾತ್ಮಾವತಾರವನ್ನು ಇತಿಹಾಸ ಮಾಡಿಸಿತು. ವ್ಯಾಸೋಕ್ತವೂ ಗಾಂಧಿಯವರ ವಿಶ್ವಸ್ತತೆಯ ಅರ್ಥವ್ಯವಸ್ಥಾನೀತಿಯೂ ಒಂದೇ. ಅವರ ಕನಸು ನನಸಾದಾಗ, "ತತೋ ಯುದ್ಧಾಯ ಯುಜ್ಯಸ್ವ" ಎಂಬ ವ್ಯಾಸೋಪದೇಶವಿದ್ದೇ ಇದೆ. ಅದೇ ಸಾಮ್ಯವಾದದ ಅನುಯಾಯಿಗಳ ಆಪದ್ಧರ್ಮ. ಆಪತ್ಕಾಲವಾವುದೆಂಬುದನ್ನು ಆಪತ್ತೇ ನಿರ್ಣಯಿಸುತ್ತದೆ; ಅದು ಒಬ್ಬಿಬ್ಬರ (ಅಧಿಕೃತಾನಧಿಕೃತರ) ಘೋಷಣೆಯನ್ನವಲಂಬಿಸಿರದು.

ಅಂಥ ಯೋಧರ ತರಬೇತಿಗೂ ಗೀತೋತ್ತರ ಸಂದರ್ಭದ ಅರ್ಜುನನೇ ಆದರ್ಶ. ಕೇವಲ ಸಂಬಳದಾಳುಗಳು ಯೋಧರಲ್ಲ, ಯೋಧ ಸಹಾಯಕ ವಿಜ್ಞಾನಿಗಳೂ ಅಲ್ಲ—ಅವರ ಪದವಿಗಳು ನೂರಿದ್ದರೂ ಒಂದೇ, ಸಾವಿರವಿದ್ದರೂ ಒಂದೇ. ಕೇವಲ ಅಪಿತೃತ್ವದ ಬ್ರಹ್ಮಚರ್ಯವಲ್ಲ; ಪಿತೃ ಬ್ರಹ್ಮಚಾರಿತ್ವದ ಔಪನಿಷದಿಕ ಸತ್ಯವನ್ನು ಕೃಷ್ಣನಂತೆ, ಗಾಂಧಿಯವ

ರಂತೆ ಪಾಲಿಸಬಲ್ಲ ಅರ್ಜುನತೆಯೊಂದೇ ಆಭಾಸ ಭಾರತವನ್ನು ವ್ಯಾಸ ಭಾರತದ ಉಚ್ಚ ಸಾಂಸ್ಕೃತಿಕ ಪಕ್ಷದ ಮಟ್ಟಕ್ಕೇರಿಸಬಲ್ಲುದು.

ಅಲಸದೇರ್ ಮೆಕ್‌ಇಂಟೈರರಂಥವರು ಬಂಡವಾಳದ ಲಾಭ ಲೋಭದ ಅತಿರೇಕವು ಶೋಷಣೆಗಿಳಿದಾಗ ವಿಜ್ಞಾನ ತಾಂತ್ರಿಕ ನವನಿರ್ಮಾಣಗಳಿಂದ ಮತ್ತು ಯೋಗಕ್ಷೇಮ ಸರಕಾರ ಪದ್ಧತಿಗಳಿಂದ ಅಂಥ ಅತಿರೇಕವನ್ನು ಪರಿಹರಿಸಬಹುದೆಂದು ಹೇಳಿದ್ದು ದೃಷ್ಟಾಂತರಹಿತವಾದ ಸಾಮಾನ್ಯೋದ್ಗಾರ. ಅತಿರೇಕ, ಶೋಷಣೆ, ಪರಿಹಾರಗಳೆಂಬ ಪದಗಳ ಅರ್ಥಗಳು ಅಧಿಕಾರಪಟ್ಟದಲ್ಲಿರುವ ಆಯಾ ವಾದಿಗಳ ಸ್ವಕಪೋಲಕಲ್ಪನೆಗಳನ್ನು ಅವಲಂಬಿಸಿದ ವಾಸ್ತವಿಕತೆಯು ಆ ಈ ದೇಶಗಳಲ್ಲಿ ಕಂಡು ಬರುವುದು ಅದಕ್ಕೆ ಸಾಕ್ಷಿ. ಹಾಗೇ ಭಾರತದಲ್ಲಿರುವ ಅರೆಬಂಡವಾಳವು (ಸಮಾಜವಾದೀಯ ಸಮಾಜ ರಚನೆಯು ಮಿಶ್ರ ಆರ್ಥಿಕ ಸಿದ್ಧಾಂತವು) ಸಾಮ್ಯವಾದದ (ಅಥವಾ ಸಮಾಜವಾದದ) ವೈಫಲ್ಯವನ್ನು ತೋರಿಸಲೆಂದೇ ಹೂಡಿದ ಮಾಯಾನಾಟಕವಾಗಿ ಪರಿಣಮಿಸಿದೆ. ಮಾಯಾಸತ್ಯವು ಯಾವಾಗಲೂ ಒಂದು ಸತ್ಯಮಾಯೆ.

"ಅದ್ರೋಹೇಣೈವ ಭೂತಾನಾಮಲ್ಪದ್ರೋಹೇಣವಾ ಪುನಃ
ಯಾ ವೃತ್ತಿಃ ಸ ಪರೋ ಧರ್ಮಸ್ತೇನ ಜೀವಾಮಿ ಜಾಜಲೇ—

ಸಹಜೀವಿಗಳಿಗೆ ದ್ರೋಹ (ಮೋಸ, ಮಾಯೆ, ಕಪಟ, ವಂಚನೆಗಳ ಮೂಲಕ ಮಾಡುವ ಹಿಂಸೆ, ಪಾಪ, ಶೋಷಣೆ) ಮಾಡದೆ ಅಥವಾ ಅತ್ಯಲ್ಪ ಸಂಖ್ಯ ಸಂದರ್ಭಗಳಲ್ಲಿ ಆಪದ್ಧರ್ಮವಾಗಿ ಅತ್ಯಲ್ಪ ದ್ರೋಹ ಮಾಡಿ ಬದುಕುವ ವೃತ್ತಿಯು ಧರ್ಮ್ಯ" ಎಂಬ ಅಭಿಪ್ರಾಯ ತಳೆದ ತುಲಾಧಾರ ಪಾತ್ರದ ಮೂಲಕ ವ್ಯಾಸನು ಸಾರ್ವಜನಿಕರನ್ನು ಮೋಸಗೊಳಿಸುವ ರಾಜಕೀಯಾದಿ ಸರ್ವವೃತ್ತಿಗಳೂ ಹೇಯವೆಂದಿರುವುದು ಸ್ಪಷ್ಟ.

ಪ್ರಚಾರ ಸಾಧನಗಳ ಮೇಲೆ ಕಾಯಿದೆಯ, ದುಡ್ಡಿನ ಅಥವಾ ಎರಡರ ಮೂಲಕ ಪ್ರಭುತ್ವವನ್ನು ಪಡೆದ ಅಲ್ಪಸಂಖ್ಯ ಜನರು ಬದು

ಸಂಪ್ರದನ್ನು-ಅವಾಸ್ತವವನ್ನು ವಾಸ್ತವವೆಂದು-ಚಿರಕಾಲ ನಂಬಿಸಿ ತಮ್ಮ ಬೇಳೆಯನ್ನು ಬೇಯಿಸಿಕೊಳ್ಳಬಹುದಾಗಿದೆ. ಪ್ರಭುಗಳ ಮಾಯಾಪ್ರಚಾರ ಇದಕ್ಕೆ ಯಾವ ರಾಜನೀತಿಶಾಸ್ತ್ರವೂ ಮನ್ನಣೆ ಹೇಳಿಲ್ಲ. ಅದಕ್ಕೇ ಮಹಾಭಾರತವು ಧರ್ಮಸಂಸ್ಕಾರವನ್ನು ಪದೇ ಪದೇ ಒತ್ತಿ ಹೇಳಿದೆ. ಕೆಲ ಪಾಶ್ಚಾತ್ಯರು ಧರ್ಮದ ಆತ್ಮವಾದ ನೀತಿಯನ್ನು ಕಾಯಿದೆಗಿಂತ ಬಹಳ ಕಡಿಮೆ ಬೆಲೆಯದೆಂದು ವಾದಿಸಿದ್ದನ್ನು ಅಕ್ಷರಶಃ ನಂಬುವ ಶಿಕ್ಷಿತತೆ ಭಾರತದಲ್ಲಿ ರಾಷ್ಟ್ರಘಾತಕವಾಯಿತು. ಅದರಿಂದ ತ್ರಿಕರಣ ಶುದ್ಧಿ ಈಗ ದೇಶದಲ್ಲಿ ಬಹಳ ಕೆಳಮಟ್ಟಕ್ಕಿಳಿದು, ಅಧಿಕಾರ ಅಧಿಕ-ಅಲ್ಪ ಇರುವ ಎಲ್ಲ ವರ್ಗಗಳಲ್ಲೂ ವಂಚನಾವಿದಗ್ಧರು ಶೋಷಕರಾಗುತ್ತಿದ್ದಾರೆ. ವಕೀಲರ ವಾದಬಲವನ್ನೇ ಅವಲಂಬಿಸಿದ ಕಾಯಿದೆಯು ದುಷ್ಟಶಿಕ್ಷೆಗೆ ಮತ್ತು ಶಿಷ್ಟ ರಕ್ಷಣೆಗೆ ಸರ್ವದಾ ಸಮರ್ಥವೆನ್ನಿಸಲಿಲ್ಲ. ಸಾಕ್ಷಿಗಳೂ ವಕೀಲರೂ ಪೋಲೀಸರೂ ನೌಕರರೂ ಅಧಿಕಾರಿಗಳೂ ಕಾರಕೂನರೂ ಕಾರ್ಯದರ್ಶಿಗಳೂ ಅಧಿಕ ಪ್ರಮಾಣದಲ್ಲಿ ಧನವಶ್ಯರಾದಾಗ ಕಾಯಿದೆಯನ್ನು ಯಾರು ಕಾಯುವವರು? ಇದು ಕಾಯಿದೆಬದ್ಧ ವ್ಯವಹಾರದ ಮಾಯೆ, ಆಭಾಸ, ತೋರಿಕೆ. ಧರ್ಮವು ಆತ್ಮಸಾಕ್ಷಿಯಾಗಿ ನಿಲ್ಲುವಂತಹ ಸಂಸ್ಕಾರವು ರಾಷ್ಟ್ರದಾದ್ಯಂತ ಎಲ್ಲರಿಗೂ ದೊರಕುವಂತಹ ಆಚಾರ, ವ್ಯವಹಾರ, ಭಾಷಣ, ಲೇಖನ, ಶಿಕ್ಷಣ, ಆಡಳಿತ, ಕೊಡು-ಕೊಳ್ಳು, ಉತ್ಪಾದನೆ-ವಿತರಣೆಗಳು ನಡೆಯುವಂತೆ ಯೋಜಿಸುವುದೊಂದೇ ಸರ್ವತ್ರ ತರಣೋಪಾಯ, ರಾಜಧರ್ಮದ ತಳಪಾಯ, ರಾಷ್ಟ್ರಶಕ್ತಿಯ ಆದಿ ಬುನಾದಿ—ಎಂಬುದು ವ್ಯಾಸ ದರ್ಶನ. ಅಂಥ ಸಂಸ್ಕಾರವು ಶಿಥಿಲವಾದರೆ ಎಲ್ಲರ ಉಳಿದ ಎಲ್ಲ ಪ್ರಯತ್ನಗಳೂ ರಾಷ್ಟ್ರಕ್ಕೆ ರಾಷ್ಟ್ರತ್ವವನ್ನೂ ಪ್ರಜೆಗಳಿಗೆ ಶಾಂತಿ ಸುಖಗಳನ್ನೂ ದೊರಕಿಸುವಲ್ಲಿ ಬಹು ಬೇಗ ನಿಷ್ಫಲವಾಗುವವು. ಧರ್ಮವೆಂಬ ಹೆಸರಿನ ವ್ಯಾಪಕಾರ್ಥ ಅಂಥ ಯೋಜನೆಗಲ್ಲದೆ ಇನ್ನಾವುದಕ್ಕೂ ಹೊಂದದು. ಅದು ಮಹಾಭಾರತದ ಸತ್ವ. ಅದಕ್ಕೆ ವ್ಯಾಸನ ಪ್ರಕಾರ-ಅದ್ವಯಪ್ರಜ್ಞೆ, ಸಮತ್ವ, ದಮ, ಸಂಯಮ, ಕ್ಷಮೆ, ನಾಚಿಕೆ (ತನ್ನ ತಪ್ಪನ್ನು ತಾನೇ ಕಂಡುಕೊಂಡು ಸಂಕೋಚಪಟ್ಟುಕೊಳ್ಳುವುದು), ಸಹನೆ, ಅನಸೂಯೆ, ರಾಗ

ದ್ವೇಷರಹಿತತೆ, ಪರೋಪಕಾರಶೀಲ, ಧೃತಿ, ದಯೆ, ಅಹಿಂಸೆಗಳೆಂಬ ಗುಣಮಯಗಳು. ಲೌಕಿಕ ಕಾರಣವಿಲ್ಲದೆ ನಾಶದ ಭಯ ನಾಶವಾಗುವುದು, ನಿಷ್ಪಕ್ಷಪಾತತೆ, ಇಂದ್ರಿಯನಿಗ್ರಹ, ಭಾವಾವೇಶವಿಮುಖತೆ, ಪರರ ಅಲ್ಪದೋಷವನ್ನು ಮಹತ್ತರೆಂದು ಗ್ರಹಿಸದಿರುವಿಕೆ, ಆತ್ಮ ವಿಮರ್ಶಶೀಲ, ಸಹಿಷ್ಣುತೆ, ನಿರ್ಮತ್ಸರ, ನ್ಯಾಯಪರತೆ, ಸಾಮಾಜಿಕತೆ, ಸ್ಥಿರತೆ, ಅನುಕಂಪ, ಶೋಷಣವಿಮುಖತೆಗಳು ಮನಸ್ಸನ್ನು ಸಂಸ್ಕರಿಸುವವೆ (ಉಪಾಹಿತಗೊಳಿಸುವವೆ) ಅಂಥ ಮನಸ್ಸುಳ್ಳವರಿಂದ ಆಳಿಸಿಕೊಳ್ಳುವುದು ಲೋಕಜೀವನದ ಪರಮೋಚ್ಚ ಯೋಜನೆಯೆನ್ನಬಹುದು.

ಶೋಷಣೆಯ ಸೂಕ್ಷ್ಮರೂಪಗಳು

ಯುದ್ಧ, ಪೋಲೀಸು ಪ್ರಯೋಗಗಳು ಮಾತ್ರ ಬಲಾತ್ಕಾರ ಸಾಧನಗಳಲ್ಲ, ಸರಕಾರದ ಮೇಣಿಗೆ ಪಡೆದ ಪತ್ರಿಕೆಗಳನ್ನೇ ಜನರು ಓದುವಂತಾಗುವುದೂ ಅಸಹನೀಯ ಶೋಷಣೆ- ಎಂಬುದು ಬರ್ಟ್ರಂಡ್ ರಸ್ಸೆಲ್ಲನ ಅನುಭವಕ್ಕೆ ಬಂದ ಅಂಶ. ಸರಕಾರಿಬಲಾತ್ಕಾರದ ವಿಶ್ವರೂಪದರ್ಶನಕ್ಕೆ ಸಾವಕಾರಿಬಲಾತ್ಕಾರದ ವಿಶ್ವರೂಪದರ್ಶನ ಹೊಯ್ ಕೈ ಆಗಿರುವುದರ ಬಿಸಿಯು ರಸೆಲ್ಲನ ಅನುಭವಕ್ಕೆ ಸಾಕಷ್ಟು ಬಂದಂತಿಲ್ಲ. ಪತ್ರಿಕೆಯೊಂದೇ ಅಂಥ ಸಾರ್ವಜನಿಕಾಭಿಪ್ರಾಯವನ್ನು ಒಂದು ಗುಂಪಿಗೆ ಬೇಕಾದಂತೆ ರೂಪಿಸಿಕೊಳ್ಳುವ ಸಾಧನವಲ್ಲ. ಅಧಿಕೃತ ರಾಜಕೀಯ ಸ್ವಾರ್ಥಿಗಳು ಹೇಳಿ ಬರೆಯಿಸುವ ಮತ್ತು ಹೇರಲಾಗುವ ಪತ್ಯಗಳು, ಬರೆದು ಮಾರಿಸಲಾಗುವ ಪುಸ್ತಕಗಳು, ಮಾಡಿಸಲಾಗುವ ಸಾರ್ವಜನಿಕ ಭಾಷಣಗಳು, ಮತ್ತು ಹೇರಲಾಗುವ ಕಾಯಿದೆ, ಸಂಸ್ಥೆ, ನಿಯಮ ಮುಂತಾದವು ಬಹುಸಂಖ್ಯ ಮುಗ್ಧರನ್ನು ರಾಜಕೀಯ ವಶೀಕರಣಕ್ಕೆ ತುತ್ತಾಗಿಮಾಡುವ ಅಭ್ಯಾಸ ಎಂದಿನಿಂದಲೂ ನಡೆದು ಬಂದುದು; ಅದರಿಂದ ಅದು ಅತಿಯಾಗಿ ರೂಢಿಯಲ್ಲಿರುತ್ತದೆ. ಅಜ್ಞಪ್ರತಾರಣವನ್ನು ತಿಳಿದೋ ತಿಳಿಯದೆಯೋ ವಿಜ್ಞಾನಿಗಳೂ ಮಾಡುತ್ತಾರೆ, ಎಂಜಿನಿಯರರೂ ಮಾಡುತ್ತಾರೆ, ವೈಜ್ಞಾನಿಕ ತತ್ವಜ್ಞಾನಿಗಳೆಂಬವರೂ ಮಾಡುತ್ತಿದ್ದಾರೆ-

ಎಂಬುದು ಸಿ. ಇ. ಎಂ. ಜೋಡನ "ಆಧುನಿಕ ವಿಜ್ಞಾನದ ತಾತ್ವಿಕ ಮುಖಗಳು" ಎಂಬ ಗ್ರಂಥದಲ್ಲಿ ಸ್ಪಷ್ಟವಾಗಿ ತೋರಿಸಲ್ಪಟ್ಟಿದೆ. ಜಾತಿಬಹಿಷ್ಕಾರ, ವ್ಯಕ್ತಿ-ಗೌರವ, ಗ್ರಂಥಗೌರವಗಳು ಕೇವಲ ಧಾರ್ಮಿಕ, ಮತೀಯ, ಪೌರಾಣಿಕಪ್ರಪಂಚಕ್ಕಷ್ಟೇ ಮೀಸಲಾಗಿಲ್ಲ. ಅಧಿಕೃತಾನಧಿಕೃತ ಸಾರ್ವತ್ರಿಕತೆ ಬಂಡವಾದೀಯ-ಸಾಮ್ಯವಾದೀಯ ರಾಷ್ಟ್ರಗಳೆರಡರಲ್ಲೂ ಬಲಿಷ್ಠ ಅಲ್ಪರ ಸ್ವಾರ್ಥಕ್ಕಾಗಿ ಅಪಸತ್ಯ, ಅಪಸೂತ್ರ, ಅಪಸಿದ್ಧಾಂತಗಳನ್ನೋ—ಅಧಿಕೃತ ಅಲ್ಪಸಂಖ್ಯರ ಸ್ವಾರ್ಥಕ್ಕೆ ಅನುಕೂಲವಾಗುವ ವ್ಯಾಖ್ಯಾನದ ಮೂಲಕ ಸತ್ಯ, ಸುಸೂತ್ರ, ಸುಸಿದ್ಧಾಂತಗಳನ್ನೋ- ಸಂಸ್ಥೆ ಹಾಗೂ ವ್ಯಕ್ತಿಗಳ ಮೂಲಕ ಪ್ರಚುರಪಡಿಸುವ ಪ್ರಯೋಗವು ಅಹಿಂಸಾತ್ಮಕ, ನಾಗರಿಕ, ಸುಸಂಸ್ಕೃತ ಪದ್ಧತಿ ಎಂದು ವ್ಯಾಸಭಾರತ ಒಪ್ಪದು. ಅನ್ಯಾಯ-ನ್ಯಾಯ, ಸತ್ಯ-ಅಸತ್ಯ, ಉಪಕಾರ-ಅಪಕಾರಗಳನ್ನು ನಿರ್ಣಯಿಸುವ ಮಾನವಪರಂಪರಾಗತವಾದ ಮೂಲಭೂತವಿಶ್ವಸಾಮಾನ್ಯಧರ್ಮಗಳನ್ನೂ ಯದ್ವಾ ತದ್ವಾ ಪ್ರಶ್ನಿಸುವ ಅಪವೈಜ್ಞಾನಿಕತೆ ಆತ್ಮಜ್ಞಾನರಹಿತವೂ ಜನರಲ್ಲಿ ಆತ್ಮನಾಶಬುದ್ಧಿಯನ್ನು ಬಿತ್ತುವಂಥದೂ ಆಗಿದೆ.

ಸಂಶಯ ಮತ್ತು ಧೈರ್ಯ

"ನಿತ್ಯಸಂಶಯಘನರಾಗಿಯೂ ಜನರು ಪ್ರಾಮಾಣಿಕ ವೀರತೆಯಿಂದ ಜೀವನದ ಸಮಸ್ಯೆಗಳನ್ನು (ಪಲಾಯನ ಸೂತ್ರವನ್ನು ವರಿಸದೆ) ಎದುರಿಸಬೇಕು" ಎಂಬಂಥ ಸಂದೇಶಗಳನ್ನು ಜಗತ್ತಿಗೆ ಸಾರುವ ರಸೆಲ್ಲನು ಗಣಿತಜ್ಞರಷ್ಟೇ ಆಗಿರಬಲ್ಲರಲ್ಲದೆ, ಜೀವನ ಸತ್ಯಜ್ಞರಾಗಿರಲಾರರು. ಸಂಶಯವು ಧೃತಿಹೀನತೆಯ ಲಕ್ಷಣ. ಧೃತಿಯು ಧೈರ್ಯಮೂಲ. ಧೈರ್ಯವು ತ್ರಿಕರಣಗಳ ಸರ್ವವ್ಯಾಪಾರಗಳಿಗೂ ಪ್ರೇರಕವಾದ ಉತ್ಸಾಹ, ಕಾರ್ಯಶಕ್ತಿ. ಹೃದ್ಬುದ್ಧಿಗಳ ವ್ಯಾಪಾರಗಳ ಪ್ರತ್ಯೇಕೀಕರಣವು ಜೀವನದಲ್ಲಿ ಎಂದೂ ಪರಿಪೂರ್ಣತೆಯನ್ನು ಆದ್ಯಂತವಾಗಿ ಕಾಣಲಾರದು; ಕಂಡೀತೆಂಬ ಸಾಧ್ಯತೆಯ ಕಲ್ಪನೆಯೊಂದು ಮೋದಕೊಂಬು-ಎಂಬುದನ್ನು ವಿಲ್‌ಡ್ಯೂರಾ ತೋರಿಸಿದ್ದಾನೆ.

ವಿಚಾರಾತೀತವಾದದ್ದೇ ವಿಚಾರ-ಅವಿಚಾರಗಳ ತಂದೆ, ಜೀವ-ಜಡಗಳಿಗೆ ಮೀರಿದ್ದೇ ಜೀವ-ಜಡಗಳ ಜನಕ, ಸದಸತ್ತುಗಳನ್ನು ಒಳಹೊರಗೂ ವ್ಯಾಪಿಸಿರುವ ಪದಾರ್ಥವೇ ಸದಸದ್ಭಾವಗಳು ನಮ್ಮ ಪ್ರತ್ಯಕ್ಷ, ಅನುಮಿತಿ, ಉಪಮಿತಿ, ಶಾಬ್ದ ಎಂಬ ಚತುರ್ವಿಧ ಅನುಭವಕ್ಕೆ ಗೋಚರವಾಗುವಂತೆ ಮಾಡುವ ಮೂಲ—ಎಂಬುದನ್ನು ಜೀವನವೇ ಪ್ರಮಾಣಿಸಿ ತೋರಿಸುತ್ತದೆ. ಮನೋವಿಜ್ಞಾನದ ಅತ್ಯಾಧುನಿಕ ಮಹಾವಕ್ತಾರನಾದ ಕಾರ್ಲ್ ಜಿ. ಯುಂಗ್ ಇದಕ್ಕೆ ಸಾವಿರ ತರ್ಕಸಮರ್ಥನೆಗಳನ್ನೂ ಪ್ರಯೋಗವೈಜ್ಞಾನಿಕ ನಿದರ್ಶನ ಸಿದ್ಧವಾದ ಸಾಕ್ಷಿಗಳನ್ನೂ ತನ್ನ ಗ್ರಂಥಗಳಲ್ಲಿ ವಿಸ್ತಾರವಾಗಿ ಬರೆದಿದ್ದಾನೆ.

ಬುದ್ಧಿಯು ಮುಂಮಿದುಳಿನ ಕೃತ್ಯವೆಂಬಷ್ಟೇ ಅರ್ಥವನ್ನು ಆಧರಿಸುವವರ ಅರ್ಥವು ಆ ಮಿದುಳಿನ ಕೃತ್ಯಗಳಷ್ಟೇ ನಶ್ವರ, ತಾತ್ಕಾಲಿಕ, ಕಾಲ್ಪನಿಕ—ಆದ್ದರಿಂದ ಚಿರಸ್ಥಾಯಿಯಾದ ಯಾವ ಕಾರ್ಯ, ಮೌಲ್ಯ, ಅನುಭವಗಳ ಬಗೆಗೂ ಅದು (ಸಮವ್ಯಾಪ್ತಿ ಹೀನತೆಯದೆಸೆಯಿಂದ) ತೀರ್ಮಾನ ಕೊಡಲಾರದು. ಅವಿಚಾರ, ಜಡ, ಅಸತ್ ಎಂಬ ಗುಣಗಳನ್ನುಳ್ಳ ಪದಾರ್ಥಗಳು (ದ್ರವ್ಯಗಳಲ್ಲವಾಗಿರಬಹುದು) ಲೋಕದಲ್ಲಿರುವುದು ಪ್ರತ್ಯಕ್ಷ-ವಿಜ್ಞಾನಗಳೆರಡಕ್ಕೂ ಗೊತ್ತಿರುವ ಸಂಗತಿ. ಹಾಗೇ ಅವೆಲ್ಲವನ್ನೂ ಸಂಪೂರ್ಣವಾಗಿ ಅಪಕಾರಿಗಳೆಂದು ತ್ಯಜಿಸಲೂ ಬರುವುದಿಲ್ಲ —ಎಂಬುದೂ ಇಂದ್ರಿಯ-ವಿಜ್ಞಾನ ಪ್ರಧಾನರಿಬ್ಬರಿಗೂ ಗೊತ್ತಿದೆ. ತದಿತರರಾದ ವ್ಯಾಸಾದಿಗಳಿಗೆ ಅವೆಲ್ಲವೂ ಸರ್ವತ್ರ ಸದಾ ಉಪಕಾರಿಗಳೆಂದು ಗ್ರಹಿಸಲು ಸಾಧ್ಯವಿಲ್ಲವೆಂಬುದರಂತೆಯೇ ವಿಶಿಷ್ಟ ದೇಶ-ಕಾಲ-ಸಂದರ್ಭಗಳಲ್ಲಿ ಉಪಯುಕ್ತ ಅತ್ಯುಪಯುಕ್ತ ಎಂಬುದು ಗೊತ್ತು; ಅಷ್ಟೇ ಅಲ್ಲ; ವಿಚಾರ, ಜೀವ, ಸತ್ ಪದಾರ್ಥಗಳೂ ಅವುಗಳ ಕಲ್ಪನೆಗಳೂ ವಿಶಿಷ್ಟ ದೇಶ-ಕಾಲ-ಸಂದರ್ಭಗಳಲ್ಲಿ ನಿರುಪಯುಕ್ತವಾದದ್ದುಂಟು!

ವ್ಯಾಸಗ್ರಾಸ

ವ್ಯಾಸಗ್ರಾಸವಾಗಿರುವ ಆಧುನಿಕ ತತ್ವಜ್ಞಾನಿಗಳಲ್ಲಿ ಬರ್ಟ್ರೆಂಡ್ ರಸೆಲ್ ಒಬ್ಬ. ಆತನ ಪೂರ್ವಗ್ರಹಗಳನ್ನು ಮೊದಲು ಹೇಳಿದರೆ ಇತರರ

ಆಧುನಿಕ ಪೂರ್ವಗ್ರಹಗಳ ವಿಸ್ತಾರವನ್ನಿಲ್ಲಿ ಕಡಿಮೆ ಮಾಡಬಹುದು. ಭೌತಶಾಸ್ತ್ರೀಯ ಗಣಿತ ಮತ್ತು ಶರೀರಶಾಸ್ತ್ರಗಳ ಆಧುನಿಕ ನಿಗಮನಗಳು ಆತನ ಶ್ರುತಿ. ಮೊದಲನೆಯದರ ಮೂಲ ಕಲ್ಪನೆ "ದೇಶ-ಕಾಲ" ಎಂಬುದು. ಅದು ಅಮೂರ್ತ ಹಾಗೂ ಪ್ರತೀಕ ಲಕ್ಷ್ಯವೆಂಬುದೇ ರಸೆಲ್ಲನ ನಂಬಿಗೆ. ಮನುಷ್ಯರಿಗಾಗುವ ಬಾಹ್ಯಪ್ರಪಂಚದ ಜ್ಞಾನವೆಲ್ಲವೂ ಅಂಥದೇ ಎಂದಿದ್ದಾನೆವ. ಅಂದರೆ ಬಾಹ್ಯ ಪ್ರಪಂಚದ ಇಂದ್ರಿಯ ಗ್ರಾಹ್ಯತೆಗೆ ಬೆಲೆ ಬಹಳ ಕಡಿಮೆ, ಭೌತಶಾಸ್ತ್ರೀಯ ಗಣಿತ ಗ್ರಾಹ್ಯತೆಗೆ ಬಹಳ ಬೆಲೆ ಹೆಚ್ಚು—ಅದೇ ಪರಮ ಸತ್ಯ—ಬಯಕೆ, ಭಾವನೆಗಳಿಗೆ ಸಂಬಂಧಿಸದ, ಆದ್ದರಿಂದಲೇ ಶುದ್ಧವಾದ, ಜ್ಞಾನ. ದೇಶ (ಅಥವಾ ಅವಕಾಶ)ವೂ ಕಾಲವೂ ಪಾರಿಮಾಣಿಕ (ಅಳತೆಯ ಜಾತಿಗೆ ಸೇರಿದಂಥವು). ದೇಶಕ್ಕೆ ಉದ್ದ, ಅಗಲ, ಎತ್ತರಗಳೆಂಬ ಮೂರು ಜಾತಿಯ ಅಳತೆಗಳಿದ್ದರೆ, ಕಾಲವೆಂಬುದಕ್ಕೆ ಒಂದೇ ಒಂದು ಅಳತೆ ಇದೆ; ಜಗತ್ತಿಗಿರುವುದು, ಹೀಗೆ, ನಾಲ್ಕು ಅಳತೆಗಳು. ಮಿಂಕೊವ್‌ಸ್ಕಿ, ಆಲ್ಬರ್ಟ್ ಐನ್‌ಸ್ಟೀನ್, ಉಕ್ತ ವಿಚಾರದ ಜನಕರು.

ದೇಶದಲ್ಲಿ ಘಟನೆಗಳೂ ವಸ್ತುಗಳೂ ಇವೆ, ಕಾಲದಲ್ಲಿ ಬದಲಾವಣೆಗಳೂ ಚಲನೆಗಳೂ ಇವೆ. ದೇಶ-ಕಾಲವೆಂಬುದೊಂದು ಸಾಮಾನ್ಯರಚನೆ. ನಾಲ್ಕು ಅಳತೆಗಳನ್ನುಳ್ಳ ಈ ಜಗತ್ತಿನ ಘಟನೆಗಳ ಸಂಬಂಧದಿಂದ ಅದು ನಿಷ್ಪಷ್ಟವಾಗುತ್ತದೆ. ದೇಶ-ಕಾಲಗಳ ಒಂದುತನದ ದೆಸೆಯಿಂದ ಜಗತ್ತು ಮೂಲತಃ ಸ್ಥಾವರ—ಚಲಿಸದು, ಬದಲಾಯಿಸದು. ಅವು ಭಿನ್ನವೆಂದು ಎಣಿಸುವುದರಿಂದ (ಅಮೂರ್ತಕಲ್ಪನೆ ಮಾಡುವುದರಿಂದ) ಪದಾರ್ಥಗಳು ಚಲಿಸುವಂತೆಯೂ ಬದಲಾಯಿಸುವಂತೆಯೂ ತೋರುತ್ತವೆ.

ರಸೆಲ್‌ವಾದದ ಪ್ರಕಾರ ಈ ಜಗತ್ತು ಸಾರತಃ ಘಟನಾಮಯ; ಅಂದರೆ ದ್ರವ್ಯ, ಗುಣಗಳಿಗಿಂತ ಕರ್ಮವು ಹೆಚ್ಚು ಮೂಲಭೂತ. ದ್ರವ್ಯವು ಕರ್ಮಸಂಘಾತಧರ್ಮ, ಕರ್ಮಗಳ ಸಮಾಹರಣದ ರೀತಿ. ಕರ್ಮಸಮಾಹಾರವೊಂದಕ್ಕೆ ಭೌತಿಕ ಗುಣಗಳಿವೆ. ಅವು ನಮ್ಮ ಲಕ್ಷ್ಯವನ್ನು ಸೆಳೆಯುತ್ತವೆ. ಅಂಥ ಕರ್ಮ ಸಮಾಹಾರಗಳನ್ನು ಮನುಷ್ಯನು ಪ್ರತ್ಯೇಕಿಸಿ ಗ್ರಹಿಸುವುದು ಕೇವಲ ಇಷ್ಟಾನುಸಾರ.

ಮಾನವನ ಮನಸ್ಸು ಕಲ್ಪನಾ ಜಾಲದ ಸ್ವರೂಪ ಉಳ್ಳದ್ದು. ಅದಕ್ಕೆ ಭೌತಿಕವಾದ ಮುಮ್ಮೃದಳೇ ಆದಿ-ಮಧ್ಯ-ಅಂತ. ದ್ರವ್ಯ ಮತ್ತು ಮನ ಗಳ ಭೇದಗ್ರಹಣವು ಕೇವಲ ಅನುಕೂಲಸಿಂಧು ನ್ಯಾಯಕ್ಕೆ ಸೇರಿದ್ದು. ಆದುದರಿಂದ ಅವೆರಡೂ ಸಾರತಃ ಒಂದೇ. ಇದಕ್ಕೆ "ತಟಸ್ಥಾದ್ವೈತ" ವೆಂದು ವಿಲಿಯಂಜೇಮ್ಸ್ ಹೇಳಿದ ಹೆಸರು ಒಪ್ಪುತ್ತದೆ.

ಜಗತ್ತು ಕರ್ತೃ, ಕರಣ, ಅಧಿಕರಣಗಳಿಲ್ಲದ **ಕರ್ಮಮಯ** ಎಂಬ **ಪದದ ಅರ್ಥ**–ಎಂದು ರಸೆಲ್ ವಿವರಿಸುವುದು ಅವನ ಪ್ರಕಾರ ತತ್ತ್ವಜ್ಞಾನ ಅಥವಾ ಮೂಲಸತ್ಯಜ್ಞಾನ. ಇತರ ವಿವರಣೆಗಳು ಅವನ ಪ್ರಕಾರ (ಭೌತಶೋಧನಿಷ್ಠ) ಶುದ್ಧ ತಾರ್ಕಿಕವಲ್ಲ; ತರ್ಕಕ್ಕಿಂತ **ಹೆಚ್ಚಿನ** ಜ್ಞಾನ ಸಾಧನವು ಮನುಷ್ಯಜಾತಿಗಿಲ್ಲ. ಈ ಅಂಶಗಳು ಮೂಲಸತ್ಯಕ್ಕೆ ಇತ್ತೀಚೆ ಹೋದ ಅತಿ ನಿಕಟವರ್ತಿಯಾದ ಹೆಜ್ಜೆ; ಮುಂದೆ ವಿಜ್ಞಾನವು ನಿಕಟ ತರವಾದ ಹೆಜ್ಜೆಯನ್ನು ಇದೇ ತರ್ಕಾನುಸಾರ ಇಡಬಹುದು!

ತನ್ನ ಸತ್ಯಶೋಧವು ಬಯಕೆ-ಭಾವನೆಗಳಿಂದ ತುಂಬಿದ ವ್ಯವಹಾರ ಗಳಿಗೆ ಅತೀತವೆಂದೂ ಅದೇ ತತ್ತ್ವಶೋಧದ ನ್ಯಾಯವಾದ ಗುರಿಯೆಂದೂ ರಸೆಲ್ ಹೇಳುತ್ತಾನೆ. ಸತ್ಯಶೋಧದ ಬಯಕೆಯೊಂದೇ ತತ್ತ್ವಶೋಧಕನಿಗೆ ಗ್ರಾಹ್ಯವಾದದ್ದೆಂದು ಪಟ್ಟು ಹಿಡಿದಿದ್ದಾನೆ.

ಈ ಹೇಳಿಕೆಗಳಲ್ಲಿಯ ತರ್ಕದೋಷಗಳು ಇಂತಿವೆ: ದೇಶ-ಕಾಲಗಳು ಬೇರೆಯೆಂದು ತಿಳಿಯುವುದು ತಪ್ಪೆನ್ನುತ್ತದೆ ಸಾಪೇಕ್ಷತಾವಾದ. ಅವು ಒಂದೆಂದವರೆ ಜಗತ್ತು ತಟಸ್ಥ, ನಿಷ್ಕರ್ಮ, ನಿರ್ವಿಕಾರದ ಜಡ ಎಂಬ ಸಂಕೇತ ಗ್ರಾಹ್ಯ (ಪ್ರತೀಕ ವೇದ್ಯ) ಪದಾರ್ಥ. ರಸೆಲ್ಲನ ಧೋರಣೆ ಅದು. ಅದಕ್ಕೆ ಗುಣಿಸಿ ಭಾಗಿಸಿ ಕೂಡಿಸಿ ಕಳೆದು ತರ್ಕಮಾಡಲು ಬರುತ್ತದೆ. ಆ ತರ್ಕಕ್ಕೂ ಬಯಕೆ-ಭಾವನೆಗಳ ಅವಿಚಾರನಿಷ್ಠ ವರ್ತನೆಗೂ ಸಂಬಂಧ ವಿಲ್ಲ. ಆದರೆ ಅವನಿಗೆ ಐಚ್ಛಿಕವಾದರೂ ಚಂಚಲವಾದರೂ ವ್ಯವಹಾರ ನೀತಿನಿಷ್ಠವಾದ ಮಾನವತಾವಾದವು ಬಿಡಲಾರದ ಧರ್ಮ.

ಮಾನವ ವ್ಯವಹಾರವು ಸರ್ವಜನ ಸಾಧಾರಣವಾದ ಇಂದ್ರಿಯನಿಷ್ಠವಾದ ಮನೋವೈಯಿಕ ವ್ಯಾಪಾರ, ಸುಖ ದುಃಖ ಫಲದಾಯಕ. ಅದಕ್ಕೆ ರಸೆಲ್ಲನ ಜಡಾದ್ವೈತದ ಸಂಬಂಧ ಏನೂ ಇಲ್ಲ! ಜಡಾದ್ವೈತ ಜ್ಞಾನದ ಕುತೂಹಲವೆಂಬ ಭಾವನೆಗೆ ಅದು ತೃಪ್ತಿಯನ್ನುಂಟು ಮಾಡುತ್ತದೆ. ಇಂಥ ತೃಪ್ತಿಯು ಮನುಷ್ಯ ಜಾತಿಗೆ ಸರ್ವಸಾಧಾರಣವಾಗಿಲ್ಲ. ಅಂದಮೇಲೆ ರಸೆಲ್ಲನಂತಹ ಕುತೂಹಲಿಗಳಿಗಷ್ಟೇ ಅದು ಪ್ರಾಪಣೀಯ. ಜಾತಿಗಳೆಲ್ಲವೂ ಇರುವಾಗ ಅವುಗಳೆಲ್ಲವನ್ನೂ ಬಿಟ್ಟೆವೆಂದು ಹೇಳಿಕೊಂಡು ತಿರುಗುವವರ ಹೊಸ ಜಾತಿಗೇ ಪಂಥ ಸರಿಸದು. ಮೋಕ್ಷ (ಅಸೀಮ ಸ್ವಾತಂತ್ರ್ಯ) ರಸೆಲ್ಲನ ಗುರಿಯಲ್ಲ. ಹೀಗಿರುವಾಗ "ವಿಶಿಷ್ಟ ಸತ್ಯಕ್ಕಾಗಿ ವಿಶಿಷ್ಟ ಸತ್ಯ" ಎಂಬ ಪಂಥವನ್ನವ ಹಿಡಿದ ಹಾಗಾಗುತ್ತದೆ. ಅದೊಂದು ಕುರುಡ ಹಿಡಿದ ಬಡಿಗೆ, ತಾನು ಕಂಡದ್ದಕ್ಕೆ ಮೂರೇ ಕೋಡು ಎಂಬಂತಹ ಹಠ ಅಥವಾ ಅಂಧವಾದ, ಅವ್ಯವಹಾರ ವಿಚಾರ ಪ್ರಣಾಲಿ. ಏಕೆಂದರೆ, ಸ್ವ-ದೇಹೇಂದ್ರಿಯಗಳ ಅನುಭವಗಳನ್ನವ ಕಃಪದಾರ್ಥವೆಂದೂ ಭಾವಿಸುವ ಶಕ್ತಿಯನ್ನು ಜೀವನದಲ್ಲಿ ತೋರಿಸಿಲ್ಲ. ಆದುದರಿಂದ ಅವನದು "ಭೃಂಗದ ಬೆನ್ನೇರಿಬಂದ ಕಲ್ಪನಾ ವಿಲಾಸ" ಎನ್ನಿಸುತ್ತದೆ—ವೇದಾಂತಿಗಳಿಗೂ ವ್ಯವಹಾರಸ್ಥರಿಗೂ !

ರಸೆಲ್ಲನ ಘಟನಾ ಸ್ವರೂಪ

ಕಾಲದ ಅಳತೆಯು ಘಟನಾವಧಿಕ. ಜಗತ್ತು ಘಟನಾ (ಕರ್ಮ) ಮಯವಾದರೆ ಮತ್ತು ಘಟನೆಗಳ ಹಿಂಗಡಣೆ ವ್ಯಕ್ತ್ಯಧೀನವಾದರೆ, ವ್ಯಕ್ತಿಗಳು ಭಿನ್ನರಾಗಿರುವಾಗ ಅವರಲ್ಲಿ ಘಟನೆಗಳ ವರ್ಗೀಕರಣದ ಬಗ್ಗೆ ಐಕಮತ್ಯವೆಂದೂ ಸಿದ್ಧಿಸದು. ರಸೆಲ್ಲನೊಂದು ಪ್ರತ್ಯೇಕ ಘಟನೆಯಾದುದರಿಂದ ಅವನು ಇತರ ಮಾನವರಿಂದ ಸಂಪೂರ್ಣವಾಗಿ ವಿಶಿಷ್ಟನಾಗಬೇಕಾಯ್ತು. ವಿಶಿಷ್ಟನು ಸಾಮಾನ್ಯವೆಂದು ತನ್ನ ವಿಚಾರವನ್ನು ಹೇಳಲು ತರ್ಕದುಷ್ಟವಾಗಿ ಅನರ್ಹ. ಅವನ ಸಜೀವ ಚಟುವಟಿಕೆಗಳನ್ನು ಬೇಕಾದರೆ ಗ್ರಹಿಸಬಹುದು, ಬೇಡವಾದರೆ ಬಿಡಬಹುದು.

ಕಾಲ-ದೇಶಗಳು ವ್ಯವಹರತಃ ಭಿನ್ನ; ವ್ಯವಹಾರಾತೀತವಾದ ಗಾಣಿತಿಕ ಕಾಲದೇಶೈಕ್ಯದ ಘಟನಾತ್ಮಕ ಲೌಕಿಕಜ್ಞಾನವು ವ್ಯವಹಾರಕ್ಕೆ ಪ್ರತ್ಯಕ್ಷಾನುಭವದ ಮೌಲ್ಯಗಳ ದೃಷ್ಟಿಯಿಂದ ನಿರುಪಯೋಗಿ. ಅವ್ಯಾವಹಾರಿಕತೆಯನ್ನು ಲೌಕಿಕ ತತ್ವಜ್ಞಾನಕ್ಕೆ ಭೂಷಣವೆಂಬುದು ಅವ್ಯಾವಹಾರಿಕ. ವ್ಯವಹಾರಕ್ಕೆ ಅವ್ಯವಹಾರವು ಮೂಲಾಧಾರವಾದರೆ ತರ್ಕಕ್ಕೆ ಅಪತರ್ಕವು ಮೂಲಾಧಾರವಾಗಬೇಕಾಯಿತು. ವ್ಯವಹಾರಾತೀತ ತರ್ಕವೂ ಅದರ ಸಿದ್ಧಾಂತವೂ ಅವ್ಯಾವಹಾರಿಕ. ಕಾಲ-ದೇಶಗಳು ಏಕವೆಂಬ ಕಲ್ಪನೆ ಗಣಿತ ಶಾಸ್ತ್ರೀಯ; ಅವುಗಳ ಅವಿನಾಭಾವಿತ್ವವು ಅವುಗಳ ಐಕ್ಯವನ್ನು ಸಾಧಿಸಲಾರದು. ನಿದ್ರೆ, ಸ್ವಪ್ನ, ಜಾಗರಗಳು ಪ್ರತ್ಯಕ್ಷ ಸಿದ್ಧ ತರ್ಕಸಿದ್ಧ ಸಾಮಾನ್ಯ ವ್ಯವಹಾರ ಸತ್ಯಗಳು. ಅವೆಲ್ಲವೂ ಯಥೇಷ್ಟವಾಗಿ ವ್ಯಕ್ತಿಯು ಪುರುಷತಂತ್ರದಿಂದ ವಿಭಜಿಸಿಕೊಂಡ ಕರ್ಮಸಾಮಾಹಾರಗಳಾದರೆ, ಇಷ್ಟಾಂತರವನ್ನು ತಾಳಿ ಆತನು ಅವುಗಳ ಏಕತ್ವವನ್ನು ಸಾಧಿಸಿಕೊಳ್ಳಬಹುದೆಂದಾಗುತ್ತದೆ. ಅಂಥ ಸಿದ್ಧಿ ರಸೆಲ್ಲನಿಗೇ ಆಗಿಲ್ಲ! ಉಳಿದವರಿಗೆ?

ಕಾಲ-ದೇಶಗಳಿಗೆ ಇಂದ್ರಿಯ ಗ್ರಾಹ್ಯತೆ ಇಲ್ಲ. ಅವು ಇಂದ್ರಿಯ ದೃಷ್ಟ ಘಟನಾ ಸಮುದಾಯಗಳಲ್ಲಿ ಮಾನವ ಮನಸ್ಸು ಕಲ್ಪಿಸಿಕೊಳ್ಳುವ ಕಲ್ಪನೆಗಳು. ಅವುಗಳ ಸಂಬಂಧಗಳೂ ಕಲ್ಪನಾವೇದ್ಯ. (ಕಲ್ಪನಾಶಕ್ತಿಯು ಕಲ್ಪಿಸಿದ ಸಾಮಾನ್ಯ ಭಾವಾಭಾಸ). ಕಲ್ಪನಾಶಕ್ತಿಯು ಜಗತ್ತೆಂಬ ಇಡಿ ಕರ್ಮವೊಂದನ್ನು ವಿಂಗಡಿಸಿದರೇನೇ ಅದಕ್ಕೆ ಕಾರ್ಯಕಾರಣಗಳ ಭೇದ ಸಂಬಂಧ ಅವಗತವಾಗಿ ಜೀವನ ವ್ಯವಹಾರ ಸುಗಮವಾಗುವುದು. ದೇಶ-ಕಾಲಗಳು ಕಾರಣ, ಘಟನೆಯು ಕಾರ್ಯ. ಕಾರ್ಯ ಕಾರಣಾದ್ವೈತವು ಕಾರ್ಯ-ಕಾರಣಗಳೂ ಯಥೇಷ್ಟವಾಗಿ ವ್ಯಕ್ತಿಯು ವಿಂಗಡಿಸಿಕೊಂಡ ಪದಾರ್ಥಗಳಾದುದರಿಂದ ಲೋಕಪ್ರಜ್ಞೆ ಕಾಲ್ಪನಿಕ; ಆದುದರಿಂದ ರಸೆಲ್ಲನು ಕಾಲ-ದೇಶ ಸಮನ್ವಿತವಾದ ಘಟನೆ (Event) ಜಗತ್ಸಾರ (world stuff) ಎಂದು ನಿರ್ಧರಿಸಿರುವುದು ಅವನ ಜಡಾದ್ವೈತ ಕಲ್ಪನೆಯೊಡನೆ ಹೊಂದದು: ಸಮನ್ವಯವು ಅಭೇದವಲ್ಲ, ಅದ್ವೈತವಲ್ಲ. ಜ್ಞಾತೃ, ಜ್ಞಾನ, ಜ್ಞೇಯಗಳೆಲ್ಲವೂ ಬೇಕಾದರೆ ವಿಂಗಡಿಸಿಕೊಳ್ಳಬಹುದಾದ ಭೇದವಾದರೆ ಜಡಬಹು-

ದಾದ ಘಟನೆಗಳು, ಕಾರ್ಯಗಳು, ಬದಲಾವಣೆಗಳು, ಚಲನಗಳು! ಯಾವ ಘಟನೆಯೂ ವೈಯಕ್ತಿಕವಲ್ಲ, ವ್ಯಕ್ತಿಜ್ಞಾನ ನಿರಪೇಕ್ಷ, ಅವೈಯಕ್ತಿಕ, ಜಡ, ವಿಕಾಸಶೀಲ—ಎಂದಾಗ ಮತ್ತು ವಿಜ್ಞಾನದತ್ತವಾದ ರಚನಾಗುಣಗಳಾದ ಘನತ್ವ, ವಿಸ್ತರಣಶೀಲ, ಆಕಾರ, ಚಲನ, ವಿಶ್ರಾಂತಿ, ಸಂಖ್ಯೆಗಳು ವಸ್ತುಗಳ (ಘಟನೆಗಳ ಅಲ್ಲ) ಗುಣಗಳೆಂದಾಗ, ವಸ್ತುಗಳೆಲ್ಲವೂ ಘಟನಾ ಸ್ವರೂಪದವುಗಳೆಂದಾಗ ಅವು ಕರ್ಮಗುಣಗಳಾದಾವಲ್ಲದೆ ವಸ್ತುಗುಣಗಳಾಗಲಾರವು. ಕರ್ಮಕ್ಕೆ (ಇಡಿಗಾಗಲಿ, ಬಿಡಿಗಳಿಗಾಗಲಿ) ಘನತ್ವಾದಿ ಗುಣಗಳಿವೆ ಎಂಬುದು ಅದರ ಸ್ಥಿರತೆಯ ಕಲ್ಪನೆಯನ್ನಾಧರಿಸುತ್ತದೆ; ಆದರೆ ರಸೆಲ್ಲನ ಪ್ರಕಾರ ಒಂದು ಕರ್ಮಸಂಘಾತವು ಪ್ರತಿಕ್ಷಣ ಪರಿವರ್ತಿ. ಈಗ ಇದ್ದದ್ದು ಇನ್ನೊಂದು ಸೆಕೆಂಡಿನ ಅತಿ ಚಿಕ್ಕ ಭಿನ್ನರಾಶಿ ಕಾಲಾವಧಿಯಲ್ಲಿ ಇನ್ನೊಂದಾಗುತ್ತದೆ! ಇದು ವರ್ಣನೀಯವಾದ ಅನಿರ್ವಚನೀಯತಾವಾದ; ಅನರ್ಥಕ ಅಥವಾ ವ್ಯರ್ಥಕ ಎನ್ನಿಸುವ ವಾಗ್ವಾದ! ಆದುದರಿಂದ ಜಾನ್ ಡ್ಯೂಯಿ ಹೇಳಿದಂತೆ ಅದು ಲಾರ್ಡ್ ಮನೆತನದವರ ಸೋಮಾರಿ ಕಲ್ಪನಾ ವಿಲಾಸವಲ್ಲದೆ ತತ್ವಶಾಸ್ತ್ರೀಯವಾದ ಸತ್ಯ ಸಂಸ್ಥಾಪನೆಯಲ್ಲಿ—ಆದಿಕ್ಕಿನಲ್ಲಿ ಮಾಡಿದ ಯೋಗ್ಯ ಪ್ರಯತ್ನವೂ ಅಲ್ಲ! ರಸೆಲ್ಲನ ಪ್ರಕಾರ ಕಾರ್ಯವು ಜ್ಞಾನವಲ್ಲ, ಜ್ಞಾನವು ಕಾರ್ಯವಲ್ಲ, ಕಾರ್ಯಜ್ಞಾನವು ನೇರವಾಗಿ ಕಾರ್ಯಕಾರಿಯಲ್ಲ, ಜೊತೆಗೆ ಕಾರ್ಯ ಮತ್ತು ಅದರ ಜ್ಞಾನ ಎಂಬೆರಡೂ ಕ್ಷಣಭಂಗುರವಾದ ಮಾನವ ಮನಗಳಿಂದೊಡಗೂಡಿದ ಜಗದ್ವ್ಯಾಪದ ಕ್ರಿಯಾ ಸಂತಾನದ ಏಕಮೇವಾದ್ವಿತೀಯ "ಘಟನೆ"! ಸಂಖ್ಯೆಗಳಲ್ಲಿ ಒಂದನ್ನು ಇನ್ನೊಂದರಿಂದ ಗುಣಿಸಿ ಮೊದಲಿನ ಒಂದನ್ನು ಪಡೆವ ವಿಚಿತ್ರ ಪ್ರಯತ್ನವಿದು. ಇದರ ಯಾಂತ್ರಿಕತೆ, ನಿರ್ಜೀವತೆ, ಆಕಾರ್ಯ ಕಾರಿತ್ವಗಳು ಸ್ವಯಂ ಸ್ಪಷ್ಟ! ಈ ಗಣಿತವನ್ನು ಮುಂದಿನ ಗಣಿತವು ಖಂಡಿಸದೆ ಮುಂದುವರಿಸಿಕೊಂಡು ಹೋಗಿ ಜಗನ್ಮೂಲ ಸೂತ್ರವನ್ನು ಪತ್ತೆ ಹಚ್ಚುವುದೆಂಬುದು ದೃಷ್ಟಾಂತವಿಲ್ಲದ ಇಚ್ಛಾಚೋದಿತವಾದ ನಿರಾಧಾರ ಕಲ್ಪನಾಮೋಹ. ಇದನ್ನು ನಂಬಿ ಮಾನವನು ಮಾನವೀಯತೆಯನ್ನು ಅಳವಡಿಸಿಕೊಳ್ಳಲಾರ. ಇದರ ಅಮಾನವೀಯತೆಯು ಪೈಶಾಚಿಕತೆಯು ಪ್ರಕಾಶವುಳ್ಳದ್ದಲ್ಲ. ಅಪ್ರಕಾಶ ಸ್ವರೂಪದ

ಅಪಮಾನವೀಯ ವಾದವು ಕಷ್ಟ, ನಷ್ಟ, ಅನ್ಯಾಯಗಳಲ್ಲಿ ತೊಳಲುತ್ತಿರುವ ಜಗದ ಬಹುಸಂಖ್ಯಾತ ಜನರಿಗೆ ಯಾವ ಪರಿಹಾರವನ್ನೂ ಸೂಚಿಸದು. ಇದು ಸತ್ಯದ ಒಂದು ಆಭಾಸ; ಇದರ ಸೌಂದರ್ಯ-ಉಪಯೋಗ-ಒಳಿತುಗಳು ಸಂದಿಗ್ಧ.

ಜೈವಿಕ ಜ್ಞಾನ

ಜಗತ್ತು ಚಲನಾತ್ಮಕ, ಕ್ಷಣಭಂಗುರ, ಕರ್ಮಮಯ ಎಂದು ಹೇಳಿದರೆ ಆ ಚಲನಕ್ಕೊಂದು ಕಾರಣ ಬೇಕಾಯ್ತು. ಕಾರಣ ಹೇಳಿದಾಗ ಅದು ಸ್ವಾಭಾವಿಕ ಎನ್ನಬೇಕಾಯ್ತು. ಸ್ವಾಭಾವಿಕವಾಗಿ ಮೂಲತಃ ಒಂದೇ ಒಂದಾದ 'ಜಗತ್ತು' ಚಲನಾತ್ಮಕವೆಂದು ತೋರುತ್ತದೆ; ನಿಜವಾಗಿ ಅದು ಅಚಲ ಎಂದಾಗ ಅದರ ಸತ್ಯ ಮತ್ತು ಅದರ ಆಭಾಸ ಎಂಬೆರಡನ್ನು ವ್ಯವಹಾರಿ ವಿಂಗಡಿಸಿ ತಿಳಿದುಕೊಳ್ಳಬೇಕಾಯ್ತು. ಆಭಾಸಕ್ಕೆ ಜ್ಞಾತೃವಿನ ಮನಸ್ಸು ಮತ್ತು ಅದರ ನೆರವಿಗರಾದ ಪಂಚೇಂದ್ರಿಯಗಳು ಕಾರಣವೆಂದರೆ ಈ ಮನಃ ಪರಿವಾರವನ್ನೂ ಇತರ ಬಾಹ್ಯ ಜಗತ್ತಿನಿಂದ ಪ್ರತ್ಯೇಕಿಸಿದ್ದೂ ಅದೇ ಪರಿವಾರ ಎನ್ನಲಾಯ್ತು. ಒಂದನ್ನು ಹಲವೆಂದು ತಿಳಿದುಕೊಳ್ಳಲು ಕಾರಣವಾವುದು? ಆ ಕಾರಣವು ಭ್ರಮೆಯೋ ಕರ್ತೃ (ಜ್ಞಾತೃವು) ಭ್ರಮೆಯೋ ಜ್ಞಾನರೂಪದ ಜಗತ್ತಿನ ವೈವಿಧ್ಯವು ಭ್ರಮೆಯೋ ಜಗತ್ತಿನ ಮೂಲರೂಪವಾದ ಜಡಾದ್ವೈತವು ಭ್ರಮೆಯೋ? **ಜ್ಞಾತೃವೇ ಭ್ರಮೆಯಾದರೆ** ಜಡಾದ್ವೈತವಾದಕ್ಕೆ ಕೊನೆಯ ತಿಲತರ್ಪಣ ಬಿಡಬೇಕಾಗುತ್ತದೆ! ವೈವಿಧ್ಯಜ್ಞಾನಕಾರಣ (ಮನಃಪರಿವಾರ) ಭ್ರಮೆಯಾದರೂ ಹಾಗೆ! ಎಲ್ಲವೂ ವಿಕಾರ್ಯವಾದಾಗ ಅವವರ ಸತ್ಯತೆಯ ಕ್ಷಣಿಕತೆಗಳನ್ನು ವಿಭಜಿಸಿ ತಿಳಿದುಕೊಳ್ಳುವುದು ಭ್ರಮೆಯಾಗಿ ಹೋಗುತ್ತದೆ. ಈ ಕ್ಷಣಿಕ ಭ್ರಮೆ ತರಂಗಸಂತಾನದ "ವಿಜ್ಞಾನಗಳ" ಬೌದ್ಧತೆಯು ಇಂದ್ರಿಯ ಸಾಕ್ಷಿಗೆ ವಿರುದ್ಧ. ಜ್ಞಾತೃ-ಜ್ಞಾನ-ಜ್ಞೇಯಗಳ ಐಕ್ಯಸ್ವರೂಪವು ಪ್ರತ್ಯಕ್ಷದಿಂದ ಬಾಧಿತ. ಪ್ರತ್ಯಕ್ಷವನ್ನಾಧರಿಸದ ತರ್ಕ (ಅನುಮಿತಿ) ಕೇವಲ ಕಲ್ಪನಾವಿಲಾಸ. ಆದುದರಿಂದ ದೇಶ-ಕಾಲಾದ್ವೈತದ ಅಚಲ ಜಡಸ್ವರೂಪವು ಜಾಗ್ರತ್-ಸ್ವಪ್ನ-ಸುಷುಪ್ತ

ಮನಸ್ಸಿಗೆ (ಪ್ರಜ್ಞೆಗೆ) ಗೋಚರವಾಗುವುದಿಲ್ಲ. ಇನ್ನು ತುರೀಯವಾದ ಯೋಗಪ್ರಜ್ಞೆ ರಸೆಲ್ಲನ ಪ್ರಕಾರ ತರ್ಕಬಾಹಿರ. ಅಂದ ಮೇಲೆ ಗಣಿತ ತರ್ಕವು ಕೇವಲ ಗಾಣಿತಿಕ ಸತ್ಯ. ಅನುಭವದ ಸಾರಭಾಗವಿರುವುದು ಚೇತನಕ್ರಿಯೆಯಲ್ಲಿ; ಚೇತನವು ಕೇವಲ ಕಲ್ಪನಾಮಯವಲ್ಲ; ಹಾಗಾ-ಗಿದ್ದರೆ ಸುಖದುಃಖಗಳ ಬಗ್ಗೆ ಮನುಷ್ಯ ಅನುಕೂಲ-ಪ್ರತಿಕೂಲ ಅನುಕ್ರಿಯೆಗಳನ್ನು ತೋರಿಸುತ್ತಿದ್ದಿಲ್ಲ. ತರ್ಕಪ್ರಜ್ಞಾವ್ಯಾಪೃತನಾದ ಮನುಷ್ಯನು ತನ್ನ ಪ್ರಾಣಶಕ್ತಿಯ ಫಲವಾದ ಭಾವನಾತರಂಗಗಳ ಸತ್ಯತೆಯ ಪ್ರಾಧಾನ್ಯವನ್ನೊಪ್ಪಿಕೊಂಡಲ್ಲದೆ ಅವನಿಗೆ ಜಗತ್ತಿಗೆ ಮಾನವತಾವಾದಿ ಯಾವ ನೀತಿಯನ್ನು ಹೇಳಲೂ ಕಾರಣ ದೊರಕದು. ಬುದ್ಧಿಸತ್ಯ-ಭಾವನಾಸತ್ಯಗಳಿಗೆ ಸಂಬಂಧವಿಲ್ಲವೆಂಬ ವಾದವು ಐನ್‌ಸ್ಟೀನನ ಸರ್ವಸಾಪೇಕ್ಷತಾವಾದವನ್ನು ತತ್ವಶಾಸ್ತ್ರೀಯವಾಗಿ ಒಪ್ಪಿಕೊಂಡವನಿಗೆ ವಿರುದ್ಧವಾಗುತ್ತದೆ! ಅಂಥ ಇಲ್ಲದ ಸಂಬಂಧಗಳನ್ನು ಕಲ್ಪಿಸಿ ಜಗತ್ತಿನ ಸತ್ಯದಬಗ್ಗೆ ಪ್ರಾಚೀನ ಮಧ್ಯಯುಗೀನ ಯೂರೋಪೀಯ ತತ್ವಜ್ಞಾನಿಗಳೆಲ್ಲರೂ ಅಪತರ್ಕಮಾಡಿದರೆಂಬ ರಸೆಲ್ಲನ ಧಾರ್ಷ್ಟ್ಯವು ಅವನ ಇಚ್ಛಾವಿಲಾಸವಷ್ಟೇ ಆಗುತ್ತದೆ. ಈ "ದಂಕರೀಸೋಕಾ ಯುದಾ"ವನ್ನು ನಂಬಿದ ಆಧುನಿಕತೆಯು ವೈಜ್ಞಾನಿಕತೆ-ವಸ್ತುನಿಷ್ಠತೆಗಳ ಶಪಥಗಳ ಧಾರ್ಷ್ಟ್ಯ ಇಷ್ಟೇ. ಇದೊಂದು ಹೊಸಬಗೆಯ "ಅಜೆಹಾಕಿ" ಹೇಳುವರೀತಿ-ಅಷ್ಟೆ.

ವ್ಯಾಸನ ಚೈತನ್ಯಾದ್ವೈತವು ಚೈತನ್ಯಕ್ಕೆ (೧) ಕಾರ್ಯ ಕಾರಣ (೨) ಅಕಾರ್ಯ ಕಾರಣ, (೩) ಅಕಾರಣ ಕಾರ್ಯಗಳನ್ನು ತೋರಿಸುವ ಸಂಕಲ್ಪಶಕ್ತಿಯನ್ನು ಆಧರಿಸಿರುವುದರಿಂದ ಅದು ವಿವಿಧ ಮಾದರಿಗಳ ಉಪಾಧಿತ ಸ್ಥಿತಿಗಳಲ್ಲಿ ಮಾನವ ಪ್ರಜ್ಞೆ(ಮನಃಪರಿಣಾಮ)ಯ ವ್ಯವಸ್ಥೆಗಳನ್ನು ವಿವಿಧ ದೇಶಕಾಲಾವಧಿಗಳ ಅವಚ್ಛೇದಕ ನಿರ್ಮಾಣದಿಂದ ಅವುಗಳಲ್ಲಿಯೂ ಸಮರ್ಥಿಸುತ್ತದೆ. ಜಡ, ಜಡತರ, ಜಡತಮ ಹಾಗೂ ಸಚೇತನ ಜಡ. ಸಚೇತನತರ ಜಡ, ಸಚೇತನತಮ ಜಡ ಎಂದು ಮುಂತಾಗಿ ಮಾನವಾನುಭವವನ್ನು ವಿಂಗಡಿಸುವ ಸಂಕಲ್ಪಶಕ್ತಿಯು ಮಾನವನಿಗೆ ಆಚೈತನ್ಯ

ಕೊಟ್ಟಿದೆ ಎಂಬುದನ್ನು ಹೇಳುವುದು ತರ್ಕಶುದ್ಧವಾಗುತ್ತದೆ. ಹಾಗೇ ಚೈತನ್ಯವು ಸಂಕಲ್ಪಶಕ್ತಿಯುಕ್ತವೆನ್ನುವುದು ಪ್ರತ್ಯಕ್ಷ ನಿದರ್ಶನಗಳಿಂದ ಸಿದ್ಧ; ಜಡಕ್ಕೆ ಸಂಕಲ್ಪಶಕ್ತಿ ಇರುವುದು ಪ್ರತ್ಯಕ್ಷಬಾಧಿತ. ಪ್ರತ್ಯಕ್ಷ (ಇಂದ್ರಿಯಗ್ರಹೀತ ಸಂವೇದನೆ+ಸ್ಮೃತಿ+ಬುದ್ಧಿಕ್ರಿಯೆ) ದಂತೆಯೇ ಪರೋಕ್ಷ, ಅಪರೋಕ್ಷಗಳೂ ಮಾನವರಲ್ಲಿ ವಿವಿಧ ಸ್ಮೃತಿ (ಸಂಸ್ಕಾರ) ಉಳ್ಳವರಿಗೆ ವಿವಿಧವಾಗುವುದರ (ದ್ವೈತಾದ್ವೈತ ವಿಶಿಷ್ಟಾದ್ವೈತಗಳ) ಕಾರಣವು ಪರಬ್ರಹ್ಮವೆಂಬ ಚೈತನ್ಯದ ಅದ್ವಿತೀಯವಾದ ಮೂಲ ಸಂಕಲ್ಪಶಕ್ತಿಯಿಂದಲೇ ಎಂಬುದು ಕೂಡ ಸುಸಮನ್ವಿತ. ಜಗತ್ತಿನ ಅನುಭವಕ್ಕೆ ಕಾಲಪ್ರಜ್ಞೆ, ದೇಶಪ್ರಜ್ಞೆಗಳು ಅನಿವಾರ್ಯವಾದ (ಉಪಾಧಿತ) ಕಾಲ್ಪನಿಕ ಅವಚ್ಛೇದಕಗಳು. ಇವುಗಳ ಕಲ್ಪನಾಧೀನವು ಜೀವಿಗಳಲ್ಲಿ ವ್ಯಕ್ತಿವಿಶಿಷ್ಟವಾದ ವ್ಯಕ್ತಿನಿಷ್ಠವೂ ಸರ್ವವ್ಯಕ್ತಿಗಳಿಗೆ ಸಾಧಾರಣವಾದಾಗ ವಸ್ತುನಿಷ್ಠವೂ ಆಗುತ್ತದೆ. ವಸ್ತುನಿಷ್ಠತೆಗಿರುವ ಅನುಭವಿಕ ದಾರ್ಢ್ಯವು ವ್ಯವಹಾರದಲ್ಲಿ ವ್ಯಕ್ತಿನಿಷ್ಠತೆಗಿಲ್ಲವೆಂಬುದು ಅಬಾಧಿತ ಸಾಮಾನ್ಯಾನುಭವ.

ಮನೋವ್ಯಾಪಾರ ಮತ್ತು ತತ್ವಗ್ರಹಣ

ಇಚ್ಛೆ, ಭಾವನೆಗಳು ಅತ್ಯಂತ ಶೂನ್ಯಬುದ್ಧಿ (ಶೂನ್ಯಗ್ರಹಣ ಶಕ್ತಿ) ಯುಳ್ಳವುಗಳೆಂಬುದು ಮಾನಸಶಾಸ್ತ್ರ ಮತ್ತು ಅನುಭವ ಹಾಗೂ ಸಾಪೇಕ್ಷತಾ ತರ್ಕಗಳಿಗೆ ವಿರುದ್ಧ. ತಾರ್ಕಿಕ ಸತ್ಯತೆಯು ತರ್ಕಾನುಕೂಲಕ್ಕಾಗಿ ಮಾತ್ರ —ಎಂಬುದನ್ನು ವೈಶೇಷಿಕರ "ವಿಶೇಷ" ಪದಾರ್ಥದ ಕಲ್ಪನೆಯು ತೋರಿಸಿ ಕೊಟ್ಟಿದೆ. ಮನಸ್ಸಿನ ಕೃತ್ಯತ್ರಯವಿಭಾಗವು ತರ್ಕದ ಅನುಕೂಲ ಸಿಂಧುನ್ಯಾಯವನ್ನೇ ಆಶ್ರಯಿಸಿದೆ. ಸರ್ವತಂತ್ರ ಸ್ವತಂತ್ರವಾದ (ಸರ್ವಾರ್ಥತಃ ಪರಿಪೂರ್ಣವಾದ ನಿರುಪಾಧಿಕ ವ್ಯಾಪ್ತಿಯುಳ್ಳ) ಇಚ್ಛೆ, ಭಾವನೆ, ಬುದ್ಧಿಗಳ ಪದಾರ್ಥತ್ರಯದ ಕಲ್ಪನೆ ಕೇವಲ ತರ್ಕೋಪಕಾರಕ, ಜೀವನೋಪಕಾರಕವಲ್ಲ. ಎಲ್ಲ ತರ್ಕವೂ "ಪದಸ್ಯ ಅರ್ಥಃ ಪದಾರ್ಥಃ" ಎಂದೂ "ಅಭಿಧೇಯತ್ವಂ ಪದಾರ್ಥತ್ವಂ" ಎಂದೂ ಪ್ರಾರಂಭವಾಗುವುದರಿಂದ ಅದರ ಪದಸತ್ಯತೆ ಅತಿರೇಕಕ್ಕೆ ಹೋದಾಗ "ವಂಧ್ಯಾಪುತ್ರ"

ದಂಥ ಆಶ್ರಯವಾಸಿದ್ದ ಊಹೆಗಳಿಗೆಡೆಗೊಡುತ್ತವೆ. ಸರ್ವತಂತ್ರ ಸ್ವತಂತ್ರ ಸಂಕಲ್ಪಶಕ್ತಿಯುಳ್ಳ ಬ್ರಹ್ಮಚೈತನ್ಯದ ಆಶ್ರಯತ್ವವು ತರ್ಕಸಿದ್ಧವಲ್ಲ; ಆದರೆ ಅದನ್ನು ಬಿಟ್ಟು ಮಾಡುವ ತರ್ಕನಿರ್ಣಯಗಳು ಬಹಳವಾಗುವು-ದರಿಂದ ತ್ರಿಕರಣಗಳಲ್ಲಿ ಅರಾಜಕತೆಯು ಅವ್ಯವಸ್ಥೆಯುಂಟಾಗಿ ಅರ್ಜುನ ವಿಷಾದಯೋಗವೆಂಬ ಅತ್ಯಂತ ಹಾನಿಕರವಾದ ಮನೋವ್ಯಾಧಿಗೆ ಮಾನವ ತುತ್ತಾಗುವುದನ್ನು ತೀವ್ರವಾದ ಆಪತ್ಕಾಲಗಳು ಅವನಿಗೆ ಸಾಕ್ಷಾತ್ಕರಿಸಿ ಕೊಡುತ್ತವೆ. ಆಪತ್ತಿಲ್ಲದಾಗ ಎಲ್ಲರೂ ಕಲ್ಪನಾಸಂಪನ್ನರಾಗಿ "ಊಹೆ ಕೂಡಾ ಊಹಿಸಿಯೂ ತನ್ನ ತಾನೇ ನಂಬದು" ಎಂಬದ ಗೀತವನ್ನು ವಾದವೆಂದು ಜಲಾಯಿಸಬಹುದು. ಸಮಗ್ರ ಮನುಷ್ಯ ವ್ಯಕ್ತಿಗೆ (ಮನ, ಇಂದ್ರಿಯ ಸಮೇತವಾದ ದೇಹತ್ವವುಳ್ಳ ಅಹಂಕಾರಿಗೆ) ಅವುಗಳು ಅಸ್ತ-ವ್ಯಸ್ತವಾಗುವಂತೆಸಗುವ ಆಘಾತ ಉಂಟಾದಾಗ ಅವನ ಊಹೆಗಳ ಔದಾರ್ಯ, ವಿಸ್ತಾರ, ಜಟಿಲತೆ ಅಥವಾ ಸರಳತೆ, ಸಂಕೀರ್ಣತೆಗಳ ಪ್ರಚಾರಸತ್ಯ ವನ್ನು ಅವನೇ ಬಿಟ್ಟುಬಿಡಬೇಕಾಗುತ್ತದೆ!

ಪ್ರಪಂಚದಲ್ಲಿ—ಅತಿ ಅರ್ಥವೈಷಮ್ಯದ ದೆಸೆಯಿಂದ ಉಳ್ಳವರು, ಇಲ್ಲದವರೆಂಬ ವರ್ಗಗಳಿರುವ ವರೆಗೆ ಮಾರ್ಕ್ಸ್‌ವಾದದ ಸಾರ ಭೂತಾಂಶವು ಅಬಾಧಿತ; ಹಾಗೇ ಭೌತಿಕ ಆವರಣಗತವಾದ ಶಕ್ತಿಗಳ ಕೃಪೆಗೆ ಪಾತ್ರ ರಾದವರು, ಆಗದವರು ಎಂಬೆರಡು ವರ್ಗಗಳಿರುವವರೆಗೆ ಕಾಕದಂತಗ-ವೇಷಣ ತರ್ಕ ಮತ್ತು ವಾಸ್ತವಿಕ ತರ್ಕ ಎಂಬೆರಡೂ ಪ್ರಸ್ಥಾನಗಳು ನಿತ್ಯ ಶತ್ರುಗಳಾಗಿ ಉಳಿಯುವುವೆಂಬ ದೇವಾಸುರ ಸಂಪದ್ವಿಭಾಗದ ಗೀತಾವಾದವು ಅಬಾಧಿತ.

ನಿಗಮನ

ಸಮಾಜವ್ಯವಸ್ಥೆ, ರಾಜ್ಯವ್ಯವಸ್ಥೆ ಮತ್ತು ಲೋಕಸತ್ಯಗಳ ಬಗೆಗೆ ಹಿಂದಿನಿಂದ ಈ ವರೆಗೆ ನಡೆದ ವಿಚಾರ ಮಂಥನದಿಂದ ಕಂಡು ಬರುವ ಅಂಶಗಳನ್ನು ಸಂಗ್ರಹಿಸಿ ಚರ್ಚಿಸುವ ಹಾಗೂ ನಿಗಮನಿಸುವ ಪ್ರಯತ್ನವು

ಭಾರತದಲ್ಲೀಗ ಕಾಲೋಚಿತವೆಂದು ತಿಳಿಯಬಹುದು. ಇದು ನಮ್ಮ ವರ್ತಮಾನ ಸ್ಥಿತಿಗಳಿಗೆ ಆಧಾರವಾದ ಸದ್ಯೋಭೂತದ ಅವಲೋಕನ. ಈ ವರ್ತಮಾನವು ನಮ್ಮ ಮುಂದಿನ (ಭವಿಷ್ಯ) ಸ್ಥಿತಿಗೆ ಆಧಾರವಾಗುತ್ತದೆ. ಭೂತ-ಕೃತದ ಭೋಗವು ವರ್ತಮಾನಕ್ಕಾದರೆ, ವರ್ತಮಾನ ಕೃತದ ಭೋಗವು ಭವಿಷ್ಯತ್ಕಾಲಕ್ಕೆ. ದೇಶ ವಿದೇಶಗಳ ಮಹಾಚಿಂತಕರ ವಿಚಾರಗಳು ಆಯಾ ದೇಶ ಕಾಲಗಳಿಗೆ ಪರಿಸೀಮಿತವಾಗಿರುವುದೇ ಹೆಚ್ಚಾದರೂ ಅವುಗಳಲ್ಲಿ ಕೆಲವು ಸಾರ್ವದೇಶಿಕ, ಸಾರ್ವಕಾಲಿಕವಾಗಬಲ್ಲ ಬೀಜರೂಪದಲ್ಲಿರುವುದರಿಂದ ಅಂಥವುಗಳ ಪರಾಮರ್ಶೆಯು ವರ್ತಮಾನಕ್ಕೆ ಪ್ರಯೋಜನಕರ. ದೇಶಕಾಲಗಳ ಸ್ಥಿತಿಗತಿಗಳ ಪೂರ್ವಾಪರ ದರ್ಶನವು ಲೋಕಜೀವನದ ಆರೋಗ್ಯ ಲಾಭಕ್ಕೆ ಕಾರಣವಾಗದಿರದು. ಚಿಂತನಗಳ ಹೋಲಿಕೆ, ವಿರೋಧಗಳು ಭಾರತದ ದೃಷ್ಟಿಯಿಂದ ಲಾಭಾಲಾಭ ಸೂತ್ರಾನುಸಾರವಾಗಿ ವಿಮರ್ಶೆಗೆ ತುತ್ತಾಗುವುದು ಉಚಿತ.

ವರ್ಣಧರ್ಮವು ಜಾತಿಧರ್ಮವಾಗಿ ಮತ್ತು ರಾಜಪ್ರಭುತ್ವವು ಪ್ರಜಾಪ್ರಭುತ್ವವಾಗಿ ಪರಿಣಮಿಸಿದ್ದೂ ಆರ್ಯಸಂಸ್ಕೃತಿಯ ಜೊತೆಗೆ ಇಸ್ಲಾಂ ಮತ್ತು ಕ್ರೈಸ್ತ ಸಂಸ್ಕೃತಿಗಳು ಬಂದು ಸೇರಿಕೊಂಡದ್ದೂ ಪೌರಾಣಿಕತೆಗೆ ವಿರುದ್ಧವಾಗಿ ವೈಜ್ಞಾನಿಕತೆ ಹೋರಾಡಲು ನಿಂತದ್ದೂ ಭಾರತದಲ್ಲೀಗ ಎದ್ದು ಕಾಣುವ ದೃಶ್ಯಗಳು. ಭಾರತದ ಇತಿಹಾಸವು ಇಸ್ಲಾಂ ಪ್ರವೇಶಿಸುವ ವರೆಗೆ ಪರಸಂಸ್ಕೃತಿಯ ಪಿತ್ರಾರ್ಜಿತಗಳೊಡನೆ ಇಲ್ಲಿಗೆ ಬಂದವರನ್ನು ಸಾಂಸ್ಕೃತಿಕವಾಗಿ ಸಾತ್ಮ್ಯಗೊಳಿಸಿಕೊಳ್ಳಲು ಶಕ್ತವಾಯಿತು. ಆದರೆ ಕ್ರಿ. ಶ. ೭೧೨ ರಲ್ಲಿ ರಾಜ್ಯಶಕ್ತಿಯನ್ನು ಇಸ್ಲಾಮಿಲ್ಲಿ ಪಡೆದ ಬಳಿಕ ಇಸ್ಲಾಂ ಸಂಸ್ಕೃತಿಯು ಸಹಜೀವಿಯಾಯಿತು. ಅದೇರೀತಿ ಐರೋಪ್ಯರ ಜೊತೆಗೆ ಮೆಲ್ಲಗೆ ವ್ಯಾಪಾರ ತೊಡಗಿದ ಕ್ರೈಸ್ತ ಸಂಸ್ಕೃತಿಯೂ ರಾಜ್ಯಶಕ್ತಿಯನ್ನು ಪಡೆದು ತನ್ನ ಪ್ರತ್ಯೇಕತೆಯಿಂದ ಸಹಜೀವಿಯಾಯಿತು.

ಭಾರತದ ಇಂದಿನ ಸಂಸ್ಕೃತಿ ಹೀಗೆ ತ್ರಿವರ್ಣಯುಕ್ತವಾಗಿದೆ. ಈ ವರ್ಣಗಳು ಪರಸ್ಪರವಾಗಿ ಕೊಡುಕೊಳ್ಳುವುಗಳ ಮೂಲಕ ಒಂದಾಗು

ಒಂದೇ ಒಂದು ಪ್ರಕಾರದಲ್ಲಿ ಸಮನ್ವಿತವಾಗಲು ಪ್ರಯತ್ನಿಸುತ್ತ ಬಂದವು; ಆದರೆ ಅವುಗಳಿಗೆ ಪರಿಪೂರ್ಣತೆ ಈ ಪ್ರಯತ್ನದಲ್ಲಿ ಇನ್ನೂ ಸಿದ್ಧಿಸಲಿಲ್ಲ. ಬ್ರಿಟಿಷ್‌ಯುಗದಿಂದ ನಡೆದು ಬಂದ ಉದಾರ ಶಿಕ್ಷಣ ನೀತಿಯು ಈ ಪ್ರಯತ್ನಕ್ಕೆ ಕೆಲಮಟ್ಟಿಗೆ ಪೋಷಣೆಕೊಟ್ಟಿತು. ಆದರೂ ಈ ವಿಶಾಲವೂ ವಿವಿಧವೂ ಆದ ಭೌಗೋಲಿಕ ಐತಿಹಾಸಿಕ ಅಂಶಗಳಿಂದ ಕೂಡಿದ ಮಹಾ ದೇಶದಲ್ಲಿ ಏಳಿಸಿದ ಮಟ್ಟದ ಧರ್ಮ (ಸಂಸ್ಕೃತಿ) ಸಮನ್ವಯವನ್ನದು ಸಾಕಷ್ಟು ಸಮರ್ಥವಾಗಿಯೂ ತೀವ್ರಗತಿಯಿಂದಲೂ ಸಾಧಿಸಿಕೊಡಲಿಲ್ಲ. ದಿವಂಗತ ಮಹಾತ್ಮಾ ಗಾಂಧಿಯವರು ಭಗವದ್ಗೀತೆ, ಕುರಾನ್ ಮತ್ತು ಬೈಬಲ್ಲುಗಳ ಸಾಧಾರಣಾಂಶಗಳನ್ನು ಪ್ರಚುರಪಡಿಸುವಲ್ಲಿ ಮುಂದಾದರು. ಅನಂತರ ಅಂಥ ಪ್ರಯತ್ನದಲ್ಲಿ ಆ ಪ್ರಕಾರ ಮುಂದುವರಿಯಲಿಲ್ಲ. ಮುಖಂಡರಲ್ಲಿ ಕೆಲವರು ಆಗೀಗ ಭಾಷೈಕ್ಯದ ಕರೆಕೊಟ್ಟು ನೋಡಿದರು. ಆದರೆ ಅದು ಸಫಲವಾದುದು ಸಾಕಷ್ಟು ತೃಪ್ತಿಕರವಾಗಲಿಲ್ಲ.

ಪ್ರಜ್ಞಾವಂತ ಭಾರತೀಯರಿಂದು ಮರಣೋತ್ತರ ಜೀವನದ ಬಗೆಗಿನ ಭಿನ್ನಸಿದ್ಧಾಂತಗಳಿಗೆ ಅತಿಮಹತ್ವವನ್ನು ಕೊಡುವ ಪ್ರದರ್ಶನಬುದ್ಧಿಯನ್ನು ತ್ಯಜಿಸಿದರೆ, ಅದು ಆಯಾವ್ಯಕ್ತಿಯ ಖಾಸಗಿ ವಿಷಯವೆಂದು ಬಿಟ್ಟುಕೊಟ್ಟು ಚಿಂತಿಸಲಾರಂಭಿಸಿದರೆ, ಲೋಕಜೀವನದಲ್ಲಿ ಸ್ನೇಹ-ಸಹಕಾರಗಳ ಭದ್ರವಾದ ತಳಪಾಯದ ಮೇಲೆ ರಾಷ್ಟ್ರೀಯವಾಗಿ ಸಾಗಲು ಯಾವ ವಿಘ್ನವೂ ಉಂಟಾಗದು. "ಮೋಕ್ಷ-ಸ್ವರ್ಗಗಳ ಪ್ರಾಪ್ತಿ ಇಹ ಜೀವನವು ನ್ಯಾಯ-ನೀತಿಗಳಿಂದ ಸಾಗಿದಾಗ ಮಾತ್ರ" ಎಂಬ ಅಂಶವು ಸರ್ವ ಸಂಸ್ಕೃತಿ ಸಾಧಾರಣವಾಗಿರುವಾಗ, ಮತೀಯ ಹಾಗೂ ಜಾತೀಯ ಗುಂಪುಗುಳಿತನವು ಹಿಂದುಳಿಯುವಿಕೆಯ ಲಕ್ಷಣ. ಮತೀಯ ಹಾಗೂ ಜಾತೀಯ ವ್ಯವಹಾರಗಳಲ್ಲಿ ಭಿನ್ನ ಭಿನ್ನ ಗುಂಪುಗಳಾಗಿರುವ ಭಾರತೀಯರು ಸಾಮಾಜಿಕ, ರಾಜಕೀಯ, ಆರ್ಥಿಕ ವ್ಯವಹಾರಗಳಲ್ಲಿ ಶುದ್ಧ ರಾಷ್ಟ್ರೀಯರಾಗಲು ಕಲಿಯಬೇಕಾಗಿದೆ. ಮತಸಂಬಂಧವೂ ಜಾತಿಸಂಬಂಧವೂ ರಾಷ್ಟ್ರಸಂಬಂಧಕ್ಕೆ ವಿರುದ್ಧವಾಗದಂತೆ ನಡೆದುಕೊಳ್ಳಲು ಸಂಕಲ್ಪಿಸಲು ನಮ್ಮ ಧರ್ಮ

ಶಾಸ್ತ್ರಗಳೂ ರಾಜನೀತಿಶಾಸ್ತ್ರಗಳೂ "ವರ್ಣಿಗಳಿಗೂ ಆಂಗಿಗಳಿಗೂ (ಹಿಂದೂ ಹಾಗೂ ಇತರ ಎಲ್ಲರಿಗೂ) ಸಾಮಾನ್ಯ" ಎಂದು ಹೇಳಿದ ಶಾಶ್ವತ ನೀತಿಸೂತ್ರಗಳ ಅಥವಾ ಆತ್ಮಗುಣಗಳ ಜಾಗತಿಕತೆಯನ್ನು ಚೆನ್ನಾಗಿ ಮನದಟ್ಟುಮಾಡಿಕೊಳ್ಳುವುದಗತ್ಯ; ಅವೇ ಅಹಿಂಸೆ, ಸತ್ಯ, ಅಸ್ತೇಯ, ಶೌಚ, ಇಂದ್ರಿಯ ನಿಗ್ರಹಗಳು. ಮಹಾಭಾರತ ಇವುಗಳನ್ನು—

> "ಧೃತಿಃ ಕ್ಷಮಾದಮೋಽಸ್ತೇಯಂ ಶೌಚಮಿಂದ್ರಿಯನಿಗ್ರಹಃ
> ಧೀರ್ವಿದ್ಯಾಸತ್ಯಮಕ್ರೋಧೋ ದಶಕಂ ಧರ್ಮಲಕ್ಷಣಂ—

ಧೃತಿ, ಕ್ಷಮೆ, ದಮ, ಕಳದಿರುವಿಕೆ, ಒಳ ಹೊರ ಶುಚಿತ್ವ, ಪಂಚೇಂದ್ರಿಯಗಳ ಹಸಿವುಗಳನ್ನು ಹಿಡಿತದಲ್ಲಿಟ್ಟುಕೊಳ್ಳುವುದು, ವಿಶಾಲ ಬುದ್ಧಿಯನ್ನು ತಾಳುವುದು, ವಿದ್ಯಾಸಂಪತ್ತನ್ನು ಹೆಚ್ಚಿಸಿಕೊಳ್ಳುವುದು, ಸತ್ಯವನ್ನು ತ್ರಿಕರಣಗಳಿಂದ ಪಾಲಿಸುವುದು, ಕೋಪಾವೇಶವಶರಾಗದಿರುವುದು— ಎಂದು ಹತ್ತು ಮಾಡಿ ಹೇಳಿದೆ. ಮತೀಯ ಅಥವಾ ಜಾತೀಯ ಆಚಾರಗಳಲ್ಲಿ ವಿರೋಧ ಕಂಡುಬಂದಲ್ಲೆಲ್ಲಾ ಉಕ್ತ ಪಂಚಮಹಾಶೀಲಗಳಿಗೆ ಎಲ್ಲೂ ಎಂದೂ ಭಂಗ ಬಾರದಂತೆ ನಡೆದುಕೊಂಡಾಗ ಭಾರತೀಯ ಸಂಸ್ಕೃತಿಯು ಮೂರು ಒಳ ಪ್ರಕಾರಗಳನ್ನುಳ್ಳ ಒಂದೇ ಒಂದು ಮಹಾಪ್ರಕಾರ ಲಕ್ಷಣದ್ದೆನ್ನಿಸುವುದು.

ಆಧ್ಯಾತ್ಮಿಕ ಮೂಲವುಳ್ಳ (ಅಧಿಯಜ್ಞ-ಅಧಿದೈವಗಳು ಆಧ್ಯಾತ್ಮದ ಅಪರಾವತಾರಗಳು) ಈ ಮಹಾಶೀಲಗಳ ಗಡಿಗೆರೆಯೊಳಗೇ ವಿವಿಧ ಭಾರತೀಯ ವೃತ್ತಗಳು ತಮ್ಮ ಅಂತರ್ಮತೀಯ, ಅಂತರ್ ಜಾತೀಯ, ಅಂತಃ ಸಾಮಾಜಿಕ, ಅಂತರಾರ್ಥಿಕ ಮತ್ತು ಅಂತಾರಾಜಕೀಯ ವ್ಯವಹಾರಗಳನ್ನು ನಡೆಸಿಕೊಂಡು ಹೋಗಬೇಕೆಂಬುದೇ ಈ ರಾಷ್ಟ್ರದ ಲೌಕಿಕತೆಯ ಸಾರಭೂತವಾದ ಅಂಶ. ನಮ್ಮ ಕಾಯಿದೆಗಳೂ ಕೋರ್ಟು ಕಚೇರಿಗಳೂ ಹೋಗಲು ಯತ್ನಿಸುತ್ತಿರುವುದು ಈ ಹಾದಿಯಲ್ಲಿ ಎಂಬುದನ್ನು ಬಹಳ ಜನರು ಇನ್ನೂ ಚೆನ್ನಾಗಿ ಅರಿತು ಅರಗಿಸಿಕೊಂಡು ತಪ್ಪ

ವೈಯಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಗಳ ಸ್ವರೂಪಗಳನ್ನು ತಿದ್ದಿ ಕೊಳ್ಳಬೇಕಾಗಿದೆ.

ಲೋಕಸತ್ಯದ ಮೂರು ಪ್ರಧಾನವಾದ ಅಂಗಗಳೆಂದರೆ ಸಾಮಾಜಿಕ ಸಾರ್ವಜನಿಕತೆ, ರಾಜಕೀಯ ಸಾರ್ವಜನಿಕತೆ ಮತ್ತು ಇಂದ್ರಿಯ ಪ್ರತ್ಯಕ್ಷದ ಸಾರ್ವಜನಿಕತೆ. ಈ ಮೂರು ಸಾರ್ವಜನಿಕತೆ (ಭಾರತೀಯತೆ) ಯನ್ನು ಕಾಯಲು ಉಕ್ತ ಪಂಚಮಹಾಶೀಲಗಳು ಅನುಲ್ಲಂಘನೀಯವಾದ ತಾರಕ ಶ್ರುತಿಗಳೆಂದು ಎಲ್ಲರೂ ಭಾವಿಸಬೇಕು. ಪುನರ್ಜನ್ಮ, ಪರಲೋಕ, ದೇವರುಗಳ ಬಗೆಗಿನ ನಂಬಿಗೆಗಳಿಗೆ ಖಾಸಗಿತನವಿರುವುದು ಪ್ರತ್ಯಕ್ಷಸಿದ್ಧ ವಾಗಿರುವುದರಿಂದ ಅವುಗಳಿಗೂ ಉಕ್ತ ೩ ಸಾರ್ವಜನಿಕತೆಗಳಿಗೂ ಯಾವ ಘರ್ಷಣಕ್ಕೂ ಅಸ್ಪದವಿಲ್ಲ. ಈ ನಂಬಿಗೆಗಳು ಪ್ರತ್ಯಕ್ಷಾತೀತವಾಗಿರುವುದು ಲೋಕ ಜೀವನದಲ್ಲಿ ಅವುಗಳ ವೈಯಕ್ತಿಕತೆ-ಖಾಸಗಿತನಗಳನ್ನು ಸ್ಥಾಪಿಸುತ್ತದೆ. ಜೊತೆಗೆ ಎಲ್ಲ ಮತಗಳಲ್ಲೂ ದೇವರು ಮಹತ್ತಮ ವ್ಯಾಪ್ತಿಯುಳ್ಳವನೆಂಬುದನ್ನು ಒಪ್ಪಿರುವುದರಿಂದ ವ್ಯಕ್ತಿಯು ತನ್ನ ವೈಯಕ್ತಿಕ ವರ್ತನೆಯನ್ನು ಯಾವಾಗಲೂ ಮಹತ್ತರ-ಮಹತ್ತಮ ವ್ಯಾಪ್ತಿಯುಳ್ಳ ಸಾರ್ವಜನಿಕ ವರ್ತನೆಗೆ ಅವಿರುದ್ಧವಾಗಿರುವಂತೆ ನೋಡಿಕೊಳ್ಳುವ ಆದರ್ಶಶೀಲವು ಸರ್ವಗ್ರಾಹ್ಯವಾಗುತ್ತದೆ. ಈ ಆದರ್ಶದ ಆಚರಣೆಯೇ ಇಹದಲ್ಲಿ ನಮ್ಮ ಸತ್ಯದರ್ಶನ, ಶುಭದರ್ಶನ, ಸೌಂದರ್ಯದರ್ಶನ ಮತ್ತು ಉಪಯುಕ್ತತೆಯ ದರ್ಶನ. ಲೋಕದಲ್ಲಿ ಕೇವಲ ವಸ್ತುನಿಷ್ಠ ಅಸ್ತಿತ್ವದ ದೃಷ್ಟಿಯಿಂದ ಒಂದು ಪದಾರ್ಥವನ್ನು ನೋಡುವ ಮನಃಪ್ರಣಾಲಿಯು ಸತ್ಯ; ಅದನ್ನು ಕೇವಲ ಕಲಾದೃಷ್ಟಿಯಿಂದ ನೋಡುವ ಮನಃಪ್ರಣಾಲಿಯು ಸೌಂದರ್ಯ, ಪರೋಪಕಾರ ದೃಷ್ಟಿಯಿಂದ ನೋಡುವುದು ಶುಭ, ಶಿವ, ಸತ್ ಮತ್ತು ಭೌತಿಕ ಅವಯವಗಳ ಬಳಕೆಯ ಸಾಧನತ್ವವನ್ನು ಅನ್ವಯಿಸಿ ನೋಡುವುದು ಉಪಯುಕ್ತತೆ. ಇಹ ಜೀವನದ ಈ ಚತುರ್ಮುಖಗಳಲ್ಲಿ ಯಾವುದೂ ಶುದ್ಧವಲ್ಲ, ಕೇವಲವಲ್ಲ, ಪರಿಪೂರ್ಣವಾಗಿಲ್ಲ, ಪರಸ್ಪರ ನಿರಪೇಕ್ಷವಾಗಿಲ್ಲ; ಇಂಥ ಪಾಶ್ಚಾತ್ಯ ವಿಂಗಡಣೆ ಅನುಕೂಲಸಿಂಧು ನ್ಯಾಯವನ್ನು ಆಧರಿಸಿದೆ; ಆಯಾ ಮುಖದ ಸಾಪೇಕ್ಷ ಪ್ರಾಧಾನ್ಯವನ್ನು ಸಂದರ್ಭಾನುಸಾರವಾಗಿ ಎತ್ತಿ

ಹಿಡಿಯುತ್ತದೆ—ಆದರೀನಾಲ್ಕೂ ಸಾರ್ವಜನಿಕತೆಯ ಮಟ್ಟದಲ್ಲಿ ಸಮರ್ಥವಾಗುವಷ್ಟು ವೈಯಕ್ತಿಕತೆಯ ಮಟ್ಟದಲ್ಲಿ ಸಮರ್ಥವಾಗಲಾರವು. ಹಾಗೆ ತಮ್ಮ ಪರಿಪೂರ್ಣಮಟ್ಟದಲ್ಲಿ ಅವು ನಾಲ್ಕು ಹೋಗಿ ಒಂದೇ ಆಗಿ ಅತೀಂದ್ರಿಯತ್ವದಲ್ಲಿರುವುವು ಎಂಬುದು ಅತಿಭೌತ ತತ್ತ್ವಜ್ಞಾನ.

ದೇವರು ಅಥವಾ ಅವಿಜ್ಞಾತವಾದ ನಿತ್ಯಾಧಾರ

ಲೋಕಸತ್ಯ (ಸತ್ಯ)	ಕಲಾಸತ್ಯ (ಸೌಂದರ್ಯ)	ಸಮಾಜಸತ್ಯ (ಶಿವ, ಶುಭ)	ಭೌತಲಾಭಸತ್ಯ (ಪ್ರಯೋಜನ, ಉಪಯೋಗ).

ಈ ನಾಲ್ಕನ್ನು ಧರ್ಮಾರ್ಥಕಾಮಗಳೆಂದು ಮೂರರಲ್ಲಿಯೇ ಅಡಕಗೊಳಿಸಿ ಹೇಳುವುದು ನಡೆದು ಬಂದ ಭಾರತೀಯ ದಾರಿ.

ಉಪಸಂಹಾರ

"ಯೋಗಸ್ಥಃ ಕುರು ಕರ್ಮಾಣಿ" ಎಂಬುದು ವ್ಯಾಸನ ಕರ್ಮಸಂದೇಶ, ಕೈಲಾಸವನ್ನು ಭೂಮಿಯಲ್ಲಿ ತೋರಿಸುವ ಕಾಯಕಧರ್ಮ. ಯೋಗವೆಂದರೆ ಸುಖ-ದುಃಖಗಳಿಗೆ ಸಮಪ್ರಾಧಾನ್ಯವನ್ನು ಕೊಡುವ ಬುದ್ಧಿ. ಸುಖ-ದುಃಖಗಳು ದೇಹೇಂದ್ರಿಯಮನಸ್ಸುಗಳಲ್ಲಿ ಉಂಟಾಗುವ ವಿಕಾರಗಳು. ಜೀವ ಮೂಲವಾದ ಪ್ರಪಂಚದಲ್ಲಿ ವಿಕಾರ-ವಿಕಾರ್ಯ-ವಿಕಾರಗಳಿರುವುದು ಸಹಜ. "ಅಪ್ಯರ್ಥ ಕಾಮೌ ತಸ್ಯಾಸ್ತಾಂ ಧರ್ಮಏವ ಮನೀಷಿಣಃ" ಎಂಬುದು ಯೋಗ ಮನಸ್ಕತೆಯ ಕಾಳಿದಾಸವಿವರಣೆ. ಧಾರ್ಮಿಕತೆಯ ನಿಜವಾದ ಅರ್ಥವೆಂದರೆ ಸುಪ್ರೀಂ ಕೋರ್ಟಿನ ಮುಖ್ಯನ್ಯಾಯಾಧೀಶನ ಮನೋಧರ್ಮ, ಪ್ರತಿಕ್ಷಣವೂ ಆದರ್ಶ ನಿಷ್ಪಕ್ಷಪಾತ ಬುದ್ಧಿಯಿಂದ ಪರರಿಗೆ ನ್ಯಾಯವಾಗುವಂತೆ ನಡೆದುಕೊಳ್ಳುವ ಮನಃ ಪ್ರಣಾಳಿ. ಇದರ ಮುಂದೆ ಯಾವ ವೈಜ್ಞಾನಿಕ ವಸ್ತುನಿಷ್ಠತೆಯೂ ಅಧಿಕ ಮೌಲ್ಯವುಳ್ಳದ್ದೆನ್ನಿಸದು. ಏಕೆಂದರೆ, ಇದೇ ಸಮ್ಯಕ್ + ನ್ಯಸ್ತ + ಬುದ್ಧಿ—ಸಂನ್ಯಸ್ತಬುದ್ಧಿ; ಸುಖದುಃಖಗಳ ಸಮನ್ಯಾಸವೇ ಸಂನ್ಯಾಸಃ ಅದು ನಿಷ್ಕಾಮನಿಗೆ ಮಾತ್ರ ಸಾಧ್ಯ.

ದೇವರ್ಷಿ ಪಿತೃಋಣಗಳ ಮೂರ್ತಿಯೇ ಮಾನವನೆಂಬುದು ವ್ಯಾಸದೃಷ್ಟಿ. ಅವುಗಳನ್ನು ಮೀರಿದ ಸ್ವತಂತ್ರಾಂಶ ಮಾನವನಲ್ಲಿಲ್ಲ. ಮನಸ್ಸು ಬುದ್ಧಿ, ಜೀವಶಕ್ತಿ, ಚಿತ್ತ, ಕರ್ಮೇಂದ್ರಿಯ, ಜ್ಞಾನೇಂದ್ರಿಯಗಳನ್ನು ತುಂಬಿಕೊಂಡಿರುವ ಶರೀರದ ಅಹಂಕಾರವೇ ಮಾನವ. ಈ ಆರೂ ದೇವರ್ಷಿ ಪಿತೃಗಳಿಂದಲೇ ಉಂಟಾದಂಥವುಗಳು. ಜೀವಶಕ್ತಿಯು ದೇವದತ್ತ, ಜ್ಞಾನಶಕ್ತಿಯು ಋಷಿದತ್ತ ಮತ್ತು ಮಿಕ್ಕ (ಸಂಸ್ಕೃತ) ಜಡಶಕ್ತಿ ಪ್ರಕಾರಗಳೆಲ್ಲವೂ ಪಿತೃದತ್ತ. ಸತ್ತವರಷ್ಟೇ ಪಿತೃಗಳಲ್ಲ— ನಮಗಿಂತ ಮೊದಲು ಹುಟ್ಟಿದ ಸಹಜೀವಿಗಳೆಲ್ಲರೂ ಪಿತೃಪ್ರತೀಕದಿಂದ ಗೃಹೀತರು- ಅವರ ಮೊತ್ತವೇ ಪಾರಂಪರಿಕ ಸಮಾಜ. ದೇವರ್ಷಿಪಿತೃದಾನಗಳ ಪರಿಮಾಣ-ಪ್ರಕಾರಗಳು ವ್ಯಕ್ತಿಯ ಜ್ಞಾತಾಜ್ಞಾತವಾದ ಭೂತಕಾಲೀನ ಕರ್ಮದ ಫಲಕ್ಕೆ ತಕ್ಕಂಥವು. ಸಂಪೂರ್ಣವಾಗಿ ಅಹಂಕಾರವಿಲ್ಲದವನಿಗಷ್ಟೇ ಕರ್ಮ

ಫಲ ಭೋಕ್ತೃತ್ವವಿಲ್ಲ; ನಿರಹಂಕಾರಿಯು ಜೀವನ್ಮುಕ್ತ. ಕರ್ಮವು ವಿಕಲ್ಪ, ವಿಕಾರ, ಪರಿಣಾಮ, ಪರಿವರ್ತನ, ಭೇದಮೂಲ, ಕಾಲದೇಶಾಧೀನ ಕಾರಣ-ಕಾರ್ಯ-ಫಲಗಳಿಂದು ತ್ರಿಧಾ ವಿಭಕ್ತ, ಮೂರ್ತದ್ರವ್ಯಾವಲಂಬಿ (ಸಾಕಾರಸ್ಥ) ಮತ್ತು ಕರ್ತ್ರಾದಿ ಕಾರಕ ಸಂಬಂಧಗಳನ್ನೂ ಸ್ವ-ಸ್ವಾಮಿ ಭಾವಾದಿ ಶೇಷಸಂಬಂಧಗಳನ್ನೂ ಉಳ್ಳದ್ದು. ಅಹಂಕಾರವೇ ಅದರ ಕರ್ತೃ; ನಾನೊಬ್ಬ ಪ್ರತ್ಯೇಕ ಜೀವನೆಂಬ ಪ್ರಜ್ಞೆಯೇ ಅಹಂಕಾರ. ಅದಕ್ಕೆ ಸ್ವಾತಂತ್ರ್ಯದ (ಕರ್ತೃತ್ವದ) ಆಭಾಸವು ಸಕಾಮಕರ್ಮದ ಅವಧಿಯಲ್ಲಿ ವ್ಯಾಪಕವಾಗಿರುತ್ತದೆ; ಅದೇ ಅವಿದ್ಯೆ. ಕರ್ಮವು ಅನಿತ್ಯ; ಅದರಲ್ಲಿ ಲೀನತೆ ಹೊಂದುವ ಅಹಂಕಾರಕ್ಕೆ ನಿತ್ಯತೆಯೆಂದೂ ಸಿದ್ಧಿಸದು; ನಿತ್ಯ ವಸ್ತುವಾದ ಆತ್ಮ (ಬ್ರಹ್ಮ)ದಲ್ಲಿ ಲೀನಹೊಂದುವುದೊಂದೇ ಅದಕ್ಕೆ ನಿತ್ಯತೆ ಯನ್ನು ಅನುಭವಕ್ಕೆ ತಂದುಕೊಡಬಲ್ಲದು.

ಸಕಾಮ ಕರ್ಮದಲ್ಲಿ ಪ್ರತಿಕ್ಷಣವೂ ಕರ್ತೃಪ್ರಜ್ಞೆಯು ತಲ್ಲೀನವಾಗಿದ್ದರೆ (ಕರ್ಮಲೀನವಾಗಿದ್ದರೆ) ಮಾತ್ರ ಅದು ಯಶಸ್ವಿಯಾಗುವುದು. ನಿಷ್ಕಾಮ ಕರ್ಮದಲ್ಲಿ ಅಥವಾ ನಿವೃತ್ತಕರ್ಮದಲ್ಲಿ ವೈಯಕ್ತಿಕ ಕರ್ತೃತ್ವದ ಪ್ರಜ್ಞೆ ಜಾಗರಿತವಾಗಿರುವದೇ ಇಲ್ಲ. Impersonalism ಅವೈಯಕ್ತಿಕತೆ ಎಂದು ಹೇಳಬಹುದಾದ ಭಾವದಿಂದ ವ್ಯಕ್ತಿಯು ಏನುಮಾಡಿದರೂ ಅದು ಪರ ಕರ್ಮ, ಹರಿಕರ್ಮ, ಬ್ರಹ್ಮಕರ್ಮ, ಆತ್ಮಕರ್ಮ, ಸರ್ವಕರ್ಮ, ಸಮಷ್ಟಿ ಕರ್ಮ ಎಂಬ ಫಲಿತ ಸ್ವರೂಪವನ್ನು ತಾಳುತ್ತದೆ. ಇದು ಯೋಗ ಅಥವಾ ಕರ್ಮದಲ್ಲಿ ಮಾನವ ತೋರಿಸಬೇಕಾದ ಕೌಶಲ. ಇಂಥ ಕರ್ಮಕೌಶಲ ವೆಂದರೇನೆಂಬುದನ್ನು ತಿಳಿಯದವರೂ ತಿಳಿದುಕೊಳ್ಳಲು ಬಯಸದವರೂ ತಿಳಿದ ಮೇಲೂ ಅಡಚಣೆಯಲ್ಲಿ ತಂದು ಕೊಳ್ಳುವವರೂ ವೇದಾಂತವನ್ನು ಬರೆದಿಟ್ಟ ಅಥವಾ ಇಡಬಹುದಾದ ಹಾಳೆಗಳಿಗೆ ಸಮಾನರು. ಅರಸಿಕರಲ್ಲಿ ಕವಿತ್ವವನ್ನು ನಿವೇದಿಸುವುದೂ ಒಂದೇ, ಅಹಂಕಾರ ರಸಿಕ(ಪ್ರಿಯ) ರಲ್ಲಿ ವೇದಾಂತವನ್ನು ನಿವೇದಿಸುವುದೂ ಒಂದೇ.

ಅಮುಕ್ತನ ನಿರಹಂಕಾರ ಸಾಧನೆಗೆ ಅನನ್ಯವಾದ ಬ್ರಹ್ಮ (ಆತ್ಮ) ಚಿಂತನವು ಅನಿವಾರ್ಯ ಸಾಧನ. ಬ್ರಹ್ಮಧ್ಯಾನಿಗಳಿಗಷ್ಟೇ Missionary

Spirit ಸಮರ್ಪಣಭಾವದಿಂದ ದೇಶಸೇವೆ ಮಾಡಲು ಸಾಧ್ಯ; ಅವರಿಗೇ ನಿಷ್ಕಾಮಕರ್ಮವನ್ನು ದಕ್ಷತೆಯಿಂದ ಮಾಡಲು ಶಕ್ಯ. ಬ್ರಹ್ಮಜ್ಞಾನಿಗಳಿಗಂತೂ ಅದು ನೀರುಕುಡಿದ ಹಾಗೆ. ವಿವೇಕಾನಂದ-ಪರಮಹಂಸ ಮುಂತಾದವರು ದೃಷ್ಟಾಂತಗಳಾಗಿದ್ದಾರೆ. ಅನೇಕ ಭಕ್ತಿ-ಕರ್ಮಸಾಧಕರು ಷ್ವೈವಕರ್ತೃತ್ವ ಭಾವದಿಂದ ಲೋಕೋಪಕಾರ ಮಾಡಿದ್ದಾರೆ; ಆ ಮೂಲಕ ಶುದ್ಧಬುದ್ಧಿಯನ್ನು ಹೊಂದಿ ಕ್ರಮಶಃ ಬ್ರಾಹ್ಮೀಸ್ಥಿತಿಯನ್ನು ಸಾಧಿಸಿಕೊಂಡಿದ್ದಾರೆ. ಅಂಥವರನ್ನು ಅತ್ಯಂತವಾಗಿ ದೂರಗಿಟ್ಟು ಅಲಕ್ಷಿಸಿ ರಾಜಕೀಯ, ಆರ್ಥಿಕ, ಶೈಕ್ಷಣಿಕ ವ್ಯವಹಾರಗಳನ್ನು ನಡೆಯಿಸುವ ನೇತೃತ್ವವುಳ್ಳ ದೇಶವು ಅಂತಃಕಲಹಗಳ ದೆಸೆಯಿಂದಲೇ ಅಂತಾರಾಷ್ಟ್ರೀಯ ಹಾಗೂ ಅಂತಾರಾಜ್ಯಕೀಯ ಸಂಬಂಧಗಳಲ್ಲಿ ಸೋಲುತ್ತದೆ, ನಷ್ಟ ಅನುಭವಿಸುತ್ತದೆ, ಪ್ರಜೆಗಳು ಅಪ್ರಗತಿಮುಖರಾಗುವುದು ಸಾಂಸ್ಕೃತಿಕವಾಗಿ ಕಂಡುಬರಲು ಕಾರಣವಾಗುತ್ತದೆ. “ವನೌಕಸೋಽಪಿ ಸಂತೋ ಲೌಕಿಕಜ್ಞಾ ವಯಂ” ಎಂದೂ “ನ ಖಲು ಕಶ್ಚಿದವಿಷಯೋನಾಮ ಧೀಮತಾಂ” ಎಂದೂ ಕಾಳಿದಾಸನು ವ್ಯಾಸಮತವನ್ನು ಅನುವಾದಿಸಿದ್ದಾನೆ.

ಆರ್ತ, ಜಿಜ್ಞಾಸು, ಅರ್ಥಾರ್ಥಿ ಮತ್ತು ಜ್ಞಾನಿ ಎಂಬ ನಾಲ್ಕು ವರ್ಗಗಳ ದೇವೋಪಾಸಕರಿರುವುದು ವ್ಯಾಸೋಕ್ತ. ಆದರೆ ಈ ನಾಲ್ಕು ವರ್ಗಗಳಲ್ಲಿ ೪ನೆಯ ವರ್ಗದವರ ದೇವೋಪಾಸನೆಯೊಂದೇ ಸಂಪೂರ್ಣ ಸಾರ್ಥಕವಾದುದು. ಜ್ಞಾನಿಯ ದೇವರು ನಿರಾಕಾರ, ಇತರರ ದೇವರು ಸಾಕಾರ; ಒಬ್ಬ ಪರ, ಇನ್ನೊಬ್ಬ ಅಪರ; ಒಬ್ಬ ಗುಣೋತ್ತರ, ಇನ್ನೊಬ್ಬ ಗುಣಮಯ. ಗುಣಗಳು ಉಪಾಧಿಗಳು, ಅವಚ್ಛೇದಕಗಳು—Qualities qualify or delimit a thing, abstract or concrete. ಗುಣೋತ್ತರನು ಗುಣಾತೀತ, ಆದರೆ ಗುಣಾಧಾರ. ಗುಣಗಳು ತಮ್ಮ ಭಿನ್ನ ಗುಣತ್ವದ ಪ್ರಕಾರ ಅವಚ್ಛಿನ್ನವಾದ ಸಾದಿ-ಸಾಂತ ಪದಾರ್ಥಗಳು. ಆದುದರಿಂದ ಗುಣಾತೀತ ಬ್ರಹ್ಮನೊಬ್ಬನೇ ಅನಾದ್ಯನಂತ, ಅನಶ್ವರ, ನಿತ್ಯ ಅಥವಾ ಕಾಲಾತೀತ. ಬ್ರಹ್ಮೋಪಾಸನೆಯು ಜೀವಾತ್ಮನ ಬ್ರಹ್ಮಾತ್ಮಕತೆಯ ಜಾಗರದ ಸಾಧನ; ಉಪಾಸನೆ ಇಲ್ಲಿ ನಿದಿಧ್ಯಾಸ.

ಪರಬ್ರಹ್ಮನನ್ನಾಧರಿಸಿದ, ತದಂತರ್ಗತವಾದ ಅಪರಬ್ರಹ್ಮನು ಗುಣಮಯವಾದ ಪ್ರಪಂಚದ ಗುಣೇಶ್ವರ. ಗುಣವು ಕಾರ್ಯದ ಸುಪ್ತಶಕ್ತಿ, ಕಾರ್ಯವು ಗುಣದ ಪ್ರಕಟರೂಪ, ದ್ರವ್ಯ ಅವರ ಕಲ್ಪಿತಾಧಾರ; ಕ್ಲಪ್ತಿಯು ಅವಚ್ಛಿನ್ನತೆ, ಭಿನ್ನತೆ, ವಿಭಕ್ತತೆ, ಪ್ರತ್ಯೇಕತೆ—ಎಂಬುದು ವಿಜ್ಞಾನಸಿದ್ಧ, ಗಣಿತ ಸಿದ್ಧ, ತರ್ಕಸಿದ್ಧ, ಅನುಭವ ಸಿದ್ಧ. ಕ್ಲಪ್ತಿ ಅಥವಾ ಕಲ್ಪನೆ ಅಮೂರ್ತ; ಅಮೂರ್ತವು ಅಮಾನಸಿಕವಾದಾಗ ಅನವಚ್ಛಿನ್ನ. ಮಾನಸಿಕವು ಸ್ಪಷ್ಟ, ಖಚಿತ, ಸೀಮಿತ, ಅವಚ್ಛಿನ್ನ; ಅಪೂರ್ಣ ಮಾನಸಿಕವು ಅವ್ಯಾವ-ಹಾರಿಕ ಮತ್ತು ಅಪಾರಮಾರ್ಥಿಕ—ಅರ್ಥಾತ್ ಪ್ರಾತಿಭಾಸಿಕ. ದೇಶ-ಕಾಲಗಳೇ ಮೂಲ ಕಲ್ಪಕಗಳು, ಅವೇ ವ್ಯಷ್ಟಿಯು ಅವಿದ್ಯೆ, ಸಮಷ್ಟಿಯು ಮಾಯೆ. ಗುಣೇಶ್ವರನೇ ಮಾಯೇಶ್ವರ. ಮಾಯೆಯೇ world stuff ಜಗತ್ಪದಾರ್ಥ ಅಥವಾ ತ್ಯತ್. ತದ್ರೂಪದ (ಸದ್ರೂಪದ) ದೇವರು ನಿತ್ಯ, ತ್ಯದ್ರೂಪದ ದೇವರು ಅನಿತ್ಯ. ತ್ಯತ್ತೇ "ಅರ್ತ", ತುಚ್ಛ" "ಪ್ರಕೃತಿ". ಅನಿತ್ಯಫಲಾಶಿಗಳು ಮಾಡುವುದು ಅನಿತ್ಯ ದೇವಾರಾಧನೆ, ನಿತ್ಯಫಲಾಶಿಗಳು ಮಾಡುವುದು ನಿತ್ಯದೇವಾರಾಧನೆ. ಆರ್ತನಲ್ಲಿ ಮಾನಸ ಐಶ್ವರ್ಯದ ಕೊರತೆ, ಜಿಜ್ಞಾಸುವಿನಲ್ಲಿ ಜ್ಞಾನವೆಂಬ ಐಶ್ವರ್ಯದ ಕೊರತೆ, ಅರ್ಥಾರ್ಥಿಯಲ್ಲಿ ಭೌತಿಕ ಐಶ್ವರ್ಯದ ಕೊರತೆ ಇರುತ್ತವೆ. ಜ್ಞಾನಿಯಲ್ಲಿ ಜ್ಞಾನದ ಕೊರತೆಯಿಲ್ಲ, ಮಾನಸಿಕ-ಭೌತಿಕ ಕೊರತೆಗಳು ಅವನಿಗೆ ಅಲಕ್ಷ್ಯ—ಅವು ಅವನಿಗೆ ಅಸಂಪ್ರಜ್ಞಾತ. ಆವನೇ ದೇವ, ಅವನ ಉಪಾಸನೆಯು ಆತ್ಮಪ್ರಜ್ಞಾಜಾಗರ, ಬ್ರಹ್ಮಾತ್ಮೈಕತೆಯ ಎಚ್ಚರ. ನಿತ್ಯಕ್ಕೆ ಕಾರ್ಯ, ಕಾರಣ, ಫಲಗಳೆಲ್ಲವೂ ಒಂದೇ—ಅವಿಕಾರ್ಯತೆಯ ದೆಸೆಯಿಂದ.

ಉಕ್ತ ಐಶ್ವರ್ಯಾರ್ಥಿಗಳು ವ್ಯಕ್ತಿ ಭೇದವಾದಿಗಳು, ವ್ಯಕ್ತಿ ಸ್ವಾರ್ಥ ಪ್ರಧಾನರು; ವ್ಯಕ್ತಿತ್ವವು ವ್ಯಕ್ತತೆ, ಸ್ಪಷ್ಟತೆ, ಅವಚ್ಛಿನ್ನತೆ, ಆದಿ ಮಧ್ಯಾಂತವಂತಿಕೆ. ಬ್ರಹ್ಮಾಹಂಕಾರವೆಂಬುದು ಸ್ವಯಂವ್ಯಾಹತವಾದುದು—ಅನು-ಭವ ಕಾಲದಲ್ಲಿ; ಆದರೆ ವ್ಯಕ್ತ್ಯಹಂಕಾರ ಹಾಗಲ್ಲ; ಅಹಂಪರಿಬಂಧವೇ ವ್ಯಕ್ತಿತ್ವದ ಅವಚ್ಛೇದಕ, ಪರಿಸೀಮಕ. ಅಹಂಮುಕ್ತತೆ (=ಅಹಮಸ್ಮಿ ಎಂಬ ಜ್ಞಾನದಿಂದ ಮುಕ್ತತೆ) ಎಂದರೇ ವ್ಯಕ್ತಿತ್ವದಿಂದ ಮುಕ್ತತೆ, ಬ್ರಹ್ಮ

ಜಾಗರ. ಬ್ರಹ್ಮಸ್ಥೂಲ, ಬ್ರಹ್ಮಕೇಂದ್ರ ಎಂಬಿವೂ ಬ್ರಹ್ಮಾಹಂಕಾರದಂತೆಯೇ ಬ್ರಹ್ಮೇತರಬುದ್ಧಿಯು ಬಳಸುವ ವರ್ಣನಾತ್ಮಕವಾದ ಮಾತು. ದೇಶ ಕಾಲಗಳಿಗೆ ಸಂಬಂಧಿಸಿದ ಯಾವ ಮಾತೂ ಬ್ರಹ್ಮತ್ವಕ್ಕನ್ವಯಿಸದು. ಬ್ರಹ್ಮೇತರ ಅಭಿಧೇಯಗಳೆಲ್ಲವೂ (ವಾಸ್ತವಿಕ-ಕಾಲ್ಪನಿಕ ರೂಪಗಳೆರಡ-ರಲ್ಲೂ) ದೇಶಕಾಲ ಪರಿಬದ್ಧ. "ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾಸಹ" ಮತ್ತು "ನೈಷಾ ತರ್ಕೇಣ ಮತಿರಾಪನೇಯಾ"!

ಮಾನವನ ಸುಷುಪ್ತ್ಯವಸ್ಥೆಯಲ್ಲಿ ಮತ್ತು ತುರೀಯಾವಸ್ಥೆಯಲ್ಲಿ ದೇಶ-ಕಾಲಗಳ ಪರಿಸೀಮಕತೆಯಿಲ್ಲ. ಆದರೆ ಒಂದು ಜಡ ಬ್ರಹ್ಮ ಪ್ರಜ್ಞೆಯ ಅವಸ್ಥೆಯಾದರೆ, ಇನ್ನೊಂದು ಜೀವದ್‌ಬ್ರಹ್ಮ ಪ್ರಜ್ಞೆಯ ಅವಸ್ಥೆ. ಅಹಂ-ಕಾರಾಭಾವವು ಜಡಬ್ರಹ್ಮತ್ವ-ಜೀವದ್‌ಬ್ರಹ್ಮತ್ವಗಳೆರಡಕ್ಕೂ ಸಾಧಾರಣ. ಆದರೆ ಒಂದಕ್ಕೆ ಜಾಗರಾಂಶ ಶೂನ್ಯಸಮ, ಇನ್ನೊಂದಕ್ಕೆ ಜಾಗರವು ಪೂರ್ಣ; ಸ್ಥೂಲವಾಗಿ ಒಂದು ಅಪ್ರಜ್ಞಾತಸಮಾಧಿ, ಇನ್ನೊಂದು ಅಸಂಪ್ರಜ್ಞಾತ ಸಮಾಧಿ.

ಜೀವ-ಜ್ಞಾನಮಯವಾದ ಚೈತನ್ಯದ ಅಪೂರ್ಣತೆಯು ಜಡದ ನಾನಾತ್ವದಲ್ಲಿ ಕಂಡು ಬರುವುದು ಜಡ ಸಾಧನದಿಂದ ನೋಡುವ ಮನುಷ್ಯ ಮತಿಗೆ. ವಿಜ್ಞಾನೋಕ್ತ (Scientific) ಸರ್ವಜ್ಞಾನಸಾಧನಗಳೂ (ಯಂತ್ರ-ತರ್ಕ ಗಣಿತಗಳನ್ನವಲಂಭಿಸುವ ಎಲ್ಲ ಬುದ್ಧಿ ಪ್ರಕಾರಗಳೂ) ಜಡಾವಚ್ಛಿನ್ನ ಪದಾರ್ಥಗಳು. ಜಡವು ದೇಶಕಾಲವಚ್ಛಿನ್ನ; ದೇಶಕಾಲಗಳು ಜಡಾವಚ್ಛಿನ್ನ ಮಾನಸಬುದ್ಧಿಯಿಂದ ಅಧೃತ, ಪರಿಚ್ಛಿನ್ನ, ಸ್ವಚ್ಛೀಕೃತ. ಮಾನಸ—ಮಾನಸೇತರ ಪದಾರ್ಥಗಳು ಜಡ; ಅವು ಪರಸ್ಪರ ಅವಚ್ಛೇದಕಗಳು, ಪರಿಸೀಮಕಗಳು. ಅಪೂರ್ಣತೆಯೆಂಬ ಕಲ್ಪನೆಯು ಅವೆಲ್ಲವುಗಳ ಪರಿಬಂಧ. ಪರಿಪೂರ್ಣವು ಅಪರಿಬದ್ಧ. ಅದರ ಪರಿಬಂಧಕವಾದ ಅಪೂರ್ಣತೆಯು (Finitude) ಅಭಾವಿಕವಲ್ಲದಿದ್ದರೆ ಪರಿಪೂರ್ಣವು (ಬ್ರಹ್ಮವು) ಕಲ್ಪನಾತೀತ ಅಥವಾ ಪರಿಪೂರ್ಣ (ಸರ್ವತಂತ್ರ ಸ್ವತಂತ್ರ) ಶೂನ್ಯಸ್ವರೂಪಿ ಎನ್ನಿಸ ಬೇಕಾಗುತ್ತದೆ; ಅಂಥ ಶೂನ್ಯವು ಯಾವುದಕ್ಕೂ ಆಧಾರವಾಗಲಾರದು.

ಆಗ ಜಗತ್ತು ಸ್ವಾಧಾರವಾಗಬೇಕಾಗುತ್ತದೆ. ಅದರ ಆಧಾರತ್ವವು ಅಪೂರ್ಣತಾವಚ್ಛಿನ್ನ. ಅಪೂರ್ಣಾಧಾರದ ಮೇಲೆ ಅಪೂರ್ಣವು ನಿಲ್ಲುವುದು ಅಪೂರ್ಣವಾಗಿಯೇ. ಆದರೆ ಪರಿಣಾಮ ಪ್ರವಾಹ ರೂಪದ ಜಗತ್ತು ಪೂರ್ಣ ಪರಿಣಾಮ ನಿತ್ಯತೆಯುಳ್ಳದ್ದಾಗಿದೆ; ಆದರ ಅಂಗಗಳ ಅನಿತ್ಯತೆ ಅಂಗಿಯಾದ ಅದರ ನಿತ್ಯತೆಗೆ ಬಾಧಕವಾಗಿಲ್ಲ. ಅದರ ಸಾಪೇಕ್ಷ ಇಡಿಯು ಆದಿ ಮಧ್ಯಾಂತಗಳು ಪೌರಾಣಿಕ (Mythological)—ಭೌತ ವಾಸ್ತವಿಕವೂ ಅಲ್ಲ, ಅತಿ ಭೌತವಾಸ್ತವಿಕವೂ ಅಲ್ಲ; ಬಿಡಿಗಳ ಆದಿ ಮಧ್ಯಾಂತಗಳು ಸಾಪೇಕ್ಷವಾಗಿ ಭೌತವಾಸ್ತವಿಕ (Physically objective). ಜನ್ಮ-ಸ್ಥಿತಿ-ಭಂಗಗಳನ್ನು ಆಭಾಸ, ಅಧ್ಯಸ್ತ, ಮಾಯಾಕೃತ, ವೈವರ್ತವೆಂದು ವೇದಾಂತ ಹೇಳಿದಾಗ ಅಂಥ ಅವಸ್ಥೆಗಳಿಗೀಡಾದ್ದೆಂದು ತೋರುವ ಜಗತ್ತೂ ಅಂಥದೇ ಎಂದು ಹೇಳಿದೆ. ಭೌತವು ವಾಸ್ತವಿಕವಾದರೆ ಅತಿಭೌತವು ಅವಾಸ್ತವಿಕ; ಅತಿಭೌತವು (Metaphysical entity) ವಾಸ್ತವಿಕವಾದರೆ ಭೌತವು ಅ-ವಾಸ್ತವಿಕ! ಒಂದು ಸತ್, ಇನ್ನೊಂದು ತ್ಯತ್; ಸತ್ಯವು ತ್ಯತ್ಯವಲ್ಲ—ಸತ್ತಿನ ಭಾವವಲ್ಲದೆ, ತ್ಯತ್ತಿನ ಭಾವವಲ್ಲ!

ಪರಿಣಾಮವು Transformotion ರೂಪಾಂತರ ಹೊಂದುವಿಕೆ—ಶೂನ್ಯವಾಗುವುದಲ್ಲ. ಅದು Perpetual becoming ನಿತ್ಯವೂ ಆಗುತ್ತ ಹೋಗುವುದು. ಅದರದು ಕ್ರಿಯಾನಿತ್ಯತೆ, ಭಾವ (Being) ನಿತ್ಯತೆಯಲ್ಲ. ಕ್ರಿಯೆಯು ಅಪೂರ್ಣಾಶ್ರಿತ; ಆದ್ದರಿಂದ ಅದು ಅಪೂರ್ಣ (Imperfect) ಪ್ರಮೇಯ (Knowable) ಮತ್ತು ಸಸೀಮ (finite) ಎನ್ನಲು ಬಾರದು. ಅಪೂರ್ಣತ್ವ-ಕ್ರಿಯಾತ್ವಗಳು ಸಮಕಾಲಿಕ ಸಮವಾಯದ ಸಾಹಚರ್ಯ ಉಳ್ಳ ಧರ್ಮಗಳು-ಜೀವ-ಜ್ಞಾನಗಳಂತೆ (The subject and object of a "u" proposition) ಅಪೂರ್ಣತ್ವದ ನಿತ್ಯತೆ ಆಭಾಸಿಕವಾದಾಗ ಕ್ರಿಯಾ ನಿತ್ಯತೆಯೂ ಆಭಾಸಿಕವಾಗುವುದು. ಬ್ರಹ್ಮವು ಭಾಸ, ಪ್ರಪಂಚವು ಆಭಾಸ, ಭಾಸಸತ್ಯ, ಆಭಾಸ ಸತ್ಯಗಳಲ್ಲಿ ಜಾತ್ಯೈಕ್ಯವಿಲ್ಲ—ಆದುದರಿಂದ ಅದ್ವೈಕ್ಯವಿಲ್ಲ. ಔಚಿತ್ಯ, ಸತ್ಯ, ನ್ಯಾಯಗಳು ಪಾರಮ್ಯಾವಸ್ಥೆಯಲ್ಲಿ ಒಂದೇ; ಅಪಾರಮ್ಯದಲ್ಲಿ ಹಲವು; ಆದರೂ ಅನೌಚಿತ್ಯ, ಅಸತ್ಯ, ಅನ್ಯಾಯಗಳು

ಇನ್ನೂ ಹೆಚ್ಚು ಸಂಖ್ಯಾತವಾಗಿವೆ—ಅದರೆ ಅಸಂಖ್ಯಾತವಲ್ಲ (ಅಸಂಖ್ಯೇಯವಲ್ಲ). ಭಿನ್ನರಾಶಿಗಳ ಆನಂತ್ಯವು ಅಸೀಮಕಾಲ್ಪನಿಕ. ಕಲ್ಪನೆಯೇ ಜಗತ್ತಿನಲ್ಲಿ ಸಾಂತವಾಗಿರುವಾಗ, ಸೀಮಿತವಾಗಿರುವಾಗ ಕಲ್ಪನಾ ಜನ್ಯವು ಹೇಗೆ ಅನಂತವೆನ್ನಿಸೀತು? ಅಕಲ್ಪನೀಯಕ್ಕೆ ಕಾಲ್ಪನಿಕ ಅಸ್ತಿತ್ವವೂ ಇಲ್ಲ! ಕಲ್ಪಕ ಶಕ್ತಿಯೂ ಅದರ ಲೌಕಿಕ ಆಕರವೂ ಪ್ರಮಿತವಾಗಿರುವಾಗ ಕಲ್ಪನೆ ಅಪ್ರಮೇಯವಾಗಲಾರದು ! ಸಮಾನಾಂತರತ್ವವು ಎರಡು ರೇಖೆಗಳಿಗೆ ಸರ್ವತ್ರ ಸತತವೂ ಇದ್ದರೆ ಅವೆಂದೂ ಸಂಧಿಸಲಾರವು.

"ಭೇದಗಳನ್ನು ಕೂಡಿಸುವ ಅಭೇದವನ್ನು (ಅಭೇದ ಸೂತ್ರವನ್ನು) ಶೋಧಿಸುವ ವಿರೋಧ ಸಮನ್ವಯದ ತರ್ಕಪ್ರಕ್ರಿಯೆಯನ್ನು ಅರಿತುಕೊಳ್ಳುವುದಕ್ಕೆ ಮನಸ್ಸು ಅನಿವಾರ್ಯವಾದ ಅವಯವ. ಭೇದರಾಶಿಯಲ್ಲಿ ಗುಪ್ತವಾಗಿರುವ ಅಭೇದ (ಐಕ್ಯ)ಸೂತ್ರವನ್ನು ಕಂಡುಹಿಡಿಯುವುದೇ ನಮ್ಮ ಮನಸ್ಸಿನ ಹಾಗೂ ತತ್ತ್ವಶಾಸ್ತ್ರದ ದೊಡ್ಡ ಕರ್ತವ್ಯ. ಚಾರಿತ್ರವನ್ನೂ ಆಚಾರವನ್ನೂ ಏಕೀಕರಿಸುವುದು ನೀತಿ (ಧರ್ಮ)ಶಾಸ್ತ್ರದ ಕರ್ತವ್ಯ. ವ್ಯಕ್ತಿಗಳನ್ನು ರಾಜ್ಯವನ್ನಾಗಿ ಕೂಡಿಸುವುದು ರಾಜನೀತಿಶಾಸ್ತ್ರದ ಕೆಲಸ. ಎಲ್ಲ ವಿರೋಧಗಳೂ (ಸಮನ್ವಿತವಾಗುವ) ಏಕೀಕೃತವಾಗುವ, ಭೌತ ಪದಾರ್ಥ–ಮನಸ್ಸು, ಕರ್ತೃ–ಕರ್ಮ(=ವ್ಯಕ್ತಿ–ವಸ್ತು), ಒಳಿತು–ಕೇಡುಗಳೆಲ್ಲವೂ ಒಂದಾಗುವ ಮತ್ತು ಅಸ್ತಿತ್ವದ ಅತ್ಯಂತಿಕಸೂತ್ರವಾದ ಕೇವಲ (Absolute) ವನ್ನು ಮುಟ್ಟಿ ಅನುಭವಕ್ಕೆ ತಂದು ಕೊಳ್ಳುವುದು ಮತಧರ್ಮದ ಕಷ್ಟಕಾರ್ಯ. ದೇವರೆಂದರೆ ಎಲ್ಲ ಪದಾರ್ಥಗಳೂ ಚಲಿಸಲು, ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಮತ್ತು ಅರ್ಥಪೂರ್ಣತೆಯನ್ನು ಪಡೆಯಲು ಆಧಾರವಾಗಿರುವ ಪರಮ ಪದಾರ್ಥ (ಕೇವಲ). ಮನುಷ್ಯನಲ್ಲಿ ಕೇವಲನಾದ ದೇವರು ಅಸ್ಮಿತಾಭಾವವನ್ನು ಮೀರಿ ಕೇವಲ ಭಾವ, ಕಲ್ಪನೆ ಅಥವಾ ಆಲೋಚನೆ (Absolute Idea) ಆಗುತ್ತಾನೆ. ಆಲೋಚನೆಯು ತನ್ನನ್ನು ತಾನು ಕೇವಲಾಂಶವೆಂದು ಅರಿತುಕೊಳ್ಳುತ್ತದೆ; ಅಂದರೆ ಅದು ಅವನ ವೈಯಕ್ತಿಕ ಇತಿಮಿತಿಗಳನ್ನೂ ಉದ್ದೇಶಗಳನ್ನೂ ಮೀರುತ್ತದೆ ಮತ್ತು ಸಾರ್ವಜೀವನದ ಅಡಿಯಲ್ಲಿ ಎಲ್ಲವುಗಳ ಗುಪ್ತ ಸಾಮರಸ್ಯ (ಸಾಮಶ್ರುತ್ಯ)

ವನ್ನು ಗ್ರಹಿಸುತ್ತದೆ. ವಿಚಾರವು ವಿಶ್ವದ ಸಾರ,...ಪ್ರಪಂಚದ ಸಂಕ್ಷೆಯು ಪೂರ್ಣವಾಗಿ ವಿಚಾರಬದ್ಧವಾದುದು"— ಎಂಬ ಹೆಗೆಲ್ಲುಂಕ್ತಿಯು ವಿಚಾರದ ಭಾಷೆಯಲ್ಲಿ ಅತ್ಯಂತ ಕಡಿಮೆ ನಿರ್ದುಷ್ಟವಾಗಿ ವರ್ಣಿಸಬಹುದಾದ ದೇವ-ಮಾನವ-ಪ್ರಪಂಚಗಳ ಸಂಬಂಧ ಎನ್ನಬಹುದು. The Relative is relatively related to the Absolute- ಸಾಪೇಕ್ಷವು ಸಾಪೇಕ್ಷವಾಗಿ ನಿರಪೇಕ್ಷಕೇವಲಕ್ಕೆ ಸಂಬಂಧಿಸಿದೆ; ಆದರೆ The Absolute is absolutely independent of the Relative- ಕೇವಲವು ಕೇವಲವಾಗಿ ಸಾಪೇಕ್ಷ ಪದಾರ್ಥದಿಂದ ಸ್ವತಂತ್ರ !

ಪರಮಾತ್ಮನ ಪರಮಾರ್ಥದ ಪರಮತ್ವವನ್ನು ಗ್ರಹಿಸದ ಮೇಲೆ ಮಿಕ್ಕ ಮೌಲ್ಯಗಳ ತಾರತಮ್ಯ ವಿವೇಕವನ್ನು ತರ್ಕಶುದ್ಧವಾಗಿ ಮಾಡಲು ಸುಲಭವಾಗುತ್ತದೆ. ಅದರಿಂದಲೇ ಸೈದ್ಧಾಂತಿಕವಾಗಿ ಬ್ರಹ್ಮಸ್ಥಾಪನೆಗೆ ಭಾರತವು ಪ್ರಥಮಪ್ರಾಶಸ್ತ್ಯ ಕೊಟ್ಟಿತು. ಸಾಪೇಕ್ಷಗಳ ಸಾಪೇಕ್ಷತೆಯು ನಿರಪೇಕ್ಷದ ನಿರಪೇಕ್ಷತೆಯನ್ನು ಅರ್ಥತಃ ಆಧರಿಸಿದೆ. ಸಾಪೇಕ್ಷಗಳ ಪರಸ್ಪರ ಸಾಪೇಕ್ಷತೆ ಎಂಬುದು ಸಾಪೇಕ್ಷ—ಸಂಪೂರ್ಣವಲ್ಲ, ಸರ್ವತಂತ್ರ ಸ್ವತಂತ್ರವಲ್ಲ. ದೇವ ಜೀವನದ ಹಿನ್ನೆಲೆಯು ಮಾನವ ಜೀವನದ ಸಾರ್ಥಕತೆಯನ್ನು ಅಳೆಯಲು ಅಗತ್ಯ; ಅದರ ಉಪಮಾನತ್ವವು ಇದರ ಉಪಮೇಯತ್ವಕ್ಕೆ ಆಧಾರ. ಪರಮಾರ್ಥದೊಡನೆ ತುಲನೆಮಾಡಿದಲ್ಲದೆ ವ್ಯವಹಾರಾರ್ಥದ ಮೌಲ್ಯ ನಿರ್ಣಯ ಸಮರ್ಪಕವಾಗಿ ಆಗದು. ಕೇವಲತ್ವ ಅಥವಾ ಪೂರ್ಣನಿತ್ಯತೆಯು ಅಪೂರ್ಣ ನಿತ್ಯತೆಗಳ (ಸಾತತ್ಯಗಳ) ಕಲ್ಪನೆಗೆ ಆಧಾರ. ಕೇವಲ ಅನಿತ್ಯತೆಯೆಂಬುದು ಕಾಕದಂತ—ಯಾವ ಕ್ಷಣಭಂಗ ವಾದದಿಂದಲೂ ಅದು ಸಿದ್ಧವಾಗದು. ಆದುದರಿಂದ ಮೋಕ್ಷಕ್ಕೆ ಅವಿರುದ್ಧ ವಾದುದು ಧರ್ಮ, ಧರ್ಮಕ್ಕೆ ಅವಿರುದ್ಧವಾದವುಗಳು ಅರ್ಥ-ಕಾಮಗಳು. ಅರ್ಥಸಂಚಯ-ಕಾಮೋಪಭೋಗಗಳು ವೈಯಕ್ತಿಕವಾಗಿಯಾಗಲಿ, ಸಾಮೂಹಿಕವಾಗಿಯಾಗಲಿ- ಧರ್ಮವಿರುದ್ಧವಾಗಿ ಸಾಗಿದರೆ, ಅಂಥ ನಾಗರಿಕತೆಯು ನಾಶ ಬಹುಬೇಗ ಆಗುವುದು. ಅರ್ಥಕಾಮ ಪ್ರಧಾನವಾದ ವಾದಗಳು ಜಗ

ತ್ರಿಸ ಸಾರ್ವಧರ್ಮವನ್ನು ನಿರ್ಣಯಿಸಲಾರವು. ಮಾನವಧರ್ಮವು ಸಾರ್ವಜೀವನ ಧರ್ಮವನ್ನು ಆಧರಿಸಿದಾಗಲೇ ಮಾನವ ನಾಗರಿಕತೆಯು ಚಿರಂಜೀವಿತ್ವಕ್ಕೆ ಕಾರಣವಾಗುವುದು.

ಪ್ರಪಂಚದ ವಿಸ್ತಾರವನ್ನೂ ಅದರ ಇತಿಹಾಸದ ದೈರ್ಘ್ಯವನ್ನೂ ಮರೆತ ವಿಚಾರವಾದಗಳು ನಾಗರಿಕತೆಯ ಅಸ್ಥಾಯಿತ್ವಕ್ಕೆ ಕಾರಣಗಳಾದುವಕ್ಕೆ ಭಾರತೇತರ ರಾಷ್ಟ್ರಗಳೆಲ್ಲವೂ ನಿದರ್ಶನಗಳಾಗಿವೆ-ಎಂಬುದನ್ನು ಭಾರತೀಯ ಅರಿತರೆ, ಪಾಶ್ಚಾತ್ಯರ ಸಮಾಜವಾದೀಯ ಪ್ರಜಾಪ್ರಭುತ್ವವನ್ನು ಅವರಿಗಿಂತ ಚೆನ್ನಾಗಿಯೂ ದೃಢವಾಗಿಯೂ ಇಲ್ಲಿ ಸ್ಥಾಪಿಸಬಲ್ಲವನಾಗುತ್ತಾನೆ. ಪೂರ್ವವು ಆಧಾರ, ಪಶ್ಚಿಮವು ಆಧೇಯ; ಆಧಾರದ ಪ್ರಾಧಾನ್ಯ ಆಧೇಯಕ್ಕಿಲ್ಲ. ಆದರೆ ಆಧಾರದ ಅಗಲ-ಆಳಗಳ ಅದ್ಭುತ ಪರಿಮಾಣಗಳ ದೆಸೆಯಿಂದ ಅದು ಬಹಳ ಸಲ ಮರೆತು ಹೋಗುವುದು ಕಂಡುಬಂದಿದೆ, ಅರ್ಥವಾಗದಂತಾದುದು ಅನುಭವಕ್ಕೆ ಬಂದಿದೆ. ಅದನ್ನೇ ಗೀತೆ "ಧರ್ಮ ಗ್ಲಾನಿ" ಎಂದು ಕರೆದಿದೆ. ಧರ್ಮಗ್ಲಾನಿಗೆ ದೇಶ ಉನ್ಮುಖವಾದ ಕೂಡಲೇ ಪ್ರಬುದ್ಧ ಭಾರತೀಯರು ಜನಜಾಗ್ರತಿಯನ್ನು ಮಾಡುತ್ತ ಬಂದಿದ್ದಾರೆ; ಆದರದು ಇನ್ನೂ ಹೆಚ್ಚು ಯೋಜನಾಬದ್ಧವಾಗಿಯೂ ಸಮರ್ಥತರ ಕ್ರಮದಿಂದಲೂ ನಡೆಯುವಂತೆ ಮಾಡಬಲ್ಲ ಶಕ್ತಿಯು ವರ್ತಮಾನಕಾಲಕ್ಕಿದೆ; ಕಣ್ಣು ತೆರೆದರೆ ಗೊತ್ತಾಗುತ್ತದೆ.

"ಪರೋಪಕಾರಃ ಪುಣ್ಯಾಯ" ಎಂಬುದನ್ನು "ಪರೋಪಕಾರೋ ವಿಧಿಬದ್ಧ ಕರ್ತವ್ಯಂ" ಎಂದು ನಮ್ಮ ದೇಶದ ಸಂವಿಧಾನೋತ್ಥ ಕಾಯಿದೆಯು ಸಾರಿ ಜಾರಿಗೆ ತರುವುದೇ ಇಂದಿನ ಪರಮಕರ್ತವ್ಯ. ಪರನು ನಮಗಿಂತ ನೈತಿಕವಾಗಿ ಹೆಚ್ಚು ಶ್ರೇಷ್ಠನು. ನಮಗಿಂತ ನೈತಿಕವಾಗಿ ಕೀಳಾದ ಪರನಿಗೆ ಮಾಡುವ ಉಪಕಾರವು ಶಿಕ್ಷಣೋದ್ದೇಶವುಳ್ಳ ಶಿಕ್ಷೆಯ ಸ್ವರೂಪವುಳ್ಳದ್ದು. ಸರ್ವೋದಯದಲ್ಲಿರುವ ಸುಖವು ಸ್ವಾರ್ಥೋದಯದಲ್ಲಿಲ್ಲ ಎಂಬುದನ್ನು ಒಪ್ಪುವ ಸಂಸ್ಕೃತಿಯು ಪರಸುಖ ವಿಮುಖವಾದ ಸ್ವಸುಖ ಸಾಧನೆಯನ್ನು ಎಂದೂ ಎತ್ತಿಹಿಡಿಯದು. "ತೇನ ತ್ಯಕ್ತೇನ

ಭುಂಜೀಥಾ:" ಎಂಬುದು "Live and let live—ಬದುಕು ಮತ್ತು ಬದುಕಗೊಡು" ಎಂಬ ಧ್ಯೇಯೋಕ್ತಿಗಿಂತ ಹೆಚ್ಚು ಮಾನವೀಯವಾದುದು. ಇದು ಭಾರತೀಯ ಪರಮಾರ್ಥಸಂಸ್ಕೃತಿಯ ಸಾರ. ಇದೇ ಧರ್ಮಾರ್ಥ ಸಾಧನ, ಮೋಕ್ಷೋನ್ಮುಖತೆ. ತದ್ವಿಪರೀತ ಪ್ರವೃತ್ತಿಗಳು ಅಭಾರತೀಯ, ಅನುದಾತ್ತ, ಅದಿವ್ಯ. ಉಕ್ತ ಧ್ಯೇಯವು ಪಾತ್ರಾಪಾತ್ರ ವಿವೇಕದ ಮಾನದಂಡದಿಂದ ಮಾತ್ರ ಆಚರಣೀಯ ಎಂಬುದನ್ನು ಅಲಕ್ಷಿಸಿದರೂ ಅಪ-ಭಾರತೀಯ ಧರ್ಮವನ್ನು ಹಿಡಿದಂತಾಗುವುದು. ಈ ದೋಷದ ಫಲವಾಗಿಯೇ ಭಾರತೀಯ ಆಧ್ಯಾತ್ಮಿಕತೆ ಹಲವೆಡೆ Effeminate ಸ್ತ್ರೈಣ, Pessimistic ನಿರಾಶೋನ್ಮುಖ, Superstitious ಅಂಧ ಶ್ರದ್ಧಾಮಯ ಜನರನ್ನು ತಯಾರು ಮಾಡಿತು; ಅವರಿಂದ ಅಪ-ಆಧ್ಯಾತ್ಮಿಕತೆ ಪ್ರಚುರವಾಗಿ ತನ್ಮೂಲಕ ಅವೈಜ್ಞಾನಿಕತೆ, ಪೌರುಷಹೀನತೆ, ಸ್ವಾಭಿಮಾನಶೂನ್ಯತೆ, ಧೀರತಾಭಾಸಗಳನ್ನು ನಾಯಕರಲ್ಲಿ ಬೆಳೆಯಿಸಿ ವಿವಿಧ ರಾಜಕೀಯ, ಆರ್ಥಿಕ, ಸಮಾಜಿಕ ಹಾನಿಗಳನ್ನು ಶತಮಾನ ಗಟ್ಟಲೆಯಾಗಿ ಜನರು ಅನುಭವಿಸಬೇಕಾಗಿ ಬಂತು. ವ್ಯಾಸ ಸ್ಪಷ್ಟನಾದ ವಿದುರನ ಮಹಾಸೂತ್ರವೇ ಪಾತ್ರಾಪಾತ್ರವಿವೇಕ ಅಥವಾ ಇಂದಿನ ಮಾತಿನಲ್ಲಿ ಒಲವಿನ ಪರೀಕ್ಷೆ (Aptitude Test); ಇನ್ನೊಂದು ಮಾತಿನಲ್ಲಿ ಅದೇ ಅರ್ಹತಾಪರೀಕ್ಷೆ. ಜೀವನದ ಭೌತಿಕ ಆವಶ್ಯಕತೆಗಳಲ್ಲಿ ಅಸ್ಥಿತವಾಗುವ ಸಾಮ್ಯವಾದವು ಅರ್ಹತಾವರ್ಗಭೇದ ಅನ್ವಯವಾಗುವ ಇದಿತರ ಸಂದರ್ಭಗಳಿಗೆ ಅನ್ವಯಿಸದು. ಕ್ಷೇತ್ರ ಪ್ರತ್ಯೇಕತೆಯ ದೆಸೆಯಿಂದ ಅವುಗಳಲ್ಲಿ ಪರಸ್ಪರ ಸಂಘರ್ಷಕ್ಕೆ ಅವಕಾಶವೇ ಇಲ್ಲ. ಪಾಶ್ಚಾತ್ಯ ವ್ಯಷ್ಟಿವಾದಿ (Individualist) ಮತ್ತು ಸಮಷ್ಟಿವಾದಿ (Socialist) ಗಳು ಈ ಅಂಶವನ್ನು ಗಮನಿಸದುದರಿಂದಲೇ ಅಮೇರಿಕದ ಸಂಯುಕ್ತ ರಾಷ್ಟ್ರ ಮತ್ತು ರಶಿಯಾದ ಒಕ್ಕೂಟಗಳು ತತ್ವಭೇದವಿಟ್ಟು ಪ್ರತ್ಯೇಕ ಬಣಗಳೆಂದು ತಮ್ಮನ್ನು ತಾವು ತಿಳಿದುಕೊಂಡಿರುವಂತಾಗಿದೆ. ಹಾಗೇ ಪಾಶ್ಚಾತ್ಯ ವೈಜ್ಞಾನಿಕವಾದಿಗಳೂ ಅನುಭಾವ (ಯೋಗ) ವಾದಿಗಳೂ ತಮ್ಮನ್ನು ತಾವು ಪರ-ಪಕ್ಷಗಳೆಂದು ತಿಳಿದುಕೊಂಡದ್ದು. ವೈಜ್ಞಾನಿಕತೆ-ಯೋಗೋನ್ಮುಖತೆಗಳು

ಪರಸ್ಪರ ವಿರುದ್ಧ ಪ್ರವೃತ್ತಿಗಳಲ್ಲವೆಂಬುದು ಭಾರತೀಯ ವ್ಯಾಸಧರ್ಮ ಸಾರಿಹೇಳುತ್ತದೆ. ಕರ್ಮತ್ಯಾಗ-ಕರ್ಮಫಲ ತ್ಯಾಗ-ಕರ್ಮಕರ್ತೃತ್ವದ ಅಹಂಕಾರತ್ಯಾಗಗಳಲ್ಲಿ ಮೊದಲನೆಯದನ್ನು ವ್ಯಾಸ ಎಲ್ಲಿಯೂ ಸಿದ್ಧಾಂತ ವೆಂದು ಹೇಳಿಲ್ಲ. ತಾತ್ಪರ್ಯ ಗ್ರಹಣದಲ್ಲಿ ಅಸಮರ್ಥರಾದ ವ್ಯಾಖ್ಯಾತೃ ಗಳ ಪಿಸೆಯಿಂದ ೨—೩ ನೆಯವುಗಳ ಸ್ವರೂಪವು ಮೊದಲನೆಯದೆಂದು ತಿಳಿದು ಅನೇಕರು ಸ್ವಹಾನಿ-ಪರಹಾನಿಗಳಿಗೆ ಕಾರಣರಾಗಿರಬಹುದು. "ನಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್!"

ಭೌತಿಕವಾದ ಕರ್ಮತ್ಯಾಗವು ಬ್ರಹ್ಮನಿಗೂ ಅಸಾಧ್ಯ. ಬ್ರಹ್ಮನಿಗೆ ಭೌತಿಕಸೃಷ್ಟಿಯಿಂದ ನಿವೃತ್ತಿ ಮಹಾಯಾಸ್ವರ್ಣವಿದೆ; ಅವನ ಸೃಷ್ಟಿಯಿಂದ ಮಾತ್ರ ಅಲ್ಲ—ಅಷ್ಟೆ. ಭೌತಿಕ ವ್ಯವಹಾರದ ಅನಂತ್ಯವು ಶಂಕರೋಕ್ತ. ಕರ್ಮಯಾರನ್ನೂ ಬಿಡದು; ಆದ, ಹಿಡಿದುಕೊಂಡಿರುವಾಗಲೇ ಅವನು "ಬುದ್ಧಿವಂತರು" ಶಿಷ್ಟವರಾಗಿರಬಹುದು-ಎಂಬುದೇ ಜ್ಞಾನಯೋಗದ ನಿಜವಾದ ಮರ್ಮ. ಈ ಒಗಟನ್ನು ವಿವರಿಸಹೊರಟು ಕರ್ಮವಾದ ಜ್ಞಾನವಾದಗಳ ಪ್ರತ್ಯೇಕತೆ ಜನರಲ್ಲಿ ಪ್ರಚಾರವಾಗುವಂತೆ ಮಾಡಿದ ವ್ಯಾಖ್ಯಾತೃತ್ವವು ಸಾಂಸ್ಕೃತಿಕ ದ್ರೋಹ, ಐತಿಹಾಸಿಕ ಅಪರಾಧ. ವ್ಯಾಸ ನಿರ್ಮಿಸಿದ ತುಲಾಧಾರನ ಪಾತ್ರವು ಅವ ನಿರ್ಮಿಸಿದ ಕೃಷ್ಣಪಾತ್ರದಂತೆಯೇ ಅವನಿಗೆ ಪ್ರಿಯವಾದ ಅತ್ಯುನ್ನತ ಆದರ್ಶ ಪಾತ್ರ. ಅದು ಜೀವನ್ಮುಕ್ತ ಜೀವನ (ದಿವ್ಯಜೀವನ) ಎಂದರೇನೆಂಬುದನ್ನು ವ್ಯಾವಹಾರಿಕವಾಗಿ ನಮ್ಮ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದೆ, ನಿದರ್ಶಿಸಿದೆ, ಸ್ಪಷ್ಟೀಕರಿಸಿದೆ. ವೈದಿಕ ಜೀವನದ ಪರಮಾದರ್ಶ ಅದು. ಅದು ನಿಷ್ಕ್ರಿಯ ಜೀವನವಲ್ಲ, ನಿರಾಶಾಮಯ ಜೀವನವಲ್ಲ, ವೈಯಕ್ತಿಕ ಸ್ವಾರ್ಥದ ಜೀವನವಲ್ಲ, ಅಂಧ ಶ್ರದ್ಧೆಯ ಜೀವನವಲ್ಲ, ಅಕ್ಷರಾರ್ಥದ ನಿಷ್ಕರ್ಮ ಜೀವನವಲ್ಲ, ವೈವ-ದಾಸಪಂಥದ ಜೀವನವಲ್ಲ, ವೈಪರುದ್ಧ ಜೀವನವಲ್ಲ, ಭಿಕಾರಿ ಜೀವನ ವಲ್ಲ, ಅಸಾಮಾಜಿಕ ಜೀವನವಲ್ಲ — ಜ್ಞಾನ, ಭಕ್ತಿ, ಕರ್ಮ, ವೈರಾಗ್ಯಗಳ ಅಂತಃಸಾರವನ್ನು ಸಮನ್ವಯಿಸಿಕೊಂಡು ಬಾಳಿದ ಸಮಗ್ರಯೋಗ

(Integral Mysticism) ಜೀವನ. ಉಕ್ತಜೀವನ ನಡೆಸುವವರೇ ಆರ್ಯರು (Perfect gentlemen) ಅಥವಾ ಶಿಷ್ಟರು ಇಲ್ಲವೇ ಸಾಧುಗಳು, ವಿದೇಹ ಜನಕರು, ವಿದ್ಯಾರಣ್ಯರು, ಜಗನ್ನಾಗರಿಕರು, ಬ್ರಹ್ಮರು. Individual's Universalism ವ್ಯಕ್ತಿಯು ವಿಶ್ವಾತ್ಮಕತೆ ಎಂಬ ವಿರೋಧಾಭಾಸದಿಂದ ಅಂಥ ಜೀವನಸಿದ್ಧಾಂತವನ್ನು ವರ್ಣಿಸಬಹುದು; ಅಥವಾ Person's Impersonalism ಶರೀರಿಯು ಅಶಾರೀರಿಕ ಭಾವಮಯತೆ ಎಂದು ಕರೆಯಬಹುದು. ಈ ಅರ್ಹತೆಯು ಸ್ವಶರೀರದ ಆರೋಗ್ಯಕ್ಕೆ ಶತ್ರುವಾದ ದೇಹಶೋಷಣೈಕನಿಷ್ಠವಾದ ತಾಪಸಿಕತೆಯಲ್ಲ; ಹಾಗೇ ದೇಹಪೋಷಣೈಕನಿಷ್ಠವಾದ ಬಾಯಿಬ್ರಹ್ಮದ ವೇದಾಂತಿಯ ಜೀವನವೂ ಅಲ್ಲ. "ತುಲಾ ಮೇ ಸರ್ವಭೂತೇಷು ಸಮಾ ತಿಷ್ಠತಿ ಜಾಜಲೇ!" ಎಂದ ಆತ್ಮಯಾಜಿಯಾದ ತುಲಾಧಾರನ ಜೀವನ ಕರ್ಮಠವಾಗಿದ್ದಿಲ್ಲ, ಪಕ್ಷಪಾತದ್ದಾಗಿದ್ದಿಲ್ಲ, ಪಾತ್ರಾಪಾತ್ರ ವಿವೇಕವಿಮುಖವಾದ ಜಡಸಾಮ್ಯವಾದಿಯದಾಗಿದ್ದಿಲ್ಲ, ಸರ್ವ ತಾರತಮ್ಯಮಯವಾದ ನಾನಾತ್ವವಾದಿಯ ಆತ್ಯಂತಿಕ ಸ್ವಾರ್ಥಗ್ರಹಶೀಲದ್ದಾಗಿದ್ದಿಲ್ಲ; ಬ್ರಹ್ಮನಂತೆ ಅವರದು ನೀತಿ ವಾಕ್ಯಗಳಿಂದ ವ್ಯಂಜನೀಯವಾದ ಆದರೆ ಜೀವನೀಯವಾದ ಮಹಾಬುದ್ಧಿಸೂತ್ರ, ಮಹಾಜ್ಞಾನಸೂತ್ರ. ಆದುದರಿಂದ ಪಾಶ್ಚಾತ್ಯರಿಗೇ ಏಕೆ? ಪೌರಸ್ತ್ಯರಲ್ಲೇ ಎಷ್ಟೋ ಜನ ವಿದ್ವಾಂಸರಿಗೆ ಅಪಾರ್ಥಕ್ಕೆಡೆಗೊಡದಂತೆ ಅದನ್ನು ಜನರೆದುರಿಡಲು ಸಾಧ್ಯವಾಗದಾಯಿತು; ಪ್ರಸ್ತುತ ಲೇಖಕನಿಗೆ ಉಕ್ತಕಾರ್ಯವು ಸಾಧ್ಯವಾಗಿದೆ ಎಂಬ ನಂಬಿಗೆಯಿಲ್ಲ. "ಗುರೋಸ್ತು ಮೌನಂ ವ್ಯಾಖ್ಯಾನಂ" ಎಂಬುದಕ್ಕೆ "ಮೌನದಲ್ಲಿಯೂ ಕೂಡ ಮಾತಿನ ಧ್ವನಿಯಿರಲಿ" ಎಂಬಂತಹ ಪ್ರಯತ್ನ ಸಮರ್ಥನೆಯಿದೆ ಎಂದು ನಂಬಿದ್ದೇ ಇಂಥ ವಿಷಯವನ್ನು ಚರ್ಚಿಸಲು ವಿವರಿಸಲು, ಸಮರ್ಥಿಸಲು ಹೊರಟದ್ದಕ್ಕೆ ಆಧಾರ.

ಪಾರಿಭಾಷಿಕ ಶಬ್ದಗಳು

ಅಲಕ್ಷಣಿತ Undefined
ಅರ್ಥವತ್ತೆ, ಅರ್ಥಪೂರ್ಣತೆ The state of being significant
ಅದ್ವೈತ Monisim
ಅಸ್ತಿತ್ವ Existence
ಅಪ್ರಮೇಯ The Immeasurable, Infinite
ಅಪ್ರಮೇಯತೆ, ಅನಂತತೆ Infinity
ಅಪರಿಮಿತ, ಅಸೀಮ Limitless, infinite
ಅಜ್ಞೇಯ Unknowable
ಅನುಷೇಧ The Positive
ಅಧಿಕೃತ ವಚನಾರ್ಹತೆ Warranted, assertability
ಅವಲಂಬನೀಯ Dependable, reliable
ಅಂತರ್ನಿರೀಕ್ಷಣೆ Introspection
ಅರ್ಥಕ್ರಿಯಾಕಾರಿ Promoting activity
ಅನ್ವಯ Thesis
ಅರ್ಥವತ್ತೆ Significance
ಅಸಿದ್ಧ Unproved, unestablished
ಅಭಿಧಾಯಕ Denominator
ಅಪಸ್ವರ Jarrying
ಅಂಗ, ಅಂಶ Element; degree
ಅಂಗ, ಅವಯವ, ಬಿಡಿ Part
ಅಪರಿವರ್ತನೀಯ Immutable
ಅಮೂರ್ತ Abstract
ಅತಿಭೌತ Metaphysical
ಅಭೇದ್ಯ Infallible
ಅತೀಂದ್ರಿಯ Transcendental
ಅಸಂಖ್ಯೇಯ uncountable

ಅಸಂಖ್ಯಾತ Uncounted, countless
ಅವೈಯುಕ್ತಿಕ ಅದ್ವೈತ Impersonalistic monism
ಅಸಂಪ್ರಜ್ಞಾತ Not known clearly
ಅಸ್ಪಷ್ಟತಾವಾದ Obscurantism
ಅತಿಮಾನಸ Supramental
ಅನುಷೇಧವಾದ Positivism
ಅಭಿವ್ಯಕ್ತಿವಾದ Expressionism
ಅಂತಃಪ್ರಭಾವವಾದ Impressionism
ಅಸ್ತಿವಾದ Existentialism
ಅಕಾಯ Incorporeal
ಆಧೇಯ, ಗ್ರಾಹ್ಯ Acceptable
ಆತ್ಯಂತಿಕ Final
ಆತ್ಮಪ್ರದರ್ಶನ Self—exhibition
ಆತ್ಮಾಸ್ತಿತ್ವ Self-existence
ಆನುಷಂಗಿಕ Accidental
ಆವಿರ್ಭಾವ, ವ್ಯಿದೋರುವಿಕೆ, ಅಭಿವ್ಯಕ್ತಿ Manifestation, revelation
ಆಕರ Source
ಆನುಪಾತಿಕ Proportionate, in proper ratio
ಆತ್ಮಜ್ಞಾನ Self-consciousness
ಆಭಾಸ Appearance
ಆತ್ಮಸಂಗೋಪನ, ಆತ್ಮಸಂರಕ್ಷಣ Self-preservation
ಆವಯವಿಕ Organic
ಆನುಭವಿಕ Experiential
ಆನುಮಾನಿಕ Deductive, inferential
ಆತ್ಮ, ಚೈತನ್ಯ Spirit
ಆಕಾರ, ಆಕೃತಿ, ರೂಪ Figure, outline, shape
ಆವಯವಿಕತೆಯ ತತ್ವಜ್ಞಾನ Philosophy of organism
ಆಣವಿಕ ಪ್ರವಾಹ Flux
ಆಧ್ಯಾತ್ಮಿಕ, ಚೈತನಿಕ Spiritual

ಆಧ್ಯಾತ್ಮಿಕವಾದ Spiritualism
ಆವಿಷ್ಕಾರ Revelation
ಇಚ್ಛಾಪ್ರಯತ್ನ, ಇಚ್ಛಾಶಕ್ತಿ, ಸಂಕಲ್ಪಶಕ್ತಿ Volition, will
ಇರವು, ಅಸ್ತಿತ್ವ Being; existence
ಇಡಿ Whole
ಉತ್ಕ್ರಿಯಾತ್ಮಕ Dynamic
ಉಪಾಧಿ Condition, attribute
ಉದ್ದೇಶ್ಯ Subject
ಉಪಾಹಿತಕ್ಷೇಪ Conditioned reflex
ಉಪಯುಕ್ತತೆ, ಪ್ರಯೋಜನ Utility
ಉದಾಹರಣವಾಕ್ಯ The universal proposition
ಉಪನಯವಾಕ್ಯ Sentence bringing to proximity
ಉನ್ಮುಖೇಂದ್ರಿಯ Sensitive
ಊಹೆ, ಕಲ್ಪನಾಶಕ್ತಿ Imagination
ಐಕಾತ್ಮ್ಯ Union, identity
ಐಂದ್ರಿಯ Sensuous
ಒಲೆ To tend, lean
ಒಪ್ಪಂದ Contract
ಒಳಿತು Good
ಔಪಚಾರಿಕ Formal
ಕಲ್ಪನೆ, ಭಾವ Idea
ಕ್ರಮ Method
ಕರಣವಾದದ ತತ್ವಜ್ಞಾನ Philosphy of Instrumentation
ಕಲ್ಪನಾವಿಲಾಸ Fiction, fancy
ಕಾದಾಚಿತ್ಕತೆ ಆಕಸ್ಮಿಕತೆ Accidence
ಕಾರ್ಯಾರ್ಥವಾದ, ವ್ಯಾಪಾರಸತ್ಯತಾವಾದ Pragmatism
ಕಾಯ Body
ಕಾರ್ಯಮಯ ಸಂಬಂಧ Prehensive occasion
ಕಾರಕ Factor
ಕುಬೇರ ಪ್ರಭುತ್ವ Aristocracy

ಕ್ಷೇತ್ರ Field, area
ಕೇವಲ, ಶುದ್ಧ, ಪೂರ್ಣ Absolute
ಗರ್ಭಶಾಸ್ತ್ರ Embryology
ಗೌಣ Qualitative
ಗೃಹೀತಕರಣ Assumption
ಘಟನೆ Event, phenomenon
ಘಟನಾವಿಜ್ಞಾನವಾದ Phenomenology
ಚಲನ Motion, movement
ಚಲನ ವಿಧಿ Law of motion
ಚೈತ್ರಿಕ Picturesque
ಜಟಿಲ Complex
ಜ್ಯಾಮಿತಿ Geometry
ಜೀವಶಾಸ್ತ್ರ Biology
ಜೀವ, ಜೀವಾತ್ಮ Soul
ಜ್ಞೇಯ Knowable
ತರ್ಕಸಮನ್ವಯ ಮಾರ್ಗ Dialectical method
ತರ್ಕ Reason
ತರ್ಕಸಮರ್ಥನೆ ಅಥವಾ ತರ್ಕಸಮನ್ವಯ Dialectics
ತತ್ವಸೂತ್ರೀಕರಣ Postulation
ತರ್ಕಪೂರ್ವ A priori
ತಾರ್ಕಿಕ Logical
ತಾಳಿಕೆ Duration
ತಿಳಿವಳಿಕೆ understanding; cognition
ತ್ರಿಪಾದ ಪದ್ಧತಿ Three-stepped system
ದ್ರವ್ಯ Substance
ದತ್ತ Datum
ಧರ್ಮ, ಸಹಜಗುಣ Property
ಧ್ಯೇಯವಾದ Idealism
ನ್ಯಾಯವಾಕ್ಯ Syllogism
ನಿಷ್ಕ್ರಿಯ, ಅಚಲ Static

ನಿಷೇಧ The negative
ನಿತ್ಯಪರಿಣಾಮಿ, ಪರಿಣಾಮಿ ನಿತ್ಯ Eternally changing
ನಿಕಷ Criterion
ನಿರ್ವೀರ್ಯ ಘಟನಾವಾದ Epiphenomenalism
ನಿಷ್ಕೃಷ್ಟ Certain
ನಿಗಮನ Conclusion
ನಿರಪೇಕ್ಷ Independent. absolute
ನಿತ್ಯವಸ್ತು Eternal object
ನಿರುಪಾಧಿಕ Unconditional
ನೈದರ್ಶನಿಕ Demonstrative
ಪ್ರಕಾರ Pattern, way
ಪ್ರತ್ಯಾಶೆ Hope
ಪರಮಾರ್ಥ Ultimate value
ಪ್ರಮಾಣ ಶಾಸ್ತ್ರ Epistemology
ಪ್ರತ್ಯೇಕತೆ Distinction
ಪ್ರಮೇಯ, Proposition, Finite
ಪ್ರಮಿತ, ಪರಿಸೀಮಿತ Limited
ಪರಾರ್ಥಾನುಮಾನ Deductive inference
ಪ್ರಯೋಗ Experiment, experimentation
ಪ್ರತ್ಯನ್ವಯ Antithesis
ಪ್ರಮಿತಾಂಕ Finite number
ಪ್ರಜ್ಞೆ Consciousness
ಪದಾರ್ಥ Category, entity, thing
ಪ್ರತಿಭೆ Intuition
ಪ್ರವೃತ್ತಿ Propensity, tendency
ಪ್ರತಿಮೆ Image
ಪ್ರಮೇಯ, ಪ್ರತಿಜ್ಞಾವಾಕ್ಯ Proposition
ಪರಬ್ರಹ್ಮ, ಪರಮಾತ್ಮ The Absolute
ಪ್ರತಿನಿಧಿತತೆ The state of being represented
ಪರಿಮಾಣ Measure

ಪರಮಾರ್ಥ Highest value
ಪರಬ್ರಹ್ಮ, ನಿರ್ಗುಣಬ್ರಹ್ಮ The Absolute
ಪ್ರಾಣಿಚೈತನ್ಯ Animal spirit
ಪಾರಸ್ಪರಿಕ Mutual
ಪ್ರಾಸ್ಥಾನಿಕ Scholastic
ಪ್ರಾಥಮಿಕ Primary
ಪ್ರಾಧಿಕಾರ Authority
ಪ್ರಾಕಾರಿಕ ಕ್ರಿಯಾನುಕ್ರಮ Patterned process
ಪಾರಿಮಾಣಿಕ Quantitative
ಪುರುಷಾರ್ಥ Ultimate value
ಪೂರ್ಣಾಂಕ Integer, full number
ಪೂರ್ವನಿಷ್ಕರ್ಷವಾದ Determinism
ಬಲ Force
ಭಾವೋದ್ರೇಕ Passion
ಭ್ರಾಂತಿ Illusion
ಭಾವವಾಚಕ Abstract
ಭಾವಪ್ರಕಾರ Impression
ಭಾವನೆ Emotion
ಭಾವನಾಂಶ Feeling
ಭಾವನೋದ್ರೇಕ, ಭಾವೋದ್ರೇಕ Passion
ಭಾವಿಸು, ಭಾವನಿಸು Feel
ಭೇದ್ಯ Fallible
ಭೌತ ಪದಾರ್ಥ Matter—ಭೌತಶಾಸ್ತ್ರ—Physics
ಭೌತಿಕ Physical
ಭೌತವಾದ ಅಥವಾ ಜಡಪ್ರಕೃತಿವಾದ Materialism
ಮನಃ ಪ್ರಣಾಲಿ Attitude
ಮಾಯೆ Hallucination
ಮುಕ್ತ One who leads the divine life
ಮೂರ್ತ Concrete
ಮೂರ್ತೀಕರಣ Concretion

ಯೋಗಸಮಾಧಿವಾದ, ಅನುಭಾವವಾದ Mysticism

ರಾಜ್ಯಶಾಸ್ತ್ರ Politics

ರೀತಿಭಾವ Modality

ರೂಪ Colour

ರೂಪ, ಆಕಾರ Figure, outline

ಲಕ್ಷಣ Definition, mark

ಲಕ್ಷಣಿಸು Define

ವ್ಯಷ್ಟಿ, ವ್ಯಕ್ತಿ Individual

ವಸ್ತು, ಕರ್ಮ, ಜ್ಞೇಯ Object of knowing

ವಸ್ತು Thing

ವ್ಯವಹಾರವಾದ Empiricism

ವ್ಯಾವಹಾರಿಕ Empirical

ವಾಸ್ತವತಾವಾದ Realism

ವಾಸ್ತವಿಕತೆ, ಸತ್ಯತೆ, Reality, the state of being true, a true thing

ವ್ಯಾಪ್ಯತ್ವಾ ಸಿದ್ಧತೆ The quality of a reason whose con-comitant invariabiltity is unproved or unestablished

ವ್ಯಾವಹಾರಿಕ, ಘಟನಾತ್ಮಕ Empirical, Phenomenal

ವ್ಯಾಪಕ Extensive

ವಿಕೃತ ಪ್ರತಿಬಿಂಬ Refracted image

ವಿಧಿವಾದ Law of chance

ವಿಚಾರ, ಆಲೋಚನೆ Thought

ವಿಸ್ತಾರ Extension

ವಿಶೇಷಣ, ಗುಣ Quality, attribute

ವಿಶೇಷ The particular

ವಿಶಿಷ್ಟ ವೈಯಕ್ತಿಕ ದೃಷ್ಟಾಂತ ಸಂಗ್ರಹ Induction

ವಿಧೇಯ Predicate

ವಿಚಾರವಾದ Rationalism

ವಿಶ್ಲೇಷಣ Analysis

ವಿಶಿಷ್ಟನಿದರ್ಶನ ಲಬ್ಧವಾದ ಪ್ರಮಾಣದಿಂದ ತೀರ್ಮಾನಿಸಿದ ಸಿದ್ಧಾಂತ	Induction

ವೈಚಾರಿಕ Rational
ಶಕ್ತಿ Energy, Power
ಶಕ್ಯತೆ, ಸಾಧ್ಯತೆ Possibility
ಶ್ರುತಿ The Revealed, scripture
ಶೋಧ Inquiry
ಸಮರ್ಥನೆ Argumentation
ಸತ್ಯ True, truth, a true thing
ಸರ್ವಗ್ರಹ All-inclusive
ಸಮುದಾಯ Community
ಸಮಷ್ಟಿ The Collective
ಸಂಧಿ, ಒಪ್ಪಂದ Contract
ಸ್ವಯಂನಿಯಾಮಕ Self-regulating
ಸಂಘಟ್ಟನ Clash
ಸಂಘರ್ಷ, ಘರ್ಷಣೆ Conflict
ಸಂಧಿ Peace
ಸಹಜ Natural, innate
ಸ್ವಯಂ ಸ್ಪಷ್ಟ Self-evident
ಸರ್ವಗ್ರಹ ದೇವತಾವಾದ Pantheism
ಸತ್ಯಾಭಾಸ Apparent reality
ಸ್ವತಃ ಸಿದ್ಧ Self-evident
ಸಮನ್ವಯ Synthesis
ಸಂಯೋಗ Association
ಸರ್ಜನಾತ್ಮಕ Creative
ಸಂವೇದನೆ Sensation
ಸಮವೇತ Inherent
ಸಂವೇದ್ಯತೆ Sensibility
ಸಂಭಾವ್ಯ Probable
ಸಂಗತಿ Fact

ಸರ್ಜನಶೀಲ Creativity
ಸಂಪ್ರದಾಯ Convention
ಸದ್ಯದ Immediate
ಸಗುಣಬ್ರಹ್ಮ, ದೇವ, ಈಶ್ವರ God
ಸಂಭಾವ್ಯ ಸಿದ್ಧಾಂತ Hypothesis
ಸತ್ಯತೆ Reality, the state of being true
ಸಾಧನ Instrument
ಸಾಮಾನ್ಯರ ಸಮೂಹ Proletariat
ಸಾರ Essence
ಸಾಕಲ್ಯ Totality
ಸಾಮಾನ್ಯತೆ Generality
ಸಾಮಾನ್ಯ, ಜಾತಿ universal
ಸಾವಯವ, ಅವಯವಿ Organism
ಸಾಮುದಾಯಿಕ ಶಕ್ತಿ ತತ್ವಜ್ಞಾನ Communal power Philosphy
ಸಾಮಶ್ರುತ್ಯ Harmony
ಸಾತತ್ಯ Continuity
ಸಾತ್ಮ್ಯಸಂಪಕ Communion
ಸಾಪೇಕ್ಷ Relative
ಸಾಮಾನ್ಯತೆ, ಸಮಾನ್ಯಧರ್ಮ Generality
ಸಾಮಾನ್ಯಪದ General term
ಸಾಂಗತ್ಯ Coherence
ಸಿದ್ಧಿ Attainment
ಸೈದ್ಧಾಂತಿಕ Theoretical
ಹಿತಾರ್ಥ Interest
ಹೂರಣ Content
ಹೇತುವಾಕ್ಯ Sentence embodying reason
ಹೇತ್ವಾಭಾಸ Fallacy
ಹೋಲಿಕೆ Comparison, analogy

ಶುದ್ಧಿಪತ್ರ

ಪುಟ	ಸಾಲು	ತಪ್ಪು	ಸರಿ
೧೯	೧೭	ಗಾರ್ಯಸ್ಥವು	ಗಾರ್ಹಸ್ಥವು
೨೨	೮	Milly Milly	Willy nilly
೨೩	೧೩	ಸಾಪೇಕ್ಷತೇ	ಸಾಪೇಕ್ಷತೆಯೇ
"	೨೬	ಭುಂಜತೆತೇತ್ವಘಂ ಪಾಪಾ:	ಭುಂಜತೇ ತೇತ್ವಘಂ ಪಾಪಾ:
೩೦	೪	ನಿಶ್ಚಯಾತ್ಮಕದಾಗಿ	ನಿಶ್ಚಯಾತ್ಮಕವಾಗಿ
೪೫	೧೪	ನಿ: ಷೇಧ	ನಿಷೇಧ
೫೫	೧೬	Becom-	Becoming
"	೨೩	ಅಚಲ	ಚಲ
೫೮	೨	ಸದುಸ್ಥಿತಿಯೇ	ಸಮುಸ್ಥಿತಿಯೇ
"	೯	ಐಕ್ಯಶ್ರುತ್ಯಗಳು	ಐಕಶ್ರುತ್ಯಗಳು
೫೯	೧	ವ್ಯಾವಹಾರ	ವ್ಯವಹಾರ
೬೦	೯	ಖಂಡಿಸಿ ಹೋಗುವುದೂ	ಖಂಡಿಸಹೋಗುವುದೂ
೬೩	೧೦	ಪರಮಾಕ್ಮನಲ್ಲ	ಪರಮಾತ್ಮನಲ್ಲ
"	೩೨	ಇತಿ ನೀಯತೇ	ಇತಿ ಗೀಯತೇ
"	೨೪	ವಿಷೇಷೋತ್ತ	ವಿಶೇಷೋತ್ತ
೬೮	೨	ತಿಳಿಯದುದು	ತಿಳಿಯುವುದು
೬೯	೬	Telelogical	Teleological
೭೩	೧೪	ಸೇರಿದ	ಸೇರದ
೭೪	೭	ಆತ್ಮಸಾಕ್ಷಾತಾರ	ಆತ್ಮಸಾಕ್ಷಾತ್ಕಾರ
೭೬	೧೪	earned	earnt
೮೪	೨	Emperical	Empirical
೯೬	೧೪	ಆಕಾರ	ಆಕರ

ಪುಟ	ಸಾಲು	ತಪ್ಪು	ಸರಿ
೯೬	೨೧	Demonstrataly	Demonstratively
೧೦೦	೭	ಶ್ರುತಿಗಳ	ಪುರಾಣೋಕ್ತ ಸ್ವರ್ಗವೂ ಆ ಕೃತಕ ಶ್ರುತಿಗಳ
೧೦೧	೧೫	೨	೩
"	೨೧	ಸ್ವರ	ಸ್ವ
೧೦೨	೨೩	ಅವು	ಅವುಗಳಿಗೆ
"	೮	Subjectinist	Subjectivist
೧೦೭	೧೬	Objectinism	Objectivism
"	೨೩	ಅಜ್ಞೇಯ	ಅದು ಜ್ಞೇಯ
೧೨೨	೫	ಅನುಭವದಕ್ಕೆ	ಅನುಭವಕ್ಕೆ
೧೨೮	೧	ತರಸ್ಥಾದ್ವೈತ	ತಟಸ್ಥಾದ್ವೈತ
೧೩೪	೧೫	ಅನಭಿಜ್ಞಾತವಾಗಿಯೋ	ಅಭಿಜ್ಞಾತವಾಗಿಯೋ
೧೪೦	೫	ಒಟ್ಟೊ	ಒಟ್ಟೋ
೧೫೮	೨	ಎಂದೂ	ಎಂದೊ
೧೫೯	೧೨	ಸಜಾತಿಯುತೆಯ	ಸಜಾತೀಯುತೆಯ
೧೬೨	೧೨	ಊಳುವವರೂ	ಉಳುವವರೂ
೧೭೧	೯	ಮಾಡುವು ವಲ್ಲದೆ	ಮಾಡುವುವಲ್ಲದೆ
"	೧	ವಿಜ್ಞಾನ ಎಂದು	ವಿಜ್ಞಾನವೆಂದು
೧೭೯	೨೨	ಕ್ರಿಯಾಪದ, ಪ್ರಕೃತಿ ಭಾವ	ಕ್ರಿಯಾಪದ ಪ್ರಕೃತಿಭಾವ;
೧೮೦	೧೪	ವಿಶೇಷೆಣಾತ್ಮಕ	ವಿಶೇಷಣಾತ್ಮಕ
"	೨೧	ಬ್ರಹ್ಮೀಕರಣ	ಬ್ರಾಹ್ಮೀಕರಣ
೧೮೩	೭	ಯುಕ್ತಹಾರವಿಹಾರ ಗಳನ್ನು ಯೋಗಸಾಧನೆ	ಯುಕ್ತಾಹಾರವಿಹಾರ ಗಳನ್ನು ಯೋಗಸಾಧನೆಗೆ
೧೮೫	೨೨	ಪರಿಣಾಮುಕಃ	ಪರಿಣಾಮತಃ
೧೮೬	೭	ನಿತ್ಯ-ನೈಮಿತ್ತ	ನಿತ್ಯ ನೈಮಿತ್ತಿಕ
೨೩೭	೨೧	ಆಕಾರ್ಯ	ಅಕಾರ್ಯ
೨೩೯	೧೬	ಧಾರ್ಢ್ಯ	ದಾರ್ಢ್ಯ

ಪುಟ	ಸಾಲು	ತಪ್ಪು	ಸರಿ
೨೪೧	೮	ಎಂಬದ	ಎಂಬಂಥ
೨೪೪	೧	ವಣಿಗಳಿಗೂ ಅಂಗಿ ಗಳಿಗೂ	ವರ್ಣಗಳಿಗೂ ಲಿಂಗಿಗಳಿಗೂ
೨೪೯	೧೧	ವಸ್ತುನಿಷ್ಟತೆಯೂ	ವಸ್ತುನಿಷ್ಠತೆಯೂ
"	೧೨	ಸಂವ್ಯಸ್ತಬುದ್ಧಿ	ಸಂನ್ಯಸ್ತಬುದ್ಧಿ
೨೫೧	೧೩	ನಖಲು ಕಶ್ಕಿದ ವಿಷಯೋನಾವು ಧೀಮತಾಂ	ನಖಲುಧೀಮತಾಂ ಕಶ್ಚಿದ ವಿಷಯೋನಾವು
೨೫೪	೧೩	ತತ್ಯವಲ್ಲ	ತ್ಯತ್ತಲ್ಲ
೨೫೬	೯	ಗ್ರಹಿಸದ	ಗ್ರಹಿಸಿದ
೧೬೨	೬	ಸಂಬಂಧಿಸಿದ	ಸಂಬಂಧಿಸದ
v	೨೯	ಪತಿನಿಹಿತತೆ	ಪ್ರತಿನಿಹಿತತೆ
೧೨೬	೧೨	ಸಾಧ್ಯವಾದುದರಿಂದ	ಸಾಧ್ಯವಾಗದುದರಿಂದ
೧೨೬	೧೬	ಅಸಂಖ್ಯೆಯ	ಅಪ್ರಮೇಯ
೨೩೮	2	ಹೇಳಿದಾಗ	ಹೇಳವಾಗ
೨೫೦	೨೧	ಅಡಚಣೆಯಲ್ಲಿ	ಆಚರಣೆಯಲ್ಲಿ
೨೩	೨೬	ಭುಾಜಂತೆತೇತ್ಬಘುಂ ಪಾಪಾಃ	ಭುಂಜಂತೇ ತೇ ತ್ವಘಂ ಪಾಪಾಃ
೨೬	೧೪	learned	learnt

ಹರಕೆ:

ಪ್ರಿ. ಬಿ. ಎಚ್. ಶ್ರೀಧರ ಅವರು ಕವಿಗಳು, ವಿಮರ್ಶಕರು, ವಿಡಂಬನಕಾರರು, ವಿಚಾರಿಗಳು, ವಿವೇಕ ಪ್ರತಿಪಾದಕರು ಆಗಿದ್ದಾರೆ. ಇದು ಅವರ ವಿಶೇಷ. ಮನೆಯಿಂದ, ಶಿಕ್ಷಣದಿಂದ, ಹೆಚ್ಚಿನ ಓದಿನಿಂದ ಮತ್ತೆ ಮತ್ತೆ ಮಳ್ಳಿಸಿದ (Boiled) ಮನನದಿಂದ ಅವರು ಕೆಲವು ಕಷಾಯ, ರಸಾಯನ, ಯೋಗಕಲ್ಪಗಳನ್ನು ಭಟ್ಟಿ ಇಳಿಸಿದ್ದಾರೆ. ಮೊನ್ನೆ ಮೊನ್ನೆ ಕಾವ್ಯದ ಭಾವ, ಅರ್ಥ, ಧ್ವನಿ, ಶಬ್ದ ಇವುಗಳ ಸಂಗ್ರಾಮವನ್ನು ಮುಗಿಸಿ, ಈಗ ಪುರುಷಾರ್ಥ ಯುದ್ಧಕ್ಕೆ ಸಜ್ಜಾಗಿ ನಿಂತಿದ್ದಾರೆ. ಕಾವ್ಯ ವಿಚಾರದಲ್ಲಿಯೂ ಇದರ ಎಳೆ ಇದ್ದೇ ಇತ್ತು. ಹಿಂದಿನ 'ಕಾವ್ಯಸೂತ್ರ'ಕ್ಕೆ ಇಂದಿನ 'ಜ್ಞಾನಸೂತ್ರ' ಹುರಿ ಹಾಕಿಕೊಳ್ಳುತ್ತದೆ. ಅಲ್ಲಿ ವಿಚಾರ ಪ್ರವಾಹಗಳು ವರ್ಷಾಕಾಲದಂತಿದ್ದರೆ, ಇಲ್ಲಿಯದು ಶರತ್ಕಾಲದಂತೆ ಸ್ವಲ್ಪ ತಿಳಿಗೊಂಡಿದೆ. ಇವರ ಪ್ರಕಾಶಕ ಸಂಪಾದಕ ಆಪ್ತ

ಮಿತ್ರರು ಇವರ ವಿಚಾರಸಾಮರ್ಥ್ಯದಲ್ಲಿ ವಿಶ್ವಾಸ ಉಳ್ಳವರಾಗಿರದಿದ್ದರೆ, ಇಂಥ ಕೃತಿಯನ್ನು ಮುದ್ರಿಸುವುದಕ್ಕೆ ಮುಂದಾಗುತ್ತಿರಲಿಲ್ಲ. ಇಂತಹ ವೈಚಾರಿಕ ಕೃತಿಗಳು ಕನ್ನಡಕ್ಕೆ ಹೊಸವೇನಲ್ಲ. ಡಿ. ವಿ. ಜಿ; ಶ್ರೀನಿವಾಸ (ಲಕ್ಷ್ಮೀಪುರಂ); ಶ್ರೀಕಂಠಶಾಸ್ತ್ರಿ; ಎಸ್. ಕೆ. ರಾಮಚಂದ್ರರಾವ್; ಎಂ. ವಿ. ಕೃಷ್ಣರಾವ್; ಜಿ. ಹನುಮಂತರಾವ್; ರಾಘವೇಂದ್ರ ಆಚಾರ್; ಜ ಹ. ನಿ; ಶಂ. ಬಾ. ಜೋಶಿ, ಎನ್. ಆರ್. ಕುಲಕರ್ಣಿ; ಡಾ|| ಕಾರಂತ; ಶ್ರೀರಂಗ– ಇವರೇ ಮೊದಲಾದವರ ಗ್ರಂಥಗಳಲ್ಲಿ ಧರ್ಮಜಿಜ್ಞಾಸೆ, ತತ್ವ ಜಿಜ್ಞಾಸೆ ಮಾಡಿದ್ದಾಗಿದೆ. 'ಮಿಂಚಿನಬಳ್ಳಿ'ಯು ಅನೇಕ ಪ್ರಬಂಧಗಳಲ್ಲಿ ವಿಚಾರ ಪ್ರವಾಹವು ಹರಿಗಡಿಯದೆ ನಡೆದಿದೆ. ಇಂಥ ಗ್ರಂಥಗಳಿಗೆ ವಾಚಕರ ಸಂಖ್ಯೆ ಬಹಳ ಇರಲಿಕ್ಕಿಲ್ಲ. ಆದರೂ ವಿಚಾರಕರನ್ನು ಎದೆಗುಂದಿಸುವಷ್ಟು ಕಡಿಮೆಯೂ ಇಲ್ಲ ಎಂದು ತೋರುತ್ತದೆ. ಆದರೂ ಪ್ರಕಾಶಕರು ಸ್ವಲ್ಪ ಸಾಹಸ ಮಾಡದೆ ಇಂಥ ಕಾರ್ಯ ಬೆಳಕು ಕಾಣಲಾರದು.

ಪ್ರಕೃತೋಚಿತ ವಿಚಾರ ಮಂಥನದಲ್ಲಿ ಹೊಸ ಶಬ್ದ ಸಾಮಗ್ರಿಯನ್ನು ಬಳಕೆಗೆ ತರುವುದು, ಹಳೆಯದನ್ನೇ ತಿಕ್ಕಿ ಮಸೆದು ನವೀನ ಅಸ್ತ್ರವನ್ನಾಗಿ ಮಾಡುವುದು ಅನಿವಾರ್ಯವಾದದ್ದೇ. ಶ್ರೀಧರ ಅವರು ವರ್ತಮಾನ ಪತ್ರಿಕೆಗಳಲ್ಲಿ ತುರ್ತು ಲೇಖಕರು ಆಗಿ ಅನುಭವ ಗಳಿಸಿದ್ದರಿಂದ, ಸಂಸ್ಕೃತ ಸಾಹಿತ್ಯದಷ್ಟೇ ಕನ್ನಡ ಪ್ರಾಚೀನ ಸಾಹಿತ್ಯದಲ್ಲಿಯೂ ಅವರು ಪಳಗಿದವರಾಗಿದ್ದರಿಂದ, ಪಾಶ್ಚಾತ್ಯರ ವಿಚಾರಗಳನ್ನು ಭಾರತೀಯ ತತ್ತ್ವಪ್ರಣಾಲಿಗೂ ಭಾರತೀಯ ಸಾಂಸ್ಕೃತಿಕ ಸಂಪ್ರದಾಯದ ಸಂದಾಯವನ್ನು ಕನ್ನಡಕ್ಕೂ ಅವರು ಸಾಕಷ್ಟು ಆತ್ಮವಿಶ್ವಾಸದಿಂದ ನಿರ್ವಹಿಸುತ್ತಾರೆ. ಸದ್ಯದ ಪ್ರಬಂಧವು ಅವರ ಹಿಂದಿನ ಪ್ರಬಂಧಕ್ಕಿಂತಲೂ ಚಿಕ್ಕವೇ ಆಗಿದ್ದರೂ ಇದರ ವಾಸ್ತು ವಿನ್ಯಾಸವನ್ನು ಒಳ್ಳೆಯ ಮಾಟಗಿಯೇ ಮಾಡಿದ್ದಾರೆ. ವ್ಯಾಸರ ವಿಚಾರ ಸೂತ್ರಗಳನ್ನು ಈ ಪ್ರಬಂಧದಲ್ಲಿ ಸಮಾಸಗೊಳಿಸಿ ಎಂದರೆ ಸಂಗ್ರಹವಾಗಿಯೇ ಲೇಖಕರು ವಿಂಗಡಿಸಿ, ಸಂಗಡಿಸಿ ತಿಳಿಯಪಡಿಸಿದ್ದಾರೆ. ಇದು ಕಷ್ಟದ ಕೆಲಸವೇ. ಈ ಪ್ರಬಂಧದ

ವಿಷಯದಲ್ಲಿ ನನ್ನಿಂದ ಯಾವ ಬಗೆಯ ಅಭಿಪ್ರಾಯ ಬೇಕಾಗಿದೆ? ಎಂದು ಕೇಳಿದಾಗ— 'ಪ್ರಕಟಿತ ಪ್ರಬಂಧವೇ ಚಿಕ್ಕದಾಯಿತು' ಎಂದು ಗೊಣಗುಟ್ಟಿದ ಪ್ರಕಾಶಕರಿಗೆ– ಅಭಿಪ್ರಾಯದ ಕ್ಷೇತ್ರದಲ್ಲಿ ಅವರ ಆಕಾಂಕ್ಷೆ ರೂಪಗೊಳ್ಳಲಾರದು ಎಂದು ಏಕೆ ಎನಿಸಲಿಲ್ಲವೋ? ಶ್ರೀ ಕೃಷ್ಣನು ಬಾಯಲ್ಲಿ ಬ್ರಹ್ಮಾಂಡವನ್ನು ಹಿಡಿಯಬಹುದು, ದೇವರಿಗೆ ಅದು ಸಣ್ಣ ತುತ್ತು. ಆದರೆ ಅವನ್ನು ಯಶೋದೆ ತನ್ನ ಸಣ್ಣ ಕಣ್ಣಿನಿಂದ ಹೇಗೆ ಕಂಡಳೋ? ಬಾಯಿ ಏನೆಂದರೂ ದೊಡ್ಡದು; ಕಣ್ಣು ಎಷ್ಟೆಂದರೂ ಚಿಕ್ಕದು. ಆದರೆ ಹಾಗೆ ವರ್ಣಿಸುವುದು ಭಾಗವತಕಾರರ ಚಮತ್ಕಾರವಾಗಿದೆ. ಪ್ರಕಾಶಕರ ಕಣ್ಣಿಗೆ ಬ್ರಹ್ಮಾಂಡವೂ ಸಣ್ಣ ತುತ್ತು. ಇರಲಿ. ಈ ಪ್ರಬಂಧದ ನಿಮಿತ್ತವಾಗಿ ಅದರಲ್ಲಿ ಪ್ರತಿಪಾದಿತವಾದ ನಾಲ್ಕೈದು ವಿಷಯಗಳ ಬಗ್ಗೆ ನನ್ನ ವಿಚಾರ ಸರಣಿಯನ್ನು ಹೇಳುತ್ತೇನೆ. ಅವರ ವಿವೇಕ ತಪ್ಪು, ನನ್ನ ವಿಚಾರ ಸರಿ ಎಂಬ ಅಭಿಪ್ರಾಯವಲ್ಲ. ಯಾವ ವಿಚಾರಕರೂ ಇಲ್ಲಿಯ ಕಬ್ಬಿಣದ ಕಡಲೆಯನ್ನು ತಮ್ಮ

ಜವಡೆಗೆ ಅಳವಡಿಸಿಕೊಳ್ಳುವಾಗ ತಮ್ಮ ತಮ್ಮ ಎಚ್ಚರದಿಂದಲೇ ಮೆಲುಕಾಡಿಸಬೇಕು. ಒಂದು ಸರಣಿಯಿಂದ ಇನ್ನೊಂದು ಸರಣಿಯನ್ನು ಹೊಂದಿಸಿ, ಬಿಡಿಸಿ ನೋಡಿಕೊಳ್ಳಬೇಕು ಎಂದೇ ಅರ್ಥ.

ಶ್ರೀಧರರು ವ್ಯಾಸರ ಶ್ಲೋಕಗಳನ್ನು ಆಯ್ದು, ಅವಕ್ಕೆ ಒಂದು ಮಾನದಂಡದ ರೂಪವನ್ನು ತಂದಿದ್ದಾರೆ. ಈ ಪ್ರಬಂಧವೆಂದರೆ ಬ್ರಹ್ಮಸೂತ್ರಕ್ಕೆ ಬರೆದ ಟೀಕೆ ಅಲ್ಲ. ಮಹಾಭಾರತದ ಧರ್ಮವಿಜ್ಞಾನ ಸೂತ್ರ ಇದು ಎಂದು ಶ್ರೀಧರರ ವಿಚಾರ ಸರಣಿ. ಅವರು, ವ್ಯಾಸರು ಶ್ರೀ ಕೃಷ್ಣನಿಂದಾಡಿಸಿದ ಭಗವದ್ಗೀತೆಗೂ ಟಿಗ್ಗಾ ಮುಗ್ಗಾ ಭಾಷ್ಯ ಬರೆಯುವ ಹವ್ಯಾಸ ಕಟ್ಟಿಕೊಂಡಿಲ್ಲ. ಸದ್ಯದ ಪ್ರಬಂಧವು ವ್ಯಾಸ ವಿಚಾರದ ಬೆಂಬಲದಿಂದ ಸೂತ್ರ ರೂಪಕ್ಕೆ ಇಳಿಸಲಾಗಿದೆ. ಇದು ಶ್ರೀಧರರು ಮಾಡಿದ ಕೌತುಕಾವಹ, ಅಭಿನಂದನೀಯ ಪೌರುಷ ಪ್ರಯತ್ನವೇ ಸರಿ. ಇಂಥ ಅಶ್ವಮೇಧದ ಕುದುರೆ ದಿಗ್ದೇಶದಲ್ಲಿ ಒಂದು ವರ್ಷ ಅಡ್ಡಾಡಬೇಕು ಯಾರು ಕಟ್ಟುತ್ತಾರೋ ಯಾರು ಬಿಚ್ಚುತ್ತಾರೋ

ನೋಡಬೇಕು. ಈ ಪ್ರಬಂಧವು ವಿವೇಕಕ್ಕೆ ಅಪಾಂತ್ರ್ಯ; ವಿಚಾರಕ್ಕೆ ಆಹ್ವಾನವಲ್ಲ. ಇಂದಿನ ಪ್ರಪಂಚದಲ್ಲಿ ಇಂಥ ವ್ಯವಸಾಯದಲ್ಲಿ ತೊಡಗಿದವರು ಹೆಚ್ಚಾಗಿ ಐರೋಪ್ಯರು ಮತ್ತು ಅಮೇರಿಕನ್ನರು. ಅವರು ಭಾರತೀಯ ತತ್ತ್ವಜ್ಞಾನವನ್ನು ತಮಗೆ ತೋಚಿದಂತೆ ಒಮ್ಮೊಮ್ಮೆ ಗೀಚಿ ಬರೆಯುತ್ತಾರೆ. ಅಷ್ಟೇ ಏಕೆ, ಯಾವುದೇ ತಾತ್ತ್ವಿಕ ವಿಚಾರವನ್ನು ಹೇಗೆ ಸುಸಂಬದ್ಧವಾಗಿ ಮಾಡಬೇಕು ಎಂಬ ಜಿಜ್ಞಾಸೆಯನ್ನು ಹುಟ್ಟಿಸಿ, ಅಕಟೋ ವಿಕಟೋ ಹದಿನೆಂಟು ಹಾದಿಗಳನ್ನು ತೆರೆಯುತ್ತಾರೆ. ಅಂತೂ ಅವರಲ್ಲಿ ತತ್ತ್ವಜಿಜ್ಞಾಸೆ, ಒಂದು ವೈಹಾರಿಕ ಕ್ರೀಡೆ, ಚಾತುರ್ಯದ ಚದುರಂಗದಾಟ; ನಮ್ಮ ಕಡೆಗೆ ತತ್ತ್ವವಾದಗಳು ದಿಗ್ವಿಜಯದ ಸಂಭ್ರಮಗಳು! ದಾಸ್, ರಾಧಾಕೃಷ್ಣನ್ ಇವರ ಪರ್ವತಪ್ರಾಯ ಕೃತಿಗಳು ಅವರಿಗೆ ತಕ್ಕವುಗಳೇ. ಶ್ರೀ ಅರವಿಂದರ ದಿವ್ಯಜೀವನ ವಿಜ್ಞಾನ ಪ್ರಣಾಳಿಯು ತೀರ ನೂತನ ಕುರುಕ್ಷೇತ್ರ. ನಮ್ಮಲ್ಲಿ ಅಂದರೆ ಕರ್ನಾಟಕದಲ್ಲಿ, ತಾತ್ತ್ವಿಕವಾದಗಳಿಗೆ ಕೊರತೆ ಇಲ್ಲ. ಒಂದೊಂದು

ವಿಚಾರಕ್ಕೂ ಒಂದೊಂದು ಮತವಿದೆ. ಅನೇಕ ದಾಸರು, ಶರಣರು ಆಗಿ ಹೋಗಿದ್ದಾರೆ. ಕೊರತೆ ಯಾವುದಾದರೂ ಇದ್ದರೆ, ಅದು— ಸಜೀವ ಜಿಜ್ಞಾಸೆ ಯದು. ಜಿಜ್ಞಾಸೆ ಎಂಬುದು ವಿಚಾರ ವಿವೇಕದ ಆರೋಗ್ಯ. ಆದರೆ, ಸದ್ಯದ ಸಾಮಾಜಿಕ; ರಾಜಕೀಯ ಕ್ರಾಂತಿ, ಭ್ರಾಂತಿ, ಸಂಗ್ರಾಮದಲ್ಲಿ— ಝಟಿತಿ ಪ್ರತಿಕರ್ತವ್ಯಂ, ಪ್ರತಿವಕ್ತವ್ಯಂ ಮೇಕೇ ವಿಜಿಗೀಷುಭಿಃ’ ಎಂಬ ಬಿರುದಿನವಾಕ್ಯ ಉದ್ದೀಪಕವಾಗಿರುವಂತೆ ತೋರುತ್ತದೆ. ಸಾವಧಾನವಿಲ್ಲದೆ ವಿವೇಕವಿಲ್ಲ. ಅವಿಚಾರಿತ ರಮಣೀಯ ಯಾವುದು? ವಿಚಾರದ ಅಂತ್ಯದಲ್ಲಿ ವಿವೇಕದ ನೆಲೆಗೆ ಮುಟ್ಟುವುದು ಯಾವುದು ? ಎಂಬುದನ್ನು ಪರಾಮರ್ಶಿಸಲು ತಕ್ಕಷ್ಟು ಸುಶಿಕ್ಷಣ ಬೇಕು. ಸದ್ಯದ ಪ್ರಬಂಧದಂಥ ಗ್ರಂಥಗಳನ್ನು ಕೊಳ್ಳುವವರಿಗಿಂತ ಓದುವವರು ಕಡಿಮೆ. ಆದರೂ, ನಿದ್ರೆ ಹೋದ ಸಮಾಜದಲ್ಲಿ ಗಸ್ತು ಹಾಕುವುದು ಸ್ವಯಂ ವಿಚಾರಕರ ಕರ್ತವ್ಯವೇ ಆಗಿದೆ. ಗ್ರಂಥಾಲಯಗಳಿಂದ, ಸರಕಾರದಿಂದ ಇಂಥ ಗ್ರಂಥ ಪ್ರಕಾಶಕರಿಗೂ ಲೇಖಕರಿಗೂ ಪುರಸ್ಕಾರ ಬೇಕೇ ಬೇಕು.

ಕವಿಸಮಯಗಳಂತೆ ತಾತ್ವಿಕವಾದ ಸಮಯ ಪರಂಪರೆಯೂ ದಾಯಾದಿ ಕಲಹಕ್ಕೆ ಪ್ರೇರೇಪಿಸುತ್ತದೆ. ತಮ್ಮಮತವೇ ವಿಶ್ವಧರ್ಮ ಎಂಬ ಅಹಂಕಾರ ಪ್ರೇರಣೆ, ಹತ್ತುದಿಕ್ಕಿಗೂ ಇದೆ. ಸತ್, ಅಸತ್ ಖ್ಯಾತಿ ಇವುಗಳನ್ನು ವಿಂಗಡಿಸಬಲ್ಲ ವಿವೇಕಖ್ಯಾತಿ, ಪ್ರಜ್ಞೆಯ ತಪಸ್ಸಿಗೆ ಸಾಧ್ಯ. ತಾಪಕ್ಕೆ ಬಾಯ್ಬಿಟ್ಟವನ ತಪ ಹಾಳಾಯಿತು, ಅಷ್ಟೆ. ಅಹಂಕಾರದ ತಲೆಗೆ ಎಲ್ಲೂ ನಾಲ್ಕು ಪೆಟ್ಟು ಹೆಚ್ಚು. ಪೆಟ್ಟು ಕೊಡುವವರು ವಿವೇಕಿಗಳೇ ಇರುತ್ತಾರೆ ಎಂದೇನೂ ಅಲ್ಲ. 'ಸಜೀವತಿ ಮನೋ ಯಸ್ಯ ಮನನೇನೋಪಜೀವತಿ.' ಮತಭ್ರಾಂತಿಯಿಂದ ಆತ್ಮಜಿಜ್ಞಾಸೆ ದಿಗ್ಗೇಡಾಗುವುದು ಅಥವಾ ಅಜ್ಞಾತವಾಸವಾಗುವುದು. ಧೀರನಿಗಲ್ಲದೆ ಕೈವಲ್ಯದ ಹಾದಿ ಬೇರೆಯವರಿಗೆ ಹಿಡಿಸದು. ಲೋಕ ಸಂಗ್ರಹಕ್ಕಾಗಿ ವಿಚಾರ ವಿವೇಕ ಅಳವಡಿಸುವುದು ಅವತಾರಿಯ ಕಾರ್ಯವೆಂದೇ ಹೇಳಬಹುದು. ಲೋಕಾರಾಧನೆ, ಲೋಕಸಂಗ್ರಹ, ಸಕಲ ಜೀವದಯೆ ಇತ್ಯಾದಿಗಳಿಗೆ ಮುಂದಾದವರು ವೈಚಾರಿಕ ಸ್ವರ್ಗಕ್ಕೆ ಎರಬೇಕಾಗಿದೆ. ನೀದಮೇಲೆ ಬಮಕ

ಬೇಕಾಗಿದ್ದುದು ಅನಿವಾರ್ಯವೆ. ಸಾಯುವುದು ಎಂಥವರಿಗೂ ತಪ್ಪಿಲ್ಲ. ತಾತ್ವಿಕಗ್ರಂಥಗಳು ಪ್ರದರ್ಶನಾಲಯದ ವಸ್ತುಗಳಾಗುತ್ತವೆ. ಆದರೆ, ಇಷ್ಟರಿಂದ ವಿಚಾರವಿವೇಕದ ಹಾದಿಯನ್ನು ಬಿಡಬೇಕೆಂದು ಅರ್ಥವಲ್ಲ. 'ಮನಸ್ಸಿಗೂ, ವಾಕ್ಕಿಗೂ ಅಳವಡದು ತತ್ವವಿವೇಕ' ಎಂದು ಹಿಂಜರಿಯಲಾಗುವುದೆ? ತರ್ಕವಿಲ್ಲದೆ ವಿಚಾರಕ್ಕೆ ಮನ್ನಣೆಇಲ್ಲ; ತರ್ಕ ವಿಚಾರಕ್ಕೆ ಒಪ್ಪಿಗೆ ಇಲ್ಲ. ಒಬ್ಬೊಬ್ಬ ಮತೀಯರಿಗೆ ತಮ್ಮ ತಮ್ಮವೇ ಪ್ರಮಾಣಪದ್ಧತಿ. ತನ್ನದು ತರ್ಕ ಇನ್ನೊಬ್ಬರದು ಕುತರ್ಕ ಎಂಬ ಬುದ್ಧಿ. **"ಪರಮಾತ್ಮನ ಪರಮಾರ್ಥದ ಪರಮತ್ವವನ್ನು ಗ್ರಹಿಸಿದ ಮೇಲೆ ಮಿಕ್ಕ ಮೌಲ್ಯಗಳ ತಾರತಮ್ಯ ವಿವೇಕವನ್ನು ತರ್ಕಶುದ್ಧವಾಗಿ ಮಾಡಲು ಸುಲಭವಾಗುತ್ತದೆ."** ಪುಟ ೨೫೬. ಈ ಸೌಲಭ್ಯ ಅತ್ಯಂತ ದುರ್ಲಭ. ಆದರೆ, ವಿಚಾರಧೀರರಿಗೆ ಇಲ್ಲಿಯೇ ಆಹ್ವಾನ.

(ಪುಟ ೨೫೧) "ಆರ್ತ, ಜಿಜ್ಞಾಸು, ಅರ್ಥಾರ್ಥಿ ಮತ್ತು ಜ್ಞಾನಿ ಎಂಬ ನಾಲ್ಕು ವರ್ಗಗಳ ದೇವೋಪಾಸಕರಿರುವುದು **ವ್ಯಾಸೋಕ್ತ**." ಇದು ಮಹಾಭಾರತದೊಳಗಿನ ಉಕ್ತಿ ಎನೋ ಅಹುದು.

ಆದರೆ ಇದು ಭಗವಾನ್ ಶ್ರೀಕೃಷ್ಣನ ಉಕ್ತಿಯಾಗಿದೆ. ಷೇಕ್ಸ್‌ಪಿಯರನ ನಾಟಕಗಳಲ್ಲಿ ಬರುವ ಉಕ್ತಿಗೆ— ಷೇಕ್ಸ್‌ಪಿಯರ ಸಾಮಾನ್ಯ ಕಾರಣ ಮತ್ತು ಆ ಉಕ್ತಿ ಆಡುವ ಪಾತ್ರ ವಿಶೇಷಕಾರಣ. ವ್ಯಾಸರ ಅವತಾರಿಕ ವಿಶೇಷಕ್ಕೂ ಶ್ರೀಕೃಷ್ಣನ ಅವತಾರಿಕ ವೈಶಿಷ್ಟ್ಯಕ್ಕೂ ಭೇದವಿದೆ. ಮೇಲಿನ ಉಕ್ತಿಯಲ್ಲಿ ಬರುವ ಜ್ಞಾನಿ ಭಕ್ತನಾದ ಕರ್ಮಯೋಗಿ. ಜ್ಞಾನೀತು ಆತ್ಮೈವ ಮೇ ಮತಂ' ಈ ಒಂದು ಅರ್ಥಕ್ಕಾಗಿ ಗೀತೆಯನ್ನೇ ಮಥನಿಸಬೇಕಾದೀತು. (ಪುಟ. ೨೪೪)– 'ಅಧಿಯಜ್ಞ ಅಧಿದೈವಗಳು ಅಧ್ಯಾತ್ಮದ ಅಪರಾವತಾರಗಳು.' ಇದು ವಿಚಾರಾರ್ಹವಾಗಿದೆ. ಅಧ್ಯಾತ್ಮವೆಂದರೆ-ಸ್ವಭಾವ; ಅಧಿದೈವವೆಂದರೆ- ಪುರುಷ; ಅಧಿಯಜ್ಞ–ಅಹಮೇವ- ಹೀಗಿದೆ ವಿಚಾರ ವಿನ್ಯಾಸ. ಭೌತಿಕ, ಆತ್ಮಿಕ, ದೈವಿಕ ಇವು ತಾಪಕ್ಕೆ ಈಡಾಗುವವು. ಅಧಿಯಜ್ಞ ಇದು ಕೇಂದ್ರಶಕ್ತಿ. ವಿದ್ಯೆಯಲ್ಲಿ ಅಧ್ಯಾತ್ಮವಿದ್ಯೆ ಏನೋ ಹೆಚ್ಚಿನದು. ಆದರೆ ಅಧಿಯಜ್ಞದ ಸ್ಥಾನ ಬೇರೆ ಭೂಮಿಕೆಯದು. ಹೀಗೆಯೇ ಧರ್ಮವು ಅರ್ಥ ಕಾಮ

ಗಳಿಗಿಂತ ಹೆಚ್ಚಿನದು; ಸುಳ್ಳಲ್ಲ. ಆದರೆ, ಅರ್ಥ ಕಾಮ ಗಳಿಗೆ ಬಂಧಿಸುವ ಧರ್ಮ ಯಾವುದು? ಮುಕ್ತಿಗೆ ಸಂಬಂಧಿಸುವ ಧರ್ಮ ಯಾವುದು? ಇದು ರಣಾಂಗಣ ಕೇಂದ್ರವಾಗಿದೆ. ಚತುರ್ವಿಧ ಪುರುಷಾರ್ಥದಿಂದ ಈ ಸಂಬಂಧವಿಚಾರ ಮಾಡಬೇಕಾದೀತು!

‘ಸಾಂಖ್ಯಯೋಗೌ ಪೃಥಕ್ ಬಾಲಾಃಪ್ರವದಂತಿ’ ‘ಏಕಂ ಸಾಂಖ್ಯಂಚ ಯೋಗಂಚ,’ ಪಂಡಿತಾಃ ಸಮ ದರ್ಶಿನಾಃ’ ‘ಸಮತ್ವಂ ಯೋಗಮುಚ್ಯತೇ’ ‘ಯೋಗಃ ಕರ್ಮಸು ಕೌಶಲಂ’ ‘ಸಾಂಖ್ಯಂ ಜ್ಞಾನಂ’ ‘ಸಿದ್ಧಾನಾಂ ಕಪಿಲೋ ಮುನಿಃ’ ಈ ಉಕ್ತಿಗಳ ಅನುಸಂಧಾನ ಪೂರ್ವಕವಾಗಿ ಷಷ್ಟಿತಂತ್ರಾದಿ ಮಾರ್ಗದ ವಿಚಾರ ಮಾಡಿದರೆ, ತತ್ತ್ವ ವಿವೇಕದಲ್ಲಿ ಸಂಖ್ಯಾಯೋಗದ ಕೇಂದ್ರ ಇನ್ನೂ ಮುಗಿದಿಲ್ಲ ಎಂದೇ ಹೇಳಬೇಕಾಗುತ್ತದೆ. ವಿಶ್ವಕ್ರಿಯೆಯಲ್ಲಿ ಸಂಖ್ಯೆ ವ್ಯವಸ್ಥಾಪಕ ಧರ್ಮವಾಗುತ್ತದೆ; ಗುಣದಲ್ಲಿ ಒಂದು ಗುಣ ಎನಿಸುವದಿಲ್ಲ. ದ್ರವ್ಯಾದಿ ವಿಚಾರಕ್ಕೆ ಪದಾರ್ಥ-ವಿವೇಕವು ಮೂಲ. ಅಲ್ಲಿ ಸಮ್ಯಕ್ ಸಂಖ್ಯಾನವು ಮಹತ್ತ್ವವು.

ಇವೇ ಮೊದಲಾದ ವಿಚಾರ ವಿವೇಕಮಾರ್ಗಕ್ಕೆ ಮತ್ತೆ ಪ್ರಚೋದಿಸಿತು ಈ ಪ್ರಬಂಧ. ಬರಿಯ ಹುಡುಗಾಟದಿಂದ ಇಂಥ ಪ್ರಬಂಧ ಬರೆಯಲಾಗುವದಿಲ್ಲ. ಮತ್ತೆ ಇದೇ ಹಾದಿಯಲ್ಲಿ ಹೆಚ್ಚಿನ ಪ್ರಬಂಧಗಳನ್ನು ಬರೆಯುವ ಶಕ್ತಿ, ಆಯುಷ್ಯ. ಆರೋಗ್ಯ, ಸಂಪತ್,ಭಾಗ್ಯಗಳನ್ನು ಗ್ರಂಥ ಕರ್ತರ ದೈವ ಅವರಿಗೆ ಕರುಣಿಸಲಿ.

ಶ್ರೀಮಾತಾ — **ದ. ರಾ. ಬೇಂದ್ರೆ**

ಸಾಧನಕೇರಿ, ಧಾರವಾಡ-೧

ವಿದ್ಯಾರಣ್ಯ ಗ್ರಂಥ ಪ್ರಕಾಶನದ ಪ್ರಕಟನೆಗಳು:

1965-66

ರಸಯಜ್ಞ.

ನವ್ಯ ಕತೆಗಳು.

ಸಂಸಾರ ಸುಖವೋ ದುಃಖವೋ.

ಬಿಚ್ಚಿದ ಗಂಟು.

1966-67

ಧರ್ಮದೀಪ.

ಕಾದಂಬರಿಗಳು.

ವೈಜಯಂತಿ.

ಹೊಸ ಕಥೆಗಳು.

ಪಶ್ಚಾತ್ತಾಪ.

1967-68

ಶಾಂತಿದೂತ.

ಸತ್ತಾವಾ ಇದ್ದಾವಾ.

ಮಾಯಾವಿ.

1968-69

ಕಾವ್ಯಸೂತ್ರ.

ಸಣ್ಣ ಕತೆಗಳು.

ಶ್ರೀ ಬಿ. ಎಚ್. ಶ್ರೀಧರರ ಇತರ ಕೃತಿಗಳು

<table>
<tr><td>1. ಕಿನ್ನರ ಗೀತ (ಕಥನ ಕವನಗಳು)
2. ಮೇಘನಾದ
3. ಅಮೃತಬಿಂದು
4. ರಸಯಜ್ಞ</td><td>ಕವನ ಸಂಗ್ರಹಗಳು</td></tr>
<tr><td>5. ಹೊಸಗನ್ನಡ ಸಾಹಿತ್ಯ ಶೈಲಿ
6. ಟೀ. ಎಸ್. ಎಲಿಯಟ್ (ಭಾಷಾಂತರ)</td><td>ವಿಮರ್ಶೆಗಳು</td></tr>
</table>

7. ಬೇಂದ್ರೆ
8. ವಿದೇಶದ ತಿಳುವಳಿಕೆಗಳು
9. ಭಾರತೀಯ ನಾಗರಿಕತೆಗೆ ಮುಸುಪಿನ ಕೊಡುಗೆ
10. ಕವೀಂದ್ರ, ರವೀಂದ್ರ
11. ಮಾನಸ ದರ್ಪಣ (ಮನಃ ಶಾಸ್ತ್ರ: ಸಂ. ಗ್ರಂಥಕರ್ತೃತ್ವ)
12. ಭಾರತೀಯ ವಾಙ್ಮಯ (ಭಾಷಾಂತರ ಸಂ. ಗ್ರಂಥಕರ್ತೃತ್ವ)
13. ಭಾರತೀಯ ರಾಜ್ಯಧರ್ಮದ ಸತ್ವ ಮತ್ತು ಸ್ವರೂಪ (ಭಾಷಾಂತರ ಸಂ. ಗ್ರಂಥಕರ್ತೃತ್ವ)
14. ಸ್ವಾತಂತ್ರ್ಯ ಮೀಮಾಂಸೆ (ಭಾಷಾಂತರ ಸಂ. ಗ್ರಂಥಕರ್ತೃತ್ವ)
15. ಬನವಾಸಿಯ ಕದಂಬರು (ಇತಿಹಾಸ ಸಂ. ಗ್ರಂಥಕರ್ತೃತ್ವ)
16. ಬೇತಾಳಗಳ ಕುಣಿತ (ಹಾಸ್ಯದ ಚುಟುಕಗಳು)
17. ಭಾಷಣ ಭೈರವರ ಒಡ್ಡೋಲಗ (ಹಾಸ್ಯದ ಚುಟುಕಗಳು)
18. ಕುಂದಮಾಲೆ (ನಾಟಕ: ಭಾಷಾಂತರ)
19. ಮುತ್ತು ರತ್ನ (ಮಕ್ಕಳ ಪದಗಳು)
20. ಕಾವ್ಯಸೂತ್ರ
21. ಜ್ಞಾನಸೂತ್ರ

vists.

I have gone through the book "JNANA-SUTRA" by Principal. B. H. Shridhar, and have been very much impressed by the encyclopediac contents and the powerful coherent presentation of modern Eastern and Western thought. In the introductory chapter the purpose of this book has been well presented. In the chapter on the development of Western thought, he has rightly covered the History of Western Philosophy from Thomes Hobbes to Bertrand Russell and Logical Positivism.

He has rightly stated that the Pūruṣārthas in Indian Philo sophy are complementary to each and they have to be integrated, if our civilization is to survive. The book is full of knowledge and wisdom. It is an intelligent man's guide to Philosophy and to the understanding of culture. I hope it will be useful for the enquiring minds in our society.

Dr. T. G. Kalghatgi
M. A. Ph. D.

VGP